

# ಜ್ಯೋತಿಷ್ಯ ಶಾಸ್ತ್ರ

## (ಶಾಸ್ತ್ರವಾ – ಅಶಾಸ್ತ್ರವಾ?)


<u>ಗ್ರಂಥಕರ್ತ :</u> ತ್ರಿಮತ ಏಕೈಕ ಗುರುವು

**ಆಧ್ಯಾತ್ಮಿಕ ಸಾಮ್ರಾಜ್ಯ ಚಕ್ರವರ್ತಿ, (100) ಶತಾಧಿಕ ಗ್ರಂಥಕರ್ತ**

**ಇಂದೂ ಜ್ಞಾನ ಧರ್ಮಪ್ರದಾತ, ಸಂಚಲನಾತ್ಮಕ ರಚಯಿತ, ತ್ರೈತ ಸಿದ್ಧಾಂತ ಆದಿಕರ್ತ**


**ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

---

ತೆಲುಗುನಿಂದ ಕನ್ನಡಕ್ಕೆ ಅನುವಾದ

**ಇಂದೂಶ್ರೀ ಕವಿತ, ಇಂದೂಶ್ರೀ ಶ್ರೀದೇವಿ**


---





<u>ಗ್ರಂಥ ಮುದ್ರಣ</u>

**ಇಂದೂ ಜ್ಞಾನವೇದಿಕೆ**

(Estd. in 1978 - Regd.No.: 168/2004)

ತ್ರೈತ ಶಕ : 44 ಪ್ರಥಮ ಮುದ್ರಣ : ಜನವರಿ–2023

ಪ್ರತಿಗಳು : 1000 ಬೆಲೆ. /–

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

01. ತ್ರೈತ ಸಿದ್ಧಾಂತ ಭಗವದ್ಗೀತೆ.
02. ಆಧ್ಯಾತ್ಮಿಕ ಪ್ರಶ್ನೆಗಳು-ಉತ್ತರಗಳು.
03. ಧರ್ಮ-ಅಧರ್ಮ.
04. ಇಂದೂತ್ವವನ್ನು ಕಾಪಾಡೋಣ.
05. ಯಜ್ಞಗಳು (ಸತ್ಯವಾ-ಅಸತ್ಯವಾ?)
06. ದೆವ್ವಗಳಹಾಗೂ-ಭೂತಗಳ ಯಥಾರ್ಥಸಂಘಟನೆಗಳು.
07. ಸತ್ಯಾನ್ವೇಷಿ ಕಥೆ.
08. ಮಂತ್ರ-ಮಹಿಮೆ (ಸತ್ಯವಾ-ಅಸತ್ಯವಾ)
09. ಶ್ರೀ ಕೃಷ್ಣನು ದೇವರಾ, ಭಗವಂತನಾ.
10. ಗೀತಾ ಪರಿಚಯ.
11. ಕಲಿಯುಗ (ಎಂದಿಗೂ ಯುಗಾಂತವಲ್ಲ).
12. ಜನನ ಮರಣ ಸಿದ್ಧಾಂತ.
13. ಮರಣ ರಹಸ್ಯ.
14. ಪುನರ್ಜನ್ಮ ರಹಸ್ಯ.
15. ತ್ರೈತಾಕಾರ ರಹಸ್ಯ (ತ್ರೈತಾಕಾರ ಬೆರ್ಮುಡಾ).
16. ಕಥೆಗಳ ಜ್ಞಾನ.
17. ಗಾದೆಗಳ ಜ್ಞಾನ.
18. ಒಗಟುಗಳಲ್ಲಿ ಜ್ಞಾನ.
19. ತತ್ತ್ವಗಳ ಜ್ಞಾನ.
20. ಬೈಗುಳಲ್ಲಿ ಜ್ಞಾನ-ಆಶೀರ್ವಾದಗಳಲ್ಲಿ ಅಜ್ಞಾನ.
21. ಗೀತಂ-ಗೀತ (ಹಾಡುಗಳ ಜ್ಞಾನ).
22. ಯಾವುದು ಸತ್ಯ-ಯಾವುದು ಅಸತ್ಯ.
23. ದೇವಾಲಯ ರಹಸ್ಯಗಳು.
24. ಇಂದೂ ಸಂಪ್ರದಾಯಗಳು.
25. ನಮ್ಮ ಹಬ್ಬಗಳು. (ಹೇಗೆ ಮಾಡಬೇಕೋ ತಿಳಿದಿದೆಯಾ?)
26. ಜ್ಯೋತಿಷ್ಯಶಾಸ್ತ್ರ (ಶಾಸ್ತ್ರವಾ-ಅಶಾಸ್ತ್ರವಾ?)
27. ತಾಯಿ ತಂದೆ.
28. ಗುರುಪ್ರಾರ್ಥನಾ ಮಂಜರಿ.
29. ತ್ರೈತಾರಾಧನೆ.
30. ಖುರ್‌ಆನ್, ಹದೀಸ್ ಯಾವುದು ಮುಖ್ಯ?
31. ಪ್ರಬೋಧ.
32. ಸುಬೋಧ.
33. ಪ್ರಸಿದ್ಧಿ ಬೋಧನೆ.
34. ಸುಪ್ರಸಿದ್ಧಿಬೋಧನೆ.
35. ಶಿಲುಬೆ ದೇವರಾ?
36. ಮತಾತೀತ ದೇವರ ಮಾರ್ಗ.
37. ದೇವರ ಗುರುತು-963.
38. ಮತ-ಪಥ.
39. ಪ್ರಬೋಧಾನಂದ ನಾಟಕಗಳು.
40. ಇಂದೂ ಕ್ರೈಸ್ತವನಾ?
41. ನಿಗೂಢ ತತ್ತ್ವಾರ್ಥ ಬೋಧಿನಿ.
42. ಆತ್ಮ ಲಿಂಗಾರ್ಥ.
43. ನಾಸ್ತಿಕರು-ಆಸ್ತಿಕರು.
44. ಹೇತುವಾದ-ಪ್ರತಿವಾದ.
45. ಗುತ್ತಾ.
46. ಪ್ರಬೋಧ ತರಂಗಗಳು.
47. ತ್ರೈತ ಸಿದ್ಧಾಂತ.
48. ಸಮಾಧಿ.
49. ಉಪನಿಷತ್‌ಗಳಲ್ಲಿ ಲೋಪಗಳು.
50. ಪ್ರಥಮ ದೈವಗ್ರಂಥ ಭಗವದ್ಗೀತೆ.
51. ದ್ರಾವಿಡ ಬ್ರಾಹ್ಮಣ.
52. ತೀರ್ಪು.
53. ಕರ್ಮಪತ್ರ.
54. ಪ್ರವಕ್ತರು ಯಾರು?
55. ಧರ್ಮಶಾಸ್ತ್ರ ಯಾವುದು?
56. ಮತಾಂತರ ದೈವದ್ರೋಹ.
57. ತ್ರೈತಶಕ ಪಂಚಾಂಗ.
58. ತ್ರೈತ ಸಿದ್ಧಾಂತ ಆಧ್ಯಾತ್ಮಿಕ ಘಂಟು.
59. ಜೀಹಾದ್ ಎಂದರೇ ಯುದ್ಧವಾ?
60. ಮೂರು ಗ್ರಂಥಗಳು, ಇಬ್ಬರು ಗುರುಗಳು.
61. ದೇವರ ಜ್ಞಾನ ಕಬ್ಜಾ ಆಗಿದೆ.
62. ಅಜ್ಞಾನದಲ್ಲಿ ಉಗ್ರವಾದ ಬೀಜಗಳು.

## ಇಂದೂ ಜ್ಞಾನವೇದಿಕೆ ಪ್ರಕಟಣೆಗಳು

63. ವಾರ್ತಕನು-ವರ್ತಕನು.
64. ದೇವರ ಚಿಹ್ನೆ.
65. ನನ್ನದು ಲೋಚನೆ-ನಿನ್ನದು ಆಲೋಚನೆ
66. ಯಾವುದು ನಿಜವಾದ ಜ್ಞಾನ?
67. ಪ್ರತಿಮೆ X ವಿಗ್ರಹ - ದೈವ X ದೆವ್ವ.
68. ಮರಣದ ನಂತರ ಜೀವನ.
69. ಯಾವ ಮತದಲ್ಲಿ ಎಷ್ಟು ಮತದ್ವೇಷ.
70. ಸ್ವರ್ಗ ಇಂದ್ರಲೋಕವಾ! ನರಕ ಯಮರಾಜ್ಯವಾ!!
71. ದ್ವಿತೀಯ ದೈವಗ್ರಂಥದಲ್ಲಿ ರತ್ನವಾಕ್ಯಗಳು
72. ಅಂತಿಮ ದೈವಗ್ರಂಥದಲ್ಲಿ ಜ್ಞಾನವಾಕ್ಯಗಳು.
73. ಅಂತಿಮ ದೈವಗ್ರಂಥದಲ್ಲಿ ವಜ್ರವಾಕ್ಯಗಳು
74. ಹಿಂದೂ ಮತದಲ್ಲಿ ಸಿದ್ಧಾಂತಕರ್ತರು.
75. ಒಂದು ಮಾತು ಮೂರು ಗ್ರಂಥಗಳು.
76. ಲು ಎಂದರೇ ಏನು? (ತೆಲುಗು)
77. ಆದಿತ್ಯ.
78. ಗಿಡ ಮೊದಲಾ! ಬೀಜ ಮೊದಲಾ?
79. ಒಬ್ಬನೇ ಇಬ್ಬರು.
80. ಸಾಯಿಬಾಬಾ ದೇವರಾ! ಅಲ್ಲವಾ!
81. ಯೇಸು ಮರಣಿಸಿದ್ದಾನಾ? ಹತವಾಗಿದ್ದಾನಾ?
82. ದೇವರ ಆಗಮನಕ್ಕೆ ಇದು ಸಮಯವಲ್ಲವೇ!
83. ವಿಶ್ವ ವಿದ್ಯಾಲಯ
84. ಕೃಷ್ಣ ಮೂಸ (ಶ್ರೀ ಕೃಷ್ಣ ಮರಣದ ನಂತರ ಜೀವನ)
85. ಒರೆಗಲ್ಲು (ಗೀಟುರಾಯಿ)
86. ಮೂರು ದೈವ ಗ್ರಂಥಗಳು-ಮೂರು ಪ್ರಥಮ ವಾಕ್ಯಗಳು
87. ಹೇತುವಾದ ಪ್ರಶ್ನೆಗಳು-ಸತ್ಯವಾದ ಉತ್ತರಗಳು
88. ದೈವಗ್ರಂಥಗಳಲ್ಲಿ ಸತ್ಯಾಸತ್ಯ ವಿಚಕ್ಷಣೆ
89. ನಿನಗೆ ನನ್ನ ಲೇಖ
90. ಹಿಂದೂ ಮತದಲ್ಲಿಯೇ ಕುಲವಿವಕ್ಷ
91. ದೇವರ ಮುದ್ರೆ
92. ಬ್ರಹ್ಮ-ರಾವಣಬ್ರಹ್ಮ-ಭಗವಾನ್ ರಾವಣಬ್ರಹ್ಮ
93. ಧರ್ಮಚಕ್ರ
94. ಪ್ರಾಥಮಿಕ ಜ್ಞಾನ
95. ಒಬ್ಬ ವ್ಯಕ್ತಿಯಲ್ಲಿ ಎರಡು ಕೋನಗಳು
96. ಧ್ಯಾನ - ಪ್ರಾರ್ಥನೆ - ನಮಾಜ್
97. ಹಿಂದೂ ಧರ್ಮಕ್ಕೆ ರಕ್ಷಣೆ ಅಗತ್ಯವಾ?
98. ವೇದಗಳು ಮನುಷ್ಯನಿಗೆ ಅಗತ್ಯವಾ?
99. ಭಕ್ತಿಯಲ್ಲಿ ನೀವು ಸಂಸಾಗಳಾ? ವ್ಯಭಿಚಾರಿಗಳಾ?
100. ಶತ

**ಸೂಚನೆ** : ತೆಲುಗಿನಿಂದ ಕನ್ನಡಕ್ಕೆ ಅನುವಾದಿಸಲಾಗದ ಪದಗಳು ಹಾಗೆಯೇ ಮುದ್ರಿಸಲಾಗಿದೆ.

# 04 ಯೋಗೀಶ್ವರರ ಸಂಚಲನಾತ್ಮಕ ತ್ರಿಮತ ಆಧ್ಯಾತ್ಮಿಕ ತೆಲುಗು ಪ್ರಸಂಗಗಳು

**DVD's**

01. ಸಂತಕಮು, 02. ಸಾಂಪ್ರದಾಯಮು.
03. ತ್ರೈತಶಕಮು.
04. ಕೋಡಿಪುಂಜು–ಪಾದರಸಮು.
05. ಯುಗಮು–ಯೋಗಮು.
06. ನೈಜಂ–ಸಹಜಂ
07. ಆತ್ಮಕು ವೆಂಟ್ರುಕ ಗುರ್ತು.
08. ಪೈತ್ಯಂ–ಸೈತ್ಯಂ, 09. ಶೈವಮು–ವೈಷ್ಣವಮು.
10. ಇಂದೂಮಹಾಸಮುದ್ರಂ.
11. ಸೃಷ್ಠಿ–ಸೃಷ್ಠಿಕರ್ತ.
12. ಕಾಯ–ಪಂಡು–ಕಾಯ.
13. ಜ್ಞಾನಮು–ವಿಜ್ಞಾನಮು.
14. ವಾರ–ಮಾಸ–ವತ್ಸರ.
15. ಸೇಕೂವಲಿ–ಕೂಲಿಸೇವಾ.
16. ಧರ್ಮಮು–ಅಧರ್ಮಮು.
17. ಏಕ್‌ನಿರಂಜನ್–ಅಲಕ್‌ನಿರಂಜನ್.
18. ಗುರುವುಲೇನಿವಿದ್ಯ–ಗ್ರುಡ್ಡಿವಿದ್ಯ.
19. ಬಟ್ಟತಲ, 20. ಭಗವಂತುಡು.
21. ದ್ರಾವಿಡುಲು–ಆರ್ಯುಲು.
22. ಪ್ರಭುವು–ಪ್ರಭುತ್ವಂ.
23. ಭೂತಂ–ಮಹಾಭೂತಂ, 24. ಪ್ರಭು–ಪ್ರಜ.
25. ಯಾದವ್, 26. ಪುಸ್ತಕಮು–ಗ್ರಂಥಮು.
27. ವೆಲುಗುಬಂಟು, 28. ಪ್ರಕೃತಿ–ವಿಕೃತಿ.
29. ಮಾಟ–ಮಂದು, 30. ಏಕತ–ಏಕಾಗ್ರತ.
31. ಹರಿಕಾಲು–ಹರಿಚೇಯಿ.
32. ಪುಟ್ಟಗೋಸಿ–ಮೊಲತ್ರಾಡು.
33. 1 2 3 ಗುರುಪೌರ್ಣಮಿ.
34. ಚಮತ್ಕಾರ–ಆತ್ಮ.
35. ಕ್ಷಮಿಂಚರಾನಿ ಪಾಪಮು.
36. ಮಾಯಕುಡು– ಅಮಾಯಕುಡು.
37. ಮರಣಮು–ಶರೀರಮು.
38. ದ್ವಿತೀಯುಡು–ಅದ್ವಿತೀಯುಡು.
39. ಎದಮೀದಮುದ್ರ– ತಲ್ಲಿ ತಂಡ್ರಿ ಗುರ್ತು.
40. ಸೇವಾಶಾತಮು.
41. ಬಯಟಿ ಸಮಾಜಂ– ಲೋಪಲಿ ಸಮಾಜಂ.
42. ಶ್ರೀಕೃಷ್ಣಾಷ್ಟಮಿ.
43. ಪ್ರಪಂಚ ಶ್ರದ್ಧ–ಪರಮಾತ್ಮ ಶ್ರದ್ಧ.
44. ತಲ್ಲಿ ತಂಡ್ರಿ
45. ದೇವುನಿ ಜ್ಞಾನಮು–ಮಾಯ ಮಹತ್ಯಮು.
46. ಸಮಾಧಿ. 47. ತಲ್ಲಿ ತಂಡ್ರಿ–ಗುರುವು ದೈವಮು.
48. ಕಲಿಯುಗಮು. 49. ಮತಮು–ಪಥಮು.
50. ದಿವ್ಯಖುರಾನ್–ಹದೀಸು, 51. ತಲ್ಲಿ.
52. ಪುಟ್ಟುಟ–ಗಿಟ್ಟುಟ.
53. ಗೋರು – ಗುರು. 54. ಆತ್ಮ,
55. ಕರ್ಮ ಮರ್ಮಮು.
56. ತಾತ, 57. ಗುರುಪೌರ್ಣಮಿ.
58. ಯೋಗೀಶ್ವರುಲ ಜನ್ಮದಿನ ಸಂದೇಶಮು.
59. ಶ್ರೀಕೃಷ್ಣಜನ್ಮ ಮಧುರ.
60. ಇಂದುವು–ಹಿಂದುವು.
61. ಸ್ತ್ರೀ–ಪು/ಲಿಂಗಮು, 62. ಆತ್ಮಪನಿ.
63. ತ್ರೈತ ಸಿದ್ಧಾಂತಮು.
64. ದೇಶಂ ಮೋಸಂ–ದೇಹಂ ಮೋಹಂ.
65. ಜೀರ್ಣ+ಆಶಯಮು.
66. ಮೇಘಂ ಒಕಭೂತಂ– ರೋಗಂ ಒಕಭೂತಂ.
67. ದೇವುನಿಕಿ ಮತಮುನ್ನದಾ?
68. ಸಹಜ ಮರಣಂ–ತಾತ್ಕಾಲಿಕ ಮರಣಂ.
69. ಅಧರ್ಮ ಆರಾಧನಲು.
70. ಏದಿ ಧರ್ಮಮು.
71. ನಿದರ್ಶ–ನಿರೂಪ.
72. ಪುಟ್ಟಿನರೋಜು ಎವ್ವರಿಕೀ ರಾದು.
73. ನಟಿಂಚೇ ಆತ್ಮ.
74. ಮೂಡು ಪುಟ್ಟುಕಲು– ರೆಂಡು ಜಾಗಾಲು.
75. ಶ್ರೀ ಕೃಷ್ಣುಡು ಎವರು?
76. ಸಂಚಿತ ಕರ್ಮ,
77. ಗುರುವು ಎವರು?
78. ಕರ್ಮಲೇನಿ ಕೃಷ್ಣುಡು– ಕರ್ಮವುನ್ನ ಕೃಷ್ಣುಡು.
79. ಭಯಂ, 80. ಸುಖಮು–ಆನಂದಮು.
81. ದಶ–ದಿಶಲು, 82. ಆಡಿಂಚೇ ಆತ್ಮ.
83. ಇಚ್ಛಾಧೀನ ಕಾರ್ಯಮುಲು– ಅನಿಚ್ಛಾಧೀನ ಕಾರ್ಯಮುಲು.
84. ಟಕ್ಕುಟಮಾರಾ, ಇಂದ್ರಜಾಲ ಮಹೇಂದ್ರಜಾಲ,ಗಜಕರ್ಣ ಗೋಕರ್ಣ.
85. ಸ್ವಾರ್ಥ ರಾಜಕೀಯಂ. (ಸ್ವ+ಅರ್ಥ ರಾಜಕೀಯಂ).
86. ಮೂಡು ನಿರ್ಮಾಣಾಲು– ಒಕ ಪರಿಶುಭ್ರತ.
87. ಏದಿ ಶಾಸ್ತ್ರಮು? 88. 6–3=6.
89. ತೆಲುಗುಲೋ ಮೂಡು–ಆರು ತೊಮ್ಮಿದಿ.
90. ಗುರ್ತಿಂಪಬಡನಿವಾಡು ಗುರುವು.
91. ಜ್ಞಾನಮು ದಗ್ಗರ ಜಾಗ್ರತ್ತ!

**DVD's**

92. ಚಂದ್ರಾಕಾರಮು (ಬಟ್ಟತಲ).
93. ಮತಮುಲಲೋ ಪವಿತ್ರ ಯುದ್ಧಮು.
94. ಮೂಡು ಗ್ರಂಥಮುಲು.
95. ಏಡು ಆಕಾಶಮುಲು.
96. ದೈವಗ್ರಂಥಮು.
97. ಜ್ಞಾನಮು ಕಬ್ಜಾ ಅಯ್ಯಿಂದಿ.
98. ಭಕ್ತಿ-ಭಯಮು, 99. ಜ್ಞಾನಶಕ್ತಿ.
100. ಕಾಲಜ್ಞಾನ ವಾಕ್ಯಮುಲು.
101. ಅರ್ಥಮು-ಅಪಾರ್ಥಮು.
102. ತೋಲೇವಾಡು, 103. ಗುರು ಚಿಹ್ನಂ.
104. ಭಕ್ತಿ-ಶ್ರದ್ಧಲು, 105. ಮತದ್ವೇಷಮು.
106. ದೇವುಡು ಇದ್ದರಾ! ಒಕ್ಕರಾ!!
107. ಪುರುಷೋತ್ತಮ.
108. ನೀ ವೆನುಕವಾಡು.
109. ಗ್ರಂಥಮು-ಬೋಧ.
110. ಆಟ-ದೋಬೂಚುಲಾಟ.
111. ಪ್ರಜಲು-ಮಾನವುಲು.
112. ಆಸ್ತಿ-ದೋಸ್ತಿ
113. ದಂತಮು-ಅಂತಮು.
114. ಮಾಯ ಮರ್ಮಮು-ಆತ್ಮ ಧರ್ಮಮು.
115. ಶ್ರೀಕೃಷ್ಣುಡು ಚನಿಪೋಯಾಡಾ? ಚಂಪಬಡ್ಡಾಡಾ?
116. ಅಂತಿಮ ದೈವಗ್ರಂಥಮುಲೋ ಪ್ರಥಮವಾಕ್ಯಮುಲು.
117. ಅದುರು-ಬೆದುರು
118. ಶವಮು-ಶಿವಮು.
119. ಧರ್ಮಚಕ್ರಮು, 120. ಗ್ರಾಹಿತಶಕ್ತಿ
121. ಭೌತಿಕಮು-ಅಭೌತಿಕಮು.
122. ದೇವುನಿ ಆಜ್ಞ ಮರಣಂ.
123. ಮತ ಸಾಮರಸ್ಯಂ.
124. ಮೋಕ್ಷಮು-ಮೋಸಮು.
125. ಅಕ್ಷರ ಜ್ಞಾನಮು, 126. ಲಲಾಜಲಮು.
127. ದೈವ ಧರ್ಮಗಳು- ಮತಸಾಂಪ್ರದಾಯಗಳು.
128. ಆಹಾರಮು ನೀಕಾ! ನೀ ಆತ್ಮಕಾ!!
129. ಮಾತ್ರ-ಮಂದು, 130. ಕಾಲಚಕ್ರಂ.
131. ಬ್ರಹ್ಮವಿದ್ಯ, 132. ಶಕ್ತಿ.
133. ಆಧ್ಯಾತ್ಮಿಕ ಪ್ರಶ್ನಲು-ಜವಾಬುಲು.
134. ಪೌರ್ಣಮಿ-ಅಮಾವಾಸ್ಯ.
135. ಈಶ್ವರ-ಪರಮೇಶ್ವರ.
136. ಪುರುಷೋತ್ತಮ-ಶ್ರೀರಾಮ.
137. ದೇವುನಿಕಿ ಒಕ್ಕಡೇ ಕುಮಾರುಡು- ದೇವುನಿಕಿ ಅನೇಕಮಂದಿ ಕುಮಾರುಲು.
138. ಜಲಂ, 139. ಅಧಿಪತಿ.
140. ಗ್ರಹಾಂತರವಾಸುಲು.
141. ದೇವುಡು ದ್ವಿತೀಯುಡಾ? ಅದ್ವಿತೀಯುಡಾ?
142. ಮನಿಷಿ ಚೇತಿಲೋ ಭಗವಂತುಡು- ದೇವುನಿ ಚೇತಿಲೋ ಮನಿಷಿ.
143. ಶರೀರಮುಲೋ ರಕ್ತಮು- ಗ್ರಂಥಮುಲೋ ಜ್ಞಾನಮು.
144. ಗ್ರಂಥಮುಲೋ ಜ್ಞಾನಮು- ಮನಿಷಿಲೋ ರಕ್ತಮು.
145. ತ್ರೈತ ಸಿದ್ಧಾಂತ ಚರಿತ್ರ.
146. ಕುಶಾಲ್ ಕುಶಾಲ್ ಲಂಜಮ್ಮ ನಾ ನೆತ್ತಿ ಮೀದ ರೆಂಡು ತನ್ನಮ್ಮ.
147. ರಾಜಾಧಿ ರಾಜಾ-ದೇವಾಧಿ ದೇವಾ.
148. ಎನಿಮಿದಿ ಮಂದಿ ಭಾರ್ಯಲುನ್ನ ಶ್ರೀ ಕೃಷ್ಣುನಿಕಿ ಗೋಪಿಕಲ ಮೀದ ಧ್ಯಾಸ ಎಂದುಕು?
149. ಕುಲಂ-ಮತಂ.
150. ಗುರುಪೌರ್ಣಮಿ ಸಂದರ್ಭಮುಗಾ.
151. ಭಗವಂತುಡು ಎವರು?
152. ವಿಶ್ವದಾಭಿರಾಮ ವಿನುರ ವೇಮಾ.
153. ಕಾಲಂ, 154. ಯಮಧರ್ಮ.
155. ಕುಡಿ ಧರ್ಮಮು-ಎಡಮ ಧರ್ಮಮು.
156. ಗುಡಿ.
157. ಇಂದುತ್ವಮು ಅಂದರಿಲೋ ಕಲದು -ಹಿಂದುತ್ವಮು ಕೊಂದರಿಲೋ ಕಲದು.
158. ಧರ್ಮಮುಲು ಮೂಡೇ ವುನ್ನವಿ- ಅಧರ್ಮಮುಲು ಆರು ಅಯಿನವಿ.
159. ನೇನು, ನಾ ತಂಡ್ರಿ, ನಾ ತಾತ- ನೇನು, ನಾ ಅಮ್ಮ, ನಾ ಅವ್ವ.
160. ಆದ್ಯ ಆತ್ಮೀಕಮು-ಆಧ್ಯಾತ್ಮಿಕಮು, ಆದ್ಯ ದೇವೀಕಮು-ಆಧ್ಯೇವೀಕಮು.
161. ವಿತ್ತನಮು ಲೇನಿ ಚೆಟ್ಟು ಶಿವುಡಾ! ಈಶ್ವರುಡಾ!!
162. ಮನಿಷಿನಿ ಜಂತುವು ಅಂಟೇ ಅವಮಾನಿಂಚಿನಟ್ಲು ಕಾದಾ!
163. ದೇವುಡು ಕರುಣಾಮಯುಡು ದೇವುಡು ಕಠಿನಾತ್ಮುಡು.

**ಪ್ರಬೋಧಾಶ್ರಮ (ಶ್ರೀಕೃಷ್ಣಮಂದಿರ)**
ಚಿನ್ನಪೊಡಮಲ (ಗ್ರಾ), ತಾಡಿಪತ್ರಿ (ಮಂ), ಅನಂತಪುರಂ (ಜಿಲ್ಲೆ). A.P
Cell : **ಲಕ್ಷ್ಮಿನಾರಾಯಣಾಚಾರಿ**–9440556968, 6305035254, 7981892957.

## ಇಂದೂ ಜ್ಞಾನ ವೇದಿಕೆ ಸದಸ್ಯರು

R. **ಶ್ರೀದೇವಿ**
ಹೊಸಪೇಟೆ, ವಿಜಯನಗರ (ಜಿಲ್ಲೆ)
Cell:9611133635, 8050309963.

B. **ಸುಧಾಕರ**
ತೋರಣಗಲ್ಲು, ಬಳ್ಳಾರಿ (ಜಿಲ್ಲೆ)
Cell:7348934963.

**ಶಿವರಾಜ**
ಕುಕನೂರು, ರಾಯಚೂರು (ಜಿಲ್ಲೆ),
Cell:9844369516,9632418716.

B. **ವಾತ್ಸಲ್ಯ – ರವೀಂದ್ರಾಚಾರಿ**
ದಾವಣಗೆರೆ.
Cell:9901534677,8880666529.

K. **ಭರತ್ ಕುಮಾರ್**
ಮೇಲಾಗಣಿ, ಮುಳಬಾಗಿಲು (ತಾ),
ಕೋಲಾರ (ಜಿಲ್ಲೆ), Cell:8095009014.

M. **ನಾರಾಯಣರೆಡ್ಡಿ**
ರಾಮಗುಂಡನಲ್ಲಿ ಪೋಸ್ಟ್,
ಬೆಂಗಳೂರು. Cell : 9741890089.

**ವೇಣುಗೋಪಾಲ್**
N.G.R. Layout, ರೂಪೇನ ಅಗ್ರಹಾರ,
ಬೆಂಗಳೂರು. Cell : 8970772028.

**ರಾಘವೇಂದ್ರ**
ತುಮಕೂರು, Cell:9886399426.

G. **ಮನೋಹರ್**
ಯಲಹಂಕ, ಮಾರುತಿನಗರ, ಬೆಂಗಳೂರು.
Cell:7411459912,9448452963.

G. **ರಾಧಾಕೃಷ್ಣಾ ರೆಡ್ಡಿ**
ಮರಲೂರು, ತುಮಕೂರು (ಜಿಲ್ಲೆ).
Cell:9448177812.

C. **ಲೀಲಾವತಿ–ಮುರಳಿಧರ**
ಜನತಾನಗರ, ಮೈಸೂರ್.
Cell:9141109799, 9986369118.

R. **ಚಂದ್ರಶೇಖರ್**
ಕೀಲುಕೋಟೆ, ಕೋಲಾರ.
Cell:9741827901.

T. **ನಾಗರಾಜು**
ವೀವರ್ಸ್‌ಕಾಲೋನಿ,
ನೆಲಮಂಗಲಟೌನ್, ಬೆಂಗಳೂರು.
Cell:9449434963, 8494801963.

**ಯೋಗೇಶ್**
ಸುಲನಾಯಕನಹಳ್ಳಿ (ಗ್ರಾಮ),
ಪಾವಗಡ (ತಾ), ತುಮಕೂರು (ಜಿಲ್ಲೆ).
Cell:8762523963,9740744424.

N. **ವೆಂಕಟರಾಯಪ್ಪ**
ಕಾರಂಜಿ ಕಟ್ಟೆ, ಕೋಲಾರ.
Cell:8147158272.

S. **ಸೂರಪನಾಯುಡು**
ಹಾರುಗಿರಿ (ಗ್ರಾ), ರಾಯಬಾಗ (ತಾ)
ಬೆಳಗಾವಿ (ಜಿಲ್ಲೆ) Cell: 9632300916

**www.thraithashakam.org**
**Youtube : thraitha siddantham**

## ಯೋಗೀಶ್ವರರ ಸಂಚಲನಾತ್ಮಕ ರಚನೆಗಳ ಸಾರಾಂಶ

1. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಅಕ್ಷರ ಸಮುದಾಯವೇ, ಆತ್ಮ ಸಮಾಚಾರವಾಗಿದೆ. ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಕ್ಷಯ ಅಕ್ಷಯ ಸಮಾಚಾರ, ಪರಮಾತ್ಮನ ಸಮಾಚಾರ ಇದೆ.
2. ತ್ರೈತ ಸಿದ್ಧಾಂತ ಸಂಬಂಧ ಗ್ರಂಥಗಳನ್ನು ಭೌತಿಕವಾಗಿ ಬರೆದಿರುವುದು ಯೋಗೀಶ್ವರರು. ತ್ರೈತಸಿದ್ಧಾಂತ ಅನುಬಂಧ ಗ್ರಂಥಗಳಲ್ಲಿ ಅಭೌತಿಕವಾಗಿ ಯೋಗಶಕ್ತಿ ಇದೆ.
3. ತ್ರೈತ ಸಿದ್ಧಾಂತ ಇಂದೂ (ಹಿಂದೂ) ಧರ್ಮಗಳಲ್ಲಿ ವಿಪ್ಲವಾತ್ಮಕವಾದುದು. ತ್ರೈತ ಸಿದ್ಧಾಂತ ಗ್ರಂಥದಲ್ಲಿನ ಜ್ಞಾನ ಸಂಚಲನಾತ್ಮಕವಾದುದು, ಓದಿ ನೋಡಿರಿ.
4. ತ್ರೈತ ಸಿದ್ಧಾಂತ ಲೋಕದಲ್ಲಿ ಎಲ್ಲದಕ್ಕಿಂತ ದೊಡ್ಡದು. ತ್ರೈತ ಸಿದ್ಧಾಂತ ಗ್ರಂಥಗಳು ಎಲ್ಲಾ ಗ್ರಂಥಗಳನ್ನು ಮೀರಿರುವವು. ಅದರ ರಚನಗಾರ ಯೋಗಿಗಳಿಗೆ ಈಶ್ವರನಾದ ಯೋಗೀಶ್ವರನು.
5. ತ್ರೈತ ಸಿದ್ಧಾಂತ ಗ್ರಂಥಗಳು ಕಾಣಿಸಿದರೆ ದುಷ್ಟಶಕ್ತಿಗಳು ಭಯದಿಂದ ನಡುಗುತ್ತವೆ. ತ್ರೈತ ಸಿದ್ಧಾಂತ ಗ್ರಂಥಗಳನ್ನು ಹತ್ತಿರ ಇಟ್ಟುಕೊಂಡರೆ ಯೋಗಶಕ್ತಿಗೆ ತಾಳಲಾರದೆ ಭಯಪಟ್ಟು ಹೋಗುತ್ತವೆ.
6. ತ್ರೈತ ಸಿದ್ಧಾಂತ ಜ್ಞಾನ ಭಗವದ್ಗೀತೆ ನಂತರ ಹೇಳಲಾದ ಅತ್ಯುತ್ತಮ ಜ್ಞಾನ. ತ್ರೈತ ಸಿದ್ಧಾಂತ ಗ್ರಂಥದಲ್ಲಿ ಕೃಷ್ಣನು ಮೊದಲು ಹೇಳದ ಜ್ಞಾನವನ್ನೂ ಸಹ ಯೋಗೀಶ್ವರರು ಹೇಳಿದ್ದಾರೆ.
7. ತ್ರೈತ ಸಿದ್ಧಾಂತ ಜ್ಞಾನ ಮಾನವ ಜೀವನಕ್ಕೆ ದೊಡ್ಡ ಪ್ರಕಾಶವು. ತ್ರೈತ ಸಿದ್ಧಾಂತದ ಬೆಳಕಿನೊಳಗೆ ಹೋದವನಿಗೆ ಅದು ದೈವಶಕ್ತಿ ಎಂದು ತಿಳಿಯುತ್ತದೆ.
8. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಬರೆದಿರುವುದು ಯೋಗೀಶ್ವರರು. ಆದ್ದರಿಂದ ತ್ರೈತ ಸಿದ್ಧಾಂತ ಎಂದರೆ ಏನೋ, ಅದು ಎಷ್ಟು ದೊಡ್ಡದೋ ತಿಳಿದಿದೆ.
9. ತ್ರೈತ ಸಿದ್ಧಾಂತವನ್ನು ಕುರಿತು ತಿಳಿದರೆ, ಯೋಗೀಶ್ವರರ ಗ್ರಂಥಗಳನ್ನು ಓದಿದರೆ, ಯಾವ ಮತಸ್ಥನಾದರೂ ಒಪ್ಪಿಕೊಳ್ಳುತ್ತಾನೆ, ಅದನ್ನು ಆಚರಿಸುತ್ತಾನೆ.
10. ತ್ರೈತ ಸಿದ್ಧಾಂತವನ್ನು ಪ್ರತ್ಯಕ್ಷವಾಗಿ ಭಗವಂತನು ಹೇಳಿರುವುದು. ಆದ್ದರಿಂದ ಎಲ್ಲಾ ಮತಗಳ ಸಾರಾಂಶವು ತ್ರೈತ ಸಿದ್ಧಾಂತ ಗ್ರಂಥಗಳಲ್ಲಿ ಇದೆ.
11. ತ್ರೈತ ಸಿದ್ಧಾಂತ ಗ್ರಂಥಗಳು ವ್ಯಕ್ತಿ ಬರೆದಿರುವವು ಅಲ್ಲ, ವ್ಯಕ್ತಿಯಲ್ಲಿನ ಶಕ್ತಿ ಬರೆದಿರುವವು. ಆದ್ದರಿಂದ ಎಲ್ಲ ರಹಸ್ಯಗಳೇ ಓದಿ ತಿಳಿದುಕೊಳ್ಳಿ.
12. ತ್ರೈತ ಸಿದ್ಧಾಂತ ಭಗವದ್ಗೀತೆ, ಬೈಬಲ್, ಖುರಾನ್ ಗ್ರಂಥಗಳಲ್ಲಿ ಇದೆ. ಆದರೂ ಹಿಂದೂಗಳಿಗಾಗಲಿ, ಕ್ರೈಸ್ತವರಿಗಾಗಲಿ, ಮುಸ್ಲೀಮ್‌ರಿಗಾಗಲಿ ಆ ವಿಷಯ ತಿಳಿದಿಲ್ಲ.

ತಪ್ಪದೆ ಓದಿರಿ! ಓದಿಸಿರಿ!!

## ಪ್ರಥಮ ದೈವ ಗ್ರಂಥ

# ತ್ರೈತ ಸಿದ್ಧಾಂತ ಭಗವದ್ಗೀತೆ

**(578 ಶ್ಲೋಕಗಳ ವಚನ ಗ್ರಂಥ)**

ಇದು ಆಧ್ಯಾತ್ಮಿಕ ವಿದ್ಯೆಯಲ್ಲಿ ವಿಪ್ಲವಾತ್ಮಕ ತಿರುವು ತಿರುಗಿದ ಭಗವದ್ಗೀತೆ. 55 ಶ್ಲೋಕಗಳಿಗೆ ಪೂರ್ತಿ ಭಾವ ಬದಲಾವಣೆಯೊಂದಿಗೆ ತಯಾರಾಗಿದೆ. ಮೂರು ಆತ್ಮಗಳನ್ನು ಕುರಿತು ಶಾಸ್ತ್ರಾಧಾರದಿಂದ ವಿವರಿಸಿ ಬೋಧಿಸಿದ ಮೊಟ್ಟ ಮೊದಲ ಭಗವದ್ಗೀತೆ. ಮೊದಲು ಎಷ್ಟೋ ಜನರು ಬರೆದ ಭಗವದ್ಗೀತೆಗಳಿಗೆ ನೂರಕ್ಕೆ 90ರಷ್ಟು ವಿಭಿನ್ನ ಭಾವಗಳಿಂದ ಕೂಡಿಕೊಂಡಿದೆ. ಎಷ್ಟೋ ಪ್ರತ್ಯೇಕ ಅರ್ಥಗಳೊಂದಿಗೆ ದೇವರು ಹೇಳಿದ ನಿಜ ಭಾವಗಳನ್ನು ಹೇತುಬದ್ಧವಾಗಿ ವಿವರಿಸಿರುವುದು ಮತ್ತು ಹೇತುವಾದಿಗಳು ಸಹ ಖಂಡಿಸಲಾರದ ಭಗವದ್ಗೀತೆ ಇದು ಒಂದೇ. ಗರ್ಭಸ್ಥ ಶಿಶುವಿಗೆ ಪ್ರಾಣ ಇಲ್ಲ ಎನ್ನುವುದು, ಹತ್ಯೆಯನ್ನು ವಿವರಿಸಿ ಆತ್ಮಹತ್ಯೆಯಾಗಿ ಹಾಗೆಯೇ ಆತ್ಮಹತ್ಯೆಯನ್ನು ಹತ್ಯಯಾಗಿ ಹೇಳುವುದು, ಇಂತಹವು ಬಹಳ ಜನರಿಗೆ ಸಹಿಸಿಕೊಳ್ಳಲಾರದಂತಹ ವಿಪ್ಲವಾತ್ಮಕ, ಸಂಚಲನ ವಿಷಯಗಳೆಷ್ಟೋ ಈ ಗ್ರಂಥದಲ್ಲಿ ಇವೆ. ಶ್ರೀಕೃಷ್ಣನ ಯದಾರ್ಥ ಭಾವವನ್ನು ತಿಳಿಸಿ, ವಾಸ್ತವ ಜ್ಞಾನ ಪಥದಲ್ಲಿ ನಡೆಸಿ, ಮೋಕ್ಷಗಮ್ಯವನ್ನು ಸೇರಿಸುವುದು ಈ ಗ್ರಂಥ ರಾಜ.

**ರಚಯಿತ : ತ್ರಿಮತ ಏಕೈಕ ಗುರುವು, ತ್ರೈತ ಸಿದ್ಧಾಂತ ಆದಿಕರ್ತ ಶ್ರೀಶ್ರೀಶ್ರೀ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು**

# ವಿಷಯ ಸೂಚಿಕೆ




| ಕ್ರ.ಸಂಖ್ಯೆ | ವಿಷಯ | ಪುಟಗಳು |
|---|---|---|
| 1. | ಜ್ಯೋತಿಷ್ಯ ಎಂದರೆ ಏನು? | – 11 |
| 2. | ಜ್ಯೋತಿಷ್ಯವು ಶಾಸ್ತ್ರವಾ? | – 14 |
| 3. | ಜ್ಯೋತಿಷ್ಯನು ಯಾರು? | – 19 |
| 4. | ಜ್ಯೋತಿಷ್ಯ ಮನುಷ್ಯರಿಗೇನಾ? ಪ್ರಾಣಿಗಳಿಗು ಕೂಡ ಅನ್ವಯಿಸುತ್ತದಾ? | – 21 |
| 5. | ಜಾತಕ ಎಂದರೆ ಏನು? | – 21 |
| 6. | ಕಾಲ, ಕರ್ಮ ಚಕ್ರಗಳು | – 23 |
| 7. | ಕರ್ಮ ಎಂದರೆ ಏನು? | – 30 |
| 8. | ಕರ್ಮ ಎಷ್ಟು ವಿಧಗಳು? | – 33 |
| 9. | ಕರ್ಮವನ್ನು ಅನುಭವಿಸುವವನು ಯಾರು? | – 39 |
| 10. | ಗ್ರಹಗಳೆಂದರೆ ಏನು? ಅವು ಎಷ್ಟು ಇವೆ? | – 43 |
| 11. | 12 ಗ್ರಹಗಳು ಯಾವುವು? | – 44 |
| 12. | ಕಾಲಚಕ್ರದಲ್ಲಿ 12 ಗ್ರಹಗಳ ಸ್ವಂತ ಸ್ಥಾನಗಳು ಯಾವುವು? | – 48 |
| 13. | ಕಾಲಚಕ್ರದಲ್ಲಿ ಮಿತ್ರ, ಶತ್ರು ಗ್ರಹಗಳು ಯಾವುವು? | – 51 |
| 14. | ಮೇಷ ಲಗ್ನಕ್ಕೆ ಮಿತ್ರ, ಶತ್ರು ಗ್ರಹಗಳು ಯಾವುವು? | – 55 |
| 15. | ವೃಷಭ | – 59 |
| 16. | ಕರ್ಕಾಟಕ | – 60 |
| 17. | ಕನ್ಯಾ | – 62 |
| 18. | ವೃಶ್ಚಿಕ | – 18 |
| 19. | ಮಕರ | – 66 |
| 20. | ಒಂದು ಗ್ರಹಕ್ಕೆ ಬದ್ಧಶತ್ರುವಾಗಿ ಮತ್ತೊಂದು ಗ್ರಹವಿದೆಯಾ? | – 68 |
| 21. | ಗುಣಚಕ್ರದಲ್ಲಿನ  ಗುಣಗಳ ವಿವರವೇನು? | – 76 |
| 22. | ಗುಣಗಳನ್ನು ಪ್ರೇರೇಪಿಸುವುದು ಕರ್ಮವಾ? ಅಥವಾ ಕಾಲವಾ? | – 79 |
| 23. | ಗುಣಚಕ್ರದಲ್ಲಿನ ಭಾಗಗಳಲ್ಲಿ ಯಾವುದು ಒಳ್ಳೆಯದು? | – 82 |
| 24. | ಕರ್ಮಚಕ್ರದಲ್ಲಿ ಯಾವ ಕರ್ಮ ಎಲ್ಲಿ ಸೇರುತ್ತದೆ? | – 83 |
| 25. | ಅಂಗಿ, ಅರ್ಧಾಂಗಿ | – 85 |

# ವಿಷಯ ಸೂಚಿಕೆ


| ಕ್ರ.ಸಂಖ್ಯೆ | ವಿಷಯ | ಪುಟಗಳು |
|---|---|---|
| 26. | ಕರ್ಮಚಕ್ರದಲ್ಲಿನ ಕೇಂದ್ರಗಳು | – 88 |
| 27. | ಕರ್ಮಚಕ್ರದಲ್ಲಿನ ಕೋನಗಳು | – 93 |
| 28. | ಕಾಲಚಕ್ರದಲ್ಲಿ ಯಾವ ಲಗ್ನ ಒಳ್ಳೆಯದು? | – 110 |
| 29. | ಗ್ರಹಗಳಿಗೆ ಕಾಲಚಕ್ರದಲ್ಲಿ ಸ್ವಂತ ಸ್ಥಾನಗಳಿರುವಂತೆ, ಬಲವಾದ ಸ್ಥಾನಗಳು ಇವೆಯಾ? | – 112 |
| 30. | ಗ್ರಹಗಳು ಹೇಗೆ ಬಲವಂತರಾಗಿ, ಬಲಹೀನರಾಗಿ ಇದ್ದಾರೆ? | – 113 |
| 31. | ರಾಶಿ ಎಂದರೆ ಏನು? ಲಗ್ನ ಎಂದರೆ ಏನು? | – 116 |
| 32. | ಗ್ರಹಗಳಿಗೆ ಗಮನವಿದೆಯಾ? | – 120 |
| 33. | ಕಾಲ ಚಕ್ರಕ್ಕು, ಜೀವಿಗು ಸಂಬಂಧವೇನು? | – 125 |
| 34. | ತ್ರಿರಾ ಅಥವಾ ರಾತ್ರಿ | – 127 |
| 35. | ಗ್ರಹಗಳ ರಾಜ – ಗ್ರಹಗಳ ಮಂತ್ರಿ | – 129 |
| 36. | ಗ್ರಹಚಾರ, ದಶಾಚಾರ ಎಂದರೆ ಏನು? | – 131 |
| 37. | ದಶೆಗಳು ಎಂದರೆ ಏನು? | – 152 |
| 38. | ಒಳ್ಳೆಯ ದಶೆಗಳು – ಕೆಟ್ಟ ದಶೆಗಳು | – 160 |
| 39. | ದಶೆಗಳ ಕಾಲಗಳು | – 165 |
| 40. | ಹನ್ನೆರಡು ಲಗ್ನಗಳಲ್ಲಿರುವ ಹನ್ನೆರಡು ಗ್ರಹಗಳ ಕೆಲಸವೇನು? | – 173 |
| 41. | ಗ್ರಹಗಳ ಹತ್ತಿರ ಏನು ಇರುವುದಿಲ್ಲವಾ? | – 175 |
| 42. | ಯೋಗ, ಕರಣ ಎಂದರೇನು? | – 191 |
| 43. | ರಾಶಿ – ಗ್ರಹ | – 215 |
| 44. | ಇಂದೂ (ಹಿಂದೂ) ಗಳದ್ದು ಜ್ಯೋತಿಷ್ಯ | – 242 |
| 45. | ಮೂರು ಹೊಸ ಗ್ರಹಗಳ ಗಮನವನ್ನು ಹೇಗೆ ಗುರುತಿಸಬೇಕು? | – 248 |
| 46. | ಜಾತಕನ ಜಾಫತಕ | – 254 |
| 47. | ಪಂಚಾಂಗದ ಅವಶ್ಯಕತೆ | – 292 |
| 48. | ಜ್ಯೋತಿಷ್ಯದಲ್ಲಿ ಪ್ರಶ್ನೆಗಳು–ಉತ್ತರಗಳು | – 303 |

# 1 ಜ್ಯೋತಿಷ್ಯ ಎಂದರೆ ಏನು?

ಜ್ಯೋತಿಷ್ಯ ಎನ್ನುವ ಪದವನ್ನು ಬಿಡಿಸಿ ನೋಡಿದರೆ 'ಜ್ಯೋತಿ' ಮತ್ತು 'ಇಷ್ಯ' ಎನ್ನುವ ಎರಡು ಶಬ್ದಗಳು ಇವೆ. ಆ ಎರಡು ಶಬ್ದಗಳನ್ನು ಸೇರಿಸಿದರೆ ಜ್ಯೋತಿ+ಇಷ್ಯ= ಜ್ಯೋತಿಷ್ಯ ಎನ್ನುವ ಶಬ್ದ ಏರ್ಪಡುತ್ತಿದೆ. ಜ್ಯೋತಿಷ್ಯದಲ್ಲಿನ ಮೊದಲ ಶಬ್ದವನ್ನು ಪರಿಶೀಲಿಸಿ ನೋಡಿದರೆ 'ಜ್ಯೋತಿ' ಎಂದರೇ ಬೆಳಗುತ್ತಿರುವ ದೀಪ ಎಂದು ಅರ್ಥ. ಬೆಳಗುತ್ತಿರುವ ದೀಪವು ಕಾಂತಿ ಯುಕ್ತವಾಗಿರುತ್ತದೆಂದು ಎಲ್ಲರಿಗೂ ತಿಳಿದಿದೆ. ಕತ್ತಲೆ ಗೃಹದಲ್ಲಿ ದೀಪ ಇಲ್ಲದಿದ್ದರೆ ಮನೆಯಲ್ಲಿನ ವಸ್ತುವು ಒಂದು ಕೂಡಾ ಕಾಣಿಸುವುದಿಲ್ಲ. ಮನೆಯಲ್ಲಿನ ವಸ್ತುಗಳು ಎಷ್ಟಿವೆ? ಯಾವ ವಸ್ತುಗಳು ಇವೆ? ಆ ವಸ್ತುಗಳು ಖರೀದಾದವಾ? ಅಲ್ಲವಾ? ವಸ್ತುಗಳು ಒಡವೆಗಳಾದರೆ ಯಾವ ಲೋಹದಿಂದ ಮಾಡಿರುವವು? ಕಟ್ಟಿಗೆಗಳಾದರೆ ಯಾವ ಜಾತಿ ಗಿಡದ ಕಟ್ಟಿಗೆಗಳು? ಪಾತ್ರೆಗಳಾದರೆ ಮಣ್ಣಿನವಾ? ಹಿತ್ತಾಳಿವಾ? ಬಟ್ಟೆಗಳಾದರೆ ನೂಲಿನವಾ? ರೇಷ್ಮೆಯವಾ? ಕಾಯಿಗಳಾದರೆ ಯಾವ ಜಾತಿ ಗಿಡದ ಕಾಯಿಗಳು? ಇನ್ನು ಮುಂತಾದ ವಿಷಯಗಳನ್ನು ದೀಪಕಾಂತಿಯಿಂದಲೇ ತಿಳಿದುಕೊಳ್ಳುತ್ತೇವೆ. ಆ ವಿಧವಾಗಿ ಕತ್ತಲಲ್ಲಿ ಉಪಯೋಗಪಡುವುದು ದೀಪ. ವಿವಿಧ ರೀತಿಯ ವಸ್ತುಗಳ ವಿವರವನ್ನು ತಿಳಿದುಕೊಳ್ಳುವುದನ್ನು **'ಇಷ್ಯ'** ಎನ್ನುತ್ತಿದ್ದೇವೆ. ದೀಪದಿಂದ ವಸ್ತುಗಳ ವಿವರ ತಿಳಿಯಲ್ಪಡುವುದನ್ನು **'ಜ್ಯೋತಿಷ್ಯ'** ಎನ್ನುತ್ತೇವೆ. ಉದಾಹರಣೆಗೆ ಒಬ್ಬನು ಕತ್ತಲಿಂದ ತುಂಬಿದ ತನ್ನ ಮನೆಯಲ್ಲಿ ಏನಿರುವುದು ತಿಳಿಯದಿರುವಾಗ, ತನ್ನ ಹತ್ತಿರ ದೀಪ ಇಲ್ಲದಿದ್ದರೂ, ಅಥವಾ ತಾನು ಕುರುಡನಾದರೂ, ಮತ್ತೊಬ್ಬನ ಸಹಾಯ ಕೇಳಿ ಆತನಿಂದ ತಿಳಿದುಕೊಳ್ಳುವುದು ನಡೆಯುತ್ತಿದೆ. ಒಬ್ಬ ವ್ಯಕ್ತಿ ನಮ್ಮ ಮನೆಯಲ್ಲಿ ವಸ್ತುಗಳ ವಿವರ ನಮಗೆ ತಿಳಿಸಬೇಕೆಂದರೇ, ಆತನು ಕೂಡಾ ತನ್ನ ದೀಪವನ್ನು ಉಪಯೋಗಿಸಿ ನೋಡಬೇಕಾದ್ದೆ ಹಾಗೆ ಹೇಳುವುದನ್ನು 'ಜ್ಯೋತಿಷ್ಯ' ಎನ್ನುತ್ತೇವೆ.

ಇಲ್ಲಿ ಕೆಲವರು ಭಾಷಾ ಪಂಡಿತರು ಒಂದು ಪ್ರಶ್ನೆ ಕೇಳಬಹುದು. 'ಜ್ಯೋತಿ' ಎಂದರೇ ದೀಪ ಎಂದು ಅರ್ಥವಿದೆ. ಆದರೆ 'ಇಷ್ಯ' ಎಂದರೇ ತಿಳಿದುಕೊಳ್ಳುವುದು ಎಂಬ ಅರ್ಥ ಎಲ್ಲಿಯೂ ಇಲ್ಲವೇ ಎಂದು ಕೇಳಬಹುದು. ಅದಕ್ಕೆ ಉತ್ತರ ಏನೆಂದರೇ! ಹೊರಗೆ ಏನನ್ನು ತಿಳಿದುಕೊಂಡರೂ ಅದನ್ನು ತಿಳಿದುಕೊಳ್ಳುವುದು, ಗ್ರಹಿಸುವುದು ಎಂದೇ ಹೇಳುತ್ತೇವೆ. ಆದರೆ 'ಇಷ್ಯ' ಎನ್ನುವ ಪದ ಎಲ್ಲಿಯೂ ಬಳಕೆಯಲ್ಲಿ ಇಲ್ಲವೆನ್ನುವುದು ನಾನು ಕೂಡಾ ಒಪ್ಪಿಕೊಳ್ಳುತ್ತೇನೆ. ಒಂದು ಶರೀರದಲ್ಲಿನ ಕರ್ಮವನ್ನು ತಿಳಿದುಕೊಳ್ಳುವಾಗ ಮಾತ್ರ 'ಇಷ್ಯ' ಎಂಬ ಪದವನ್ನು ಉಪಯೋಗಿಸುತ್ತಿದ್ದರು. 'ಇಷ್ಯ' ಎಂಬ ಪದ ಅಥವಾ ಶಬ್ಧವನ್ನು ಪಾಪ ಪುಣ್ಯಗಳನ್ನು ತಿಳಿದುಕೊಳ್ಳುವಾಗ ಮಾತ್ರ ಉಪಯೋಗಿಸುವುದರಿಂದ, ಆ ಪದ ಪ್ರತ್ಯೇಕವಾದುದು. ಹಾಗೇ 'ಜ್ಯೋತಿ' ಎಂಬ ಪದಕ್ಕೆ ಇಲ್ಲಿ ದೀಪ ಎಂದು ಅರ್ಥ ಮಾಡಿಕೊಳ್ಳಬಾರದು. ಜ್ಯೋತಿ ಎಂದರೆ ಜ್ಞಾನ ಎಂದು ಭಾವಿಸಬೇಕು. ಇದು ಒಂದು ಆಧ್ಯಾತ್ಮಿಕದಲ್ಲಿಯೇ 'ಜ್ಯೋತಿ'ಯನ್ನು ಜ್ಞಾನ ಎಂದು ಕರೆಯುತ್ತೇವೆ. ಆತ್ಮ ಜ್ಞಾನವಿರುವ ಮನುಷ್ಯ ತನ್ನ ಜ್ಞಾನದಿಂದ ಒಬ್ಬ ಎದುರಿಗಿರುವ ಮನುಷ್ಯನ ಶರೀರದಲ್ಲಿನ ಕರ್ಮವನ್ನು ತಿಳಿದುಕೊಂಡು, ಅವನಿಗೆ ತಿಳಿಸುವುದನ್ನು 'ಜ್ಯೋತಿಷ್ಯ' ಎನ್ನುತ್ತೇವೆ. ಇಲ್ಲಿ **ಜ್ಯೋತಿಷ್ಯ ಎಂದರೇ ದೀಪದಿಂದ ವಸ್ತುವನ್ನು ತಿಳಿದುಕೊಳ್ಳುವುದಲ್ಲ, ಜ್ಞಾನದಿಂದ ಕರ್ಮವನ್ನು ತಿಳಿದುಕೊಳ್ಳುವುದೆಂದು ಅರ್ಥ**. ಈಗ ಜ್ಯೋತಿಷ್ಯ ಎಂದರೇ ದೈವಜ್ಞಾನ ಹೊಂದಿದ ವ್ಯಕ್ತಿ, ಒಬ್ಬ ಮನುಷ್ಯನ ಕರ್ಮದಲ್ಲಿನ ಪಾಪಪುಣ್ಯಗಳನ್ನು ತಿಳಿದುಕೊಂಡು ಪಾಪ ಫಲಿತವನ್ನೂ, ಪುಣ್ಯಫಲಿತವನ್ನೂ ವಿವರಿಸಿ ಹೇಳುವುದೆಂದು ಪೂರ್ತಿಯಾಗಿ ಅರ್ಥವಾಗುತ್ತಿದೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೇ! ಶರೀರಾಂತರ್ಗತ ಕರ್ಮ ಫಲವನ್ನು ಹೇಳುವುದನ್ನು 'ಜ್ಯೋತಿಷ್ಯ' ಎನ್ನಬಹುದು. ಆದರೆ ಹೊರಗಿನ ಪ್ರಪಂಚ ವಸ್ತುಗಳನ್ನು ಕುರಿತು ಹೇಳುವುದು ಜ್ಯೋತಿಷ್ಯವಲ್ಲ. ಉದಾಹರಣೆಗೆ ಮುಂಬರುವ ಚುನಾವಣೆಯಲ್ಲಿ ಯಾವ ಪಾರ್ಟಿ ಗೆಲ್ಲುತ್ತದೆನ್ನುವುದಾಗಲಿ, ಇಲ್ಲವೇ ನಾನು ಬಚ್ಚಿಟ್ಟಿರುವ ವಸ್ತು ಯಾವುದು ಎಂದು ಕೇಳುವುದಾಗಲಿ, ಮುಚ್ಚಿರುವ ಬೋನಿನಲ್ಲಿನ ಪ್ರಾಣಿಯಾವುದು ಎಂದು ಕೇಳುವುದಾಗಲಿ, ನನ್ನ

ಪ್ಯಾಕೆಟ್‌ನಲ್ಲಿನ ವಸ್ತುವು ಯಾವುದೊ ಹೇಳು ಎಂದು ಕೇಳುವುದಾಗಲಿ, ಜ್ಯೋತಿಷ್ಯಕ್ಕೆ ಸಂಬಂಧಿಸಿದ ಪ್ರಶ್ನೆಗಳಲ್ಲ. ಅದಕ್ಕೆ ಸಮಾಧಾನ ಹೇಳುವುದು ಜ್ಯೋತಿಷ್ಯವಲ್ಲ. ಏಕೆಂದರೇ! ಇಂತಹ ಪ್ರಶ್ನೆಗಳೆಲ್ಲ ಯಾವುವಾದರೂ ಆಗಿರಲಿ ಶರೀರಾಂತರ್ಗತ ಕರ್ಮಕ್ಕೆ ಸಂಬಂಧಿಸಿರುವವಲ್ಲ. ವ್ಯಕ್ತಿಯ ಕರ್ಮವನ್ನು ನೋಡಿ ಹೇಳುವವಲ್ಲ, ಆದ್ದರಿಂದ ಅದು ಜ್ಯೋತಿಷ್ಯ ಅಲ್ಲ.

ಯಾವುದು ಜ್ಯೋತಿಷ್ಯವೊ, ಯಾವುದು ಜ್ಯೋತಿಷ್ಯ ಅಲ್ಲವೊ ತಿಳಿಯದ ಪರಿಸ್ಥಿತಿ ಈ ದಿನ ಇದೆ. ಅದೇ ವಿಧವಾಗಿ ಜ್ಯೋತಿಷ್ಯನು ಎಂದು ಹೆಸರಿಟ್ಟು ಕೊಂಡವರಲ್ಲಿ ಬಹಳಜನ ಯಾವುದು ಜ್ಯೋತಿಷ್ಯಕ್ಕೆ ಸಂಬಂಧಿಸಿದ ಪ್ರಶ್ನೆಯೋ, ಯಾವುದು ಪ್ರಶ್ನೆ ಅಲ್ಲವೋ ಕೂಡ ತಿಳಿಯದ ಸ್ಥಿತಿಯಲ್ಲಿ ಇದ್ದಾರೆ. ಅಂತಹ ಗೊಂದಲದಲ್ಲಿಯೇ ಕೆಲವರು ವಾಸ್ತುವನ್ನು ಕೂಡ ಜ್ಯೋತಿಷ್ಯ ಎನ್ನುತ್ತಿದ್ದಾರೆ. ವಾಸ್ತುಮೂಲಕ ಮನುಷ್ಯನಿಗೆ ಭವಿಷ್ಯತ್ತು ಹೇಳಬಹುದು ಎನ್ನುತ್ತಿದ್ದಾರೆ. ವಾಸ್ತವಕ್ಕೆ, ವಾಸ್ತು ಜ್ಯೋತಿಷ್ಯ ಅಲ್ಲವೆಂದು, ವಾಸ್ತು ಶಾಸ್ತ್ರವೇ ಅಲ್ಲವೆಂದು, ಜ್ಯೋತಿಷ್ಯಶಾಸ್ತ್ರಕ್ಕೆ ಸಂಬಂಧವಿಲ್ಲವೆಂದು ಬಹಳಜನರಿಗೆ ತಿಳಿದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನೆರವೇರದ ವಾಸ್ತು ಫಲಿತಗಳನ್ನು ನೋಡಿ, ಅದೇ ವಿಧವಾಗಿ ಪ್ರಶ್ನೆಯಲ್ಲದ ಜ್ಯೋತಿಷ್ಯವನ್ನು ನೋಡಿ, ವಾಸ್ತುವನ್ನು ನಿರೂಪಿಸಿದರೆ ಐದು ಕೋಟಿಗಳು, ಜ್ಯೋತಿಷ್ಯದ ಮೂಲಕ ನಮ್ಮ ಪ್ರಶ್ನೆಗಳಿಗೆ ಉತ್ತರ ಹೇಳಿದರೆ, ಅದು ನಿಜವಾದರೆ, ಹತ್ತುಕೋಟಿ ಕೊಡುತ್ತೇವೆಂದು ಪಂದ್ಯಕ್ಕೆ ಇಳಿಯುವ ನಾಸ್ತಿಕರೂ, ಹೇತು ವಾದಿಗಳೂ ತಯಾರಾಗಿದ್ದಾರೆ. ಇದೆಲ್ಲವೂ ನೋಡಿದರೆ ಇತ್ತ ವಾಸ್ತುವನ್ನು ಶಾಸ್ತ್ರವೆಂದು ಹೇಳುವವರಿಗು, ಹೊರಗಿನದಕ್ಕು ಉತ್ತರ ಹೇಳುವುದನ್ನೇ ಜ್ಯೋತಿಷ್ಯಶಾಸ್ತ್ರವೆನ್ನುವ ಜ್ಯೋತಿಷ್ಯರಿಗೂ, ಅತ್ತ ನಾಸ್ತಿಕರಿಗೂ, ಹೇತುವಾದಿಗಳಿಗೂ ಜ್ಯೋತಿ ತಿಳಿದಿಲ್ಲ, ಜ್ಯೋತಿಷ್ಯವೂ ತಿಳಿದಿಲ್ಲ. ಜ್ಯೋತಿಷ್ಯ ಎಂದರೆ ಏನೋ ತಿಳಿಯದಿರುವಾಗ ಅದರ ಹೆಸರು ಇಟ್ಟುಕೊಂಡು ಹೇಳುವ ಜ್ಯೋತಿಷ್ಯ ಶಾಸ್ತ್ರಿಗಳಾಗಲಿ, ಅದೇನೆಂದು ಪ್ರಶ್ನಿಸುವ ನಾಸ್ತಿಕವಾದಿಗಳಾಗಲಿ ಇಬ್ಬರೂ ಒಂದು ಗುಂಪಿಗೆ ಸೇರಿದವರೇಯೆಂದು ಹೇಳಬಹುದು. ಜ್ಯೋತಿಷ್ಯ ಶಾಸ್ತ್ರಿಗಳು,

ನಾಸ್ತಿಕವಾದಿಗಳು ಇಬ್ಬರೂ ಅಸಲಾದ ಜ್ಯೋತಿಷ್ಯ ಎಂದರೆ ಏನೋ ತಿಳಿಯಬೇಕೆಂದು ಕೋರುತ್ತಿದ್ದೇವೆ.

## 2 ಜ್ಯೋತಿಷ್ಯವು ಶಾಸ್ತ್ರವಾ?

ಜ್ಯೋತಿಷ್ಯವು ಶಾಸ್ತ್ರವಾ? ಅಲ್ಲವಾ? ಎಂದು ಬಹಳಜನರಿಗೆ ಪ್ರಶ್ನೆಯಾಗಿಯೇ ಇದೆ. ಕೆಲವರು ಶಾಸ್ತ್ರವೆನ್ನುತ್ತಿದ್ದಾರೆ, ಕೆಲವರು ಶಾಸ್ತ್ರವಲ್ಲ ಎನ್ನುತ್ತಿದ್ದಾರೆ, ಹೇಳಿರುವುದು ನೆರವೇರಿದೆ ಅಲ್ಲವೇ ಆದ್ದರಿಂದ ಜ್ಯೋತಿಷ್ಯ ಶಾಸ್ತ್ರವೇಯೆಂದು ಕೆಲವರು ಹೇಳುತ್ತಿದ್ದಾರೆ. ಹೇಳಿರುವವು ಬಹಳ ನೆರವೇರಲಿಲ್ಲ ವೆಂದು, ಆದ್ದರಿಂದ ಜ್ಯೋತಿಷ್ಯವು ಶಾಸ್ತ್ರವಲ್ಲ ಎಂದು ಬಹಳಜನ ಹೇಳುತ್ತಿದ್ದಾರೆ. ಯಾರ ಮಾತು ನಿಜವೆಂದು ಯೋಚಿಸಿದರೆ, ಇವರು ಜ್ಯೋತಿಷ್ಯ ಅಲ್ಲದಿರುವುದನ್ನು ಹಿಡಿದುಕೊಂಡು ಒಂದು ನೆರವೇರಿದೆ ಆದ್ದರಿಂದ ಶಾಸ್ತ್ರವೆಂದು, ಹತ್ತು ನೆರವೇರಲಿಲ್ಲ ಆದ್ದರಿಂದ ಶಾಸ್ತ್ರ ಅಲ್ಲವೆಂದು ಅನ್ನುತ್ತಿದ್ದಾರೆ. ಕತ್ತಲಲ್ಲಿ ಹಾವಲ್ಲದ ಹಗ್ಗವನ್ನು ನೋಡಿ ಅಂಕುಡೊಂಕಾಗಿರುವುದನ್ನು ಕಂಡು ಹಾವು ಎಂದಾಗ, ಕದಲಲಿಲ್ಲವಲ್ಲ ಹಾವು ಅಲ್ಲವೇನೊ ಎಂದು ಮತ್ತೊಬ್ಬನು ಅಂದ ಹಾಗೆ, ಅಸಲು ಜ್ಯೋತಿಷ್ಯ ಅಲ್ಲದಿರುವುದನ್ನು ಹಿಡಿದುಕೊಂಡು ನಾನು ಹೇಳಿರುವುದು ನೆರವೇರಿದೆ ಅಲ್ಲವೇ! ಆದ್ದರಿಂದ ಇದು ಶಾಸ್ತ್ರವೆಂದು ಒಬ್ಬನು, ನಾವು ಕೇಳಿರುವುದು ನೆರವೇರಲಿಲ್ಲ ಅಲ್ಲವೆ! ಆದ್ದರಿಂದ ಇದು ಶಾಸ್ತ್ರ ಅಲ್ಲವೆಂದು ಮತ್ತೆ ಕೆಲವರು ಹೇಳಿದಂತಿದೆ. ಕತ್ತಲಲ್ಲಿ ಹಾವು ಎಂದುಕೊಂಡಿರುವುದು ಅಸಲು ಹಾವೋ ಅಲ್ಲವೊ, ಹಾಗೆಯೇ ಜ್ಯೋತಿಷ್ಯ ಎಂದುಕೊಂಡಿರುವುದು ಜ್ಯೋತಿಷ್ಯವೋ ಅಲ್ಲವೋ ನೋಡಬೇಕಾದ ಅವಶ್ಯಕತೆಯಿದೆ. ಹಾಗೆ ನೋಡಿದರೆ ನಾವಂದುಕೊಂಡಿರುವುದು ಜ್ಯೋತಿಷ್ಯವಲ್ಲ ಆದ್ದರಿಂದ, ಅದನ್ನು ಶಾಸ್ತ್ರವಾ ಅಲ್ಲವಾ ಎಂದು ನೋಡಬೇಕಾದ ಕೆಲಸವೇಯಿಲ್ಲ. ಜ್ಯೋತಿಷ್ಯವೆನ್ನುವುದು ಆತ್ಮಜ್ಞಾನ ಇರುವವರೂ, ಕರ್ಮ ವಿಧಾನ ತಿಳಿದವರೂ, ಪಾಪಪುಣ್ಯ ಫಲಿತಗಳನ್ನು ತಿಳಿದವರೂ, ಹೇಳುವುದೆಂದು ತಿಳಿಯುತ್ತಿದೆ. ಕರ್ಮವೆಂದರೆ

ಏನೊ ತಿಳಿಯದವರು, ಆತ್ಮವೆಂದರೆ ಏನೋ ತಿಳಿಯದವರು ಹೇಳುವುದು ಜ್ಯೋತಿಷ್ಯ ಅಲ್ಲವೇ ಅಲ್ಲ. ಹೇಗಾದರೇನು, ಆತ್ಮಜ್ಞಾನಿಗಳು, ಕರ್ಮಜ್ಞೇಯರು ತಿಳಿದ ಜ್ಯೋತಿಷ್ಯವೆನ್ನುವುದು ಒಂದಿದೆಯೆಂದು ತಿಳಿಯುತ್ತಿದೆ. ಈಗ ಜ್ಞಾನಿಗಳು ಹೇಳುವ ಜ್ಯೋತಿಷ್ಯವನ್ನು ಶಾಸ್ತ್ರ ಎನ್ನಬಹುದಾ! ಎಂದು ಕೇಳಿದರೇ ತಿಳಿಯುವ ವಿವರ ಏನೆಂದರೇ!

ಶಾಸ್ತ್ರಗಳು ಒಟ್ಟಾರೆ ಆರು ಇವೆ. ಅವುಗಳನ್ನೇ ಷಟ್‌ಶಾಸ್ತ್ರಗಳೆಂದು ಪೂರ್ವದಿಂದಲೂ ಹಿರಿಯರು ಹೇಳುತ್ತಿದ್ದಾರೆ. ಷಟ್‌ಶಾಸ್ತ್ರಗಳಲ್ಲಿ ಅತಿ ದೊಡ್ಡದು ಇಲ್ಲವೇ ಅತಿ ಮುಖ್ಯವಾದುದು **'ಬ್ರಹ್ಮವಿದ್ಯಾಶಾಸ್ತ್ರ'** ಬ್ರಹ್ಮ ಎಂದರೆ ಯಾರೋ ದೇವರೆಂದುಕೊಳ್ಳಬೇಡಿ. ಬ್ರಹ್ಮ ಎನ್ನುವುದು ಹೆಸರಲ್ಲ ಬ್ರಹ್ಮ ಎಂದರೇ ದೊಡ್ಡದು ಎಂದು ಅರ್ಥ. ಬ್ರಹ್ಮವಿದ್ಯೆ ಎಂದರೇ ದೊಡ್ಡವಿದ್ಯೆ ಎಂದು ಅರ್ಥ. ಬ್ರಹ್ಮವಿದ್ಯಾ ಶಾಸ್ತ್ರವನ್ನೇ 'ಯೋಗಶಾಸ್ತ್ರ' ಎಂದು ಕೂಡ ಕರೆಯುತ್ತಿದ್ದಾರೆ. ಬ್ರಹ್ಮವಿದ್ಯಾಶಾಸ್ತ್ರದ ನಂತರ ಎರಡನೆ ಸ್ಥಾನದಲ್ಲಿರುವ ಶಾಸ್ತ್ರ ಜ್ಯೋತಿಷ್ಯಶಾಸ್ತ್ರ. ಇವುಗಳ ನಂತರ ಉಳಿದ ನಾಲ್ಕು ಶಾಸ್ತ್ರಗಳು ಇವೆ. ಆರು ಶಾಸ್ತ್ರಗಳಲ್ಲಿ ಎರಡನೆ ಸ್ಥಾನದಲ್ಲಿರುವುದು ಜ್ಯೋತಿಷ್ಯಶಾಸ್ತ್ರ, ಆದ್ದರಿಂದ ಜ್ಯೋತಿಷ್ಯವನ್ನು ಶಾಸ್ತ್ರವೆ ಎನ್ನುತ್ತಿದ್ದೇವೆ. ಇಲ್ಲಿ ಕೆಲವರಿಗೆ ಶಾಸ್ತ್ರ ಎಂದರೆ ಏನು? ಎನ್ನುವ ಪ್ರಶ್ನೆ ಬರಬಹುದು. ಅದಕ್ಕೆ ಉತ್ತರ ಏನೆಂದರೆ!

ಶಾಸನಗಳಿಂದ ಕೂಡಿಕೊಂಡಿರುವುದು ಶಾಸ್ತ್ರ ಎಂದು ಹೇಳಬಹುದು. ಶಾಸನ ಎಂದರೇ ಚಾಚೂ ತಪ್ಪದೆ ನೆರವೇರಿಸಲ್ಪಡುವುದೆಂದು ಅರ್ಥ. ಹೇಳಿರುವುದು ಅಥವಾ ಬರೆದಿರುವುದು ಏನಾದರೂ ತಪ್ಪದೆ ನಡೆಯುವ ಸತ್ಯವಾದಾಗ, ಅದನ್ನು 'ಶಾಸನ' ಎನ್ನುತ್ತೇವೆ ಮತ್ತು ಶಾಸ್ತ್ರ ಎಂದು ಕೂಡ ಎನ್ನುತ್ತೇವೆ. ಹೇಳಿರುವುದನ್ನು ಶಾಸನ ಎಂದು, ಬರೆದಿರುವುದನ್ನು ಶಾಸ್ತ್ರ ಎಂದು ಹೇಳುವುದು ನಡೆಯುತ್ತಿದೆ. ಬರೆದಿರುವುದು ಶಾಸ್ತ್ರವಾಗಬೇಕೆಂದರೆ, ಬರೆಯದ ಮುನ್ನವೇ ತಾನು ಪರಿಶೋಧನೆ ಮಾಡಿದ ಪರಿಶೋಧಕನಾಗಿ ಕಂಡುಕೊಂಡಿರುವು ದಾಗಿರಬೇಕು. ಹಾಗೆಯೇ ಹೇಳಿರುವುದು ಶಾಸನವಾಗಬೇಕೆಂದರೇ,

ಹೇಳದಮುನ್ನವೇ ತಾನು ಅಧಿಕಾರ ಹೊಂದಿದವನಾಗಿ ನೆರವೇರುವಂತೆ ಹೇಳಿದ್ದಾಗಿರಬೇಕು. ಆದರೆ ಇಲ್ಲಿ ಗಮನಿಸಬೇಕಾದ ವಿಷಯವೊಂದಿದೆ. ಇತ್ತ ಪರಿಶೋಧನೆ ಇಲ್ಲದೇ, ಅತ್ತ ಅಧಿಕಾರ ಇಲ್ಲದೇ ಹೇಳಿರುವುದು ನಡೆಯುವ ವಿಧಾನ ಒಂದಿದೆ. ಅದನ್ನೇ 'ಶಾಪ' ಎನ್ನುತ್ತಿದ್ದೇವೆ. ಶಾಸ್ತ್ರ, ಶಾಸನ ಎರಡೂ ಬೇರೆ ಬೇರೆಯಾಗಿದ್ದರೂ, ಶಾಸನದಿಂದ ಕೂಡಿಕೊಂಡಿರುವುದು ಶಾಸ್ತ್ರವೆಂದು ಹೇಳಿದಂತೇ, ಶಾಸ್ತ್ರದಿಂದ ಕೂಡಿಕೊಂಡಿರುವುದು ಶಾಸನವೆಂದು ಕೂಡ ಹೇಳಬಹುದು. ಪರಿಶೋಧನೆಯಾಗಲಿ, ಅಧಿಕಾರವಾಗಲಿ ಇಲ್ಲದ ಶಾಪ, ಶಾಸ್ತ್ರ, ಶಾಸನದೊಂದಿಗೆ ಸಮಾನವಾದುದು. ಆದ್ದರಿಂದ ಶಾಪ, ಶಾಸನ, ಶಾಸ್ತ್ರ ಮೂರು ಸಮಾನಪದಗಳೆಂದು ಹೇಳಬಹುದು. ಜ್ಯೋತಿಷ್ಯ ಮೊದಲು ಶಾಪದಿಂದ ಬಂದಿದೆ ಆದ್ದರಿಂದ ಕೊನೆಗೆ ಶಾಸ್ತ್ರವಾಗಿದೆ.

ಉದಾಹರಣೆಗೆ ಇತ್ತ ಅಧಿಕಾರವಾಗಲಿ, ಅತ್ತ ಪರಿಶೋಧನೆಯಾಗಲಿ ಇಲ್ಲದ ಒಬ್ಬ ಆತ್ಮಜ್ಞಾನಿ ಪಾಪ ಇರುವವನನ್ನು ಅಂದರೇ ತಪ್ಪು ಮಾಡಿದವನನ್ನು ಶಪಿಸಿದ್ದಾನೆ. ಆ ಶಾಪ ತಪ್ಪದೆ ನೆರವೇರಿದೆ. ಹಾಗೆ ಮೊದಲು ಒಬ್ಬ ಜ್ಞಾನಿಯಿಂದ ಮೊದಲೇ ಹೇಳಲ್ಪಟ್ಟ ವಾಕ್ಕು, ನಂತರ ನೆರವೇರುವುದನ್ನು ಜ್ಯೋತಿಷ್ಯ ಎಂದು ಕೆಲವರು ಕರೆದಿದ್ದಾರೆ. ಮೊದಲು ಹೇಳಿರುವುದು ನಡೆದರೇನೆ ಅಲ್ಲವೆ! ಅದನ್ನು ಜ್ಯೋತಿಷ್ಯವೆನ್ನುವುದು. ನಮಗೆ ಅರ್ಥವಾಗುವುದಕ್ಕೆ ಮತ್ತೊಂದು ಉದಾಹರಣೆಯನ್ನು ವಿವರಿಸಿಕೊಳ್ಳೋಣ. ಒಬ್ಬನು ಒಬ್ಬ ಹೀನಮತಿಯಿರುವ ಸ್ತ್ರೀಯನ್ನು ಊರಿಗೆ ದೂರವಾಗಿರುವ ನಿರ್ಜನ ಪ್ರದೇಶಕ್ಕೆ ಕರೆದುಕೊಂಡುಹೋಗಿ ಬಲವಂತವಾಗಿ ಆಕೆಯ ಮೇಲೆ ಅತ್ಯಾಚಾರ ಮಾಡಿ, ಆ ವಿಷಯ ಯಾರಿಗೂ ತಿಳಿಯದಂತಿರುವುದಕ್ಕೆ ಆಕೆಯನ್ನು ಹತ್ಯೆ ಮಾಡಿದ್ದಾನೆ. ಆತನು ಮಾಡಿರುವುದು ಒಳ್ಳೆಯ ಕೆಲಸವಲ್ಲ, ಕೆಟ್ಟಕೆಲಸ. ಆ ಕೆಟ್ಟಕೆಲಸಕ್ಕೆ ಆತನಿಗೆ ಪಾಪ ಬಂದಿರುತ್ತದೆ. ಆ ಪಾಪಕ್ಕೆ ಶಿಕ್ಷೆ ಎನ್ನುವುದು ಒಂದು ಇರುತ್ತದೆ. ಆ ಶಿಕ್ಷೆಯನ್ನು ಆತನು ತಪ್ಪದೆ ಯಾವಾಗಲೋ ಒಂದುಸಲ ಅನುಭವಿಸಬೇಕಾದ್ದೆ. ಆದರೆ ಆ ಶಿಕ್ಷೆ ಏನು? ಎಂಬುದು ನಮಗೆ ತಿಳಿದಿಲ್ಲ. ಆದರೆ ಅಲ್ಲಿ ನಡೆದ ವಿಷಯವೇನೆಂದರೇ

ಆ ಸಂಘಟನೆ ನಡೆದ ಕೆಲವು ದಿನಗಳಿಗೆ, ಆ ತಪ್ಪು ಮಾಡಿದ ವ್ಯಕ್ತಿ ಮತ್ತಿನ ಪಾನೀಯವನ್ನು ಕುಡಿದು, ನಶೆ ಏರಿದವನಾಗಿ ದಾರಿಯಲ್ಲಿ ಹೋಗುತ್ತಿರುವ ಒಬ್ಬ ಆತ್ಮಜ್ಞಾನಿಯನ್ನು ಎದುರಾಗಿ ತಾಕಿರುವುದಲ್ಲದೇ, ಆತನನ್ನೇ ಕಣ್ಣು ಕಾಣಿಸುವುದಿಲ್ಲವಾ ಎಂದು ದೂಷಿಸಿದನು. ಹಾಗೆ ಅವನು ತಾಕಿರುವುದಲ್ಲದೇ ಮತ್ತಿನಲ್ಲಿದ್ದು ದೂಷಿಸುವುದೂ, ಕಣ್ಣು ಕಾಣಿಸಲಿಲ್ಲವಾ ಎನ್ನುವುದೂ ಎಲ್ಲಾ ಆ ಆತ್ಮಜ್ಞಾನಿಗೆ ಕೋಪವನ್ನು ತರಿಸಿವೆ. ಆಗ ಆತ್ಮಜ್ಞಾನಿ "ನೀನು ಜೀವನದ ಕೊನೆಯವರೆಗು ಕಣ್ಣು ಕಾಣಿಸದ ಕುರುಡನಾಗಿ ಹೋಗುತ್ತೀಯಾ" ಎಂದು ಶಪಿಸಿದನು. ಆ ವಿಧವಾಗಿ ಶಪಿಸಿದ ಆತ್ಮಜ್ಞಾನಿ ತನ್ನ ದಾರಿಯಲ್ಲಿ ತಾನು ಹೋದನು. ಆ ಶಾಪವನ್ನು ಅಲ್ಲಿರುವ ಕೆಲವರು ಕೇಳಿದ್ದಾರೆ. "ಇವನು ಶಾಪ ಇಟ್ಟರೆ ನನಗೆ ತಗಲುವುದಕ್ಕೆ ಇವನೇನಾದರು ದೇವರಾ!" ಎಂದು ಕುಡಿದವನು ಅಂದುಕೊಳ್ಳುತ್ತಾ ಹೊರಟುಹೋದನು. ಇದೆಲ್ಲವೂ ಗಮನಿಸಿದರೆ ಒಬ್ಬನು ಹತ್ಯೆ ಮಾಡಿ ತಪ್ಪು ಮಾಡಿದ್ದಾನೆ, ನಂತರ ಸ್ವಲ್ಪ ದಿನಗಳಿಗೇ ದಾರಿಯಲ್ಲಿ ಮತ್ತೊಬ್ಬನನ್ನು ತಗಲಿದ್ದಾನೆ, ತಗಲಿರುವುದು ದೊಡ್ಡತಪ್ಪು ಅಲ್ಲದಿದ್ದರೂ ಅನುಭವಿಸಬೇಕಾದ ಶಿಕ್ಷೆಯನ್ನು ಆತನು ಶಾಪದ ರೂಪದಲ್ಲಿ ಹೊಂದಿದ್ದಾನೆ. ಮುಂಬರುವ ಶಿಕ್ಷೆ ಏನೋ ಅದನ್ನು ಉಳಿದ ಕೆಲವರು ಕೂಡ ಕೇಳಿದ್ದಾರೆ. ಇಲ್ಲಿ ತಪ್ಪು ಮಾಡಿದವನಿಗೆ ಮುಂಬರುವಂತಹ ಶಿಕ್ಷೆ ಮೊದಲೇ ಹೇಳಲ್ಪಟ್ಟಿದೆ. ಹಾಗೆ ನಡೆಯುವಂತಾದ್ದನ್ನು ಮೊದಲೇ ಹೇಳುವುದು ಜ್ಯೋತಿಷ್ಯ ಆಗಿದೆ, ಹೇಳಿದವನು ಆತ್ಮಜ್ಞಾನಿ, ತಪ್ಪು ಮಾಡಿದವನು ಎಷ್ಟು ತಪ್ಪು ಮಾಡಿದ್ದಾನೆಂದು ಯೋಚಿಸದೆಯೇ, ಅವನನ್ನು ಕುರಿತಾದ ಪರಿಶೋಧನೆ ಮಾಡದೇ, ಅವನ ಮೇಲೆ ಅಧಿಕಾರ ಇಲ್ಲದೇ ಆತ್ಮಜ್ಞಾನಿ ಹೇಳಿರುವುದನ್ನು ಶಾಪ ಎನ್ನುತ್ತಿದ್ದೇವೆ. ಶಾಪದ ರೂಪದಲ್ಲಿ ಮುಂಬರುವಂಥಾದ್ದನ್ನು ಮೊದಲೇ ಹೇಳುವುದರಿಂದ ಅದನ್ನು ಜ್ಯೋತಿಷ್ಯ ಎನ್ನುತ್ತಿದ್ದೇವೆ. ಹಾಗೆ ಜ್ಞಾನಿ ಬಾಯಿಂದ ಬಂದ ಮಾತಿನ ಪ್ರಕಾರ ಅಥವಾ ಜ್ಯೋತಿಷ್ಯದ ಪ್ರಕಾರ ಮರುಜನ್ಮದಲ್ಲಿ ಅವನು ಹುಟ್ಟು ಕುರುಡನಾಗಿಹೋಗಿ ಜೀವನ ಪರ್ಯಂತ ಅಂಧನಾಗಿಯೇ ಇದ್ದನು. ಹೀಗೆ ತಪ್ಪದೆ ನಡೆಯುವುದು ಶಾಪ, ಆದ್ದರಿಂದ ಅದನ್ನು ಶಾಸ್ತ್ರ ಎನ್ನುತ್ತಿದ್ದೇವೆ. ಈ

ವಿಧವಾಗಿ ತಪ್ಪು ಮಾಡಿದವನನ್ನು ಕುರಿತು ಕೆಟ್ಟದು ನಡೆಯುತ್ತದೆಂದು ಹೇಳಿದ ಶಾಪವೆನ್ನುವ ಮಾತಾಗಲಿ, ಒಳಿತು ಮಾಡಿದವನನ್ನು ಕುರಿತು ಒಳ್ಳೆಯದು ನಡೆಯುತ್ತದೆಂದು ಹೇಳಿರುವ 'ಆಶೀರ್ವಾದ' ಎನ್ನುವ ಮಾತಾಗಲಿ ತಪ್ಪದೇ ನಡೆಯುವವೇ ಆದ್ದರಿಂದ ಶಾಸ್ತ್ರವೆಂದು, ಮೊದಲೇ ಹೇಳುವುದರಿಂದ ಜ್ಯೋತಿಷ್ಯ ಎಂದು ಹೇಳುವುದು ನಡೆದಿದೆ. ಆದ್ದರಿಂದ ಜ್ಯೋತಿಷ್ಯವು ಜ್ಯೋತಿಷ್ಯಶಾಸ್ತ್ರವಾಗಿದೆ. ಮೊದಲು ಈ ವಿಧವಾಗಿ ಪ್ರಾರಂಭವಾದ ಜ್ಯೋತಿಷ್ಯ ಶಾಸ್ತ್ರ ಸ್ವಲ್ಪ ಪರಿಶೋಧನೆ ರೂಪದಲ್ಲಿ ಸಾಗಿದೆ. ಹಾಗೆ ಕೆಲವರಿಂದ ಪರಿಶೋಧನೆ ಮಾಡಲ್ಪಟ್ಟು, ಅವರಿಂದ ಕಂಡುಕೊಂಡ ಜ್ಯೋತಿಷ್ಯ ಸಿದ್ಧಾಂತಗಳು ಗ್ರಂಥರೂಪದಲ್ಲಿ ಬರೆಯಲ್ಪಟ್ಟಿವೆ. ಹಾಗೆ ಸಿದ್ಧಾಂತ ರೂಪದಲ್ಲಿರುವ ಗ್ರಂಥವನ್ನು ಜ್ಯೋತಿಷ್ಯ ಗ್ರಂಥ ಎನ್ನುತ್ತಿದ್ದೇವೆ. ಆರು ಶಾಸ್ತ್ರಗಳಲ್ಲಿ ದೊಡ್ಡದಾದ ಬ್ರಹ್ಮವಿದ್ಯಾ ಶಾಸ್ತ್ರವನ್ನು ಸ್ವತಃವಾಗಿ ದೇವರೇ ಹೇಳಿದಾಗ, ಉಳಿದ ಐದು ಶಾಸ್ತ್ರಗಳು ಮನುಷ್ಯನಿಂದ ಹೇಳಲ್ಪಟ್ಟಿವೆ. ಒಟ್ಟಾರೆ ಆರು ಶಾಸ್ತ್ರಗಳು ಪೂರ್ವದಿಂದ ಇರುವವೇ, ಆದರೂ ಕಾಲಕ್ರಮವಾಗಿ ಕೆಲವು ಭಾವನೆಗಳು ಬದಲಾಗಿ ಹೋಗಿರುವುದರಿಂದ, ಮನುಷ್ಯರು ಅವುಗಳನ್ನು ಪೂರ್ತಿ ಅಸಲಾದ ಭಾವನೆಯಿಂದ ಅರ್ಥ ಮಾಡಿಕೊಳ್ಳದೆ ಹೋಗುತ್ತಿದ್ದಾರೆ. ಬ್ರಹ್ಮವಿದ್ಯಾಶಾಸ್ತ್ರದ ನಂತರವಿರುವ ಜ್ಯೋತಿಷ್ಯಶಾಸ್ತ್ರದ ಮೇಲೆ ಪೂರ್ತಿ ಅವಲೋಕನ ಇಲ್ಲದೆ ಹೋಗಿ, ಉಳಿದ ಖಗೋಳಶಾಸ್ತ್ರ, ಭೌತಶಾಸ್ತ್ರ, ರಸಾಯನ ಶಾಸ್ತ್ರ, ಗಣಿತಶಾಸ್ತ್ರ ಎನ್ನುವ ನಾಲ್ಕು ಶಾಸ್ತ್ರಗಳು ಎಷ್ಟೋ ಅಭಿವೃದ್ಧಿಹೊಂದಿ ಮನುಷ್ಯನಿಗೆ ಚೆನ್ನಾಗಿ ಅವಲೋಕನದಲ್ಲಿವೆ. ದೊಡ್ಡದಾದ ಬ್ರಹ್ಮವಿದ್ಯಾಶಾಸ್ತ್ರ, ಜ್ಯೋತಿಷ್ಯ ಶಾಸ್ತ್ರ ಎರಡೂ ಮನುಷ್ಯನ ಅವಲೋಕನದಲ್ಲಿ ಇಲ್ಲದೇ ಹೋಗಿರುವುದರಿಂದ ಅವುಗಳಲ್ಲಿನ ಶಾಸ್ತ್ರೀಯತೆ ಎನ್ನುವುದು ತಿಳಿಯದೆ ಹೋಗಿದೆ. ಶಾಸ್ತ್ರೀಯತೆಯನ್ನು ನೋಡದೆ ಮನುಷ್ಯ ತನಗಿಷ್ಟಬಂದಂತೆ ಹೇಳಿಕೊಳ್ಳುವುದರಿಂದ, ಜ್ಯೋತಿಷ್ಯವನ್ನು ಶಾಸ್ತ್ರವೇ ಅಲ್ಲವೆಂದು ಕೆಲವರನ್ನುತ್ತಿರುವಾಗ, ಬ್ರಹ್ಮವಿದ್ಯಾಶಾಸ್ತ್ರವೆನ್ನುವುದು ಅಸಲಿಗೇ ಇಲ್ಲವೆಂದು ನಾಸ್ತಿಕವಾದಿಗಳು ಹೇಳುತ್ತಿದ್ದಾರೆ. ಈಗಿನ ಕಾಲದಲ್ಲಿ ನಾಸ್ತಿಕರಿಗಾಗಲಿ, ಆಸ್ತಿಕರಿಗಾಗಲಿ ಚೆನ್ನಾಗಿ ಕಾಣಿಸುವ ಶಾಸ್ತ್ರಗಳು 1) ಗಣಿತ, 2) ಖಗೋಳ,

3) ರಸಾಯನ, 4) ಭೌತ ಶಾಸ್ತ್ರಗಳೇ! ಆದ್ದರಿಂದ ಆ ನಾಲ್ಕು, ಬಹಳ ಪ್ರಚಾರದಲ್ಲಿ ಇರುವಾಗ, ಶಾಸ್ತ್ರೀಯತೆ ಲೋಪಿಸಿರುವವಾಗಿ ಜ್ಯೋತಿಷ್ಯ, ಬ್ರಹ್ಮವಿದ್ಯೆ ಎರಡೂ ಕಾಣಿಸುತ್ತಿವೆ. ಯಾರಿಗೆ ಹೇಗೆ ಕಾಣಿಸಿದರೂ, ಈ ಎರಡು ಸ್ವಚ್ಛವಾದ ಶಾಸ್ತ್ರಗಳು. ಬ್ರಹ್ಮವಿದ್ಯೆಯನ್ನೂ, ಜ್ಯೋತಿಷ್ಯವನ್ನೂ ಪೂರ್ವದಂತೆ ಹೇಳಿಕೊಂಡರೆ ಅವು ಎರಡು ಶಾಸ್ತ್ರಗಳೆಂದು ಇತ್ತ ನಾಸ್ತಿಕರಿಗು, ಅತ್ತ ಆಸ್ತಿಕರಿಗು, ಶಾಸ್ತ್ರ ಪರಿಶೋಧಕರಿಗು ತಿಳಿಯಬಲ್ಲದು.

## 3 ಜ್ಯೋತಿಷ್ಯನು ಯಾರು?

ಯಾವ ಮನುಷ್ಯನಿಗಾದರೂ ನಡೆದುಹೋದ ಕಾಲ, ನಡೆಯುತ್ತಿರುವ ಕಾಲ, ಮುಂಬರುವ ಕಾಲ ಎಂದು ಮೂರು ಕಾಲಗಳು ಇವೆ. ನಡೆದುಹೋದ ಕಾಲವನ್ನು 'ಭೂತಕಾಲ' ಎನ್ನುತ್ತಿದ್ದೇವೆ. ನಡೆಯುತ್ತಿರುವ ಕಾಲವನ್ನು 'ವರ್ತಮಾನಕಾಲ' ಎನ್ನುತ್ತಿದ್ದೇವೆ. ಮುಂಬರುವಂತಹ ಕಾಲವನ್ನು 'ಭವಿಷ್ಯತ್ ಕಾಲ' ಎನ್ನುತ್ತಿದ್ದೇವೆ. ನಡೆದು ಹೋದ ಭೂತಕಾಲವನ್ನು ನಮ್ಮೊಳಗಿನ ಮನಸ್ಸೊಂದರ ಜ್ಞಾಪಕದಿಂದ ತಿಳಿದುಕೊಳ್ಳಬಹುದು. ಅದನ್ನೇ ಮನೋ ನೇತ್ರದಿಂದ ಭೂತ ಕಾಲವನ್ನು ತಿಳಿದುಕೊಳ್ಳಬಹುದೆಂದು ಹಿರಿಯರೆಂದಿದ್ದಾರೆ. ಒಬ್ಬನ ಭೂತಕಾಲವನ್ನು ಮತ್ತೊಬ್ಬನು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಯಾರ ಭೂತಕಾಲವನ್ನು ಅವರು ಮಾತ್ರ ಅವರ ಮನಸ್ಸಿನಿಂದಲೇ ತಿಳಿದುಕೊಳ್ಳಬೇಕು. ನಡೆಯುತ್ತಿರುವ ವರ್ತಮಾನ ಕಾಲ ಎಲ್ಲರ ಕಣ್ಮುಂದೆ ಪ್ರತ್ಯಕ್ಷವಾಗಿ ನಡೆಯುತ್ತಿದೆ. ಆದ್ದರಿಂದ ಯಾರ ಕಣ್ಣುಗಳ ಮೂಲಕ ಅವರು ತಿಳಿದುಕೊಳ್ಳುತ್ತಿದ್ದಾರೆ. ವರ್ತಮಾನಕಾಲವನ್ನು ಎಲ್ಲರೂ ಸುಲಭವಾಗಿ ತಿಳಿದುಕೊಳ್ಳುತ್ತಿದ್ದಾರೆ. ಕಳೆದುಹೋದ ಭೂತಕಾಲವನ್ನು ಮನೋ ಬಲಹೀನತೆ ಇರುವವರು ಮರೆತು ಹೋಗಬಹುದು. ಭೂತಕಾಲವನ್ನು ಅವನ ಮನಸ್ಸು ಜ್ಞಾಪಕ ತರದಿದ್ದರೇ, ಅದನ್ನು ತಿಳಿದುಕೊಳ್ಳುವ ಅವಕಾಶ ಇಲ್ಲದೇ ಹೋಗಬಹುದು. ಆದರೆ

ವರ್ತಮಾನ ಕಾಲವನ್ನು ಎಷ್ಟು ತಿಳುವಳಿಕೆ ಇಲ್ಲದವನಾಗಲಿ, ಮನೋ ಬಲಹೀನತೆ ಇರುವವನಾಗಲಿ ತಿಳಿದುಕೊಳ್ಳುವುದಕ್ಕೆ ಅವಕಾಶವಿದೆ.

ಮುಂಬರುವ ಭವಿಷ್ಯತ್ ಕಾಲವನ್ನು ತಿಳಿದುಕೊಳ್ಳುವುದಕ್ಕೆ, ಅಂತರಂಗದಲ್ಲಿನ ಮನೋನೇತ್ರವಾಗಲಿ, ಬಾಹ್ಯರಂಗದಲ್ಲಿನ ಪ್ರತ್ಯಕ್ಷ ನೇತ್ರವಾಗಲಿ ಕೆಲಸಕ್ಕೆ ಬರುವುದಿಲ್ಲ. ಭವಿಷ್ಯತ್ ಕಾಲವನ್ನು ತಿಳಿಯುವುದಕ್ಕೆ ಜ್ಞಾನನೇತ್ರ ಬೇಕು. ಜ್ಞಾನಜ್ಯೋತಿಯಿಂದ ತಿಳಿಯುವುದಾದ್ದರಿಂದ ಅದನ್ನು 'ಜ್ಯೋತಿಷ್ಯ' ಎನ್ನುತ್ತಿದ್ದೇವೆ. ಇದನ್ನನುಸರಿಸಿ ಜ್ಞಾನನೇತ್ರವೆನ್ನುವ ಜ್ಯೋತಿಷ್ಯದ ಮೂಲಕವೇ, ಭವಿಷತ್ತು ಕಾಲವನ್ನು ತಿಳಿಯಬಹುದು. ಮನುಷ್ಯನಿಗಿರುವ ಭೂತ, ವರ್ತಮಾನ, ಭವಿಷ್ಯತ್ ಎನ್ನುವ ಮೂರು ಕಾಲಗಳನ್ನು ಮೂರು ನೇತ್ರಗಳ ಮೂಲಕ ನೋಡಬಹುದೆಂದು ತಿಳಿಯುತ್ತಿದೆ. ಭೂತಕಾಲವನ್ನು ತಿಳಿದುಕೊಳ್ಳುವ ಮನೋನೇತ್ರದವೊಂದು ದೃಷ್ಠಿ (ಜ್ಞಾಪಕಶಕ್ತಿ) ಕೆಲವರಿಗಿರಬಹುದು, ಕೆಲವರಿಗೆ ಇರದೆ ಹೋಗಬಹುದು. ಆದರೆ ವರ್ತಮಾನ ಕಾಲವನ್ನು ತಿಳಿದುಕೊಳ್ಳುವ ಬಾಹ್ಯನೇತ್ರಗಳೊಂದರ ದೃಷ್ಟಿ ಎಲ್ಲರಿಗೂ ಇದೆಯೆಂದೇ ಹೇಳಬಹುದು. ಇನ್ನು ಭವಿಷ್ಯತ್ ಕಾಲವನ್ನು ತಿಳಿದುಕೊಳ್ಳುವ ಜ್ಞಾನನೇತ್ರವು, ನೂರಕ್ಕೆ ತೊಂಭತ್ತು ಮಂದಿಗೆ ಇಲ್ಲವೆಂದೇ ಹೇಳಬಹುದು. ಕೇವಲ ಶೇಕಡ ಹತ್ತರಷ್ಟು ಜನರಿಗೆ ಜ್ಞಾನ ನೇತ್ರವಿದ್ದರೂ, ಅದು ದೃಷ್ಠಿಯಿಲ್ಲದ ಕುರುಡಾಗಿದೆ. ಆದ್ದರಿಂದ ಭವಿಷತ್ ಕಾಲ ಯಾರಿಗೂ ತಿಳಿಯದೇ ಹೋಗಿದೆ. ಜ್ಞಾನಿಗಳೆಂದುಕೊಂಡ ಕೆಲವು ಸಾವಿರಾರು ಜನರಲ್ಲಿಯೋ, ಅಥವಾ ಕೆಲವು ಲಕ್ಷಜನರಲ್ಲಿಯೋ ಒಬ್ಬನಿಗೆ ಜ್ಞಾನನೇತ್ರವು ದೃಷ್ಠಿ ಇರುವುದಾಗಿರುತ್ತದೆ. ಅಂತಹವನಿಗೆ ಮಾತ್ರವೇ ಜ್ಯೋತಿಷ್ಯ ತಿಳಿಯುತ್ತದೆ. ಅಂತಹವನು ಮಾತ್ರವೇ ಭವಿಷ್ಯತ್‌ನ್ನು ತಿಳಿದುಕೊಳ್ಳುತ್ತಾನೆ. ಮೂರು ಕಾಲಗಳಿಗೆ ಮೂರು ನೇತ್ರಗಳು ಅಗತ್ಯವೆಂದು, ಅದರಲ್ಲಿ ಜ್ಞಾನನೇತ್ರ ಬಹಳ ಮುಖ್ಯವಾದುದೆಂದು ತಿಳಿದು, ದೃಷ್ಠಿ ಇರುವ ಜ್ಞಾನನೇತ್ರವನ್ನು ಹೊಂದಿದವನು ನಿಜವಾದ ಜ್ಯೋತಿಷ್ಯನೆಂದು ತಿಳಿಯಬೇಕು. ಜ್ಞಾನನೇತ್ರವಿಲ್ಲದೆ ಪಂಚಾಂಗಗಳನ್ನು ತಿಳಿದವನು ಜ್ಯೋತಿಷ್ಯನಲ್ಲ.

## 4 ಜ್ಯೋತಿಷ್ಯವು ಮನುಷ್ಯರಿಗೇನಾ? ಪ್ರಾಣಿಗಳಿಗು ಕೂಡ ಅನ್ವಯಿಸುತ್ತದಾ?

ಮುಂಬರುವ ಕಾಲದಲ್ಲಿ ಜೀವಿಗಳಿಗೆ ಸಂಭವಿಸುವ ಕಷ್ಟಸುಖಗಳನ್ನು ಮೊದಲೇ ತಿಳಿಸುವುದು ಜ್ಯೋತಿಷ್ಯ. ಜೀವಿಗಳು ಭೌತಿಕ ಶರೀರದೊಂದಿಗೆ ಇರುವಾಗಾಗಲಿ, ಸೂಕ್ಷ್ಮಶರೀರದೊಂದಿಗೆ ಇರುವಾಗಾಗಲಿ ಅನುಭವಿಸುವ ಕರ್ಮವನ್ನು ಮೊದಲೇ ತಿಳಿಸುವುದು ಜ್ಯೋತಿಷ್ಯ. ಜೀವಿಗಳು ಸ್ತ್ರೀ ಶರೀರದೊಂದಿಗೆ ಇರುವಾಗಾಗಲಿ, ಪುರುಷ ಶರೀರದೊಂದಿಗೆ ಇರುವಾಗಾಗಲಿ ಅನುಭವಿಸುವವುಗಳನ್ನು ಕುರಿತು ಸೂಚನೆಯಾಗಿ ಮೊದಲೇ ತಿಳಿಸುವುದು ಜ್ಯೋತಿಷ್ಯ. ಹಾಗೇ ಜೀವಿಗಳು ಮಾನವ ಆಕಾರದಲ್ಲಿರುವಾಗಾಗಲಿ, ಪ್ರಾಣಿ ಆಕಾರದಲ್ಲಿ ಇರುವಾಗಾಗಲಿ, ಅನುಭವಿಸುವ ಪಾಪಪುಣ್ಯ ಮಿಶ್ರಣ ಫಲಿತಗಳನ್ನು ತಿಳಿಸುವುದು ಜ್ಯೋತಿಷ್ಯ. ಅಷ್ಟೇ ಅಲ್ಲದೆ ಜೀವಿಗಳು ಅಂಡಜ, ಪಿಂಡಜ, ಉದ್ಭಿಜ ರೂಪದಲ್ಲಿ ಎಲ್ಲಿ ಜನ್ಮಿಸಿದರೂ, ಜನ್ಮಿಸಿದಾಗಿನಿಂದ ಮರಣಿಸುವವರೆಗು ನಡೆಯುವ ಕಾಲದಲ್ಲಿ, ಕಷ್ಟಸುಖ ರೂಪದಿಂದ ಅನುಭವಿಸುವ ಪಾಪಪುಣ್ಯಗಳನ್ನು ತಿಳಿದು, ಮುಂಚೆಯೇ ಹೇಳುವುದು ಜ್ಯೋತಿಷ್ಯ. ಆದ್ದರಿಂದ ಜ್ಯೋತಿಷ್ಯವು ಸರ್ವ ಜೀವರಾಶಿಗಳಿಗು ಅನ್ವಯಿಸುತ್ತದೆಂದು ಹೇಳಬಹುದು.

## 5 ಜಾತಕ ಎಂದರೆ ಏನು?

ಜ್ಯೋತಿಷ್ಯಶಾಸ್ತ್ರದಲ್ಲಿ ಬರೆದುಕೊಂಡ ಸಿದ್ಧಾಂತಗಳ ಪ್ರಕಾರ, ಒಬ್ಬ ಮನುಷ್ಯನವೊಂದು ಭವಿಷ್ಯತ್ತನ್ನು ಜ್ಯೋತಿಷ್ಯವಾಗಿ ನೋಡಬೇಕೆಂದರೇ, ಅವನ ಜಾತಕ ತಪ್ಪದೆ ಇರಬೇಕು. ಜಾತಕದಿಂದಲೇ ಪ್ರಾರಂಭವಾಗುತ್ತದೆ ಜ್ಯೋತಿಷ್ಯ, ಆದ್ದರಿಂದ ಜಾತಕಕ್ಕು, ಜ್ಯೋತಿಷ್ಯಕ್ಕು ಅವಿನಾಭಾವ ಸಂಬಂಧವಿದೆ. ಅಷ್ಟಕ್ಕು ಜಾತಕವೆಂದರೆ ಏನೋ, ಈ ಕಾಲದ ಮನುಷ್ಯರಿಗೆ ಬಹಳಜನರಿಗೆ ತಿಳಿದಿಲ್ಲವೆಂದು

ಕೊಳ್ಳುತ್ತೇನೆ. ಈ ಕಾಲದಲ್ಲಿ ಕೂಡ ಜಾತಕವನ್ನು ಕುರಿತು ಸ್ವಲ್ಪಜನ ತಿಳಿದವರಿದ್ದರೂ, ಅವರಿಗು ಕೂಡ ಜಾತಕದಲ್ಲಿನ ಯಥಾರ್ಥ ತಿಳಿದಿಲ್ಲ. ಇದನ್ನನುಸರಿಸಿ ನೋಡಿದರೆ ಜಾತಕ ಎನ್ನುವ ಶಬ್ದ ಅರ್ಥಹೀನವಾಗಿದೆಯೆಂದು ತಿಳಿಯುತ್ತಿದೆ. ಜಾತಕವೊಂದರ ನಿಜವಾದ ಶಬ್ದ ಆದಿಕಾಲದಲ್ಲಿ ಹೇಗಿರುತ್ತಿತ್ತೋ, ಅದು ಈದಿನ ಹೇಳುತ್ತಿರುವ ಜಾತಕವಾಗಿ ಹೇಗೆ ಬದಲಾಗಿದೆಯೋ ಸ್ವಲ್ಪ ವಿವರಿಸಿ ನೋಡಿಕೊಳ್ಳೋಣ.

'ಜಾ' ಎಂದರೇ ಹುಟ್ಟುವುದೆಂದು ಅರ್ಥ. ಹುಟ್ಟಿದ ಜೀವಿಯು ಯಾವ ಸಮಯದಲ್ಲಿ ಹುಟ್ಟಿದ್ದಾನೊ, ಆ ಸಮಯದಲ್ಲಿ ಖಗೋಳದಲ್ಲಿ ಗ್ರಹಗಳು ಭೂಮಿಗೆ ಯಾವಯಾವ ದಿಕ್ಕುಗಳಲ್ಲಿ ಇವೆಯೋ, ಅವುಗಳ ಸ್ಥಾನಗಳನ್ನು ಗುರುತಿಸಿಕೊಳ್ಳುವುದನ್ನು ಜಾತಕ ಎನ್ನುತ್ತಿರುತ್ತಾರೆ. ಆದರೆ ನಾವು ಹೇಳುವುದೇನೆಂದರೆ! ಒಬ್ಬ ಜೀವಿಯು ಹುಟ್ಟದ ಮುನ್ನವೇ ಆತನು ಹುಟ್ಟಿದ ನಂತರ ಮರಣಿಸುವವರೆಗು ಯಾವವಿಧವಾಗಿ ನಡೆದುಕೊಳ್ಳಬೇಕು? ಯಾವ ಯಾವ ಕಷ್ಟ ಸುಖಗಳು ಅನುಭವಿಸಬೇಕು? ಏನು ತಿನ್ನಬೇಕು? ಏನು ಮಾತನಾಡಬೇಕು? ಯಾವಾಗ ಮಲಗಬೇಕು? ಎನ್ನುವ ಮುಂತಾದ ಎಲ್ಲಾ ಕೆಲಸಗಳನ್ನು ಒಂದುಕ್ಷಣ ಕೂಡ ಬಿಡದೆ ಎಲ್ಲಾ ಕಾಲಗಳಲ್ಲಿ ಒಂದು ಪಥಕದ ಪ್ರಕಾರ ನಿರ್ಣಯಿಸಿ ಇಡುವುದನ್ನು **'ಜಾಫತಕ'** ಎನ್ನುತ್ತೇವೆ. ಹುಟ್ಟಿದಾಗಲೇ ನಿರ್ಣಯಿಸಲ್ಪಟ್ಟಿರುವ ಫತಕ ವಾದ್ದರಿಂದ, ಆ ಫತಕವನ್ನು 'ಜಾಫತಕ' ಎನ್ನುತ್ತಿದ್ದೇವೆ. ಇಂಗ್ಲಿಷ್‌ಭಾಷೆಯಲ್ಲಿ 'ಬರ್ತ್‌ಪ್ಲಾನ್' ಎನ್ನುತ್ತಿದ್ದೇವೆ. ಒಂದು ಜನ್ಮಕ್ಕೆ ಬೇಕಾದ ಕೆಲಸಗಳ ಫತಕವನ್ನು ಪೂರ್ವಕಾಲದಲ್ಲಿ ಜಾಫತಕ ಎಂದು ಕರೆಯುತ್ತಿದ್ದರೆಂದು ತಿಳಿದಿದೆ. ಕಾಲ ಕಳೆದಂತೆಲ್ಲಾ, ಸ್ವಲ್ಪಕಾಲಕ್ಕೆ ಜಾಫತಕ ಎನ್ನುವ ಪದದಲ್ಲಿರುವ ಐದಕ್ಷರಗಳಲ್ಲಿ 'ಜಾ' ಪಕ್ಕದಲ್ಲಿರುವ 'ಫ' ಎನ್ನುವ ಎರಡನೇ ಅಕ್ಷರ ಎಗರಿಹೋಗಿದೆ. ಮನುಷ್ಯರು 'ಫ'ಅಕ್ಷರವನ್ನು ಹೇಳುತ್ತಿಲ್ಲ. ಕೊನೆಗೆ ನಾಲ್ಕು ಅಕ್ಷರಗಳ ಪದ 'ಜಾತಕ'ವಾಗಿ ಉಳಿದುಹೋಗಿದೆ. ಐದಕ್ಷರಗಳ ಜಾಫತಕದಲ್ಲಿನ ಅರ್ಥ ಜಾತಕ ಎನ್ನುವ ಪದದಲ್ಲಿ ಇಲ್ಲದಂತೆ ಹೋಗಿದೆ.


ಕೊನೆಗೆ ಜಾತಕದ ಅರ್ಥ ಇಲ್ಲದಂತೆ ಹೋಗಿದೆ. ಈಗಿನ ಜ್ಯೋತಿಷ್ಯರು ಎಷ್ಟು ಜನರಿದ್ದರೂ ಪೂರ್ವದಲ್ಲಿದ್ದ 'ಜಾಫತಕ'ವನ್ನು ತಿಳಿಯದೆ, ಎಲ್ಲರೂ ಅದನ್ನು ಜಾತಕ ಎಂದು ಹೇಳುತ್ತಿದ್ದಾರೆ.

ಒಬ್ಬ ಜೀವಿಯು ಶರೀರ ಧರಿಸಿ ಹುಟ್ಟಿದ ಸಮಯವನ್ನು ಜನನ ಎನ್ನುತ್ತಿದ್ದೇವೆ. ಹುಟ್ಟುವುದನ್ನು 'ಜ' ಎಂದು, ಮರಣಿಸುವುದನ್ನು 'ಗತಿ' ಎಂದು ಕೂಡ ಹೇಳುತ್ತಿದ್ದೇವೆ. ಹುಟ್ಟಿದಾಗಿನಿಂದ ಮರಣಿಸುವವರೆಗು ಇರುವ ಕಾಲವನ್ನು 'ಜೀವನ' (ಜೀವಿತ) ಎನ್ನುತ್ತಿದ್ದೇವೆ. ಹುಟ್ಟುವುದನ್ನು, ಸಾಯುವುದನ್ನು ಸೇರಿಸಿ 'ಜಗತಿ' ಎನ್ನುತ್ತಿದ್ದೇವೆ. 'ಜ' ನಿಂದ 'ಗತಿ' ವರೆಗು ಮಧ್ಯಕಾಲದಲ್ಲಿರುವ ಜೀವನವನ್ನು ನಿರ್ಣಯಿಸಿ ಆಡಿಸುವ ಕರ್ಮವನ್ನು ಪ್ರಾರಬ್ಧಕರ್ಮ ಎನ್ನುತ್ತಿದ್ದೇವೆ. ಒಂದು ಜೀವನಕ್ಕೆ ಮುಂಚೆಯೇ ಸಂಚಿತಕರ್ಮ ಎನ್ನುವ ಕರ್ಮ ಕೂಡಲಿಯಿಂದ, ಸ್ವಲ್ಪಕರ್ಮವನ್ನು ನಿರ್ಣಯಿಸುವುದನ್ನು 'ಜಾಫತಕ' ಎನ್ನುತ್ತಿದ್ದೇವೆ. ನಿರ್ಣಯಿಸಿದ ಕರ್ಮದ ಹೆಸರು ಪ್ರಾರಬ್ಧವಾದರೆ, ನಿರ್ಣಯಿಸಿದ ಪದ್ಧತಿಯನ್ನು ಜಾಫತಕ ಎನ್ನುತ್ತಿದ್ದೇವೆ. ಒಬ್ಬನ ಜೀವನಕ್ಕೆ ಹುಟ್ಟಿದ ಜಾಫತಕವನ್ನು ನೋಡಿದರೆ, ಆ ಜನ್ಮಕ್ಕೆ ಸಂಬಂಧಿಸಿದ ಪ್ರಾರಬ್ಧ ಇಂತದ್ದು ಎಂದು ತಿಳಿಯುತ್ತದೆ. ಪ್ರಾರಬ್ಧ ತಿಳಿದರೆ ಅವನ ಜೀವನದಲ್ಲಿನ ಕಷ್ಟಸುಖಗಳು ತಿಳಿಯುತ್ತವೆ. ಈ ಪದ್ಧತಿ ಪ್ರಕಾರ ಜಾತಕದ ಮೂಲಕ ಪ್ರಾರಬ್ಧವನ್ನು ತಿಳಿಯುವುದನ್ನೇ 'ಜ್ಯೋತಿಷ್ಯ' ಎನ್ನುತ್ತಿದ್ದೇವೆ.

## 6 ಕಾಲ, ಕರ್ಮ ಚಕ್ರಗಳು

ಒಬ್ಬ ಜೀವಿಯು ತನ್ನ ಜೀವನದಲ್ಲಿ ಅನುಭವಿಸಬೇಕಾದ ಪ್ರಾರಬ್ಧಕರ್ಮವನ್ನು, ಒಂದು ಘತಕದ ಪ್ರಕಾರ ಹುಟ್ಟಿದಾಗಲೇ ನಿರ್ಣಯಿಸಿ ಇರುವುದನ್ನು, ಜಾಫತಕ ಎಂದಿದ್ದೇವೆ ಅಲ್ಲವೆ! ಆ ಜಾಫತಕವು ಹನ್ನೆರಡು ವಿಧಗಳಾಗಿ ವಿಭಜಿಸಲ್ಪಟ್ಟಿರುತ್ತದೆ. ವಿಭಜಿಸಲ್ಪಟ್ಟ ಜಾಫತಕದಲ್ಲಿನ ಪ್ರಾರಬ್ಧವು, ಹನ್ನೆರಡು


ಭಾಗಗಳಾಗಿರುವ ಕರ್ಮಚಕ್ರದಲ್ಲಿ ಇರುತ್ತದೆ. ಯಾರ ಕರ್ಮಚಕ್ರ ಅವನ ತಲೆಯಲ್ಲಿ ಇರುತ್ತದೆ. ತಲೆ ಮಧ್ಯಭಾಗದಲ್ಲಿ ಹಣೆಭಾಗದಲ್ಲಿರುವ ನಾಲ್ಕು ಚಕ್ರಗಳ ಸಮುದಾಯದಲ್ಲಿ, ಕೆಳಗಿನಿಂದ ಎರಡನೆ ಚಕ್ರ ಕರ್ಮಚಕ್ರವಾಗಿದೆ. ಕರ್ಮಚಕ್ರದಲ್ಲಿನ ಪ್ರಾರಬ್ಧ ಕರ್ಮವನ್ನು ಜೀವಿತಕಾಲದಲ್ಲಿ ಮನುಷ್ಯನಿಂದ ಅನುಭವಿಸುವಂತೆ ಮಾಡುವವು ಗ್ರಹಗಳು. ಗ್ರಹಗಳು ಕೂಡ ಕರ್ಮ ಚಕ್ರವನ್ನು ಆತುಕೊಂಡು, ಮೇಲಿರುವ ಕಾಲಚಕ್ರದಲ್ಲಿವೆ. ಹುಟ್ಟಿದ ಸಮಯದಲ್ಲಿರುವ ಜಾಫತಕದ ಮೂಲಕ ಮನುಷ್ಯ ಜೀವನದ ಪ್ರಾರಬ್ಧವನ್ನು ತಿಳಿದುಕೊಳ್ಳಬಹುದೆಂದು ಹೇಳಿಕೊಂಡಿದ್ದೇವೆ ಅಲ್ಲವೆ! ಜಾಫತಕದಲ್ಲಿ ಕರ್ಮ ಪ್ರತ್ಯಕ್ಷವಾಗಿ ಕಾಣಿಸುವುದಿಲ್ಲ. ಜಾಫತಕದಲ್ಲಿ ಪ್ರತ್ಯಕ್ಷವಾಗಿ ಗ್ರಹಗಳು ಕಾಣಿಸುತ್ತವೆ. ಕಾಲಚಕ್ರದಲ್ಲಿನ ಗ್ರಹಗಳನ್ನು ನೋಡಿ, ಅವುಗಳ ಮೂಲಕ ಅವು ಪಾಲಿಸುವ ಪ್ರಾರಬ್ಧವನ್ನು ತಿಳಿದುಕೊಳ್ಳಬಹುದು. ಆದ್ದರಿಂದ ಜ್ಯೋತಿಷ್ಯದಲ್ಲಿ ಇತ್ತ ಗ್ರಹಗಳು, ಅತ್ತ ಕರ್ಮ ಆಚರಣೆ (ಆಚಾರ) ಎನ್ನುವ ಎರಡು ಭಾಗಗಳು ಇವೆ. ಎರಡನ್ನು ಸೇರಿಸಿ ಗ್ರಹಚಾರ (ಗ್ರಹಾಚಾರಣೆ) ಎನ್ನುತ್ತಿದ್ದೇವೆ. ಯಾರ ಗ್ರಹಚಾರ ಹೇಗಿದೆಯೋ, ಅವನ ಕಾಲ, ಕರ್ಮಚಕ್ರಗಳನ್ನು ಅನುಸರಿಸಿ ತಿಳಿಯುತ್ತದೆ. ಕಾಲಚಕ್ರ ಹನ್ನೆರಡು ಭಾಗಗಳು ವಿಭಜಿಸಲ್ಪಟ್ಟು ಹನ್ನೆರಡು ಹೆಸರುಗಳಿರುತ್ತವೆ. ಅವುಗಳನ್ನು ಕೆಳಗೆ 1ನೇ ಚಿತ್ರ ಪಟ ರೂಪದಲ್ಲಿ ನೋಡೋಣ.




ಕಾಲಚಕ್ರ –1ನೇ ಚಿತ್ರ

1) ಮೇಷ 2) ವೃಷಭ 3) ಮಿಥುನ 4) ಕರ್ಕಾಟಕ 5) ಸಿಂಹ 6) ಕನ್ಯ 7) ತುಲ 8) ವೃಶ್ಚಿಕ 9) ಧನಸ್ಸು 10) ಮಕರ 11) ಕುಂಭ 12) ಮೀನ.

ಈ ಹನ್ನೆರಡು ಕಾಲಚಕ್ರ ಭಾಗಗಳಲ್ಲಿರುವ ಗ್ರಹಗಳು ನಿರ್ಣಿತವಾದ ವೇಗದಿಂದ ಗತಿ ತಪ್ಪದೆ ಪ್ರಯಾಣಿಸುತ್ತಾ ತಮ್ಮ ಕಿರಣಗಳನ್ನು ಕರ್ಮಚಕ್ರದ ಮೇಲೆ ಪ್ರಸರಿಸುತ್ತಿರುತ್ತವೆ. ಈಗ ಚಕ್ರಗಳ ವಿವರ ಪೂರ್ತಿಯಾಗಿ ತಿಳಿದು ಕೊಳ್ಳೋಣ. ಪ್ರತಿ ಮನುಷ್ಯನ ತಲೆಯಲ್ಲಿ ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳೆನ್ನುವ ನಾಲ್ಕುಚಕ್ರಗಳ ಸಮುದಾಯ ಇದೆ. ಈ ನಾಲ್ಕು ಚಕ್ರಗಳ ಸಮುದಾಯ ವಿಶ್ವದಲ್ಲಿನ ಜೀವಿಗಳೆಲ್ಲರಿಗೂ ಆಧಾರವಾಗಿದೆ. ಈ ನಾಲ್ಕುಚಕ್ರಗಳ ಸಮುದಾಯ ತಿಳಿಯದೆ ಹೋದರೆ ಮನುಷ್ಯನಿಗೆ ದೈವಜ್ಞಾನ ಸ್ವಲ್ಪವೂ ತಿಳಿದಿಲ್ಲವೆಂದು ಹೇಳಬಹುದು. ನಾಲ್ಕುಚಕ್ರಗಳು ಅತ್ತ ಬ್ರಹ್ಮವಿದ್ಯೆ ಯಲ್ಲಿಯೂ (ಆಧ್ಯಾತ್ಮಿಕ ವಿದ್ಯೆಯಲ್ಲಿಯೂ), ಇತ್ತ ಜ್ಯೋತಿಷ್ಯ ಶಾಸ್ತ್ರದಲ್ಲಿಯೂ ಪ್ರಾಧಾನ್ಯತೆ ಹೊಂದಿವೆ. ಈ ನಾಲ್ಕುಚಕ್ರಗಳ ವಿವರ ಕೂಲಂಕುಷವಾಗಿ ತಿಳಿಯಬೇಕೆಂದರೆ ತ್ರೈತಸಿದ್ಧಾಂತ ಭಗವದ್ಗೀತೆಯಲ್ಲಿನ, ಅಕ್ಷರ ಪರಬ್ರಹ್ಮ ಯೋಗವೆನ್ನುವ ಅಧ್ಯಾಯವನ್ನು ಓದಿರಿ, ಅಲ್ಲಿಯೇ ನಮ್ಮ ಶರೀರದಲ್ಲಿನ ನಾಲ್ಕುಚಕ್ರಗಳ ವಿವರ ತಿಳಿಯಬಲ್ಲದು. ಈ ನಾಲ್ಕುಚಕ್ರಗಳ ವಿವರ ತಿಳಿಯದೆ ಹೋಗಿರುವುದರಿಂದ, ಇತ್ತ ಬ್ರಹ್ಮವಿದ್ಯಾಶಾಸ್ತ್ರವಾದ ಆಧ್ಯಾತ್ಮಿಕದಲ್ಲಿಯೂ, ಅತ್ತ ಕರ್ಮ ವಿಧಾನವಾದ ಜ್ಯೋತಿಷ್ಯರಂಗದಲ್ಲಿಯೂ ಮನುಷ್ಯರು ಹಿಂದುಳಿದುಹೋಗಿದ್ದಾರೆ. ನಾಲ್ಕು ಚಕ್ರಗಳೆಂದರೆ ಏನು? ಅವು ಎಲ್ಲಿವೆ? ಎಂದು ತಿಳಿಯದವರೆಗು ಸಂಪೂರ್ಣವಾದ ದೈವ ಜ್ಞಾನವನ್ನಾಗಲಿ, ಸಂಪೂರ್ಣವಾದ ಜ್ಯೋತಿಷ್ಯವನ್ನಾಗಲಿ ತಿಳಿಯಲಾರೆವು. ಕಣ್ಣಿಲ್ಲದವನಿಗೆ ದೃಷ್ಟಿ ಇಲ್ಲದಹಾಗೆ, ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳ ವಿವರ ತಿಳಿಯದವನಿಗೆ ಜ್ಞಾನದೃಷ್ಟಿ ಯಾವಮಾತ್ರ ಇರುವುದಿಲ್ಲ. ಪ್ರತಿ ಶರೀರದಲ್ಲಿ ಹಣೆ ಭಾಗದಲ್ಲಿ ಒಳಗಿರುವ ನಾಲ್ಕುಚಕ್ರಗಳ ಸಮುದಾಯವನ್ನು ನಂತರ ಪುಟದಲ್ಲಿನ 2ನೇ ಚಿತ್ರದಲ್ಲಿ ನೋಡಬಹುದು.




**ಬ್ರಹ್ಮ, ಕಾಲ, ಕರ್ಮ, ಗುಣಚಕ್ರ – 2ನೇ ಚಿತ್ರ**

ಮೇಲಿಂದ ಎರಡನೇ ಚಕ್ರವೇ ಕಾಲಚಕ್ರ. ಕಾಲಚಕ್ರ ದುಂಡಾಗಿದ್ದು ಹನ್ನೆರಡು ಭಾಗಗಳು ಹೊಂದಿರುವಾಗ, ಕೆಲವರು ಜ್ಯೋತಿಷ್ಯರು ಅದಕ್ಕೆ 'ಜಾತಕಚಕ್ರವೆಂದು' ಅಥವಾ 'ಜಾತಕಕುಂಡಲಿಯೆಂದು' ಹೆಸರಿಟ್ಟು ಚತುರಸ್ರವಾಗಿ ಚಿತ್ರಿಸಿಕೊಂಡಿದ್ದಾರೆ. ಅದಕ್ಕೆ 'ಲಗ್ನಕುಂಡಲಿ'ಯೆಂದು ಹೆಸರು ಕೂಡಾ ಇಟ್ಟಿದ್ದಾರೆ. ಲಗ್ನಕುಂಡಲಿ, ಜಾತಕಕುಂಡಲಿ, ಜಾತಕಚಕ್ರ ಎನ್ನುವ ಕಾಲಚಕ್ರವೊಂದರ ಚತುರಸ್ರವಾಗಿರುವ ಚಿತ್ರವನ್ನು ನಂತರ ಪುಟದಲ್ಲಿನ 3ನೇ ಚಿತ್ರದಲ್ಲಿ ನೋಡಬಹುದು.

ಕಾಲಚಕ್ರವನ್ನು ಜ್ಯೋತಿಷ್ಯರು ಮೇಲಿನ ವಿಧವಾಗಿ ಚತುರಸ್ರವಾಗಿ ಚಿತ್ರಿಸಿಕೊಂಡಿದ್ದಾರೆ. ವಿಚಿತ್ರವೇನೆಂದರೆ ಮೇಷ, ವೃಷಭ ಮುಂತಾದ ಹನ್ನೆರಡು ಭಾಗಗಳಾಗಿ ಗೀಚಿಕೊಂಡಿರುವುದು ಕಾಲಚಕ್ರವೆಂದು ಅವರಿಗೆ ತಿಳಿದಿಲ್ಲ. ಅದನ್ನು ಲಗ್ನ ಕುಂಡಲಿ ಎನ್ನುತ್ತಿದ್ದಾರೆ ಹೊರತು, ಅದು ತಲೆಯಲ್ಲಿನ ಕಾಲಚಕ್ರವೆಂದು


| | | | |
|---|---|---|---|
| ಮೀನ | ಮೇಷ | ವೃಷಭ | ಮಿಥುನ |
| ಕುಂಭ | **ಕಾಲಚಕ್ರ** | | ಕರ್ಕಾಟಕ |
| ಮಕರ | | | ಸಿಂಹ |
| ಧನಸ್ಸು | ವೃಶ್ಚಿಕ | ತುಲ | ಕನ್ಯಾ |

ಕಾಲಚಕ್ರ – 3ನೇ ಚಿತ್ರ

ತಿಳಿದುಕೊಳ್ಳದೆ ಹೋಗಿದ್ದಾರೆ. ಅಷ್ಟೇ ಅಲ್ಲದೆ ತಲೆಯಲ್ಲಿ ಕರ್ಮಚಕ್ರ ಒಂದಿದೆಯೆಂದು, ಅದಕ್ಕೆ ಒಂದು ಆಕಾರವಿದೆಯೆಂದು ಇಂದಿನ ಜ್ಯೋತಿಷ್ಯರಿಗೆ ತಿಳಿದಿಲ್ಲ. ಕರ್ಮ ಆದ ಪಾಪಪುಣ್ಯಗಳನ್ನು ತಿಳಿಯದಂತೆ, ಕೇವಲ ಪ್ರಪಂಚ ಕಷ್ಟ ಸುಖಗಳನ್ನು, ವಸ್ತು ವಾಹನಗಳನ್ನು, ಧನ ಕನಕಗಳನ್ನು, ಸ್ಥಿರ ಚರಾಸ್ಥಿಗಳನ್ನು, ಪುತ್ರ, ಕಳತ್ರಗಳ ಫಲಿತಗಳನ್ನು ಕುರಿತು ಹೇಳುತ್ತಿದ್ದಾರೆ. ಅವುಗಳನ್ನು ಸಹ ಲಗ್ನ ಕುಂಡಲಿಯಿಂದಲೇ ನೋಡುತ್ತಿದ್ದಾರೆ. ಕರ್ಮಚಕ್ರ ಎನ್ನುವುದು ಪ್ರತ್ಯೇಕವಾಗಿ ಇದೆಯೆಂದು ಅವರಿಗೆ ತಿಳಿದಿಲ್ಲ. ಯಾವ ಹನ್ನೆರಡು ಭಾಗಗಳಲ್ಲಿ ಗ್ರಹಗಳನ್ನು ನೋಡುತ್ತಿದ್ದಾರೋ, ಅದೇ ಲಗ್ನಗಳಲ್ಲಿಯೇ ಫಲಿತಗಳನ್ನು ನೋಡುತ್ತಿದ್ದಾರೆ.

ಇದನ್ನನುಸರಿಸಿ ಕಾಲ, ಕರ್ಮ ಚಕ್ರಗಳನ್ನು ಕುರಿತು ತಿಳಿದಿಲ್ಲವೆಂದು ಅರ್ಥವಾಗುತ್ತಿದೆ. ಅವುಗಳ ವಿವರ ತಿಳಿಯದೇ, ಪೂರ್ವಕಾಲದಲ್ಲಿ ಯಾರೋ ಹೇಳಿದ ಹನ್ನೆರಡು ಲಗ್ನಗಳ ಹೆಸರುಗಳನ್ನು ಮಾತ್ರ ಜ್ಞಾಪಕವಿಟ್ಟುಕೊಂಡು ಹೇಳಿಕೊಳ್ಳುತ್ತಿದ್ದಾರೆ. ಆದ್ದರಿಂದ ಇಂದಿನ ಜ್ಯೋತಿಷ್ಯ ದಾರಿ ತಪ್ಪಿದಂತಾಗಿ ಹೋಗಿದೆ. ಅದರಿಂದ ಜ್ಯೋತಿಷ್ಯವು ಶಾಸ್ತ್ರವಲ್ಲವೇನೋಯೆಂದು ಕೆಲವರು ಅನ್ನುತ್ತಿದ್ದಾರೆ. ಕೆಲವರು ಮೂಢನಂಬಿಕೆಯೆಂದು, ಕೆಲವರು ಶಾಸ್ತ್ರ ಅಲ್ಲವೆಂದು ಹೇಳುತ್ತಿದ್ದಾರೆ. ಜ್ಞಾನ ಜ್ಯೋತಿ ಇರುವವರಾಗಿ ನಮ್ಮ ಶರೀರದಲ್ಲೇ, ಶಿರಸ್ಸಿನಲ್ಲಿ ಕಾಲ, ಕರ್ಮ ಎನ್ನುವ ಎರಡು ಚಕ್ರಗಳಿವೆಯೆಂದು ತಿಳಿದು, ಕಾಲಚಕ್ರದಲ್ಲಿ ಗ್ರಹಗಳು, ಕರ್ಮಚಕ್ರದಲ್ಲಿ ಪಾಪಪುಣ್ಯಗಳಿವೆಯೆಂದು ತಿಳಿದರೇನೆ ಜ್ಯೋತಿಷ್ಯ ದಾರಿಗೆ ಬರುತ್ತದೆ ಮತ್ತು ಇದು ಶಾಸ್ತ್ರವೆಂದು ತಿಳಿಯುತ್ತದೆ. ಈಗ ತಲೆಯಲ್ಲಿನ ನಾಲ್ಕು ಚಕ್ರಗಳ ಸಮುದಾಯದಲ್ಲಿನ ಕರ್ಮಚಕ್ರವನ್ನು ಕುರಿತು ವಿವರಿಸಿಕೊಳ್ಳೋಣ. ನಾಲ್ಕು ಚಕ್ರಗಳಲ್ಲಿ ಕೆಳಗಿನಿಂದ ಎರಡನೆ ಚಕ್ರ ಕರ್ಮಚಕ್ರವಾಗಿ ಇದೆ. ಕರ್ಮಚಕ್ರವನ್ನು ನಂತರ ಪುಟದಲ್ಲಿರುವ 4ನೇ ಚಿತ್ರದಲ್ಲಿ ನೋಡಬಹುದು.

ಮೇಲಿನ ಚಕ್ರ ಚೆನ್ನಾಗಿ ಅರ್ಥವಾಗುವುದಕ್ಕೆ ಕರ್ಮಚಕ್ರವನ್ನು ಕೂಡಾ ಚತುರಸ್ರಾಕಾರದಲ್ಲಿ ಗೀಚಿ ನೋಡಿಕೊಳ್ಳಬಹುದು. ಕಾಲಚಕ್ರಕ್ಕೆ ಹೆಸರುಗಳಿವೆ, ಆದರೆ ಕರ್ಮಚಕ್ರಕ್ಕೆ ಹೆಸರುಗಳಿರುವುದಿಲ್ಲ. ಕರ್ಮಚಕ್ರದಲ್ಲಿನ ಭಾಗಗಳನ್ನು ಅಂಕೆಗಳಿಂದಲೇ ಗುರುತಿಸಿಕೊಳ್ಳಬೇಕು. ಇದರಲ್ಲಿನ ಮೊದಲ ಭಾಗವನ್ನು ಪ್ರಥಮ ಸ್ಥಾನ ಎನ್ನುತ್ತೇವೆ. ಉಳಿದ ಭಾಗಗಳನ್ನು ಕ್ರಮವಾಗಿ ಎರಡನೆ ಭಾಗವನ್ನು ದ್ವಿತೀಯ ಸ್ಥಾನ, ಮೂರನೆ ಭಾಗವನ್ನು ತೃತೀಯಸ್ಥಾನ, ನಾಲ್ಕನೆ ಭಾಗವನ್ನು ಚತುರ್ಥ ಸ್ಥಾನ, ಐದನೆ ಭಾಗವನ್ನು ಪಂಚಮಸ್ಥಾನ, ಆರನೆಭಾಗವನ್ನು ಷಷ್ಠಮಸ್ಥಾನ, ಏಳನೆ ಭಾಗವನ್ನು ಸಪ್ತಮಸ್ಥಾನ, ಎಂಟನೆಯ ಭಾಗವನ್ನು ಅಷ್ಟಮಸ್ಥಾನ, ಒಂಭತ್ತನೆಯ ಭಾಗವನ್ನು ನವಮಸ್ಥಾನ, ಹತ್ತನೆಯ ಭಾಗವನ್ನು ದಶಮಸ್ಥಾನ, ಹನ್ನೊಂದನೆಯ ಭಾಗವನ್ನು ಏಕಾದಶಸ್ಥಾನ, ಹನ್ನೆರಡನೆಯ ಭಾಗವನ್ನು ದ್ವಾದಶಸ್ಥಾನ ಎಂದು ಕರೆಯುತ್ತಿದ್ದೇವೆ. ಕರ್ಮಚಕ್ರವನ್ನೂ, ಅದರ




**ಕರ್ಮಚಕ್ರ – 4ನೇ ಚಿತ್ರ**

ಭಾಗಗಳನ್ನೂ ಚತುರಸ್ರಾಕಾರದಲ್ಲಿ ತೋರಿಸುತ್ತಾ, ಅದರಲ್ಲಿ ಕರ್ಮ ಭಾಗಗಳನ್ನು ಕೂಡ ತೋರಿಸುವ ಚಿತ್ರವನ್ನು ನಂತರ 5ನೇ ಚಿತ್ರದಲ್ಲಿ ನೋಡಿರಿ.

| | | | |
|---|---|---|---|
| (12)<br>ದ್ವಾದಶ<br>ಸ್ಥಾನ | (1)<br>ಪ್ರಥಮ<br>ಸ್ಥಾನ | (2)<br>ದ್ವಿತೀಯ<br>ಸ್ಥಾನ | (3)<br>ತೃತೀಯ<br>ಸ್ಥಾನ |
| (11)<br>ಏಕಾದಶ<br>ಸ್ಥಾನ | **ಕರ್ಮಚಕ್ರ** | | (4)<br>ಚತುರ್ಥ<br>ಸ್ಥಾನ |
| (10)<br>ದಶಮ<br>ಸ್ಥಾನ | | | (5)<br>ಪಂಚಮ<br>ಸ್ಥಾನ |
| (9)<br>ನವಮ<br>ಸ್ಥಾನ | (8)<br>ಅಷ್ಟಮ<br>ಸ್ಥಾನ | (7)<br>ಸಪ್ತಮ<br>ಸ್ಥಾನ | (6)<br>ಷಷ್ಠಮ<br>ಸ್ಥಾನ |

**5ನೇ ಚಿತ್ರ – ಕರ್ಮಚಕ್ರ**

## 7 ಕರ್ಮ ಎಂದರೆ ಏನು?

'ಕರ್ಮ' ಎನ್ನುವ ಮಾತು ಬಹಳಜನರ ಬಾಯಲ್ಲಿ ಕೇಳಿಬರುತ್ತಿದೆ. ಸಾಧಾರಣ ಪ್ರಜೆಗಳು, ಸ್ವಲ್ಪವೂ ಜ್ಞಾನ ತಿಳಿಯದವರು ಕೂಡಾ ಅನೇಕ ಸಂದರ್ಭಗಳಲ್ಲಿ ಕರ್ಮಯೆಂದು, ಅದು ಅವನ ಕರ್ಮಯೆಂದು, ಇದು ನನ್ನ ಕರ್ಮ ಎಂದು ತಿಳಿಯದೇ ಅನ್ನುತ್ತಿದ್ದೇವೆ. ಅಷ್ಟೇ ಅಲ್ಲದೆ ಕರ್ಮಯೆನ್ನುತ್ತಾ ಕೈಯ್ಯನ್ನು ತನ್ನ ತಲೆಕಡೆ ತೋರಿಸುವುದೂ, ಹಣೆಬರಹಯೆಂದು ತಲೆಯಲ್ಲಿನ ಹಣೆ ಭಾಗವನ್ನು ತೋರಿಸುವುದು ನಡೆಯುತ್ತಿದೆ. ಇವೆಲ್ಲಾ ಮನುಷ್ಯನಿಗೆ ತಿಳಿಯದೇ ಮಾತನಾಡುವುದು, ಕೈ ತೋರಿಸುವುದು ನಡೆಯುತ್ತಿದೆಯೆಂದರೇ,

ಕರ್ಮ ಎನ್ನುವುದು ಒಂದಿದೆಯೆಂದು, ಅದು ತಲೆಯಲ್ಲಿ ಹಣೆ ಭಾಗದಲ್ಲಿಯೇ ಇದೆಯೆಂದು ಎಲ್ಲರಿಗೂ ತಿಳಿಯುವಂತೆ, ಶರೀರದಲ್ಲಿನ ಆತ್ಮವೇ ಮನುಷ್ಯನನ್ನು ಕದಲಿಸಿ, ಮಾತನಾಡಿಸುತ್ತಿದೆಯೆಂದು ಅರ್ಥವಾಗುತ್ತಿದೆ. ಆದರೆ ಮನುಷ್ಯ, ಕರ್ಮ ಎಂದು ಏಕೆ ಅನ್ನುತ್ತಿದ್ದೇನೆಂದಾಗಲಿ. ತಲೆಕಡೆಯೇ ಕೈ ಏತಕ್ಕೆ ತೋರಿಸುತ್ತಿದ್ದೇನೆಂದಾಗಲಿ ಸ್ವಲ್ಪವಾದರೂ ಅಂದುಕೊಳ್ಳುತ್ತಿಲ್ಲ. ಶರೀರದಲ್ಲಿನ ಆತ್ಮ ತಿಳಿಸಿದಂತೆ, ಕರ್ಮಚಕ್ರ ತಲೆ ಮಧ್ಯದಲ್ಲಿ ಇದೆಯೆಂದು ತಿಳಿದುಕೊಂಡಿದ್ದೇವೆ. ಕರ್ಮಚಕ್ರದಲ್ಲಿನ ಕರ್ಮವೆಂದರೆ ಏನೋ ಯೋಚಿಸಿ ನೋಡೋಣ.


'ಮರ್ಮವಾಗಿ ಇರುವುದು ಕರ್ಮವು' ಎಂದು ಹಿರಿಯರೆನ್ನುತ್ತಿರುತ್ತಾರೆ. ಯಾರಿಗೂ ತಿಳಿಯದಂತೆ ಮರ್ಮವಾಗಿ ಬಂದು, ಮನುಷ್ಯನಲ್ಲಿ ಸೇರುವುದು ಕರ್ಮ, ಆದ್ದರಿಂದ ಕರ್ಮವನ್ನು ಮರ್ಮ ಎಂದಿದ್ದಾರೆ. ಕರ್ಮವನ್ನು 'ಮಾಡಿಕೊಂಡ ಫಲಿತ' ಎಂದು ಕೂಡ ಹೇಳಿದ್ದಾರೆ. ಫಲಿತಕ್ಕೆ ಉದಾಹರಣೆ ಹೇಳಿಕೊಂಡರೆ, ಒಬ್ಬ ಉದ್ಯೋಗಿ ಮಾಡುವ ಕೆಲಸಕ್ಕೆ ಫಲಿತವು ಜೀತದ ರೂಪದಲ್ಲಿ ಇರುತ್ತದೆ. ಹಾಗೇ ಒಬ್ಬ ಕೂಲಿಯವನು ಮಾಡುವ ಕೆಲಸಕ್ಕೆ ಫಲಿತ ದಿನಕೂಲಿ ರೂಪದಲ್ಲಿ ಇರುತ್ತದೆ. ಈ ವಿಧವಾಗಿ ಮನುಷ್ಯ ಮಾಡುವ ಪ್ರತಿ ಕೆಲಸಕ್ಕು ಫಲಿತವಿರುತ್ತದೆ. ಮನುಷ್ಯ ಒಂದು ಕೆಲಸ ಮಾಡಿದರೆ ಅದರಲ್ಲಿ ಬರುವ ಫಲಿತ ಎರಡು ವಿಧಗಳಾಗಿರುತ್ತದೆ. ಒಂದು ವಿಧ ಎಲ್ಲರಿಗೂ ತಿಳಿದಿರುವುದೇ. ಅದನ್ನು ಹಣದರೂಪದಲ್ಲಾಗಲಿ, ವಸ್ತುರೂಪದಲ್ಲಾಗಲಿ, ಧಾನ್ಯರೂಪದಲ್ಲಾಗಲಿ, ಮಾಡಿದ ಕೆಲಸಕ್ಕೆ ದಿನಕೂಲಿ ರೂಪದಲ್ಲಾಗಲಿ, ತಿಂಗಳ ಜೀತದ ರೂಪದಲ್ಲಾಗಲಿ ತೆಗೆದುಕೊಳ್ಳುತ್ತಿದ್ದೇವೆ. ಇದು ಕಾಣಿಸುವ ಫಲಿತ. ಮನುಷ್ಯ ಮಾಡುವ ಪ್ರತಿ ಕೆಲಸಕ್ಕೂ ಕಾಣಿಸದ ಫಲಿತ ಕೂಡಾ ಬರುವುದು ಇದೆ. ಆ ಕಾಣಿಸದ ಫಲಿತವನ್ನೇ 'ಕರ್ಮ' ಎನ್ನುತ್ತೇವೆ. ಅದನ್ನೇ ಬಿಡಿಸಿ ಹೇಳಿಕೊಂಡರೆ, ಪಾಪ ಮತ್ತು ಪುಣ್ಯ ಎನ್ನುತ್ತೇವೆ. ಪ್ರತಿ ಮನುಷ್ಯ ಭೂಮಿಮೇಲೆ

ನಿತ್ಯವೂ ಯಾವುದೋ ಒಂದು ಕೆಲಸವನ್ನು ಮಾಡುತ್ತಿದ್ದಾನೆ. ಕಾಣಿಸುವ ಫಲಿತವನ್ನು, ಕಾಣಿಸದ ಫಲಿತವನ್ನು ಎರಡನ್ನೂ ಹೊಂದುತ್ತಿದ್ದಾನೆ. ಉದಾಹರಣೆಗೆ ಒಬ್ಬ ಪೊಲೀಸ್ ಉದ್ಯೋಗಿ, ತನ್ನ ಉದ್ಯೋಗ ರೀತಿ ಪೊಲೀಸ್ ಸ್ಟೇಷನ್‌ನಲ್ಲಿ ಒಬ್ಬ ಕಳ್ಳನನ್ನೊ ಅಥವಾ ನೇರಸ್ಥನನ್ನೊ ಹೊಡೆಯಬೇಕಾಗಿ ಬಂದಾಗ ಹೊಡೆಯದೆ ತಪ್ಪುವುದಿಲ್ಲ. ಅದನ್ನು ಉದ್ಯೋಗ ಧರ್ಮ ಎನ್ನುತ್ತಾರೆ. ಆ ಉದ್ಯೋಗ ಮಾಡಿದ್ದಕ್ಕೆ ಫಲಿತವಾಗಿ, ತಿಂಗಳ ಜೀತ ತೆಗೆದುಕೊಳ್ಳುವುದು ನಡೆಯುತ್ತಿದೆ. ಉದ್ಯೋಗ ಮಾಡುವುದು ಕಾಣಿಸುವ ಕೆಲಸವೇ. ಅದಕ್ಕೆ ಕಾಣಿಸುವ ಫಲಿತವನ್ನು ಹಣದರೂಪದಲ್ಲಿ ಜೀತವಾಗಿ ತೆಗೆದುಕೊಳ್ಳುತ್ತಿದ್ದಾನೆ. ಆದರೂ ಆ ಪೊಲೀಸ್‌ಗೆ ಕಾಣಿಸದ ಫಲಿತವಾದ ಕರ್ಮ, ಆತನು ತೆಗೆದು ಕೊಳ್ಳದೇನೇ ಹಿಂದೆಬರುತ್ತಿದೆ. ಕಾಣಿಸುವ ಜೀತವನ್ನು ಉದ್ಯೋಗಿ ತೆಗೆದುಕೊಂಡು ಜೇಬಿನಲ್ಲಿ ಇಟ್ಟುಕೊಂಡರೆ, ಕಾಣಿಸದ ಕರ್ಮ ಅದಷ್ಟಕ್ಕದೇ ಬಂದು, ತಲೆಯಲ್ಲಿನ ಕರ್ಮಚಕ್ರವನ್ನು ಸೇರುತ್ತಿದೆ. ಕಾಣಿಸುವ ಜೀತವನ್ನು ಗ್ರಹಿಸಿ ತೆಗೆದುಕೊಂಡು, ಮೇಲಿನ ಜೇಬಿನಲ್ಲಿ ಇಟ್ಟುಕೊಳ್ಳಬೇಕಾ, ಕೆಳಗಿನ ಜೇಬಿನಲ್ಲಿ ಇಟ್ಟುಕೊಳ್ಳಬೇಕಾ ಎಂದು ಆಲೋಚಿಸಿ ನಾವು ಇಟ್ಟುಕೊಂಡಂತೆ, ಕಾಲಚಕ್ರದಲ್ಲಿನ ಗ್ರಹಗಳು ಕರ್ಮವನ್ನು ಗ್ರಹಿಸಿ, ಕರ್ಮಚಕ್ರದಲ್ಲಿನ ಯಾವ ಭಾಗದಲ್ಲಿ ಇಡಬೇಕೊ ಆ ಭಾಗದಲ್ಲಿಯೇ ಇಡುತ್ತವೆ. ಹೀಗೆ ಮನುಷ್ಯನಿಗೆ ತಾನು ಮಾಡಿದ ಕೆಲಸವೊಂದರ ಫಲಿತ ಪ್ರತ್ಯಕ್ಷವಾಗಿರುವಂತೆ, ಕಾರ್ಯಕ್ಕೆ ಕರ್ಮ ಪರೋಕ್ಷವಾಗಿದೆ. ಕೆಲಸದಲ್ಲಿ ಕಾಣಿಸುವ ಹಣ ಬಂದಂತೇ, ಕಾಣಿಸದ ಕರ್ಮ ಕೂಡ ಬರುತ್ತಿದೆಯೆಂದು ಯಾರೂ ಅಂದುಕೊಳ್ಳುತ್ತಿಲ್ಲ. ಆ ಕಾಣಿಸದ ಕರ್ಮ ವಿಧಾನ ಯಾರಿಗೂ ತಿಳಿದಿಲ್ಲ. ಆದ್ದರಿಂದ ಕರ್ಮ ಮರ್ಮವಾಗಿದೆಯೆಂದು ಹಿರಿಯರೆಂದಿದ್ದಾರೆ. ಕಾರ್ಯ ಕಾಣಿಸಿ ಪ್ರತ್ಯಕ್ಷವಾದುದಾದರೆ, ಕರ್ಮ ಕಾಣಿಸದೆ ಪರೋಕ್ಷವಾಗಿದೆ ಯೆಂದು, ಅದನ್ನು ತಿಳಿದುಕೊಳ್ಳುವುದೇ ಮನುಷ್ಯನಿಗೆ ಆಧ್ಯಾತ್ಮಿಕದಲ್ಲಿ ಮುಖ್ಯವಾದುದೆಂದು ತಿಳಿಯಬೇಕು.

# 8 ಕರ್ಮ ಎಷ್ಟು ವಿಧಗಳು?

ಕರ್ಮ ವಿಧಾನವನ್ನು ಚೆನ್ನಾಗಿ ಅಧ್ಯಾಯನ ಮಾಡಿದರೆ, ಮನುಷ್ಯ ಹುಟ್ಟಿದಾಗಿನಿಂದ ಒಂದು ಸಂಪಾದಿಸುವ ಕರ್ಮ, ಎರಡು ಅನುಭವಿಸುವ ಕರ್ಮ ಎಂದು ಎರಡು ವಿಧಗಳು ಇವೆ. ಇವು ಎರಡೂ ಅಲ್ಲದೆ ಸಂಪಾದಿಸುವುದು ಹೆಚ್ಚಾಗಿ, ಅನುಭವಿಸುವುದು ಕಡಿಮೆಯಾದಾಗ ಶೇಷವಾಗಿ (ಬ್ಯಾಲೆನ್ಸಾಗಿ) ಉಳಿಯುವ ಕರ್ಮ ಸ್ವಲ್ಪ ಇರುತ್ತದೆ. ಹಾಗೆ ಉಳಿದಿರುವ ಶೇಷವೊಂದರ ನೆಲೆಯನ್ನು **'ಸಂಚಿತಕರ್ಮ'** ಎಂದು ಕರೆಯುತ್ತೇವೆ. ಒಂದು ಜನ್ಮದಲ್ಲಿ ಸಂಪಾದಿಸಿದ ಕರ್ಮವನ್ನು **'ಆಗಾಮಿಕರ್ಮ'** ಎಂದು ಕರೆಯುತ್ತೇವೆ. ಹಾಗೇ ಒಂದು ಜನ್ಮದಲ್ಲಿ ಅನುಭವಿಸುವ ಕರ್ಮವನ್ನು **'ಪ್ರಾರಬ್ಧಕರ್ಮ'** ಎಂದು ಕರೆಯುತ್ತಿದ್ದೇವೆ. ಬ್ರಹ್ಮವಿದ್ಯಾ ಶಾಸ್ತ್ರವು ಆಗಾಮಿಕರ್ಮವೊಂದರ ವಿವರವನ್ನು ತಿಳಿಸುತ್ತದೆ. ಜ್ಯೋತಿಷ್ಯಶಾಸ್ತ್ರ ಪ್ರಾರಬ್ಧಕರ್ಮವೊಂದರ ವಿವರವನ್ನು ತಿಳಿಸುತ್ತದೆ. ಆಗಾಮಿಕರ್ಮವನ್ನು ಸಂಪಾದಿಸಿಕೊಳ್ಳದಂತೆ ಇರುವ ವಿವರವನ್ನು ತಿಳಿಸುವುದು 'ಬ್ರಹ್ಮವಿದ್ಯಾಶಾಸ್ತ್ರ'. ಹಾಗೇ ಪ್ರಾರಬ್ಧಕರ್ಮದಲ್ಲಿನ ಅನುಭವಗಳನ್ನು ವಿವರಿಸಿ ತಿಳಿಸುವುದು 'ಜ್ಯೋತಿಷ್ಯ ಶಾಸ್ತ್ರ'. ಈಗ ನಾವು ಜ್ಯೋತಿಷ್ಯಕ್ಕೆ ಸಂಬಂಧಿಸಿದ ಪ್ರಾರಬ್ಧವನ್ನು ಕುರಿತು ತಿಳಿದುಕೊಳ್ಳೋಣ.

ಪ್ರಾರಬ್ಧಕರ್ಮ ಹೇಗೆ ಹುಟ್ಟುತ್ತಿದೆಯೋ ಎಂದು ನೋಡಿದರೆ, ಹೊಗೆ ಹುಟ್ಟುವುದಕ್ಕೆ ಕೆಂಡ ಕಾರಣವೆಂದಂತೆ, ಪ್ರಾರಬ್ಧಕರ್ಮ ಹುಟ್ಟುವುದಕ್ಕೆ ಮನುಷ್ಯನ ತಲೆಯಲ್ಲಿನ ಗುಣಗಳು ಕಾರಣ. ತಲೆ ಮಧ್ಯದಲ್ಲಿರುವ ನಾಲ್ಕುಚಕ್ರಗಳ ಸಮುದಾಯದಲ್ಲಿ, ಕೆಳಗಿರುವ ಚಕ್ರದ ಹೆಸರು ಗುಣಚಕ್ರ. ಗುಣಚಕ್ರ ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಗುಣಚಕ್ರ ಚಿತ್ರವನ್ನು ಈ ನಂತರ 6ನೇ ಚಿತ್ರದಲ್ಲಿ ನೋಡಬಹುದು.





**ಗುಣಚಕ್ರ – 6ನೇ ಚಿತ್ರ**

ಗುಣಚಕ್ರದಲ್ಲಿನ ಮೂರು ಭಾಗಗಳಿಗು ಮೂರು ಹೆಸರುಗಳಿವೆ. ಮೂರು ಹೆಸರುಗಳು ಹೊರಗಿನಿಂದ ಕ್ರಮವಾಗಿ ತಾಮಸ, ರಾಜಸ, ಸಾತ್ತ್ವಿಕ ಎಂದು ಇವೆ. ಮಧ್ಯದಲ್ಲಿರುವ ಬ್ರಹ್ಮನಾಡಿಯ (ಇರುಸು) ಭಾಗದಲ್ಲಿ ಆತ್ಮ ಇರುತ್ತದೆ. ಆದ್ದರಿಂದ ಅದನ್ನು 'ಆತ್ಮಭಾಗ' ಎನ್ನುತ್ತೇವೆ. ಮಧ್ಯದಲ್ಲಿನ ಆತ್ಮ ಭಾಗವು ಗುಣಚಕ್ರಕ್ಕೇ ಅಲ್ಲದೆ ಎಲ್ಲಾ ಚಕ್ರಗಳಿಗೂ ಇರುತ್ತದೆ. ಇಲ್ಲಿ ಮಧ್ಯದಲ್ಲಿನ ಆತ್ಮ ಭಾಗವನ್ನು ಬಿಟ್ಟುಹಾಕಿದರೆ, ಉಳಿದ ಗುಣಭಾಗಗಳು ಮೂರು ಮಾತ್ರವೇ ಇರುತ್ತವೆ. ಬ್ರಹ್ಮವಿದ್ಯೆ ಪ್ರಕಾರ ಗುಣಚಕ್ರವನ್ನು ಆತ್ಮ ಭಾಗದೊಂದಿಗೆ ಸೇರಿಸಿ ನಾಲ್ಕುಭಾಗ ಗಳೆಂದು ಹೇಳಬೇಕು. ಆದರೆ ಜ್ಯೋತಿಷ್ಯಶಾಸ್ತ್ರದ ಪ್ರಕಾರ ನಮಗೆ ಅಗತ್ಯವಾದವು ಮೂರು ಭಾಗಗಳು ಮಾತ್ರವೇ. ಆದ್ದರಿಂದ ಇಲ್ಲಿ ಗುಣಚಕ್ರವನ್ನು, ಮೂರು ಭಾಗಗಳಾಗಿಯೇ ಹೇಳಿಕೊಳ್ಳಬೇಕು. ಮೂರು ಭಾಗಗಳಲ್ಲಿಯೂ ಗುಣಗಳಿರುತ್ತವೆ. ನಮಗೆ ಅರ್ಥವಾಗುವುದಕ್ಕೆ ಮೊದಲು ಒಂದು ಗುಣಭಾಗವನ್ನು ತೆಗೆದುಕೊಂಡು ನೋಡೋಣ. ತಾಮಸ ಗುಣಭಾಗವನ್ನು ನೋಡಿದರೆ, ಅದರಲ್ಲಿ ಎರಡು ಗುಂಪುಗಳಾಗಿರುವ ಗುಣಗಳು ಇರುತ್ತವೆ. ಆ ಎರಡು ಗುಂಪುಗಳಲ್ಲಿ ಒಂದು ಗುಂಪು ಗುಣಗಳು ಕೆಟ್ಟ ಗುಣಗಳೆಂದು, ಎರಡನೆ ಗುಂಪಿನಲ್ಲಿನ ಗುಣಗಳು ಒಳ್ಳೆಯ ಗುಣಗಳೆಂದು ಹೆಸರುವಾಸಿಯಾಗಿವೆ. ಕೆಟ್ಟ ಗುಣಗಳು ಒಟ್ಟು ಆರು ಇವೆ. ಹಾಗೇ ಒಳ್ಳೆಯ ಗುಣಗಳು ಒಟ್ಟು ಆರು ಇವೆ. ಕೆಟ್ಟ

ಗುಣಗಳ ಹೆಸರುಗಳು ಕ್ರಮವಾಗಿ 1) ಕಾಮ 2) ಕ್ರೋಧ 3) ಲೋಭ 4) ಮೋಹ 5) ಮದ 6) ಮತ್ಸರ ಎಂದು ಇವೆ. ಇವುಗಳನ್ನೇ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳು ಎನ್ನುತ್ತಿದ್ದೇವೆ. ಒಳ್ಳೆಯ ಗುಣಗಳ ಹೆಸರುಗಳು ಕ್ರಮವಾಗಿ 1) ದಾನ 2) ದಯೆ 3) ಔದಾರ್ಯ 4) ವೈರಾಗ್ಯ 5) ವಿನಯ 6) ಪ್ರೇಮ ಎಂದು ಇವೆ. ಇವುಗಳನ್ನೇ ದಾನ, ದಯೆ, ಔದಾರ್ಯ, ವೈರಾಗ್ಯ, ವಿನಯ, ಪ್ರೇಮಗಳು ಎನ್ನುತ್ತೇವೆ. ಮೊದಲ ಆರು ಕೆಟ್ಟ ಗುಣಗಳು ಒಂದು ಗುಂಪಾಗಿ, ಎರಡನೆ ಆರು ಒಳ್ಳೆಯ ಗುಣಗಳು ಮತ್ತೊಂದು ಗುಂಪಾಗಿ ಇವೆ. ಅಷ್ಟೇ ಅಲ್ಲದೆ ಮೊದಲ ಗುಂಪಿನಲ್ಲಿನ ಆರು ಕೆಟ್ಟ ಗುಣಗಳಿಗೆ ವಿರುದ್ಧ ಗುಣಗಳಾಗಿ, ಎರಡನೆ ಗುಂಪಿನಲ್ಲಿನ ಆರು ಒಳ್ಳೆಯ ಗುಣಗಳು ಇವೆ. ಶರೀರದಲ್ಲಿನ ಜೀವಿಗೆ ಆರು ಕೆಟ್ಟ ಗುಣಗಳು ಶತ್ರುಗಳೆಂದು, ಆರು ಒಳ್ಳೆಯ ಗುಣಗಳು ಮಿತ್ರರೆಂದು ಹೆಸರುಗಳಿಸಿವೆ.

ಜೀವಿಗೆ ಕೆಟ್ಟ ಆರು ಗುಣಗಳು ಶತ್ರುಗಳಾಗಿದ್ದು, ಆ ಗುಣಗಳಲ್ಲಿ ಯಾವುದರ ಮೂಲಕ ಹೊರಗಿನ ಕೆಲಸ ನಡೆದರೂ, ಅದರ ಮೂಲಕ ಜೀವಿಗೆ ಪಾಪ ಬರುವಂತೆ ಮಾಡುತ್ತಿವೆ. ಇಲ್ಲಿ ಸೂತ್ರವೇನೆಂದರೇ! ಒಂದು ಗುಣ ಪ್ರೇರಣೆಯಿಂದ ನಡೆಯುವ ಕೆಲಸದಲ್ಲಿ ಒಂದು ಕರ್ಮ ಹುಟ್ಟುತ್ತಿದೆ. ಕೆಟ್ಟ ಗುಣದಿಂದ ನಡೆದ ಕೆಲಸದಲ್ಲಿ ಪಾಪ, ಒಳ್ಳೆಯ ಗುಣದಿಂದ ನಡೆದ ಕೆಲಸದಲ್ಲಿ ಪುಣ್ಯವೆಂಬ ಜನ್ಮ ಬರುವುದು ಸಹಜ. ಇದರಿಂದ ಪಾಪಪುಣ್ಯಗಳ ಜನ್ಮಸ್ಥಾನ ಗುಣ ಚಕ್ರವೆಂದು ತಿಳಿಯುತ್ತಿದೆ. ಒಂದು ತಾಮಸ ಗುಣಭಾಗದಲ್ಲಿ ಒಳ್ಳೆಯ, ಕೆಟ್ಟ ಗುಣಗಳು ಒಟ್ಟು ಹನ್ನೆರಡು ಇರುವಂತೆ, ರಾಜಸಗುಣಭಾಗದಲ್ಲಿಯೂ ಹನ್ನೆರಡು ಗುಣಗಳಿವೆ. ಹಾಗೇ ಸಾತ್ತ್ವಿಕ ಗುಣಭಾಗದಲ್ಲಿಯೂ ಹನ್ನೆರಡು ಗುಣಗಳಿವೆ. ಮೊದಲ ತಾಮಸ ಗುಣಭಾಗದಲ್ಲಿ ಮಿತ್ರ, ಶತ್ರುಗಳು ಎನ್ನುವ ಎರಡು ಗುಂಪುಗಳ ಗುಣಗಳಿರುವಂತೇ, ಉಳಿದ ಎರಡು ಗುಣಭಾಗಗಳಲ್ಲಿಯೂ ಇವೆ. ಇದರ ಪ್ರಕಾರ ಮೂರು ಭಾಗಗಳಲ್ಲಿ ಒಟ್ಟು ಗುಣಗಳ ಸಂಖ್ಯೆ '36' ಎಂದು ತಿಳಿಯುತ್ತಿದೆ. ಒಂದು ಭಾಗದಲ್ಲಿನ 12 ಗುಣಗಳಿಗು ಮತ್ತೊಂದು


ಭಾಗದಲ್ಲಿನ 12 ಗುಣಗಳಿಗು ಹೆಸರುಗಳು ಒಂದೇ ವಿಧವಾಗಿವೆ. ಆದರೆ ಒಂದು ಭಾಗದಲ್ಲಿನ 'ಆಸೆ' ಎನ್ನುವ ಗುಣಕ್ಕು, ಮತ್ತೊಂದು ಭಾಗದಲ್ಲಿನ 'ಆಸೆ' ಎನ್ನುವ ಗುಣಕ್ಕು ಸ್ವಲ್ಪ ವ್ಯತ್ಯಾಸ ಇರುತ್ತದೆ. ಹೀಗೆ ಒಂದು ಭಾಗದಲ್ಲಿನ ಗುಣಕ್ಕು ಮತ್ತೊಂದು ಭಾಗದಲ್ಲಿನ ಗುಣಕ್ಕು ಸ್ವಲ್ಪ ಭೇದ ವಿದ್ದಂತೆ, ಉಳಿದ ಎಲ್ಲ ಗುಣಗಳಿಗು ಭೇದ ಇರುತ್ತದೆಂದು ತಿಳಿಯಬೇಕು. ಅದೇ ವಿಧವಾಗಿ ಒಂದು ಭಾಗದಲ್ಲಿನ ಕ್ರೋಧದಿಂದ ಬರುವ ಪಾಪಕ್ಕು, ಮತ್ತೊಂದು ಗುಣಭಾಗದಲ್ಲಿನ ಕ್ರೋಧದಿಂದ ಬರುವ ಪಾಪಕ್ಕು ಸ್ವಲ್ಪ ವ್ಯತ್ಯಾಸವಿರುತ್ತದೆ. ಒಂದೇ ಹೆಸರು ಹೊಂದಿದ ಗುಣಗಳು, ಮೂರು ಭಾಗಗಳಲ್ಲಿ ಇದ್ದಲ್ಲಿಯೂ, ಅವು ಸ್ವಲ್ಪ ಭೇದ ಹೊಂದಿರುವಂತೆ, ಅವುಗಳಿಂದ ಬರುವ ಪಾಪಪುಣ್ಯಗಳೆನ್ನುವ ಕರ್ಮ ಕೂಡಾ ಸ್ವಲ್ಪ ಭೇದ ಹೊಂದಿರುತ್ತದೆಂದು ಜ್ಞಾಪಕವಿಟ್ಟುಕೊಳ್ಳಬೇಕು. ಈ ವಿಷಯ ಅರ್ಥವಾಗುವುದಕ್ಕೆ ಕೆಳಗಿನ ಚಿತ್ರ ಸ್ವಲ್ಪ ಉಪಯೋಗಪಡುತ್ತದೆ. ಆದ್ದರಿಂದ 7ನೇ ಚಿತ್ರವನ್ನು ನೋಡಿರಿ.




**ಗುಣಚಕ್ರ – 7ನೇ ಚಿತ್ರ**

ಒಂದು ಭಾಗದಲ್ಲಿನ ಗುಣಗಳಿಗು, ಮತ್ತೊಂದು ಭಾಗದಲ್ಲಿನ ಗುಣಗಳಿಗು ಹೆಸರುಗಳು ಒಂದೇ ವಿಧವಾಗಿ ಇದ್ದರೂ, ಅವು ಒಂದೇ ವಿಧವಾಗಿ ಇಲ್ಲವೆಂದು, ಅವುಗಳಿಂದ ಬರುವ ಕರ್ಮಕೂಡಾ ಒಂದೇ ವಿಧವಾಗಿ ಇಲ್ಲವೆಂದು

ತಿಳಿದುಕೊಂಡಿದ್ದೇವೆ ಅಲ್ಲವೆ! ಈಗ ಮುಖ್ಯವಾಗಿ ತಿಳಿದುಕೊಳ್ಳಬೇಕಾಗಿರುವುದು ಏನೆಂದರೇ! ಒಂದು ಭಾಗದಲ್ಲಿನ ಒಂದೇ ಹೆಸರಿರುವ ಗುಣ, ತಾನು ಒಂದೇ ಅಲ್ಲದೆ, ತನ್ನ ಜಾತಿ ಗುಣಗಳ ಸಮುದಾಯವಾಗಿದೆ. ಉದಾಹರಣೆಗೆ ತಾಮಸ ಗುಣಭಾಗದಲ್ಲಿನ ಕ್ರೋಧ ಒಂದೇ ಅಲ್ಲದೆ, ಅದು ಒಂಭತ್ತು ಕ್ರೋಧಗಳ ಗುಂಪಾಗಿದೆ. ಒಂದು ಭಾಗದಲ್ಲಿನ ಒಂಭತ್ತರ ಸಂಖ್ಯೆಯಲ್ಲಿರುವ ಒಂದೇ ಹೆಸರಿರುವ ಗುಣಗಳು ಸಮಾನವಾಗಿ ಇಲ್ಲದೆ, ಪರಿಮಾಣದಲ್ಲಿ ವ್ಯತ್ಯಾಸ ಹೊಂದಿವೆ. ಹೇಗೆಂದರೆ! ಒಂದು ಹೆಸರಿರುವ ಕ್ರೋಧ ಅಥವಾ ಕೋಪ ಒಂದರ ಗುಣಗಳ ಗುಂಪಿನಲ್ಲಿ ಮೊದಲನೆಯದು ದೊಡ್ಡದಾಗಿ ಇರುವಾಗ, ಅದರ ನಂತರ ಎರಡನೆಯದು ಮೊದಲನೆಯದಕ್ಕಿಂತ ಪರಿಮಾಣದಲ್ಲಿ ಸ್ವಲ್ಪ ಚಿಕ್ಕದಾಗಿರುತ್ತದೆ. ನಂತರ ಎರಡನೆಯದಕ್ಕಿಂತ ಮೂರನೆಯದು ಪರಿಮಾಣದಲ್ಲಿ ಸ್ವಲ್ಪ ಕಡಿಮೆಯಾಗಿರುತ್ತದೆ. ಆ ವಿಧವಾಗಿ ಒಂದಕ್ಕೊಂದು ಚಿಕ್ಕದಾಗಿ ಇರುತ್ತಾ, ಕೊನೆಯ ಒಂಭತ್ತನೆಯದು ಎಲ್ಲದಕ್ಕಿಂತ ಚಿಕ್ಕದಾಗಿರುತ್ತದೆ. ತಾಮಸಭಾಗದಲ್ಲಿ ಕೋಪ ಒಂಭತ್ತು ವಿಧಗಳಾಗಿ ಇದ್ದಂತೆ, ಉಳಿದ ಎರಡು ಭಾಗಗಳಲ್ಲಿ ಕೂಡಾ ಕೋಪ ಒಂಭತ್ತು ಭಾಗಗಳಾಗಿ ಇದೆ. ಇದನ್ನೇ ಚಿಕ್ಕ ಕೋಪ, ದೊಡ್ಡ ಕೋಪ, ಸ್ವಲ್ಪ ಕೋಪ ಎನ್ನುತ್ತಿದ್ದೇವೆ. ಒಂದು ಭಾಗದಲ್ಲಿ ಒಂದು ಗುಣ ಒಂಭತ್ತು ಗುಂಪಾಗಿ ಇರುವುದರಿಂದ, ಕೆಟ್ಟ ಗುಣಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಎನ್ನುವ ಆರು ಗುಣಗಳ ಗುಂಪು ಒಟ್ಟು ಐವತ್ನಾಲ್ಕಾಗಿವೆ. 6x9=54 ಒಂದು ಕೆಟ್ಟ ಗುಣಗಳ ಗುಂಪು ಇರುವಾಗ, ಮತ್ತೊಂದು ಒಳ್ಳೆಯ ಗುಣಗಳು ಕೂಡ 6x9=54 ಗುಂಪಾಗಿವೆ. ಈ ವಿಧವಾಗಿ ಲೆಕ್ಕಹಾಕಿ ನೋಡಿದರೆ ಒಂದು ಗುಣ ಭಾಗದಲ್ಲಿ ದೊಡ್ಡ ಗುಣಗಳು ಒಟ್ಟು ಹನ್ನೆರಡಾಗಿದ್ದು, ಅವುಗಳ ಗುಂಪಿನಲ್ಲಿನ ಚಿಕ್ಕ ಗುಣಗಳನ್ನು ಕೂಡ ಲೆಕ್ಕಿಸಿ ನೋಡಿದರೆ 12x9=108 ಒಟ್ಟು ನೂರಾ ಎಂಟು ಗುಣಗಳಾಗಿವೆ. ಒಂದು ತಾಮಸ ಭಾಗದಲ್ಲಿರುವವು 108 ಗುಣಗಳಾಗಿದ್ದು, ರಾಜಸ ಭಾಗದಲ್ಲೂ 108 ಗುಣಗಳು ಇವೆ. ಹಾಗೇ ಸಾತ್ತ್ವಿಕ ಭಾಗದಲ್ಲಿಯೂ ಗುಣಗಳ ಸಂಖ್ಯೆ 108 ಆಗಿಯೇ ಇದೆ. ಮೂರು ಭಾಗಗಳಲ್ಲಿಯೂ ಒಟ್ಟು ಗುಣಗಳ ಸಂಖ್ಯೆ 108x3=324 ಆಗಿದೆ. ಗುಣಗಳ ಗುಂಪು ಚಿತ್ರವನ್ನು ಈ ನಂತರ 8ನೇ ಚಿತ್ರದಲ್ಲಿ ನೋಡಿರಿ.





**ಗುಣಚಕ್ರ – 8ನೇ ಚಿತ್ರ**

ತಾಮಸ ಭಾಗದಲ್ಲಿ ಗುಣಗಳ ಸಂಖ್ಯೆ 108 ಅಲ್ಲವೆ! ಅವುಗಳಿಂದ ಉತ್ಪನ್ನವಾಗುವ ಕರ್ಮಕೂಡ 108 ವಿಧಗಳಾಗಿ ಇರುತ್ತದೆ. ಅದರಲ್ಲಿ 54 ಗುಣಗಳಿಂದ ಬರುವುದು ಪಾಪವಾದಾಗ, ಉಳಿದ 54 ಗುಣಗಳಿಂದ ಬರುವುದು ಪುಣ್ಯವಾಗಿದೆ. ಈ ವಿಧವಾಗಿ ಒಂದು ತಾಮಸ ಭಾಗದಲ್ಲಿಯೇ ಕರ್ಮ 108 ವಿಧಗಳಾಗಿ ತಯಾರಾಗಿ, ಒಟ್ಟಾರೆ ಮೂರು ಭಾಗಗಳಲ್ಲಿ 324 ವಿಧಗಳ ಪಾಪಪುಣ್ಯಗಳು ತಯಾರಾಗುತ್ತಿವೆಯೆಂದು ಹೇಳಬಹುದು. ಈಗ, ಕರ್ಮ ಎಷ್ಟು ವಿಧಗಳು ಎಂದು ಯಾರಾದರೂ ಪ್ರಶ್ನಿಸಿದರೆ, ಒಂದು ಗುಣ ಭಾಗದಲ್ಲಾದರೆ 108 ವಿಧಗಳೆಂದು, ಮೂರು ಗುಣ ಭಾಗಗಳಲ್ಲಿ ಒಟ್ಟು 324 ವಿಧಗಳೆಂದು ಸುಲಭವಾಗಿ ಹೇಳಬಹುದು. ಕರ್ಮ ವಿಧಾನವೂ, ಕರ್ಮವೊಂದರ ವಿಭಾಗಗಳ ವಿಧಾನವೂ, ಭೂಮಿಮೇಲೆ ಒಂದು ಇಂದೂಮತದಲ್ಲಿಯೇ ಇದೆ. ಉಳಿದ ಮತಗಳಲ್ಲಿ ಕರ್ಮ ವಿಧಾನವಾಗಲಿ, ಅದರ ವಿಭಜನೆಯಾಗಲಿ ಎಲ್ಲಿಯೂ ಕಾಣಿಸುವುದಿಲ್ಲ. ಇದು ಬ್ರಹ್ಮವಿದ್ಯಾಶಾಸ್ತ್ರದ ಪ್ರಕಾರವಿದೆ. ಆದರೆ ಈಗಿನ ಕಾಲದಲ್ಲಿ

ಜ್ಯೋತಿಷ್ಯ ಶಾಸ್ತ್ರದಲ್ಲಿ ಕೂಡ ಕರ್ಮ ವಿಧಾನವನ್ನು ಯಾರೂ ಬರೆದುಕೊಳ್ಳುವುದು ನಡೆಯಲಿಲ್ಲ.


## 9 ಕರ್ಮವನ್ನು ಅನುಭವಿಸುವವನು ಯಾರು?

ಇಲ್ಲಿಯವರೆಗು ಕಾಲಚಕ್ರವನ್ನೂ, ಕರ್ಮಚಕ್ರವನ್ನೂ, ಗುಣಚಕ್ರವನ್ನೂ ಕುರಿತು ಕ್ರಮವಾಗಿ ತಿಳಿದುಕೊಂಡಿದ್ದೇವೆ. ಈಗ ಕರ್ಮವನ್ನು ಅನುಭವಿಸುವ ಜೀವಿಯನ್ನು ಕುರಿತು ತಿಳಿದುಕೊಳ್ಳೋಣ. ಕರ್ಮವನ್ನು ಪರಿಪಾಲಿಸುವುದಕ್ಕೆ ಕಾಲಚಕ್ರದಲ್ಲಿನ ಗ್ರಹಗಳಿವೆ. ಕರ್ಮವನ್ನು ಹುಟ್ಟಿಸುವುದಕ್ಕೆ ಗುಣಚಕ್ರದಲ್ಲಿನ ಗುಣಗಳಿವೆ. ಕರ್ಮವನ್ನು ಅನುಭವಿಸುವುದಕ್ಕೆ ಜೀವಿಯು ಗುಣಚಕ್ರದಲ್ಲಿಯೇ ಇದ್ದಾನೆ. ಜೀವಿಯು ಕರ್ಮವನ್ನು ಅನುಭವಿಸುತ್ತಾ, ಕಾಲವನ್ನು ಕಳೆಯುವುದನ್ನೇ 'ಜೀವನ' ಎನ್ನುತ್ತೇವೆ. **"ನಹಿ ಕಶ್ಚಿತ್ ಕ್ಷಣಮಪಿ"** ಎಂದು ಭಗವದ್ಗೀತೆಯಲ್ಲಿ ಹೇಳಿದಂತೆ, ಒಂದು ಕ್ಷಣ ಕೂಡ ವ್ಯರ್ಥವಾಗದಂತೆ, ಜೀವಿಯು ಜೀವನದಲ್ಲಿ ಕರ್ಮವನ್ನು ಅನುಭವಿಸುತ್ತಿದ್ದಾನೆಂದು ತಿಳಿಯುತ್ತಿದೆ. ಜೀವಿಯು ಅನುಭವಿಸುವ ಕರ್ಮವನ್ನು ತಿಳಿದುಕೊಳ್ಳುವುದೇ **"ಜ್ಯೋತಿಷ್ಯ"** ಎನ್ನುತ್ತಿದ್ದೇವೆ. ಜ್ಯೋತಿಷ್ಯವನ್ನು ಸಮಗ್ರವಾಗಿ ತಿಳಿದುಕೊಳ್ಳಬೇಕೆಂದರೇ, ಕರ್ಮವನ್ನು ಅನುಭವಿಸುವ ಜೀವಿಯನ್ನು ಕುರಿತು ಪೂರ್ತಿಯಾಗಿ ತಿಳಿದುಕೊಳ್ಳಬೇಕಾಗಿರುತ್ತದೆ. ಕರ್ಮವನ್ನು ಅನುಭವಿಸುವ ಜೀವಿಯು, ತಲೆಯಲ್ಲಿನ ಕರ್ಮಚಕ್ರದ ಕೆಳಗಿರುವ ಗುಣಚಕ್ರದಲ್ಲಿಯೇ ಇರುತ್ತಾನೆ. ಗುಣಚಕ್ರವೊಂದರ ಮೂರು ಭಾಗಗಳಲ್ಲಿ ಯಾವುದೊ ಒಂದು ಭಾಗದಲ್ಲಿ ಜೀವಿಯಿದ್ದು, ಆ ಗುಣಗಳ ಪ್ರವರ್ತನೆಗಳಿಂದ ಉಂಟಾಗುವ ಸುಖದುಃಖಗಳನ್ನು ಅನುಭವಿಸುತ್ತಿರುತ್ತಾನೆ. ತಾಮಸದಲ್ಲಿರುವ ಜೀವಿಯನ್ನು ಈ ನಂತರ 9ನೇ ಚಿತ್ರದಲ್ಲಿ ನೋಡಬಹುದು.





**ಗುಣಚಕ್ರ 9ನೇ ಚಿತ್ರ**

ತಾಮಸದಲ್ಲಿ ಜೀವಾತ್ಮ ಇರುವಾಗ ಉಳಿದ ರಾಜಸ, ಸಾತ್ತ್ವಿಕಗಳಲ್ಲಿ ಜೀವಾತ್ಮ ಇರುವುದಿಲ್ಲ. ಒಂದು ಸಲ ಜೀವಾತ್ಮ ತಾಮಸವನ್ನು ಬಿಟ್ಟು ರಾಜಸ ಭಾಗದೊಳಗೆ ಕೂಡ ಸೇರುತ್ತಾನೆ. ಆಗ ಉಳಿದ ತಾಮಸ, ಸಾತ್ತ್ವಿಕಗಳಲ್ಲಿ ಜೀವಿಯಿಲ್ಲವೆಂದು ತಿಳಿಯುತ್ತಿದೆ. ರಾಜಸ ಗುಣಗಳ ಮಧ್ಯದಲ್ಲಿ ಜೀವಿ ಇರುವ ಚಿತ್ರವನ್ನು ಕೆಳಗಿರುವ 10ನೇ ಚಿತ್ರದಲ್ಲಿ ನೋಡಿರಿ.




**ಗುಣಚಕ್ರ – 10ನೇ ಚಿತ್ರ**


ಈ ವಿಧವಾಗಿ ಜೀವಿಯು ಮೂರು ಗುಣಗಳ ಭಾಗಗಳನ್ನು ಬದಲಾಗುವುದಕ್ಕೆ ಒಂದು ಕಾರಣವಿದೆ. ಅದೇನೆಂದರೇ! ಪ್ರಾರಬ್ಧಕರ್ಮ ವನ್ನನುಸರಿಸಿ ಜೀವಿಯು ಅಸ್ವತಂತ್ರನಾಗಿ ಗುಣಗಳ ಭಾಗಗಳನ್ನು ಬದಲಾಗಬೇ ಕಾಗಿದೆ. ಆ ವಿಧವಾಗಿ ಬದಲಾಗುತ್ತಿರುವ ಜೀವಿ ಒಂದು ಸಮಯದಲ್ಲಿ, ಒಂದು ಗುಣಭಾಗದಲ್ಲಿ, ಒಂದು ಗುಣದಲ್ಲಿ ಲಗ್ನವಾಗುತ್ತಿರುತ್ತಾನೆ. ಯಾವ ಗುಣ ಭಾಗದಲ್ಲಿರುವ ಜೀವಿಯನ್ನು ಆ ಗುಣಭಾಗದ ಹೆಸರಿನಿಂದ ಕರೆಯುವುದು ನಡೆಯುತ್ತಿದೆ. ತಾಮಸ ಭಾಗದಲ್ಲಿರುವಾಗ ತಾಮಸನೆಂದು, ರಾಜಸ ಭಾಗದಲ್ಲಿರುವಾಗ ರಾಜಸನೆಂದು, ಸಾತ್ತ್ವಿಕ ಭಾಗದಲ್ಲಿರುವಾಗ ಸಾತ್ತ್ವಿಕನೆಂದು ಕರೆಯುತ್ತಿದ್ದೇವೆ. ಈಗ ಸಾತ್ತ್ವಿಕದಲ್ಲಿರುವ ಸಾತ್ತ್ವಿಕನನ್ನು ಕೆಳಗೆ 11ನೇ ಚಿತ್ರದಲ್ಲಿ ನೋಡೋಣ.




**ಗುಣಚಕ್ರ – 11ನೇ ಚಿತ್ರ**

ಜ್ಞಾನದೃಷ್ಠಿಯಿಂದ ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳನ್ನು ನಾಲ್ಕುಚಕ್ರಗಳ ಚಿತ್ರವನ್ನು ನೋಡಬಹುದು. ಅದೇ ವಿಧವಾಗಿ ಕೆಳಗೆ ಗುಣಚಕ್ರದಲ್ಲಿನ ಯಾವುದೋ ಒಂದು ಭಾಗದಲ್ಲಿರುವ ಜೀವಿಯನ್ನು ನೋಡಬಹುದು. ಇದನ್ನನುಸರಿಸಿ ಗುಣಗಳಿಗೂ, ಜೀವಿಗೂ ಕೂಡ ಆಕಾರವಿದೆಯೆಂದು ತಿಳಿಯುತ್ತಿದೆ. ಇಲ್ಲಿಯವರೆಗು ಭೂಮಿಮೇಲೆ ಎಲ್ಲಿಯೂ ತಿಳಿಯದ

ವಿಧಾನವನ್ನೂ, ಗುಣಗಳೊಂದರ ಮತ್ತು ಜೀವಿಯೊಂದರ ಆಕಾರಗಳನ್ನೂ ನಾವು ತಿಳಿದು ಕೊಂಡಿದ್ದೇವೆ. ಸಮಗ್ರವಾಗಿ ನೋಡಿದರೆ ಜೀವಿಯ ಆಕಾರ ಈ ವಿಧವಾಗಿದೆ. ಜೀವಿಯು ಮೂರು ಪೊರೆಗಳ ಮಧ್ಯದಲ್ಲಿ ಬಂಧಿಸಲ್ಪಟ್ಟಿರುವ ಖಾಲಿ ಸ್ಥಳವೆಂದು ತಿಳಿಯುತ್ತಿದೆ. ಜೀವಿಯ ಆಕಾರವನ್ನು ಕೆಳಗೆ 12ನೇ ಚಿತ್ರದಲ್ಲಿ ನೋಡಬಹುದು.




**ಜೀವಿಯ ಆಕಾರ – 12ನೇ ಚಿತ್ರ**

ಇಲ್ಲಿಯವರೆಗು ಕಾಲಚಕ್ರವನ್ನು, ಕರ್ಮಚಕ್ರವನ್ನು, ಗುಣಚಕ್ರವನ್ನು ಅದರಲ್ಲಿರುವ ಜೀವಿಯನ್ನು ಕುರಿತು ತಿಳಿದುಕೊಂಡಿದ್ದೇವೆ. ಇನ್ನು ಮೂರು ಚಕ್ರಗಳಿಗಿಂತ ಮೇಲಿರುವ ಬ್ರಹ್ಮಚಕ್ರವೊಂದು ಇದೆ. ಬ್ರಹ್ಮಚಕ್ರ ವಿವರ ಇಲ್ಲಿ ಜ್ಯೋತಿಷ್ಯಕ್ಕೆ ಅಗತ್ಯವಿಲ್ಲ. ಅದು ಒಂದು ಬ್ರಹ್ಮವಿದ್ಯಾಶಾಸ್ತ್ರಕ್ಕೆ ಮಾತ್ರವೇ ಪರಿಮಿತವಾದುದು. ಆದ್ದರಿಂದ ಎರಡು ಭಾಗಗಳಾಗಿರುವ ಬ್ರಹ್ಮಚಕ್ರವನ್ನು ಇಲ್ಲಿ ವಿವರಿಸಿಕೊಳ್ಳದೆ ಬಿಟ್ಟುಹಾಕುತ್ತಿದ್ದೇವೆ. ಜ್ಯೋತಿಷ್ಯಕ್ಕೆ ಬೇಕಾಗಿರುವುದು ಕಾಲ, ಕರ್ಮ, ಗುಣಚಕ್ರಗಳ ಸಮಗ್ರ ಸಮಾಚಾರ ಮಾತ್ರವೇಯೆಂದು ತಿಳಿಸುತ್ತಿದ್ದೇವೆ. ಗುಣಚಕ್ರದಲ್ಲಿನ ಗುಣಗಳನ್ನು, ಜೀವಿಯನ್ನು ಕುರಿತು ತಿಳಿದು ಕೊಂಡಿದ್ದೇವೆ. ಕರ್ಮಚಕ್ರದಲ್ಲಿನ ಕರ್ಮವನ್ನು ಕುರಿತು ತಿಳಿದು ಕೊಂಡಿದ್ದೇವೆ. ಆದರೆ ಕಾಲಚಕ್ರದಲ್ಲಿ ಗ್ರಹಗಳನ್ನು ಕುರಿತು ತಿಳಿದುಕೊಳ್ಳುವುದರಲ್ಲಿ ಸ್ವಲ್ಪ ಉಳಿದಿದೆ.

## (10) ಗ್ರಹಗಳೆಂದರೆ ಏನು? ಅವು ಎಷ್ಟು ಇವೆ?

ಈಗ ಸ್ವಲ್ಪ ಉಳಿದಿರುವ ಕಾಲಚಕ್ರದಲ್ಲಿನ ಗ್ರಹಗಳನ್ನು ಕುರಿತು, ಅವುಗಳ ಕೆಲಸವನ್ನು ಕುರಿತು, ಅವುಗಳ ಸಂಖ್ಯೆಯನ್ನು ಕುರಿತು ತಿಳಿದುಕೊಳ್ಳೋಣ. ಗ್ರಹ ಎಂದರೇ ಗ್ರಹಿಸುವುದೆಂದು ಅರ್ಥ. ನೀರು ಉಪ್ಪನ್ನು ಗ್ರಹಿಸುವಂತೆ, ಗಾಳಿ ವಾಸನೆಯನ್ನು ಗ್ರಹಿಸುವಂತೆ ಗ್ರಹ ಕರ್ಮವನ್ನು ಗ್ರಹಿಸುತ್ತದೆ. ಗುಣಚಕ್ರದಲ್ಲಿನ ಗುಣದಿಂದ ನಡೆದ ಕಾರ್ಯದಲ್ಲಿ, ಹೊಸ ಕರ್ಮ ಹುಟ್ಟುತ್ತಿದೆಯೆಂದು ತಿಳಿದುಕೊಂಡಿದ್ದೇವೆ. ಹಾಗೆ ಹುಟ್ಟಿದ ಕರ್ಮವನ್ನು ಕಾಲಚಕ್ರದಲ್ಲಿನ ಗ್ರಹಗಳು ಗ್ರಹಿಸಿಕೊಂಡು, ಕರ್ಮಚಕ್ರದಲ್ಲಿ ನಿಲ್ಲುವಂತೆ ಮಾಡುತ್ತವೆ. ನಿತ್ಯ ಜೀವನದಲ್ಲಿ ಕರ್ಮವನ್ನು ಯಾವ ಗ್ರಹ ಗ್ರಹಿಸಿ ಕರ್ಮಚಕ್ರದಲ್ಲಿ ನೆಲೆಸುವಂತೆ ಮಾಡುತ್ತಿದೆಯೋ, ಅದೇ ಗ್ರಹ, ಅದೇ ಪ್ರಾರಬ್ಧಕರ್ಮವನ್ನು ಸಮಯಬಂದಾಗ ಜೀವಿಯ ಮೇಲೆ ಪ್ರಸರಿಸುವಂತೆ ಮಾಡುತ್ತದೆ. ಸೃಷ್ಠಿಕರ್ತನಾದ ದೇವರಿಂದ ತಯಾರು ಮಾಡಲ್ಪಟ್ಟ ಗ್ರಹಗಳು, ಕಾಲಚಕ್ರದಲ್ಲಿ ಪ್ರತಿಷ್ಠಿಸಲ್ಪಟ್ಟು ಅಲ್ಲಿಂದ ಗುಣಚಕ್ರದಲ್ಲಿ ತಯಾರಾಗುವ ಕರ್ಮವನ್ನು ಗ್ರಹಿಸಿ, ಕರ್ಮಚಕ್ರದಲ್ಲಿ ನೆಲೆಸುವಂತೆ ಮಾಡುತ್ತಿವೆ. ಹಾಗೆ ಗುಣಗಳಿಂದ ಗ್ರಹಗಳು ಗ್ರಹಿಸುವ ಹೊಸ ಕರ್ಮವನ್ನು 'ಆಗಾಮಿಕರ್ಮ ಎನ್ನುತ್ತಿದ್ದೇವೆ. ಕರ್ಮಚಕ್ರದಲ್ಲಿಂದ ಗ್ರಹಿಸಿ ಜೀವಿಯ ಮೇಲೆ ಬಿಡಲ್ಪಡುವ ಕರ್ಮವನ್ನು 'ಪ್ರಾರಬ್ಧಕರ್ಮ' ಎನ್ನುತ್ತಿದ್ದೇವೆ. ಜ್ಯೋತಿಷ್ಯಕ್ಕೆ ಪ್ರಾರಬ್ಧಕರ್ಮ ಒಂದರ ವಿಧಿ ವಿಧಾನವಿದೆ. ಗುಣಚಕ್ರದಲ್ಲಿ ತಯಾರಾಗುವ ಹೊಸಕರ್ಮ 108 ವಿಧಗಳಾಗಿದ್ದು, ಗುಣಗಳು ಮುಖ್ಯವಾದವು ಹನ್ನೆರಡು ಇವೆ. ಕಾಲಚಕ್ರದಲ್ಲಿನ 12 ಗ್ರಹಗಳು, ಗುಣಚಕ್ರದಲ್ಲಿನ 12 ಗುಣಗಳ ಗುಂಪಿನಿಂದ ಗ್ರಹಿಸಿದ ಕರ್ಮವನ್ನು, ಕರ್ಮಚಕ್ರದಲ್ಲಿರುವ 12 ಭಾಗಗಳಲ್ಲಿ ನೆಲೆ ಇರಿಸುತ್ತಿವೆ. ಗುಣಚಕ್ರದಲ್ಲಿನ 12 ಗುಣಗಳು ತಯಾರು ಮಾಡುವ ಕರ್ಮವನ್ನು, ಕರ್ಮಚಕ್ರದಲ್ಲಿ 12 ಭಾಗಗಳಲ್ಲಿ ನೆಲೆಸುವಂತೆ ಮಾಡುವ 12 ಗ್ರಹಗಳು ಕಾಲಚಕ್ರದಲ್ಲಿನ 12 ಭಾಗಗಳಲ್ಲಿವೆ. ಇಲ್ಲಿ ವಿಚಿತ್ರವೇನೆಂದರೇ! ಇಲ್ಲಿಯವರೆಗು ಯಾರಿಗೂ ತಿಳಿಯದ ಗ್ರಹಗಳ

ಸಂಖ್ಯೆ ನಮಗೆ ತಿಳಿದಿದೆ. ಕಾಲಚಕ್ರದಲ್ಲಿನ 12 ಗ್ರಹಗಳು ಅದೇ ಚಕ್ರದಲ್ಲಿನ 12 ಭಾಗಗಳನ್ನು ತಮ್ಮ ಸ್ವಂತಸ್ಥಾನಗಳಾಗಿ ಏರ್ಪಡಿಸಿಕೊಂಡಿವೆ.

ಗುಣಚಕ್ರದಲ್ಲಿನ ಎರಡು ವರ್ಗಗಳ ಗುಣಗಳನ್ನನುಸರಿಸಿ, ಪಾಪಪುಣ್ಯ ಎನ್ನುವ ಎರಡು ವರ್ಗಗಳ ಕರ್ಮ ತಯಾರಾಗುತ್ತಿದೆ. ಆ ಕರ್ಮವನ್ನು ಕರ್ಮಚಕ್ರದಲ್ಲಿ ಎರಡು ವರ್ಗಗಳಾಗಿಯೇ ಸ್ಥಾಪಿಸುವುದಕ್ಕೆ ಗ್ರಹಗಳು ಕೂಡಾ ಎರಡು ವರ್ಗಗಳಾಗಿವೆ. ಹಾಗೆ ಏರ್ಪಟ್ಟ ಒಂದೊಂದು ವರ್ಗದಲ್ಲಿ ಆರು ಗ್ರಹಗಳಿರುವಾಗ, ಎರಡು ವರ್ಗಗಳಲ್ಲಿ 12 ಗ್ರಹಗಳು ಇವೆ. ಕಷ್ಟಕ್ಕೆ ವಿರುದ್ಧವಾದುದು ಸುಖ. ಹಾಗೆಯೇ ಪಾಪಕ್ಕೆ ವಿರುದ್ಧವಾದುದು ಪುಣ್ಯ. ಇವುಗಳನ್ನು ಗ್ರಹಿಸುವ ಗ್ರಹಗಳು ಕೂಡಾ ಎರಡು ವರ್ಗಗಳಾಗಿ, ಒಂದಕ್ಕೊಂದು ವಿರುದ್ಧವಾಗಿವೆ. ಕರ್ಮವನ್ನನುಸರಿಸಿ ಎರಡು ವರ್ಗಗಳಾದ ಗ್ರಹಗಳಲ್ಲಿ, ಒಂದೊಂದು ವರ್ಗಕ್ಕೆ ಒಂದೊಂದು ಗ್ರಹ ಆಧಿಪತ್ಯ(ನಾಯಕತ್ವ) ವಹಿಸುತ್ತಿವೆ. ಹಾಗೆ ಏರ್ಪಟ್ಟ ಎರಡು ವರ್ಗಗಳೊಂದರ ಅಧಿಪತಿಗಳು ಒಬ್ಬರು ಗುರು, ಮತ್ತೊಬ್ಬರು ಶನಿ. ಇವರನ್ನು ಅನುಸರಿಸಿ ಉಳಿದ ಗ್ರಹಗಳನ್ನು ಗುರು ವರ್ಗ(ಗುರುಪಾರ್ಟಿ) ಗ್ರಹಗಳೆಂದು, ಶನಿವರ್ಗ (ಶನಿಪಾರ್ಟಿ) ಗ್ರಹಗಳೆಂದು ಹೇಳುತ್ತಿದ್ದೇವೆ. ಒಂದು ವರ್ಗಕ್ಕೆ ಶನಿ ನಾಯಕನಾಗಿದ್ದು, ಆತನ ಅಧೀನದಲ್ಲಿ ಉಳಿದ ಐದು ಗ್ರಹಗಳಿರುತ್ತವೆ. ಹಾಗೆಯೇ ಮತ್ತೊಂದು ವರ್ಗಕ್ಕೆ ಗುರು ನಾಯಕನಾಗಿದ್ದು, ಆತನ ಅಧೀನದಲ್ಲಿ ಉಳಿದ ಐದು ಗ್ರಹಗಳಿರುತ್ತವೆ.

## 11 12 ಗ್ರಹಗಳು ಯಾವುವು?

ಗುಣಗಳು 12 ವಿಧಗಳಿವೆ. 12 ಗುಣಗಳಲ್ಲಿ ಬರುವ ಕರ್ಮಗಳು 12 ವಿಧಗಳಿವೆ. 12 ಗುಣಗಳಲ್ಲಿ ಹುಟ್ಟುವ 12 ವಿಧಗಳ ಕರ್ಮಗಳನ್ನು ಗ್ರಹಿಸುವ ಗ್ರಹಗಳು ಕೂಡಾ 12 ಇವೆ. ಗ್ರಹಗಳು ನಿವಾಸಿಸುವ ಕಾಲಚಕ್ರ ಕೂಡ 12 ಭಾಗಗಳಾಗಿದೆ. ಕರ್ಮಚಕ್ರ ಕೂಡ 12 ವಿಧಗಳ ಕರ್ಮಗಳು ನೆಲೆಸುವುದಕ್ಕೆ

12 ಭಾಗಗಳಾಗಿಯೇ ಇದೆ. ಕಾಲಚಕ್ರದಲ್ಲಿನ 12 ಭಾಗಗಳಲ್ಲಿ ಸ್ವಂತ ಸ್ಥಾನಗಳನ್ನು ಏರ್ಪಡಿಸಿಕೊಂಡ 12 ಗ್ರಹಗಳ ಹೆಸರುಗಳು ಕ್ರಮವಾಗಿ ಈ ವಿಧವಾಗಿ ಇವೆ. 1. ರವಿ 2. ಚಂದ್ರ 3. ಕುಜ 4. ಬುಧ 5. ಗುರು 6. ಶುಕ್ರ 7. ಶನಿ 8. ರಾಹು 9. ಕೇತು 10 ಭೂಮಿ 11. ಮಿತ್ರ 12. ಚಿತ್ರ. ಸೂರ್ಯಕುಟುಂಬದಲ್ಲಿನ ಗ್ರಹಗಳಲ್ಲಿ ಭೂಮಿ ಕೂಡ ಇದೆ. ಆದ್ದರಿಂದ ಅದನ್ನು ಎಲ್ಲರೂ ಒಪ್ಪಿಕೊಳ್ಳುವುದಕ್ಕೆ ಅವಕಾಶವಿದೆ. ಆದರೆ ಯಾರೂ ಇಲ್ಲಿಯವರೆಗು ಕೇಳದಿರುವವು ಮತ್ತು ತಿಳಿಯದಿರುವವಾದ ಮಿತ್ರ, ಚಿತ್ರ ಎನ್ನುವ ಎರಡು ಗ್ರಹಗಳು ಕೂಡ ಇವೆ. ಇಲ್ಲಿಯವರೆಗು ಖಗೋಳಶಾಸ್ತ್ರ ಪರಿಶೋಧಕರಿಗು ಕೂಡ ಈ ಎರಡು ಗ್ರಹಗಳ ಇರುವಿಕೆ (ಸಮಾಚಾರ) ತಿಳಿದಿಲ್ಲ. ಖಗೋಳಶಾಸ್ತ್ರ ಪರಿಶೋಧಕರು ಭವಿಷ್ಯತ್ತಿನಲ್ಲಿ ಈ ಎರಡು ಗ್ರಹಗಳನ್ನು ಕುರಿತು ಹೇಳಬಹುದೇನೊ ಆದರೆ, ಇಲ್ಲಿಯವರೆಗು ಅವುಗಳ ವಿವರ ಸ್ವಲ್ಪವೂ ಅವರಿಗೆ ತಿಳಿದಿಲ್ಲ. ಈ ಎರಡು ಗ್ರಹಗಳನ್ನು ಕಂಡುಹಿಡಿಯುವುದು ಸ್ವಲ್ಪ ಕಷ್ಟದಿಂದ ಕೂಡಿಕೊಂಡ ಕೆಲಸವೇಯೆಂದು ಹೇಳಬಹುದು. ಇಲ್ಲಿ ಕೆಲವರು ಮೇಧಾವಿಗಳು ನಮ್ಮನ್ನು ಈ ವಿಧವಾಗಿ ಪ್ರಶ್ನಿಸಬಹುದು ಇಲ್ಲಿಯವರೆಗು ಖಗೋಳಶಾಸ್ತ್ರಜ್ಞರಿಗೇ ತಿಳಿಯದ ಎರಡು ಗ್ರಹಗಳ ವಿವರವು ನಿಮಗೆ ಯಾವ ಪರಿಶೋಧನೆ ಮೂಲಕ ತಿಳಿದಿದೆ? ಮೇಲಾಗಿ ಈ ಎರಡು ಗ್ರಹಗಳನ್ನು ಕಂಡಹಿಡಿಯುವುದು ಕಷ್ಟದಿಂದ ಕೂಡಿಕೊಂಡ ಕೆಲಸ ಎಂದಿದ್ದೀರ. ಆ ವಿಷಯವನ್ನು ನೀವು ಹೇಗೆ ಹೇಳುತ್ತಿದ್ದೀರೆಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಈ ವಿಧವಾಗಿದೆ.

ಇರುವ ವಿದ್ಯೆಯನ್ನು ಶೋಧಿಸಿ ತಿಳಿದುಕೊಳ್ಳುತ್ತಿರುವವನು ವಿದ್ಯಾರ್ಥಿ ಆಗುತ್ತಾನೆ. ಪೂರ್ತಿ ವಿದ್ಯೆಯನ್ನು ಕಲಿತವನು ವಿದ್ವಾಂಸ ಆಗುತ್ತಾನೆ. ವಿದ್ಯಾರ್ಥಿಯನ್ನು, ವಿದ್ವಾಂಸ ಎಂದು ಅನ್ನಲಾರೆವು. ಹಾಗೇ ಇರುವ ಶಾಸ್ತ್ರವನ್ನು ಶೋಧಿಸಿ ತಿಳಿದುಕೊಳ್ಳುವವನು ಶಾಸ್ತ್ರ ಪರಿಶೋಧಕನಾಗುತ್ತಾನೆ. ಶಾಸ್ತ್ರಜ್ಞ ಆಗುವುದಿಲ್ಲ! ಮತ್ತು ಶಾಸ್ತ್ರಜ್ಞನಲ್ಲ. ನಮ್ಮ ದೃಷ್ಠಿಯಲ್ಲಿ ಖಗೋಳಶಾಸ್ತ್ರ ಪರಿಶೋಧಕರಿದ್ದಾರೆ ಆದರೆ, ಖಗೋಳ ಶಾಸ್ತ್ರಜ್ಞರಿಲ್ಲ. ಪೂರ್ತಿ ಶಾಸ್ತ್ರವನ್ನು

ತಿಳಿಯುವವರೆಗು, ಯಾರೂ ಶಾಸ್ತ್ರಜ್ಞರು ಆಗಲಾರರು. ಈದಿನ ಖಗೋಳವನ್ನು ಪರಿಶೋಧಿಸುವ ಶೋಧಕರಿದ್ದಾರೆ ಆದರೆ, ಪೂರ್ತಿ ತಿಳಿದ ಶಾಸ್ತ್ರಜ್ಞರು ಇಲ್ಲ. ಆದ್ದರಿಂದ ಭವಿಷ್ಯತ್ತಿನಲ್ಲಿ ಇಲ್ಲಿಯವರೆಗು ಹೇಳದ ಎರಡು ಗ್ರಹಗಳ ವಿವರವನ್ನು ಯಾರಾದರೂ ಹೇಳಬಹುದೇನೊ ಎಂದಿದ್ದೇವೆ. ಮಿತ್ರ, ಚಿತ್ರ ಎನ್ನುವ ಎರಡು ಗ್ರಹಗಳನ್ನು ಕಂಡುಹಿಡಿಯುವುದು ಸ್ವಲ್ಪ ಕಷ್ಟದಿಂದ ಕೂಡಿಕೊಂಡ ಕೆಲಸ ಎಂದು ಕೂಡ ಹೇಳಿದ್ದೇವೆ. ಹಾಗೆ ಹೇಳುವುದಕ್ಕೆ ಕಾರಣವೇನೆಂದರೇ! ಮಿತ್ರ ಗ್ರಹ ಕತ್ತಲಿಂದ ಕೂಡಿಕೊಂಡಿದೆ. ಅದರ ಮೇಲೆ ಯಾವ ಬೆಳಕೂ ಪ್ರಸರಿಸುವುದಿಲ್ಲ. ಯಾವ ಬೆಳಕೂ ಅದರ ಮೇಲೆ ಪ್ರತಿಬಿಂಬಿಸುವುದಿಲ್ಲ. ಯಾವ ರೇಡಿಯೇಷನ್ ಕಿರಣಗಳು ಅದನ್ನು ತಾಕಲಾರವು. ಇನ್ನು ಎರಡನೆ ಗ್ರಹವಾದ 'ಚಿತ್ರಗ್ರಹ' ಅನೇಕ ಬಣ್ಣಗಳಿರುವುದಾಗಿ, 24 ಗಂಟೆಗಳಲ್ಲಿ ಕೆಲವು ನಿಮಿಷಗಳು ಮಾತ್ರವೇ ಗೋಚರಿಸುತ್ತದೆ. ಉಳಿದ ಸಮಯದಲ್ಲಿ ಅದೃಶ್ಯವಾಗಿರುತ್ತದೆ. ಕೆಲವು ನಿಮಿಷಗಳು ಮಾತ್ರವೇ ಕಾಣಿಸುವ ಅದೃಶ್ಯಗ್ರಹವನ್ನು ಚಿತ್ರ ಗ್ರಹ ಎನ್ನುತ್ತೇವೆ. ಆದ್ದರಿಂದ ಕಾಣಿಸದ ಚಿತ್ರ ಗ್ರಹವನ್ನಾಗಲಿ, ಕತ್ತಲ ಗ್ರಹವಾದ ಮಿತ್ರ ಗ್ರಹವನ್ನಾಗಲಿ ಕಂಡುಹಿಡಿಯುವುದು ಕಷ್ಟವೆಂದಿದ್ದೇವೆ. ನೀವು ಯಾವ ಪರಿಶೋಧನೆ ಮೂಲಕ ಹೇಳುತ್ತಿದ್ದೀರೆಂದು ನನ್ನನ್ನು ಕೇಳಿದರೆ, ನನ್ನ ಉತ್ತರ ಏನೆಂದರೇ! ನನ್ನ ಪರಿಶೋಧನೆ ಯಾವುದಾದರೂ ಹೊರಗಾಗಲಿ, ಹೊರಗಿನ ಪರಿಕರಗಳ ಮೂಲಕವಾಗಲಿ ಸ್ವಲ್ಪವೂ ಇರುವುದಿಲ್ಲ. ನನ್ನ ಶೋಧನೆಯೆಲ್ಲಾ ಶರೀರಾಂತರದಲ್ಲಿಯೇ ಇರುತ್ತದೆ. ಶರೀರದಲ್ಲಿನ ಬ್ರಹ್ಮನಾಡಿಯಲ್ಲಿ ಸಮಸ್ತ ವಿಶ್ವವು ಒಳಗೊಂಡಿದೆ. ಶರೀರಾಂತರ ಬ್ರಹ್ಮನಾಡಿಯಲ್ಲಿಯೇ ಷಟ್‌ಶಾಸ್ತ್ರಗಳು ಒಳಗೊಂಡಿವೆ. ಸಕಲ ವಿದ್ಯೆಗಳೂ ಬ್ರಹ್ಮನಾಡಿಯಲ್ಲಿಯೇ ಇವೆ. ಉದಾಹರಣೆಗೆ ಹೊರಗಿನ ವಿದ್ಯೆಯನ್ನು ಕಲಿಯದ ಚಿಕ್ಕ ವಯಸ್ಸಿನವರು ಕೂಡ, ಎಷ್ಟೋ ವಿದ್ಯಾ ಪ್ರಾವೀಣ್ಯರಂತೆ ಕಾಣಿಸುತ್ತಿದ್ದಾರೆ. ಅವರಲ್ಲಿಯೇ ವಿದ್ಯೆ ಇರುವುದರಿಂದ, ಅದು ಒಳಗೇ ಪ್ರಾಪ್ತಿಸಿರುವುದರಿಂದ, ಅವರು ಆ ವಿದ್ಯೆಯಲ್ಲಿ ಪ್ರಾವೀಣ್ಯರಾಗಿ ಕಾಣಿಸುತ್ತಿದ್ದಾರೆ.


ಹೊರಗೆ ಕಾಣಿಸುವ ಸಮಸ್ತವೂ ನಮ್ಮ ಬ್ರಹ್ಮನಾಡಿಯಲ್ಲಿ ಇರುವುದಲ್ಲದೆ, ಈ ಸಮಸ್ತವನ್ನು ಸೃಷ್ಟಿಸಿದ ದೇವರು ಕೂಡ ನಮ್ಮಲ್ಲಿಯೇ ಇದ್ದಾನೆ. ಮನುಷ್ಯ ಹೊರಗೆ ಎಲ್ಲಿ ಹುಡುಕಿದರು ದೇವರು ಕಾಣಿಸುವುದಿಲ್ಲ. ಹೊರಗೆ ಕಾಣಿಸದ ದೇವರನ್ನು ಕೂಡ ಮನುಷ್ಯ ತನ್ನ ಶರೀರದೊಳಗೇ ತಿಳಿಯಬಹುದು, ಹೊಂದಬಹುದು. ಕೊನೆಗೆ ಮೋಕ್ಷವನ್ನು ಹೊಂದಬೇಕಾಗಿರುವುದು ಕೂಡಾ ಶರೀರದಲ್ಲಿಯೇ. ಪ್ರಕೃತಿಯನ್ನು ಸೃಷ್ಟಿಸಿದ ದೇವರೇ ಶರೀರದಲ್ಲಿದ್ದರೆ, ಉಳಿದವುಗಳನ್ನು ಕುರಿತು ಹೊರಗೆ ಹುಡುಕಬೇಕಾದ ಕೆಲಸವಿಲ್ಲ. ಪೂರ್ವದಲ್ಲಿ ಮಹರ್ಷಿಗಳು, ಹೊರಗಿನ ಪರಿಶೋಧನೆ ಇಲ್ಲದೆಯೇ ಸೂರ್ಯ, ಚಂದ್ರ, ನಕ್ಷತ್ರ ಗತಿಗಳನ್ನು, ಗ್ರಹಣಗಳನ್ನು ಹೇಳಿದ್ದಾರೆಂದು ಮರೆಯಬಾರದು. ಇಂದಿನ ಶಾಸ್ತ್ರ ಪರಿಶೋಧಕರು ಹೇಳದ ವಿಷಯಗಳನ್ನು ಮೊದಲೇ ಯಾವ ಪರಿಶೋಧನೆ ಇಲ್ಲದೇ ಹೇಳಿದ ಘನತೆ ಇಂದೂದೇಶದ ಜ್ಞಾನಿಗಳಿಗೆ ಇದೆ. ಗತದಲ್ಲಿ ನಾವು ಹೇಳಿದ **"ಜನನ ಮರಣ ಸಿದ್ಧಾಂತ"**ವಾಗಲಿ, **"ಆಧ್ಯಾತ್ಮಿಕ ರಹಸ್ಯಗಳು"** ಆಗಲಿ ಅಂತರಂಗ ಪರಿಶೋಧನೆಯೊಳಗಿನವೇ ಎಂದು ತಿಳಿಸುತ್ತಿದ್ದೇವೆ. ಆ ಪದ್ಧತಿ ಪ್ರಕಾರವೇ ಈಗ ಹೇಳಿದ 12 ಗ್ರಹಗಳ ವಿವರವೆಂದು ತಿಳಿಯಬೇಕು. ಕತ್ತಲ ಗ್ರಹವಾದ ಮಿತ್ರ ಗ್ರಹವಾಗಲಿ, ಅದೃಶ್ಯ ರೂಪದಿಂದ, ಕೆಲವು ಕ್ಷಣಗಳು ಮಾತ್ರ ಕಾಣಿಸುವ ಚಿತ್ರ ಗ್ರಹವಾಗಲಿ ಇಂದಿಗೂ ಹೊಸವೇ. ಆದರೂ ಇವುಗಳ ಪಾತ್ರ ಜ್ಯೋತಿಷ್ಯದಲ್ಲಿ ಬಹಳ ಇದೆ. ಇವುಗಳ ಪಾತ್ರವನ್ನು ಬಿಟ್ಟುಹಾಕಿದ ಇಂದಿನ ಜ್ಯೋತಿಷ್ಯದಲ್ಲಿ ಶಾಸ್ತ್ರೀಯತೆ ಲೋಪಿಸಿದೆಯೆಂದೇ ಹೇಳಬಹುದು. ಜ್ಯೋತಿಷ್ಯವು ಶಾಸ್ತ್ರವಾಗಿ ನಿರೂಪಿಸಲ್ಪಡಬೇಕೆಂದರೆ ಗ್ರಹಗಳ ಸಂಖ್ಯೆ 12 ಆಗಿಯೇ ಇರಬೇಕು.

## 12 ಕಾಲಚಕ್ರದಲ್ಲಿ 12 ಗ್ರಹಗಳ ಸ್ವಂತ ಸ್ಥಾನಗಳು ಯಾವುವು?

ಬ್ರಹ್ಮ, ಕಾಲ, ಕರ್ಮ, ಗುಣಚಕ್ರಗಳ ಸಮುದಾಯಗಳ ಸಮೂಹದಲ್ಲಿ ಕೆಳಗಿನಿಂದ ಮೂರನೇ ಚಕ್ರ ಕಾಲಚಕ್ರವೆಂದು ಮೊದಲೇ ಹೇಳಿಕೊಂಡಿದ್ದೇವೆ. ಕಾಲಚಕ್ರ 12 ಭಾಗಗಳಾಗಿ ಇದೆಯೆಂದು ಹೇಳಿಕೊಂಡಿದ್ದೇವೆ. ಆ ಹನ್ನೆರಡು ಭಾಗಗಳ ಹೆಸರುಗಳು 1) ಮೇಷ 2) ವೃಷಭ 3) ಮಿಥುನ 4) ಕರ್ಕಾಟಕ 5) ಸಿಂಹ 6) ಕನ್ಯಾ 7) ತುಲಾ 8) ವೃಶ್ಚಿಕ 9) ಧನಸ್ಸು 10) ಮಕರ 11) ಕುಂಭ 12) ಮೀನ ಎಂದು ಹೇಳಿಕೊಂಡಿದ್ದೇವೆ. ಕಾಲಚಕ್ರದಲ್ಲಿನ ಮೇಷಾದಿ 12 ಲಗ್ನಗಳನ್ನು ಕೆಳಗೆ 13ನೇ ಚಿತ್ರದಲ್ಲಿ ದುಂಡಾಗಿ ಮತ್ತು ಚತುರಸ್ರಾಕಾರವಾಗಿ ನೋಡಬಹುದು.

| | | | |
|---|---|---|---|
| ಮೀನ | ಮೇಷ | ವೃಷಭ | ಮಿಥುನ |
| ಕುಂಭ | **ಕಾಲಚಕ್ರ** | | ಕರ್ಕಾಟಕ |
| ಮಕರ | | | ಸಿಂಹ |
| ಧನಸ್ಸು | ವೃಶ್ಚಿಕ | ತುಲಾ | ಕನ್ಯಾ |

**ಕಾಲಚಕ್ರ (a)** 13ನೇ **ಚಿತ್ರ**




ಕಾಲಚಕ್ರ (b) 13ನೇ ಚಿತ್ರ

ಇಲ್ಲಿ ಕಾಲಚಕ್ರದಲ್ಲಿನ ಮೇಷಾದಿ ದ್ವಾದಶ ಭಾಗಗಳಲ್ಲಿ 12 ಗ್ರಹಗಳ ಸ್ವಂತ ಸ್ಥಾನಗಳನ್ನು ಕೆಳಗೆ 14ನೇ ಚಿತ್ರದಲ್ಲಿ ನೋಡಬಹುದು.

| | | | |
|---|---|---|---|
| ಗುರು<br>ಮೀನ | ಕುಜ<br>ಮೇಷ | ಮಿತ್ರ<br>ವೃಷಭ | ಚಿತ್ರ<br>ಮಿಥುನ |
| ಶನಿ<br>ಕುಂಭ | **ಕಾಲಚಕ್ರ** | | ಚಂದ್ರ<br>ಕರ್ಕಾಟಕ |
| ರಾಹು<br>ಮಕರ | | | ರವಿ<br>ಸಿಂಹ |
| ಕೇತು<br>ಧನಸ್ಸು | ಭೂಮಿ<br>ವೃಶ್ಚಿಕ | ಶುಕ್ರ<br>ತುಲಾ | ಬುಧ<br>ಕನ್ಯಾ |

**ಕಾಲಚಕ್ರ** 14ನೇ **ಚಿತ್ರ**

ಮೊದಲ ಪುಟದಲ್ಲಿನ ಚಿತ್ರವನ್ನು ಅನುಸರಿಸಿ ಹನ್ನೆರಡು ಗ್ರಹಗಳ ಸ್ವಂತ ಸ್ಥಾನಗಳು ಕೆಳಗೆ ಈ ವಿಧವಾಗಿವೆ.

| | | | |
|---|---|---|---|
| 1) | ಕುಜ ಗ್ರಹಕ್ಕೆ | – | ಮೇಷ ಭಾಗ ಸ್ವಂತ ಮನೆ |
| 2) | ಮಿತ್ರ ಗ್ರಹಕ್ಕೆ | – | ವೃಷಭ ಭಾಗ ಸ್ವಂತ ಮನೆ |
| 3) | ಚಿತ್ರ ಗ್ರಹಕ್ಕೆ | – | ಮಿಥುನ ಭಾಗ ಸ್ವಂತ ಮನೆ |
| 4) | ಚಂದ್ರ ಗ್ರಹಕ್ಕೆ | – | ಕರ್ಕಾಟಕ ಭಾಗ ಸ್ವಂತ ಮನೆ |
| 5) | ರವಿ(ಸೂರ್ಯ) ಗ್ರಹಕ್ಕೆ | – | ಸಿಂಹ ಭಾಗ ಸ್ವಂತ ಮನೆ |
| 6) | ಬುಧ ಗ್ರಹಕ್ಕೆ | – | ಕನ್ಯಾ ಭಾಗ ಸ್ವಂತ ಮನೆ |
| 7) | ಶುಕ್ರ ಗ್ರಹಕ್ಕೆ | – | ತುಲಾ ಭಾಗ ಸ್ವಂತ ಮನೆ |
| 8) | ಭೂಮಿ ಗ್ರಹಕ್ಕೆ | – | ವೃಶ್ಚಿಕ ಭಾಗ ಸ್ವಂತ ಮನೆ |
| 9) | ಕೇತು ಗ್ರಹಕ್ಕೆ | – | ಧನಸ್ಸು ಭಾಗ ಸ್ವಂತ ಮನೆ |
| 10) | ರಾಹು ಗ್ರಹಕ್ಕೆ | – | ಮಕರ ಭಾಗ ಸ್ವಂತ ಮನೆ |
| 11) | ಶನಿ ಗ್ರಹಕ್ಕೆ | – | ಕುಂಭ ಭಾಗ ಸ್ವಂತ ಮನೆ |
| 12) | ಗುರು ಗ್ರಹಕ್ಕೆ | – | ಮೀನ ಭಾಗ ಸ್ವಂತ ಮನೆ |

ನಮ್ಮಲ್ಲಿ ಕೆಲವರಿಗೆ ಸ್ವಂತ ಮನೆ ಇದ್ದರೂ, ಉದ್ಯೋಗದಲ್ಲಿರುವುದರಿಂದ ಸ್ವಂತ ಮನೆ ಬಿಟ್ಟು, ಬೇರೆ ಊರಿನಲ್ಲಿ ಇತರರ ಮನೆಯಲ್ಲಿ ಸ್ವಲ್ಪ ಕಾಲ ಸಂಸಾರ ಇರುವಂತೆ, ಗ್ರಹಗಳು ಕೂಡ ಅವುಗಳ ಕರ್ತವ್ಯ ನಿರ್ವಹಣೆಯಲ್ಲಿ ತಮ್ಮ ಸ್ವಂತ ಸ್ಥಾನಗಳನ್ನು ಬಿಟ್ಟು, ಇತರ ಗ್ರಹಗಳ ಸ್ವಂತ ಮನೆಗಳಲ್ಲಿ ಸ್ವಲ್ಪ ಕಾಲ ಇರಬೇಕಾದ ಕೆಲಸವಿರುತ್ತದೆ. ಆದ್ದರಿಂದ ಶಾಶ್ವತವಾಗಿ ಗ್ರಹಗಳು ಅವುಗಳ ಸ್ವಂತ ಮನೆಗಳಲ್ಲಿ ಇರುವುದಿಲ್ಲ.

## 13 ಕಾಲಚಕ್ರದಲ್ಲಿ ಮಿತ್ರ, ಶತ್ರು ಗ್ರಹಗಳು ಯಾವುವು?

ಜ್ಯೋತಿಷ್ಯವು ಆಧ್ಯಾತ್ಮಿಕದೊಂದಿಗೆ ಮುಡಿಪಟ್ಟಿದೆಯೆಂದು ಮೊದಲೇ ಹೇಳಿಕೊಂಡಿದ್ದೇವೆ. ಆಧ್ಯಾತ್ಮಿಕದ ಪ್ರಕಾರ ಪರಮಾತ್ಮ ಮೂರು ಆತ್ಮಗಳಾಗಿ ವಿಭಜಿಸಲ್ಪಟ್ಟಿದೆ. ಆ ಮೂರು ಆತ್ಮಗಳನ್ನೇ ಭಗವದ್ಗೀತೆಯಲ್ಲಿ ಪುರುಷೋತ್ತಮ ಪ್ರಾಪ್ತಿ ಯೋಗದಲ್ಲಿ ಕ್ಷರನು, ಅಕ್ಷರನು, ಪುರುಷೋತ್ತಮನೆಂದು ಹೇಳಿದ್ದಾರೆ. ಕ್ಷರನು ಎಂದರೇ ಪ್ರಕೃತಿಯಲ್ಲಿ ಬೆರೆತ ಆತ್ಮ ಆದ್ದರಿಂದ ಅದು ನಾಶವಾಗುವುದೆಂದು ಅರ್ಥ. ಅಕ್ಷರನು ಎಂದರೇ ನಾಶವಾಗದವನೆಂದು ಅರ್ಥ. ಪುರುಷೋತ್ತಮ ನೆಂದರೇ ಕ್ಷರನಿಗಿಂತಲೂ ಅಕ್ಷರನಿಗಿಂತಲೂ ಉತ್ತಮವಾದವ ನೆಂದು ಅರ್ಥ. ಈ ಮೂರು ಆತ್ಮಗಳನ್ನೇ ಅದ್ವೈತ, ದ್ವೈತವಲ್ಲದ ತ್ರೈತ ಅನ್ನುತ್ತಿದ್ದೇವೆ. ಈ ತ್ರೈತವನ್ನು ಎರಡು ಭಾಗಗಳಾಗಿ ವಿಭಜಿಸಬಹುದು. ಕರ್ಮವಿರುವ ಆತ್ಮಗಳು, ಕರ್ಮವಿಲ್ಲದ ಆತ್ಮಗಳು ಎಂದು ವಿಭಜಿಸಿ ನೋಡಿದರೆ, ಕರ್ಮವಿರುವ ಆತ್ಮ ಕ್ಷರನು ಎನ್ನುವ ಜೀವಾತ್ಮ ಎಂದು ತಿಳಿಯುತ್ತಿದೆ. ಕರ್ಮವಿಲ್ಲದಿರುವವು ಎರಡು ಆತ್ಮಗಳು ಇವೆ. ಅವು ಅಕ್ಷರನು ಎನ್ನುವ ಆತ್ಮ, ಪುರುಷೋತ್ತಮನೆನ್ನುವ ಪರಮಾತ್ಮ ಎಂದು ತಿಳಿಯುತ್ತಿದೆ. ಈ ಎರಡು ಭಾಗಗಳಲ್ಲಿ ಕರ್ಮವಿಲ್ಲದ ಅಕ್ಷರ, ಪುರುಷೋತ್ತಮ ಆತ್ಮಗಳು ದೊಡ್ಡವೆಂದು, ಕರ್ಮದಿಂದ ಕೂಡಿಕೊಂಡ ಕ್ಷರಾತ್ಮ ಕಡಿಮೆಯದೆಂದು ತಿಳಿಯುತ್ತಿದೆ. ಮೂರು ಆತ್ಮಗಳಲ್ಲಿ ದೊಡ್ಡವು, ಚಿಕ್ಕವು ಎಂದು ತಿಳಿಯುವಂತೆ 2:1 ಆಗಿ ಹೇಳಿಕೊಳ್ಳಬಹುದು. ಕರ್ಮ ವಿಧಾನವನ್ನು ಅನುಸರಿಸಿ ಅವುಗಳನ್ನೇ ಸರಿ, ಬೆಸ ಎನ್ನುತ್ತೇವೆ. 2:1 ಎಂದರೂ, ಸರಿ, ಬೆಸ ಎಂದರೂ, ಕರ್ಮವಿಲ್ಲದ ಪರಮಾತ್ಮ ಆತ್ಮಗಳು ಎರಡು ಎಂದೂ, ಕರ್ಮವಿರುವ ಜೀವಾತ್ಮ ಒಂದು ಎಂದೂ ಅರ್ಥ. ಪ್ರತಿ ಜೀವರಾಶಿ ಶರೀರದಲ್ಲಿಯೂ 2:1 ಇದೆಯೆಂದು ಮತ್ತು ಸರಿ ಬೆಸ ಇದೆಯೆಂದು ಹೇಳಬಹುದು. ದೇವರಿಗು ಜೀವಿಗು ಗುರುತಿಗೆ 2:1 ಎಂದು ಸರಿ ಬೆಸ ಅನ್ನಬಹುದು. ಈ ಸರಿ ಬೆಸ ಜ್ಯೋತಿಷ್ಯದಲ್ಲಿಯೂ ಉಪಯೋಗಪಡುತ್ತಿದೆ. ಅದು ಹೇಗೆ ಉಪಯೋಗಪಡುತ್ತಿದೆಯೆಂದರೇ!

ಕಾಲಚಕ್ರದಲ್ಲಿನ 12 ಭಾಗಗಳಲ್ಲಿ 2:1 ಪ್ರಕಾರ, ಅಂದರೆ ಒಂದು ಸರಿ ಸಂಖ್ಯೆ, ಒಂದು ಬೆಸಸಂಖ್ಯೆ ಭಾಗಗಳನ್ನು ತೆಗೆದುಕೊಂಡು ಆ ಎರಡು ಭಾಗಗಳು ಯಾವ ಗ್ರಹಗಳಿಗೆ ಸ್ವಂತ ಸ್ಥಾನದಲ್ಲಿ ನೋಡಿಕೊಳ್ಳಬೇಕು. ಈ ಸರಿ ಬೆಸ ಸೂತ್ರದ ಪ್ರಕಾರ, ಕಾಲಚಕ್ರದಲ್ಲಿನ ಹನ್ನೆರಡು ಭಾಗಗಳನ್ನು ವಿಭಜಿಸಿ ನೋಡಿದರೆ, ಸರಿ ಬೆಸ ಎರಡು ಭಾಗಗಳ ಪ್ರಕಾರ ಒಟ್ಟು ಆರು ಸರಿ, ಬೆಸ ಭಾಗಗಳು ಬರುತ್ತವೆ. ಮೊದಲು ಸರಿ, ಬೆಸ ಭಾಗಗಳು ಎರಡು ಒಂದು ಪಕ್ಷದಲ್ಲಿಟ್ಟು, ಎರಡನೆ ಸರಿ, ಬೆಸ ಭಾಗಗಳನ್ನು ಮತ್ತೊಂದು ಪಕ್ಷದಲ್ಲಿಟ್ಟು, ಎಲ್ಲಾ ಭಾಗಗಳನ್ನು ನೋಡಿದರೆ ಒಟ್ಟು ಆರು ಗ್ರಹಗಳು ಒಂದು ಪಕ್ಷವಾಗಿದ್ದು, ಉಳಿದ ಆರು ಗ್ರಹಗಳು ಮತ್ತೊಂದು ಪಕ್ಷವಾಗುತ್ತಿವೆ. ಈ ಎರಡು ಪಕ್ಷಗಳನ್ನು ಮಿತ್ರ ಶತ್ರು ಪಕ್ಷಗಳು ಎನ್ನುತ್ತಿದ್ದೇವೆ. 2:1 ಎನ್ನುವ ಆತ್ಮಗಳ ನಿಷ್ಪತ್ತಿ ಪ್ರಕಾರ ಕಾಲಚಕ್ರದಲ್ಲಿ ಹನ್ನೆರಡು ಭಾಗಗಳನ್ನು ವಿಭಜಿಸಿ ನೋಡಿದರೆ, ಗ್ರಹಗಳ ಎರಡು ವರ್ಗಗಳು ತಿಳಿಯುತ್ತವೆ. ಈ ವಿಧಾನವನ್ನು ನಂತರ ಪುಟದಲ್ಲಿ 15ನೇ ಚಿತ್ರದಲ್ಲಿ ನೋಡಿರಿ.

15ನೇ ಚಿತ್ರದಲ್ಲಿ ಒಂದು ಸರಿ, ಒಂದು ಬೆಸ ಮನೆಯನ್ನು ತೆಗೆದುಕೊಂಡು, ವಿಭಜಿಸುವುದು ನಡೆದಿದೆ. ಅದರ ಪ್ರಕಾರ, ಕಾಲಚಕ್ರದಲ್ಲಿ ಎಲ್ಲಿಂದ ಪ್ರಾರಂಭ ಮಾಡಿದರೂ ಸರಿ ಬೆಸ ಸೂತ್ರದ ಮೇಲೆಯೇ ವಿಭಜಿಸಬೇಕು. ಅದರ ಪ್ರಕಾರ ಮೊದಲ 12ನೇ ಮೀನ ಭಾಗವನ್ನು 1ನೇ ಮೇಷ ಭಾಗವನ್ನು ತೆಗೆದುಕೊಂಡು ಅದರಲ್ಲಿನ ಎರಡು ಗ್ರಹಗಳನ್ನು ಒಂದು ಪಕ್ಷದಲ್ಲಿ ಸೇರಿಸಿ, ಬಳಿಕ 2ನೇ ವೃಷಭ ಭಾಗವನ್ನು 3ನೇ ಮಿಥುನ ಭಾಗವನ್ನು ತೆಗೆದುಕೊಂಡು, ಅದರಲ್ಲಿನ ಎರಡು ಗ್ರಹಗಳನ್ನು ಎರಡನೇ ಪ್ರತಿಪಕ್ಷದಲ್ಲಿ ಸೇರಿಸಬೇಕು. ಹಾಗೆ ಮಾಡಿದರೆ 12ನೇ ಮೀನ, 1ನೇ ಮೇಷ ಸ್ಥಾನಗಳ ಅಧಿಪತಿಗಳಾದ ಗುರು, ಕುಜರು ಒಂದು ಪಕ್ಷವಾಗಿದ್ದು ನಂತರ 2, 3 ಸ್ಥಾನಾಧಿಪತಿಗಳಾದ ಚಿತ್ರ, ಮಿತ್ರ ಗ್ರಹಗಳು ಪ್ರತಿ ಪಕ್ಷವಾದ ಶತ್ರುಪಕ್ಷದಲ್ಲಿ ಸೇರಿ ಹೋಗುತ್ತಿವೆ. ಅದೇ ವಿಧವಾಗಿ 4, 5 ಸ್ಥಾನಾಧಿಪತಿಗಳಾದ ಚಂದ್ರ, ಸೂರ್ಯರು, ಗುರು ಕುಜರು

| | | | |
|---|---|---|---|
| 12<br>ಮೀನ<br>ಗುರು | 1<br>ಮೇಷ<br>ಕುಜ | 2<br>ವೃಷಭ<br>ಮಿತ್ರ | 3<br>ಮಿಥುನ<br>ಚಿತ್ರ |
| 11<br>ಕುಂಭ<br>ಶನಿ | **ಕಾಲಚಕ್ರ** | | 4<br>ಕರ್ಕಾಟಕ<br>ಚಂದ್ರ |
| 10<br>ಮಕರ<br>ರಾಹು | | | 5<br>ಸಿಂಹ<br>ರವಿ |
| 9<br>ಧನಸ್ಸು<br>ಕೇತು | 8<br>ವೃಶ್ಚಿಕ<br>ಭೂಮಿ | 7<br>ತುಲಾ<br>ಶುಕ್ರ | 6<br>ಕನ್ಯಾ<br>ಬುಧ |

**ಕಾಲಚಕ್ರ 15ನೇ ಚಿತ್ರ**

ಇರುವ ಮೊದಲ ಪಕ್ಷದೊಳಗೆ ಸೇರುತ್ತಿದ್ದಾರೆ. 6,7 ಸ್ಥಾನಾಧಿಪತಿಗಳಾದ ಬುಧ ಶುಕ್ರರು ಎರಡನೆ ಪ್ರತಿಪಕ್ಷದಲ್ಲಿ ಸೇರುತ್ತಿದ್ದಾರೆ. ಇನ್ನು 8,9 ಸ್ಥಾನಗಳನ್ನು ನೋಡಿದರೆ ಆ ಸ್ಥಾನಾಧಿಪತಿಗಳಾದ ಭೂಮಿ, ಕೇತು, ಗುರು, ಕುಜ, ಚಂದ್ರ, ರವಿ ಗ್ರಹಗಳ ಪಕ್ಷದಲ್ಲಿ ಸೇರಿಹೋಗುತ್ತಿದ್ದಾರೆ. 10, 11 ಸ್ಥಾನಗಳ ಅಧಿಪತಿಗಳಾದ ರಾಹು, ಶನಿ ಗ್ರಹಗಳು; ಮಿತ್ರ, ಚಿತ್ರ, ಬುಧ, ಶುಕ್ರಗ್ರಹಗಳ ಪಕ್ಷದಲ್ಲಿ ಸೇರಿಹೋಗುತ್ತಿದ್ದಾರೆ. ಈ ವಿಧವಾಗಿ 2:1 ಅಥವಾ ಸರಿ, ಬೆಸ ಎನ್ನುವ ಸೂತ್ರದ ಪ್ರಕಾರ '12' ಗ್ರಹಗಳಲ್ಲಿ ಆರು ಗ್ರಹಗಳು ಶಾಶ್ವತವಾಗಿ ಒಂದು ಪಕ್ಷದಲ್ಲಿರುವಾಗ, ಉಳಿದ ಆರು ಗ್ರಹಗಳು ಶಾಶ್ವತವಾಗಿ ಪ್ರತಿ ಪಕ್ಷದಲ್ಲಿ ಇರುತ್ತವೆ.

| ಪಕ್ಷ | | | ಪ್ರತಿ ಪಕ್ಷ | | |
|---|---|---|---|---|---|
| ಸ್ಥಾನಗಳು | ಗ್ರಹಗಳು | – | ಸ್ಥಾನಗಳು | | ಗ್ರಹಗಳು |
| 12, 1 | ಗುರು, ಕುಜ | – | 2, 3 | – | ಮಿತ್ರ, ಚಿತ್ರ |
| 4, 5 | ಚಂದ್ರ, ರವಿ | – | 6, 7 | – | ಬುಧ, ಶುಕ್ರ |
| 8, 9 | ಭೂಮಿ, ಕೇತು | – | 10, 11 | – | ರಾಹು, ಶನಿ |

ಈ ವಿಧವಾಗಿ ಎರಡು ವರ್ಗಗಳಾಗಿ 2:1 ಸೂತ್ರದ ಪ್ರಕಾರ ವಿಭಜಿಸಲ್ಪಟ್ಟ ಗ್ರಹಗಳಲ್ಲಿ, ಒಂದು ವರ್ಗಕ್ಕೆ ಗುರು, ಮತ್ತೊಂದು ವರ್ಗಕ್ಕೆ ಶನಿ ನಾಯಕರಾಗಿ ನಿಯಮಿಸಲ್ಪಟ್ಟಿದ್ದಾರೆ. ಆದ್ದರಿಂದ ನಾಯಕ ಗ್ರಹಗಳನ್ನನುಸರಿಸಿ, ಒಂದು ವರ್ಗವನ್ನು ಗುರು ವರ್ಗವೆಂದು, ಮತ್ತೊಂದು ವರ್ಗವನ್ನು ಶನಿ ವರ್ಗವೆಂದು ಹೇಳುತ್ತಿದ್ದಾರೆ. ಇವುಗಳನ್ನೇ ಈದಿನ ಗುರು ಪಾರ್ಟಿ, ಶನಿ ಪಾರ್ಟಿ ಗ್ರಹಗಳೆಂದು ಕೂಡ ಕರೆಯುತ್ತಿದ್ದಾರೆ.

| ಗುರು ವರ್ಗ | ಶನಿ ವರ್ಗ |
|---|---|
| 1) ಗುರು ಗ್ರಹ | 1) ಶನಿ ಗ್ರಹ |
| 2) ರವಿ ಗ್ರಹ | 2) ಮಿತ್ರ ಗ್ರಹ |
| 3) ಚಂದ್ರ ಗ್ರಹ | 3) ಚಿತ್ರ ಗ್ರಹ |
| 4) ಕುಜ ಗ್ರಹ | 4) ಬುಧ ಗ್ರಹ |
| 5) ಕೇತು ಗ್ರಹ | 5) ಶುಕ್ರ ಗ್ರಹ |
| 6) ಭೂಮಿ ಗ್ರಹ | 6) ರಾಹು ಗ್ರಹ |

ಈ ಗ್ರಹಗಳು ಶಾಶ್ವತವಾಗಿ ಎರಡು ವರ್ಗಗಳಾಗಿ ಮಾಡಲ್ಪಟ್ಟಿವೆ.

ಒಂದು ವರ್ಗದಲ್ಲಿನ ಗ್ರಹಗಳು, ಮತ್ತೊಂದು ವರ್ಗದೊಳಕ್ಕೆ ಎಂದಿಗೂ ಬದಲಾಗುವುದಿಲ್ಲ.

## 14 ಮೇಷ ಲಗ್ನಕ್ಕೆ ಮಿತ್ರ, ಶತ್ರು ಗ್ರಹಗಳು ಯಾವುವು?

ಕಾಲಚಕ್ರದಲ್ಲಿ ಹನ್ನೆರಡು ಭಾಗಗಳಲ್ಲಿ ಮೊದಲನೆಯದು ಮೇಷಭಾಗ ಎನ್ನುತ್ತೇವೆ. ಮೊದಲನೆಯದಾದ್ದರಿಂದ ಅದು ಬೆಸ ಸಂಖ್ಯೆಯಲ್ಲಿ ಸೇರಿಹೋಗುತ್ತಿದೆ. ಅದು ಬೆಸ ಸಂಖ್ಯೆಯಾದ್ದರಿಂದ ಅದಕ್ಕಿಂತ ಮುಂಚೆ ಇರುವ 12 ಎನ್ನುವ ಸರಿ ಸಂಖ್ಯೆಯನ್ನು ತೆಗೆದುಕೊಳ್ಳಬೇಕಾಗಿರುತ್ತದೆ. ಏಕೆಂದರೇ, 2:1 ಎನ್ನುವ ಸೂತ್ರದ ಪ್ರಕಾರ, ಮೊದಲು ಸರಿ ಸಂಖ್ಯೆಯಿಂದಲೇ ಗ್ರಹಗಳ ಮಿತ್ರ, ಶತ್ರುಗಳನ್ನು ವಿಭಜಿಸಬೇಕಾಗಿರುತ್ತದೆ. ಆದ್ದರಿಂದ ಮೇಷಲಗ್ನಕ್ಕೆ ಮೊದಲ ಸರಿ ಸಂಖ್ಯೆಯಾದ ಮೀನ ಲಗ್ನವನ್ನು ತೆಗೆದುಕೊಂಡು ನೋಡಬೇಕು. ಆಗ ಮೀನ, ಮೇಷ ಎರಡು ಲಗ್ನಗಳು ಒಂದು ವರ್ಗದಲ್ಲಿ ಸೇರಿಹೋಗುತ್ತವೆ. ಹಾಗೆ ಮೊದಲು ಬಂದ ಎರಡು ಲಗ್ನಗಳ ಅಧಿಪತಿಗಳಾದ ಗ್ರಹಗಳು ಒಂದು ಪಕ್ಷವಾಗಿದ್ದು, ನಂತರವಿರುವ ವೃಷಭ, ಮಿಥುನಗಳ ಅಧಿಪತಿಗಳಾದ ಎರಡು ಗ್ರಹಗಳು ಮತ್ತೊಂದು ವಿರುದ್ಧ ಪಕ್ಷದಲ್ಲಿ ಸೇರಿಹೋಗುತ್ತಿವೆ. ಆ ನಂತರ ಬರುವ ಸರಿ ಬೆಸ ಸಂಖ್ಯೆ ಲಗ್ನಗಳ ಅಧಿಪತಿ ಗ್ರಹಗಳು ಚಂದ್ರನು, ಸೂರ್ಯನು ಇಬ್ಬರು ಒಂದು ಪಕ್ಷದಲ್ಲಿನ ಗ್ರಹಗಳಾಗುತ್ತಿವೆ. ನಂತರವಿರುವ ಬುಧ, ಶುಕ್ರ ಗ್ರಹಗಳು ಪ್ರತಿಪಕ್ಷವಾಗುತ್ತಿವೆ. ಈ ವಿಧಾನ ಮೊದಲು ಚಿತ್ರಿಸಿಕೊಂಡ 16ನೇ ಲಗ್ನ ಪಟದಲ್ಲಿ ನೋಡೋಣ.

ಮನುಷ್ಯನಾಗಲಿ ಅಥವಾ ಯಾವ ಜೀವರಾಶಿಯಾಗಲಿ ಹುಟ್ಟಿದಾಗ ಗುರುತಿಸಲ್ಪಡುವುದು ಲಗ್ನ. ಮನುಷ್ಯ ಶಿಶುವಾಗಿ ಹುಟ್ಟಿದ ಸಮಯದಲ್ಲಿ ಕಾಲಚಕ್ರದಲ್ಲಿನ ಸೂರ್ಯನು ಕರ್ಮಚಕ್ರದ ಮೇಲೆ ಎಷ್ಟನೇ ಭಾಗದಲ್ಲಿ ಎದುರುಗಡೆ ನಿಂತಿದ್ದಾನೊ ಆ ಭಾಗ ವೊಂದರ ಆ ಸಂಖ್ಯೆಯನ್ನು ಲಗ್ನವಾಗಿ

| | | | |
|---|---|---|---|
| ಗುರು<br>ಮೀನ<br>√ | ಕುಜ<br>ಮೇಷ<br>√ | X<br>ವೃಷಭ<br>ಮಿತ್ರ | X<br>ಮಿಥುನ<br>ಚಿತ್ರ |
| X<br>ಕುಂಭ<br>ಶನಿ | **ಮೇಷ ಲಗ್ನ**<br>**ಮೀನ ಲಗ್ನ**<br>**ಕಾಲಚಕ್ರ** | | ಚಂದ್ರ<br>ಕರ್ಕಾಟಕ<br>√ |
| X<br>ಮಕರ<br>ರಾಹು | | | ಸೂರ್ಯ<br>ಸಿಂಹ<br>√ |
| ಕೇತು<br>ಧನಸ್ಸು<br>√ | ಭೂಮಿ<br>ವೃಶ್ಚಿಕ<br>√ | X<br>ತುಲಾ<br>ಶುಕ್ರ | X<br>ಕನ್ಯಾ<br>ಬುಧ |

**ಕಾಲಚಕ್ರ – 16ನೇ ಚಿತ್ರ**

ಗುರುತಿಸಿಕೊಂಡು, ಮೇಲಿನ ಚಿತ್ರದಲ್ಲಿರುವ ಕಾಲಚಕ್ರದಲ್ಲಿನ ದ್ವಾದಶ ಗ್ರಹಗಳು ಎಲ್ಲೆಲ್ಲಿ ಇವೆಯೋ ಅಲ್ಲಿಯೇ ಗುರುತಿಸಿಕೊಂಡು ನೋಡುವುದನ್ನು ಪೂರ್ವಕಾಲದಲ್ಲಿ 'ಜಾಫತಕ' ಎನ್ನುತ್ತಿದ್ದರು. ಅದನ್ನೇ ಈ ಕಾಲದಲ್ಲಿ 'ಜಾತಕ' ಅಥವಾ 'ಜನ್ಮಲಗ್ನ' ಎನ್ನುತ್ತಿದ್ದೇವೆ. ಆ ವಿಧವಾಗಿ ಗುರುತಿಸಿದಾಗ ಜನ್ಮಲಗ್ನ ಮೇಷ ಭಾಗವಾದರೆ ಅದನ್ನು ಮೇಷಲಗ್ನ ಎನ್ನುತ್ತಿದ್ದೇವೆ. ಮೇಷಲಗ್ನಕ್ಕೆ 2:1 ಪ್ರಕಾರ ಶಾಶ್ವತವಾಗಿ (12) ದ್ವಾದಶ ಸ್ಥಾನಾಧಿಪತಿ ಗುರು, (1) ಪ್ರಥಮ ಸ್ಥಾನಾಧಿಪತಿಯಾಗುವ ಕುಜನು ಮತ್ತು (4) ಚತುರ್ಥ ಸ್ಥಾನಾಧಿಪತಿಯು (5) ಪಂಚಮ ಸ್ಥಾನಾಧಿಪತಿಯಾಗುವ ಚಂದ್ರ, ಸೂರ್ಯರು, ಹಾಗೇ (8) ಅಷ್ಟಮ (9) ನವಮ ಸ್ಥಾನಾಧಿಪತಿಗಳಾಗುವ ಭೂಮಿ, ಕೇತುಗಳು

ಮಿತ್ರರಾಗುತ್ತಾರೆ. ಶಾಶ್ವತವಾಗಿ ಮೇಷಲಗ್ನಕ್ಕೆ ಗುರು, ಕುಜ, ಚಂದ್ರ, ಸೂರ್ಯ, ಭೂಮಿ, ಕೇತುವೆನ್ನುವ ಆರು ಗ್ರಹಗಳು ಮಿತ್ರ ಗ್ರಹಗಳೆಂದು ಹೇಳಬಹುದು.

ತ್ರೈತಸಿದ್ಧಾಂತದಲ್ಲಿನ ಮೂರು ಆತ್ಮಗಳನ್ನು ಕರ್ಮವಿಲ್ಲದವುಗಳು, ಕರ್ಮವಿರುವವು ಎಂದೂ, ಕಾರ್ಯ ಮಾಡುವವು ಕಾರ್ಯ ಮಾಡದಿರುವವು ಎಂದೂ ಎರಡಾಗಿ ವಿಭಜಿಸಿ, ಅದರ ಪ್ರಕಾರ 2:1 ಎನ್ನುವ ಸೂತ್ರವನ್ನು ಅನುಸರಿಸಿ ಮಿತ್ರ ಶತ್ರುಗ್ರಹಗಳನ್ನು ಕಂಡುಕೊಂಡಿದ್ದೇವೆ. ಮೊದಲ ಸರಿ ಬೆಸ ಗ್ರಹಗಳು ಮಿತ್ರ ಗ್ರಹಗಳಾಗಿದ್ದು, ಎರಡನೆ ಸರಿ ಬೆಸ ಗ್ರಹಗಳು ಶತ್ರು ಗ್ರಹಗಳಾಗುತ್ತ ವೆಂದು ಕೂಡ ಹೇಳಿಕೊಂಡಿದ್ದೇವೆ. ಅದರ ಪ್ರಕಾರ ಮೇಷಲಗ್ನಕ್ಕೆ ದ್ವಿತೀಯ, ತೃತೀಯ ಸ್ಥಾನಾಧಿಪತಿಗಳಾದ ಮಿತ್ರ, ಚಿತ್ರ ಗ್ರಹಗಳು, ಹಾಗೇ ಷಟ್ ಸಪ್ತಮ ಸ್ಥಾನಾಧಿಪತಿಗಳಾದ ಬುಧ, ಶುಕ್ರರು ಮತ್ತು ದಶಮ, ಏಕಾದಶ ಸ್ಥಾನಾಧಿಪತಿಗ ಳಾದ ರಾಹು, ಶನಿ ಗ್ರಹಗಳು ಪ್ರತಿಪಕ್ಷ ಗ್ರಹಗಳಾಗುತ್ತಿದ್ದಾರೆ. ಇದನ್ನು ಅನುಸರಿಸಿ ಮೇಷಲಗ್ನಕ್ಕೆ ಮಿತ್ರ, ಚಿತ್ರ, ಬುಧ, ಶುಕ್ರ, ರಾಹು, ಶನಿ ಆರು ಗ್ರಹಗಳು ಶಾಶ್ವತವಾಗಿ ಶತ್ರು ಗ್ರಹಗಳಾಗುತ್ತಿದ್ದಾರೆ.

| √ | X |
|---|---|
| **ಮಿತ್ರರು** | **ಶತ್ರುಗಳು** |
| ಗುರುಗ್ರಹ | ಮಿತ್ರಗ್ರಹ |
| ಕುಜಗ್ರಹ | ಚಿತ್ರಗ್ರಹ |
| ಚಂದ್ರಗ್ರಹ | ಬುಧಗ್ರಹ |
| ಸೂರ್ಯಗ್ರಹ | ಶುಕ್ರಗ್ರಹ |
| ಭೂಮಿಗ್ರಹ | ರಾಹುಗ್ರಹ |
| ಕೇತುಗ್ರಹ | ಶನಿಗ್ರಹ |

ಮೇಷಲಗ್ನಕ್ಕೆ ಯಾರು ಮಿತ್ರಗ್ರಹಗಳಾಗುತ್ತಿದ್ದಾರೋ, ಅವರೇ ಮೀನ ಲಗ್ನಕ್ಕು ಕೂಡ ಮಿತ್ರರಾಗುತ್ತಾರೆ. ಹಾಗೇ ಯಾರು ಮೇಷಕ್ಕೆ ಶತ್ರು ಗ್ರಹಗಳಾಗಿ ಹೆಸರುಗಳಿಸಿದ್ದಾರೋ, ಅವರೇ ಮೀನಲಗ್ನಕ್ಕು ಕೂಡ ಶತ್ರುಗಳಾಗುತ್ತಿದ್ದಾರೆ. ಕಾಲಚಕ್ರದಲ್ಲಿ ಕೊನೆಯದಾದ ಮೀನ, ಮೊದಲನೆಯದಾದ ಮೇಷವನ್ನು ಮೊದಲು ಒಂದು ವರ್ಗವಾಗಿ ಗುರುತಿಸಿಕೊಳ್ಳಬೇಕೆಂದು ಹೇಳುತ್ತಿದ್ದೇವೆ. ಈ ವಿಷಯ ಜ್ಞಾಪಕ ಇರುವುದಕ್ಕೆ, ಯಾರಾದರೂ ಚೆನ್ನಾಗಿ ಆಲೋಚಿಸುವವನನ್ನು ಮೀನ ಮೇಷಗಳನ್ನು ಲೆಕ್ಕಿಸುವವನು ಎಂಬ ಗಾದೆಮಾತನ್ನು ಬಳಸುತ್ತಿರುತ್ತಾರೆ. ಚೆನ್ನಾಗಿ ಯೋಚಿಸುವವನನ್ನು ಮೀನ ಮೇಷಗಳನ್ನು ಲೆಕ್ಕಿಸುವವನೆಂದು ಅನ್ನುತ್ತಿದ್ದಾರೆಂದರೇ ಜ್ಯೋತಿಷ್ಯದಲ್ಲಿ ಮೀನ ಮೇಷಗಳಿಂದ ಗ್ರಹಗಳನ್ನು ಲೆಕ್ಕಿಸಬೇಕೆಂದು ಅರ್ಥ. ಅದೇ ವಿಧವಾಗಿ ವೃಷಭ ಮಿಥುನಗಳನ್ನು ಈ ಕೆಳಗೆ 17ನೇ ಚಿತ್ರದಲ್ಲಿ ನೋಡೋಣ.

| | | | |
|---|---|---|---|
| ಮೀನ<br>ಗುರು<br>X | ಮೇಷ<br>ಕುಜ<br>X | √<br>ವೃಷಭ<br>ಮಿತ್ರ | √<br>ಮಿಥುನ<br>ಚಿತ್ರ |
| √<br>ಕುಂಭ<br>ಶನಿ | **ವೃಷಭ ಲಗ್ನ<br>ಮಿಥುನ ಲಗ್ನ<br>ಸೂತ್ರ 2:1** | | ಕರ್ಕಾಟಕ<br>ಚಂದ್ರ<br>X |
| √<br>ಮಕರ<br>ರಾಹು | | | ಸಿಂಹ<br>ರವಿ<br>X |
| ಧನಸ್ಸು<br>ಕೇತು<br>X | ವೃಶ್ಚಿಕ<br>ಭೂಮಿ<br>X | √<br>ತುಲಾ<br>ಶುಕ್ರ | √<br>ಕನ್ಯಾ<br>ಬುಧ |

**ಕಾಲಚಕ್ರ – 17ನೇ ಚಿತ್ರ**

## 15 ವೃಷಭ

ವೃಷಭ ಲಗ್ನಕ್ಕೆ ಆ ಸ್ಥಾನಾಧಿಪತಿಯಾದ ಮಿತ್ರ, ಮಿಥುನ ಲಗ್ನ ಸ್ಥಾನಾಧಿಪತಿಯಾದ ಚಿತ್ರಗ್ರಹಗಳು ಎರಡು; ಹಾಗೇ ಕನ್ಯಾ, ತುಲಾ ಸ್ಥಾನಾಧಿಪತಿ ಗಳಾದ ಬುಧ, ಶುಕ್ರಗಳು: ಮಕರ, ಕುಂಭ ಸ್ಥಾನಾಧಿಪತಿಗಳಾದ ರಾಹು, ಶನಿ ಎನ್ನುವ ಆರು ಗ್ರಹಗಳು ಮಿತ್ರ ಗ್ರಹಗಳಾಗಿದ್ದು, ಚಂದ್ರ, ಸೂರ್ಯ, ಭೂಮಿ, ಕೇತು, ಗುರು, ಕುಜರು ಎನ್ನುವ ಆರು ಗ್ರಹಗಳು ಶತ್ರು ಗ್ರಹಗಳಾಗುತ್ತಿದ್ದಾರೆ. ವೃಷಭ ಲಗ್ನಕ್ಕೆ ಯಾರು ಮಿತ್ರರಾಗುತ್ತಾರೋ ಮಿಥುನಲಗ್ನಕ್ಕೆ ಕೂಡ ಅವರೇ ಮಿತ್ರರಾಗುತ್ತಾರೆ. ಹಾಗೇ ವೃಷಭ ಲಗ್ನಕ್ಕೆ ಶತ್ರುಗಳಾದವರೇ ಮಿಥುನ ಲಗ್ನಕ್ಕು ಕೂಡಾ ಶತ್ರುಗಳಾಗುತ್ತಾರೆ. ಇವರು ಈ ಎರಡು ಲಗ್ನಗಳಿಗೆ ಶಾಶ್ವತವಾಗಿ ಮಿತ್ರ, ಶತ್ರುಗಳಾಗಿ ಇರುತ್ತಾರೆಂದು ತಿಳಿಯಬೇಕು. ವೃಷಭ, ಮಿಥುನ ಲಗ್ನಗಳಿಗೆ ಶಾಶ್ವತವಾಗಿ ಮಿತ್ರ, ಶತ್ರು ಗ್ರಹಗಳು ಕೆಳಗಿನ ವಿಧವಾಗಿವೆ.

| √ **ಮಿತ್ರರು** | X **ಶತ್ರುಗಳು** |
|---|---|
| 1) ಮಿತ್ರ ಗ್ರಹ | 1) ಚಂದ್ರ ಗ್ರಹ |
| 2) ಚಿತ್ರ ಗ್ರಹ | 2) ಸೂರ್ಯ ಗ್ರಹ |
| 3) ಬುಧ ಗ್ರಹ | 3) ಭೂ ಗ್ರಹ |
| 4) ಶುಕ್ರ ಗ್ರಹ | 4) ಕೇತು ಗ್ರಹ |
| 5) ರಾಹು ಗ್ರಹ | 5) ಗುರು ಗ್ರಹ |
| 6) ಶನಿ ಗ್ರಹ | 6) ಕುಜ ಗ್ರಹ |

# 16 ಕರ್ಕಾಟಕ

ಈಗ ಕರ್ಕಾಟಕ, ಸಿಂಹ ಲಗ್ನಗಳಿಗೆ ಮಿತ್ರ, ಶತ್ರು ಗ್ರಹಗಳನ್ನು ಕೆಳಗಿರುವ 18ನೇ ಚಿತ್ರದಲ್ಲಿ ನೋಡೋಣ.

ಕರ್ಕಾಟಕ ಲಗ್ನಕ್ಕೆ, ಅದೇ ಸ್ಥಾನಾಧಿಪತಿಯಾದ ಚಂದ್ರನೂ, ಸಿಂಹ ಲಗ್ನಾಧಿಪತಿಯಾದ ರವಿ (ಸೂರ್ಯನು) ಮತ್ತು ವೃಶ್ಚಿಕ ಲಗ್ನಾಧಿಪತಿಯಾದ ಭೂಮಿ, ಪಕ್ಕದಲ್ಲಿಯೇ ಇರುವ ಧನಸ್ಸು ಲಗ್ನಾಧಿಪತಿಯಾದ ಕೇತುವೂ, ಮೀನಲಗ್ನಾಧಿಪತಿಯಾದ ಗುರುವೂ, ಮೇಷಲಗ್ನಾಧಿಪತಿಯಾದ ಕುಜ ಗ್ರಹಗಳು ಒಟ್ಟು ಆರು ಮಿತ್ರ ಗ್ರಹಗಳಾಗಿದ್ದು, ಉಳಿದ ಮಿತ್ರ, ಚಿತ್ರ, ಬುಧ, ಶುಕ್ರ, ರಾಹು, ಶನಿ ಗ್ರಹಗಳು ಆರು ಶತ್ರುಗ್ರಹಗಳಾಗುತ್ತಿವೆ. ಕರ್ಕಾಟಕ ಲಗ್ನಕ್ಕೆ ಯಾರು

| | | | |
|---|---|---|---|
| ಗುರು √ | ಕುಜ √ | X ಮಿತ್ರ | X ಚಿತ್ರ |
| X ಶನಿ | **ಕರ್ಕಾಟಕ ಲಗ್ನ ಸಿಂಹ ಲಗ್ನ ಸೂತ್ರ 2:1** | | ಚಂದ್ರ √ |
| X ರಾಹು | | | ರವಿ √ |
| ಕೇತು √ | ಭೂಮಿ √ | X ಶುಕ್ರ | X ಬುಧ |

**ಕಾಲಚಕ್ರ – 18ನೇ ಚಿತ್ರ**

ಮಿತ್ರರು, ಯಾರು ಶತ್ರುಗಳಾಗುತ್ತಿದ್ದಾರೊ ಅವರೇ ಪಕ್ಕದಲ್ಲಿರುವ ಸಿಂಹಲಗ್ನಕ್ಕು ಕೂಡಾ ಶಾಶ್ವತವಾಗಿ ಮಿತ್ರ, ಶತ್ರುಗಳಾಗಿ ಇದ್ದಾರೆ.

ಕರ್ಕಾಟಕ, ಸಿಂಹಲಗ್ನಗಳಿಗೆ ಶಾಶ್ವತವಾಗಿ ಶತ್ರು ಮಿತ್ರಗಳಾಗಿರುವ ಗ್ರಹಗಳು ಕೆಳಗಿನ ವಿಧವಾಗಿವೆ.

| √ | X |
|---|---|
| **ಮಿತ್ರರು (ಶುಭರು)** | **ಶತ್ರುಗಳು (ಅಶುಭರು)** |
| 1) ಚಂದ್ರ ಗ್ರಹ | 1) ಬುಧ ಗ್ರಹ |
| 2) ಸೂರ್ಯ(ರವಿ) ಗ್ರಹ | 2) ಶುಕ್ರ ಗ್ರಹ |
| 3) ಭೂ ಗ್ರಹ | 3) ರಾಹು ಗ್ರಹ |
| 4) ಕೇತು ಗ್ರಹ | 4) ಶನಿ ಗ್ರಹ |
| 5) ಗುರು ಗ್ರಹ | 5) ಮಿತ್ರ ಗ್ರಹ |
| 6) ಕುಜ ಗ್ರಹ | 6) ಚಿತ್ರ ಗ್ರಹ |



# 17 ಕನ್ಯಾ

ಈಗ ಕನ್ಯಾ ಲಗ್ನಕ್ಕೆ ಯಾರು ಮಿತ್ರ ಗ್ರಹಗಳೋ, ಯಾರು ಶತ್ರು ಗ್ರಹಗಳೋ ನಂತರ ಪುಟದಲ್ಲಿರುವ 19ನೇ ಚಿತ್ರದಲ್ಲಿ ಚಿತ್ರೀಕರಿಸಿಕೊಳ್ಳೋಣ.

ಕನ್ಯಾ ಲಗ್ನಕ್ಕೆ ಅದೇ ಲಗ್ನಾಧಿಪತಿಯಾದ ಬುಧನು, ಪಕ್ಕದಲ್ಲಿರುವ ತುಲಾ ಲಗ್ನಾಧಿಪತಿಯಾದ ಶುಕ್ರನು ಮತ್ತು ಮಕರ ಲಗ್ನಾಧಿಪತಿಯಾದ ರಾಹುವು, ಕುಂಭ ಲಗ್ನಾಧಿಪತಿಯಾದ ಶನಿ, ವೃಷಭ ಲಗ್ನಾಧಿಪತಿಯಾದ ಮಿತ್ರ, ಮಿಥುನ ಲಗ್ನಾಧಿಪತಿಯಾದ ಚಿತ್ರ ಗ್ರಹಗಳು ಆರು, ಶಾಶ್ವತವಾಗಿ ಮಿತ್ರರಾಗಿದ್ದು ಉಳಿದ ಚಂದ್ರ, ಸೂರ್ಯ, ಭೂಮಿ, ಕೇತು, ಗುರು, ಕುಜ ಗ್ರಹಗಳು ಆರು ಶಾಶ್ವತವಾಗಿ ಶತ್ರುಗಳಾಗಿದ್ದಾರೆ. ಅದೇ ವಿಧವಾಗಿ ಕನ್ಯಾ ಲಗ್ನಕ್ಕೆ ಯಾರಾದರೆ ಶತ್ರು, ಮಿತ್ರರಾಗಿ ಇದ್ದಾರೋ ಅವರೇ ಶಾಶ್ವತ ಶತ್ರು ಮಿತ್ರರಾಗಿ ಇರುತ್ತಾರೆ.

| | | | |
|---|---|---|---|
| X<br>ಗುರು | X<br>ಕುಜ | √<br>ಮಿತ್ರ | √<br>ಚಿತ್ರ |
| √<br>ಶನಿ | **ಕನ್ಯಾ ಲಗ್ನ**<br>**ತುಲಾ ಲಗ್ನ**<br>**ಸೂತ್ರ 2:1** | | ಚಂದ್ರ<br>X |
| √<br>ರಾಹು | | | ರವಿ<br>X |
| ಕೇತು<br>X | ಭೂಮಿ<br>X | √<br>ಶುಕ್ರ | √<br>ಬುಧ |

**ಕಾಲಚಕ್ರ – 19ನೇ ಚಿತ್ರ**

ಕನ್ಯ, ತುಲಾ ಲಗ್ನಗಳಿಗೆ ಶಾಶ್ವತ ಶತ್ರು, ಮಿತ್ರ ಗ್ರಹಗಳು ಕೆಳಗೆ ಕ್ರಮವಾಗಿ ಬರೆಯಲ್ಪಟ್ಟಿವೆ.

| √ | X |
|---|---|
| **ಮಿತ್ರರು (ಶುಭರು)** | **ಶತ್ರುಗಳು (ಅಶುಭರು)** |
| 1) ಬುಧ ಗ್ರಹ | 1) ಭೂ ಗ್ರಹ |
| 2) ಶುಕ್ರ ಗ್ರಹ | 2) ಕೇತು ಗ್ರಹ |
| 3) ರಾಹು ಗ್ರಹ | 3) ಗುರು ಗ್ರಹ |
| 4) ಶನಿ ಗ್ರಹ | 4) ಕುಜ ಗ್ರಹ |
| 5) ಮಿತ್ರ ಗ್ರಹ | 5) ಚಂದ್ರ ಗ್ರಹ |
| 6) ಚಿತ್ರ ಗ್ರಹ | 6) ಸೂರ್ಯ ಗ್ರಹ |

ಎರಡು ವರ್ಗಗಳಾಗಿ ವಿಭಜಿಸಲ್ಪಟ್ಟ ಗ್ರಹಗಳು, ಒಂದು ವರ್ಗಕ್ಕೆ ಮತ್ತೊಂದು ವರ್ಗ ಶತ್ರುಗಳಾಗಿ ಇವೆಯೆಂದು ಹೇಳಿಕೊಂಡಿದ್ದೇವೆ. ಮಿತ್ರರಾಗಿರುವ ಗ್ರಹಗಳನ್ನು ಶುಭರೆಂದು ಕರೆಯುತ್ತಿದ್ದೇವೆ. ಅಷ್ಟೇ ಅಲ್ಲದೆ ಮಿತ್ರ ಗ್ರಹಗಳು ಪುಣ್ಯವನ್ನು ಪಾಲಿಸುವವು ಆದ್ದರಿಂದ, ಅವುಗಳನ್ನು ಪುಣ್ಯರು ಎಂದು ಕರೆಯುತ್ತಿದ್ದೇವೆ. ಅವರು ಪುಣ್ಯರು ಆದ್ದರಿಂದ ಶುಭರೆಂದು ಹೇಳುವುದು ನಡೆದಿದೆ. ಅದೇ ವಿಧವಾಗಿ ಶತ್ರು ಗ್ರಹಗಳು ಮಾನವನ ಪಾಪವನ್ನು ಪಾಲಿಸುವವಾದ್ದರಿಂದ, ಆ ಜೀವಿಗೆ ಅವು ಪಾಪಿಗಳೆಂದು ಮತ್ತು ಅಶುಭರೆಂದು ಕರೆಯುವುದು ನಡೆಯುತ್ತಿದೆ. ಎರಡು ವರ್ಗಗಳಿಗೆ ಗುರುವರ್ಗ, ಶನಿವರ್ಗ ಎಂದು ನಾಮಕರಣ ಮಾಡುವುದು ನಡೆದಿದೆ. ಎರಡು ವರ್ಗದವರು ಒಬ್ಬರಿಗೊಬ್ಬರು ಶತ್ರುಗಳಾದರೂ, ಹುಟ್ಟಿದ ಜೀವಿಗೆ ಒಂದು ವರ್ಗ ಮಿತ್ರರು, ಒಂದು ವರ್ಗ ಶತ್ರುಗಳಾಗಿ ವ್ಯವಹರಿಸುತ್ತಿವೆ.

# 18 ವೃಶ್ಚಿಕ

ಈಗ ವೃಶ್ಚಿಕ ಲಗ್ನಕ್ಕೆ ಯಾರು ಮಿತ್ರರೋ ಯಾರು ಶತ್ರುಗಳೋ ಕೆಳಗೆ ಇರುವ 20ನೇ ಚಿತ್ರದಲ್ಲಿ ನೋಡೋಣ.

ವೃಶ್ಚಿಕ ಲಗ್ನಕ್ಕೆ ಅದೇ ಲಗ್ನಾಧಿಪತಿಯಾದ ಭೂಮಿ, ಪಕ್ಕದಲ್ಲಿಯೇ ಇರುವ ಧನಸ್ಸು ಲಗ್ನಾಧಿಪತಿಯಾದ ಕೇತು ಮತ್ತು ಮೀನ ಲಗ್ನಾಧಿಪತಿಯಾದ ಗುರು, ಮೇಷ ಲಗ್ನಾಧಿಪತಿಯಾದ ಕುಜನು, ಕರ್ಕಾಟಕ ಲಗ್ನಾಧಿಪತಿಯಾದ ಚಂದ್ರನು, ಸಿಂಹ ಲಗ್ನಾಧಿಪತಿಯಾದ ಸೂರ್ಯನು ಒಟ್ಟು ಆರು ಗ್ರಹಗಳು ಮಿತ್ರ ಗ್ರಹಗಳಾಗುತ್ತಿವೆ. ಸೂತ್ರದ ಪ್ರಕಾರ ಉಳಿದ ಮಕರ ಲಗ್ನಾಧಿಪತಿಯಾದ ರಾಹುವು, ಕುಂಭ ಲಗ್ನಾಧಿಪತಿಯಾದ ಶನಿ, ವೃಷಭ ಲಗ್ನಾಧಿಪತಿಯಾದ

| | | | |
|---|---|---|---|
| ಗುರು √ | ಕುಜ √ | X ಮಿತ್ರ | X ಚಿತ್ರ |
| X ಶನಿ | **ವೃಶ್ಚಿಕ ಲಗ್ನ** | **ಧನಸ್ಸು ಲಗ್ನ** | ಚಂದ್ರ √ |
| X ರಾಹು | **ಸೂತ್ರ 2:1** | | ರವಿ √ |
| ಕೇತು √ | ಭೂಮಿ √ | X ಶುಕ್ರ | X ಬುಧ |

**ಕಾಲಚಕ್ರ – 20ನೇ ಚಿತ್ರ**

ಮಿತ್ರ, ಮಿಥುನ ಲಗ್ನಾಧಿಪತಿಯಾದ ಚಿತ್ರ ಒಟ್ಟು ಆರು ಗ್ರಹಗಳು ಶತ್ರುಪಕ್ಷದಲ್ಲಿ ಸೇರಿಹೋಗಿವೆ. ವೃಶ್ಚಿಕ ಲಗ್ನಕ್ಕೆ ಶಾಶ್ವತವಾಗಿ ಮಿತ್ರ ಗ್ರಹಗಳು ಆರು, ಶತ್ರು ಗ್ರಹಗಳು ಆರು, ಪಾಪಪುಣ್ಯಗಳನ್ನು ಪರಿಪಾಲಿಸುತ್ತಾರೆ. ಇವರು, ಸೂತ್ರದ ಪ್ರಕಾರ ಪುಣ್ಯ ಪಾಪಗಳನ್ನು ಪರಿಪಾಲಿಸುತ್ತಾ ಶುಭರು, ಅಶುಭರೆಂದು ಹೆಸರುವಾಸಿಯಾಗಿದ್ದಾರೆ. ಇವರು ತಮ್ಮ ಕರ್ತವ್ಯಗಳನ್ನು ಬಿಟ್ಟು ಶತ್ರುಗಳು ಮಿತ್ರರಾಗಿ ಬದಲಾಗಿ ಹೋಗುವುದಾಗಲಿ, ಮಿತ್ರರು ಶತ್ರುಗಳಾಗಿ ಬದಲಾಗುವುದಾ ಗಲಿ ನಡೆಯುವುದಿಲ್ಲ. ವೃಶ್ಚಿಕ ಲಗ್ನಕ್ಕೆ ಯಾರು ಶತ್ರುಗಳೋ, ಯಾರು ಮಿತ್ರರೋ ಅವರೇ ಧನಸ್ಸು ಲಗ್ನಕ್ಕು ಕೂಡಾ ಶತ್ರು ಮಿತ್ರರಾಗಿ ಇದ್ದಾರೆಂದು ತಿಳಿಯಬೇಕು.

ವೃಶ್ಚಿಕ, ಧನಸ್ಸು ಲಗ್ನಗಳಿಗೆ ಶಾಶ್ವತವಾಗಿ ಮಿತ್ರ ಶತ್ರು ವರ್ಗಗಳಾಗಿರುವ ಗ್ರಹಗಳನ್ನು ವರಸೆ ಕ್ರಮವಾಗಿ ಕೆಳಗೆ ನೋಡಬಹುದು.

| √ | X |
|---|---|
| **ಮಿತ್ರರು (ಶುಭರು)** | **ಶತ್ರುಗಳು (ಅಶುಭರು)** |
| 1) ಭೂ ಗ್ರಹ | 1) ರಾಹು ಗ್ರಹ |
| 2) ಕೇತು ಗ್ರಹ | 2) ಶನಿ ಗ್ರಹ |
| 3) ಗುರು ಗ್ರಹ | 3) ಮಿತ್ರ ಗ್ರಹ |
| 4) ಕುಜ ಗ್ರಹ | 4) ಚಿತ್ರ ಗ್ರಹ |
| 5) ಚಂದ್ರ ಗ್ರಹ | 5) ಬುಧ ಗ್ರಹ |
| 6) ಸೂರ್ಯ ಗ್ರಹ | 6) ಶುಕ್ರ ಗ್ರಹ |

ಹನ್ನೆರಡು ಗ್ರಹಗಳು ಆರಕ್ಕೆ ಆರು ಮಿತ್ರ, ಶತ್ರುಗಳಾಗಿ ಇರುವುದೇ ಅಲ್ಲದೇ ಇವರಲ್ಲಿ ಪ್ರತ್ಯೇಕವಾಗಿ ಒಂದು ಗ್ರಹಕ್ಕೆ ಒಂದು ಗ್ರಹ ಬದ್ಧಶತ್ರುತ್ವ ಹೊಂದಿದೆ. ಆ ವಿಷಯವನ್ನು ನಂತರ ತಿಳಿಸುತ್ತೇವೆ.

# 19 ಮಕರ

ಈಗ ಮಕರ ಲಗ್ನಕ್ಕೆ ಯಾರು ಮಿತ್ರರೋ ಯಾರು ಶತ್ರುಗಳೋ ಕೆಳಗೆ ಇರುವ 21ನೇ ಚಿತ್ರದಲ್ಲಿ ನೋಡೋಣ.

ಮಕರ ಲಗ್ನಕ್ಕೆ ಅದೇ ಲಗ್ನಾಧಿಪತಿಯಾದ ರಾಹು, ಪಕ್ಕದಲ್ಲಿಯೇ ಇರುವ ಕುಂಭ ಲಗ್ನಾಧಿಪತಿಯಾದ ಶನಿ ಮಿತ್ರರಾಗಿದ್ದು, ಮತ್ತು ವೃಷಭ ಲಗ್ನಾಧಿಪತಿಯಾದ ಮಿತ್ರಗ್ರಹ, ಮಿಥುನ ಲಗ್ನಾಧಿಪತಿಯಾದ ಚಿತ್ರಗ್ರಹ, ಕನ್ಯಾ ಲಗ್ನಾಧಿಪತಿಯಾದ ಬುಧ ಗ್ರಹ, ತುಲಾ ಲಗ್ನಾಧಿಪತಿಯಾದ ಶುಕ್ರಗ್ರಹ ಒಟ್ಟು ಆರು ಗ್ರಹಗಳು ಶಾಶ್ವತವಾಗಿ ಮಿತ್ರರಾಗಿದ್ದಾರೆ. ಇನ್ನು ಉಳಿದ ಮೀನ

<table>
<tr><td>X<br>ಗುರು</td><td>X<br>ಕುಜ</td><td>√<br>ಮಿತ್ರ</td><td>√<br>ಚಿತ್ರ</td></tr>
<tr><td>√<br>ಶನಿ</td><td rowspan="2" colspan="2">ಮಕರ ಲಗ್ನ<br>ಕುಂಭ ಲಗ್ನ<br>ಸೂತ್ರ 2:1</td><td>ಚಂದ್ರ<br>X</td></tr>
<tr><td>√<br>ರಾಹು</td><td>ರವಿ<br>X</td></tr>
<tr><td>X<br>ಕೇತು</td><td>X<br>ಭೂಮಿ</td><td>√<br>ಶುಕ್ರ</td><td>√<br>ಬುಧ</td></tr>
</table>

**ಕಾಲಚಕ್ರ – 21ನೇ ಚಿತ್ರ**

ಲಗ್ನಾಧಿಪತಿಯಾದ ಗುರು, ಮೇಷ ಲಗ್ನಾಧಿಪತಿಯಾದ ಕುಜನು, ಕರ್ಕಾಟಕ ಲಗ್ನಾಧಿಪತಿಯಾದ ಚಂದ್ರನು, ಸಿಂಹ ಲಗ್ನಾಧಿಪತಿಯಾದ ಸೂರ್ಯನು, ವೃಶ್ಚಿಕ ಲಗ್ನಾಧಿಪತಿಯಾದ ಭೂಮಿ, ಧನಸ್ಸು ಲಗ್ನಾಧಿಪತಿಯಾದ ಕೇತು ಎನ್ನುವ ಆರು ಗ್ರಹಗಳು ಮಕರಕ್ಕೆ ಶಾಶ್ವತ ಶತ್ರುಗ್ರಹಗಳಾಗಿ ವ್ಯವಹರಿಸುತ್ತಿವೆ. ಹಾಗೇ ಪಕ್ಕದಲ್ಲಿಯೇ ಇರುವ ಕುಂಭ ಲಗ್ನಕ್ಕು ಕೂಡಾ ಮಕರಕ್ಕೆ ಮಿತ್ರ ಶತ್ರುಗಳಾಗಿ ಇರುವವರೇ ಶಾಶ್ವತವಾಗಿ ಮಿತ್ರ, ಶತ್ರುಗಳಾಗಿ ಇದ್ದಾರೆಂದು ತಿಳಿಸುತ್ತಿದ್ದೇವೆ.

ಮಕರ, ಕುಂಭ ಲಗ್ನಗಳಿಗೆ ಶಾಶ್ವತವಾಗಿ ಮಿತ್ರ, ಶತ್ರುಗಳಾಗಿರುವ ಗ್ರಹಗಳನ್ನು ಕೆಳಗೆ ವರಸೆ ಕ್ರಮದಲ್ಲಿ ನೋಡಬಹುದು.

| √ | X |
|---|---|
| **ಮಿತ್ರರು (ಶುಭರು)** | **ಶತ್ರುಗಳು (ಅಶುಭರು)** |
| 1) ರಾಹು ಗ್ರಹ | 1) ಗುರು ಗ್ರಹ |
| 2) ಶನಿ ಗ್ರಹ | 2) ಕುಜ ಗ್ರಹ |
| 3) ಮಿತ್ರ ಗ್ರಹ | 3) ಚಂದ್ರ ಗ್ರಹ |
| 4) ಚಿತ್ರ ಗ್ರಹ | 4) ಸೂರ್ಯ ಗ್ರಹ |
| 5) ಬುಧ ಗ್ರಹ | 5) ಭೂ ಗ್ರಹ |
| 6) ಶುಕ್ರ ಗ್ರಹ | 6) ಕೇತು ಗ್ರಹ |

ಇಲ್ಲಿಯವರೆಗು ಕಾಲಚಕ್ರದಲ್ಲಿನ ಆರು ಲಗ್ನಗಳನ್ನು ಚಿತ್ರಿಸಿ, ಯಾರು

ಶತ್ರು ಗ್ರಹಗಳೋ ಯಾರು ಮಿತ್ರ ಗ್ರಹಗಳೋ ತೋರಿಸಿದ್ದೇವೆ. ಅದರ ಪ್ರಕಾರವೇ ಪಕ್ಕದಲ್ಲಿರುವ ಅದೇ ವರ್ಗ ಆರು ಲಗ್ನಗಳಿಗೆ ಚಿತ್ರಿಸದೆಯೇ ವಿವರಿಸಿ ತಿಳಿಸಿದ್ದೇವೆ. ಅದರಿಂದ ಒಟ್ಟು ಹನ್ನೆರಡು ಲಗ್ನಗಳಿಗೆ ಶಾಶ್ವತವಾಗಿ ಮಿತ್ರ, ಶತ್ರುಗಳಾಗಿರುವ ಗ್ರಹಗಳನ್ನು ತಿಳಿಸುವುದಾಗಿದೆ.

## 20 ಒಂದು ಗ್ರಹಕ್ಕೆ ಬದ್ಧಶತ್ರುವಾಗಿ ಮತ್ತೊಂದು ಗ್ರಹವಿದೆಯಾ?

ಕಾಲಚಕ್ರದಲ್ಲಿನ ಗ್ರಹಗಳು ಒಟ್ಟು ಹನ್ನೆರಡು ಇವೆಯೆಂದು ತಿಳಿದುಕೊಂಡಿದ್ದೇವೆ. ಅದರಲ್ಲಿ ಆರು ಒಂದು ಗುಂಪಾಗಿದ್ದು, ಆರು ಮತ್ತೊಂದು ಗುಂಪಾಗಿ ಇವೆಯೆಂದು ತಿಳಿದುಕೊಂಡಿದ್ದೇವೆ. ಇಲ್ಲಿ ಮತ್ತೊಂದು ಸೂತ್ರ ಏರ್ಪಡುತ್ತಿದೆ. ಆರು ಗ್ರಹಗಳು ಮಿತ್ರರಾದರೆ ನಂತರ ಏಳನೆ ಗ್ರಹದಿಂದಲೇ ಶತ್ರು ಗ್ರಹಗಳು ಇವೆ. ಆದ್ದರಿಂದ ಒಂದು ಗ್ರಹದಿಂದ ಏಳನೆ ಗ್ರಹ ಯಾವುದಾದರೆ, ಅದು ಬದ್ಧ ಶತ್ರು ಎಂದು ತಿಳಿಯುತ್ತಿದೆ. ಇನ್ನೂ ವಿವರವಾಗಿ ಹೇಳಿಕೊಂಡರೆ, ಒಂದನೇ ಸ್ಥಾನಾಧಿಪತಿಗೆ ಏಳನೆ ಸ್ಥಾನಾಧಿಪತಿ ತೀಕ್ಷಣವಾದ ಶತ್ರುವೆಂದು ತಿಳಿಯುತ್ತಿದೆ. ಇದನ್ನೇ ಜ್ಯೋತಿಷ್ಯಶಾಸ್ತ್ರದಲ್ಲಿ ಒಂದು ಸೂತ್ರವಾಗಿ ತೆಗೆದುಕೊಂಡು, ಒಂದಕ್ಕೆ ಬದ್ಧಶತ್ರು ಏಳು ಎಂದು ತೀರ್ಮಾನಿಸಿಕೊಂಡಿದ್ದೇವೆ. ಒಂದಕ್ಕೆ x ಏಳಕ್ಕೆ (1x7) ಎಂಬ ಸೂತ್ರದ ಪ್ರಕಾರ ಯಾವ ಗ್ರಹಕ್ಕೆ ಯಾವ ಗ್ರಹ ಬದ್ಧ ಶತ್ರುವೋ ತಿಳಿದುಕೊಳ್ಳೋಣ.

| | | | |
|---|---|---|---|
| ಗುರು 6 | 1 ಕುಜನು 7 | 2 ಮಿತ್ರ | 3 ಚಿತ್ರ |
| ಶನಿ 5 | **ಸೂತ್ರ 1x7 ಮೇಷ** | | 4 ಚಂದ್ರ |
| ರಾಹು 4 | | | 5 ಸೂರ್ಯ |
| ಕೇತು 3 | ಭೂಮಿ 2 | 7 ಶುಕ್ರನು 1 | 6 ಬುಧ |

**ಚತುರಸ್ರಾಕಾರದಲ್ಲಿರುವ ಕಾಲಚಕ್ರ – 22ನೇ ಚಿತ್ರ**

ಇಲ್ಲಿ ಮೇಷ ಲಗ್ನಾಧಿಪತಿಯಾದ ಕುಜ ಗ್ರಹಕ್ಕು, ಏಳನೆಸ್ಥಾನವಾದ ತುಲಾ ಲಗ್ನಾಧಿಪತಿ ಶುಕ್ರಗ್ರಹ ಪೂರ್ತಿ ಬದ್ಧಶತ್ರುವಾಗಿ ವ್ಯವಹರಿಸುತ್ತಿದೆ. ಹಾಗೇ ಶುಕ್ರಗ್ರಹಕ್ಕೆ ಏಳನೆಸ್ಥಾನದಲ್ಲಿ ಕುಜಗ್ರಹವೇ ಅಧಿಪತಿಯಾಗಿ ಇರುವುದರಿಂದ, ಸೂತ್ರದ ಪ್ರಕಾರ ಶುಕ್ರನಿಗೆ ಕುಜನು ಕೂಡ ಬದ್ಧಶತ್ರುವೇಯೆಂದು ತಿಳಿಯುತ್ತಿದೆ. ಮೇಲಿಂದ ಕೆಳಗೆ ನೋಡಿದರೂ, ಕೆಳಗಿನಿಂದ ಮೇಲಕ್ಕೆ ನೋಡಿದರೂ ಯಾವ ಕಡೆ ನೋಡಿದರೂ, ಸೂತ್ರಬದ್ಧವಾಗಿ ಕುಜನಿಗೆ ಬದ್ಧಶತ್ರುವು ಶುಕ್ರನು, ಶುಕ್ರನಿಗೆ ಬದ್ಧಶತ್ರುವು ಕುಜನಾಗಿ ತಿಳಿಯುತ್ತಿದೆ. ಒಂದು ವರ್ಗದಲ್ಲಿನ ಆರು ಗ್ರಹಗಳು ಮತ್ತೊಂದು ವರ್ಗದಲ್ಲಿನ ಆರು ಗ್ರಹಗಳಿಗೆ ಶತ್ರುಗಳಾದರೂ, ಅದರಲ್ಲಿ ಒಂದು ಹೆಸರಿರುವ ಗ್ರಹಕ್ಕೆ, ಮತ್ತೊಂದು ಹೆಸರಿರುವ ಗ್ರಹ ಪ್ರತ್ಯೇಕಿಸಿ ದೊಡ್ಡ ಶತ್ರುವಾಗಿ ಇದೆಯೆಂದು ತಿಳಿಯುತ್ತಿದೆ. ಅದರಲ್ಲಿ ವಿಚಿತ್ರವೇನೆಂದರೇ **1**x7 ಎನ್ನುವ ಸೂತ್ರದ ಪ್ರಕಾರ ಒಂದು ಕಡೆಯಿಂದ ಒಂದು ಗ್ರಹಕ್ಕೆ ಮತ್ತೊಂದು ಗ್ರಹ ಬದ್ಧಶತ್ರುವಾದರೆ,

ಮತ್ತೊಂದು ಕಡೆಯಿಂದ ಶತ್ರುವಾದ ಏಳನೇ ಗ್ರಹಕ್ಕೆ ಮೊದಲ ಗ್ರಹವೇ ಪುನಃ ಬದ್ಧಶತ್ರುವಾಗುತ್ತಿದೆ. ಹನ್ನೆರಡು ಗ್ರಹಗಳಲ್ಲಿ ಶತ್ರು ಮಿತ್ರರನ್ನು ಬೇರೆಮಾಡುವುದಕ್ಕೆ 2 : 1 ಸೂತ್ರ ಉಪಯೋಗಪಟ್ಟರೆ, ಯಾರು ಯಾರಿಗೆ ಬದ್ಧ ಶತ್ರುವೊ ಎಂದು ತಿಳಿಯುವುದಕ್ಕೆ **1**x7 ಎನ್ನುವ ಸೂತ್ರವನ್ನು ಉಪಯೋಗಿಸಿ ನೋಡಬೇಕು.

ಈಗ ವೃಷಭ ಲಗ್ನಕ್ಕೆ ಅಧಿಪತಿಯಾದ ಮಿತ್ರ ಗ್ರಹಕ್ಕೆ **1**x7 ಎನ್ನುವ ಸೂತ್ರದ ಪ್ರಕಾರ ಬದ್ಧ ಶತ್ರುವಾಗಿರುವ ಗ್ರಹಯಾವುದೊ ಕೆಳಗೆ ಇರುವ 23ನೇ ಚಿತ್ರದಲ್ಲಿ ತಿಳಿದುಕೊಳ್ಳೋಣ.

ಇಲ್ಲಿ ವೃಷಭ ಲಗ್ನಾಧಿಪತಿಯಾದ ಮಿತ್ರ ಗ್ರಹಕ್ಕೆ ಬದ್ಧಶತ್ರು ಭೂಮಿ ಎಂದು ತಿಳಿಯುತ್ತಿದೆ. ಹಾಗೇ ಭೂಮಿಗೆ ಬದ್ಧಶತ್ರು ಮಿತ್ರಗ್ರಹವೆಂದು ತಿಳಿಯುತ್ತಿದೆ. **1**x7 ಎನ್ನುವ ಸೂತ್ರದ ಪ್ರಕಾರ ಒಂದು ಬಾರಿ ಬದ್ಧ ಶತ್ರುಗಳಾಗಿ ಬದಲಾದ ಗ್ರಹಗಳು ಅವರು ಧರ್ಮಬದ್ಧವಾಗಿ ಯಾವಾಗಲೂ ಒಬ್ಬರಿಗೊಬ್ಬರು

| | | | |
|---|---|---|---|
| ಗುರು 5 | ಕುಜನು 6 | 1 ಮಿತ್ರ 7 | 2 ಚಿತ್ರ |
| ಶನಿ 4 | **ಸೂತ್ರ 1x7 ವೃಷಭ** | | 3 ಚಂದ್ರ |
| ರಾಹು 3 | | | 4 ಸೂರ್ಯ |
| ಕೇತು 2 | 7 ಭೂಮಿ 1 | 6 ಶುಕ್ರನು | 5 ಬುಧ |

**ಚತುರಸ್ರಾಕಾರದಲ್ಲಿರುವ ಕಾಲಚಕ್ರ – 23ನೇ ಚಿತ್ರ**

ವಿರುದ್ಧವಾಗಿಯೇ ಪ್ರವರ್ತಿಸುತ್ತಿರುತ್ತಾರೆ. ಎಂತಹ ಸಂದರ್ಭದಲ್ಲಿಯೂ ಅಧರ್ಮವಾಗಿ ನಡೆದುಕೊಳ್ಳುವುದಿಲ್ಲ.

ಈಗ ಮಿಥುನಲಗ್ನ ಅಧಿಪತಿಯಾದ ಚಿತ್ರಗ್ರಹಕ್ಕೆ **1**x7 ಎನ್ನುವ ಸೂತ್ರದ ಪ್ರಕಾರ ಬದ್ಧ ಶತ್ರುವಾಗಿರುವ ಗ್ರಹ ಯಾವುದೊ ಕೆಳಗೆ ಇರುವ 24ನೇ ಚಿತ್ರದಲ್ಲಿ ತಿಳಿದುಕೊಳ್ಳೋಣ.

ಇಲ್ಲಿ ಮಿಥುನಲಗ್ನಾಧಿಪತಿಯಾದ ಚಿತ್ರಗ್ರಹಕ್ಕೆ, ಬದ್ಧ ಶತ್ರು ಕೇತು ಗ್ರಹ ಎಂದು ತಿಳಿಯುತ್ತಿದೆ. ಹಾಗೇ ಕೇತು ಗ್ರಹಕ್ಕೆ ಬದ್ಧಶತ್ರುವಾಗಿ ಚಿತ್ರಗ್ರಹವೇ ಆಗುತ್ತಿದೆ. ಕಾಲಚಕ್ರದಲ್ಲಿನ ಹನ್ನೆರಡು ಭಾಗಗಳಲ್ಲಿ ಒಂದು ಗ್ರಹಕ್ಕೆ 7ನೇ ಸ್ಥಾನದಲ್ಲಿನ ಮತ್ತೊಂದು ಗ್ರಹ ಬದ್ಧ ಶತ್ರುವಾದರೆ, ಬದ್ಧ ಶತ್ರುವಾದ ಏಳನೇ ಗ್ರಹಕ್ಕೆ ಮೊದಲ ಗ್ರಹ ಪುನಃ ಬದ್ಧ ಶತ್ರುವಾಗುತ್ತಿದೆ.

| | | | |
|---|---|---|---|
| ಗುರು<br>4 | ಕುಜನು<br>5 | ಮಿತ್ರ<br>6 | 1<br>ಚಿತ್ರ<br>7 |
| ಶನಿ<br>3 | **ಸೂತ್ರ**<br>**1x7**<br>**ಮಿಥುನ** | | 2<br>ಚಂದ್ರ |
| ರಾಹು<br>2 | | | 3<br>ಸೂರ್ಯ |
| 7<br>ಕೇತು<br>1 | 6<br>ಭೂಮಿ | 5<br>ಶುಕ್ರನು | 4<br>ಬುಧ |

**ಚತುರಸ್ರಾಕಾರದಲ್ಲಿರುವ ಕಾಲಚಕ್ರ – 24ನೇ ಚಿತ್ರ**

ಈಗ ಕರ್ಕಾಟಕ ಲಗ್ನ ಅಧಿಪತಿಯಾದ ಚಂದ್ರಗ್ರಹಕ್ಕೆ **1**x7 ಎನ್ನುವ ಸೂತ್ರದ ಪ್ರಕಾರ ಬದ್ಧಶತ್ರುವಾಗಿರುವ ಗ್ರಹ ಯಾವುದೊ ಕೆಳಗೆ ಇರುವ 25ನೇ ಚಿತ್ರದಲ್ಲಿ ತಿಳಿದುಕೊಳ್ಳೋಣ.

ಇಲ್ಲಿ ಕರ್ಕಾಟಕ ಲಗ್ನಾಧಿಪತಿಯಾದ ಚಂದ್ರನಿಗೆ, ಅಲ್ಲಿಂದ ಸಪ್ತಮಿ ಸ್ಥಾನಾಧಿಪತಿಯಾದ ರಾಹು ಬದ್ಧಶತ್ರುವಾಗಿದ್ದಾನೆ. ಹಾಗೇ ರಾಹುವಿಗೆ ಅಲ್ಲಿಂದ ಸಪ್ತಮಸ್ಥಾನಾಧಿಪತಿಯಾದ ಚಂದ್ರನು **1**x7 ಎಂಬ ಸೂತ್ರದ ಪ್ರಕಾರ ಬದ್ಧಶತ್ರುವಾಗಿದ್ದಾನೆ. ಈ ವಿಧವಾಗಿ ಚಂದ್ರನಿಗೆ ರಾಹು, ರಾಹುಗೆ ಚಂದ್ರನು ತೀವ್ರಶತ್ರುಗಳಾಗಿದ್ದಾರೆ.

| | | | |
|---|---|---|---|
| ಗುರು<br>3 | ಕುಜನು<br>4 | ಮಿತ್ರ<br>5 | ಚಿತ್ರ<br>6 |
| ಶನಿ<br>2 | **ಸೂತ್ರ**<br>**1x7**<br>**ಕರ್ಕಾಟಕ** | | 1<br>ಚಂದ್ರ<br>7 |
| 7<br>ರಾಹು<br>1 | | | 2<br>ಸೂರ್ಯ |
| 6<br>ಕೇತು | 5<br>ಭೂಮಿ | 4<br>ಶುಕ್ರನು | 3<br>ಬುಧ |

**ಚತುರಸ್ರಾಕಾರದಲ್ಲಿರುವ ಕಾಲಚಕ್ರ – 25ನೇ ಚಿತ್ರ**

ಈಗ ಸಿಂಹ ಲಗ್ನ ಅಧಿಪತಿಯಾದ ಸೂರ್ಯನಿಗೆ ಬದ್ಧಶತ್ರುವಾಗಿರುವ ಗ್ರಹವನ್ನು ಕೆಳಗೆ ಇರುವ 26ನೇ ಚಿತ್ರದಲ್ಲಿ ನೋಡಿ ತಿಳಿದುಕೊಳ್ಳೋಣ.

ಇಲ್ಲಿ ಸಿಂಹಲಗ್ನ ಅಧಿಪತಿಯಾದ ಸೂರ್ಯನಿಗೆ, ಅಲ್ಲಿಂದ ಸಪ್ತಮಿ ಸ್ಥಾನದಲ್ಲಿರುವ ಶನಿ ಬದ್ಧಶತ್ರುವಾಗಿದ್ದಾನೆ. ಹಾಗೇ **1x7** ಎನ್ನುವ ಸೂತ್ರದ ಪ್ರಕಾರ, ಶನಿಗು ಕೂಡ ಸೂರ್ಯನು ಬದ್ಧಶತ್ರುವಾಗಿಯೇ ಇದ್ದಾನೆ. ಸ್ವಂತ ಸ್ಥಾನಗಳನ್ನು ಅನುಸರಿಸಿ, ಅವರ ಶತ್ರುತ್ವಗಳನ್ನು ನಿರ್ಣಯಿಸುವುದು ನಡೆದಿದೆ. ಸ್ವಂತ ಸ್ಥಾನಗಳನ್ನು ಅನುಸರಿಸಿ, ಒಂದುಸಲ ಶತ್ರುಗಳಾಗಿ ಬದಲಾದ ಗ್ರಹಗಳು, ಆ ಸ್ಥಾನಗಳನ್ನು ಬಿಟ್ಟು ಎಲ್ಲಿದ್ದರೂ ಅವರ ಶತ್ರುತ್ವವನ್ನು ಮಾತ್ರ ಬಿಡುವುದಿಲ್ಲ.

| | | | |
|---|---|---|---|
| ಗುರು<br>2 | ಕುಜನು<br>3 | ಮಿತ್ರ<br>4 | ಚಿತ್ರ<br>5 |
| 7<br>ಶನಿ<br>1 | **ಸೂತ್ರ**<br>**1x7**<br>**ಸಿಂಹ ಲಗ್ನ** | | ಚಂದ್ರ<br>6 |
| 6<br>ರಾಹು | | | 7<br>ಸೂರ್ಯ<br>1 |
| 5<br>ಕೇತು | 4<br>ಭೂಮಿ | 3<br>ಶುಕ್ರನು | 2<br>ಬುಧ |

**ಚತುರಸ್ರಾಕಾರದಲ್ಲಿರುವ ಕಾಲಚಕ್ರ – 26ನೇ ಚಿತ್ರ**

ಹನ್ನೆರಡು ಸ್ಥಾನಗಳಲ್ಲಿ ಆರು ಸ್ಥಾನಾಧಿಪತಿಗಳಿಗೆ ಶತ್ರುಗಳನ್ನು ತಿಳಿದುಕೊಂಡರೆ, ಉಳಿದ ಆರು ಸ್ಥಾನಗಳಿಗೆ, ಹೇಳದೆಯೇ ಶತ್ರುಗಳು ಯಾರಾಗಿರುವುದು ತಿಳಿದುಹೋಗುತ್ತಿದೆ.

ಈಗ ಕೊನೆಯದಾಗಿ ಕನ್ಯಾಲಗ್ನ ಅಧಿಪತಿ ಬುಧಗ್ರಹಕ್ಕೆ **1**x7 ಸೂತ್ರದ ಪ್ರಕಾರ ಬದ್ಧಶತ್ರುವು ಯಾರೊ ಕೆಳಗೆ 27ನೇ ಚಿತ್ರದಲ್ಲಿ ನೋಡಿ ತಿಳಿದುಕೊಳ್ಳೋಣ.

| | | | |
|---|---|---|---|
| 7<br>(ಗುರು)<br>1 | ಕುಜನು<br>2 | ಮಿತ್ರ<br>3 | ಚಿತ್ರ<br>4 |
| 6<br>ಶನಿ | **ಸೂತ್ರ**<br>**1x7**<br>**ಕನ್ಯಾಲಗ್ನ** | | ಚಂದ್ರ<br>5 |
| 5<br>ರಾಹು | | | ಸೂರ್ಯ<br>6 |
| 4<br>ಕೇತು | 3<br>ಭೂಮಿ | 2<br>ಶುಕ್ರನು | 1<br>(ಬುಧ)<br>7 |

**ಚತುರಸ್ರಾಕಾರದಲ್ಲಿರುವ ಕಾಲಚಕ್ರ – 27ನೇ ಚಿತ್ರ.**


ಇಲ್ಲಿ ಕನ್ಯಾಲಗ್ನ ಅಧಿಪತಿಯಾದ ಬುಧ ಗ್ರಹಕ್ಕೆ **1**x7 ಎನ್ನುವ ಸೂತ್ರದ ಪ್ರಕಾರ, ಅಲ್ಲಿಂದ ಸಪ್ತಮಸ್ಥಾನಾಧಿಪತಿಯಾದ ಗುರು ಗ್ರಹ ತೀವ್ರ ಶತ್ರುತ್ವ ಹೊಂದಿದೆ. ಹಾಗೇ ಗುರು ಗ್ರಹಕ್ಕು ಕೂಡ ಸರಿಯಾಗಿ ಬುಧ ಗ್ರಹವೇ ಬದ್ಧ ಶತ್ರುತ್ವ ವಹಿಸುತ್ತಿದೆ. ಯಾರಿಗೆ ಯಾರು ಬದ್ಧ ಶತ್ರುಗಳು ಎನ್ನುವುದು ಕೆಳಗಿನ ವರಸೆ ಕ್ರಮದಲ್ಲಿ ನೋಡಿರಿ.

| | | | |
|---|---|---|---|
| 1) | ಗುರುವಿಗೆ | ಬದ್ಧಶತ್ರು | ಬುಧನು |
| 2) | ಕುಜನಿಗೆ | ಬದ್ಧಶತ್ರು | ಶುಕ್ರನು |
| 3) | ಮಿತ್ರನಿಗೆ | ಬದ್ಧಶತ್ರು | ಭೂಮಿ |
| 4) | ಚಿತ್ರನಿಗೆ | ಬದ್ಧಶತ್ರು | ಕೇತು |
| 5) | ಚಂದ್ರನಿಗೆ | ಬದ್ಧಶತ್ರು | ರಾಹು |
| 6) | ಸೂರ್ಯನಿಗೆ | ಬದ್ಧಶತ್ರು | ಶನಿ |
| 7) | ಬುಧನಿಗೆ | ಬದ್ಧಶತ್ರು | ಗುರು |
| 8) | ಶುಕ್ರನಿಗೆ | ಬದ್ಧಶತ್ರು | ಕುಜನು |
| 9) | ಭೂಮಿಗೆ | ಬದ್ಧಶತ್ರು | ಮಿತ್ರ |
| 10) | ಕೇತುವಿಗೆ | ಬದ್ಧಶತ್ರು | ಚಿತ್ರ |
| 11) | ರಾಹುವಿಗೆ | ಬದ್ಧಶತ್ರು | ಚಂದ್ರನು |
| 12) | ಶನಿಗೆ | ಬದ್ಧಶತ್ರು | ಸೂರ್ಯನು |


ಗುರುವರ್ಗಕ್ಕೆ ಶನಿವರ್ಗ, ಶನಿವರ್ಗಕ್ಕೆ ಗುರುವರ್ಗ ಶತ್ರುಗಳಾದಲ್ಲಿಯೂ ಒಂದು ಗ್ರಹಕ್ಕೆ ಐದು ಗ್ರಹಗಳು ಸಾಧಾರಣ ಶತ್ರುಗಳಾಗಿದ್ದು ಒಂದು ಗ್ರಹ ಮಾತ್ರ ಬದ್ಧಶತ್ರುತ್ವ ಹೊಂದಿದೆ.

## 21 ಗುಣಚಕ್ರದಲ್ಲಿನ ಗುಣಗಳ ವಿವರವೇನು?


ಇಲ್ಲಿಯವರೆಗು ಬ್ರಹ್ಮ, ಕಾಲ, ಕರ್ಮ ಗುಣಚಕ್ರಗಳ ಸಮುದಾಯದಲ್ಲಿ ಕಾಲಚಕ್ರವನ್ನು ಕುರಿತು, ಕರ್ಮಚಕ್ರವನ್ನು ಕುರಿತು ಕೂಲಂಕುಷವಾಗಿ ತಿಳಿದುಕೊಂಡಿದ್ದೇವೆ. ಇನ್ನು ಕೆಳಗಿನ ಚಕ್ರವಾದ ಮತ್ತು ಕರ್ಮಗಳಿಗು ಕಾರ್ಯಗಳಿಗು ಕಾರಣವಾದ, 36 ಗುಣಗಳೊಂದಿಗೆ ಕೂಡಿ 'ಮಾಯ ಚಕ್ರವೆಂದು' ಹೆಸರು ವಾಸಿಯಾದ, ಗುಣಚಕ್ರವನ್ನು ಕುರಿತು ಸ್ವಲ್ಪ ತಿಳಿದುಕೊಳ್ಳೋಣ. ಇವೆಲ್ಲವೂ ಕಲ್ಪನೆ ಎಂದು ಅಂದುಕೊಳ್ಳಬೇಡಿ. ಬ್ರಹ್ಮವಿದ್ಯಾ ಶಾಸ್ತ್ರವಾದ ಭಗವದ್ಗೀತೆಯನ್ನು ಅನುಸರಿಸಿ ತಿಳಿಸುವವೆಂದು ಹೇಳುತ್ತಿದ್ದೇವೆ. ಗೀತೆಯಲ್ಲಿ ಅಕ್ಷರ ಪರಬ್ರಹ್ಮಯೋಗ ದಲ್ಲಿ ನಾಲ್ಕುಚಕ್ರಗಳ ಮೂಲ ಕಾಣಿಸಿದಾಗ, ಗುಣತ್ರಯ ವಿಭಾಗಯೋಗವೆನ್ನುವ ಅಧ್ಯಾಯದಲ್ಲಿ ಗುಣಗಳ ಕುರಿತಾದ ಸಮಾಚಾರ ಸವಿವರವಾಗಿದೆ. ಗುಣಚಕ್ರ ಮೂರು ಭಾಗಗಳಾಗಿ ಹೇಗಿರುವುದು, ಅದರಲ್ಲಿ ಜೀವಿಯು ಯಾವ ಭಾಗದಲ್ಲಿ ಇರುವಾಗ ಯಾವ ಹೆಸರು ಹೊಂದಿದೆ. ಒಂದೊಂದು ಭಾಗದಲ್ಲಿ ಗುಣಗಳು ಹೇಗೆ ಸೀಳಿರುವುದು ಚಿತ್ರಗಳ ರೂಪದಲ್ಲಿ ನೋಡೋಣ.





28ನೇ ಚಿತ್ರ. ಗುಣಚಕ್ರದಲ್ಲಿ ಜೀವಾತ್ಮ





29ನೇ ಚಿತ್ರ ತಾಮಸದಲ್ಲಿ ಜೀವಾತ್ಮ





30ನೇ ಚಿತ್ರ ರಾಜಸದಲ್ಲಿ ಜೀವಾತ್ಮ




31ನೇ ಚಿತ್ರ. ಸಾತ್ತ್ವಿಕದಲ್ಲಿ ಜೀವಾತ್ಮ




32ನೇ ಚಿತ್ರ. ಯೋಗದಲ್ಲಿ ಜೀವಾತ್ಮ




33ನೇ ಚಿತ್ರ. ಚಿಕ್ಕ ದೊಡ್ಡ ಗುಣಗಳು

ಈ ವಿಧವಾಗಿ ಗುಣಚಕ್ರ, ಮೂರು ಭಾಗಗಳಾಗಿ ಇದ್ದೂ ಅದರಲ್ಲಿ ಪಕ್ಷ, ಪ್ರತಿಪಕ್ಷ ಗುಣಗಳು 12 ವಿಧಗಳಾಗಿವೆ. ಅವುಗಳಲ್ಲಿ ಒಂದೊಂದು ಗುಣ 9 ವಿಧಗಳ ಪರಿಮಾಣವಾಗಿ ಸೀಳಿವೆ. ಈ 108 ಗುಣಗಳನ್ನೇ ಭಗವದ್ಗೀತೆಯಲ್ಲಿ **"ಮಾಯೆ"** ಎಂದು ಹೇಳಿದ್ದಾರೆ. ಗುಣಗಳ ಮಾಯೆಯಿಂದ ಉತ್ಪನ್ನವಾದ ಕರ್ಮ ಎನ್ನುವುದು ಕರ್ಮಚಕ್ರವನ್ನು ಸೇರಿ, ಮೇಲಿರುವ ಕಾಲಚಕ್ರದಲ್ಲಿನ ಹನ್ನೆರಡು ಗ್ರಹಗಳಿಂದ, ಪುನಃ ಮಾನವನ ಮೇಲೆ ಕಷ್ಟಸುಖಗಳ ರೂಪದಿಂದ ಪ್ರಸರಿಸಲ್ಪಡುತ್ತಿದೆ. ಅದನ್ನು ಮೊದಲಿಗೆ ತಿಳಿದುಕೊಳ್ಳುವುದನ್ನೇ ಜ್ಯೋತಿಷ್ಯ ಎನ್ನುತ್ತಿದ್ದೇವೆ. ಇದು ಜ್ಯೋತಿಷ್ಯಶಾಸ್ತ್ರ ಆದ್ದರಿಂದ ಗುಣಗಳನ್ನು, ಕರ್ಮಗಳನ್ನು, ಗ್ರಹಗಳನ್ನು ಹೇಳಿಕೊಳ್ಳಬೇಕಾಗಿ ಬಂದಿದೆ.


## 22 ಗುಣಗಳನ್ನು ಪ್ರೇರೇಪಿಸುವುದು ಕರ್ಮವಾ? ಅಥವಾ ಕಾಲವಾ?

ಗುಣಚಕ್ರದಲ್ಲಿನ ಗುಣಗಳನ್ನು ಪ್ರೇರೇಪಿಸುವುದು ಕರ್ಮವೇಯೆಂದು ಹೇಳಬಹುದು. ಕರ್ಮವನ್ನು ಕದಲಿಸುವುದು ಕಾಲವೆಂದು ಹೇಳಬಹುದು. ನಾಲ್ಕು ಚಕ್ರಗಳ ಜೋಡಣೆಯಲ್ಲಿ ಬ್ರಹ್ಮಚಕ್ರ ಎಲ್ಲದಕ್ಕು ದೊಡ್ಡದು, ಎಲ್ಲದಕ್ಕು ಅತೀತವಾದುದು. ಅದನ್ನು ಹೆಸರಿಗೆ ಮಾತ್ರ ಗುರುತಾಗಿ ಇಟ್ಟುಕೊಂಡಿದ್ದೇವೆ. ಆದ್ದರಿಂದ ಯಾವ ಮನುಷ್ಯನಿಗಾದರೂ ಕೆಳಗಿನ ಮೂರು ಚಕ್ರಗಳೇ ಮುಖ್ಯವೆಂದು ಹೇಳಬಹುದು. ಆ ಮೂರು ಚಕ್ರಗಳಲ್ಲಿ ಮಧ್ಯದಲ್ಲಿರುವುದು ಕರ್ಮಚಕ್ರ. ಕರ್ಮಚಕ್ರದ ಮೇಲೆ ಕಾಲಚಕ್ರವೂ, ಕೆಳಗೆ ಗುಣಚಕ್ರವೂ ಇದೆ. ಮಧ್ಯದಲ್ಲಿರುವ ಕರ್ಮವನ್ನು ಅನುಸರಿಸಿಯೇ ಕೆಳಗೆ ಗುಣಚಕ್ರ, ಮೇಲೆ ಕಾಲಚಕ್ರವೊಂದರ ನಿರ್ಮಾಣವಿದೆ. ಆದ್ದರಿಂದ ಈ ಮೂರು ಚಕ್ರಗಳನ್ನು ಸೇರಿಸಿ ಕಾಲ, ಕರ್ಮ, ಗುಣ ಚಕ್ರಗಳೆಂದು ಹೇಳಿದರೂ, ಆಧ್ಯಾತ್ಮಿಕ ವಿದ್ಯೆಯಲ್ಲಿ ಮೂರು ಚಕ್ರಗಳನ್ನು ಸೇರಿಸಿ ಕರ್ಮ ಚವಕಟ್ಟು ಎಂದೂ, ಕರ್ಮ ಲಿಖಿತ

ಎಂದೂ, ಕರ್ಮಪತ್ರ ಎಂದೂ, ಕರ್ಮ ಫಲಕ ಎಂದೂ ಹೇಳುತ್ತಿರುತ್ತಾರೆ. ಮನುಷ್ಯನಿಗೆ (ಜೀವಿಗೆ) ಅನುಭವಕ್ಕೆ ಬರುವುದು ಕರ್ಮವೇ. ಜೀವಿಯು ಗುಣಗಳ ಮಧ್ಯದಲ್ಲಿದ್ದರೂ, ಗುಣಗಳನ್ನು ಉಪಯೋಗಿಸಿಕೊಂಡು ಕರ್ಮವನ್ನು ಅನುಭವಿಸುತ್ತಿದ್ದಾನೆ. ಮೇಲೆ ಕಾಲಚಕ್ರದಲ್ಲಿ ದ್ವಾದಶಗ್ರಹಗಳಿದ್ದರೂ ಜೀವಿಗೆ ಕರ್ಮವನ್ನು ಅನುಭವಿಸುವಂತೆ ಮಾಡುವುದಕ್ಕೇ ಇವೆ. ಆದ್ದರಿಂದ ಪ್ರತಿ ಮನುಷ್ಯನಿಗು, ಪ್ರತಿ ಜೀವರಾಶಿಗು ಕರ್ಮಚಕ್ರವೇ ಮುಖ್ಯವೆಂದು ತಿಳಿಯುತ್ತಿದೆ. ಕಾಲ, ಕರ್ಮ, ಗುಣಚಕ್ರಗಳಲ್ಲಿ ಕರ್ಮಚಕ್ರಕ್ಕೆ ಪ್ರಾಧಾನ್ಯತೆ ಕೊಡುತ್ತಾ ಕರ್ಮಪತ್ರವೆಂದು, ಕರ್ಮಲಿಖಿತವೆಂದು, ಕರ್ಮಫಲಕವೆಂದು ಹೇಳುವುದು ನಡೆದಿದೆ.

ಕಾಲ, ಕರ್ಮ, ಗುಣಚಕ್ರಗಳ ನಿರ್ಮಾಣ ಮನುಷ್ಯನ ತಲೆಯಲ್ಲಿದ್ದರೂ ಅದರ ನಾಡಿ ಬೆನ್ನಿನಲ್ಲಿ ಕೆಳಗಿನವರೆಗು ವ್ಯಾಪಿಸಿದೆ. ಆದ್ದರಿಂದ ಮೂಲ ಗ್ರಂಥಗಳಲ್ಲಿ ದೇವರು ಕರ್ಮವನ್ನು ಬೆನ್ನಿಗೆ ನೇತಾಕಿ ಕಳಿಸಿದ್ದಾನೆಂದು, ಕುತ್ತಿಗೆಗೆ ಕಟ್ಟಿ ಕಳಿಸಿದ್ದಾನೆಂದು ಮುಖದಲ್ಲಿ ಬರೆದು ಕಳಿಸಿದ್ದಾನೆಂದು ಹೇಳುವುದು ನಡೆದಿದೆ. ಆದ್ದರಿಂದ ಬ್ರಹ್ಮ, ಕಾಲ, ಕರ್ಮ, ಗುಣ ಎನ್ನುವ ನಾಲ್ಕುಚಕ್ರಗಳನ್ನು ಸೇರಿಸಿ ಕರ್ಮ ವಿಧಾನವೆಂದು, ಕರ್ಮಪತ್ರವೆಂದು ಹೇಳುವುದಾಗಿದೆ. ಪ್ರತಿ ಮನುಷ್ಯನವೊಂದು ಕರ್ಮಲಿಖಿತದಲ್ಲಿ (ಕರ್ಮಬರಹದಲ್ಲಿ) ವ್ಯತ್ಯಾಸಗಳಿವೆ. ಯಾವ ವಿಧವಾಗಿ ಮನುಷ್ಯನವೊಂದು ಹಸ್ತದಲ್ಲಿನ ಬೆರಳಿನ ಗುರುತುಗಳು ಪ್ರತಿಯೊಬ್ಬರಿಗೂ ಬೇರೆಬೇರೆಯಾಗಿರುತ್ತವೊ, ಹಾಗೆಯೇ ಪ್ರತಿ ಮನುಷ್ಯನವೊಂದು ಕರ್ಮ ಲಿಖಿತ ಬೇರೆಬೇರೆಯಾಗಿ ಸ್ವಲ್ಪವಾದರೂ ವ್ಯತ್ಯಾಸ ಹೊಂದಿರುತ್ತದೆ. ಪ್ರತಿ ಮನುಷ್ಯನಲ್ಲಿಯೂ ಗುಣ ಚಕ್ರದಲ್ಲಿನ ಗುಣಗಳಾಗಲಿ, ಕಾಲಚಕ್ರದಲ್ಲಿನ ಗ್ರಹಗಳಾಗಲಿ ಏನೂ ವ್ಯತ್ಯಾಸ ಇಲ್ಲದಂತಿವೆ. ಗುಣಚಕ್ರದಲ್ಲಿನ ಮೂರು ಭಾಗಗಳಲ್ಲಾಗಲಿ, ಹನ್ನೆರಡು ಗುಣಗಳ ಸೀಳಿಕೆಗಳಾದ 108 ಗುಣಗಳ ಭಾಗಗಳಲ್ಲಾಗಲಿ ವ್ಯತ್ಯಾಸವಿಲ್ಲದೆ ಎಲ್ಲರಲ್ಲಿ ಸಮಾನವಾಗಿವೆ. ಹಾಗೇ ಕಾಲಚಕ್ರದಲ್ಲಿನ ಹನ್ನೆರಡು ಗ್ರಹಗಳಲ್ಲಾಗಲಿ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಎಲ್ಲರಲ್ಲಿ

ಒಂದೇ ವಿಧವಾಗಿವೆ. ನಾಲ್ಕುಚಕ್ರಗಳ ಸಮುದಾಯದಲ್ಲಿ ಒಂದು ಕರ್ಮಚಕ್ರ ಹೊರತುಪಡಿಸಿ ಎಲ್ಲಾ ಒಂದೇ ವಿಧವಾಗಿ ಎಲ್ಲರಲ್ಲಿ ಇರುವಾಗ, ಕರ್ಮಚಕ್ರದಲ್ಲಿನ ಕರ್ಮ ಮಾತ್ರ ಮನುಷ್ಯ ಮನುಷ್ಯನಿಗು ವ್ಯತ್ಯಾಸ ಹೊಂದಿದೆ. ಪ್ರತಿ ಮನುಷ್ಯನಲ್ಲಿನ ಕರ್ಮಭೇದ ಅವನ ಅನುಭವದಲ್ಲಿ ಕಾಣಿಸುತ್ತಿದೆ. ದೇವರಿಗೆ ಸಂಬಂಧಿಸಿದ ಬ್ರಹ್ಮಚಕ್ರವನ್ನು ಪಕ್ಕದಲ್ಲಿಟ್ಟು ಮನುಷ್ಯನಿಗೆ ಸಂಬಂಧಿಸಿದ ಗುಣ, ಕರ್ಮ, ಕಾಲ ಚಕ್ರಗಳನ್ನು ನೋಡಿದರೆ ಮೂರು ಚಕ್ರಗಳಲ್ಲಿ ಮಧ್ಯದಲ್ಲಿರುವುದು ಕರ್ಮಚಕ್ರ. ಮಧ್ಯದಲ್ಲಿರುವ ಕರ್ಮಚಕ್ರವೇ ಮೂರು ಚಕ್ರಗಳಲ್ಲಿ ಮುಖ್ಯವಾದುದೆಂದು ಹೇಳಿಕೊಂಡಿದ್ದೇವೆ. ಕಾಲ ಗುಣ ಎಲ್ಲರಿಗೂ ಸಮಾನವೇ ಆದರೂ, ಕರ್ಮ ಮಾತ್ರ ಯಾವೊಬ್ಬರಲ್ಲಿ ಸಮಾನವಾಗಿ ಇಲ್ಲ. ಪ್ರತಿ ಮನುಷ್ಯನಲ್ಲಿಯೂ ಬೇರೆ ಬೇರೆಯಾಗಿರುವ ಕರ್ಮ ಮನುಷ್ಯನವೊಂದು ಗುಣಗಳನ್ನು ಪ್ರೇರೇಪಿಸುತ್ತಿದೆ.




34ನೇ ಚಿತ್ರ. ಕರ್ಮಪತ್ರ

ಮೇಲೆ ಕಾಲಚಕ್ರದಲ್ಲಿರುವ ಗ್ರಹಗಳ ಕಿರಣಗಳು ಕರ್ಮಚಕ್ರದಲ್ಲಿನ ಕರ್ಮದ ಮೇಲೆ ಬಿದ್ದಾಗ, ಕರ್ಮವೊಂದರ ನೆರಳು ಕೆಳಗೆ ಗುಣಗಳ ಮೇಲೆ ಬೀಳುತ್ತಿದೆ. ಬಿದ್ದ ಕರ್ಮನೆರಳನ್ನು ಅನುಸರಿಸಿ ಆಗ ಯಾವ ಗುಣ ಅಗತ್ಯವೊ ಆ ಗುಣವು ಪ್ರೇರೇಪಿಸಲ್ಪಡುತ್ತಿದೆ. ಆ ಸಮಯಕ್ಕೆ ಪ್ರೇರೇಪಿಸಲ್ಪಟ್ಟ ಗುಣದಿಂದ ಕಾರ್ಯ ಮಾಡಲಾಗುತ್ತದೆ. ಕರ್ಮ ಕಾರಣದಿಂದ ಗುಣದಿಂದ ನಡೆಯುವ ಕೆಲಸ ಸ್ವಲ್ಪ ಕಾಲ ನಡೆಯುತ್ತಿದೆ. ಎಷ್ಟು ಕಾಲ ನಡೆದಿದೆಯೆನ್ನುವುದಕ್ಕೆ ಕರ್ಮವನ್ನು ಅನುಸರಿಸಿ ಕಾಲವಿರುತ್ತದೆ. ಕರ್ಮ ಸ್ವಲ್ಪವಿದ್ದರೆ ಕಡಿಮೆ ಕಾಲದಲ್ಲಿ ಅನುಭವವಿರುತ್ತದೆ. ಕರ್ಮ ಬಹಳ ಇದ್ದರೆ ಹೆಚ್ಚು ಕಾಲ ಅನುಭವವಿರುತ್ತದೆ. ಈ ವಿಧವಾಗಿ ಕರ್ಮವನ್ನನುಸರಿಸಿ ಇತ್ತ ಗುಣಗಳೂ, ಅತ್ತ ಕಾಲವಿರುತ್ತದೆ. ಆದ್ದರಿಂದ ಕರ್ಮವನ್ನನುಸರಿಸಿ ಕಾಲವೂ, ಕರ್ಮವನ್ನನುಸರಿಸಿ ಗುಣಗಳಿರುತ್ತವೆಂದು ಹೇಳಬಹುದು.

## 23 ಗುಣಚಕ್ರದಲ್ಲಿನ ಭಾಗಗಳಲ್ಲಿ ಯಾವುದು ಒಳ್ಳೆಯದು?

ಗುಣಚಕ್ರದಲ್ಲಿ ಮೂರು ಗುಣಗಳಿರುವ ಭಾಗಗಳು, ಒಂದು ಗುಣವಿಲ್ಲದ ಭಾಗ ಒಟ್ಟು ನಾಲ್ಕು ಭಾಗಗಳಿರುತ್ತವೆ. ಗುಣಗಳು ಯಾವ ಭಾಗದಲ್ಲಿದ್ದರೂ ಅವುಗಳನ್ನು **"ಮಾಯೆ"** ಎನ್ನಬಹುದು. ಮೂರು ಗುಣ ಭಾಗಗಳಿಗೆ ಮಧ್ಯದಲ್ಲಿರುವ ಗುಣವಿಲ್ಲದ ಭಾಗವನ್ನು ಆತ್ಮ ಭಾಗವೆಂದೂ, ಮಾಯಾತೀತ ಭಾಗವೆಂದೂ, ಗುಣರಹಿತ ಭಾಗವೆಂದೂ, ಯೋಗ ಸ್ಥಾನವೆಂದೂ ಹೇಳಬಹುದು. ಗುಣಚಕ್ರ ಹೊರಗಿನ ವರಸೆ ಕ್ರಮದಲ್ಲಿ ಮೊದಲ ಭಾಗ ತಾಮಸ ಗುಣಭಾಗ, ಎರಡನೆಯದು ರಾಜಸ ಗುಣ ಭಾಗ, ಮೂರನೆಯದು ಸಾತ್ತ್ವಿಕ ಗುಣಭಾಗ ಎನ್ನುವ ಹೆಸರುಗಳಿಂದ ಹೇಳುತ್ತಿದ್ದೇವೆ. ಮೂರು ಭಾಗಗಳಲ್ಲಿನ ಗುಣಗಳು ಬೇರೆ ಬೇರೆ ಆಲೋಚನೆಗಳನ್ನು ಹುಟ್ಟಿಸಿ, ಆಲೋಚನೆಗೆ ತಕ್ಕಂತೆ ಪ್ರವರ್ತಿಸುವಂತೆ

ಮಾಡುತ್ತವೆ. ಗುಣ ಆಚರಣೆಯಲ್ಲಿ ಪಾಪಪುಣ್ಯ ಕರ್ಮಗಳು ತಯಾರಾಗುತ್ತಿವೆ. ಜ್ಞಾನಿಯಾದವನು ಗುಣಾಚರಣೆಯಿಂದ ಬಂದಿರುವ ಕರ್ಮದಿಂದ ತಪ್ಪಿಸಿ ಕೊಳ್ಳುವನು. ಜ್ಞಾನ ಇಲ್ಲದವನು ಕರ್ಮದಿಂದ ತಪ್ಪಿಸಿಕೊಳ್ಳದೆ ಅದನ್ನು ಅಂಟಿಸಿಕೊಳ್ಳುತ್ತಿದ್ದಾನೆ. ಗುಣರಹಿತ ಭಾಗವಾದ ನಾಲ್ಕನೇ ಭಾಗದಲ್ಲಿ ಗುಣಗಳಿಲ್ಲ. ಆದ್ದರಿಂದ ಅದನ್ನು ಬ್ರಹ್ಮಯೋಗವೆಂದು ಹೇಳಬಹುದು. ಬ್ರಹ್ಮಯೋಗದಲ್ಲಿ ಜೀವಿ ಇರುವಾಗ ಕರ್ಮ ಆಚರಣೆಯಿಲ್ಲ. ಹಾಗೇ ಗುಣ ಆಲೋಚನೆಯಿಲ್ಲ. ಒಟ್ಟಿನಲ್ಲಿ ಕರ್ಮವೇ ಇಲ್ಲ. ಆದ್ದರಿಂದ ಕರ್ಮವಿಲ್ಲದ ಭಾಗವಾದ ನಾಲ್ಕನೇ ಭಾಗವೇ ಗುಣಚಕ್ರದಲ್ಲಿ ಒಳ್ಳೆಯದೆಂದು ಹೇಳಬಹುದು.

## 24 ಕರ್ಮಚಕ್ರದಲ್ಲಿ ಯಾವ ಕರ್ಮ ಎಲ್ಲಿ ಸೇರುತ್ತಿದೆ?

ನಾಲ್ಕು ಚಕ್ರಗಳ ಸಮುದಾಯ ಪ್ರತಿ ಮಾನವನ ಶಿರಸ್ಸಿನಲ್ಲಿ ಇದೆ. ನಾಲ್ಕು ಚಕ್ರಗಳಿಗು ಆಧಾರವಾದ ಆತ್ಮ ತಲೆಯಿಂದ ಬೆನ್ನಿನ ಕೆಳಗಿನ ಭಾಗದವರೆಗು ವ್ಯಾಪಿಸಿರುವ ಬ್ರಹ್ಮನಾಡಿಯಲ್ಲಿ (ದೊಡ್ಡ ನರದಲ್ಲಿ) ಇದೆ. ಮೇಲಿನ ಚಕ್ರ ದೇವರಿಗೆ ಸಂಬಂಧಿಸಿರುವುದು, ಆದ್ದರಿಂದ ಪ್ರತೀಸಲ ಅದನ್ನು ಹೇಳಬೇಕಾದ ಅವಶ್ಯಕತೆಯಿಲ್ಲ. ಆದ್ದರಿಂದ ಮೇಲಿನ ಚಕ್ರವನ್ನು ಬಿಟ್ಟು ಮನುಷ್ಯನಿಗೆ ಸಂಬಂಧಿಸಿದ ಮೂರು ಚಕ್ರಗಳನ್ನೇ ಹೇಳಿಕೊಳ್ಳೋಣ. ಕಾಲ, ಕರ್ಮ, ಗುಣ ಚಕ್ರಗಳು ಮೂರು ಇದ್ದರೂ ಹೆಚ್ಚಿನ ಪ್ರಾಧಾನ್ಯತೆ ಹೊಂದಿರುವುದು ಕರ್ಮ ಚಕ್ರವೆಂದು ಹೇಳಿಕೊಂಡಿದ್ದೇವೆ. ಅತ್ತ ಕಾಲಚಕ್ರ ಇತ್ತ ಗುಣಚಕ್ರಗಳ ಮಧ್ಯದಲ್ಲಿ ಕರ್ಮಚಕ್ರವಿದ್ದು ಪ್ರಾಧಾನ್ಯತೆ ಹೊಂದಿರುವುದರಿಂದ, ಇತರ ಮತಗ್ರಂಥಗಳೆಂದು ಹೆಸರುವಾಸಿಯಾದ ಮೂಲ ಗ್ರಂಥಗಳಲ್ಲಿ ಕೂಡಾ ಕರ್ಮಚಕ್ರ ಪ್ರಸ್ಥಾವನೆ ಬಂದಿದೆ. ಇಲ್ಲಿ ಕರ್ಮಚಕ್ರವೆಂದು ಯಾವುದನ್ನನ್ನುತ್ತಿದ್ದೇವೊ ಅದನ್ನೇ ಕರ್ಮಪತ್ರವೆಂದು ಮೂಲ ಗ್ರಂಥಗಳಲ್ಲಿ ಹೇಳಿದ್ದಾರೆ. ಒಳ್ಳೆಯ ಕೆಡಕುಗಳಿರುವ

ಕರ್ಮಪತ್ರವನ್ನು ಮನುಷ್ಯನ ಕತ್ತಿನಲ್ಲಿ ನೇತುಹಾಕಿದ್ದೇವೆಂದು 17ನೇ ಸುರಾ, 13ನೇ ಆಯತ್‌ನಲ್ಲಿ ಖುರ್‌ಆನ್ ಗ್ರಂಥದಲ್ಲಿ ಹೇಳಲ್ಪಟ್ಟಿದೆ. ಅಲ್ಲಿ ಪಾಪ ಪುಣ್ಯಗಳನ್ನು ಕೆಟ್ಟದು ಒಳ್ಳೆಯದೆಂದು ಹೇಳಿದ್ದಾರೆ. ಅಷ್ಟೇ ಅಲ್ಲದೆ ತಲೆಯಲ್ಲಿ ನಾಲ್ಕು ಚಕ್ರಗಳು ಕೆಳಕ್ಕೆ ಬ್ರಹ್ಮನಾಡಿಯಾಗಿ ನೇತಾಡುವುದನ್ನು ಕರ್ಮಪತ್ರವನ್ನು ಕತ್ತಿನಲ್ಲಿ ನೇತಾಕಿದ್ದೇವೆಂದು ಹೇಳಿದ್ದಾರೆ. ಈ ವಿಧವಾಗಿ ಕರ್ಮಚಕ್ರ ಆಧ್ಯಾತ್ಮಿಕ ರಂಗದಲ್ಲಿ ಎಲ್ಲಾ ಮತಗ್ರಂಥಗಳಲ್ಲಿ ಪ್ರಸ್ಥಾವನೆಗೆ ಬಂದಿದೆ.


ಪ್ರತಿ ಮನುಷ್ಯನಿಗು ಕಾಲ, ಕರ್ಮ, ಗುಣಚಕ್ರಗಳು ಮೂರು ಮುಖ್ಯವಾದವೆಂದು ಹೇಳಿಕೊಂಡಿದ್ದೇವೆ. ಆ ಮೂರು ಚಕ್ರಗಳಲ್ಲಿ ಕರ್ಮಚಕ್ರ ಬಹಳ ಮುಖ್ಯವಾದುದೆಂದು ಹೇಳಿದ್ದೇವೆ. ಕರ್ಮವನ್ನನುಸರಿಸಿಯೇ ಕಾಲವೂ, ಕರ್ಮವನ್ನನುಸರಿಸಿಯೇ ಗುಣಗಳೆಂದು ಕೂಡಾ ಹೇಳಿಕೊಂಡಿದ್ದೇವೆ. ಈಗ ಮತ್ತಷ್ಟು ಪ್ರತ್ಯೇಕವಾಗಿ ಹೇಳುವುದೇನೆಂದರೆ! ಸೃಷ್ಠ್ಯಾದಿಯಿಂದಿರುವ ಕಾಲಚಕ್ರದಲ್ಲಿನ ಗ್ರಹಗಳಾಗಲಿ, ಗುಣಚಕ್ರದಲ್ಲಿನ ಗುಣಗಳಾಗಲಿ, ಬದಲಾಗದೆ ಎಷ್ಟಿವೆಯೋ ಹೇಗಿವೆಯೋ, ಎಲ್ಲವೂ ಹಾಗೆಯೇ ಇವೆ. ಕಾಲಚಕ್ರದಲ್ಲಿನ ಹನ್ನೆರಡು (12) ಗ್ರಹಗಳು ಬದಲಾಗಲಿಲ್ಲ. ಗುಣಚಕ್ರದಲ್ಲಿನ ಗುಣಗಳು ಬದಲಾಗಲಿಲ್ಲ. ನಿಂಬೆಹಣ್ಣಿನಲ್ಲಿನ ಹುಳಿ, ಮೆಣಸಿನಕಾಯಿಯಲ್ಲಿನ ಕಾರ ಸ್ವಲ್ಪ ಬದಲಾಗಬಹುದೇನೊ ಆದರೆ, ಕಾಲಚಕ್ರದಲ್ಲಿನ ಗ್ರಹಗಳಾಗಲಿ, ಗುಣಚಕ್ರದಲ್ಲಿನ ಗುಣಗಳಾಗಲಿ ಸ್ವಲ್ಪವೂ ಬದಲಾಗದೆ ಹಾಗೆಯೇ ಇವೆ. ಕಾಲಚಕ್ರದಲ್ಲಿನ ಗ್ರಹಗಳು, ಗುಣಚಕ್ರದಲ್ಲಿನ ಗುಣಗಳು ಬದಲಾಗದಿದ್ದರೂ, ಕರ್ಮಚಕ್ರದಲ್ಲಿನ ಕರ್ಮ ಮಾತ್ರ ನಿತ್ಯ ಜಮ, ಖರ್ಚು ಆಗುತ್ತಾ ಯಾವಾಗಲೂ ಬದಲಾಗುತ್ತಲೇ ಇದೆ. ಯಾರ ಕರ್ಮಚಕ್ರದಲ್ಲಿನ ಕರ್ಮ ಸ್ಥಿರಸ್ಥಾಯಿಯಾಗಿ ಇರುವುದಿಲ್ಲ. ಆದ್ದರಿಂದ ಎಂದಿಗೂ ಒಂದೇ ವಿಧವಾಗಿ ಆಗಾಮಿ ಪಾಪಪುಣ್ಯಗಳಾಗಲಿ, ಪ್ರಾರಬ್ಧ ಪಾಪಪುಣ್ಯಗಳಾಗಲಿ ಇರದೆ ಬದಲಾಗುತ್ತಿರುತ್ತವೆ. ನಿತ್ಯವೂ ಬದಲಾಗುತ್ತಿರುವ ಕರ್ಮಚಕ್ರ ಮೂರು ಚಕ್ರಗಳಲ್ಲಿ ಮುಖ್ಯವಾದುದಾಗಿದೆ. ಯಾರು ಎಂತಹವನೋ ನೋಡಬೇಕಾಗಿ ಬಂದಾಗ ಅವನ ಗುಣಗಳನ್ನು ಪ್ರೇರೇಪಿಸುವ ಕರ್ಮವನ್ನೇ ನೋಡಬೇಕಾಗಿ ಬರುತ್ತಿದೆ. ಕರ್ಮ ಪ್ರೇರಣೆಯಿಂದಲೇ ಗುಣಗಳು ಇರುವುದರಿಂದ ಗುಣಗಳಿಗೆ ಕಾರಣವಾದ

ಕರ್ಮವನ್ನೇ ನೋಡಬೇಕಾಗಿ ಬಂದಿದೆ. ಆದ್ದರಿಂದ ಮನುಷ್ಯನಿಗೆ ಸಂಬಂಧಿಸಿದ ಜೀವನ ವಿಧಾನವೇನಾದರೂ ಹೇಗಿದೆಯೆನ್ನುವುದಕ್ಕೆ ಕರ್ಮವೇ ಕನ್ನಡಿಯಾಗಿ, ಪ್ರತಿರೂಪವಾಗಿದೆ. ಯಾವ ಜ್ಯೋತಿಷ್ಯನಾದರೂ ಮನುಷ್ಯನಲ್ಲಿನ ಕರ್ಮವನ್ನೇ ಲೆಕ್ಕಿಸಿ ನೋಡಿ ಅವನ ಭವಿಷ್ಯತ್ತು ಸ್ವಲ್ಪಮಟ್ಟಿಗೆ ತಿಳಿಯಬಹುದು. ಜ್ಯೋತಿಷ್ಯ ಎಲ್ಲವೂ ಜ್ಯೋತಿಯಿಂದ ಮುಡಿಪಟ್ಟಿದೆ. ಆದ್ದರಿಂದ ಜ್ಞಾನ (ಜ್ಯೋತಿ) ತಿಳಿಯದವನು ಸರಿಯಾದ ಜ್ಯೋತಿಷ್ಯನಲ್ಲ. ಜ್ಞಾನವನ್ನು ತಿಳಿಯುವುದರಿಂದಲೇ ಕರ್ಮಗಳೂ, ಅವುಗಳ ಬಾಧೆಗಳೂ ತಿಳಿಯುತ್ತವೆ. ಅದನ್ನು ಅನುಸರಿಸಿ ಜ್ಯೋತಿಷ್ಯವನ್ನು ತಿಳಿಯಬಹುದು.

## 25 ಅಂಗೀ, ಅರ್ಧಾಂಗಿ

ಜ್ಞಾನವನ್ನನುಸರಿಸಿ ಯಾವ ಕರ್ಮ ಎಲ್ಲಿ ಸೇರುತ್ತಿದೆಯೋ ತಿಳಿಯದಿದ್ದರೂ, ಅದು ಎಲ್ಲವೂ ಜ್ಯೋತಿಷ್ಯಶಾಸ್ತ್ರವನ್ನು ಅನುಸರಿಸಿ ತಿಳಿಯುತ್ತದೆ. ಬ್ರಹ್ಮವಿದ್ಯಾ ಶಾಸ್ತ್ರವನ್ನು ಅನುಸರಿಸಿ ಯಾವ ಕರ್ಮ ಎಷ್ಟು ತೀವ್ರವಾದುದೋ, ಅದರಿಂದ ಬಾಧೆ ಎಷ್ಟು ತೀಕ್ಷಣವಾಗಿರುತ್ತದೋ, ಅದನ್ನು ಅನುಭವಿಸದಂತೆ ತಪ್ಪಿಸಿಕೊಳ್ಳುವುದಕ್ಕೆ ದಾರಿ ಯಾವುದೋ ತಿಳಿಯುತ್ತದೆ. ಬ್ರಹ್ಮವಿದ್ಯಾ ಶಾಸ್ತ್ರದೊಂದಿಗೆ ಅನುಸಂಧಾನವಾದುದು ಜ್ಯೋತಿಷ್ಯ ಶಾಸ್ತ್ರ. ಆದ್ದರಿಂದ ಬ್ರಹ್ಮವಿದ್ಯಾ ಶಾಸ್ತ್ರ ಸಂಬಂಧದಿಂದಲೇ ಮನುಷ್ಯ ಕರ್ಮಚಕ್ರದಲ್ಲಿ (ಕರ್ಮಪತ್ರದಲ್ಲಿ) ಯಾವ ಕರ್ಮ ಎಲ್ಲಿ ಲಿಖಿತವಾಗಿದೆಯೋ ತಿಳಿದುಕೊಳ್ಳೋಣ. ಮನುಷ್ಯನ ಜನನದಿಂದ ಆತನ ಜೀವನ ಪ್ರಾರಂಭವಾಗುತ್ತಿದೆ. ನಂತರ ಎಷ್ಟೋ ಸ್ವಲ್ಪ ಕಾಲಕ್ಕೆ ಮನುಷ್ಯನಿಗೆ ಸಂಭವಿಸುವ ಮರಣದಿಂದಲೇ ಆತನ ಜೀವನ ಅಂತ್ಯವಾಗುತ್ತಿದೆ. ಜೀವನದಲ್ಲಿ ಇತ್ತ ಮೊದಲು ಅತ್ತ ಅಂತ್ಯಕ್ಕು ಹುಟ್ಟು ಸಾವುಗಳು ಎರಡೂ ಎಲ್ಲರಿಗೂ ತಿಳಿದ ಸಂಘಟನೆಗಳೇ. ಅವುಗಳ ವಿವರ ಕರ್ಮ ರೂಪದಲ್ಲಿ ಇರದೆ ಹೋದರೂ ಎಲ್ಲಿಂದ ಕಾರ್ಯಗಳು ಶುರುವಾಗುತ್ತವೊ, ಎಲ್ಲಿ ಅಂತ್ಯವಾಗುತ್ತವೊ ಅದಕ್ಕೆ ಸಂಬಂಧಿಸಿದ ಕರ್ಮಗಳು ಕರ್ಮಚಕ್ರದಲ್ಲಿ ಲಿಖಿತವಾಗಿವೆ. ಕರ್ಮಚಕ್ರದಲ್ಲಿ


ಹನ್ನೆರಡು ಸ್ಥಾನಗಳಿರುವಾಗ, ಅದರಲ್ಲಿ ಜೀವನದ ಪ್ರಾರಂಭ ಕರ್ಮ ಮೊದಲನೆಯದಾದ ಒಂದನೇ ಸ್ಥಾನದಲ್ಲಿಯೂ, ಹಾಗೇ ಜೀವನದ ಅಂತ್ಯದಲ್ಲಿನ ಕರ್ಮ ಕೊನೆಯದಾದ ಹನ್ನೆರಡನೇ ಸ್ಥಾನದಲ್ಲಿಯೂ ಬರೆಯಲ್ಪಟ್ಟಿರುತ್ತದೆ.




35. ಚಿತ್ರ

ಮನುಷ್ಯನ ಜೀವನದಲ್ಲಿ ಮದುವೆಯಾಗದ ಮುನ್ನ ಜೀವನ ಒಂದು ವಿಧವಾಗಿ ನಡೆದರೆ ಮದುವೆಯಾದ ನಂತರ ಜೀವನ ಮತ್ತೊಂದು ವಿಧವಾಗಿ ನಡೆಯುತ್ತದೆ. ಮದುವೆ ಕಾರ್ಯದಿಂದ ಬರುವವಳು ಹೆಂಡತಿ. ಹೆಂಡತಿಯನ್ನು ಜೀವನದ ಭಾಗಸ್ವಾಮಿಯೆಂದೂ, ಅರ್ಧಾಂಗಿ ಎಂದೂ ಹೇಳುವುದು ನಡೆಯುತ್ತಿದೆ. ಅರ್ಧಾಂಗಿ ಎನ್ನುವ ಪದವನ್ನು ಬಿಡಿಸಿ ನೋಡಿದರೆ ಅರ್ಧ+ಅಂಗಿ=ಅರ್ಧಾಂಗೀ ಎಂದು ತಿಳಿಯುತ್ತಿದೆ. ಅಂಗ ಎಂದರೆ ಶರೀರ ಎಂದೂ, ಅಂಗಿ ಎಂದರೆ ಶರೀರವನ್ನು ಧರಿಸಿರುವುದೆಂದು ಅರ್ಥ. 'ಅಂಗ' ಎನ್ನುವ ಪದದಿಂದ 'ಅಂಗೀ' ಎನ್ನುವ ಪದ ಹುಟ್ಟಿದೆ. ಅರ್ಧಾಂಗಿ ಎನ್ನುವ ಹೆಸರು ಹೆಂಡತಿಗಿರುವುದರಿಂದ ಕರ್ಮಚಕ್ರದಲ್ಲಿನ 12 ಭಾಗಗಳಲ್ಲಿ ಅರ್ಧ ಭಾಗವನ್ನು ಬಿಟ್ಟು, ಉಳಿದ ಅರ್ಧಭಾಗ ಪ್ರಾರಂಭವಾಗುವ ಏಳನೇ ಸ್ಥಾನದಲ್ಲಿ

ಹೆಂಡತಿಯವೊಂದು ಕರ್ಮ ಬರೆಯಲ್ಪಟ್ಟಿದೆಯೆಂದು ತಿಳಿಯಬೇಕು. ಹೆಂಡತಿ ಗಂಡನಲ್ಲಿ ಅರ್ಧ ಶರೀರ ಹೊಂದಿದವಳೆಂದು ಅರ್ಧನಾರೀಶ್ವರ ಚಿತ್ರ ತಿಳಿಸುತ್ತಿದೆ. ಆದ್ದರಿಂದ ಕರ್ಮ ಪತ್ರದಲ್ಲಿನ ಹನ್ನೆರಡು ಭಾಗಗಳಲ್ಲಿ ಅರ್ಧದ ನಂತರ ಬರುವ ಏಳನೆ ಸ್ಥಾನದಲ್ಲಿ ಹೆಂಡತಿಗೆ ಸಂಬಂಧಿಸಿದ ಕರ್ಮವನ್ನು ಲಿಖಿಸುವುದಾಗಿದೆ.




36ನೇ ಚಿತ್ರವನ್ನು ನೋಡಿರಿ.


ಹಾಗೇ ಮೇಲಿರುವ 36ನೇ ಚಿತ್ರದಲ್ಲಿ 12 ಭಾಗಗಳನ್ನು ಎರಡು ಭಾಗಗಳಾಗಿ ವಿಭಜಿಸಿ, ಅದರಲ್ಲಿ ಮೊದಲ ಭಾಗದಲ್ಲಿ ಒಂದನೇ ಸ್ಥಾನ ತನ್ನ ಶರೀರಕ್ಕೆ ಸಂಬಂಧಿಸಿರುವುದೆಂದೂ, ಎರಡನೇ ಭಾಗದಲ್ಲಿ ಏಳನೇ ಸ್ಥಾನ ತನ್ನ ಹೆಂಡತಿಗೆ ಸಂಬಂಧಿಸಿರುವುದೆಂದೂ ಗುರುತಿಸಿದ್ದೇವೆ. ಮೊದಲ ಭಾಗದಲ್ಲಿ ಆರು ಸ್ಥಾನಗಳು ದಾಟಿದ ನಂತರ ಎರಡನೇ ಅರ್ಧ ಭಾಗ ಏಳನೇ ಸ್ಥಾನದಿಂದ ಪ್ರಾರಂಭವಾಗುವುದರಿಂದ, ಹೆಂಡತಿಯನ್ನು ಅರ್ಧಾಂಗಿ ಎಂದು ಹೇಳುತ್ತಾ, ಕರ್ಮಚಕ್ರದಲ್ಲಿ (ಕರ್ಮಪತ್ರದಲ್ಲಿ) ಏಳನೇ ಸ್ಥಾನದಲ್ಲಿಯೇ ಹೆಂಡತಿಗೆ ಸಂಬಂಧಿಸಿದ ಕರ್ಮವನ್ನು ಲಿಖಿಸುವುದು ನಡೆದಿದೆ. ಇಲ್ಲಿಯವರೆಗು 1, 12

ಸ್ಥಾನಗಳು ಜನನ ಮತ್ತು ಮರಣಗಳನ್ನೂ, 1, 7 ಸ್ಥಾನಗಳಲ್ಲಿ 1ನೆಯದು ತನ್ನ ಶರೀರಕ್ಕೆ ಸಂಬಂಧಿಸಿದ ಕರ್ಮವನ್ನು ಸೂಚಿಸಿದಾಗ, 7ನೇಯದು ತನ್ನ ಹೆಂಡತಿಗೆ ಸಂಬಂಧಿಸಿದ ಕರ್ಮವನ್ನು ಸೂಚಿಸುತ್ತಿದೆ. ಇಲ್ಲಿಗೆ 1,7,12 ಸ್ಥಾನಗಳಲ್ಲಿ ಕರ್ಮ ಏನಿರುತ್ತದೊ ತಿಳಿದುಹೋಗಿದೆ. ಇನ್ನು ಉಳಿದ ಸ್ಥಾನಗಳಲ್ಲಿ ಎಂತಹ ಕರ್ಮಗಳಿರುತ್ತವೊ ನೋಡೋಣ.

## 26 ಕರ್ಮಚಕ್ರದಲ್ಲಿನ ಕೇಂದ್ರಗಳು


ಕರ್ಮಚಕ್ರದಲ್ಲಿನ 12 ಭಾಗಗಳನ್ನು ಅಂಗಿ ಅರ್ಧಾಂಗಿ ಎಂದು ಎರಡು ಭಾಗಗಳಾಗಿ ವಿಭಜಿಸಿಕೊಂಡಿದ್ದೇವೆ. ಅಂಗಿ ಎನ್ನುವ ಮೊದಲ ಭಾಗದಲ್ಲಿ 1ನೇ ಸ್ಥಾನ, ಅರ್ಧಾಂಗಿ ಎನ್ನುವ ಎರಡನೆ ಭಾಗದಲ್ಲಿ 7ನೇ ಸ್ಥಾನ ಪ್ರಾರಂಭವಾಗಿವೆ ಆಗುವುದಲ್ಲದೇ, 1 ನೇ ಸ್ಥಾನದಲ್ಲಿ ತನ್ನ ಶರೀರಕ್ಕೆ ಸಂಬಂಧಿಸಿದ ಕರ್ಮವೂ, 7ನೇ ಸ್ಥಾನದಲ್ಲಿ ತನ್ನ ಹೆಂಡತಿಗೆ ಸಂಬಂಧಿಸಿದ ಕರ್ಮವೂ ನಮೂದು ಮಾಡಲ್ಪಟ್ಟಿದೆಯೆಂದು ಮತ್ತು ನಮೂದು ಮಾಡಲ್ಪಡುತ್ತಿದೆಯೆಂದು ಹೇಳಿದ್ದೇವೆ. ಈಗ ಅಂಗಿ ಅರ್ಧಾಂಗಿ ಎನ್ನುವ ಎರಡು ಭಾಗಗಳಲ್ಲಿ ಮುಖ್ಯ ಕೇಂದ್ರಗಳಾಗಿ ಗುರುತಿಸಲ್ಪಟ್ಟ ಸ್ಥಾನಗಳು ಎರಡು ಇವೆ. ಮೊದಲ ಭಾಗದಲ್ಲಿ ಆರು ಸ್ಥಾನಗಳಲ್ಲಿ ಮುಖ್ಯವಾದುದಾಗಿ ಒಂದು ಸ್ಥಾನವೂ, ಎರಡನೆ ಭಾಗದಲ್ಲಿ ಆರು ಸ್ಥಾನಗಳಲ್ಲಿ ಮುಖ್ಯವಾದುದಾಗಿ ಮತ್ತೊಂದು ಸ್ಥಾನವನ್ನು ಗುರುತಿಸುವುದಾಗಿದೆ. ಈ ಎರಡು ಮುಖ್ಯ ಸ್ಥಾನಗಳು ಅಂಗಿ, ಅರ್ಧಾಂಗಿ ಎನ್ನುವ ಎರಡು ಭಾಗಗಳಲ್ಲಿ ಆಯಾ ಭಾಗಗಳಿಗೆ ಕೇಂದ್ರಗಳಾಗಿ ಇವೆ. ಕೇಂದ್ರ ಎಂದರೇ ಆಧಾರಸ್ಥಾನವೆಂದು, ಮುಖ್ಯವಾಗಿ ಗುರುತು ಹೊಂದಿದ ಸ್ಥಾನವೆಂದು ಹೇಳಬಹುದು. ಕರ್ಮಚಕ್ರವೊಂದರ ಹನ್ನೆರಡು ಸ್ಥಾನಗಳಲ್ಲಿಯೇ ಮನುಷ್ಯನ (ಜೀವಿಯ) ಜೀವನವೆಲ್ಲಾ ಒಳಗೊಂಡಿದೆ. ಮನುಷ್ಯನ ಜೀವನಕ್ಕೆ ಸಂಬಂಧಿಸಿದ ಕರ್ಮಚಕ್ರದಲ್ಲಿ ಕೇಂದ್ರಗಳಾಗಿರುವ ಸ್ಥಾನಗಳ್ಯಾವುಯೆಂದು ಗಮನಿಸಿದರೆ ಹೀಗೆ ತಿಳಿಯುತ್ತಿದೆ. ಕರ್ಮಪತ್ರದಲ್ಲಿ ಶರೀರ, ಜನ್ಮ ಪ್ರಾರಂಭಕ್ಕೆ ಸಂಬಂಧಿಸಿ ಒಂದನೆ

ಸ್ಥಾನವಿರುವಾಗ, ಅಲ್ಲಿಂದ ಒಟ್ಟು ಆರು ಸ್ಥಾನಗಳನ್ನು ಅಂಗೀ ಭಾಗ ಎಂದೂ, ನಂತರ ಆರು ಸ್ಥಾನಗಳನ್ನು ಅರ್ಧಾಂಗಿ ಭಾಗವೆಂದೂ ಹೇಳಿಕೊಂಡಿದ್ದೇವೆ ಅಲ್ಲವೆ! ಈಗ  ಅಂಗಿ ಭಾಗದಲ್ಲಿನ ಆರು ಸ್ಥಾನಗಳಲ್ಲಿ ಒಂದನೆ ಸ್ಥಾನವನ್ನು ಬಿಟ್ಟು ಉಳಿದ ಐದು ಸ್ಥಾನಗಳನ್ನು ತೆಗೆದುಕೊಂಡು ಅವುಗಳಲ್ಲಿ ಮಧ್ಯದಲ್ಲಿರುವುದನ್ನು ಗಮನಿಸಿದರೆ ವರಸೆ ಕ್ರಮದಲ್ಲಿ ನಾಲ್ಕನೇ ಸ್ಥಾನ ಮಧ್ಯದ್ದಾಗುತ್ತದೆ. ಒಂದನೇ ಸ್ಥಾನದ ನಂತರ ಎರಡು, ಮೂರು ಸ್ಥಾನಗಳಿಗೂ, ಐದು, ಆರು ಸ್ಥಾನಗಳಿಗೂ ಮಧ್ಯದಲ್ಲಿ ನಾಲ್ಕನೇ ಸ್ಥಾನ ಇದೆ. ಐದು ಸ್ಥಾನಗಳಲ್ಲಿ ಮಧ್ಯದಲ್ಲಿರುವ ನಾಲ್ಕನೇ ಸ್ಥಾನವನ್ನು ಅಂಗೀ ಭಾಗಕ್ಕೆ ಮುಖ್ಯವಾದುದಾಗಿ ಮತ್ತು ಆ ಭಾಗಕ್ಕೆ ಕೇಂದ್ರವಾಗಿ ಲೆಕ್ಕಿಸಿ ಹೇಳುತ್ತಿದ್ದೇವೆ. ಅಂಗಿ ಭಾಗದಲ್ಲಿ ಕೇಂದ್ರವಾಗಿರುವ ನಾಲ್ಕನೆ ಸ್ಥಾನವನ್ನು ಕೆಳಗಿರುವ 37ನೇ ಚಿತ್ರದಲ್ಲಿ ನೋಡಬಹುದು.




37ನೇ ಚಿತ್ರ. ನಾಲ್ಕನೆ ಸ್ಥಾನ ಕೇಂದ್ರ


ಅಂಗಿ, ಅರ್ಧಾಂಗಿ ಎನ್ನುವ ಎರಡು ಭಾಗಗಳಲ್ಲಿ ಮೊದಲ ಅಂಗಿ ಭಾಗದಲ್ಲಿ ನಾಲ್ಕನೆ ಸ್ಥಾನ ಕೇಂದ್ರವಾಗಿರುವಂತೆ ತಿಳಿದಿದೆ. ಮೊದಲ ಭಾಗದಲ್ಲಿ ನಾಲ್ಕನೆ ಸ್ಥಾನ ಕೇಂದ್ರವಾದಂತೇ, ಎರಡನೆ ಭಾಗವಾದ ಅರ್ಧಾಂಗಿ ಭಾಗದಲ್ಲಿ ಮೊದಲನೆಯದಾದ 7ನೇ ಸ್ಥಾನವನ್ನು ಬಿಟ್ಟು ನೋಡಿದರೆ ನಂತರವಿರುವ 8, 9, 10, 11, 12 ಸ್ಥಾನಗಳಲ್ಲಿ ಮಧ್ಯದಲ್ಲಿರುವ ಹತ್ತನೆಸ್ಥಾನ ಆ ಭಾಗಕ್ಕೆಲ್ಲಾ ಕೇಂದ್ರವಾಗಿದೆ. ಅಂಗಿ ಭಾಗದಲ್ಲಿ 4ನೇ ಸ್ಥಾನವೂ, ಅರ್ಧಾಂಗಿ ಭಾಗದಲ್ಲಿ 10ನೇ ಸ್ಥಾನವೂ ಕೇಂದ್ರಗಳಾಗಿ ಇರುವಂತೆ ತಿಳಿಯುತ್ತಿದೆ. ಕೇಂದ್ರ ಎಂದರೇ ಮುಖ್ಯವಾದ ಆಧಾರ ಸ್ಥಾನವಾಗಿ ಹೇಳಬಹುದು. ಮಾನವ ಜೀವನದಲ್ಲಿ ಮುಖ್ಯವಾಗಿ ಎಲ್ಲರೂ ಗಮನಿಸುವವು ಎರಡು ಇವೆ. ಅದರಲ್ಲಿ ಒಂದು ಮನುಷ್ಯನಿಗಿರುವ ಆಸ್ತಿ, ಎರಡನೆಯದು ಮನುಷ್ಯನಿಗಿರುವ ಘನತೆ ಗೌರವ. ಮನುಷ್ಯನಿಗಿರುವ ಆಸ್ತಿಯನ್ನು ಅನುಸರಿಸಿ ಮನುಷ್ಯನಿಗೆ ಗೌರವವಾಗಲಿ, ಅಗೌರವವಾಗಲಿ ಇರುತ್ತದೆ. ಹಾಗೇ ಮನುಷ್ಯನಿಗಿರುವ ಘನತೆ ಗೌರವಗಳನ್ನು ಅನುಸರಿಸಿ ಕೂಡಾ ಗೌರವ ಅಗೌರವಗಳಿರುತ್ತವೆ. ಆದ್ದರಿಂದ ಇತ್ತ ಆಸ್ತಿ, ಅತ್ತ ಕೀರ್ತಿ ಮನುಷ್ಯನ ಜೀವನದಲ್ಲಿ ಮುಖ್ಯವಾದವೆಂದು, ಅವುಗಳೇ ಮನುಷ್ಯನ ಜೀನವದಲ್ಲಿ ಕರ್ಮ ಕೇಂದ್ರಗಳೆಂದು ಹೇಳಬಹುದು. ಮನುಷ್ಯನಿಗಿರುವ ಆಸ್ತಿ ವೊಂದರ ಕರ್ಮವನ್ನನುಸರಿಸಿ, ಹಾಗೇ ಕೀರ್ತಿಯನ್ನನುಸರಿಸಿ ಉಳಿದ ಕರ್ಮಗಳೆಲ್ಲವು ಉಳಿದ ಎಂಟು ಸ್ಥಾನಗಳಲ್ಲಿ ಸೇರಿಸಲ್ಪಟ್ಟಿರುತ್ತವೆ. ಆದ್ದರಿಂದ ಉಳಿದ ಎಂಟು ಸ್ಥಾನಗಳ ಕರ್ಮಗಳಿಗೆ, 4, 10 ಸ್ಥಾನಗಳೇ ಕೇಂದ್ರಗಳಾಗಿವೆ ಯೆಂದು ಹೇಳಬಹುದು. ಕೆಳಗಿರುವ 38ನೇ ಚಿತ್ರದಲ್ಲಿ ಅರ್ಧಾಂಗಿ ಭಾಗದಲ್ಲಿ 10ನೇ ಸ್ಥಾನವನ್ನು ಕೇಂದ್ರವಾಗಿ ನೋಡಬಹುದು.





38ನೇ ಚಿತ್ರ. ಹತ್ತನೆಯ ಸ್ಥಾನ ಕೇಂದ್ರ

ಮೇಲಿನ ಎರಡು ಚಿತ್ರಗಳಲ್ಲಿ 4, 10 ಸ್ಥಾನಗಳು ಕೇಂದ್ರಗಳಾಗಿ ಕಾಣಿಸುತ್ತಿವೆ. ಇದೆಲ್ಲವೂ ನಮ್ಮ ತಲೆಯಲ್ಲಿನ ಕರ್ಮಚಕ್ರದಲ್ಲಿರುವ ವಿಧಾನವೆಂದು ಜ್ಞಾಪಕ ಇಟ್ಟುಕೊಳ್ಳಬೇಕು. ಇಲ್ಲಿ ಜ್ಯೋತಿಷ್ಯರಾದ ಕೆಲವರಿಗೆ ಒಂದು ಪ್ರಶ್ನೆ ಬರಬಹುದು. ಅದು ಏನೆಂದರೇ! "ನಾವು ಓದಿದ ಜ್ಯೋತಿಷ್ಯಶಾಸ್ತ್ರದಲ್ಲಿ ಕೇಂದ್ರಗಳು ನಾಲ್ಕು ಇವೆಯೆಂದು, ಅವುಗಳೇ 1, 4, 7, 10 ಸ್ಥಾನಗಳೆಂದು ಕೇಳಿದ್ದೇವೆ. ನೀವೇನೊ ಕೇಂದ್ರಗಳೆಂದು ಹೆಸರಿಟ್ಟು 4,10 ಸ್ಥಾನಗಳನ್ನು ಮಾತ್ರ ಹೇಳುತ್ತಿದ್ದೀರ. ಒಂದನೇ ಸ್ಥಾನವನ್ನು, ಏಳನೇ ಸ್ಥಾನವನ್ನು ನೀವು ಬಿಟ್ಟುಹಾಕಿದ್ದೀರ. ಉಳಿದ ಗ್ರಂಥಗಳಲ್ಲಿ ಕೇಂದ್ರಗಳು ನಾಲ್ಕು ಎಂದು ಏಕೆ ಹೇಳಿದ್ದಾರೆ? ನೀವು ಎರಡು ಮಾತ್ರವೇ ಇವೆಯೆಂದು ಏಕೆ ಹೇಳುತ್ತಿದ್ದೀರಾ?" ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೆ! ಯಾರು ಯಾವ ವಿಧವಾಗಿಯಾದರೂ ಹೇಳಬಹುದು. ಆದರೆ ಹೇಳಲ್ಪಟ್ಟ ವಿಷಯ ಸೂತ್ರಬದ್ಧವಾಗಿ, ಶಾಸ್ತ್ರಬದ್ಧವಾಗಿ ಇರಬೇಕು. ನಾವು ಹೇಳಿರುವುದಕ್ಕೆ ಶಾಸ್ತ್ರ ಆಧಾರವಾಗಿದೆ. ಹಾಗೇ ಜ್ಯೋತಿಷ್ಯಶಾಸ್ತ್ರದಲ್ಲಿ ಒಂದು ಸೂತ್ರವನ್ನು ಹೇಳುತ್ತಾ ಎರಡು ಕೇಂದ್ರಗಳನ್ನು ಹೇಳಿದ್ದೇವೆ. ನಾಲ್ಕು ಕೇಂದ್ರಗಳು ಹೇಗಿವೆಯೋ? ನನಗೆ ತಿಳಿದಿಲ್ಲ. ನಾಲ್ಕು ಕೇಂದ್ರಗಳು ಅಶಾಸ್ತ್ರೀಯವಾಗುತ್ತವೆ.

ಕೆಲವರು ಬರೆದ ಜ್ಯೋತಿಷ್ಯ ಗ್ರಂಥಗಳಲ್ಲಿ ಕೋನಗಳು ಮೂರೆಂದು, ಕೇಂದ್ರಗಳು ಕೂಡಾ ಮೂರೆಂದು ಬರೆದಿರುವುದು ನಾವು ಕೂಡಾ ನೋಡಿದ್ದೇವೆ. ಅವರು ಒಂದು ಸಂಸ್ಕೃತ ಶ್ಲೋಕವನ್ನು ಆಧಾರವಾಗಿ ಹೇಳುತ್ತಾ ಇಂತಹ ಶ್ಲೋಕದಲ್ಲಿ ಹೀಗೆ ಇದೆ. ಆದ್ದರಿಂದ ಕೋನಗಳು ಮೂರು, ಕೇಂದ್ರಗಳು ಮೂರೆಂದು ಹೇಳಿದ್ದಾರೆ. ಆದರೇ ಅವರು ತೋರಿಸಿದ ಶ್ಲೋಕ ಶಾಸ್ತ್ರಬದ್ಧ ವಾದುದಾ ಅಲ್ಲವಾಯೆಂದು ಅವರು ನೋಡಲಿಲ್ಲ. ಯಾರೋ ಹೇಳಿರುವುದನ್ನು ಕುರುಡರಂತೆ ನಂಬಿ ಹೇಳುವುದು ನಡೆದಿದೆ. ಹಾಗೆ ನಂಬಿ ಹೇಳುವುದನ್ನು ಮೂಢನಂಬಿಕೆಯೆಂದು ಹೇಳಬಹುದು. ಇಲ್ಲಿ ನಮ್ಮ ಬುದ್ಧಿಯನ್ನು ಉಪಯೋಗಿಸಿ ನೋಡಿದರೂ ಮೂರು ಸ್ಥಾನಗಳಿರುವುದನ್ನು ಕೋನವೆಂದು ಹೇಳಬಹುದು. ಎಂದಿಗಾದರೂ ಮೂರು ಸ್ಥಾನಗಳು ಕೋನವಾಗಿಯೇ ಏರ್ಪಡುತ್ತವೆ. ಕೇಂದ್ರ ಒಂದು ಭಾಗದಲ್ಲಿ ಎಂದಿಗಾದರೂ ಒಂದೇ ಸ್ಥಾನದಲ್ಲಿ ಇರುತ್ತದೆ. ಮೂರಾಗಿದ್ದರೆ ಅದು ಎಂದಿಗಾದರೂ ಒಂದಕ್ಕೊಂದು ಕೋನವೇ ಆಗುತ್ತದೆ ಆದರೆ, ಎಂದಿಗೂ ಕೇಂದ್ರ ಆಗುವುದಿಲ್ಲ. ಉದಾಹರಣೆಗೆ ಕರ್ಮಚಕ್ರದಲ್ಲಿ ಕೋನಗಳು ಹೇಗಿವೆಯೋ 39ನೇ ಚಿತ್ರದಲ್ಲಿ ನೋಡೋಣ.





39ನೇ ಚಿತ್ರ

ಮೂರು ಸ್ಥಾನಗಳು ಎಂದಿಗಾದರೂ ಕೋನಾಕಾರ ಆಗುತ್ತವೆಂದು ಸ್ಪಷ್ಟವಾಗಿ ತಿಳಿಯುತ್ತಿದೆ. ನಾಲ್ಕು ಸ್ಥಾನಗಳು ಚತುರಸ್ರಾಕಾರವಾಗುತ್ತವೆ, ಒಂದು ಸ್ಥಾನವನ್ನು ಕೇಂದ್ರ ಎನ್ನಬಹುದು. ಕರ್ಮಚಕ್ರದಲ್ಲಿನ ಅಂಗಿ, ಅರ್ಧಾಂಗಿ ಎನ್ನುವ ಎರಡು ಭಾಗಗಳಲ್ಲಿ ಒಂದೊಂದಕ್ಕೆ ಒಂದೊಂದು ಕೇಂದ್ರವಾಗಿರುವುದರಿಂದ, ಎರಡು ಭಾಗಗಳಲ್ಲಿ 4ನೇ ಸ್ಥಾನ ಒಂದು ಕಡೆ, 10ನೇ ಸ್ಥಾನ ಒಂದುಕಡೆ ಕೇಂದ್ರಗಳಾಗಿವೆ. ಈ ವಿಧವಾಗಿ ಕರ್ಮಚಕ್ರ ಹನ್ನೆರಡು ಭಾಗಗಳು ಎರಡು ಭಾಗಗಳಾಗಿ ವಿಭಜಿಸಲ್ಪಟ್ಟಿರುವಾಗ, ಎರಡು ಭಾಗಗಳಿಗು ಎರಡು ಕೇಂದ್ರಗಳಿರುತ್ತವೆ. ಕೆಲವರು ಕೇಂದ್ರಗಳು ಮೂರು ಎಂದು ಕೆಲವರು ನಾಲ್ಕುಯೆಂದು ಹೇಳುವುದು ಶಾಸ್ತ್ರಕ್ಕೆ ವಿರುದ್ಧವಾಗುತ್ತದೆ.

## 27 ಕರ್ಮಚಕ್ರದಲ್ಲಿನ ಕೋನಗಳು

ಕರ್ಮಚಕ್ರದಲ್ಲಿ ಶಾಸ್ತ್ರಬದ್ಧವಾಗಿ ಕೇಂದ್ರಗಳು ಎರಡು ಇವೆಯೆಂದು ತಿಳಿದುಕೊಂಡಿದ್ದೇವೆ. ಅಂಗಿ, ಅರ್ಧಾಂಗಿ ಎನ್ನುವ ಭಾಗಗಳಲ್ಲಿ ಮೂರು ಸ್ಥಾನಗಳನ್ನು ಮುಖ್ಯವಾದವೆಂದು ಹೇಳುವುದರಿಂದ, ಆ ಮೂರು ಸ್ಥಾನಗಳು ಒಂದಕ್ಕೊಂದು ಸಮದೂರದಲ್ಲಿರುವುದರಿಂದ, ಆ ಮೂರು ಸ್ಥಾನಗಳು ತ್ರಿಕೋನಾಕೃತಿಯಾಗಿ ಇರುವುದರಿಂದ ಅವುಗಳನ್ನು ಕೋನಸ್ಥಾನಗಳು ಎಂದಿದ್ದಾರೆ. ಕರ್ಮಚಕ್ರದಲ್ಲಿ ಕೇಂದ್ರಗಳು ಎರಡು ಭಾಗಗಳಲ್ಲಿ ಎರಡು ಇರುವಂತೆ, ಮಿತ್ರ ಸ್ಥಾನಗಳ ಕೋನಗಳು, ಶತ್ರು ಸ್ಥಾನಕೋನಗಳೆಂದು ಎರಡು ಕೋನಗಳಿವೆ. ಅವುಗಳನ್ನು ಪುಣ್ಯ ಸ್ಥಾನಕೋನಗಳೆಂದು, ಪಾಪಸ್ಥಾನ ಕೋನಗಳೆಂದು ಕೂಡಾ ಹೇಳಬಹುದು. ಮಿತ್ರಸ್ಥಾನ ಕೋನಗಳು ಮೂರು ಒಂದಕ್ಕೊಂದು 3 ಸ್ಥಾನಗಳು ದೂರದಿಂದ ಸಮವಾಗಿರುವುದರಿಂದ, ಹಾಗೇ ಶತ್ರುಸ್ಥಾನ ಕೋನಗಳು ಕೂಡಾ 3 ಒಂದಕ್ಕೊಂದು 3 ಸ್ಥಾನಗಳು ಸಮದೂರದಿಂದಿವೆ. ಇದರಿಂದ ಕರ್ಮಚಕ್ರದಲ್ಲಿ (ಕರ್ಮಪತ್ರದಲ್ಲಿ) ಎರಡು ಕೇಂದ್ರಗಳು, ಎರಡು ತ್ರಿಕೋನಗಳಿವೆಯೆಂದು

ತಿಳಿಯುತ್ತಿದೆ. ಮಿತ್ರ, ಶತ್ರು ಎರಡು ಕೋನಗಳನ್ನು ಕೆಳಗೆ 40ನೇ ಚಿತ್ರದಲ್ಲಿ ನೋಡೋಣ.





(40ನೇ ಚಿತ್ರ)

ಮೇಲೆ ಕಾಣಿಸಿದ ಪುಣ್ಯ, ಪಾಪ ಸ್ಥಾನಗಳ ಕೋನಗಳನ್ನು ಗಮನಿಸಿದರೆ **1**x7 ಪೂರ್ತಿ ಸ್ಥಾಯಿ ಶತ್ರುವು ಎನ್ನುವ ಸೂತ್ರವನ್ನು ಅನುಸರಿಸಿ ಪುಣ್ಯಕೋನಗಳಿಗೆ ಪೂರ್ತಿ ಏಳನೇ ಸ್ಥಾನಗಳೇ ಪಾಪಕೋನಗಳಾಗಿವೆ. ಒಂದಕ್ಕೆ ಏಳು(**1**x7) ಐದಕ್ಕೆ ಹನ್ನೊಂದು (5 x 11), ಒಂಭತ್ತಕ್ಕೆ ಮೂರು (9 x 3) ಪೂರ್ತಿ ವಿರುದ್ಧ ಕೋನಗಳಾಗಿವೆ. ಇವುಗಳನ್ನು ಅನುಸರಿಸಿ ಕರ್ಮಪತ್ರದಲ್ಲಿ ಆಯಾ ಸ್ಥಾನಗಳಲ್ಲಿ ಮನುಷ್ಯನವೊಂದು ಪಾಪಪುಣ್ಯಗಳು ಸೇರುತ್ತಿವೆ. ಇದನ್ನನುಸರಿಸಿ ಯಾವ ವಿಧವಾಗಿ ನೋಡಿದರೂ ಕೋನಗಳು 1,5,9, ಒಂದು ವಿಧವೆಂದೂ, 3,7,11, ಮತ್ತೊಂದು ವಿಧವೆಂದೂ ಹೇಳಬಹುದು. ಹಾಗೇ ಕೇಂದ್ರವು 4ನೇ ಸ್ಥಾನ ಒಂದು ಆಗಿದ್ದು ಎರಡನೆಯದು 10ನೇ ಸ್ಥಾನವಾಗಿದೆ. ಕರ್ಮಪತ್ರದಲ್ಲಿರುವ ಹನ್ನೆರಡು ಸ್ಥಾನಗಳಲ್ಲಿ ಮೂರು ಸ್ಥಾನಗಳಲ್ಲಿ ಪುಣ್ಯ ಲಿಖಿಸಲ್ಪಟ್ಟರೆ, ಮೂರು ಸ್ಥಾನಗಳಲ್ಲಿ ಪಾಪ ಲಿಖಿಸಲ್ಪಟ್ಟಿದೆ. ಉಳಿದ ಆರು ಸ್ಥಾನಗಳಲ್ಲಿ ಪಾಪ ಮತ್ತು ಪುಣ್ಯ ಎರಡೂ ಲಿಖಿಸಲ್ಪಟ್ಟಿವೆ. ಮೂರು ಸ್ಥಾನಗಳು

ಪುಣ್ಯ, ಮೂರು ಸ್ಥಾನಗಳು ಪಾಪ, ಆರು ಸ್ಥಾನಗಳು ಪಾಪ ಪುಣ್ಯಗಳು ಒಟ್ಟು ಹನ್ನೆರಡು ಸ್ಥಾನಗಳಲ್ಲಿ ಪ್ರಾರಬ್ಧಕರ್ಮ ಬರೆಯಲ್ಪಟ್ಟಿರುತ್ತದೆ. ಹಿಂದಿನ ಜನ್ಮಗಳಲ್ಲಿ ಸಂಪಾದಿಸಿಕೊಂಡ ಆಗಾಮಿ ಕರ್ಮ ಪ್ರಸ್ತುತ ಜನ್ಮದಲ್ಲಿ ಪ್ರಾರಬ್ಧವಾಗಿ ಬದಲಾಗಿ, ಆ ಪ್ರಾರಬ್ಧವು ಪ್ರಸ್ತುತ ಜನ್ಮದಲ್ಲಿ ಅನುಭವಕ್ಕೆ ಬರುತ್ತಿದೆ. 69 ವರ್ಷಗಳ 5 ತಿಂಗಳ 10 ದಿನಗಳು ಸಂಪಾದಿಸಲ್ಪಟ್ಟ ಆಗಾಮಿಕರ್ಮ ಒಂದು ಬಾರಿ ಸಂಚಿತವಾಗಿ ಬದಲಾಗಿ ಹೋಗುತ್ತದೆ. ಆ ಸಂಚಿತಕರ್ಮದಿಂದ ಪ್ರಾರಬ್ಧಕರ್ಮ ಮರಣದಲ್ಲಿ ಏರ್ಪಟ್ಟು ಮುಂಬರುವ ಜನ್ಮಕ್ಕೆ ಕಾರಣವಾಗುತ್ತಿದೆ.

ಮರಣ ಹೊಂದಿದ ಮರುಕ್ಷಣವೇ ಕರ್ಮಪತ್ರದಲ್ಲಿ ರಹಸ್ಯವಾಗಿರುವ ಸಂಚಿತ ಕರ್ಮದಿಂದ ಪ್ರಾರಬ್ಧಕರ್ಮ ತಯಾರಾಗಿ ಕರ್ಮಚಕ್ರದಲ್ಲಿ 1, 5, 9 ಸ್ಥಾನಗಳಲ್ಲಿ ಪುಣ್ಯ ಸೇರಿಹೋಗಿ, ಪಾಪ 3, 7, 11 ಸ್ಥಾನಗಳಲ್ಲಿ ಸೇರಿಹೋಗುತ್ತಿದೆ. ಉಳಿದ ಸರಿಸಂಖ್ಯೆಯಾದ ಆರು ಸ್ಥಾನಗಳಲ್ಲಿ ಪಾಪ ಪುಣ್ಯಗಳೆರಡೂ ಸೇರುತ್ತಿವೆ. ಕರ್ಮಚಕ್ರ ಇಲ್ಲವೇ ಕರ್ಮಪತ್ರದಲ್ಲಿ ಪಾಪ, ಪುಣ್ಯ ಮತ್ತು ಪಾಪಪುಣ್ಯಗಳೆರಡೂ ಇರುವ ಸ್ಥಾನಗಳನ್ನು ಕೆಳಗೆ 41ನೇ ಚಿತ್ರದಲ್ಲಿ ನೋಡಬಹುದು.





41ನೇ ಚಿತ್ರ


ಕರ್ಮಚಕ್ರದಲ್ಲಿ ಇಲ್ಲಿಯವರೆಗು ಕೋನಗಳು ಕೇಂದ್ರಗಳನ್ನು ಗುರುತಿಸುವುದೇ ಅಲ್ಲದೆ ಅವುಗಳಲ್ಲಿಯೂ, ಉಳಿದ ಸ್ಥಾನಗಳಲ್ಲಿಯೂ ಪಾಪಪುಣ್ಯ ಸ್ಥಾನಗಳನ್ನು ಕೂಡಾ ಗುರುತಿಸಿಕೊಂಡಿದ್ದೇವೆ. ಈಗ ಕರ್ಮಪತ್ರದಲ್ಲಿ ಎಲ್ಲಿ ಯಾವ ಕರ್ಮ ಬರೆಯಲ್ಪಡುತ್ತದೊ, ಮನುಷ್ಯ ತನ್ನ ಪ್ರಾರಬ್ಧವನ್ನು ಯಾವ ಯಾವ ಸ್ಥಾನದಿಂದ ಅನುಭವಿಸುತ್ತಿದ್ದಾನೊ ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸೋಣ. ಕರ್ಮಚಕ್ರ ಅಥವಾ ಕರ್ಮಪತ್ರ ಒಂದರ ಸ್ಥಾನವನ್ನೂ, ಅದರ ಕದಲಿಕೆಯನ್ನೂ, ಅದರ ಜೋಡಣೆಯನ್ನು ತಿಳಿದುಕೊಂಡಿದ್ದೇವೆ. ತಿಳಿದಿರುವುದನ್ನು ಅನುಸರಿಸಿ ಮೇಲಿರುವ ಕಾಲಚಕ್ರದಲ್ಲಿರುವ ದ್ವಾದಶ ಗ್ರಹಗಳ ಕಿರಣಗಳು ಕೆಳಗಿರುವ ಕರ್ಮಚಕ್ರದಲ್ಲಿನ ಪಾಪಪುಣ್ಯ ಕರ್ಮಗಳ ಮೇಲೆ ಪ್ರಸರಿಸಿದಾಗ, ಆ ಕಿರಣಗಳು ಕರ್ಮಚಕ್ರದಲ್ಲಿನ ಕರ್ಮವನ್ನು ತೆಗೆದುಕೊಂಡು ಕೆಳಗೆ ಗುಣಚಕ್ರದಲ್ಲಿರುವ ಜೀವಿಯ ಮೇಲೆ ಬೀಳಿಸುತ್ತವೆ. ಅಲ್ಲಿ ಜೀವಿಯಮೇಲೆ ಗ್ರಹ ಕಿರಣಗಳು ಯಾವ ಕರ್ಮವನ್ನು ಪ್ರಸರಿಸುವಂತೆ ಮಾಡುತ್ತವೋ ಆ ಕರ್ಮಕ್ಕೆ ಸಂಬಂಧಿಸಿದ ಗುಣ ಜೀವಿಯನ್ನು ತಗಲಿಕೊಳ್ಳುತ್ತದೆ. ಆಗ ಜೀವಿಗೆ ತಗಲಿಕೊಂಡ ಗುಣವನ್ನು ಜೀವಿಯ ಪಕ್ಕದಲ್ಲಿಯೇ ಜೀವಿಯನ್ನು ಅಂಟಿಕೊಂಡಿರುವ ಬುದ್ಧಿ ಆಲೋಚಿಸುತ್ತಾ ಜೀವಿಗೆ ತೋರಿಸುತ್ತದೆ. ಮೊದಲೇ ನಿರ್ಣಯ ಮಾಡಲ್ಪಟ್ಟಂತೆ ಚಿತ್ತ ಮನಸ್ಸು ಪ್ರವರ್ತಿಸಿದಾಗ ಕರ್ಮ ಕೊನೆಗೆ ಕಾರ್ಯರೂಪವಾಗಿ ಶರೀರದ ಮೂಲಕ ಜಾರಿ ಆಗುತ್ತದೆ. ಹಾಗೆ ಜಾರಿಯಾದ ಕಾರ್ಯದಲ್ಲಿನ ಕಷ್ಟ, ಸುಖಗಳನ್ನು, ಆನಂದ ದುಃಖಗಳನ್ನೂ ಜೀವಿಯು ಬುದ್ಧಿ ಮೂಲಕವೇ ಅನುಭವಿಸುವುದು ನಡೆಯುತ್ತಿದೆ. ಈ ವಿಧವಾಗಿ ಒಬ್ಬ ಮನುಷ್ಯನಾಗಿರುವ ಜೀವಿಯು ಕೊನೆಗೆ ಸುಖದುಃಖವನ್ನು ಅನುಭವಿಸುವುದಕ್ಕೆ ಏರ್ಪಡಿಸಿದ ವಿಧಾನವೇ ಕಾಲ, ಕರ್ಮ, ಗುಣಚಕ್ರಗಳ ಜೋಡಣೆ ಎಂದು ತಿಳಿಯಬೇಕು. ಜೀವಿಯು ಜೀವನದಲ್ಲಿ ಅನುಭವಿಸುವ ಕರ್ಮವನ್ನು ಮೊದಲೇ ಸೂಚಾಯಿಯಾಗಿ ತಿಳಿದುಕೊಳ್ಳುವುದನ್ನು ಜ್ಯೋತಿಷ್ಯ ಎನ್ನುತ್ತೇವೆ.

ಜ್ಯೋತಿಷ್ಯವು ಶಾಸ್ತ್ರಬದ್ಧವಾಗಿ ಇದ್ದಾಗಲೇ ಅದನ್ನು ಸರಿಯಾಗಿ ತಿಳಿದುಕೊಳ್ಳುತ್ತೇವೆ. ಆ ವಿಧಾನದಲ್ಲಿ ಈಗ ಕರ್ಮಚಕ್ರದಲ್ಲಿ ಎಲ್ಲಿ ಯಾವ ಕರ್ಮ ಇರುತ್ತದೋ ತಿಳಿದುಕೊಳ್ಳೋಣ. ಇಲ್ಲಿಯವರೆಗು ತಿಳಿದ ಅದರ ಪ್ರಕಾರ 1ನೇ ಸ್ಥಾನದಲ್ಲಿ ಶರೀರಕ್ಕೆ ಸಂಬಂಧಿಸಿದ ಕರ್ಮ ಇರುತ್ತದೆಂದು, ಅದೇ ಜೀವನದ ಪ್ರಾರಂಭಸ್ಥಾನವೆಂದು ತಿಳಿದುಕೊಂಡಿದ್ದೇವೆ. ಶರೀರ ಲಭಿಸಿದ ಜನ್ಮ ಮೊದಲುಗೊಂಡು ಶರೀರ ಸಂಬಂಧ ಕರ್ಮಗಳೆಲ್ಲ ಅದರಲ್ಲಿ ಒಳಗೊಂಡಿವೆ. ಅದರಿಂದ 7ನೇ ಸ್ಥಾನ ಹೆಂಡತಿಗೆ ಸಂಬಂಧಿಸಿದ ಸ್ಥಾನವೆಂದು ತಿಳಿದು ಕೊಂಡಿದ್ದೇವೆ. ಹೆಂಡತಿ, ಹೆಂಡತಿಯಿಂದ ಎದುರಾಗುವ ಸಮಸ್ಯೆಗಳ ಕರ್ಮಗಳೆಲ್ಲ ಅದರಲ್ಲಿ ಲಿಖಿಸಲ್ಪಡುತ್ತವೆ. 1 ಮತ್ತು 7ನೇ ಸ್ಥಾನಗಳಿಗೆ ಮಧ್ಯದಲ್ಲಿರುವ ಅಂಗಿ ಅರ್ಧಾಂಗಿ ಎರಡು ಭಾಗಗಳಲ್ಲಿ ಒಂದುಕಡೆ 4ನೇ ಸ್ಥಾನ ಮತ್ತೊಂದು ಕಡೆ 10ನೇ ಸ್ಥಾನ ಕೇಂದ್ರಗಳಾಗಿ ಇವೆಯೆಂದು ತಿಳಿದುಕೊಂಡಿದ್ದೇವೆ ಅಲ್ಲವೆ! ಮೊದಲ ಭಾಗವಾದ ಅಂಗಿ ಭಾಗದಲ್ಲಿ ಕೇಂದ್ರವಾದ 4ನೇ ಸ್ಥಾನದಲ್ಲಿ ಸ್ಥೂಲವಾದ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ಕರ್ಮಗಳು ಸೇರಿಸಲ್ಪಟ್ಟಿರುತ್ತವೆ. ಹಾಗೇ ಎರಡನೇ ಭಾಗವಾದ ಅರ್ಧಾಂಗಿ ಕಡೆ ಕೇಂದ್ರವಾದ 10ನೇ ಸ್ಥಾನದಲ್ಲಿ ಕಣ್ಣಿಗೆ ಕಾಣಿಸದ ಆಸ್ತಿಯಾದ ಕೀರ್ತಿಗೆ ಸಂಬಂಧಿಸಿದ ಕರ್ಮವು, ಘನತೆ ಗೌರವಗಳು ಲಭಿಸುವುದಕ್ಕೆ ಕಾರಣವಾದವು ಆದ ವೃತ್ತಿ, ಉದ್ಯೋಗಗಳ ಕರ್ಮಗಳು ಮೊದಲಾದವು ಲಿಖಿಸಲ್ಪಟ್ಟಿರುತ್ತವೆ. ಇದನ್ನು ನಂತರ ಪುಟದಲ್ಲಿರುವ 42ನೇ ಚಿತ್ರದಲ್ಲಿ ನೋಡಬಹುದು.

ಇಲ್ಲಿಯವರೆಗು ಕರ್ಮಚಕ್ರದಲ್ಲಿರುವ ಒಂದನೇ ಸ್ಥಾನ, ನಾಲ್ಕನೇ ಸ್ಥಾನ, ಏಳನೇ ಸ್ಥಾನ, ಹತ್ತನೇ ಸ್ಥಾನ, ಹನ್ನೆರಡನೇ ಸ್ಥಾನಗಳಲ್ಲಿ ಯಾವ ಯಾವ ಕರ್ಮಗಳು ಸೇರುತ್ತಿವೆಯೋ ತಿಳಿದಿದೆ. ಒಟ್ಟಾರೆ 12 ಸ್ಥಾನಗಳಲ್ಲಿ 5 ಸ್ಥಾನಗಳ ಕರ್ಮಗಳು ತಿಳಿದುಹೋಗಿವೆ. ಇನ್ನು ಉಳಿದ ಒಟ್ಟು ಏಳು ಸ್ಥಾನಗಳಲ್ಲಿ ಯಾವ ಕರ್ಮಗಳು ಸೇರುತ್ತಿವೆಯೋ ಸ್ವಲ್ಪ ಗಮನಿಸೋಣ. ಕರ್ಮಪತ್ರದಲ್ಲಿ ಕೊನೆಯ ಸ್ಥಾನದಲ್ಲಿ ಶರೀರವೊಂದರ ಅಂತ್ಯಕರ್ಮ ಇರುತ್ತದೆಂದು


ತಿಳಿದುಕೊಂಡಿದ್ದೇವೆ ಅಲ್ಲವೆ! ಶರೀರವು ಅಂತ್ಯಕ್ಕೆ ಸೇರುವುದನ್ನು ಮರಣ ಎನ್ನುತ್ತಿದ್ದೇವೆ. ಮರಣ ಕರ್ಮಚಕ್ರದಲ್ಲಿನ ಹನ್ನೆರಡನೆ ಸ್ಥಾನದಿಂದಲೇ ಲಭಿಸುತ್ತದೆ. ಆದರೇ ಹನ್ನೆರಡನೆ ಸ್ಥಾನಕ್ಕೆ ಎದುರುಗಡೆ ವಿರುದ್ಧ ಸ್ಥಾನವಾಗಿರುವ ಆರನೇ ಸ್ಥಾನದಲ್ಲಿ ಸಾವಿಗೆ ವಿರುದ್ಧವಾದ ಕರ್ಮ ಸೇರುತ್ತದೆ. ಸಾವಿಗೆ ಭಿನ್ನವಾಗಿದ್ದು ಸಾವಿಗಿಂತ ಹೆಚ್ಚಾಗಿ ಬಾಧಿಸುವ ಕರ್ಮ ಆರನೆ ಸ್ಥಾನದಲ್ಲಿರುತ್ತದೆ. ಸಾವು ಅಲ್ಲದೆ ಮನುಷ್ಯ ಬದುಕಿದ್ದರೂ ಸಾವಿಗಿಂತ ಎಷ್ಟೋ ಪಟ್ಟು ವಿರುದ್ಧವಾಗಿ ಬಾಧಿಸುವವು ರೋಗಗಳು, ಋಣಗಳು. ಮರಣದಲ್ಲಿ ಯಾವ ಬಾಧೆ ಇರುವುದಿಲ್ಲ. ಆದರೆ ಆರನೆ ಸ್ಥಾನದಲ್ಲಿರುವ ಕರ್ಮದಲ್ಲಿ ರೋಗ, ಋಣಗಳ ಕರ್ಮಗಳಿದ್ದು ಮನುಷ್ಯನನ್ನು ಸಾವಿಗೆ ವಿರುದ್ಧವಾದ ಬಾಧೆಗಳನ್ನು ಅನುಭವಿಸುವಂತೆ ಮಾಡುತ್ತದೆ. ಜೀವನದ ಅಂತ್ಯ ಮರಣದೊಂದಿಗೆ ನಡೆಯುತ್ತದೆ. ಆದರೇ ಮರಣ ಯಾವ ಬಾಧೆ ಇಲ್ಲದಿರುವುದು. ಬಾಧೆಗಳು ಆರಂಭವಾಗುವುದು ಜನನದಿಂದಾದರೆ, ಬಾಧೆಗಳು ಅಂತ್ಯವಾಗುವುದು ಮರಣದೊಂದಿಗೆ, ಆದರೆ ಮರಣ ಬಾಧಾರಹಿತವಾದುದು. ಅದಕ್ಕೆ ವಿರುದ್ಧವಾಗಿ 12ನೇ ಸ್ಥಾನಕ್ಕೆ ಪೂರ್ತಿ 7ನೇ ಸ್ಥಾನದಲ್ಲಿ ಶತ್ರುಸ್ಥಾನವಾಗಿ







ಕೇಂದ್ರಗಳಲ್ಲಿನ ಕರ್ಮ (42ನೇ ಚಿತ್ರ)

ಆರನೇ ಸ್ಥಾನವಿದೆ. ಆದ್ದರಿಂದ ಆ ಸ್ಥಾನದಲ್ಲಿ ಬಾಧಾರಹಿತವಾದ ಮರಣಕ್ಕೆ ವಿರುದ್ಧವಾಗಿ ಬಾಧೆಯನ್ನು ಉಂಟುಮಾಡುವ ಶತ್ರು, ಋಣ, ರೋಗ ಸಮಸ್ಯೆಗಳ ಕರ್ಮಗಳು ಲಿಖಿಸಲ್ಪಡುತ್ತವೆ. ಕೆಳಗಿನ 43ನೇ ಚಿತ್ರವನ್ನು ನೋಡಿರಿ.





43ನೇ ಚಿತ್ರ





43ನೇ ಚಿತ್ರ 6ನೇ ಸ್ಥಾನದಲ್ಲಿನ ಕರ್ಮ.

ಇಲ್ಲಿಗೆ ಒಟ್ಟು ಆರು ಸ್ಥಾನಗಳಲ್ಲಿ ಕರ್ಮ ಬರಹವನ್ನು ತಿಳಿದು ಕೊಂಡಿದ್ದೇವೆ. ಇನ್ನು ಉಳಿದ ಸ್ಥಾನಗಳು ಆರು ಇವೆ. ಎದುರೆದುರಾಗಿರುವ 5,11 ಸ್ಥಾನಗಳನ್ನು ಕುರಿತು ತಿಳಿದುಕೊಳ್ಳೋಣ. ಸ್ಥೂಲ ಸ್ಥಿರಾಸ್ಥಿಗಳಾದ ಗೃಹ, ಭೂಮಿಗಳು ಮುಂತಾದವು ಯಾವ ಮನುಷ್ಯನಿಗೆ ಏನು ಇವೆಯೋ ಕರ್ಮಚಕ್ರದಲ್ಲಿನ ನಾಲ್ಕನೇ ಸ್ಥಾನವನ್ನು ನೋಡಿ ತಿಳಿಯಬಹುದು. ನಾಲ್ಕನೇ ಸ್ಥಾನಕ್ಕೆ ಕೆಳಗೆ, ಮೇಲೆ ಎರಡೂ ಕಡೆ ಮೂರನೇ ಸ್ಥಾನ, ಐದನೇ ಸ್ಥಾನ ಇವೆ. ನಾಲ್ಕನೆ ಸ್ಥಾನ ಕೇಂದ್ರ ಸ್ಥಾನ ಆಗಿರುವುದರಿಂದ ಅದಕ್ಕೆ ಎರಡೂ ಕಡೆ ಇರುವವು ನಾಲ್ಕನೆ ಸ್ಥಾನವನ್ನು ಅನುಸರಿಸಿ ಇರುತ್ತವೆ. ಅಂಗೀ ಭಾಗಕ್ಕೆ ಕೇಂದ್ರವಾದ ನಾಲ್ಕನೆ ಸ್ಥಾನದಲ್ಲಿ ಸ್ಥೂಲ ಆಸ್ತಿಗಳ ಕರ್ಮಗಳಿರುವಾಗ ಅದರ ನಂತರವಿರುವ ಐದನೆ ಸ್ಥಾನದಲ್ಲಿ ಸ್ಥೂಲ ಆಸ್ಥಿಗಳು ಸಂಪಾದಿಸುವುದಕ್ಕೆ ತಕ್ಕ ಬುದ್ಧಿಯನ್ನು ಸೂಚಿಸುವ ಕರ್ಮಗಳಿರುತ್ತವೆ. ಒಬ್ಬ ಮನುಷ್ಯ ಪ್ರಪಂಚದಲ್ಲಿ ಸ್ಥೂಲ ಆಸ್ತಿಗಳು ಸಂಪಾದಿಸುವುದಕ್ಕೆ ಬೇಕಾದ ಪ್ರಪಂಚ ಬುದ್ಧಿ, ಪ್ರಪಂಚ ಜ್ಞಾನ (ಪ್ರಪಂಚ

ವಿದ್ಯೆ) ಐದನೇ ಸ್ಥಾನದಲ್ಲಿ ಲಿಖಿಸಲ್ಪಟ್ಟಿರುತ್ತದೆ. ನಾಲ್ಕನೇ ಕೇಂದ್ರಸ್ಥಾನದಲ್ಲಿ ಸ್ಥೂಲ ಆಸ್ತಿಗಳ ಕರ್ಮಗಳಿರುವಾಗ ಅದನ್ನು ಆಧಾರ ಮಾಡಿಕೊಂಡು ಐದನೆ ಸ್ಥಾನದಲ್ಲಿ ಪ್ರಪಂಚ ಜ್ಞಾನ ಇರುವಾಗ, ಮೂರನೆ ಸ್ಥಾನದಲ್ಲಿ ಪ್ರಪಂಚ ಧನಕ್ಕೆ ಸಂಬಂಧಿಸಿದ ಕರ್ಮ ಇರುತ್ತದೆ. ಪ್ರಪಂಚ ಧನ ಅಂದಾಗ ಹಣದ ನೆಲೆ, ಹಣದ ಚಲಾವಣೆ ಎಂದು ಅರ್ಥ. ಇದೆಲ್ಲವನ್ನು ಗ್ರಹಿಸಿದರೆ ಅಂಗೀ ಭಾಗದಲ್ಲಿ ವರಸೆ ಕ್ರಮದಲ್ಲಿ ಇರುವ 3,4,5 ಸ್ಥಾನಗಳಲ್ಲಿ ಪ್ರಪಂಚ ಧನ, ಪ್ರಪಂಚ ಆಸ್ತಿ, ಪ್ರಪಂಚ ಜ್ಞಾನ ಕ್ರಮವಾಗಿ ಎಲ್ಲಾ ಪ್ರಪಂಚ ಸಂಬಂಧ ವಿಷಯ ಕರ್ಮಗಳೇ ಇವೆ. ಅಂಗೀಯಲ್ಲಿ ಕೇಂದ್ರವಾದ ನಾಲ್ಕನೆ ಸ್ಥಾನವನ್ನು ಆಧಾರ ಮಾಡಿಕೊಂಡು ಮೂರರಲ್ಲಿ ಪ್ರಪಂಚ ಧನಕ್ಕೆ ಸಂಬಂಧಿಸಿರುವ ಕರ್ಮ, ಐದರಲ್ಲಿ ಪ್ರಪಂಚ ಸಂಬಂಧ ಜ್ಞಾನ ಅಥವಾ ಓದುವ ಕರ್ಮಗಳಿವೆಯೆಂದು ತಿಳಿದುಕೊಂಡಿದ್ದೇವಲ್ಲವೆ! ಅವುಗಳನ್ನೇ ಕೆಳಗೆ 44ನೇ ಚಿತ್ರಪಟದಲ್ಲಿ ನೋಡಬಹುದು. ಕರ್ಮ ಚಿತ್ರಪಟದಲ್ಲಿರುವ 12 ಭಾಗಗಳಲ್ಲಿ ಒಂದೊಂದು ಭಾಗ ಒಂದೊಂದು ವಿಧವಾದ ಕರ್ಮದೊಂದಿಗೆ ತುಂಬಿಹೋಗುತ್ತಿರುವುದು ಚಿತ್ರಪಟದಲ್ಲಿ ನೋಡಬಹುದು.





44 ನೇ ಚಿತ್ರಪಟ.





44 ನೇ ಚಿತ್ರಪಟ.

ಇಲ್ಲಿಯವರೆಗು ಕರ್ಮಚಕ್ರದಲ್ಲಿ ಒಟ್ಟು ಏಳು ಸ್ಥಾನಗಳಲ್ಲಿನ ಕರ್ಮ ತಿಳಿದುಹೋಗಿದೆ. ಅಂಗೀ ಭಾಗದಲ್ಲಿನ ನಾಲ್ಕನೇ ಕೇಂದ್ರಸ್ಥಾನವನ್ನು ಆಧಾರಮಾಡಿಕೊಂಡು ಮೂರು, ಐದು ಸ್ಥಾನಗಳಲ್ಲಿನ ಕರ್ಮಗಳನ್ನು ತಿಳಿದುಕೊಂಡಿದ್ದೇವೆ. ಈಗ ಅರ್ಧಾಂಗಿ ಭಾಗದಲ್ಲಿ ಕೇಂದ್ರವಾದ ಹತ್ತನೆ ಸ್ಥಾನವನ್ನು ಆಧಾರ ಮಾಡಿಕೊಂಡು ಅದಕ್ಕೆ ಸುತ್ತಲೂ ಎರಡು ಕಡೆ ಇರುವ 9,11. ಸ್ಥಾನಗಳಲ್ಲಿನ ಕರ್ಮಗಳನ್ನು ತಿಳಿದುಕೊಳ್ಳೋಣ. 9,11 ಸ್ಥಾನಗಳಲ್ಲಿನ ಕರ್ಮಗಳನ್ನು ಕಷ್ಟವಿಲ್ಲದೆ ಸುಲಭವಾಗಿ ತಿಳಿಯಬಹುದು. ಅದ್ಹೇಗೆ ಎಂದರೆ ಅಂಗೀ ಭಾಗಕ್ಕೆ ಕೇಂದ್ರವಾದ 4ನೇ ಸ್ಥಾನದಲ್ಲಿ ಸ್ಥೂಲ ಆಸ್ತಿಗಳಿರುವಾಗ, ಅರ್ಧಾಂಗಿ ಭಾಗಕ್ಕೆ ಕೇಂದ್ರವಾದ ಹತ್ತನೇ ಸ್ಥಾನದಲ್ಲಿ ನಾಲ್ಕನೇ ಸ್ಥಾನಕ್ಕೆ ವಿರುದ್ಧವಾದ ಸೂಕ್ಷ್ಮ ಆಸ್ತಿಗಳಾದ ಕೀರ್ತಿ ಪ್ರತಿಷ್ಠೆ, ವೃತ್ತಿ, ಉದ್ಯೋಗ ಕರ್ಮಗಳನ್ನು ಗ್ರಹಿಸಬಹುದು. ಸ್ಥೂಲ ಆಸ್ತಿಗಳು ಪ್ರಪಂಚ ಸಂಬಂಧವಾಗಿದ್ದು, ಜ್ಞಾನಧನ, ಜ್ಞಾನಮಾರ್ಗ ಸೂಕ್ಷ್ಮ ಆಸ್ತಿಗಳು ಪರಮಾತ್ಮ ಸಂಬಂಧವಾದವು. ಈ ವಿಧವಾಗಿ ಅಂಗೀ ಭಾಗದಲ್ಲಿರುವ ಕರ್ಮಕ್ಕೆ ಪೂರ್ತಿ ಭಿನ್ನವಾಗಿ ಅರ್ಧಾಂಗಿ ಭಾಗದಲ್ಲಿರುವ

ಕರ್ಮಗಳಿರುತ್ತವೆ. ಮೊದಲ ಭಾಗದಲ್ಲಿ ಕೇಂದ್ರವಾದ ನಾಲ್ಕನೆ ಸ್ಥಾನಕ್ಕೆ ಎರಡನೆ ಭಾಗದಲ್ಲಿ ಕೇಂದ್ರವಾದ ಹತ್ತನೇ ಸ್ಥಾನ ವಿರುದ್ಧವಾದಂತೇ, ಅಂಗೀ ಭಾಗದಲ್ಲಿನ ಮೂರನೆ ಸ್ಥಾನದಲ್ಲಿನ ಕರ್ಮಕ್ಕೆ ವಿರುದ್ಧವಾದ ಕರ್ಮ ಅರ್ಧಾಂಗಿ ಭಾಗದಲ್ಲಿನ 9ನೇ ಸ್ಥಾನದಲ್ಲಿರುತ್ತದೆ. ಹಾಗೇ ಅಂಗೀ ಭಾಗದಲ್ಲಿನ ಐದನೆ ಸ್ಥಾನದಲ್ಲಿನ ಕರ್ಮಕ್ಕೆ ವಿರುದ್ಧವಾದ ಕರ್ಮ ಅರ್ಧಾಂಗಿ ಭಾಗದಲ್ಲಿನ ಹನ್ನೊಂದನೇ ಸ್ಥಾನದಲ್ಲಿರುತ್ತದೆ. ಮೂರನೆ ಸ್ಥಾನದಲ್ಲಿ ಪ್ರಪಂಚ ಧನಕ್ಕೆ ಸಂಬಂಧಿಸಿದ ಪಾಪವಿರುವಾಗ ಅದಕ್ಕೆ ಪೂರ್ತಿ ವಿರುದ್ಧ ಸ್ಥಾನವಾದ ಒಂಭತ್ತನೇ ಸ್ಥಾನದಲ್ಲಿ ಪರಮಾತ್ಮ ಧನ (ಜ್ಞಾನ ಶಕ್ತಿ)ಕ್ಕೆ ಸಂಬಂಧಿಸಿರುವುದು ಲಭಿಸುತ್ತದೆ. ಅದೇ ವಿಧವಾಗಿ ಐದನೆ ಸ್ಥಾನದಲ್ಲಿ ಪ್ರಪಂಚ ಸಂಬಂಧ ಜ್ಞಾನ ಇರುವಾಗ ಅದಕ್ಕೆ ವಿರುದ್ಧ ಸ್ಥಾನವಾದ ಹನ್ನೊಂದನೆ ಸ್ಥಾನದಲ್ಲಿ ಪರಮಾತ್ಮ ಜ್ಞಾನ (ದೈವಜ್ಞಾನ)ಕ್ಕೆ ಸಂಬಂಧಿಸಿದ ಗ್ರಾಹಿತಶಕ್ತಿ ಇರುತ್ತದೆ. ಅರ್ಧಾಂಗಿ ಭಾಗದಲ್ಲಿ 9, 10, 11, ಸ್ಥಾನಗಳು ದೈವ ಭಾವನೆಗೆ ಸಂಬಂಧಿಸಿರುವವೆಂದು ಹೇಳಬಹುದು. ಆದರೇ ಹತ್ತರಲ್ಲಿರುವ ಜ್ಞಾನಶಕ್ತಿ, ಒಂಭತ್ತರಲ್ಲಿರುವ ಜ್ಞಾನಧನ ಹನ್ನೊಂದರಲ್ಲಿರುವ ಜ್ಞಾನಿ ಗ್ರಾಹಿತಶಕ್ತಿ ಕರ್ಮಕ್ಕೆ ಒಳಪಟ್ಟಿರುವುದಿಲ್ಲ. ಆದ್ದರಿಂದ ಕರ್ಮ ಆಧಾರದಿಂದ ಜ್ಞಾನ ಧನವನ್ನಾಗಲಿ, ಜ್ಞಾನಶಕ್ತಿಯನ್ನಾಗಲಿ, ಜ್ಞಾನ ವಿಚಕ್ಷಣವನ್ನಾಗಲಿ (ಜ್ಞಾನವನ್ನು ಗ್ರಹಿಸಿಕೊಳ್ಳುವ ಶಕ್ತಿಯನ್ನಾಗಲಿ) ಗುರುತಿಸಿ ಹೇಳಲಾರೆವು. 9, 10, 11 ಸ್ಥಾನಗಳಲ್ಲಿರುವ ಅವುಗಳಲ್ಲಿ ಕೆಲವು ಕರ್ಮಗಳಿಗೆ ಸಂಬಂಧಿಸಿರುವಾಗ, ಅಲ್ಲಿಯೇ ಇರುವ ಜ್ಞಾನ ಚಿಹ್ನೆಗಳೆಲ್ಲ ಕರ್ಮಾಧೀನಗಳಲ್ಲ. ಆದ್ದರಿಂದ ಕರ್ಮಾತೀತವಾದವುಗಳನ್ನು ಕುರಿತು ಖಚ್ಚಿತವಾಗಿ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ಮೂರು ಸ್ಥಾನಗಳಿಂದ ಭೂಮಿಮೇಲೆ ಜ್ಞಾನಿಯನ್ನು ಗುರುತಿಸಬಹುದು. ಆದರೇ ಆತನಲ್ಲಿ ಎಷ್ಟು ಜ್ಞಾನವಿರುವುದು ನಿರ್ಣಯಿಸಿ ಹೇಳಲಾರೆವು. ನಂತರ 45ನೇ ಚಿತ್ರದಲ್ಲಿ ಕರ್ಮಚಕ್ರದಲ್ಲಿನ 9, 10, 11 ಸ್ಥಾನಗಳ ಕರ್ಮಗಳನ್ನು ನೋಡಬಹುದು.




45 ನೇ ಚಿತ್ರಪಟ.




45 ನೇ ಚಿತ್ರಪಟ.


ಇಲ್ಲಿಯವರೆಗು ತಿಳಿದಿರುವುದರಲ್ಲಿ ಕರ್ಮಚಕ್ರದಲ್ಲಿನ ಎರಡು ಸ್ಥಾನಗಳು ಹೊರತುಪಡಿಸಿ ಉಳಿದ ಎಲ್ಲಾ ಸ್ಥಾನಗಳಲ್ಲಿ ಯಾವ ಕರ್ಮ ಸೇರಿಹೋಗಿರುವುದು ತಿಳಿದುಕೊಂಡಿದ್ದೇವೆ. ಈಗ ಉಳಿದಿರುವುದು ಅಂಗೀ ಭಾಗದಲ್ಲಿ ಎರಡನೆ ಸ್ಥಾನ, ಅರ್ಧಾಂಗಿ ಭಾಗದಲ್ಲಿ ಎಂಟನೇ ಸ್ಥಾನ ಮಾತ್ರ ಉಳಿದಿವೆ. ಅಂಗೀ ಭಾಗದಲ್ಲಿ ಮೊದಲ ಸ್ಥಾನ ನಂತರವಿರುವ ಎರಡನೆ ಸ್ಥಾನ, ಮೊದಲನೆ ಸ್ಥಾನಕ್ಕೆ ಅನುಬಂಧವಾಗಿದೆ. ಹಾಗೇ ಅರ್ಧಾಂಗಿ ಭಾಗದಲ್ಲಿ ಮೊದಲನೆಯದಾದ ಏಳನೆ ಸ್ಥಾನಕ್ಕೆ ಪಕ್ಕದಲ್ಲಿಯೇ ಇರುವ 8ನೇ ಸ್ಥಾನ ಅನುಬಂಧವಾಗಿದೆ. ಆದ್ದರಿಂದ ಕರ್ಮಚಕ್ರದಲ್ಲಿ ಒಂದನೇ ಸ್ಥಾನವನ್ನು ಅನುಸರಿಸಿ 2ನೇ ಸ್ಥಾನ, 7ನೇ ಸ್ಥಾನವನ್ನು ಅನುಸರಿಸಿ 8ನೇ ಸ್ಥಾನ ಕರ್ಮದಿಂದ ತುಂಬಲ್ಪಟ್ಟಿವೆ. ಕರ್ಮಚಕ್ರದಲ್ಲಿ 1ನೇ ಭಾಗವಾದ ಅಂಗೀಭಾಗದಲ್ಲಿ ಇಲ್ಲಿಯವರೆಗು ನಮೂದಾದ ಕರ್ಮಗಳೆಲ್ಲ ಪ್ರಪಂಚ ಸಂಬಂಧ ಕರ್ಮಗಳೆಂದೇ ಹೇಳಬಹುದು. 1ನೇ ಸ್ಥಾನದಲ್ಲಿ ಶರೀರಕ್ಕೆ ಸಂಬಂಧಿಸಿದ ಕರ್ಮ ಇರುವಾಗ, 3,4,5,6 ಸ್ಥಾನಗಳೆಲ್ಲವುಗಳಲ್ಲಿ ಪ್ರಪಂಚ ವಿಷಯಗಳಿಂದ ಕೂಡಿಕೊಂಡ ಕರ್ಮಗಳೇ ಇವೆ. ಹಾಗೇ ಎರಡನೆ ಭಾಗವಾದ ಅರ್ಧಾಂಗಿ ಭಾಗದಲ್ಲಿ ಏಳನೇ ಸ್ಥಾನ ಮದುವೆಯೊಂದಿಗೆ ಸಂಬಂಧವೇರ್ಪಡುವ ಹೆಂಡತಿ ವಿಷಯವಿರುತ್ತದೆ. ಮದುವೆ ಕಾರ್ಯವೆಲ್ಲವೂ ದೈವಜ್ಞಾನದಿಂದ ಕೂಡಿಕೊಂಡಿದೆ. ನಂತರ 9,10,11,12 ಸ್ಥಾನಗಳೆಲ್ಲ ದೈವಜ್ಞಾನ ಸಂಬಂಧ ವಿಷಯಗಳಿಗೆ ಸಂಬಂಧಿತ ಫಲಿತಗಳಿವೆ. ಆದ್ದರಿಂದ ಅಂಗಿ ಭಾಗ ಅಜ್ಞಾನದಿಂದ ಕೂಡಿಕೊಂಡಿದೆಯೆಂದು, ಅರ್ಧಾಂಗಿ ಭಾಗ ಜ್ಞಾನದಿಂದ ಕೂಡಿಕೊಂಡಿದೆ ಯೆಂದು ಹೇಳಬಹುದು.

ಈಗ ನಾವು ಹೇಳಿಕೊಳ್ಳಬೇಕಾದ 2ನೇ ಸ್ಥಾನ ಅಂಗಿ ಭಾಗದಲ್ಲಿಯೂ, 8ನೇ ಸ್ಥಾನ ಅರ್ಧಾಂಗಿ ಭಾಗದಲ್ಲಿಯೂ ಇದೆ. ಆದ್ದರಿಂದ 2ನೇ ಸ್ಥಾನ ಪ್ರಪಂಚ ಸಂಬಂಧವಾಗಿ ಇರುತ್ತದೆಂದು, 8ನೇ ಸ್ಥಾನ ದೈವಸಂಬಂಧವಾಗಿ ಇರುತ್ತದೆಂದು ತಿಳಿಯುತ್ತಿದೆ. ಕರ್ಮಚಕ್ರದಲ್ಲಿ ಇಲ್ಲಿಯವರೆಗು ಉಳಿದ 2

ಮತ್ತು 8 ಸ್ಥಾನಗಳಲ್ಲಿ ಯಾವ ಕರ್ಮವಿದೆಯೋ ಗಮನಿಸೋಣ. ಅಂಗೀ ಭಾಗದಲ್ಲಿನ 2ನೇ ಸ್ಥಾನವನ್ನು ನೋಡಿದರೆ 1ನೇ ಸ್ಥಾನ ಶರೀರ ಪ್ರಾರಂಭಕ್ಕೆ ಸಂಬಂಧಿಸಿದ ಕರ್ಮ ಅದರಲ್ಲಿ ಇದೆ ಅಲ್ಲವೆ! ಶರೀರದಲ್ಲಿ ಜೀವನ ಪ್ರಾರಂಭವಾದ ದಿನದಿಂದ ಮನುಷ್ಯನಿಗೆ ಅಜ್ಞಾನ ಜೀವನವೇ ಕಳೆಯುತ್ತಿರುತ್ತದೆ. ದೈವಜ್ಞಾನದ ಮೇಲೆ ಗಮನ ಮದುವೆ ನಂತರ ಬರಬಹುದೇನೊ ಆದರೆ, ಅಲ್ಲಿಯವರೆಗು ಯಾರಿಗಾದರೂ ಜ್ಞಾನಜೀವನದ ಮೇಲೆ ಲಕ್ಷ್ಯ ಬರುವುದಿಲ್ಲ. ಮದುವೆ ನಂತರ ದೇವರ ಮೇಲೆ ಮನುಷ್ಯನಿಗೆ ಲಕ್ಷ್ಯ ಉಂಟಾಗಬಹುದು. ಜನನ ಅಜ್ಞಾನದಲ್ಲಿ ನಡೆದರೂ ಮದುವೆ ಜ್ಞಾನ ಸಂಬಂಧವಾಗಿ ಇರಬೇಕೆಂದು ಪೂರ್ವಕಾಲದಲ್ಲಿ ಮನುಷ್ಯನಿಗೆ ಮಾಡುವ ಮದುವೆಯಲ್ಲಿ ಎಲ್ಲಾ ಜ್ಞಾನಕ್ಕೆ ಸಂಬಂಧಿಸಿದ ಕಾರ್ಯಗಳನ್ನೇ ಇಟ್ಟಿದ್ದಾರೆ. ಆದ್ದರಿಂದ 1ನೇಸ್ಥಾನ ನಂತರ ಎರಡನೆ ಸ್ಥಾನದಲ್ಲಿ ಮನುಷ್ಯ ತನ್ನ ಜೀವನದಲ್ಲಿ ಅಜ್ಞಾನ ಜೀವನ ಎಷ್ಟುಕಾಲ ಕಳೆಯುತ್ತಾನೆಂದು, ಕೊನೆಗೆ ಆತನು ಎಷ್ಟು ಅಜ್ಞಾನಿಯಾಗಿ ಮರಣಿಸುತ್ತಾನೆ, ಅಜ್ಞಾನ ಜೀವನ ಎಷ್ಟುಕಾಲವಿರುತ್ತದೆ ಎನ್ನುವುದಕ್ಕೆ ಸಂಬಂಧಿಸಿದ ಕರ್ಮಗಳು ಎರಡನೆ ಸ್ಥಾನದಲ್ಲಿರುತ್ತವೆ. ಉದಾಹರಣೆಗೆ ಒಬ್ಬ ಮನುಷ್ಯ 60 ವರ್ಷಗಳು ಬದುಕಿ ಮರಣಿಸಿದರೆ ಆ ಅರವತ್ತು ವರ್ಷಗಳ ಆಯುಷ್ಯದಲ್ಲಿ ಎಷ್ಟು ಕಾಲ ಅಜ್ಞಾನಿಯಾಗಿ ಬದುಕುತ್ತಾನೆ ಎನ್ನುವುದಕ್ಕೆ ಸಮಾಧಾನವಾಗಿ ಆತನ ಎರಡನೆ ಸ್ಥಾನದಲ್ಲಿರುವ ಪ್ರಪಂಚ ಕರ್ಮವನ್ನು ಅನುಸರಿಸಿ 50 ವರ್ಷಗಳ ಕಾಲ ಅಜ್ಞಾನದಲ್ಲಿ ಬದುಕಿದ್ದಾನೆಂದು, ಉಳಿದ 10 ವರ್ಷಗಳ ಕಾಲವನ್ನು ಜ್ಞಾನ ಜೀವನದಲ್ಲಿ ಕಳೆದುಹೋಗಿದೆಯೆಂದು ಹೇಳಬಹುದು. ಒಬ್ಬ ಮನುಷ್ಯ ಎಷ್ಟುಕಾಲ ಅಜ್ಞಾನದಲ್ಲಿ ಕಳೆಯುತ್ತಾನೆಂದು ಎರಡನೆ ಸ್ಥಾನವನ್ನು ಅನುಸರಿಸಿ ಹೇಳಿದಂತೇ, ಅದೇ ಮನುಷ್ಯ ಎಷ್ಟುಕಾಲ ಜ್ಞಾನ ಜೀವನ ಕಳೆಯುತ್ತಾನೊ ಆತನ ಕರ್ಮಚಕ್ರದಲ್ಲಿನ ಎಂಟನೆ ಸ್ಥಾನವನ್ನು ನೋಡಿ ಹೇಳಬಹುದು. ಇಲ್ಲಿ ಮುಖ್ಯವಾಗಿ ಎಲ್ಲರೂ ಗಮನಿಸಬೇಕಾಗಿರುವುದು ಏನೆಂದರೇ! ಒಬ್ಬನ ಜೀವನದಲ್ಲಿ ಎಷ್ಟು ಭಾಗ

ಅಜ್ಞಾನ ಜೀವನ, ಎಷ್ಟು ಭಾಗ ಜ್ಞಾನ ಜೀವನ ಇರುತ್ತದೋ ಹೇಳಬಹುದು ಆದರೆ, ಮನುಷ್ಯನವೊಂದು ಆಯುಷ್ಷನ್ನು ಕುರಿತು ಯಾರೂ ಹೇಳಲಾರರು. ಮನುಷ್ಯನ ಜೀವನದಲ್ಲಿ ಸಾವುಹುಟ್ಟು ಕರ್ಮಾಧೀನಗಳಲ್ಲ. ಅವು ಕರ್ಮಕ್ಕೆ ಅತೀತವಾದವುಗಳಾಗಿ ಇವೆ. ಆದ್ದರಿಂದ ಮನುಷ್ಯ ತನ್ನ ಜೀವನದಲ್ಲಿ ಇಷ್ಟು ಭಾಗ ಅಜ್ಞಾನ ಜೀವನ ಕಳೆಯುತ್ತಾನೆಂದು ಹೇಳಬಹುದು. ಹಾಗೇ ಎಷ್ಟು ಕಾಲ ಜ್ಞಾನಜೀವನವನ್ನು ಕಳೆಯುತ್ತಾನೋ ಹೇಳಬಹುದು. ಈ ಎರಡು ಸ್ಥಾನಗಳನ್ನು ನೋಡಿ ಈತನಿಗೆ ಇಷ್ಟು ಆಯುಷ್ಯ ಇರುತ್ತದೆಂದು ಕೆಲವರು ಹೇಳಬಹುದು ಆದರೆ ಅದು ಸತ್ಯವಾದ ಮಾತೆಂದು ಹೇಳಲಾರೆವು. 2, 8 ಸ್ಥಾನಗಳನ್ನನುಸರಿಸಿ ಅವನು ಅಜ್ಞಾನ ಮಾರ್ಗದಲ್ಲಿ ಪಯಣಿಸುವನಾ ಇಲ್ಲವೆ ಜ್ಞಾನಮಾರ್ಗದಲ್ಲಿ ಪಯಣಿಸುವನಾ ಎಂದು ಹೇಳಬಹುದು. ಮನುಷ್ಯನಿಗೆ ನೂರು ವರ್ಷಗಳು ಆಯುಷ್ಷು ಎಂದು 2,8 ಸ್ಥಾನಗಳ ಕರ್ಮವನ್ನನುಸರಿಸಿ ಅಂದಾಜಿಗೆ ನೂರು ವರ್ಷಗಳಲ್ಲಿ ಇಷ್ಟುಕಾಲ ಬದುಕಬಲ್ಲನೆಂದು, ಇವನ ಆಯುಷ್ಷು ಇಷ್ಟು ಎಂದು ಹೇಳುತ್ತಿರುತ್ತಾರೆ.

ಮರಣಗಳು ಮೂರು ವಿಧಗಳಿವೆ. ಆದ್ದರಿಂದ ಆಯುಷ್ಯ ವಿಷಯದಲ್ಲಿ ಜ್ಯೋತಿಷ್ಯನು ಹೇಳಿದ ಮಾತುಗಳು ಸತ್ಯವಾಗುತ್ತವೆಂಬ ನಂಬಿಕೆಯಿಲ್ಲ. ಆಯುಷ್ಯ ವಿಷಯದಲ್ಲಿ ಒಬ್ಬ ಯೋಗಿಗಳು ಹೊರತುಪಡಿಸಿ ಉಳಿದವರು ಖಚಿತವಾಗಿ ಹೇಳಲಾರರೆಂದು ತಿಳಿಯುತ್ತಿದೆ. ಇಲ್ಲಿಯವರೆಗು ನಾವು ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಕರ್ಮಚಕ್ರದಲ್ಲಿನ ಒಟ್ಟು ಹನ್ನೆರಡು ಸ್ಥಾನಗಳಲ್ಲಿ ಯಾವ ಕರ್ಮ ನೆಲೆ ಇದೆಯೋ ತಿಳಿದುಕೊಂಡಿದ್ದೇವೆ. ಈಗ 46ನೇ ಚಿತ್ರದಲ್ಲಿ 2,8 ಸ್ಥಾನಗಳ ಕರ್ಮಗಳನ್ನು ಗುರುತಿಸಿಕೊಂಡು ನೋಡೋಣ.




46ನೇ ಚಿತ್ರ. ಪೂರ್ತಿ ಕರ್ಮಚಕ್ರ

| | 12 | 1 | 2 | 3 | |
|---|---|---|---|---|---|
| | ಶರೀರ ಅಂತ್ಯ ಕರ್ಮ | ಶರೀರ ಪ್ರಾರಂಭ | ಅಜ್ಞಾನ ಜೀವನ ಎಷ್ಟು | ಪ್ರಪಂಚ ಧನ | |
| 11 | ಪರಮಾತ್ಮ ಪ್ರಪಂಚ ಜ್ಞಾನ | ಕರ್ಮಪತ್ರ | | ಸ್ಥೂಲ ಸ್ಥಿರಾಸ್ತಿಗಳು | 4 |
| 10 | ಕಾಣಿಸದ ಆಸ್ತಿ ಕೀರ್ತಿ | | | ಪ್ರಪಂಚ ಜ್ಞಾನ | 5 |
| | ಪರಮಾತ್ಮ ಪ್ರಪಂಚ ಧನ | ಜ್ಞಾನ ಪ್ರಪಂಚ ಜೀವನಎಷ್ಟು | ಹೆಂಡತಿಯ ಸಂಬಂಧ | ಶತ್ರು ಋಣ ರೋಗ ಕರ್ಮಗಳು | |
| | 9 | 8 | 7 | 6 | |

46ನೇ ಚಿತ್ರ. ಪೂರ್ತಿ ಕರ್ಮಚಕ್ರ

ಇಲ್ಲಿಗೆ ಕರ್ಮಚಕ್ರದಲ್ಲಿನ ಹನ್ನೆರಡು ಭಾಗಗಳಲ್ಲಿನ ಕರ್ಮವನ್ನು ಸ್ವಲ್ಪಮಟ್ಟಿಗೆ ಗುರುತಿಸಿಕೊಂಡಿದ್ದೇವೆ. ಜೀವನದಲ್ಲಿ ಮುಖ್ಯವಾದ ವಿಷಯಗಳ ಕರ್ಮಗಳನ್ನು ಮಾತ್ರ ಗುರುತಿಸಿ ನೋಡಿಕೊಂಡಿದ್ದೇವೆ. ನಾವು ಹೇಳಿಕೊಳ್ಳದ ಎಷ್ಟೋ ವಿಷಯಗಳು ಮನುಷ್ಯನ ಜೀವನದಲ್ಲಿ ಇವೆ. ಉದಾಹರಣೆಗೆ ಸಂತಾನವನ್ನು ಕುರಿತಾದ ಕರ್ಮ ಯಾವ ಸ್ಥಾನದಲ್ಲಿರುತ್ತದೋ ನಾವು ಹೇಳಿಕೊಳ್ಳಲಿಲ್ಲ. ಸಂತಾನ ಮನುಷ್ಯನ ಜೀವನದಲ್ಲಿ ಮುಖ್ಯವಾದುದು. ಎಷ್ಟೋ ಮುಖ್ಯವಾದ ಸಂತಾನ ವಿಷಯ ಕರ್ಮ ರೂಪದಲ್ಲಿ ಎಲ್ಲಿರುತ್ತದೊ ಗಮನಿಸಿದರೆ ಈ ವಿಧವಾಗಿ ತಿಳಿಯುತ್ತಿದೆ. ತಾಯಿ ತಂದೆಯರ ಗುಣಗಳು ಮಕ್ಕಳಿಗೆ ಬರುತ್ತವೆ ಎನ್ನುತ್ತಿರುತ್ತಾರೆ. ಹಾಗೇ ತಾಯಿ ತಂದೆಯರು ಬುದ್ಧಿವಂತರಾದರೆ ಹುಟ್ಟುವ ಮಕ್ಕಳು ಕೂಡಾ ಬುದ್ಧಿವಂತರು ಹುಟ್ಟುತ್ತಾರೆಂದು ಕೂಡ ಹೇಳುತ್ತಿರುತ್ತಾರೆ. ತಾಯಿ ತಂದೆಯರ ಲಕ್ಷಣಗಳೇ ಅವರ ಮಕ್ಕಳಿಗು ಬರುತ್ತವೆಂದು ಬಹಳ ಜನ ಹೇಳುವುದು ಕೇಳಿದ್ದೇವೆ. ಬಹಳ ಮಟ್ಟಿಗೆ ಅವರು ಹೇಳಿದಂತೇ ಹೊರಗೆ ಕಾಣಿಸುವುದು ನಡೆಯುತ್ತಿದೆ. ಪ್ರಪಂಚ ಜ್ಞಾನ ಪ್ರಪಂಚ ಬುದ್ಧಿಗಳು ತಾಯಿ ತಂದೆಯರಿಂದ ಬಂದವರು ಅಲ್ಲಲ್ಲಿ ಕಾಣಿಸುವುದರಿಂದ ತಾಯಿ ತಂದೆಯರ ಬುದ್ಧಿಗಳು ಮಕ್ಕಳಿಗೆ ಬರುತ್ತವೆಂದು ಹೇಳುವುದು ನಡೆಯುತ್ತಿದೆ. ತಾಯಿ ತಂದೆಯರು ಅಜ್ಞಾನಿಗಳಾದರೆ ಮಕ್ಕಳಿಗು ಕೂಡ ಅವರ ಅಜ್ಞಾನ ಬರುವುದೂ, ಹಾಗೆಯೇ ತಾಯಿ ತಂದೆಯರು ದೈವಭಕ್ತಿ ಇರುವವರಾದರೆ ಅವರ ಮಕ್ಕಳು ಕೂಡ ದೈವಭಕ್ತಿ ಹೊಂದಿರುವುದು ನಡೆಯುತ್ತದೆ. ಕರ್ಮಚಕ್ರದಲ್ಲಿ ಐದನೆ ಸ್ಥಾನ ಪ್ರಪಂಚ ಜ್ಞಾನಕ್ಕೆ ಸಂಬಂಧಿಸಿರುವುದಾಗಿ ಇರುವುದರಿಂದ, ಅದಕ್ಕೆ ಎದುರುಗಡೆಯಿರುವ ಹನ್ನೊಂದನೆ ಸ್ಥಾನ ಭಕ್ತಿ, ಜ್ಞಾನ, ಧರ್ಮಗಳಿಗೆ ಸಂಬಂಧಿಸಿರುವುದು ಇರುವಾಗ, ಈ ಎರಡು ಸ್ಥಾನಗಳಲ್ಲಿನ ಬುದ್ಧಿ ಭಾವನೆಗಳು, ಜ್ಞಾನ, ಭಕ್ತಿ ಭಾವನೆಗಳು ಸಂತತಿಗೆ ಬರುತ್ತಿರುವುದರಿಂದ ಯಾರಿಗಾದರೂ ಸಂತಾನವನ್ನು ಕುರಿತಾದ ಕರ್ಮ ಸಮಾಚಾರ 5, 11 ಸ್ಥಾನಗಳಲ್ಲಿಯೇ ಇರುತ್ತದೆಂದು ತಿಳಿಯುತ್ತಿದೆ. ಈ ವಿಧವಾಗಿ ಕೆಲವು ಕರ್ಮಗಳನ್ನು ಯಾವ ಸ್ಥಾನಗಳಲ್ಲಿ ಇರುವುದು ಗ್ರಹಿಸಬಹುದು.

ಶಾಸ್ತ್ರ ಎಂದರೇ ಸತ್ಯ, ಸತ್ಯ ಎಂದರೇ ಶಾಸ್ತ್ರ ಎಂದು ಹೇಳಬಹುದು. ಕೆಲವು ಕರ್ಮಗಳನ್ನು ನಡೆಯುವ ಯಥಾರ್ಥ ಸಂಘಟನೆಗಳನ್ನು ಅನುಸರಿಸಿ ತಿಳಿಯಬಹುದು. ಈಗ ಸಂತತಿ ಎಂತಾದ್ದೊ ತಿಳಿಯುವುದಕ್ಕೆ 5, 11 ಸ್ಥಾನಗಳನ್ನು ನೋಡಬಹುದೆನ್ನುವುದು ಶಾಸ್ತ್ರಬದ್ಧವಾ ಎಂದು ಯಾರಾದರೂ ಕೇಳಿದರೆ ಅದಕ್ಕೆ ಸಮಾಧಾನವಾಗಿ ಹೀಗೆ ಹೇಳಬಹುದು. ಕೆಲವು ಶಾಸ್ತ್ರಬದ್ಧವಾಗಿ ಬರೆದಿಡಲಾಗಿರುತ್ತವೆ. ಆದ್ದರಿಂದ ಅವುಗಳನ್ನು ಅನುಸರಿಸಬಹುದು. ಕೆಲವು ವಿಷಯಗಳು ಬರೆಯದಿರುವವು ಕೂಡ ಇರಬಹುದು. ಆಗ ನಡೆದ ಸತ್ಯವನ್ನು ಅನುಸರಿಸಿ ಇದು ಶಾಸ್ತ್ರವೆಂದು ತಿಳಿಯಬಹುದು. ಮೊದಲೇ ಇತರರಿಂದ ಬರೆಯಲ್ಪಟ್ಟ ಶಾಸ್ತ್ರವನ್ನನುಸರಿಸಿ ಕೆಲವು ವಿಷಯಗಳನ್ನು ಹೇಳಬಹುದು. ಕೆಲವು ನಡೆದ ಸತ್ಯಗಳನ್ನನುಸರಿಸಿ ಕೆಲವು ಶಾಸ್ತ್ರ ವಿಷಯಗಳನ್ನು ಕಂಡುಹಿಡಿದು ಹೇಳಬಹುದು. ಸಂತಾನ ವಿಷಯದಲ್ಲಿ ನಾವು ನಡೆಯುತ್ತಿರುವ ಸತ್ಯವನ್ನು ಅನುಸರಿಸಿ 5,11 ಸ್ಥಾನಗಳು ಶಾಸ್ತ್ರಬದ್ಧವಾಗಿ ಸಂತಾನ ಶಾಸ್ತ್ರಗಳೆಂದು ಹೇಳುತ್ತಿದ್ದೇವೆ. ಇದೇ ಪದ್ಧತಿಯಲ್ಲಿ ಕೆಲವು ವಿಷಯಗಳನ್ನು ಆಗಿಂದಾಗ ಗ್ರಹಿಸಬಹುದು.

## 28 ಕಾಲಚಕ್ರದಲ್ಲಿ ಯಾವ ಲಗ್ನ ಒಳ್ಳೆಯದು?

ಕಾಲಚಕ್ರದಲ್ಲಿನ ಹನ್ನೆರಡು ಭಾಗಗಳನ್ನು ಹನ್ನೆರಡು ಲಗ್ನಗಳೆಂದು ಹೇಳುತ್ತಾರೆ. ಕಾಲಚಕ್ರದಲ್ಲಿನ ಹನ್ನೆರಡು ಲಗ್ನಗಳಿಗೆ ಹನ್ನೆರಡು ಹೆಸರುಗಳು ಇವೆಯೆಂದು ಹೇಳಿಕೊಂಡಿದ್ದೇವೆ. ವಿವರವಾಗಿ ಹೇಳಿಕೊಂಡರೆ ಹನ್ನೆರಡು ಲಗ್ನಗಳನ್ನು ಹನ್ನೆರಡು ದೇಶಗಳಾಗಿ ಹೋಲಿಸಿಕೊಂಡು ಹೇಳಬಹುದು. ಪ್ರತಿ ಲಗ್ನ ಸ್ವಲ್ಪ ವಿಸ್ತೀರ್ಣವಿರುವ ದೇಶದಂತಾದ್ದು. ಒಂದೊಂದು ದೇಶಕ್ಕೆ ಒಬ್ಬೊಬ್ಬ ರಾಜ ಅಧಿಪತಿಯಾಗಿರುವಂತೆ, ಹನ್ನೆರಡು ಲಗ್ನಗಳಿಗೆ ಹನ್ನೆರಡು ಗ್ರಹಗಳು ರಾಜರಂತೆ ಅಧಿಪತಿಗಳಾಗಿ ಇದ್ದಾರೆ. ಆ ಹನ್ನೆರಡು ಮಂದಿ ಯಾರಿಗವರು ಒಳ್ಳೆಯವರೇ, ಆದರೂ ಅವರು ಎರಡು ಗುಂಪುಗಳಾಗಿದ್ದಾರೆ. ಒಂದು ವರ್ಗ

ದವರಿಗೆ ಮತ್ತೊಂದು ವರ್ಗದವರು ವಿರೋಧಿಗಳಾಗಿರುತ್ತಾರೆ. ಮನುಷ್ಯ ಜನ್ಮಿಸಿದ ಕಾಲವನ್ನನುಸರಿಸಿ, ಆ ಮನುಷ್ಯ ಒಂದು ವರ್ಗದವರಿಗೆ ಸೇರಿದವನಾಗಿ ನಿರ್ಣಯಿಸಲ್ಪಡುತ್ತದೆ. ಆಗ ಒಂದು ವರ್ಗದವರಾದ ಆರು ಜನ ರಾಜರು ಅಥವಾ ಲಗ್ನಾಧಿಪತಿಗಳು ಮನುಷ್ಯನಿಗೆ ಮಿತ್ರರಾಗಿ ಇರುವಾಗ, ಅವರ ಕಡೆಗೆ ಹೋಗಿರುವುದಕ್ಕೆ ಆ ಮನುಷ್ಯನಿಗೆ ಉಳಿದ ಆರು ಗ್ರಹಗಳು ಶತ್ರುಗಳಾಗಿ ತಯಾರಾಗುತ್ತಾರೆ. ಯಾವ ಮನುಷ್ಯನಿಗಾದರೂ ದೇಶಗಳಾಗಲಿ, ಪ್ರದೇಶಗಳಾಗಲಿ ಯಾವ ಭಾವಗಳಿಲ್ಲದವುಗಳಾಗಿ, ನಿರ್ಜೀವವಾದವುಗಳಾಗಿ, ಎಲ್ಲರಿಗೂ ಸಮಾನವಾಗಿ ಇರುತ್ತವೆ. ಸಮಾನವಾಗಿ ಇಲ್ಲದವರು ಆಯಾ ಲಗ್ನಗಳಿಗೆ ಸಂಬಂಧಿಸಿದ ಅಧಿಪತಿಗಳೇಯೆಂದು ತಿಳಿಯಬೇಕು. ಕೆಲವರು ಮಿತ್ರರಾದರೆ, ಕೆಲವರು ಶತ್ರುಗಳಾಗಿರುತ್ತಾರೆ. ಮನುಷ್ಯನ ಕರ್ಮವನ್ನನುಸರಿಸಿ ಅವನ ಜನ್ಮವನ್ನನುಸರಿಸಿ, ಜನ್ಮಿಸಿದ ಲಗ್ನವನ್ನನುಸರಿಸಿ ಮನುಷ್ಯನಿಗೆ ಲಗ್ನಾಧಿಪತಿಗಳು ಆರು ಮಂದಿ ಶತ್ರುಗಳಾಗಿಯೂ, ಆರು ಮಂದಿ ಮಿತ್ರರಾಗಿಯು ಏರ್ಪಡುತ್ತಿರುತ್ತಾರೆ. ಕಾಲಚಕ್ರದಲ್ಲಿನ ಲಗ್ನಾಧಿಪತಿಗಳಾದವರು ಮನುಷ್ಯನ ಬಗ್ಗೆ ಒಳ್ಳೆಯದಾಗಿ ಕೆಲವರು, ಕೆಟ್ಟದಾಗಿ ಕೆಲವರು ಇರುವುದರಿಂದ, ಕಾಲಚಕ್ರದಲ್ಲಿನ ಲಗ್ನಾಧಿಪತಿಗಳಲ್ಲಿ ಒಳ್ಳೆಯವರಿರಬಹುದು ಆದರೆ, ಲಗ್ನಗಳು ಒಳ್ಳೆಯ, ಕೆಟ್ಟವು ಎನ್ನುವವು ಇರುವುದಿಲ್ಲ. ಲಗ್ನಗಳು ಎಂದು ಹೆಸರು ಇಡಲಾದ ಹನ್ನೆರಡು ಭಾಗಗಳು ಹನ್ನೆರಡು ಪ್ರದೇಶಗಳೇ ಹೊರತು ಅದರಲ್ಲಿ ಒಳ್ಳೆಯ ಕೆಟ್ಟದು ಎನ್ನುವವು ಇರುವುದಿಲ್ಲ.

ಲಗ್ನ ಎನ್ನುವುದು ನಿರ್ಣಿತ ಉದ್ದ ಅಗಲವಿರುವ ಪ್ರದೇಶವೆಂದು ಅರ್ಥ. ಕಾಲಚಕ್ರದಲ್ಲಿನ ಹನ್ನೆರಡು ಭಾಗಗಳನ್ನು ಹನ್ನೆರಡು ಲಗ್ನಗಳಾಗಿ ಹೇಳುತ್ತಿದ್ದೇವೆ. ಹಾಗೇ ಕರ್ಮಚಕ್ರದಲ್ಲಿನ ಹನ್ನೆರಡು ಭಾಗಗಳನ್ನು ಲಗ್ನಗಳೆಂದೇ ಹೇಳುತ್ತಿದ್ದೇವೆ. ಹಾಗೆ ಕರ್ಮಚಕ್ರದಲ್ಲಿನ ಭಾಗಗಳನ್ನು ಲಗ್ನಗಳೆನ್ನುವುದು ತಪ್ಪು. ಆದರೆ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೇ! ಕಾಲಚಕ್ರದಲ್ಲಿನ ಭಾಗಗಳಿಗೆ ಮೇಷ, ವೃಷಭ ಎನ್ನುವ ಹನ್ನೆರಡು ಹೆಸರುಗಳಿವೆ. ಕರ್ಮಚಕ್ರದಲ್ಲಿನ ಭಾಗಗಳಿಗೆ ಪ್ರತ್ಯೇಕಿಸಿ ಹೆಸರುಗಳಿರುವುದಿಲ್ಲ. ಕರ್ಮಚಕ್ರದಲ್ಲಿನ ಭಾಗಗಳಿಗೆ

ವರುಸೆ ಕ್ರಮವಾಗಿ ಸಂಖ್ಯೆ ಹೆಸರುಗಳಿರುತ್ತವೆ. ಆ ವಿಧಾನದಲ್ಲಿ ಒಂದನೇ ಸ್ಥಾನ, ಎರಡನೇ ಸ್ಥಾನ ಎಂದು ಆರಂಭಿಸಿ ಕೊನೆಗೆ ಹನ್ನೆರಡನೇ ಸ್ಥಾನದವರೆಗು ಹೇಳುತ್ತಿರುತ್ತಾರೆ. ಇದನ್ನನುಸರಿಸಿ ಹೆಸರುಗಳನ್ನನುಸರಿಸಿ ಕಾಲಚಕ್ರವನ್ನೂ, ವರಸೆ ಸಂಖ್ಯೆಯನ್ನು ಅನುಸರಿಸಿ ಕರ್ಮಚಕ್ರವನ್ನು ಗುರುತಿಸಬಹುದು.

## 29 ಗ್ರಹಗಳಿಗೆ ಕಾಲಚಕ್ರದಲ್ಲಿ ಸ್ವಂತ ಸ್ಥಾನಗಳಿರುವಂತೆ, ಬಲವಾದ ಸ್ಥಾನಗಳು ಇವೆಯಾ?

ಕಾಲಚಕ್ರದಲ್ಲಿ ಒಂದೊಂದು ಗ್ರಹಕ್ಕು ಒಂದೊಂದು ಲಗ್ನ ಸ್ವಂತ ಸ್ಥಾನವಾಗಿದೆಯೆಂದು ಮೊದಲೇ ತಿಳಿದುಕೊಂಡಿದ್ದೇವೆ. ಯಾರಿಗಾದರೂ ಸ್ವಂತ ಸ್ಥಳವೇ ಬಲವಾಗಿರುತ್ತದೆ. ಆದ್ದರಿಂದ ಯಾವ ಲಗ್ನಕ್ಕಾದರೂ ಆ ಲಗ್ನಾಧಿಪತಿಯಾದ ಗ್ರಹಕ್ಕೆ ತನ್ನ ಸ್ವಂತ ಸ್ಥಾನವೇ ಬಲವಾದುದಾಗಿರುತ್ತದೆ. ಒಂದು ಗ್ರಹಕ್ಕೆ ತನ್ನ ಸ್ವಂತ ಲಗ್ನ ಸ್ಥಾನ ಹೊರತು ಉಳಿದ ಸ್ಥಾನಗಳು ಬಲವಾದವುಗಳಾಗಲಿ, ಬಲಹೀನವಾದವುಗಳಾಗಲಿ ಇರುವುದಿಲ್ಲ. ಕೆಲವರು ಪ್ರತಿ ಗ್ರಹಕ್ಕು ಉಚ್ಛ ನೀಚ ಸ್ಥಾನಗಳಿವೆಯೆಂದು, ಉಚ್ಛ ಸ್ಥಾನದಲ್ಲಿನ ಗ್ರಹಕ್ಕೆ ಬಲವೆಚ್ಚುಯೆಂದು, ನೀಚ ಸ್ಥಾನದಲ್ಲಿನ ಗ್ರಹಕ್ಕೆ ಬಲ ಕಡಿಮೆಯೆಂದು ಹೇಳುತ್ತಿರುತ್ತಾರೆ. ಅದೆಲ್ಲವೂ ಶಾಸ್ತ್ರಬದ್ಧತೆ ಇಲ್ಲದ ವಿಷಯವಾಗುತ್ತದೆ. ಏಕೆ ಬಲವಾದುದೋ, ಏಕೆ ಬಲಹೀನವಾದುದೋ ಹೇಳುವುದಕ್ಕೆ ಶಾಸ್ತ್ರಾಧಾರವಿಲ್ಲ. ಆದ್ದರಿಂದ ಗ್ರಹಗಳಿಗೆ ಸ್ವಂತ ಸ್ಥಾನಗಳಿವೆಯಾಗಲಿ, ಉಚ್ಛ ನೀಚ ಸ್ಥಾನಗಳು ಇಲ್ಲ. ಸ್ಥಾನಗಳನ್ನನುಸರಿಸಿ ಗ್ರಹಗಳನ್ನು ಬಲವಾದವೆಂದು, ಬಲಹೀನವಾದವೆಂದು ಹೇಳಲಾರೆವು. ಆದರೆ ಹನ್ನೆರಡು ಗ್ರಹಗಳಲ್ಲಿ ಸಹಜವಾಗಿಯೇ ಕೆಲವು ಬಲವಾದವುಗಳಾಗಿ ಇವೆಯೆಂದು ಕೆಲವು ಬಲಹೀನವಾಗಿ ಇವೆಯೆಂದು, ಹೇಳಬಹುದು.

# 30 ಗ್ರಹಗಳು ಹೇಗೆ ಬಲವಂತರಾಗಿ, ಬಲಹೀನರಾಗಿ ಇದ್ದಾರೆ?

ಗ್ರಹಗಳು ಎಂದರೇ ಗ್ರಹಿಸುವವೆಂದು ಅರ್ಥ. ಹೆಸರಿನಲ್ಲಿ ಸಮಾನ ಅರ್ಥವಿದ್ದರೂ, ಗ್ರಹಿಸುವುದರಲ್ಲಿ ಕೆಲವು ಗ್ರಹಗಳು ಹೆಚ್ಚಾಗಿ, ಕೆಲವು ಗ್ರಹಗಳು ಕಡಿಮೆಯಾಗಿ ಗ್ರಹಿಸಿಕೊಳ್ಳುವುದರಿಂದ, ಅವುಗಳನ್ನು ಬಲವಂತರು, ಬಲಹೀನರೆಂದು ಹೇಳುವುದು ನಡೆದಿದೆ. ಈಗ ನಮಗೆ ಅರ್ಥವಾಗುವುದಕ್ಕೆ ಗ್ರಹಗಳಿಗೆ ಕೈಗಳಿರುವಂತೆ ಹೇಳಿಕೊಳ್ಳೋಣ. ವಾಸ್ತವವಾಗಿ ಗ್ರಹಗಳಿಗೆ ಕೈಗಳಿಲ್ಲ. ಗ್ರಹಗಳು ಕರ್ಮಗಳನ್ನು ಹೇಗೆ ಗ್ರಹಿಸುತ್ತವೊ ಪೂರ್ತಿಯಾಗಿ ಯಾರಿಗೂ ತಿಳಿದಿಲ್ಲ. ಈಗ ನಮಗೆ ಅರ್ಥವಾಗುವುದಕ್ಕಾಗಿ ಗ್ರಹಗಳಿಗೆ ಕೈಗಳಿರುವಂತೆ ಹೇಳುತ್ತಿದ್ದೇವೆ ಆದರೆ ನಿಜವಾಗಿ ಅವುಗಳಿಗೆ ಕೈಗಳು ಇಲ್ಲ. ಬಾಹು ಬಲ(ಕೈಗಳ ಬಲ)ವನ್ನು ಅನುಸರಿಸಿ ಇವನು ಬಲಾಢ್ಯನು, ಬಲಹೀನನು ಎಂದು ಮನುಷ್ಯರನ್ನು ಹೇಳುತ್ತಿರುತ್ತಾರೆ. ಆದ್ದರಿಂದ ಗ್ರಹಗಳನ್ನು ಬಲವಂತರಾಗಿ ಹೇಳುವುದಕ್ಕೆ ಕೈಗಳಿರುವಂತೆ ಹೇಳಿಕೊಳ್ಳುತ್ತಿದ್ದೇವೆ. ಅಷ್ಟೇ ಹೊರತು ಗ್ರಹಗಳಿಗೆ ಕೈಗಳಿರುವುದಿಲ್ಲ. ಗ್ರಹಗಳೆಲ್ಲ ಒಂದೇ ಆಕಾರ ಹೊಂದಿವೆಯೆಂದು ಹೇಳಲಾರೆವು. ದ್ವಾದಶ ಗ್ರಹಗಳು ಇರುವಾಗ ಅವುಗಳಲ್ಲಿ ಇಲ್ಲಿಯವರೆಗು ಎಲ್ಲರೂ ಒಂಭತ್ತನ್ನು ಮಾತ್ರವೇ ಹೇಳಿಕೊಳ್ಳುತ್ತಾ ನವಗ್ರಹಗಳೆಂದು ಹೇಳಿದ್ದಾರೆ. ಖಗೋಳದಲ್ಲಿ ಲೆಕ್ಕವಿಲ್ಲದಷ್ಟು ಗ್ರಹಗಳು ಕೋಟಿಗಳ ಸಂಖ್ಯೆಯಲ್ಲಿವೆ. ಆದರೂ ನಮ್ಮ ಕರ್ಮಚಕ್ರದಲ್ಲಿ ಇರುವವು ದ್ವಾದಶ ಗ್ರಹಗಳು ಮಾತ್ರವೇ. ಹನ್ನೆರಡು ಗ್ರಹಗಳಲ್ಲಿ ಒಂಭತ್ತು ಗ್ರಹಗಳಿಗೆ ಸಹಜವಾಗಿ ಎರಡು ಕೈಗಳಿವೆ. (ಗ್ರಹಗಳಿಗೆ ಗ್ರಹಿಸುವಶಕ್ತಿ ಸೂಕ್ಷ್ಮವಾಗಿರುತ್ತದೆ. ಆದ್ದರಿಂದ ಗ್ರಹಗಳು ಹೇಗೆ ಗ್ರಹಿಸಿಕೊಳ್ಳುತ್ತವೊ ಯಾರಿಗೂ ತಿಳಿದಿಲ್ಲ. ನಮಗೆ ಅರ್ಥವಾಗುವುದಕ್ಕೆ ಮಾತ್ರವೇ ಗ್ರಹಗಳಿಗೆ ಕೈಗಳಿವೆಯೆಂದು ಹೇಳುವುದು ನಡೆದಿದೆ.) ಹನ್ನೆರಡು ಗ್ರಹಗಳಲ್ಲಿ ಒಂಭತ್ತಕ್ಕೆ ಎರಡು ಕೈಗಳಿರುವಾಗ, ಕೇವಲ

ಮೂರು ಗ್ರಹಗಳಿಗೆ ಮಾತ್ರ ನಾಲ್ಕು ಕೈಗಳಿವೆ. ಎರಡು ಕೈಗಳಿರುವ ಗ್ರಹಗಳನ್ನೂ, ನಾಲ್ಕು ಕೈಗಳಿರುವ ಗ್ರಹಗಳನ್ನೂ ಕೆಳಗಿನ ವರಸೆ ಕ್ರಮದಲ್ಲಿ ನೋಡೋಣ.

**ಸೂರ್ಯನು** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಚಂದ್ರನು** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಕುಜನು** ನಾಲ್ಕು ವಿಧಗಳ ಗ್ರಾಹಿತಶಕ್ತಿ ಇರುವವನು (ನಾಲ್ಕು ಕೈಗಳು ಇರುವವನು)

**ಬುಧನು** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಗುರು** ನಾಲ್ಕು ವಿಧಗಳ ಗ್ರಾಹಿತಶಕ್ತಿ ಇರುವವನು (ನಾಲ್ಕು ಕೈಗಳು ಇರುವವನು)

**ಶುಕ್ರನು** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಶನಿ** ನಾಲ್ಕು ವಿಧಗಳ ಗ್ರಾಹಿತಶಕ್ತಿ ಇರುವವನು (ನಾಲ್ಕು ಕೈಗಳು ಇರುವವನು)

**ಭೂಮಿ** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ರಾಹು** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಕೇತು** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಮಿತ್ರ** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

**ಚಿತ್ರ** ಎರಡು ವಿಧಗಳ ಗ್ರಾಹಿತಶಕ್ತಿ ಇರುವವನು (ಎರಡು ಕೈಗಳು ಇರುವವನು)

ಒಂದೊಂದು ಗ್ರಹ ಒಂದೊಂದು ಹೆಸರು ಹೊಂದಿರುವಂತೆ ತಮ್ಮ ಕಾರ್ಯಕಲಾಪಗಳಲ್ಲಾಗಲಿ, ತಮಗಿರುವ ಬಲದಲ್ಲಾಗಲಿ ಎಲ್ಲರೂ ಸಮಾನವಾಗಿ ಇದ್ದಾರೆನ್ನುವುದಕ್ಕೆ ಸಾಧ್ಯವಿಲ್ಲ. ಹನ್ನೆರಡು ಗ್ರಹಗಳಲ್ಲಿ ಒಂಭತ್ತು ಗ್ರಹಗಳು ಎರಡು ಕೈಗಳುಹೊಂದಿ ಕೆಲಸವನ್ನು ಮಾಡಿದಾಗ, ಮೂರು ಗ್ರಹಗಳು ಮಾತ್ರ ಪ್ರತ್ಯೇಕಿಸಿ ನಾಲ್ಕು ಕೈಗಳು ಹೊಂದಿ ಕೆಲಸ ಮಾಡುತ್ತಿವೆ. ಸೂರ್ಯ, ಚಂದ್ರ,

ಬುಧ, ಶುಕ್ರ, ಭೂಮಿ, ರಾಹು, ಕೇತು, ಮಿತ್ರ, ಚಿತ್ರ ಎನ್ನುವ ಹೆಸರುಗಳಿರುವ ನವಗ್ರಹಗಳು ಕರ್ಮಚಕ್ರದಲ್ಲಿ ಇದ್ದು, ಕರ್ಮಚಕ್ರದಲ್ಲಿರುವ ಪ್ರಾರಬ್ಧಕರ್ಮವನ್ನು ಎರಡು ಕಡೆಯಿಂದ, ಎರಡು ಕೈಗಳ ಮೂಲಕ ಸ್ವೀಕರಿಸುತ್ತಿರುತ್ತಾರೆ. ಹಾಗೇ ಉಳಿದ ಕುಜ, ಗುರು, ಶನಿಗ್ರಹಗಳು ಮೂರು ಒಂದೊಂದು ನಾಲ್ಕು ಕೈಗಳು ಹೊಂದಿದ್ದು ಕರ್ಮಚಕ್ರದಲ್ಲಿನ ಪ್ರಾರಬ್ಧಕರ್ಮವನ್ನು ನಾಲ್ಕು ಕಡೆಯಿಂದ ತೆಗೆದುಕೊಂಡು ಜೀವಿಯ ಮೇಲೆ (ಮನುಷ್ಯನ ಮೇಲೆ) ಬಿಡುತ್ತಿರುತ್ತಾರೆ. ಸೂರ್ಯನು ತನ್ನ ಎರಡು ಕೈಗಳಿಂದ ತಾನಿರುವ ಒಂದನೇ ಸ್ಥಾನದಲ್ಲಿನ ಕರ್ಮವನ್ನೂ, ತನಗೆ ಎದುರುಗಡೆ ಇರುವ ಏಳನೆ ಸ್ಥಾನದಲ್ಲಿನ ಕರ್ಮವನ್ನೂ ಸ್ವೀಕರಿಸುತ್ತಾನೆ. ಚಂದ್ರನು ತನ್ನ ಎರಡು ಕೈಗಳಲ್ಲಿ ಒಂದು ಕೈಯಿಂದ ತಾನಿರುವ ಒಂದನೇ ಸ್ಥಾನದಲ್ಲಿನ ಕರ್ಮವನ್ನೂ, ಎರಡನೇ ಕೈ ಮೂಲಕ ಏಳನೇ ಸ್ಥಾನದಲ್ಲಿನ ಕರ್ಮವನ್ನೂ ತೆಗೆದುಕೊಳ್ಳುತ್ತಾನೆ. ಸುಲಭವಾಗಿ ಅರ್ಥವಾಗುವುದಕ್ಕೆ ಕೆಳಗಿರುವ ವಾಕ್ಯಗಳನ್ನು ನೋಡಿರಿ.

| | | |
|---|---|---|
| **ಸೂರ್ಯ** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |
| **ಚಂದ್ರ** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |
| **ಕುಜ** | 1,4,7,8 ಸ್ಥಾನಗಳ | ಕರ್ಮವನ್ನು ತೆಗೆದುಕೊಳ್ಳುತ್ತದೆ |
| **ಬುಧ** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |
| **ಗುರು** | 1,5,7,9 ಸ್ಥಾನಗಳ | ಕರ್ಮವನ್ನು ತೆಗೆದುಕೊಳ್ಳುತ್ತದೆ. |
| **ಶುಕ್ರ** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |
| **ಶನಿ** | 1,3,7,10 ಸ್ಥಾನಗಳ | ಕರ್ಮವನ್ನು ತೆಗೆದುಕೊಳ್ಳುತ್ತದೆ. |
| **ರಾಹು** | 1,7 ಸ್ಥಾನಗಳ | ಕರ್ಮವನ್ನು ತೆಗೆದುಕೊಳ್ಳುತ್ತದೆ. |
| **ಕೇತು** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |

| | | |
|---|---|---|
| **ಭೂಮಿ** | 1,7 ಸ್ಥಾನಗಳ | ಕರ್ಮವನ್ನು ತೆಗೆದುಕೊಳ್ಳುತ್ತದೆ. |
| **ಮಿತ್ರ** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |
| **ಚಿತ್ರ** | 1,7 ಸ್ಥಾನಗಳ | ಕರ್ಮವನ್ನು ಸ್ವೀಕರಿಸುತ್ತದೆ. |

ಈ ವಿಧವಾಗಿ ದ್ವಾದಶ ಗ್ರಹಗಳು ಕರ್ಮಚಕ್ರದಲ್ಲಿನ ಪ್ರಾರಬ್ಧಕರ್ಮವನ್ನು ಸ್ವೀಕರಿಸಿ ಮನುಷ್ಯನಿಂದ ಅನುಭವಿಸುವಂತೆ ಮಾಡುತ್ತಿವೆ. ಎಲ್ಲಾ ಕಾಲದಲ್ಲಿ ಮನುಷ್ಯ ಒಂದೇ ವಿಧವಾದ ಕರ್ಮವನ್ನು ಅನುಭವಿಸದೆ ಕಾಲಕಳೆದಂತೆಲ್ಲ ಬೇರೆಬೇರೆ ಕರ್ಮಗಳನ್ನು ಅನುಭವಿಸುತ್ತಾ ಹೋಗುತ್ತಿರುತ್ತಾನೆ. ಅದಕ್ಕಾಗಿ ಗ್ರಹಗಳು ತನ್ನ ಸ್ಥಾನಗಳನ್ನು ಬಿಟ್ಟು ಬೇರೆ ಸ್ಥಾನಗಳಲ್ಲಿ ಪ್ರವೇಶಿಸಿ, ಅಲ್ಲಿನ ಹೊಸ ಕರ್ಮವನ್ನು ಕೂಡ ಸ್ವೀಕರಿಸಬೇಕಾಗಿದೆ. ಆದ್ದರಿಂದ ದ್ವಾದಶ ಗ್ರಹಗಳು ಕರ್ಮಚಕ್ರದ ಮೇಲೆ ತಮ್ಮ ಕಿರಣಗಳನ್ನು ಬೇರೆಬೇರೆ ಸ್ಥಾನಗಳ ಮೇಲೆ ಪ್ರಸರಿಸುವಂತೆ ಮಾಡುವುದಕ್ಕೆ, ಕಾಲಚಕ್ರದಲ್ಲಿ ಸ್ವಲ್ಪ ವೇಗದಿಂದ ಕದಲಿ ತಿರುಗಬೇಕಾಗಿ ಬರುತ್ತಿದೆ.


## 31 ರಾಶಿ ಎಂದರೆ ಏನು? ಲಗ್ನ ಎಂದರೆ ಏನು?

ಜ್ಯೋತಿಷ್ಯರೆಲ್ಲರೂ ಹನ್ನೆರಡು ಸ್ಥಾನಗಳನ್ನು ರಾಶಿಗಳೆಂದು, ಹಾಗೇ ಲಗ್ನಗಳೆಂದು ಹೇಳುತ್ತಿರುತ್ತಾರೆ. ಒಂದು ಬಾರಿ ವೃಷಭಲಗ್ನವೆಂದು ಹೆಸರನ್ನು ಜೋಡಿಸಿ ಹೇಳಿರುವುದನ್ನೆ ಮತ್ತೊಂದುಬಾರಿ ವೃಷಭರಾಶಿ ಎಂದು ಹೇಳುತ್ತಿರುತ್ತಾರೆ. ಒಂದುಬಾರಿ ಲಗ್ನವೆಂದು ಮತ್ತೊಂದು ಬಾರಿ ರಾಶಿಯೆಂದು ಒಂದೇ ಸ್ಥಾನವನ್ನು ಹೇಳುವುದರಿಂದ, ರಾಶಿ ಎಂದರೂ ಲಗ್ನವೆಂದರೂ ಒಂದೇಯೆಂದು ಬಹಳಜನ ಅಂದುಕೊಳ್ಳುವುದು ನಡೆಯುತ್ತಿದೆ. ವಾಸ್ತವವಾಗಿ ರಾಶಿ ಬೇರೆಯೆಂದು, ಲಗ್ನ ಬೇರೆಯೆಂದು ತಿಳಿಯಬೇಕು. ಕಾಲಚಕ್ರದಲ್ಲಿನ ಹನ್ನೆರಡು ಸ್ಥಾನಗಳನ್ನು ಲಗ್ನಗಳೆಂದು ಹೇಳಬಹುದು. ಹಾಗೇ ಕರ್ಮಚಕ್ರದಲ್ಲಿನ

ಹನ್ನೆರಡು ಸ್ಥಾನಗಳನ್ನು ಹನ್ನೆರಡು ರಾಶಿಗಳೆಂದು ಹೇಳಬಹುದು. ಕಾಲಚಕ್ರದಲ್ಲಿನ ಭಾಗಗಳನ್ನು ಮಾತ್ರವೇ ಲಗ್ನವೆನ್ನಬೇಕು. ಲಗ್ನ ಎನ್ನುವ ಮಾತನ್ನು ಕಾಲ ಚಕ್ರದಲ್ಲಿರುವ ಯಾವ ಸ್ಥಾನಕ್ಕಾದರೂ ಬಳಸಬಹುದು ಆದರೆ, ಎಂತಹ ಸಂದರ್ಭದಲ್ಲಾದರೂ ರಾಶಿ ಎನ್ನುವ ಹೆಸರನ್ನು ಕಾಲಚಕ್ರದಲ್ಲಿನ ಭಾಗಗಳಿಗೆ ಬಳಸಬಾರದು. ಇನ್ನು ಕರ್ಮಚಕ್ರದಲ್ಲಿನ ಹನ್ನೆರಡು ಭಾಗಗಳನ್ನು ಹನ್ನೆರಡು ಸ್ಥಾನಗಳಾಗಿ ಹೇಳಿಕೊಳ್ಳುತ್ತಿದ್ದೇವೆ. ಕಾಲಚಕ್ರದಲ್ಲಿನ ಪ್ರತಿ ಭಾಗಕ್ಕು ಒಂದು ಹೆಸರು ಇದೆ. ಕರ್ಮಚಕ್ರದಲ್ಲಿನ ಭಾಗಗಳಿಗೆ ಹೆಸರುಗಳಿಲ್ಲ. ಅವುಗಳಿಗೆ ಸಂಖ್ಯೆ ಮಾತ್ರ ಇರುತ್ತದೆ. ಆದ್ದರಿಂದ ಮೂರನೆ ಸ್ಥಾನವೆಂದು, ನಾಲ್ಕನೆ ಸ್ಥಾನವೆಂದು ಸ್ಥಾನಗಳಿಗೆ ಸಂಖ್ಯೆಯನ್ನು ಸೇರಿಸಿ ಹೇಳುತ್ತಿದ್ದೇವೆ. ಸಂಖ್ಯೆಗಳ ಸ್ಥಾನಗಳಾಗಿ ಹೇಳಲ್ಪಡುವ ಹೆಸರಿಲ್ಲದ ಭಾಗಗಳಾದ ಕರ್ಮಚಕ್ರ ಸ್ಥಾನಗಳನ್ನು ರಾಶಿಗಳೆಂದು ಕರೆಯುವುದು ನಡೆಯುತ್ತಿದೆ. ರಾಶಿ ಎಂದರೆ ಏನನ್ನಾದರೂ ಕುಪ್ಪೆಯಾಗಿ ಸುರಿದಾಗ ಆ ಕುಪ್ಪೆಯನ್ನು ರಾಶಿ ಎನ್ನುವುದು ನಡೆಯುತ್ತಿದೆ. ಕರ್ಮಚಕ್ರದಲ್ಲಿನ ಎಲ್ಲಾ ಭಾಗಗಳಲ್ಲಿಯೂ ಕರ್ಮವನ್ನು ರಾಶಿಗಳಾಗಿ ತುಂಬಿರುವುದರಿಂದ, ಪ್ರತಿ ಮಾನವನು ಕರ್ಮಚಕ್ರದಲ್ಲಿನ ರಾಶಿಗಳಲ್ಲಿರುವ ಕರ್ಮವನ್ನೇ ಅನುಭವಿ ಸುವುದು ನಡೆಯುತ್ತಿದೆ. ಕರ್ಮಚಕ್ರದಲ್ಲಿನ ಹನ್ನೆರಡು ಸ್ಥಾನಗಳಲ್ಲಿ ಕರ್ಮ ಜೋಡಿಸಲ್ಪಟ್ಟಿದೆ. ಆದ್ದರಿಂದ ಪ್ರತಿ ಸ್ಥಾನವನ್ನು ರಾಶಿ ಎನ್ನುತ್ತಿದ್ದೇವೆ. ಕರ್ಮಚಕ್ರದಲ್ಲಿನ ಯಾವ ಸ್ಥಾನದಲ್ಲಿ ಯಾವ ಕರ್ಮ ರಾಶಿಯಾಗಿ ಸುರಿಯಲ್ಪಡುತ್ತಿದೆಯೋ, ನಾವು ಇದಕ್ಕು ಮುನ್ನವೇ ತಿಳಿದುಕೊಂಡಿದ್ದೇವೆ.

ಲಗ್ನ ಎಂದರೇ ಅಂಟಿಕೊಂಡಿರುವುದೆಂದು, ತಗಲಿಕೊಂಡಿರುವುದೆಂದು ಹೇಳಬಹುದು. ಕಾಲಚಕ್ರದಲ್ಲಿರುವ ಹನ್ನೆರಡು ಗ್ರಹಗಳು ಯಾವುದೋ ಒಂದು ಸ್ಥಾನವನ್ನು ಅಂಟಿಕೊಂಡಿರುವುದರಿಂದ ಆ ಸ್ಥಾನಗಳನ್ನು ಲಗ್ನಗಳು ಎಂದಿದ್ದೇವೆ. ಪ್ರತಿ ಗ್ರಹ ಸ್ವಲ್ಪ ಕಾಲ ಒಂದು ಸ್ಥಾನವನ್ನು ಅಂಟಿಕೊಂಡಿದ್ದು ನಂತರ ಮತ್ತೊಂದು ಕಡೆ ಸ್ಥಾನದೊಳಗೆ ಸೇರುತ್ತಿದೆ. ಆದ್ದರಿಂದ ಕಾಲಚಕ್ರದಲ್ಲಿನ ಸ್ಥಾನಗಳನ್ನು ಲಗ್ನಗಳೆನ್ನುವ ಹೆಸರಿನಿಂದ ಹೇಳುತ್ತಿದ್ದೇವೆ. ಒಂದು ಗ್ರಹ ಕಾಲಚಕ್ರದಲ್ಲಿನ

ಒಂದು ಸ್ಥಾನವನ್ನು ಆಶ್ರಯಿಸಿಕೊಂಡು, ಅಲ್ಲಿಂದ ತನ್ನ ಕಿರಣಗಳನ್ನು ಕೆಳಗಿರುವ ಕರ್ಮಚಕ್ರದಲ್ಲಿನ ಕರ್ಮರಾಶಿಗಳ ಮೇಲೆ ಪ್ರಸರಿಸುವಂತೆ ಮಾಡುತ್ತಿರುತ್ತದೆ. ಒಂದು ಗ್ರಹ ಒಂದು ಕಾಲ ಲಗ್ನದಲ್ಲಿದ್ದು ಕರ್ಮರಾಶಿ ಮೇಲೆ ತನ್ನ ಕಿರಣಗಳು ಬಿದ್ದಾಗ, ಆ ಕರ್ಮರಾಶಿಯಲ್ಲಿ ಯಾವ ಕರ್ಮ ಇರುತ್ತದೊ ಆ ಕರ್ಮವನ್ನು ಸ್ವೀಕರಿಸಿ, ಕೆಳಗೆ ಗುಣಚಕ್ರದಲ್ಲಿರುವ ಜೀವಿಯ ಮೇಲೆ ಪ್ರಸರಿಸುವಂತೆ ಮಾಡುತ್ತದೆ. ಆಗ ಜೀವಿಯು ಆ ಕರ್ಮವನ್ನು ಅನುಭವಿಸುವುದು ನಡೆಯುತ್ತಿದೆ. ಕಾಲಚಕ್ರದಲ್ಲಿನ ಗ್ರಹಗಳನ್ನು ಕಾಂತಿಯನ್ನು ಪ್ರಸರಿಸುವ ಫೋಕಸ್‌ಲೈಟ್‌ಗಳಿಗೆ ಹೋಲಿಸಿಕೊಂಡು, ಕೆಳಗೆ ಕರ್ಮಚಕ್ರದಲ್ಲಿನ ಕರ್ಮವನ್ನು ಬಣ್ಣದ ಪೇಪರ್‌ಗೆ ಹೋಲಿಸಿಕೊಂಡರೆ, ಗ್ರಹ ಕಾಂತಿ, ಕೆಳಗಿನ ಚಕ್ರದಲ್ಲಿನ ಕರ್ಮಬಣ್ಣವನ್ನು, ಇನ್ನೂ ಕೆಳಗಿರುವ ಗುಣ ಚಕ್ರದಲ್ಲಿನ ಜೀವಿಯ ಮೇಲೆ ಪ್ರಸರಿಸುವುದರಿಂದ, ಕರ್ಮಬಣ್ಣವನ್ನು ಜೀವಿಯು ಹೊಂದುತ್ತಿದ್ದಾನೆ. ಈ ವಿಷಯ ಕೆಳಗೆ 47ನೇ ಚಿತ್ರದಲ್ಲಿ ನೋಡಿರಿ.




47ನೇ ಚಿತ್ರ.

ಲಗ್ನಗಳಲ್ಲಿನ ಗ್ರಹಗಳು ರಾಶಿಗಳಲ್ಲಿನ ಕರ್ಮಗಳನ್ನು ಗುಣಗಳಲ್ಲಿನ ಜೀವಿಯ ಮೇಲೆ ಹಾಕುವುದರಿಂದ, ಜೀವಿಯು ಯಾವ ಕಡೆ ತಪ್ಪಿಸಿಕೊಳ್ಳದೆ ಕರ್ಮವನ್ನು ಅನುಭವಿಸಬೇಕಾಗಿ ಬರುತ್ತಿದೆ. ಒಬ್ಬ ಮನುಷ್ಯ ಒಂದು ಬಾಧೆಯನ್ನು ಅನುಭವಿಸುತ್ತಿದ್ದಾನೆಂದರೇ ಅವನ ತಲೆಯಲ್ಲಿರುವ ಕಾಲ, ಕರ್ಮ, ಗುಣಚಕ್ರಗಳಲ್ಲಿ ನಮಗೆ ತಿಳಿಯದೇ ಒಂದು ಕ್ರಿಯೆ ನಡೆಯುತ್ತಿದೆಯೆಂದು ತಿಳಿಯುತ್ತಿದೆ. ಕಾಣಿಸದೆ ಅಜ್ಞಾನವೆನ್ನುವ ಕತ್ತಲೆಯಲ್ಲಿರುವ ಈ ಕ್ರಿಯೆಯನ್ನು ಜ್ಞಾನ ಎನ್ನುವ ದೀಪದಿಂದ ತಿಳಿಯುವುದನ್ನೇ ಜ್ಯೋತಿಷ್ಯ ಎನ್ನುತ್ತಿದ್ದೇವೆ. **ಸಂಗೀತದಲ್ಲಿ ರಾಗ, ತಾಳ, ಪಲ್ಲವಿ ಇರುವಂತೆ ಜ್ಯೋತಿಷ್ಯದಲ್ಲಿ ಲಗ್ನಗಳಲ್ಲಿನ ಗ್ರಹಗಳು, ರಾಶಿಗಳಲ್ಲಿನ ಕರ್ಮ, ಗುಣಗಳಲ್ಲಿನ ಜೀವಿ ಇದ್ದಾನೆ. ರಾಗ, ತಾಳ, ಪಲ್ಲವಿ ತಿಳಿದರೇನೆ ಸಂಗೀತವನ್ನು ತಿಳಿದಂತೆ, ಗ್ರಹ ಲಗ್ನಗಳು, ಕರ್ಮ ರಾಶಿಗಳು, ಅನುಭವಿಸುವ ಜೀವಿ ತಿಳಿಯದೆ ಹೋದರೆ ಜ್ಯೋತಿಷ್ಯ ತಿಳಿಯುವುದಿಲ್ಲ.**

ಆಧ್ಯಾತ್ಮಿಕ ವಿಷಯದಲ್ಲಿ ಪರಮಾತ್ಮನನ್ನು ಕುರಿತು ಹೇಳುವಾಗ ಕೆಲವರು ಕೆಲವು ಸಮಯಗಳಲ್ಲಿ ದೇವರೆಂದು, ಕೆಲವು ಸಮಯಗಳಲ್ಲಿ ಭಗವಂತನೆಂದು ಹೇಳುತ್ತಿರುತ್ತಾರೆ. ಬಹಳಜನರಿಗೆ ದೇವರಿಗು, ಭಗವಂತನಿಗು ಅರ್ಥ ತಿಳಿದಿಲ್ಲ. ಆದ್ದರಿಂದ ದೇವರನ್ನು ಭಗವಂತನನ್ನು ತಮಗಿಷ್ಟಬಂದಂತೆ ಹೇಳುತ್ತಿರುತ್ತಾರೆ. ಅದೇ ವಿಧವಾಗಿ ಜ್ಯೋತಿಷ್ಯ ವಿಷಯದಲ್ಲಿ ಲಗ್ನ ಎಂದರೆ ಏನು, ರಾಶಿ ಎಂದರೆ ಏನು ಎಂದು ಅರ್ಥ, ವಿವರ ತಿಳಿಯದಿರುವಾಗ ಯಾವ ಸಂದರ್ಭದಲ್ಲಿ ಲಗ್ನವನ್ನು ಹೇಳಬೇಕೆಂದು, ಯಾವ ಸಂದರ್ಭದಲ್ಲಿ ರಾಶಿಯನ್ನು ಹೇಳಬೇಕೆಂದು ತಿಳಿಯದೆ ಲಗ್ನವನ್ನು ಹೇಳಬೇಕಾದ ಕಡೆ ರಾಶಿಯನ್ನು, ರಾಶಿಯನ್ನು ಹೇಳಬೇಕಾದ ಕಡೆ ಲಗ್ನವನ್ನು ಹೇಳುತ್ತಿದ್ದಾರೆ. ಭಗವಂತನನ್ನು ಹೇಳಬೇಕಾದ ಕಡೆ ದೇವರನ್ನು, ದೇವರನ್ನು ಹೇಳಬೇಕಾದ ಕಡೆ ಭಗವಂತನನ್ನು ಹೇಳುವುದು ಎಷ್ಟು ತಪ್ಪೊ ಲಗ್ನ, ರಾಶಿಯವೊಂದು ವಿವರ ತಿಳಿಯದೆ ಹೇಳುವುದು ಅಷ್ಟೇ ತಪ್ಪಾಗುತ್ತದೆ.

# 32 ಗ್ರಹಗಳಿಗೆ ಗಮನವಿದೆಯಾ?

ಕಾಲಚಕ್ರದಲ್ಲಿರುವ ದ್ವಾದಶ ಗ್ರಹಗಳಿಗೆ ಗಮನವಿದೆಯೆಂದು ಹೇಳಬಹುದು. ಗ್ರಹಗಳು ಪ್ರಯಾಣ ಮಾಡುವುದರಿಂದ, ಕಾಲಚಕ್ರದಲ್ಲಿನ ಎಲ್ಲಾ ಲಗ್ನಗಳನ್ನು ದಾಟುತ್ತಿವೆ. ಕೆಳಗಿರುವ ಕರ್ಮಚಕ್ರದಲ್ಲಿರುವ ಎಲ್ಲಾ ರಾಶಿಗಳ ಮೇಲೆ ತಮ್ಮ ಕಿರಣಗಳನ್ನು ಪ್ರಸರಿಸುವಂತೆ ಮಾಡುತ್ತಿವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೇ! ಕಾಲಚಕ್ರ ಕೂಡಾ ಸ್ವಲ್ಪ ವೇಗದಿಂದ ತಿರುಗುತ್ತಿದೆ. ಆದರೂ ಅದು ಹೊರಗೆ ಕಾಣಿಸುವಂತಾಗಲಿ, ಇತರರು ಗುರುತಿಸುವಂತಾಗಲಿ ತಿರುಗುತ್ತಿಲ್ಲ. ಕಾಲಚಕ್ರವೊಂದರ ವೇಗವನ್ನು ಗಮನಿಸಿದರೆ ಕಾಲಚಕ್ರ ಒಂದುಬಾರಿ (ಒಂದುಸುತ್ತು) ತಿರುಗುವುದಕ್ಕೆ 43,20,000 ವರ್ಷಗಳ ಕಾಲ ಹಿಡಿಸುತ್ತದೆ. ಆದ್ದರಿಂದ ಕಾಲಚಕ್ರ ತಿರುಗಿದಂತೆ ಕಾಣಿಸುತ್ತಿಲ್ಲ. ಕಾಲಚಕ್ರದಲ್ಲಿನ ಹನ್ನೆರಡು ಗ್ರಹಗಳು ತಮ್ಮ ಗಮನ ಹೊರಗೆ ತಿಳಿಯುವಂತೆ ಒಂದೊಂದು ಒಂದೊಂದು ವೇಗದಿಂದ ಕದಲುತ್ತಿವೆ. ದ್ವಾದಶ ಗ್ರಹಗಳ ವೇಗ ಹೇಗಿದೆಯೋ ಈಗ ಗಮನಿಸೋಣ.

**ಸೂರ್ಯನು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳಕಾಲ ಹಿಡಿಸುತ್ತದೆ.**

**ಚಂದ್ರನು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 2.1/2 ದಿನಗಳು ಹಿಡಿಸುತ್ತದೆ.**

**ಕುಜನು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1.1/2 ತಿಂಗಳು ಹಿಡಿಸುತ್ತದೆ.**

**ಬುಧನು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳಕಾಲ ಹಿಡಿಸುತ್ತದೆ.**

**ಗುರು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1 ವರ್ಷ ಹಿಡಿಸುತ್ತದೆ.**

**ಶುಕ್ರನು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳಕಾಲ ಹಿಡಿಸುತ್ತದೆ.**

**ಶನಿ ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 2.1/2 ವರ್ಷಗಳು ಹಿಡಿಸುತ್ತದೆ.**

**ರಾಹು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1.1/2 ವರ್ಷ ಹಿಡಿಸುತ್ತದೆ.**

**ಕೇತು ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1. 1/2 ವರ್ಷ ಹಿಡಿಸುತ್ತದೆ.**

**ಮಿತ್ರ ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1. 1/2 ವರ್ಷ ಹಿಡಿಸುತ್ತದೆ.**

**ಚಿತ್ರ ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1. 1/2 ವರ್ಷ ಹಿಡಿಸುತ್ತದೆ.**

**ಭೂಮಿ ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳಕಾಲ ಹಿಡಿಸುತ್ತದೆ.**

ಈ ವಿಧವಾಗಿ ಕಾಲಚಕ್ರದಲ್ಲಿನ ಹನ್ನೆರಡು ಗ್ರಹಗಳಿಗೆ ಬೇರೆಬೇರೆ ಗಮನಗಳಿವೆಯೆಂದು ತಿಳಿಯುತ್ತಿದೆ. ಅವುಗಳಲ್ಲಿ ಸೂರ್ಯ, ಬುಧ, ಶುಕ್ರ, ಭೂಮಿ ನಾಲ್ಕು ಒಂದು ವೇಗವನ್ನೂ, ರಾಹು, ಕೇತು, ಮಿತ್ರ, ಚಿತ್ರ ಎನ್ನುವ ನಾಲ್ಕು ಒಂದು ವೇಗವನ್ನೂ ಹೊಂದಿವೆ. ಉಳಿದ ನಾಲ್ಕು ಗ್ರಹಗಳಾದ ಚಂದ್ರನು, 2. 1/2 ದಿನ, ಕುಜನು 1. 1/2 ತಿಂಗಳು, ಶನಿ 2. 1/2 ವರ್ಷಗಳು, ಗುರು 1 ವರ್ಷ ಬೇರೆಬೇರೆ ವೇಗಗಳು ಹೊಂದಿದ್ದಾರೆ. ಕಾಲಚಕ್ರದಲ್ಲಿ ಒಂದು ಲಗ್ನವನ್ನು ದಾಟುವುದರಲ್ಲಿ ಗ್ರಹಗಳ ವೇಗವನ್ನು ಹೇಳಿಕೊಂಡಿದ್ದೇವೆ.

ಕಾಲಚಕ್ರದಲ್ಲಿರುವ ಒಂದು ಲಗ್ನವನ್ನು ದಾಟುವುದಕ್ಕೆ ಯಾವ ಗ್ರಹಕ್ಕೆ ಎಷ್ಟು ಕಾಲ ಹಿಡಿಯುತ್ತದೋ ತಿಳಿದುಕೊಂಡಿದ್ದೇವೆ. ಒಂದು ಗ್ರಹ ಒಂದು ಲಗ್ನವನ್ನು ದಾಟುವುದಕ್ಕೆ ಸ್ವಲ್ಪ ಕಾಲ ಹಿಡಿಸಿದಾಗ ಕಾಲಚಕ್ರದಲ್ಲಿನ ಹನ್ನೆರಡು ಲಗ್ನಗಳನ್ನು ದಾಟುವುದಕ್ಕೆ ಎಷ್ಟು ಕಾಲ ಹಿಡಿಯುತ್ತದೋ ಸುಲಭವಾಗಿ ತಿಳಿಯುತ್ತಿದೆ. ಅವುಗಳ ವಿವರ ಈಗ ನೋಡೋಣ.

**ಸೂರ್ಯನು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ ಒಂದು ತಿಂಗಳು ಹಿಡಿಸಿದಾಗ, ಹನ್ನೆರಡು ಲಗ್ನಗಳನ್ನು ದಾಟುವುದಕ್ಕೆ 1 ವರ್ಷ ಹಿಡಿಸುತ್ತದೆ.

**ಚಂದ್ರನು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ 2. 1/2 ದಿನಗಳು ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 1 ತಿಂಗಳು ಹಿಡಿಸುತ್ತದೆ.

**ಕುಜನು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ 1 1/2 ತಿಂಗಳು ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 1 1/2 ವರ್ಷ ಹಿಡಿಸುತ್ತದೆ.

**ಬುಧನು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳು ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 1 ಸಂ॥ (ವರ್ಷ) ಹಿಡಿಸುತ್ತದೆ.

**ಗುರು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ 1 ಸಂ॥ ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 12 ಸಂ॥ ಹಿಡಿಸುತ್ತದೆ.

**ಶುಕ್ರನು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳು ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 1 ಸಂ॥ ಹಿಡಿಸುತ್ತದೆ.

**ಶನಿ** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ $2\frac{1}{2}$ ಸಂ॥ ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 30 ಸಂ॥ ಹಿಡಿಸುತ್ತದೆ.

**ರಾಹು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ $1\frac{1}{2}$ ಸಂ॥ ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 18 ಸಂ॥ ಹಿಡಿಸುತ್ತದೆ.

**ಕೇತು** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ $1\frac{1}{2}$ ಸಂ॥ ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 18 ಸಂ॥ ಹಿಡಿಸುತ್ತದೆ.

**ಮಿತ್ರ** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ $1\frac{1}{2}$ ಸಂ॥ ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 18 ಸಂ॥ ಹಿಡಿಸುತ್ತದೆ.

**ಚಿತ್ರ** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ $1\frac{1}{2}$ ಸಂ॥ ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 18 ಸಂ॥ ಹಿಡಿಸುತ್ತದೆ.

**ಭೂಮಿ** ಕಾಲಚಕ್ರದಲ್ಲಿ ತನಗಿರುವ ವೇಗದಿಂದ ಒಂದು ಲಗ್ನವನ್ನು ದಾಟುವುದಕ್ಕೆ 1 ತಿಂಗಳು ಹಿಡಿಸಿದಾಗ, 12 ಲಗ್ನಗಳನ್ನು ದಾಟುವುದಕ್ಕೆ 1 ಸಂ॥ ಹಿಡಿಸುತ್ತದೆ.

ಈ ವಿಧವಾಗಿ ರಾಹು, ಕೇತು, ಮಿತ್ರ, ಚಿತ್ರ ಎನ್ನುವ ನಾಲ್ಕು ಗ್ರಹಗಳು ಒಂದೇ ವೇಗದಿಂದ ಕಾಲಚಕ್ರವನ್ನು 18 ಸಂ॥ ಗಳಲ್ಲಿ ಒಂದುಬಾರಿ ದಾಟುತ್ತಿವೆ. ಅದೇ ವಿಧವಾಗಿ ಸೂರ್ಯ, ಬುಧ, ಶುಕ್ರ, ಭೂಮಿ ಎನ್ನುವ ನಾಲ್ಕು ಗ್ರಹಗಳು ಒಂದೇ ವೇಗದಿಂದ ಕಾಲಚಕ್ರವನ್ನು 1 ಸಂ॥ದಲ್ಲಿ ದಾಟುತ್ತಿವೆ. ಇನ್ನು ಚಂದ್ರನು 30 ದಿನಗಳಲ್ಲಿ ಕಾಲಚಕ್ರ ಹನ್ನೆರಡು ಲಗ್ನಗಳನ್ನು ದಾಟಿಹಾಕಿದಾಗ, ಶನಿ ಗ್ರಹ 30 ಸಂ॥ಗಳಲ್ಲಿ ಕಾಲಚಕ್ರದಲ್ಲಿರುವ ಹನ್ನೆರಡು ಲಗ್ನಗಳನ್ನು ದಾಟುತ್ತಿದೆ. ಕುಜ ಗ್ರಹ ಒಟ್ಟಾರೆ ಕಾಲಚಕ್ರ ಲಗ್ನಗಳನ್ನು ದಾಟುವುದಕ್ಕೆ $1\frac{1}{2}$ ವರ್ಷ ಹಿಡಿಸುತ್ತಿದೆ. ಗುರು ಕಾಲಚಕ್ರದಲ್ಲಿರುವ ಹನ್ನೆರಡು ಲಗ್ನಗಳನ್ನು ದಾಟುವುದಕ್ಕೆ 12 ಸಂ॥ಗಳ ಕಾಲ ಹಿಡಿಸುತ್ತಿದೆ. ನಾಲ್ಕು ಗ್ರಹಗಳು 18 ಸಂ॥ ಗಮನವನ್ನೂ, ಮತ್ತೊಂದು ನಾಲ್ಕು ಗ್ರಹಗಳು 1 ವರ್ಷ ಗಮನವನ್ನೂ, ಉಳಿದ ನಾಲ್ಕು ಗ್ರಹಗಳು ಬೇರೆ ಬೇರೆ ಗಮನವನ್ನು ಹೊಂದಿದ್ದರೂ, ಹನ್ನೆರಡು ಗ್ರಹಗಳು ಹನ್ನೆರಡು ವಿಧಗಳ ವೇಗ ಹೊಂದಿದ್ದಾರೆಂದು ಹೇಳಬಹುದು. ಏಕೆಂದರೇ! ಒಂದು ವರ್ಷ ಗಮನವನ್ನು ಹೊಂದಿರುವ ನಾಲ್ಕು ಗ್ರಹಗಳು ಖಚಿತವಾಗಿ ಸಂ॥ ದೊಳಗೇ ಕಾಲಚಕ್ರವನ್ನು ಒಂದುಬಾರಿ ದಾಟುತ್ತವೆಂದು ಹೇಳಲಾರೆವು. ನಾಲ್ಕು ಗ್ರಹಗಳು ಒಂದೇ ವೇಗವನ್ನು ಹೊಂದಿದ್ದರೂ ಕೊನೆಗವು ಒಂದು ಅಥವಾ ಎರಡು ನಿಮಿಷಗಳಿಂದ ಹಿಡಿದು ಐದು ಅಥವಾ ಆರು ನಿಮಿಷಗಳ

ವ್ಯತ್ಯಾಸದಿಂದ ಪ್ರಯಾಣಿಸುತ್ತಿವೆ. ಒಂದು ಸಲ ಆರು ನಿಮಿಷಗಳು ಮುಂದಿರುವ ಗ್ರಹ ಮತ್ತೊಂದು ಬಾರಿ ಐದು ಅಥವಾ ಆರು ನಿಮಿಷಗಳ ಆಲಸ್ಯ ಕೂಡಾ ಆಗಬಹುದು. ಹನ್ನೆರಡು ಗ್ರಹಗಳು ಅವುಗಳಿಗಿರುವ ವೇಗದಲ್ಲಿ ಒಂದರಿಂದ ಆರು ನಿಮಿಷಗಳವರೆಗು ಮುಂದೆ ಹಿಂದೆ ಪ್ರಯಾಣಿಸುತ್ತಿವೆ. ಒಂದೊಂದುಸಲ ಎಲ್ಲಾ ಗ್ರಹಗಳು ಎಂತಹ ಮುಂದೆ ಹಿಂದೆ ಇಲ್ಲದಂತೆ, ತಮಗಿರುವ ವೇಗದಿಂದ ಖಚಿತವಾಗಿ ಪ್ರಯಾಣ ಮಾಡುತ್ತಿವೆ. ಅನೇಕ (ಎಲ್ಲಾ) ಗ್ರಂಥಗಳಲ್ಲಿ ಕೇವಲ ಒಂಭತ್ತು ಗ್ರಹಗಳನ್ನು ಕುರಿತೇ ಬರೆಯುವುದು ನಡೆದಿದೆ. ಈ ಗ್ರಂಥದಲ್ಲಿ ಮಾತ್ರ ಪ್ರತ್ಯೇಕಿಸಿ ಹನ್ನೆರಡು ಗ್ರಹಗಳನ್ನು ಕುರಿತು ಬರೆಯುವುದು ನಡೆದಿದೆ. ಹಾಗೇ ವೇಗದಲ್ಲಿ ಕೂಡಾ ಮೂರು ವಿಧಗಳ ವೇಗವನ್ನು ತೋರಿಸುವುದು ನಡೆದಿದೆ. ಈ ಗ್ರಂಥದಲ್ಲಿ ಕೆಲವು ವಿಷಯಗಳನ್ನು ಹೊಸದಾಗಿ ಇಲ್ಲಿಂದಲೇ ಹೇಳುವುದರಿಂದ ಜಾಗ್ರತೆಯಾಗಿ ಪರಿಶೀಲಿಸಿ ಅರ್ಥ ಮಾಡಿಕೊಳ್ಳಬೇಕೆಂದು ಕೋರುತ್ತಿದ್ದೇವೆ.

ಇಲ್ಲಿಯವರೆಗು ಜ್ಯೋತಿಷ್ಯಶಾಸ್ತ್ರದಲ್ಲಿ ಕಾಲಚಕ್ರ, ಕರ್ಮಚಕ್ರ ಎನ್ನುವ ಮಾತುಗಳೇಯಿಲ್ಲ, ಲಗ್ನ ರಾಶಿಗಳೆಂದು ಹೆಸರಿದ್ದರೂ, ಯಾವುಗಳನ್ನು ರಾಶಿಗಳೆನ್ನಬೇಕೊ, ಯಾವುಗಳನ್ನು ಲಗ್ನಗಳೆನ್ನಬೇಕೋ ತಿಳಿದಿಲ್ಲ. ದೇವರಿಗು ಭಗವಂತನಿಗು ವ್ಯತ್ಯಾಸ ತಿಳಿಯದೆ ಇಬ್ಬರೂ ಒಂದೆ ಅಲ್ಲವೇ! ಎನ್ನುವಂತೆ, ಲಗ್ನವೂ, ರಾಶಿ ಎರಡೂ ಒಂದೇ ಅಲ್ಲವೆ! ಎನ್ನುತ್ತಿದ್ದಾರೆ. ದೇವರು ಬೇರೆ, ಭಗವಂತನು ಬೇರೆಯೆಂದು ನಾವು ಬರೆದ ಆಧ್ಯಾತ್ಮಿಕ ಗ್ರಂಥಗಳಲ್ಲಿ ಮಾತ್ರವೇ ತಿಳಿದಂತೆ, ಈಗ ಈ ಗ್ರಂಥದಲ್ಲಿ ಮಾತ್ರವೇ ಲಗ್ನ ಬೇರೆ, ರಾಶಿಬೇರೆಯೆಂದು ತಿಳಿಯುತ್ತಿದೆ. ಮೊದಲು ಇತರರಿಂದ ಬರೆಯಲ್ಪಟ್ಟ ವಿಷಯಗಳಿಗು, ಈಗ ನಮ್ಮಿಂದ ಬರೆಯಲ್ಪಟ್ಟ ವಿಷಯಗಳಿಗು ಎಷ್ಟೋ ವ್ಯತ್ಯಾಸ ಇರುವುದರಿಂದ ವಿಚಕ್ಷಣೆಯಿಂದ ಜಾಗ್ರತೆಯಾಗಿ ಓದಬೇಕೆಂದು ತಿಳಿಸುತ್ತಿದ್ದೇವೆ.

## 33 ಕಾಲಚಕ್ರಕ್ಕು ಜೀವಿಗು ಸಂಬಂಧವೇನು?

ಮನುಷ್ಯನ ತಲೆಯಲ್ಲಿ ಯಾರಿಗೂ ಕಾಣಿಸದಂತೆ ಸೂಕ್ಷ್ಮವಾಗಿ ನಾಲ್ಕು ಚಕ್ರಗಳ ನಿರ್ಮಾಣವಿದೆಯೆಂದು ತಿಳಿದುಕೊಂಡಿದ್ದೇವೆ ಅಲ್ಲವೆ! ಅವುಗಳಲ್ಲಿ ಎಲ್ಲದಕ್ಕಿಂತ ಮೇಲಿರುವ ಬ್ರಹ್ಮಚಕ್ರದೊಂದಿಗೆ ನಮಗೆ ಸಂಬಂಧವಿಲ್ಲ. ನಮಗಿರುವ ಸಂಬಂಧವೆಲ್ಲಾ ಕಾಲ, ಕರ್ಮ, ಗುಣಚಕ್ರಗಳೊಂದಿಗೇ ಇದೆ. ಜೀವಿಯು ಗುಣಚಕ್ರದಲ್ಲಿ ಗುಣಗಳ ಮಧ್ಯೆ ಇರುವಾಗ, ಕರ್ಮಚಕ್ರದಲ್ಲಿನ ಕರ್ಮವನ್ನು ಆಧಾರ ಮಾಡಿಕೊಂಡು, ಕಾಲಚಕ್ರದಲ್ಲಿನ ಗ್ರಹಗಳು ಜೀವಿಯ ಮೇಲೆ ತಮ್ಮ ಪ್ರಭಾವವನ್ನು ತೋರಿಸುತ್ತಿವೆ. ಕಾಲಚಕ್ರದಲ್ಲಿನ ದ್ವಾದಶ ಗ್ರಹಗಳು ಕೆಳಗಿರುವ ಕರ್ಮಚಕ್ರದ ಮೇಲಿಂದ ಕರ್ಮವನ್ನು ಗುಣಚಕ್ರದಲ್ಲಿನ ಜೀವಿಯಮೇಲೆ ಪ್ರಸರಿಸುವಂತೆ ಮಾಡುತ್ತಿವೆ. ಮನುಷ್ಯನಿಗೆ ಮುಖ್ಯವಾಗಿರುವ ಮೂರು ಕಾಲ, ಕರ್ಮ, ಗುಣಚಕ್ರಗಳಲ್ಲಿ ಮೇಲಿರುವ ಕಾಲಚಕ್ರಕ್ಕು ಕೆಳಗಿರುವ ಗುಣಚಕ್ರಕ್ಕು ಅನುಸಂಧಾನವಾಗಿ ಕರ್ಮಚಕ್ರವಿದೆ. ಕೆಳಗಿರುವ ಗುಣಚಕ್ರದಲ್ಲಿನ ಜೀವಿಯು ಕರ್ಮಚಕ್ರದಲ್ಲಿನ ಕರ್ಮದೊಂದಿಗೆ ಸಂಬಂಧ ಹೊಂದಿರುವಾಗ, ಕರ್ಮಚಕ್ರದಲ್ಲಿನ ಕರ್ಮ ಮೇಲಿರುವ ಕಾಲಚಕ್ರದಲ್ಲಿನ ಗ್ರಹಗಳೊಂದಿಗೆ ಸಂಬಂಧ ಹೊಂದಿದೆ. ಜೀವಿ (ಮನುಷ್ಯ) ಜನ್ಮದಲ್ಲಾಗಲಿ ಮರಣದಲ್ಲಾಗಲಿ ಗುಣಚಕ್ರವನ್ನು ಬಿಟ್ಟು ಹೊರಗೆ ಹೋಗಲಿಲ್ಲ. ಮನುಷ್ಯ ಸಂಪಾದಿಸಿಕೊಂಡ ಆಗಾಮಿ ಕರ್ಮ 69 ಸಂ॥, 5 ತಿಂಗಳ, 10 ದಿನಗಳಿಗೊಂದುಬಾರಿ ಸಂಚಿತವಾಗಿ ಬದಲಾಗುತ್ತಿದೆ. ಬಂದಿರುವ ಆಗಾಮಿಕರ್ಮ, ಬದಲಾದ ಸಂಚಿತಕರ್ಮ ಕರ್ಮಚಕ್ರದಲ್ಲಿ ಕೆಳಗಿನ ಭಾಗದಲ್ಲಿ ಅಡಗಿರುವಾಗ, ಒಂದು ಜನ್ಮಕ್ಕೆ ಮಾತ್ರ ನಿರ್ಣಯಿಸಲ್ಪಟ್ಟ ಪ್ರಾರಬ್ಧಕರ್ಮ ಕರ್ಮಚಕ್ರದಲ್ಲಿನ ಹನ್ನೆರಡು ರಾಶಿಗಳಲ್ಲಿ ತೇಲುತ್ತಿರುತ್ತದೆ. ಮೇಲಕ್ಕೆ ತೇಲುತ್ತಿರುವ ಪ್ರಾರಬ್ಧಕರ್ಮದ ಮೇಲೆಯೇ ಕಾಲಚಕ್ರದಲ್ಲಿನ ಗ್ರಹಗಳ ಕಿರಣಗಳ ಬೆಳಕು ಬೀಳುತ್ತಿರುತ್ತದೆ. ಹಾಗೆ ಬಿದ್ದ ಕಿರಣಗಳು ತಮ್ಮೊಂದಿಗೆ ಕರ್ಮಚಕ್ರದಲ್ಲಿನ ಪ್ರಾರಬ್ಧಕರ್ಮವೊಂದರ ಬಣ್ಣವನ್ನು (ಪಾಪಪುಣ್ಯಗಳನ್ನು) ತೆಗೆದುಕೊಂಡು ಕೆಳಗಿರುವ ಗುಣಚಕ್ರದಲ್ಲಿನ ಜೀವಿಯಮೇಲೆ ಪ್ರಸರಿಸುವಂತೆ ಮಾಡಿ, ಆ

ಕರ್ಮವನ್ನು ಜೀವಿಯು ಅನುಭವಿಸುವಂತೆ ಮಾಡುತ್ತಿವೆ. ಹಾಗೆ ಪ್ರಾರಬ್ಧ ಕರ್ಮವನ್ನು ಅನುಭವಿಸುವುದನ್ನು ಜೀವನ ಎನ್ನುತ್ತೇವೆ.

ಜೀವನ ಜನನದೊಂದಿಗೆ ಪ್ರಾರಂಭವಾಗಿ ಮರಣದೊಂದಿಗೆ ಮುಗಿಯುತ್ತಿದೆ. ಜೀವನ ಪ್ರಾರಂಭವಾಗುವುದು ಗುಣಚಕ್ರದಲ್ಲಿರುವ ಜೀವಿಗೇ ಆದರೂ ಅದು ಯಾವ ಕರ್ಮದಿಂದ ಪ್ರಾರಂಭವಾಗುತ್ತಿದೆಯೋ, ಯಾವ ಕರ್ಮದಿಂದ ಅಂತ್ಯವಾಗುತ್ತಿದೆಯೋ ತಿಳಿಯುವುದಕ್ಕೆ ಕರ್ಮಚಕ್ರದ ಮೇಲೆ ಆಧಾರಬೀಳಬೇಕಾದ್ದೆ. ಕರ್ಮಚಕ್ರದಲ್ಲಿ ಯಾವ ಕರ್ಮವನ್ನು ಯಾವ ಗ್ರಹ ಪ್ರಾರಂಭಿಸುತ್ತದೊ ತಿಳಿಯುವುದಕ್ಕೆ ಕಾಲಚಕ್ರದ ಮೇಲೆ ಆಧಾರಬೀಳಬೇಕಾದ್ದೆ. ಕರ್ಮಚಕ್ರದಲ್ಲಿನ ಸಂಚಿತಕರ್ಮ ಮನುಷ್ಯನ ಮರಣದಲ್ಲಿ ಪ್ರಾರಬ್ಧಕರ್ಮವಾಗಿ ಸ್ವಲ್ಪ ಏರ್ಪಟ್ಟು, ಎರಡನೆ ಜೀವನಕ್ಕೆ ಕಾರಣವಾಗುತ್ತಿದೆ. ಇದೆಲ್ಲವೂ ಸ್ವಲ್ಪಮಟ್ಟಿಗೆ ತಿಳಿಯಬೇಕೆಂದರೇ ಕಾಲಚಕ್ರದಿಂದಲೇ ಪ್ರಾರಂಭಿಸಬೇಕು. ಕಾಲಚಕ್ರವನ್ನು ಅನುಸರಿಸಿ ಯಾವ ಕಾಲದಲ್ಲಿ ಮನುಷ್ಯನ ಜನ್ಮ ನಡೆಯುತ್ತಿದೆಯೋ, ಆ ಕಾಲದಿಂದ ಜೀವನದ ಪಥಕ ನಿರ್ಣಯಿಸಲ್ಪಡುತ್ತಿದೆ. ಆದ್ದರಿಂದ ಆ ಕಾಲವನ್ನು ಜಾಪಥಕ ಎನ್ನುತ್ತಾರೆ. 'ಜ' ಎಂದರೇ ಹುಟ್ಟುವುದು ಎಂದು ಅರ್ಥ. ಹುಟ್ಟುವ ಸಮಯದಲ್ಲಿ ಅಥವಾ ಹುಟ್ಟಿದ ಕಾಲದಲ್ಲಿ ನಿರ್ಣಯಿಸಲ್ಪಟ್ಟಿರುವ ಜೀವನದ ಪ್ರಾರಬ್ಧವನ್ನು ಜೀವನ ಘತಕವಾಗಿ ನಿರ್ಣಯಿಸಿದ್ದಾರೆ. ಘತಕ ಎಂದರೇ ಮೊದಲೇ ನಿರ್ಣಯಿಸಲ್ಪಟ್ಟಿದೆಯೆಂದು ಅರ್ಥ. ಜನನದಲ್ಲಿಯೇ ನಡೆದ ಘತಕವಾದ್ದರಿಂದ ಅದನ್ನು ಜಾಘತಕ ಎನ್ನುತ್ತಿದ್ದರು. ಪೂರ್ವಕಾಲದಲ್ಲಿ ಜಾಘತಕವಾಗಿ ಇಡಲಾದ ಹೆಸರು ಕಾಲಕ್ರಮದಲ್ಲಿ ಜಾತಕವಾಗಿ ಬದಲಾಗಿಹೋಗಿದೆ. ಜಾಘತಕ ಎನ್ನುವ ಹೆಸರಿನಲ್ಲಿರುವ ಎರಡನೆ ಅಕ್ಷರವಾದ ಘ ಇಲ್ಲದಂತೆ ಹೋಗಿ ಕೊನೆಗೆ ಜಾತಕವಾಗಿ ಉಳಿದುಹೋಗಿದೆ.

ಈ ದಿನ ಕೂಡಾ ಒಬ್ಬ ಮನುಷ್ಯನ ಜೀವನವನ್ನು ಕುರಿತು ತಿಳಿಯುವುದಕ್ಕೆ ಅವನ ಜನ್ಮದಲ್ಲಿರುವ ಕಾಲವನ್ನನುಸರಿಸಿ ಜಾತಕವನ್ನು (ಜಾಘತಕವನ್ನು) ನೋಡುವುದು ಸಂಪ್ರದಾಯವಾಗಿ ಇದೆ. ಜ್ಯೋತಿಷ್ಯರೆಲ್ಲರೂ

ಜಾತಕವನ್ನು ಆಧಾರ ಮಾಡಿಕೊಂಡು ನೋಡಿದರೂ, ನೋಡುವವರಲ್ಲಿ ಬಹಳಜನರಿಗೆ ಕಾಲಚಕ್ರ ಯಾವುದೋ, ಕರ್ಮಚಕ್ರ ಯಾವುದೋ, ರಾಶಿ ಯಾವುದೋ, ಲಗ್ನ ಯಾವುದೋ ತಿಳಿಯದಿರುವುದರಿಂದ ಜಾತಕ ಸಮಯದಲ್ಲಿ ಏರ್ಪಡಿಸಲ್ಪಟ್ಟ ಕರ್ಮಗಳನ್ನು ಸರಿಯಾಗಿ ತಿಳಿಯಲಾರದೆ ಹೋಗುತ್ತಿದ್ದಾರೆ. ಜ್ಯೋತಿಷ್ಯ ಎನ್ನುವ ಮಾತು ಜಾಫತಕ (ಜಾತಕ) ದಿಂದಲೇ ಪ್ರಾರಂಭವಾಗುತ್ತದೆ. ಆದ್ದರಿಂದ ಜಾತಕ ಎನ್ನುವುದನ್ನು ಕುರಿತು, ಅದನ್ನು ಹೇಗೆ ತಿಳಿಯಬೇಕೊ ಎಂಬ ವಿಷಯವನ್ನು ಕುರಿತು ಈಗ ತಿಳಿದುಕೊಳ್ಳೋಣ.

## 34 ತ್ರಿ ರಾ ಅಥವಾ ರಾತ್ರಿ

ಕಾಲಚಕ್ರದಲ್ಲಿ ಸೂರ್ಯನು ಲಗ್ನಗಳ ಮೇಲೆ ಪ್ರಯಾಣಿಸುತ್ತಾ ಒಂದೊಂದು ಲಗ್ನವನ್ನು ದಾಟುತ್ತಾ ಕಾಲಚಕ್ರದಲ್ಲಿನ ಮೇಷ, ವೃಷಭ ಮುಂತಾದ ಲಗ್ನಗಳನ್ನು ದಾಟುತ್ತಾಹೋಗಿ ಕೊನೆಗೆ ಮೀನ ಲಗ್ನವನ್ನು ದಾಟುವುದಕ್ಕೆ ಒಂದು ವರ್ಷ ಕಾಲಹಿಡಿಯುತ್ತದೆಂದು ಹೇಳಿಕೊಂಡಿದ್ದೇವೆ. ಕಾಲಚಕ್ರದಲ್ಲಿ ತಿರುಗುವ ಸೂರ್ಯನು ತನ್ನ ಕಿರಣಗಳನ್ನು ಕರ್ಮಚಕ್ರದ ಮೇಲೆ ಪ್ರಸರಿಸುತ್ತದೆಂದು ಹೇಳಿಕೊಂಡಿದ್ದೇವೆ ಅಲ್ಲವೆ! ಹಾಗೆ ಕರ್ಮಚಕ್ರದ ಮೇಲೆ ಸೂರ್ಯಕಿರಣಗಳು ಬೀಳುವುದೇ ಅಲ್ಲದೆ, ಅಲ್ಲಿಬಿದ್ದ ಕಿರಣಗಳು ಕರ್ಮವನ್ನು ತೆಗೆದುಕೊಂಡುಬಂದು ಕೆಳಗಿನ ಚಕ್ರದಲ್ಲಿರುವ ಜೀವಿಯ ಮೇಲೆ ಹಾಕುತ್ತವೆಂದು ಹೇಳಿಕೊಂಡಿದ್ದೇವೆ. ಸೂರ್ಯ ಕಿರಣಗಳು ಗುಣಚಕ್ರದ ಮೇಲೆ ಬಿದ್ದಾಗ, ಗುಣಗಳು ಕೆಲಸಮಾಡುವುದೂ, ಬೀಳದಿರುವಾಗ ಕೆಲಸ ಮಾಡದೆ ಹೋಗುವುದು ನಡೆಯುತ್ತಿರುತ್ತದೆ. ಗುಣಚಕ್ರದಲ್ಲಿ ಮೂರು ಗುಣಭಾಗಗಳಿರುವಂತೆ ಹೇಳಿಕೊಂಡಿದ್ದೇವೆ. ಕರ್ಮ ಕಿರಣಗಳು ಗುಣಗಳ ಮೇಲೆ ಬಿದ್ದಾಗ ಗುಣಗಳು ಕೆಲಸ ಮಾಡುವುದೂ, ಗುಣಗಳ ಮೇಲೆ ಬೀಳದಿರುವಾಗ ಗುಣಗಳು ಕೆಲಸ ಮಾಡದೇ ಹೋಗುವುದು ನಡೆಯುತ್ತಿರುತ್ತದೆ. ಗುಣಗಳು ಕೆಲಸ ಮಾಡಿದ ಕಾಲವನ್ನು ಹಗಲು ಎಂದೂ, ಗುಣಗಳು ಕೆಲಸ ಮಾಡದ ಕಾಲವನ್ನು ರಾತ್ರಿ

ಎನ್ನುವುದು ನಡೆಯುತ್ತಿದೆ. ತ್ರಿ ಎಂದರೆ ಮೂರು ಗುಣಗಳೆಂದು, ರಾ ಎಂದರೇ ಇಲ್ಲದಂತಿರುವುದೆಂದು ಅರ್ಥ. ಅವುಗಳನ್ನೇ ರಾತ್ರಿ ಎನ್ನುವುದರಿಂದ ಮೂರು ಗುಣಗಳು ಕೆಲಸ ಮಾಡದ ಸಮಯವೆಂದು ಅರ್ಥ ಮಾಡಿಕೊಳ್ಳಬಹುದು. ಮೂರು ಗುಣಗಳು ಕೆಲಸ ಮಾಡದ ಸಮಯದಲ್ಲಿ ಮನಸ್ಸಿಗೆ ಕೆಲಸವಿಲ್ಲದೆ ಅದು ನಿದ್ರೆಯೊಳಗೆ ಜಾರಿಕೊಳ್ಳುತ್ತದೆ. ನಿದ್ರೆ ಎಂದರೇ ಯಾವ ಅನುಭವವೂ ಇಲ್ಲದಿರುವುದೆಂದು ಹೇಳಬಹುದು. ಯಾವ ಅನುಭವವೂ ಇಲ್ಲದಿರುವುದನ್ನು ನಿದ್ರೆ ಎನ್ನುವುದೇ ಅಲ್ಲದೆ, ಮೂರು ಗುಣಗಳು ಇಲ್ಲದಿರುವುದು ಆದ್ದರಿಂದ ಆ ಸಮಯವನ್ನು ರಾತ್ರಿ ಎಂದು ಕರೆಯುತ್ತಿದ್ದೇವೆ. ರಾತ್ರಿ ಸಮಯದಲ್ಲಿ ಕೂಡಾ ಕಾಲಚಕ್ರದಲ್ಲಿ ಗ್ರಹಗಳು ತಿರುಗುತ್ತಿದ್ದರೂ ಕರ್ಮ ಅನುಭವ ಜೀವಿಗೆ ಏಕೆ ಇಲ್ಲವೆಂದು ಪ್ರಶ್ನೆಬರಬಹುದು. ಅದಕ್ಕೆ ಸಮಾಧಾನ ಏನೆಂದರೇ! ಸಾವುಹುಟ್ಟುಗಳ ವಿಷಯವನ್ನು ಮನುಷ್ಯ ಅನುಭವ ಪೂರ್ವಕವಾಗಿ ತಿಳಿಯುವಂತೆ ಸಾವಿಗೆ ಗುರುತಾಗಿ ನಿದ್ರೆಯನ್ನೂ, ಜನ್ಮಕ್ಕೆ ಗುರುತಾಗಿ ಎಚ್ಚರವನ್ನು ದೇವರಿಟ್ಟಿದ್ದಾನೆ. ಸಾವಿನಲ್ಲಿ ಮೂರು ಗುಣಗಳು ಕೆಲಸ ಮಾಡುವುದಿಲ್ಲ ಆದ್ದರಿಂದ, ರಾತ್ರಿ ಎನ್ನುವ ಹೆಸರನ್ನು ನಿದ್ರೆ ಸಮಯಕ್ಕೆ ಹೇಳಲಾಗಿದೆ. ಕತ್ತಲು ಬಂದರೆ ರಾತ್ರಿಯೆಂದು, ಬೆಳಕು ಬಂದರೆ ಹಗಲು ಎಂದು ಹೇಳಿಕೊಳ್ಳುವುದು ಎಲ್ಲರಿಗೂ ಅಭ್ಯಾಸವಾಗಿದೆ. ಕತ್ತಲು ಬೆಳಕುಗಳು ನಿಜವಾದ ರಾತ್ರಿ ಹಗಲುಗಳಲ್ಲ.

ಕರ್ಮ ಜಾರಿಯಾಗುವಾಗ ಗುಣಗಳಿರುತ್ತವೆ ಆದ್ದರಿಂದ, ಅದು ಕತ್ತಲ ಸಮಯವಾದರೂ ರಾತ್ರಿಯಲ್ಲ. ಹಾಗೇ ಕರ್ಮ ಜಾರಿ ಆಗದಿರುವಾಗ, ಮೂರು ಗುಣಗಳು ಕೆಲಸ ಮಾಡದಿರುವಾಗ, ಅದು ಬೆಳಕಿನ ಸಮಯವಾದರೂ ಹಗಲಲ್ಲ. ಇದೆಲ್ಲವೂ ಅಂತರಾರ್ಥದಿಂದ ಕೂಡಿಕೊಂಡ ವಿಷಯ. ಒಬ್ಬ ಮನುಷ್ಯನಲ್ಲಿ ಮೂರು ಗುಣ ಭಾಗಗಳಲ್ಲಿನ ಯಾವೊಂದು ಗುಣ ಕೆಲಸ ಮಾಡದಿದ್ದರೂ ಅವನು ಆ ಸಮಯದಲ್ಲಿ ಕರ್ಮ ಅನುಭವಿಸದಂತೇಯೆಂದು ಲೆಕ್ಕಿಸಬೇಕು. ಕರ್ಮ ಅನುಭವಿಸದಿರುವಾಗ ಕೆಳಗೆ ಗುಣಚಕ್ರದಲ್ಲಿನ ಜೀವಿಗೆ ಅನುಭವವಿಲ್ಲ. ಹಾಗೇ ಮೇಲೆ ಕಾಲಚಕ್ರದಲ್ಲಿನ ಗ್ರಹಗಳ ಕಿರಣಗಳು ಯಾವ ಕರ್ಮದಮೇಲೆ

ಪ್ರಸರಿಸದಂತೆಯೆಂದು ತಿಳಿಯಬೇಕು. ಎಲ್ಲಾ ಸಮಯಗಳಲ್ಲಿ ಗ್ರಹಗಳು ಕಾಲಚಕ್ರದ ಮೇಲೆ ಪ್ರಯಾಣಿಸುವಾಗ, ಅವುಗಳ ಕಿರಣಗಳು ಕೆಳಗಿರುವ ಕರ್ಮಚಕ್ರದ ಮೇಲೆ ಏಕೆ ಬೀಳಲಿಲ್ಲವೆಂದು ಯಾರಾದರೂ ಇಲ್ಲಿ ಪ್ರಶ್ನಿಸಬಹುದು. ಅದಕ್ಕೆ ಸಮಾಧಾನವನ್ನು ಕೆಳಗಿನ ಸಮಾಚಾರದಲ್ಲಿ ನೋಡೋಣ.

## 35 ಗ್ರಹಗಳ ರಾಜ – ಗ್ರಹಗಳ ಮಂತ್ರಿ

ಖಗೋಳದಲ್ಲಿ ಎಷ್ಟೋ ಗ್ರಹಗಳು, ಉಪಗ್ರಹಗಳು, ಗ್ರಹಗಳಿಗಿಂತ ದೊಡ್ಡವಾದ ಭೂತಗಳೂ, ಮಹಾಭೂತಗಳೂ ಇವೆಯೆಂದು ಗತದಲ್ಲಿ ನಾವು ಬರೆದ ಗ್ರಂಥಗಳಲ್ಲಿ ಕೂಡ ಹೇಳಿದ್ದೇವೆ. ನಾವು ನಿವಾಸಿಸುವ ಭೂಮಿ ಕೂಡಾ ಒಂದು ಗ್ರಹ. ಕೆಲವು ಗ್ರಹಗಳ ಸಮುದಾಯ ಒಂದು ಗುಂಪಾಗಿ ಏರ್ಪಟ್ಟು ತಮ್ಮ ಬಾಧ್ಯತೆಯನ್ನು ನಿರ್ವಹಿಸುತ್ತಿವೆ. ಅಂತಹ ಗುಂಪುಗಳಲ್ಲಿ ನಾವು ಇಲ್ಲಿಯವರೆಗು ಹೇಳಿಕೊಂಡ ಹನ್ನೆರಡು ಗ್ರಹಗಳು ಸೇರಿ ತಮ್ಮ ವಿಧಿ ವಿಧಾನವನ್ನು ಆಚರಿಸುತ್ತಿವೆ. ಸೂರ್ಯನಿಂದ ಹಿಡಿದು ಮಿತ್ರ ಚಿತ್ರವರೆಗು ಇರುವ ಹನ್ನೆರಡು ಗ್ರಹಗಳನ್ನು ಒಂದು ಕುಟುಂಬವಾಗಿ ಹೇಳಿಕೊಳ್ಳುತ್ತಿದ್ದೇವೆ. ನಮ್ಮ ಗ್ರಹ ಕುಟುಂಬವನ್ನು ಸೂರ್ಯಕುಟುಂಬ ಎಂದು ಕರೆಯುತ್ತಿದ್ದೇವೆ. ಕುಟುಂಬದಲ್ಲಿ ಒಬ್ಬ ಯಜಮಾನ ಇದ್ದಂತೆ, ಕುಟುಂಬದಲ್ಲಿರುವವರೆಲ್ಲರು ಕುಟುಂಬದ ಯಜಮಾನನ ಮಾತನ್ನು ಅನುಸರಿಸಿ ನಡೆದುಕೊಂಡಂತೆ, ಸೂರ್ಯ ಕುಟುಂಬದಲ್ಲಿ ಸೂರ್ಯನೆ ಕುಟುಂಬದ ಯಜಮಾನ. ಸೂರ್ಯನ ಮಾತನ್ನು ಅನುಸರಿಸಿ ಸೂರ್ಯ ಕುಟುಂಬದಲ್ಲಿನ ಗ್ರಹಗಳು ಕೆಲಸಮಾಡುತ್ತವೆ. ಸೂರ್ಯ ಕುಟುಂಬದಲ್ಲಿ ಮುಖ್ಯವಾದ ನಿಯಮ ಒಂದಿದೆ. ಅದು ಏನೆಂದರೇ! ಸೂರ್ಯನು ತನ್ನ ಕಿರಣಗಳನ್ನು ಕರ್ಮಚಕ್ರದ ಮೇಲೆ ಪ್ರಸರಿಸಿದಾಗಲೇ ಉಳಿದ ಹನ್ನೊಂದು ಗ್ರಹಗಳು ತಮ್ಮ ಕಿರಣಗಳನ್ನು ಕರ್ಮಚಕ್ರದ ಮೇಲೆ ಪ್ರಸರಿಸುವಂತೆ ಮಾಡಬೇಕು. ಯಾವಾಗ ತನ್ನ ಕಿರಣಗಳನ್ನು ಸೂರ್ಯನು ಪ್ರಸರಿಸದಂತೆ ಮಾಡುವನೋ, ಆಗ ಎಲ್ಲಾ ಗ್ರಹಗಳು ಹಾಗೇ ಮಾಡಬೇಕು. ಇದು ಕುಟುಂಬ ನಿಯಮ. ಈ

ನಿಯಮವನ್ನು ಪಾಲಿಸುತ್ತಾ ಲಗ್ನಗಳಿಗಧಿಪತಿಗಳಾಗಿ, ಲಗ್ನಗಳನ್ನನುಸರಿಸಿ ಮಿತ್ರ ಶತ್ರುಗಳಾಗಿ ಯಾರಕೆಲಸ ಅವರು ಮಾಡಬೇಕಾಗಿರುತ್ತದೆ.

ಸೂರ್ಯ ಕುಟುಂಬದಲ್ಲಿ ಸೂರ್ಯನು ಕುಟುಂಬ ಯಜಮಾನನಾಗಿ ಇರುವುದರಿಂದ, ಉಳಿದ ಗ್ರಹಗಳೆಲ್ಲ ಸೂರ್ಯನನ್ನು ಆಧಾರ ಮಾಡಿಕೊಂಡು, ಅವುಗಳ ಕಿರಣಗಳನ್ನು ಕರ್ಮಚಕ್ರದ ಮೇಲೆ ಪ್ರಸರಿಸುವಂತೆ ಮಾಡುತ್ತಿವೆ. ಸೂರ್ಯ ಕಿರಿಣಗಳು ಕರ್ಮಚಕ್ರದ ಮೇಲೆ ಇಲ್ಲದ ಸಮಯದಲ್ಲಿ ಉಳಿದ ಗ್ರಹಗಳಿಂದ ಬರುವ ಕಿರಣಗಳೂ, ಕರ್ಮ ನಿಂತುಹೋಗುವುದರಿಂದ ಆ ಸಮಯದಲ್ಲಿ ಜೀವಿಯು ಯಾವ ಕರ್ಮವನ್ನೂ ಅನುಭವಿಸುವುದಿಲ್ಲ. ಕರ್ಮ ಅನುಭವಿಸದ ಕಾಲವನ್ನು ನಿದ್ರೆ ಎಂದೂ, ರಾತ್ರಿ ಎಂದು ಕರೆಯುತ್ತಿದ್ದೇವೆ. ರಾತ್ರಿ ಸಮಯದಲ್ಲಿ ಅಥವಾ ನಿದ್ರೆ ಸಮಯದಲ್ಲಿ ಸೂರ್ಯನನ್ನು ಗೌರವಿಸುತ್ತಾ ಎಲ್ಲಾ ಗ್ರಹಗಳು ಕಾಲಚಕ್ರದಲ್ಲಿ ತಿರುಗುತ್ತಿದ್ದಾಗ ತಮ್ಮ ಕಿರಣಗಳನ್ನು ಕಾಂತಿ ಹೀನವಾಗಿ ಮಾಡಿಕೊಳ್ಳುತ್ತವೆ. ಸೂರ್ಯ ಕುಟುಂಬದಲ್ಲಿ ಯಾವ ಮನುಷ್ಯ ನಾದರೂ ಎರಡು ಗ್ರಹಗಳನ್ನು ನೋಡುತ್ತಿದ್ದಾನೆ. ಆ ಎರಡು ಒಂದು ಸೂರ್ಯನು, ಎರಡು ಚಂದ್ರನು. ಪ್ರತ್ಯಕ್ಷವಾಗಿ ಹೊರಗಿನ ಪ್ರಪಂಚದಲ್ಲಿ ಎಲ್ಲರಿಗೂ ಕಾಣಿಸುವ ಗ್ರಹಗಳು ಸೂರ್ಯ, ಚಂದ್ರರೆಂದು ಯಾರಾದರೂ ಹೇಳುತ್ತಾರೆ. ಈ ಎರಡು ಗ್ರಹಗಳಿಗೂ ಉಳಿದ ಹತ್ತು ಗ್ರಹಗಳಿಗೆ ಇಲ್ಲದ ಪ್ರತ್ಯೇಕತೆ ಇದೆ. ಸೂರ್ಯನು ಗ್ರಹಗಳ ಕುಟುಂಬಕ್ಕೆ ಯಜಮಾನನಂತೆ ಇರುವುದಲ್ಲದೆ, ಕರ್ಮವನ್ನು ಪಾಲಿಸುವುದರಲ್ಲಿ ರಾಜ ಎಂದು ಹೆಸರುವಾಸಿಯಾಗಿದ್ದಾನೆ. ಮನುಷ್ಯನ (ಜೀವಿಯ) ಕರ್ಮವನ್ನು ಜಾರಿ ಮಾಡುವುದಕ್ಕೆ ವಿಧಿವಿಧಾನ ಗಳೆಲ್ಲವನ್ನು ಸೂರ್ಯನು ಏರ್ಪಡಿಸಿ ಇಟ್ಟಿದ್ದಾನೆ. ಆದ್ದರಿಂದ ಕರ್ಮ ಪಾಲನೆ ಯಲ್ಲಿ ರಾಜ ಸೂರ್ಯನೆಂದು ಹೇಳಬಹುದು. ಕರ್ಮ ಪಾಲನೆಯಲ್ಲಿ ಗ್ರಹಚಾರ, ದಶಾಚಾರ ಎಂದು ಎರಡು ವಿಧಾನಗಳನ್ನು ಏರ್ಪಡಿಸಿ ಅದರಲ್ಲಿ ಗ್ರಹಚಾರಕ್ಕೆ ದೊಡ್ಡದಾಗಿ ಸೂರ್ಯನಿರುವಾಗ, ದಶಾಚಾರಕ್ಕೆ ದೊಡ್ಡದಾಗಿ ಚಂದ್ರನಿದ್ದಾನೆ.

ಕಾಲಚಕ್ರದಲ್ಲಿ ದ್ವಾದಶ ಗ್ರಹಗಳು ನಿತ್ಯ ಬಿಡುವಿಲ್ಲದೆ ಸಂಚರಿಸುತ್ತಿದ್ದರೂ, ಅವುಗಳ ವೇಗಗಳಿಂದ ಮುಂದಕ್ಕೆ ಹೋಗುತ್ತಿದ್ದರೂ, ಸೂರ್ಯನನ್ನು ಅನುಸರಿಸಿ ರಾತ್ರಿ (ನಿದ್ರೆ) ಸಮಯದಲ್ಲಿ ಕರ್ಮಗಳನ್ನು ಜಾರಿ ಮಾಡುತ್ತಿಲ್ಲ. ಸೂರ್ಯನು ಕಾಲಚಕ್ರದಲ್ಲಿ ಕುಟುಂಬ ಯಜಮಾನನ ಸ್ಥಾನವನ್ನು ಹೊಂದಿರುವುದಲ್ಲದೆ, ಕರ್ಮಚಕ್ರದಲ್ಲಿನ ಕರ್ಮಪಾಲನೆಯಲ್ಲಿ ರಾಜನ ಸ್ಥಾನ ಹೊಂದಿದ್ದಾನೆ. ಕರ್ಮ ಪಾಲನೆ ಎರಡು ವಿಭಾಗಗಳಾಗಿ ಇರುವುದರಿಂದ, ಒಂದು ಭಾಗವಾದ ಗ್ರಹಚಾರಕ್ಕೆ ತಾನು ರಾಜನಾಗಿದ್ದೂ, ಎರಡನೆ ಭಾಗವಾದ ದಶಾಚಾರಕ್ಕೆ ಚಂದ್ರನನ್ನು ಮಂತ್ರಿ ಸ್ಥಾನದಲ್ಲಿ ಅಧಿಪತಿಯನ್ನು ಮಾಡಿದ್ದಾನೆ. ಈ ವಿಧವಾಗಿ ಕಾಲಚಕ್ರದಲ್ಲಿ ಯಜಮಾನ ಕುಟುಂಬ ಹಿರಿಯನಾದ ಸೂರ್ಯನು, ಕರ್ಮಚಕ್ರದಲ್ಲಿ ರಾಜನಾಗಿ ಇರುವುದಲ್ಲದೆ, ಚಂದ್ರನನ್ನು ಮಂತ್ರಿಯಾಗಿ ಇಟ್ಟುಕೊಂಡಿದ್ದಾನೆ. ಇದನ್ನನುಸರಿಸಿ ಕಾಲಚಕ್ರದಲ್ಲಿ ಒಬ್ಬರು ದೊಡ್ಡವರಾದರೆ. ಕರ್ಮಚಕ್ರದಲ್ಲಿ ಇಬ್ಬರು ಹಿರಿಯರು ಇದ್ದಾರೆಂದು ಹೇಳಬಹುದು.

## 36 ಗ್ರಹಚಾರ, ದಶಾಚಾರ ಎಂದರೆ ಏನು?

ಈ ಎರಡು ಪದ್ಧತಿಗಳು ಸುಲಭವಾಗಿ ಅರ್ಥವಾಗುವುದಕ್ಕೆ ಒಂದು ಉದಾಹರಣೆಯನ್ನು ತೆಗೆದುಕೊಳ್ಳೋಣ ಒಬ್ಬ ವ್ಯಕ್ತಿ ಬೇಸಿಗೆ ಕಾಲದಲ್ಲಿ ಕಾಲ್ನಡಿಗೆಯಲ್ಲಿ ಪ್ರಯಾಣ ಮಾಡುವಾಗ ಕೆಳಗೆ ಕಾಲುಗಳಿಗೆ ಚಪ್ಪಲಿ ಧರಿಸಿ ನಡೆದಾಗ ಭೂಮಿ ಎಷ್ಟು ಬಿಸಿಯಾಗಿದ್ದರೂ ಆ ಬಿಸಿ ಆತನ ಪಾದಗಳ ಕೆಳಗೆ ತಿಳಿಯುವುದಿಲ್ಲ. ಒಂದುವೇಳೆ ಕಾಲುಗಳಿಗೆ ಚಪ್ಪಲಿ ಇಲ್ಲದಿದ್ದರೆ ಪಾದಗಳಿಗೆ ಬಿಸಿ ತಿಳಿದು ಆ ಬಾಧೆಯನ್ನು ಅನುಭವಿಸಬೇಕಾಗಿ ಬರುತ್ತದೆ. ಚಪ್ಪಲಿ ಇರುವವನಿಗೆ ಕಾಲುಗಳು ಸುಡುವುದಿಲ್ಲ. ಆದರೂ ಮೇಲೆ ಬಿಸಿಲಿನ ಶಾಖ ತಲೆಗು ಮುಖಕ್ಕು ತಗಲುತ್ತಿರುವುದರಿಂದ ಸ್ವಲ್ಪ ಬಾಧೆಪಡಬೇಕಾಗಿ ಬರುತ್ತದೆ. ಕಾಲುಗಳಿಗೆ ಚಪ್ಪಲಿ, ತಲೆಗೆ ಛತ್ರಿ ಇರುವವನು ಕೆಳಗಿನ ಬಾಧೆ, ಮೇಲಿನ ಬಾಧೆ ಎರಡು ತಿಳಿಯದಂತೆ ಪ್ರಯಾಣವನ್ನು ಸಾಗಿಸುತ್ತಾನೆ. ಒಂದುವೇಳೆ

ತಲೆಗೆ ಛತ್ರಿ, ಕಾಲುಗಳಿಗೆ ಚಪ್ಪಲಿ ಎರಡೂ ಇಲ್ಲದವನು ಮೇಲೆ ಕೆಳಗೆ ಎರಡು ಬಾಧೆಗಳನ್ನು ಅನುಭವಿಸಬೇಕಾಗುತ್ತದೆ. ಒಬ್ಬ ಪ್ರಯಾಣಿಕನಿಗೆ ಕಾಲಿಗು ತಲೆಗೂ ಬಿಸಿಲಿನ ಜಳ ಬಾಧೆ ಎರಡು ವಿಧಗಳಾಗಿ ಇದ್ದಂತೆ, ಒಬ್ಬ ಜೀವಿಗೆ ಕರ್ಮ ಎರಡು ವಿಧಗಳಲ್ಲಿ ಅನುಭವಕ್ಕೆ ಬರುತ್ತಿದೆ. ಬಿಸಿಲಿನ ಬಾಧೆ ಕೆಳಗೆ ಕಾಲುಗಳಿಗೆ, ಮೇಲೆ ತಲೆಗೆ ತಗಲಿದಂತೆ, ಕರ್ಮಬಾಧೆ ಒಂದು ಕಡೆ ಗ್ರಹಚಾರದ ಪ್ರಕಾರ ಮತ್ತೊಂದು ಕಡೆ ದಶಾಚಾರದ ಪ್ರಕಾರ ಉಂಟಾಗುತ್ತಿದೆ. ಚಪ್ಪಲಿ ಛತ್ರಿ ಎರಡೂ ಇರುವವನು ಸುಖವಾಗಿ ಪ್ರಯಾಣ ಸಾಗಿಸಿದಂತೆ, ಗ್ರಹಚಾರ ದಶಾಚಾರ ಎರಡೂ ಚೆನ್ನಾಗಿರುವವನು ಸುಖವಾಗಿ ಜೀವನ ಸಾಗಿಸುತ್ತಾನೆ. ಚಪ್ಪಲಿ, ಛತ್ರಿ ಎರಡೂ ಇಲ್ಲದವನು ಕಷ್ಟವಾಗಿ ಪ್ರಯಾಣವನ್ನು ಸಾಗಿಸಿದಂತೆ, ಗ್ರಹಚಾರ, ದಶಾಚಾರ ಎರಡೂ ಚೆನ್ನಾಗಿಲ್ಲದವನು ಜೀವನವನ್ನು ಕಷ್ಟವಾಗಿ ಸಾಗಿಸುತ್ತಾನೆ. ಚಪ್ಪಲಿ ಇದ್ದು ಛತ್ರಿ ಇಲ್ಲದವನಾಗಲಿ, ಛತ್ರಿ ಇದ್ದು ಚಪ್ಪಲಿ ಇಲ್ಲದವನಾಗಲಿ ಕೆಳಗೊ ಮೇಲೆಯೋ ಒಂದುಕಡೆ ಬಾಧೆಯನ್ನು ಅನುಭವಿಸಿದಂತಿರುತ್ತದೆ. ಗ್ರಹಚಾರ ಚೆನ್ನಾಗಿದ್ದು ದಶಾಚಾರ ಚೆನ್ನಾಗಿಲ್ಲದವನಾಗಲಿ ಕರ್ಮವನ್ನು ಪೂರ್ತಿ ಅನುಭವಿಸುತ್ತಾನೆ. ಗ್ರಹಚಾರ ಚೆನ್ನಾಗಿಲ್ಲದೆ ದಶಾಚಾರ ಚೆನ್ನಾಗಿರುವವನು ಸ್ವಲ್ಪ ಕರ್ಮವನ್ನು ಅನುಭವಿಸುತ್ತಾ, ಸ್ವಲ್ಪ ಕರ್ಮ ಅನುಭವಿಸದೆ ತಪ್ಪಿಸಿಕೊಂಡು ಉಳಿದ ಸ್ವಲ್ಪ ಕರ್ಮ ಅನುಭವದಿಂದಲೇ ಜೀವನವನ್ನು ಸಾಗಿಸುತ್ತಾನೆ.

ಮನುಷ್ಯ ಹುಟ್ಟಿದ ಸಮಯವನ್ನು ಅನುಸರಿಸಿ ಜಾತಕ ನಿರ್ಣಯಿಸಲ್ಪಡುತ್ತಿದೆ. ಹುಟ್ಟಿದ ಸಮಯದಲ್ಲಿ ಕರ್ಮಚಕ್ರದ ಮೇಲೆ ಸೂರ್ಯನ ಕಿರಣಗಳು ಎಲ್ಲಿ ಇರುತ್ತವೊ, ಅದನ್ನನುಸರಿಸಿ ಗ್ರಹಚಾರ ನಿರ್ಣಯಿಸಲ್ಪಡುತ್ತದೆ. ಹಾಗೇ ಚಂದ್ರನು ಕಾಲಚಕ್ರದಲ್ಲಿ ಯಾವ ನಕ್ಷತ್ರದಲ್ಲಿ ಇದ್ದಾನೊ, ಅದನ್ನನುಸರಿಸಿ ದಶಾಚಾರ ನಿರ್ಣಯಿಸಲ್ಪಡುತ್ತದೆ. ಕಾಲಚಕ್ರದಲ್ಲಿನ ರಾಜನಾದ ಸೂರ್ಯನೊಂದಿಗೂ, ಮಂತ್ರಿಯಾದ ಚಂದ್ರನೊಂದಿಗೂ ನಿರ್ಣಯಿಸಲ್ಪಡುವ ಗ್ರಹಚಾರ, ದಶಾಚಾರಗಳಿಂದ ಮನುಷ್ಯನ ಜೀವನ ಹೇಗೆ ಸಾಗುತ್ತದೊ ತಿಳಿಯಬಲ್ಲದು. ಮನುಷ್ಯನ ಜಾತಕದಲ್ಲಿ ಗ್ರಹಚಾರ ಕಾಲಿಗೆ ಚಪ್ಪಲಿಯಂತಿರುವಾಗ, ದಶಾಚಾರ

ತಲೆಗೆ ಛತ್ರಿಯಂತಿದೆಯೆಂದು ತಿಳಿಯಬೇಕು. ಮನುಷ್ಯನ ಜಾತಕ ಅಥವಾ ಜಾಫತಕ ಎನ್ನುವುದರಲ್ಲಿ ಪ್ರಾರಬ್ಧಕರ್ಮವನ್ನನುಸರಿಸಿರುವ ಗ್ರಹಚಾರ, ದಶಾಚಾರವನ್ನು ಹೇಗೆ ತಿಳಿಯಬಹುದೊ ಉದಾಹರಣೆಯಾಗಿ ಒಬ್ಬ ಮನುಷ್ಯನ ಜನ್ಮವನ್ನು ತೆಗೆದುಕೊಂಡು ನೋಡೋಣ.

ರಂಗಯ್ಯ ಎನ್ನುವಾತನು 2009ನೇ ವರ್ಷದಲ್ಲಿ ಫೆಬ್ರವರಿ ತಿಂಗಳಲ್ಲಿ 17ನೇ ತಾರೀಖು ಮಂಗಳವಾರ ಬೆಳಗ್ಗೆ 9 ಗಂಟೆಗಳಿಗೆ ಜನ್ಮಿಸಿದ್ದಾನೆ. ಆ ದಿನ ಪಂಚಾಂಗದ ಪ್ರಕಾರ ಮಂಗಳವಾರ, ಅಷ್ಟಮಿ ತಿಥಿ ಸಾ॥ ಗಂ॥ 4–13 ನಿಮಿಷಗಳು ಗಳಿಗೆಗಳಲ್ಲಿ 24–16 ವರೆಗು ಇದೆ. ನಕ್ಷತ್ರ ಅನೂರಾಧ ಗಂ॥ 3–45 ನಿಮಿಷಗಳು ಗಳಿಗೆಗಳಲ್ಲಿ 53–14 ವರೆಗು ಇದೆ. ಲಗ್ನ ವಿಷಯ ಕುಂಭದಲ್ಲಿ ಭುಕ್ತಿ ಗಂ॥ 0–18 ನಿಮಿಷಗಳು ಇದೆ. ರಂಗಯ್ಯ ಅಷ್ಟಮಿ ದಿನ ಅನೂರಾಧ ನಕ್ಷತ್ರದಲ್ಲಿ ಮಂಗಳವಾರ ಹಗಲು ಬೆಳಗ್ಗೆ 9 ಗಂಟೆಗಳಿಗೆ ಜನ್ಮಿಸಿದ್ದಾನೆ. ಆತನು ಜನ್ಮಿಸಿದ ಸಮಯದಲ್ಲಿಯೇ ಸಂಚಿತದಿಂದ ಜೀವನಕ್ಕೆ ಬೇಕಾದ ಪ್ರಾರಬ್ಧ ಏರ್ಪಟ್ಟಿದೆ. ಜನ್ಮಿಸಿದ ಸಮಯದಲ್ಲಿ ಏರ್ಪಟ್ಟ ಪ್ರಾರಬ್ಧವನ್ನು ಸ್ವಲ್ಪಮಟ್ಟಿಗೆ ತಿಳಿಯುವುದನ್ನು ಅಥವಾ ಗುರುತಿಸಿಕೊಳ್ಳುವುದನ್ನು ಜಾತಕ (ಜಾಫತಕ) ವನ್ನು ತಿಳಿಯುವುದು ಎನ್ನುತ್ತಿದ್ದೇವೆ. ಜಾತಕ ವಿಷಯ ತಿಳಿಯುವುದಕ್ಕೆ ರಂಗಯ್ಯ ಎನ್ನುವ ವ್ಯಕ್ತಿ ಹುಟ್ಟಿದ ಸಮಯದಲ್ಲಿ, ಸೂರ್ಯನು ಕಾಲಚಕ್ರದ ಮೇಲಿಂದ ಕರ್ಮಚಕ್ರದಲ್ಲಿನ ಯಾವ ರಾಶಿ ಮೇಲಕ್ಕೆ, ತನ್ನ ಕಿರಣಗಳನ್ನು ಪ್ರಸರಿಸುವಂತೆ ಮಾಡುತ್ತಿದ್ದಾನೊ ಮೊದಲು ತಿಳಿಯಬೇಕು. ಸೂರ್ಯನು ಯಾವರಾಶಿ ಮೇಲೆ ಜನನ ಸಮಯದಲ್ಲಿ ತನ್ನ ಕಿರಣಗಳನ್ನು ಪ್ರಸರಿಸುವಂತೆ ಮಾಡುತ್ತಿದ್ದಾನೊ, ಆ ರಾಶಿಗೆ ಸಮಾನ ವಾಗಿರುವ ಕಾಲಚಕ್ರ ಲಗ್ನವನ್ನು ಗುರುತಿಸಿಕೊಳ್ಳಬೇಕು. ಹಾಗೆ ಗುರುತಿಸಿಕೊಂಡ ಲಗ್ನವನ್ನೇ ಮೊದಲ ಜನ್ಮಲಗ್ನವಾಗಿ ಲೆಕ್ಕಿಸಿಕೊಳ್ಳಬಹುದು. ಈಗ ಫೆಬ್ರವರಿ 17ನೇ ತಾರೀಖು ಮಂಗಳವಾರ ಹುಟ್ಟಿದ ರಂಗಯ್ಯ ಎನ್ನುವ ವ್ಯಕ್ತಿಯವೊಂದು ಜಾತಕದಲ್ಲಿ ಮೊದಲ ಲಗ್ನವನ್ನು ಹೇಗೆ ಗುರುತಿಸಬೇಕೊ ಕೆಳಗೆ ಪೂರ್ತಿ ವಿವರವಾಗಿ ತಿಳಿದುಕೊಳ್ಳೋಣ.

2009ನೇ ವರ್ಷ ಫೆಬ್ರವರಿ 17ನೇ ತಾರೀಖು ಪಂಚಾಂಗದ ಪ್ರಕಾರ ಸೂರ್ಯೋದಯ 6.31 ನಿಮಿಷಗಳಿಗೆ ನಡೆದಿದೆ. ರಂಗಯ್ಯ ಹುಟ್ಟಿರುವುದು ಬೆಳಿಗ್ಗೆ 9 ಗಂಟೆಗಳಿಗೆ. ಸೂರ್ಯೋದಯದ ನಂತರ ಎಷ್ಟು ಕಾಲಕ್ಕೆ ಹುಟ್ಟಿದ್ದಾನೆಂದು ನೋಡಿದಾಗ

ಗಂ॥ 9–00 ಜನ್ಮಿಸಿರುವುದು
ಗಂ॥ 6–31 ಸೂರ್ಯೋದಯ
2–29 ಉದಯದ ನಂತರ ಕಳೆದ ಕಾಲ.
ಗಂ॥ 1–39 ನಿಮಿಷ ಕುಂಭ ಲಗ್ನ ಪ್ರಮಾಣ.
ಗಂ॥ 0–18 ಕುಂಭಲಗ್ನ ಭುಕ್ತಿ
1–21 ಉದಯದ ನಂತರ ಉಳಿದ ಕುಂಭ ಲಗ್ನ ಕಾಲ.
ಗಂ॥ 2–29 ಕಳೆದ ನಂತರ ಜನ್ಮಿಸಿರುವುದು.
ಗಂ॥ 1–21 ಉಳಿದ ಕುಂಭ ಲಗ್ನ ಕಾಲ
1–08 ಮೀನ ಲಗ್ನದಲ್ಲಿ ಕಳೆದ ಕಾಲ.
ಗಂ॥ 1–37 ಮೀನ ಲಗ್ನ ಪ್ರಮಾಣ
ಗಂ॥ 1–08 ಮೀನ ಲಗ್ನ ಕಳೆದಾಗ
0–29 ಉಳಿದ ಮೀನ ಲಗ್ನ.

9 ಗಂಟೆಗಳ ಸಮಯದಲ್ಲಿ ಮೀನ ಲಗ್ನವಿದೆ.

2–29 ನಿಮಿಷಗಳು ಉದಯದ ನಂತರ ಕಳೆದಿದೆ. 17ನೇ ತಾರೀಖು ಸೂರ್ಯನು ಉದಯಿಸಿದಾಗ ಧನಿಷ್ಟ ನಕ್ಷತ್ರದಲ್ಲಿ ನಾಲ್ಕನೇ ಪಾದದಲ್ಲಿ ಇದ್ದಾನೆ. ಆದ್ದರಿಂದ ಆ ದಿನ ಕುಂಭ ಲಗ್ನದೊಂದಿಗೆ ಪ್ರಾರಂಭವಾಗಿದೆ. ಒಂದು ಲಗ್ನ ಪ್ರಯಾಣ ಕರ್ಮಚಕ್ರದ ಮೇಲೆ ದಾಟುವುದಕ್ಕೆ ಸುಮಾರು ಎರಡು ಗಂಟೆಗಳು ಹಿಡಿಸುತ್ತದೆ. ಆದರೇ ಪಂಚಾಂಗವನ್ನನುಸರಿಸಿ ಕುಂಭಲಗ್ನ ಪ್ರಮಾಣ 1.39

ನಿಮಿಷಗಳಾಗಿದ್ದು ಆ ದಿನ ಕುಂಭ ಲಗ್ನ ಭುಕ್ತಿ 0–18 ನಿಮಿಷಗಳು ಆದಾಗ ಉದಯದ ನಂತರ ಕುಂಭಲಗ್ನ 1–21 ನಿಮಿಷಗಳು ಉಳಿದಿವೆ. ಉದಯದಿಂದ ಕಳೆದ ಕಾಲ 2–29 ನಿಮಿಷಗಳಲ್ಲಿ ಉಳಿದ ಕುಂಭ ಲಗ್ನ ಹೋದಾಗ 1–08 ಉಳಿದಿದೆ. ಕುಂಭದ ನಂತರ ಮೀನ ಲಗ್ನ ಪ್ರಮಾಣ 1–37 ನಿಮಿಷಗಳು. ಮೀನಲಗ್ನ ಪ್ರಮಾಣದಲ್ಲಿ 1–08 ನಿಮಿಷಗಳನ್ನು ತೆಗೆದುಹಾಕಿದಾಗ 0–29 ನಿಮಿಷಗಳು ಮೀನ ಲಗ್ನ ಉಳಿದಿದೆ. ಆದ್ದರಿಂದ ಆತನ ಜನನ ಮೀನ ಲಗ್ನದಲ್ಲಿ ನಡೆದಿದೆಯೆಂದು ಹೇಳಬಹುದು.

ರಂಗಯ್ಯ ಎನ್ನುವ ವ್ಯಕ್ತಿ ಜನ್ಮಿಸಿದ ಕಾಲವನ್ನು ಆಧಾರ ಮಾಡಿಕೊಂಡು, ಅಂದಿನ ಪಂಚಾಂಗದ ಮೂಲಕ ಲೆಕ್ಕಿಸಿ, ಆತನ ಜನ್ಮ ಲಗ್ನವನ್ನು ತಿಳಿದು ಕೊಂಡಿದ್ದೇವೆ. ಇಲ್ಲಿಯವರೆಗು ನಾವು ಬರೆಯುತ್ತಾ ಬಂದಿರುವ ಜ್ಯೋತಿಷ್ಯ ಗ್ರಂಥ ಚೆನ್ನಾಗಿ ಅರ್ಥವಾದರೂ ಇಲ್ಲಿ ಜಾತಕಲಗ್ನವನ್ನು ಲೆಕ್ಕಿಸಿ ತಿಳಿದುಕೊಂಡ ಕಡೆ ಸ್ವಲ್ಪಮಟ್ಟಿಗೆ ಅರ್ಥವಾಗದೆ ಇರಬಹುದು. ಇಲ್ಲಿಯವರೆಗು ಪಂಚಾಂಗ ಪ್ರಸ್ತಾಪ ಇಲ್ಲದೆ ಗ್ರಂಥ ಸಾಗಿದೆ. ಆದ್ದರಿಂದ ವರಸೆ ಕ್ರಮವಾಗಿ ಅರ್ಥವಾಗಿರುತ್ತದೆ. ಆದರೆ ಇಲ್ಲಿ ಪಂಚಾಂಗ ಪ್ರಸ್ತಾವನೆ ಬಂದಿರುವುದರಿಂದ, ಇಲ್ಲಿಯವರೆಗು ಪಂಚಾಂಗ ಒಂದರ ಪರಿಚಯ ಇಲ್ಲದವರಿಗೆ ಸ್ವಲ್ಪ ತೊಂದರೆಯಾಗಿದ್ದು, ಬರೆದ ಸಮಾಚಾರ ಸ್ವಲ್ಪ ಅರ್ಥವಾಗದೆ ಹೋಗಿರಬಹುದು. ಆದರೆ ಇಲ್ಲಿ ನಾವು ಗಮನಿಸಬೇಕಾದ ವಿಷಯವೇನೆಂದರೇ ಜ್ಯೋತಿಷ್ಯ ಬೇರೆ, ಪಂಚಾಂಗ ಬೇರೆಯೆಂದು ತಿಳಿಯಬೇಕು. ಜ್ಯೋತಿಷ್ಯವನ್ನು ತಿಳಿಯುವುದಕ್ಕಾಗಿ ಪಂಚಾಂಗ ದಿಂದ ಸ್ವಲ್ಪ ನೋಡಿಕೊಳ್ಳಬೇಕಾಗಿರುತ್ತದೆ. ಅಷ್ಟೇ ಹೊರತು ಪಂಚಾಂಗವೆಲ್ಲವನ್ನು ತಿಳಿಯಬೇಕಾದ ಅವಶ್ಯಕತೆಯಿಲ್ಲ. ವಾಸ್ತವವಾಗಿ ಹೇಳಿದರೆ ಪಂಚಾಂಗವನ್ನು ಕುರಿತು ನನಗೂ ಕೂಡಾ ಪೂರ್ತಿ ತಿಳಿದಿಲ್ಲ. ಜ್ಯೋತಿಷ್ಯನು ಪಂಚಾಂಗದಲ್ಲಿನ ಅಗತ್ಯವಾದ ಕೆಲವು ಅಂಗಗಳನ್ನು ಮಾತ್ರ ಬಳಸಿಕೊಳ್ಳುತ್ತಾನೆ, ಅಷ್ಟೇ ಹೊರತು ಎಲ್ಲಾ ಅಗತ್ಯವಿರುವುದಿಲ್ಲ. ಪಂಚಾಂಗಕ್ಕೆ ಅರ್ಥವನ್ನು ಹೇಳಿಕೊಂಡರೆ ಐದು ಅಂಗಗಳು ಇರುವುದು ಪಂಚಾಂಗ ಎಂದು ಹೇಳಬಹುದು. ಅಂಗ ಎಂದರೆ

ಭಾಗವೆಂದು ಇಲ್ಲಿ ಅರ್ಥ ಮಾಡಿಕೊಳ್ಳಬೇಕು. ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳನ್ನು ಐದು ಸಮಾಚಾರಗಳನ್ನು ತಿಳಿಸುವುದನ್ನು ಪಂಚಾಂಗ ಎಂದು ಕರೆಯುತ್ತೇವೆ. ಈ ಐದು ವಿಷಯ ಭಾಗಗಳಲ್ಲಿ ನಮ್ಮ ಜ್ಯೋತಿಷ್ಯಕ್ಕೆ ಮುಖ್ಯವಾಗಿ ಉಪಯೋಗಪಡುವುದು ನಕ್ಷತ್ರ ಮಾತ್ರವೇ. ತಿಥಿ, ವಾರಗಳನ್ನು, ಯೋಗ ಕರಣಗಳನ್ನು ಗುರುತಿಗೆ ಬಳಸಿಕೊಂಡರೂ ಮುಖ್ಯವಾಗಿ ಅಗತ್ಯವಾಗಿರುವುದು ನಕ್ಷತ್ರ ಮಾತ್ರವೇಯೆಂದು ತಿಳಿಯಬೇಕು. ಆದ್ದರಿಂದ ಪಂಚಾಂಗದಲ್ಲಿ ನಕ್ಷತ್ರ ಎನ್ನುವ ಅಂಗ ಮುಖ್ಯವಾಗಿ ಉಪಯೋಗಪಡುತ್ತಿದೆ.

ಜ್ಯೋತಿಷ್ಯಕ್ಕೆ ಮುಖ್ಯವಾದ ನಕ್ಷತ್ರವನ್ನು ಕುರಿತು ಸ್ವಲ್ಪಮಟ್ಟಿಗೆ ತಿಳಿದುಕೊಂಡರೆ ಮೊದಲು ತಿಳಿದುಕೊಳ್ಳುವ ವಿಷಯಗಳು ಸುಲಭವಾಗಿ ಅರ್ಥವಾಗುತ್ತವೆ. ನಕ್ಷತ್ರ ಎಂದರೇ ನಾಶವಿಲ್ಲದಿರುವುದೆನ್ನುವ ಒಂದು ಅರ್ಥವಿದೆ. ಹಾಗೇ ಕಾಣಿಸದ ಪ್ರದೇಶವೆಂದು ಕೂಡಾ ಅರ್ಥವಿದೆ. ಇಲ್ಲಿ ಸಂದರ್ಭ ವನ್ನನುಸರಿಸಿ ಎರಡನೇ ಅರ್ಥವನ್ನು ತೆಗೆದುಕೊಳ್ಳೋಣ. ಕಾಲಚಕ್ರದಲ್ಲಿರುವ ಕಾಣಿಸದ ಸ್ಥಳವನ್ನು ನಕ್ಷತ್ರಗಳೆಂದು ಕರೆಯುತ್ತಿದ್ದೇವೆ. ಕಾಲಚಕ್ರವೊಂದರ ಹನ್ನೆರಡು ಭಾಗಗಳಲ್ಲಿ ಒಟ್ಟು 27 ನಕ್ಷತ್ರಗಳು ಇವೆ. ಕಾಲಚಕ್ರದಲ್ಲಿನ ಹನ್ನೆರಡು ಭಾಗಗಳಿಗು ಮೇಷದಿಂದ ಮೀನದವರೆಗು ಹನ್ನೆರಡು ಹೆಸರುಗಳಿವೆ. ಹಾಗೇ ನಕ್ಷತ್ರಗಳಿಗು ಕೂಡಾ ಹೆಸರುಗಳಿವೆ. 27 ನಕ್ಷತ್ರಗಳಿಗೆ ವರಸೆ ಕ್ರಮದಲ್ಲಿರುವ ಹೆಸರುಗಳನ್ನು ಹೇಳಿಕೊಳ್ಳೋಣ.

| | | |
|---|---|---|
| 1) ಅಶ್ವನಿ | 2) ಭರಣಿ | 3) ಕೃತ್ತಿಕ |
| 4) ರೋಹಿಣಿ | 5) ಮೃಗಶಿರ | 6) ಆರಿದ್ರ |
| 7) ಪುನರ್ವಸು | 8) ಪುಷ್ಯಮಿ | 9) ಆಶ್ಲೇಷ |
| 10) ಮಖ | 11) ಪುಬ್ಬ | 12) ಉತ್ತರ |
| 13) ಹಸ್ತ | 14) ಚಿತ್ತ | 15) ಸ್ವಾತಿ |

| | | |
|---|---|---|
| 16) ವಿಶಾಖ | 17) ಅನೂರಾಧ | 18) ಜೇಷ್ಟ |
| 19) ಮೂಲ | 20) ಪೂರ್ವಾಷಾಢ | 21) ಉತ್ತರಾಷಾಢ |
| 22) ಶ್ರವಣ | 23) ಧನಿಷ್ಟ | 24) ಶತಭಿಷ |
| 25) ಪೂರ್ವಾಭಾದ್ರ | 26) ಉತ್ತರಾಭಾದ್ರ | 27) ರೇವತಿ |

ಈ ವಿಧವಾಗಿ ಒಟ್ಟು 27 ನಕ್ಷತ್ರಗಳ ಹೆಸರುಗಳಿವೆ. 27 ನಕ್ಷತ್ರಗಳು ಕಾಲಚಕ್ರದಲ್ಲಿನ ಹನ್ನೆರಡು ಭಾಗಗಳಲ್ಲಿ ಮಿಳಿತವಾಗುವುದಕ್ಕೆ ಅನುಕೂಲವಾಗಿ ಒಂದೊಂದು ನಕ್ಷತ್ರ ನಾಲ್ಕು ಭಾಗಗಳಾಗಿ ವಿಭಜಿಸಲ್ಪಟ್ಟಿದೆ. ಒಂದು ನಕ್ಷತ್ರ ನಾಲ್ಕು ಭಾಗಗಳಾಗಿದ್ದೂ ಕಾಲಚಕ್ರದಲ್ಲಿನ ಎಲ್ಲಾ ಲಗ್ನಗಳಲ್ಲಿ ಸಮಾನವಾಗಿ ಮಿಳಿತವಾಗಿವೆ. ಕಾಲಚಕ್ರ ಲಗ್ನಗಳಿಗೆ ಹೆಸರುಗಳಿವೆ. ಹಾಗೇ ನಕ್ಷತ್ರಗಳಿಗೆ ಹೆಸರುಗಳಿವೆ ಆದರೆ ನಕ್ಷತ್ರ ಭಾಗಗಳಿಗೆ ಬಿಡಿಯಾಗಿ ಹೆಸರುಗಳಿಲ್ಲ. ಹೆಸರುಗಳಿಗೆ ಬದಲು ಭಾಗಗಳನ್ನು ಬಿಡಿ ಅಕ್ಷರಗಳಿಂದ ಗುರುತಿಸಿದ್ದಾರೆ. ನಕ್ಷತ್ರಗಳಲ್ಲಿ ಮೊದಲ ನಕ್ಷತ್ರ ಅಶ್ವನಿ ನಾಲ್ಕು ಭಾಗಗಳಾಗಿದೆ. ಆ ನಾಲ್ಕು ಭಾಗಗಳನ್ನು ಅಶ್ವಿನಿ ನಕ್ಷತ್ರ ಪಾದಗಳೆಂದು ಕರೆಯುತ್ತಿದ್ದೇವೆ. ಈ ವಿಧವಾಗಿ ಎಲ್ಲಾ ನಕ್ಷತ್ರಗಳಿಗು ನಾಲ್ಕು ಪಾದಗಳು ಇವೆ. ಒಟ್ಟು 27 ನಕ್ಷತ್ರಗಳಿಗೆ 108 ಪಾದಗಳಿವೆ. 108 ನಕ್ಷತ್ರ ಪಾದಗಳು ಕಾಲಚಕ್ರದಲ್ಲಿನ ಹನ್ನೆರಡು ಲಗ್ನಗಳಲ್ಲಿ ಹೇಗೆ ಮಿಳಿತವಾಗಿಯೋ ಈಗ ಗಮನಿಸೋಣ. ಒಂದು ನಕ್ಷತ್ರದಲ್ಲಿನ ನಾಲ್ಕು ಪಾದಗಳಲ್ಲಿ ಒಂದೊಂದು ಪಾದಕ್ಕೆ ಒಂದೊಂದು ಅಕ್ಷರವನ್ನು ಗುರುತಾಗಿ ಇಡುವುದು ನಡೆದಿದೆ. ಅವುಗಳನ್ನು ಈಗ ನೋಡೋಣ.

| | | |
|---|---|---|
| ಅಶ್ವಿನಿ | ನಕ್ಷತ್ರ 4 ಪಾದಗಳ ಗುರುತುಗಳು | ಚೂ, ಚೇ, ಚೋ, ಲಾ |
| ಭರಣಿ | ನಕ್ಷತ್ರ 4 ಪಾದಗಳ ಗುರುತುಗಳು | ಲೀ, ಲೂ, ಲೇ, ಲೋ |
| ಕೃತ್ತಿಕ | ನಕ್ಷತ್ರ 4 ಪಾದಗಳ ಗುರುತುಗಳು | ಆ, ಈ, ಊ, ಏ |

| | | |
|---|---|---|
| ರೋಹಿಣಿ | ನಕ್ಷತ್ರ 4 ಪಾದಗಳ ಗುರುತುಗಳು | ಓ, ವಾ, ವೀ, ವು |
| ಮೃಗಶಿರ | ನಕ್ಷತ್ರ 4 ಪಾದಗಳ ಗುರುತುಗಳು | ವೇ, ವೋ, ಕಾ, ಕೀ |
| ಆರಿದ್ರ | ನಕ್ಷತ್ರ 4 ಪಾದಗಳ ಗುರುತುಗಳು | ಕೂ, ಖಂ, ಜಾ, ಜ್ಞಾ |
| ಪುನರ್ವಸು | ನಕ್ಷತ್ರ 4 ಪಾದಗಳ ಗುರುತುಗಳು | ಕೇ, ಕೋ, ಹ, ಹಿ |
| ಪುಷ್ಯಮಿ | ನಕ್ಷತ್ರ 4 ಪಾದಗಳ ಗುರುತುಗಳು | ಹೂ, ಹೇ, ಹೋ, ಡ |
| ಆಶ್ಲೇಷ | ನಕ್ಷತ್ರ 4 ಪಾದಗಳ ಗುರುತುಗಳು | ಡಿ, ಡೂ, ಡೆ, ಡೊ |
| ಮಖ | ನಕ್ಷತ್ರ 4 ಪಾದಗಳ ಗುರುತುಗಳು | ಮಾ, ಮಿ, ಮೂ, ಮೇ |
| ಪುಬ್ಬ | ನಕ್ಷತ್ರ 4 ಪಾದಗಳ ಗುರುತುಗಳು | ಮೊ, ಟಾ, ಟಿ, ಟೂ |
| ಉತ್ತರ | ನಕ್ಷತ್ರ 4 ಪಾದಗಳ ಗುರುತುಗಳು | ಟೇ, ಟೋ, ಪಾ, ಪಿ |
| ಹಸ್ತ | ನಕ್ಷತ್ರ 4 ಪಾದಗಳ ಗುರುತುಗಳು | ಪೂ, ಷಾ, ಣಾ, ಠಾ |
| ಚಿತ್ತ | ನಕ್ಷತ್ರ 4 ಪಾದಗಳ ಗುರುತುಗಳು | ಪೇ, ಪೋ, ರಾ, ರೀ |
| ಸ್ವಾತಿ | ನಕ್ಷತ್ರ 4 ಪಾದಗಳ ಗುರುತುಗಳು | ರೂ, ರೇ, ರೋ, ತಾ |
| ವಿಶಾಖ | ನಕ್ಷತ್ರ 4 ಪಾದಗಳ ಗುರುತುಗಳು | ತೀ, ತೂ, ತೇ, ತೋ |
| ಅನುರಾಧ | ನಕ್ಷತ್ರ 4 ಪಾದಗಳ ಗುರುತುಗಳು | ನಾ, ನೀ, ನೂ, ನೇ |
| ಜೇಷ್ಟ | ನಕ್ಷತ್ರ 4 ಪಾದಗಳ ಗುರುತುಗಳು | ನೋ, ಯಾ, ಯಿ, ಯೂ |
| ಮೂಲ | ನಕ್ಷತ್ರ 4 ಪಾದಗಳ ಗುರುತುಗಳು | ಯೇ, ಯೊ, ಬಾ, ಬೀ |
| ಪೂರ್ವಾಷಾಡ | ನಕ್ಷತ್ರ 4 ಪಾದಗಳ ಗುರುತುಗಳು | ಬೂ, ಧಾ, ಬಾ, ಡಾ |

| | | | | | | |
|---|---|---|---|---|---|---|
| ಉತ್ತರಾಷಾಡ | ನಕ್ಷತ್ರ | 4 | ಪಾದಗಳ | ಗುರುತುಗಳು | | ಬೇ, ಬೋ, ಜಾ, ಜೀ |
| ಶ್ರವಣ | ನಕ್ಷತ್ರ | 4 | ಪಾದಗಳ | ಗುರುತುಗಳು | | ಜೂ, ಜೇ, ಜೋ, ಖಾ |
| ಧನಿಷ್ಠ | ನಕ್ಷತ್ರ | 4 | ಪಾದಗಳ | ಗುರುತುಗಳು | | ಗಾ, ಗೀ, ಗೂ, ಗೇ |
| ಶತಭಿಷ | ನಕ್ಷತ್ರ | 4 | ಪಾದಗಳ | ಗುರುತುಗಳು | | ಗೋ, ಸಾ, ಸಿ, ಸೂ |
| ಪೂರ್ವಾಭಾದ್ರ | ನಕ್ಷತ್ರ | 4 | ಪಾದಗಳ | ಗುರುತುಗಳು | | ಸೇ, ಸೋ, ದಾ, ದೀ |
| ಉತ್ತರಾಭಾದ್ರ | ನಕ್ಷತ್ರ | 4 | ಪಾದಗಳ | ಗುರುತುಗಳು | | ದು, ಶಾ, ಝಾ, ಥಾ |
| ರೇವತಿ | ನಕ್ಷತ್ರ | 4 | ಪಾದಗಳ | ಗುರುತುಗಳು | | ದೇ, ದೋ, ಚಾ, ಚೀ |

ಈ ವಿಧವಾಗಿ 27 ನಕ್ಷತ್ರಗಳೊಂದರ 108 ಪಾದಗಳಿಗೆ (ಭಾಗಗಳಿಗೆ) 108 ಅಕ್ಷರಗಳನ್ನು ಗುರುತುಗಳಾಗಿ ಇಡುವುದು ನಡೆದಿದೆ. ಕೆಲವರು ಜ್ಯೋತಿಷ್ಯರು ಒಂದು ನಕ್ಷತ್ರದಲ್ಲಿ ಹುಟ್ಟಿದವನಿಗೆ ಆ ನಕ್ಷತ್ರದಲ್ಲಿನ ಅಕ್ಷರಗಳನ್ನು ಮುಂದಿಟ್ಟು ಹೆಸರನ್ನು ಇಡುವುದು ನಡೆಯುತ್ತಿದೆ. ಉದಾಹರಣೆಗೆ ಚಿತ್ತ ನಕ್ಷತ್ರ ಮೂರನೆ ಪಾದ ಸಮಯದಲ್ಲಿ ಹುಟ್ಟಿದವನಿಗೆ ಆ ನಕ್ಷತ್ರವೊಂದರ ಮೂರನೆ ಅಕ್ಷರವಾದ "ರ" ನಿಂದ ಮೊದಲಾಗುವ ಹೆಸರಾದ ರಂಗಯ್ಯ, ರಮೇಷ್, ರಾಮು ಎಂದು ಹೆಸರು ಇಡುತ್ತಿದ್ದಾರೆ.

27 ನಕ್ಷತ್ರಗಳು 108 ಪಾದಗಳಾಗಿ ಬೇರ್ಪಟ್ಟು 108 ಅಕ್ಷರಗಳ ಗುರುತುಗಳಾಗಿವೆ. ಹನ್ನೆರಡು ಲಗ್ನಗಳಲ್ಲಿ 108 ಪಾದಗಳು ಹೇಗೆ ಒಳಗೊಂಡಿವೆಯೋ ಈಗ ಗಮನಿಸೋಣ.

| | | | |
|---|---|---|---|
| 1)ಮೇಷ ಲಗ್ನ | 4 | – | ಅಶ್ವನಿ |
| | 4 | – | ಭರಣಿ |
| | 1 | – | ಕೃತ್ತಿಕ |
| ಒಟ್ಟು | 9 | | ಭಾಗಗಳು (ಪಾದಗಳು) |
| 2) ವೃಷಭ ಲಗ್ನ | 3 | – | ಕೃತ್ತಿಕ |
| | 4 | – | ರೋಹಿಣಿ |
| | 2 | – | ಮೃಗಶಿರ |
| ಒಟ್ಟು | 9 | | ಭಾಗಗಳು (ಪಾದಗಳು) |
| 3) ಮಿಥುನ ಲಗ್ನ | 2 | – | ಮೃಗಶಿರ |
| | 4 | – | ಆರಿದ್ರ |
| | 3 | – | ಪುನರ್ವಸು |
| ಒಟ್ಟು | 9 | | ಭಾಗಗಳು (ಪಾದಗಳು) |
| 4) ಕರ್ಕಾಟಕ ಲಗ್ನ | 1 | – | ಪುನರ್ವಸು |
| | 4 | – | ಪುಷ್ಯಮಿ |
| | 4 | – | ಆಶ್ಲೇಷ |
| ಒಟ್ಟು | 9 | | ಭಾಗಗಳು (ಪಾದಗಳು) |
| 5) ಸಿಂಹ ಲಗ್ನ | 4 | – | ಮಖ |
| | 4 | – | ಪುಬ್ಬ |
| | 1 | – | ಉತ್ತರ |
| ಒಟ್ಟು | 9 | | ಭಾಗಗಳು (ಪಾದಗಳು) |
| 6) ಕನ್ಯಾ ಲಗ್ನ | 3 | – | ಉತ್ತರ |
| | 4 | – | ಹಸ್ತ |
| | 2 | – | ಚಿತ್ತ |
| ಒಟ್ಟು | 9 | | ಭಾಗಗಳು (ಪಾದಗಳು) |

| | | | |
|---|---|---|---|
| 7) ತುಲಾ ಲಗ್ನ | 2 | – | ಚಿತ್ತ |
| | 4 | – | ಸ್ವಾತಿ |
| | 3 | – | ವಿಶಾಖ |
| ಒಟ್ಟು | 9 | | ಭಾಗಗಳು (ಪಾದಗಳು) |
| 8) ವೃಶ್ಚಿಕ ಲಗ್ನ | 1 | – | ವಿಶಾಖ |
| | 4 | – | ಅನುರಾಧ |
| | 4 | – | ಜೇಷ್ಠ |
| ಒಟ್ಟು | 9 | | ಭಾಗಗಳು (ಪಾದಗಳು) |
| 9) ಧನುರ್ ಲಗ್ನ | 4 | – | ಮೂಲ |
| | 4 | – | ಪೂರ್ವಾಷಾಢ |
| | 1 | – | ಉತ್ತರಾಷಾಢ |
| ಒಟ್ಟು | 9 | | ಭಾಗಗಳು (ಪಾದಗಳು) |
| 10) ಮಕರ ಲಗ್ನ | 3 | – | ಉತ್ತರಾಷಾಢ |
| | 4 | – | ಶ್ರವಣ |
| | 2 | – | ಧನಿಷ್ಟ |
| ಒಟ್ಟು | 9 | | ಭಾಗಗಳು (ಪಾದಗಳು) |
| 11) ಕುಂಭ ಲಗ್ನ | 2 | – | ಧನಿಷ್ಟ |
| | 4 | – | ಶತಭಿಷಂ |
| | 3 | – | ಪೂರ್ವಾಭಾದ್ರ |
| ಒಟ್ಟು | 9 | | ಭಾಗಗಳು (ಪಾದಗಳು) |
| 12) ಮೀನ ಲಗ್ನ | 1 | – | ಪೂರ್ವಾಭಾದ್ರ |
| | 4 | – | ಉತ್ತರಾಭಾದ್ರ |
| | 4 | – | ರೇವತಿ |
| ಒಟ್ಟು | 9 | | ಭಾಗಗಳು (ಪಾದಗಳು) |

ಕಾಲಚಕ್ರದಲ್ಲಿ 108 ಪಾದಗಳೆನ್ನುವ 27 ನಕ್ಷತ್ರಗಳು ಕಾಲ ಚಕ್ರವಾದ ಹನ್ನೆರಡು ಲಗ್ನಗಳಲ್ಲಿ ಹೇಗೆ ಮಿಳಿತವಾಗಿರುವುದು ಕೆಳಗೆ 48ನೇ ಚಿತ್ರದಲ್ಲಿ ನೋಡಬಹುದು.

| | | | | | |
|---|---|---|---|---|---|
| | **ಮೀನ** | **ಮೇಷ** | **ವೃಷಭ** | **ಮಿಥುನ** | |
| | ಪೂರ್ವಾಭಾದ್ರ – 1<br>ಉತ್ತರಾಭಾದ್ರ – 4<br>ರೇವತಿ – 4<br>ಭಾಗಗಳು – 9 | ಅಶ್ವಿನಿ – 4<br>ಭರಣಿ – 4<br>ಕೃತ್ತಿಕ – 1<br>ಭಾಗಗಳು – 9 | ಕೃತ್ತಿಕ – 3<br>ರೋಹಿಣಿ – 4<br>ಮೃಗಶಿರ – 2<br>ಭಾಗಗಳು – 9 | ಮೃಗಶಿರ – 2<br>ಆರಿದ್ರ – 4<br>ಪುನರ್ವಸು – 3<br>ಭಾಗಗಳು – 9 | |
| **ಕುಂಭ** | ಧನಿಷ್ಟ – 2<br>ಶತಭಿಷಂ – 4<br>ಪೂರ್ವಾಭಾದ್ರ – 3<br>ಭಾಗಗಳು – 9 | **ಕಾಲಚಕ್ರದಲ್ಲಿನ** | | ಪುನರ್ವಸು – 1<br>ಪುಷ್ಯಮಿ – 4<br>ಆಶ್ಲೇಷ – 4<br>ಭಾಗಗಳು – 9 | **ಕರ್ಕಾಟಕ** |
| **ಮಕರ** | ಉತ್ತರಾಷಾಢ – 3<br>ಶ್ರವಣ – 4<br>ಧನಿಷ್ಠ – 2<br>ಭಾಗಗಳು – 9 | **12 ಲಗ್ನಗಳಲ್ಲಿರುವ 108 ನಕ್ಷತ್ರ ಪಾದಗಳು** | | ಮಖ – 4<br>ಪುಬ್ಬ – 4<br>ಉತ್ತರ – 1<br>ಭಾಗಗಳು – 9 | **ಸಿಂಹ** |
| | ಮೂಲ – 4<br>ಪೂರ್ವಾಷಾಢ – 4<br>ಉತ್ತರಾಷಾಢ – 1<br>ಭಾಗಗಳು – 9 | ವಿಶಾಖ – 1<br>ಅನೂರಾಧ – 4<br>ಜೇಷ್ಠ – 4<br>ಭಾಗಗಳು – 9 | ಚಿತ್ತ – 2<br>ಸ್ವಾತಿ – 4<br>ವಿಶಾಖ – 3<br>ಭಾಗಗಳು – 9 | ಉತ್ತರ – 3<br>ಹಸ್ತ – 4<br>ಚಿತ್ತ – 2<br>ಭಾಗಗಳು – 9 | |
| | **ಧನಸ್ಸು** | **ವೃಶ್ಚಿಕ** | **ತುಲಾ** | **ಕನ್ಯಾ** | |

**48ನೇ ಚಿತ್ರ**

ಒಂದು ದಿನದಲ್ಲಿ ಯಾವ ಸಮಯದಲ್ಲಿ ಹುಟ್ಟಿದರೂ, ಆ ಸಮಯ ಯಾವ ಲಗ್ನದಲ್ಲಿದೆಯೋ ನೋಡಿಕೊಳ್ಳುವುದಕ್ಕೆ, ಸೂರ್ಯನು ಯಾವ ರಾಶಿ ಮೇಲೆ ಎಷ್ಟು ಕಾಲ ತನ್ನ ಕಿರಣಗಳನ್ನು ಪ್ರಸರಿಸುತ್ತಾ ಮುಂದಕ್ಕೆ ಹೋಗುತ್ತಾನೊ ಆ ಕಾಲಗಳನ್ನು ತಿಳಿದುಕೊಳ್ಳೋಣ. ಕಾಲಚಕ್ರದಲ್ಲಿರುವ ಸೂರ್ಯನು ಕರ್ಮಚಕ್ರದಲ್ಲಿನ ಹನ್ನೆರಡು ರಾಶಿಗಳ ಮೇಲೆ ತನ್ನ ಕಿರಣಗಳನ್ನು ಪ್ರಸರಿಸಿದಾಗ, ಯಾವ ರಾಶಿಮೇಲೆ ಎಷ್ಟು ಕಾಲವಿರುತ್ತಾನೋ ಆ ರಾಶಿಗೆ ಸಮಾನವಾಗಿರುವ ಕಾಲಚಕ್ರ ಲಗ್ನವನ್ನು ಜನ್ಮಿಸಿದ ಮನುಷ್ಯನ ಜನನ ಲಗ್ನವಾಗಿ, ಜಾತಕ ಲಗ್ನವಾಗಿ ಹೇಳಬಹುದು. ಸೂರ್ಯನು ಕರ್ಮಚಕ್ರ ರಾಶಿಗಳ ಮೇಲೆ ಕಿರಣಗಳು ಪ್ರಸರಿಸುವ ಕಾಲವನ್ನು, ಕಾಲಚಕ್ರ ಲಗ್ನ ಪರಿಮಾಣಗಳಾಗಿ ಹೇಳುತ್ತಿದ್ದೇವೆ ನೋಡಿರಿ.

**ಒಂದು ಗಂಟೆಗೆ 60 ನಿಮಿಷಗಳಿರುವಂತೆ ಒಂದು ಗಳಿಗೆ ಕಾಲಕ್ಕೆ 60 ವಿಗಳಿಗೆಗಳಿರುತ್ತವೆ.**

**ಒಂದು ಗಂಟೆಗೆ 2. 1/2 ಗಳಿಗೆ ಆಗುತ್ತದೆ. ಒಂದು ನಿಮಿಷಕ್ಕೆ 2. 1/2 ವಿಗಳಿಗೆ ಆಗುತ್ತದೆ.**

| | | ಗಂ. ನಿ. | | ಗ. ವಿಗ |
|---|---|---|---|---|
| 1) | ಮೇಷ ಲಗ್ನ ಕಾಲ | 1–45 | – | 4 – 22 |
| 2) | ವೃಷಭ ಲಗ್ನ ಕಾಲ | 2–01 | – | 5 – 01 |
| 3) | ಮಿಥುನ ಲಗ್ನ ಕಾಲ | 2–12 | – | 5 – 29 |
| 4) | ಕಟಕ ಲಗ್ನ ಕಾಲ | 2–12 | – | 5 – 30 |
| 5) | ಸಿಂಹ ಲಗ್ನ ಕಾಲ | 2–07 | – | 5 – 18 |
| 6) | ಕನ್ಯಾ ಲಗ್ನ ಕಾಲ | 2–05 | – | 5 – 15 |
| 7) | ತುಲಾ ಲಗ್ನ ಕಾಲ | 2–10 | – | 5 – 26 |

| | | | | |
|---|---|---|---|---|
| 8) | ವೃಶ್ಚಿಕ ಲಗ್ನ ಕಾಲ | 2–14 | – | 5 – 34 |
| 9) | ಧನಸ್ಸು ಲಗ್ನ ಕಾಲ | 2–07 | – | 5 – 17 |
| 10) | ಮಕರ ಲಗ್ನ ಕಾಲ | 1–52 | – | 4 – 40 |
| 11) | ಕುಂಭ ಲಗ್ನ ಕಾಲ | 1–39 | – | 4 – 08 |
| 12) | ಮೀನ ಲಗ್ನ ಕಾಲ | 1–37 | = | 4 – 01 |
| | | **24 – 00** | | **60 – 00** |

2009ನೆ ಸಂವತ್ಸರ ಫೆಬ್ರವರಿ ತಿಂಗಳು 17ನೇ ತಾರೀಖು ಅಷ್ಟಮಿ ಮಂಗಳವಾರ ಹುಟ್ಟಿದ ರಂಗಯ್ಯ ಎನ್ನುವ ವ್ಯಕ್ತಿ ಜಾತಕವನ್ನು ನೋಡುವುದಕ್ಕೆ ಮೊದಲು ಆತನ ಜನ್ಮ ಕರ್ಮಚಕ್ರದಲ್ಲಿ ಎಲ್ಲಿಂದ ಪ್ರಾರಂಭವಾಗಿದೆಯೋ, ಲಗ್ನ ಪರಿಮಾಣ ಕಾಲಗಳನ್ನು ನೋಡಿ ಸೂರ್ಯೋದಯದ ನಂತರ ಯಾವ ಲಗ್ನದಿಂದ ಮೊದಲಾಗಿದೆಯೋ ತಿಳಿದುಕೊಂಡಿದ್ದೇವೆ. ಬೆಳಿಗ್ಗೆ ಆತನು ಜನ್ಮಿಸಿದ 9 ಗಂಟೆಗಳ ಸಮಯಕ್ಕೆ ಸರಿಯಾಗಿ ಮೀನಲಗ್ನದ ಮೇಲೆ ಸೂರ್ಯನಿರುವಂತೆ ತಿಳಿದುಕೊಂಡಿದ್ದೇವೆ. ಸೂರ್ಯ ಗಮನದಿಂದಲೇ ಮನುಷ್ಯನ ಪ್ರಾರಬ್ಧ ಪ್ರಾರಂಭವಾಗುತ್ತಿದೆಯೆಂದು ತಿಳಿದುಕೊಂಡಿದ್ದೇವೆ. ರಂಗಯ್ಯ ಜನನ ಕಾಲವಾದ 9 ಗಂಟೆಗಳಿಗೆ ಕಾಲಚಕ್ರದಲ್ಲಿ ಯಾವಯಾವ ಗ್ರಹಗಳು ಎಲ್ಲೆಲ್ಲಿವೆಯೋ ಪಂಚಾಂಗದ ಮೂಲಕ ತಿಳಿದುಕೊಳ್ಳಬಹುದು. ಜನನ ಕಾಲದಲ್ಲಿ ಹನ್ನೆರಡು ಲಗ್ನಗಳಲ್ಲಿರುವ ಗ್ರಹಗಳೇ ಜೀವನಾಂತ್ಯದವರೆಗು ಪ್ರಭಾವ ತೋರಿಸುತ್ತಿರುತ್ತವೆ. ಆದ್ದರಿಂದ ಹನ್ನೆರಡು ಗ್ರಹಗಳ ಸ್ಥಾನಗಳನ್ನು ದ್ವಾದಶ ಲಗ್ನಗಳಲ್ಲಿ ಗುರುತಿಸಿ ಕೊಂಡು, ಅದನ್ನು ಪ್ರಾರಬ್ಧ ಕರ್ಮಪತ್ರವಾಗಿ ಲೆಕ್ಕಿಸಿ ನೋಡಿಕೊಳ್ಳ ಬಹುದು. ಜನನ ಕಾಲದಲ್ಲಿ ಆ ವಿಧವಾಗಿ ಗುರುತಿಸಿಕೊಂಡ ಹನ್ನೆರಡು ಲಗ್ನಗಳ ಕಾಲಚಕ್ರವನ್ನನುಸರಿಸಿ ಕರ್ಮಚಕ್ರದಲ್ಲಿನ ರಾಶಿಗಳಲ್ಲಿ ಕಾಣಿಸದಿರುವ ಕರ್ಮವನ್ನು ಸ್ವಲ್ಪಮಟ್ಟಿಗೆ ಗುರುತಿಸಿಕೊಳ್ಳಬಹುದು. ಪೂರ್ತಿ ಪ್ರಾರಬ್ಧಕರ್ಮವನ್ನು ಗುರುತಿ

ಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಸ್ವಲ್ಪಮಟ್ಟಿಗಾದರೂ ಗುರುತಿಸಬಹುದು. ಪ್ರಾರಬ್ಧಕರ್ಮವನ್ನು ಕರ್ಮಚಕ್ರದಲ್ಲಿ ಬರೆದು ನೋಡಿಕೊಳ್ಳುವ ಅವಕಾಶ ಜ್ಯೋತಿಷ್ಯ ಶಾಸ್ತ್ರದಲ್ಲಿ ಇಲ್ಲ. ಆದರೇ ಕಾಲಚಕ್ರದಲ್ಲಿನ ಗ್ರಹಗಳನ್ನು ಮಾತ್ರ ಗುರುತಿಸಿಕೊಂಡು ಅವರ ಕದಲಿಕೆಯಿಂದ ಯಾವ ಕರ್ಮಗಳು ಜಾರಿ ಆಗುತ್ತವೊ ಸ್ವಲ್ಪಮಟ್ಟಿಗೆ ಹೇಳಿಕೊಳ್ಳಬಹುದು. ಕಾಲಚಕ್ರದಲ್ಲಿ ಕಾಣಿಸುವ ಗ್ರಹಗಳು ಕರ್ಮ ಚಕ್ರದಲ್ಲಿನ ಕರ್ಮರಾಶಿಗಳಲ್ಲಿರುವ ಕರ್ಮವನ್ನು ಒದಗಿಸುವುದಕ್ಕೆ ಕಾಲಚಕ್ರದಲ್ಲಿ ಹೇಗೆ ಇವೆಯೋ ಈಗ ಗುರುತಿಸಿಕೊಳ್ಳೋಣ.

ವ್ಯಕ್ತಿ ಜನ್ಮಿಸಿದ ಕಾಲವನ್ನನುಸರಿಸಿ ಆ ದಿನ ಕಾಲ, ಕರ್ಮ ಚಕ್ರಗಳ ಗಮನಗಳನ್ನನುಸರಿಸಿ ಸೂರ್ಯನು ಯಾವ ಲಗ್ನದಲ್ಲಿ ಇದ್ದಾನೊ ಅದನ್ನು ಗುರುತಿಸಿಕೊಳ್ಳುವುದು ಜನ್ಮ ಲಗ್ನವನ್ನು ಗುರುತಿಸಿಕೊಳ್ಳುವುದಾಗುತ್ತದೆ. 2009 ನೇ ವರ್ಷ ಫೆಬ್ರವರಿ 17ನೇ ತಾರೀಖು ಬೆಳಗ್ಗೆ 9 ಗಂಟೆಗಳಿಗೆ ಜನ್ಮಿಸಿದ ರಂಗಯ್ಯ ಜಾತಕವನ್ನು ನೋಡಿ ಅದರಲ್ಲಿ ಆತನು ಮೀನ ಲಗ್ನದಲ್ಲಿ ಜನ್ಮಿಸಿದಂತೆ ತಿಳಿದುಕೊಂಡಿದ್ದೇವೆ. ಮೀನ ಲಗ್ನವನ್ನು ಅನುಸರಿಸಿ ಉಳಿದ ಎಲ್ಲಾ ಲಗ್ನಗಳಲ್ಲಿ ಹನ್ನೆರಡು ಗ್ರಹಗಳ ಸ್ಥಿತಿಗತಿಗಳನ್ನು ಗುರುತಿಸಿಕೊಳ್ಳಬಹುದು. ವರ್ತಮಾನ ಕಾಲದಲ್ಲಿ ಗ್ರಹಗಳು ಅವುಗಳ ಗಮನವನ್ನು ಅನುಸರಿಸಿ ಎಲ್ಲಿಯಾದರೂ ಇರಬಹುದು. ಹುಟ್ಟಿದ ದಿನದಂದು, ಜನನ ಸಮಯದಲ್ಲಿರುವ ಹನ್ನೆರಡು ಲಗ್ನಗಳಲ್ಲಿರುವ ಗ್ರಹಗಳೇ ಜಾಪತಕಕ್ಕೆ ಆಧಾರವಾಗುತ್ತವೆ. ಆಗಿನ ಲಗ್ನವನ್ನನು ಸರಿಸಿ ಜೀವನದಲ್ಲಿ ನಿರ್ಣಯಿಸಲ್ಪಟ್ಟ ಪ್ರಾರಬ್ಧಕರ್ಮವನ್ನು ಸ್ವಲ್ಪಮಟ್ಟಿಗೆ ತಿಳಿಯ ಬಹುದು. ಆದ್ದರಿಂದ ಪ್ರತಿಯೊಬ್ಬರು ತಮ್ಮ ತಮ್ಮ ಜಾಘತಕಗಳನ್ನು ಬರೆಯಿಸಿಟ್ಟುಕೊಳ್ಳುವುದು ಒಳ್ಳೆಯದು. 2009ನೆ ವರ್ಷದ ಪಂಚಾಂಗದಲ್ಲಿ 17ನೇ ತಾರೀಖಿನಂದು ಹನ್ನೆರಡು ಗ್ರಹಗಳು ಯಾವ ಯಾವ ಲಗ್ನಗಳಲ್ಲಿ ಇರುವುದು ಬರೆದಿರುತ್ತಾರೆ. ಆದ್ದರಿಂದ ಆ ಪಂಚಾಂಗವನ್ನು ನೋಡಿ ಹನ್ನೆರಡು ಲಗ್ನಗಳಲ್ಲಿನ ಗ್ರಹಗಳನ್ನು ಗುರುತಿಸಿಕೊಳ್ಳೋಣ.

| | | |
|---|---|---|
| **1) ಸೂರ್ಯನು** | **ಧನಿಷ್ಟ 4ನೇ ಪಾದದಲ್ಲಿ** | **ಕುಂಭ ಲಗ್ನದಲ್ಲಿ ಇದ್ದಾನೆ.** |
| **2) ಚಂದ್ರನು** | **ಅನೂರಾಧ (ಪಾದ ತಿಳಿದಿಲ್ಲ)** | **ವೃಶ್ಚಿಕ ಲಗ್ನದಲ್ಲಿ ಇದ್ದಾನೆ.** |
| **3) ಕುಜನು** | **ಶ್ರವಣ 2ನೇ ಪಾದದಲ್ಲಿ** | **ಮಕರ ಲಗ್ನದಲ್ಲಿ ಇದ್ದಾನೆ.** |
| **4) ಬುಧನು** | **ಉತ್ತರಾಷಾಡ 4ನೇ ಪಾದದಲ್ಲಿ** | **ಮಕರ ಲಗ್ನದಲ್ಲಿ ಇದ್ದಾನೆ.** |
| **5) ಗುರು** | **ಶ್ರವಣ 2ನೇ ಪಾದದಲ್ಲಿ** | **ಮಕರ ಲಗ್ನದಲ್ಲಿ ಇದ್ದಾನೆ.** |
| **6) ಶುಕ್ರನು** | **ಉತ್ತರಾಭಾದ್ರ 4ನೇ ಪಾದದಲ್ಲಿ** | **ಮೀನ ಲಗ್ನದಲ್ಲಿ ಇದ್ದಾನೆ.** |
| **7) ಶನಿ** | **ಪುಬ್ಬ 4ನೇ ಪಾದದಲ್ಲಿ** | **ಸಿಂಹ ಲಗ್ನದಲ್ಲಿ ಇದ್ದಾನೆ.** |
| **8) ರಾಹು** | **ಶ್ರವಣ 2ನೇ ಪಾದದಲ್ಲಿ** | **ಮಕರ ಲಗ್ನದಲ್ಲಿ ಇದ್ದಾನೆ.** |
| **9) ಕೇತು** | **ಪುಷ್ಯ 4ನೇ ಪಾದದಲ್ಲಿ** | **ಕರ್ಕಾಟಕ ಲಗ್ನದಲ್ಲಿ ಇದ್ದಾನೆ.** |
| **10) ಭೂಮಿ** | **ಮಖ 2ನೇ ಪಾದದಲ್ಲಿ** | **ಸಿಂಹ ಲಗ್ನದಲ್ಲಿ ಇದ್ದಾನೆ.** |
| **11) ಮಿತ್ರ** | **ಆಶ್ಲೇಷ 1ನೇ ಪಾದದಲ್ಲಿ** | **ಕರ್ಕಾಟಕ ಲಗ್ನದಲ್ಲಿ ಇದ್ದಾನೆ.** |
| **12) ಚಿತ್ರ** | **ಶ್ರವಣ 3ನೇ ಪಾದದಲ್ಲಿ** | **ಮಕರ ಲಗ್ನದಲ್ಲಿ ಇದ್ದಾನೆ.** |

ಆ ದಿನ ಪಂಚಾಂಗದಲ್ಲಿರುವುದನ್ನು ಅನುಸರಿಸಿ ಯಾವ ಲಗ್ನದಲ್ಲಿ, ಎಷ್ಟನೇ ಪಾದದಲ್ಲಿ, ಯಾವ ಗ್ರಹವಿದೆಯೋ ಗುರುತಿಸಿಕೊಂಡಿದ್ದೇವೆ. ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೇ! ಇಲ್ಲಿರುವ ಹನ್ನೆರಡು ಗ್ರಹಗಳ ಸಮಾಚಾರ ಪಂಚಾಂಗಗಳಲ್ಲಿ ಇದೆಯೆಂದು ತಿಳಿಸುತ್ತಿದ್ದೇವೆ. ಇಲ್ಲಿಯವರೆಗು ಜ್ಯೋತಿಷ್ಯ ಶಾಸ್ತ್ರಗಳಲ್ಲಾಗಲಿ, ಪಂಚಾಂಗಗಳಲ್ಲಾಗಲಿ ನವಗ್ರಹಗಳನ್ನು ಕುರಿತೇ ಹೇಳಿಕೊಂಡಿದ್ದಾರೆ. ಉಳಿದ ಭೂಮಿ, ಮಿತ್ರ, ಚಿತ್ರ ಗ್ರಹಗಳನ್ನು ಕುರಿತು ಯಾರಾಗಲಿ, ಎಲ್ಲಿಯೇ ಆಗಲಿ ಹೇಳಲಿಲ್ಲ. ಆದ್ದರಿಂದ ಪಂಚಾಂಗದಲ್ಲಿ ಭೂಮಿ, ಮಿತ್ರ, ಚಿತ್ರ ಗ್ರಹಗಳ ಸಮಾಚಾರ ಇರುವುದಿಲ್ಲ. ಪಂಚಾಂಗಗಳಲ್ಲಿ ಇಲ್ಲದಿದ್ದರೂ ಮೂರು ಗ್ರಹಗಳ ಸ್ಥಾನಗಳನ್ನು ಪಾದಗಳನ್ನು ನಾವು ಹೇಗೆ ಹೇಳಿದ್ದೇವೊ ನಂತರ ವಿವರಿಸುತ್ತೇವೆ. ಅದರ ಪ್ರಕಾರ ನೀವು ಕೂಡಾ ಭೂಮಿ, ಮಿತ್ರ, ಚಿತ್ರ ಗ್ರಹಗಳನ್ನು ಗುರುತಿಸಿಕೊಳ್ಳಬಹುದು. ಇನ್ನು ಎಲ್ಲರಿಗೂ ತಿಳಿದ ಚಂದ್ರಗ್ರಹ

ವೊಂದರ ವಿಷಯ ಕೂಡಾ ಪಂಚಾಂಗಗಳಲ್ಲಿ ಇರುವುದಿಲ್ಲ. ಚಂದ್ರನು ವಿನಹ ಎಂಟು ಗ್ರಹಗಳ ಲಗ್ನಗಳನ್ನು ಅವುಗಳ ಪಾದಗಳನ್ನು ಹೇಳಿದ ಪಂಚಾಂಗಗಳು ಚಂದ್ರನ ವಿಷಯವನ್ನು ಬಿಟ್ಟುಹಾಕಿವೆ. ಚಂದ್ರನು ಯಾವ ಲಗ್ನದಲ್ಲಿ ಎಷ್ಟನೇ ಪಾದದಲ್ಲಿದ್ದಾನೋ ಜ್ಯೋತಿಷ್ಯರಾದವರು ಸ್ವಂತವಾಗಿ ತಿಳಿದುಕೊಳ್ಳಬೇಕಾಗಿದೆ. ಪಂಚಾಂಗದಲ್ಲಿ ಚಂದ್ರನು ಯಾವ ನಕ್ಷತ್ರದಲ್ಲಿ ಇರುವುದು ಬರೆಯಲ್ಪಟ್ಟಿರುತ್ತದೆ. ಪ್ರತಿ ದಿನ ಕ್ಯಾಲೆಂಡರ್‌ನಲ್ಲಾಗಲಿ, ಪಂಚಾಂಗದಲ್ಲಾಗಲಿ ಇರುವ ನಕ್ಷತ್ರ ಯಾವುದಾದರೆ ಇದೆಯೋ ಅದು ಚಂದ್ರನದ್ದೆಂದೇ ತಿಳಿಯಬೇಕು. ನಕ್ಷತ್ರ ತಿಳಿದರೂ ಪಾದಕ್ಕಾಗಿ ಸ್ವಲ್ಪ ಗಣಿತವನ್ನು ಉಪಯೋಗಿಸಿ ತಿಳಿಯಬೇಕು. ಅದು ಹೇಗೋ ಕೆಳಗೆ ನೋಡೋಣ.

2009 ಸಂ॥ ಫೆಬ್ರವರಿ 17ನೇ ತಾರೀಖು ಬೆಳಿಗ್ಗೆ 9 ಗಂಟೆಗಳಿಗೆ ಜನ್ಮಿಸಿರುವುದರಿಂದ ಆ ದಿನವಿರುವ ಅನೂರಾಧ ನಕ್ಷತ್ರದಲ್ಲಿ 9 ಗಂಟೆಗಳ ಸಮಯದಲ್ಲಿ ಚಂದ್ರನು ಯಾವ ಪಾದದಲ್ಲಿದ್ದಾನೊ ತಿಳಿಯುವುದಕ್ಕೆ ಅನೂರಾಧಗಿಂತ ಮೊದಲು ಕಳೆದುಹೋದ ನಕ್ಷತ್ರವನ್ನು ಆಧಾರ ಮಾಡಿಕೊಂಡು ನೋಡಬೇಕು. ಹಾಗೆ ನೋಡಿದಾಗ ಅನೂರಾಧಗಿಂತ ಮೊದಲು ವಿಶಾಖ ನಕ್ಷತ್ರ ನಡೆದುಹೋಗಿದೆ. ವಿಶಾಖ ನಡೆದ ನಂತರ 17ನೇ ತಾರೀಖು ಮಂಗಳವಾರ ಅನೂರಾಧ ನಕ್ಷತ್ರ ಸೂರ್ಯೋದಯಕ್ಕಿಂತ ಮೊದಲು ಎಷ್ಟು ಕಳೆದಿರುವುದು ತಿಳಿದು ಹಿಂದಿನ ದಿನ ಕಳೆದ ಅನೂರಾಧ ನಕ್ಷತ್ರವನ್ನೂ, ಆ ದಿನವಿರುವ ಅನೂರಾಧ ನಕ್ಷತ್ರವನ್ನೂ ಸೇರಿಸಿ ನೋಡಿದರೆ ನಕ್ಷತ್ರ ಪರಿಮಾಣ ತಿಳಿದುಹೋಗುತ್ತದೆ. ಆಗ ನಿನ್ನೆಯ ದಿನ ಕಳೆದ ಅನೂರಾಧವನ್ನು ಈ ದಿನ ಸೂರ್ಯೋದಯದ ನಂತರ ಕಳೆದ ಅನೂರಾಧವನ್ನು ಸೇರಿಸಿದರೆ ಒಟ್ಟಾರೆ ಕಳೆದ ಅನೂರಾಧ ಬರುತ್ತದೆ. ನಕ್ಷತ್ರ ಪರಿಮಾಣ ಕಾಲವನ್ನು ನಾಲ್ಕು ಭಾಗಗಳಾಗಿ ವಿಭಜಿಸಿ, ಬೆಳಗ್ಗೆ 9 ಗಂಟೆಗಳ ಸಮಯದಲ್ಲಿ ನಾಲ್ಕು ಭಾಗಗಳಲ್ಲಿ ಯಾವ

ಭಾಗ ನಡೆಯುತ್ತಿದೆಯೋ ಅದನ್ನೇ ಆಗಿನ ಚಂದ್ರಗ್ರಹ ನಕ್ಷತ್ರ ಪಾದವಾಗಿ ಲೆಕ್ಕಿಸಬೇಕು. ಈಗ ಹೇಳಿರುವುದೆಲ್ಲಾ ಅರ್ಥವಾಗುವುದಕ್ಕೆ ಗಣಿತರೂಪದಲ್ಲಿ ನೋಡೋಣ. ಹಿಂದಿನ ದಿನ 16ನೇ ತಾರೀಖು ವಿಶಾಖ 46–25 ಗಳಿಗೆಗಳಿಗೆ ರಾತ್ರಿ 1–06 ನಿಮಿಷಗಳಿಗೆ ಮುಗಿದುಹೋಗಿದೆ. ಆಗಿನಿಂದ ಅನೂರಾಧ ಕಳೆಯುತ್ತಿರುವಂತೆ ತಿಳಿಯಬೇಕು. ವಿಶಾಖ ಗಂಟೆಗಳ ಪ್ರಕಾರವಾದರೆ ರಾತ್ರಿ 1–06 ನಿಮಿಷಗಳವರೆಗು ಇದೆ. ಗಳಿಗೆಗಳಲ್ಲಾದರೆ ಗಳಿಗೆಗಳು 46–25 ವಿಗಳಿಗೆಗಳವರೆಗು ಇದೆ. 17ನೇ ತಾರೀಖು ಅನೂರಾಧ 53–04 ಗಳಿಗೆಗಳು ರಾತ್ರಿ 3–45 ರವರೆಗು ಇದೆ.

| | | | |
|---|---|---|---|
| | | ಗ–ವಿಗ | |
| ಸಂಪೂರ್ಣ ನಕ್ಷತ್ರ ಪರಿಮಾಣ | | 60–00 | |
| ಹಿಂದಿನ ದಿನ ಕಳೆದ ವಿಶಾಖ | | 46–25 | |
| ಮುಂದಿನ ದಿನ ಕಳೆದ ಅನೂರಾಧ | | 13–35 | |
| ನಿನ್ನೆ ಕಳೆದ ಅನೂರಾಧ | | 13–35 | |
| ಈ ದಿನ ಕಳೆದ ಅನೂರಾಧ | | 53–04 | |
| ಒಟ್ಟು ಅನೂರಾಧ ಪರಿಮಾಣ | ಗಳಿಗೆ | 66–39 | ವಿಗಳಿಗೆ |
| ನಿನ್ನೆಯ ದಿನ ಅನೂರಾಧ | | 13–35 | |
| ಈ ದಿನ ಕಳೆದ ಅನೂರಾಧ | | 06–13 | |
| ಒಟ್ಟು ಕಳೆದ ಅನೂರಾಧ | | 19–48 | |
| ಅನೂರಾಧ ನಕ್ಷತ್ರ ಪರಿಮಾಣ | | 66–39 | |
| ಒಟ್ಟು ಕಳೆದ ಅನೂರಾಧ | | 19–48 | |
| ಉಳಿದ ಅನೂರಾಧ | | 46–51 | |

ಅನೂರಾಧ ನಕ್ಷತ್ರ ಪ್ರಮಾಣವನ್ನು ನಾಲ್ಕು ಭಾಗಗಳು ಮಾಡಿದಾಗ

| | | | |
|---|---|---|---|
| ಒಂದು ಪಾದದ ಕಾಲ | ಗಳಿಗೆ | 16–40 | ವಿಗಳಿಗೆಗಳು |
| ಒಟ್ಟು ಕಳೆದಿರುವುದು | ಗಳಿಗೆ | 19–48 | ವಿಗಳಿಗೆಗಳು |
| ಒಂದು ಪಾದ ಹೋಗಿ | | 16–40 | |
| ಎರಡನೆ ಪಾದದಲ್ಲಿ ಕಳೆದಿರುವುದು | ಗಳಿಗೆ | 3–40 | ವಿಗಳಿಗೆಗಳು |

ಇದನ್ನನುಸರಿಸಿ ಚಂದ್ರನು ಅನೂರಾಧ ನಕ್ಷತ್ರದಲ್ಲಿ ಎರಡನೆ ಪಾದದಲ್ಲಿರುವಂತೆ ತಿಳಿಯುತ್ತಿದೆ.

ಜನನ ಸಮಯದಲ್ಲಿ ಕಾಲಚಕ್ರದಲ್ಲಿ ಯಾವ ಲಗ್ನದಲ್ಲಿ ಯಾವ ಗ್ರಹಗಳು ಇವೆಯೋ, ಅವು ಯಾವ ಪಾದಗಳಲ್ಲಿ ಇವೆಯೋ ಹಿಂದಿನ ಪುಟಗಳಲ್ಲಿ ಹೇಳಿಕೊಂಡಿದ್ದೇವೆ. ಆದರೇ ಅಲ್ಲಿ ಒಟ್ಟು ಹನ್ನೊಂದು ಗ್ರಹಗಳನ್ನು ಲಗ್ನಗಳಲ್ಲಿ ಯಾವ ಪಾದದಲ್ಲಿ ಇರುವುದು ಗುರುತಿಸಿಕೊಂಡಿದ್ದೇವೆ. ಚಂದ್ರನನ್ನು ಮಾತ್ರ ವೃಶ್ಚಿಕ ಲಗ್ನದಲ್ಲಿ ಅನೂರಾಧ ನಕ್ಷತ್ರದಲ್ಲಿರುವಂತೆ ಹೇಳಿಕೊಂಡಿದ್ದೇವೆ ಆದರೆ, ಚಂದ್ರನು ಅನುರಾಧ ನಕ್ಷತ್ರದಲ್ಲಿ ಯಾವ ಭಾಗದಲ್ಲಿ (ಪಾದದಲ್ಲಿ) ಇದ್ದಾನೋ ಹೇಳಲಿಲ್ಲ. ಚಂದ್ರನು ಆ ದಿನ ನಕ್ಷತ್ರವಾದ ಅನೂರಾಧದಲ್ಲಿ ಯಾವ ಪಾದದಲ್ಲಿ ಇದ್ದಾನೊ ತಿಳಿಯುವುದಕ್ಕೆ ಸ್ವಲ್ಪ ಗಣಿತವನ್ನು ಉಪಯೋಗಿಸಿಕೊಂಡು ಕೊನೆಗೆ ಅನೂರಾಧ ಪಾದವನ್ನು ತಿಳಿದುಕೊಂಡಿದ್ದೇವೆ. ಆ ದಿನ ಚಂದ್ರನು ಅನೂರಾಧ ನಕ್ಷತ್ರ ಎರಡನೆ ಪಾದದಲ್ಲಿ ಇರುವಂತೆ ತಿಳಿದಿದೆ. ಈಗ 2009ನೆ ಸಂವತ್ಸರ ಫೆಬ್ರವರಿ 17ನೇ ತಾರೀಖು ಅಷ್ಠಮಿ ಮಂಗಳವಾರದಂದು ಕಾಲಚಕ್ರದಲ್ಲಿನ ಲಗ್ನಗಳನ್ನೂ, ಅದರಲ್ಲಿನ ಗ್ರಹಗಳನ್ನೂ, ಗ್ರಹಗಳಿರುವ ಪಾದಗಳನ್ನೂ ಕಾಲಚಕ್ರ ಲಗ್ನ ಕುಂಡಲಿಯಲ್ಲಿ ಎಲ್ಲರಿಗೂ ತಿಳಿಯುವಂತೆ ಬರೆದು ನೋಡಿಕೊಳ್ಳೋಣ. ನಂತರ ಪುಟದಲ್ಲಿ 49ನೇ ಚಿತ್ರವನ್ನು ನೋಡಿರಿ.

<table>
<tr><td></td><td>ಮೀನ</td><td>ಮೇಷ</td><td>ವೃಷಭ</td><td>ಮಿಥುನ</td><td></td></tr>
<tr><td></td><td>ಪೂರ್ವಾಭಾದ್ರ –1<br>ಉತ್ತರಾಭಾದ್ರ 2 3 4 5—ಶುಕ್ರ<br>ರೇವತಿ 6 7 8 9</td><td>ಅಶ್ವಿನಿ 1 2 3 4<br>ಭರಣಿ 5 6 7 8<br>ಕೃತ್ತಿಕ –9</td><td>ಕೃತ್ತಿಕ 1 2 3<br>ರೋಹಿಣಿ 4 5 6 7<br>ಮೃಗಶಿರ 8 9</td><td>ಮೃಗಶಿರ 1 2<br>ಆರಿದ್ರ 3 4 5 6<br>ಪುನರ್ವಸು 7 8 9</td><td></td></tr>
<tr><td>ಕುಂಭ</td><td>ಧನಿಷ್ಟ 1 2–ಸೂರ್ಯ<br>ಶತಭಿಷ 3 4 5 6<br>ಪೂರ್ವಾಭಾದ್ರ 7 8 9</td><td colspan="2" rowspan="2"></td><td>ಪುನರ್ವಸು–1<br>ಪುಷ್ಯ 2 3 4 5– ಕೇತು<br>ಆಶ್ಲೇಷ 6– ಮಿತ್ರ 7 8 9</td><td>ಕರ್ಕಾಟಕ</td></tr>
<tr><td>ಮಕರ</td><td>ಉತ್ತರಾಷಾಢ 1 2 3– ಬುಧ<br>ಶ್ರವಣ 4 5 6 7 ಕುಜ ರಾಹು ಗುರು ಚಿತ್ರ<br>ಧನಿಷ್ಟ 8 9</td><td>ಮಖ 1 2– ಭೂಮಿ 3 4<br>ಪುಬ್ಬ 5 6 7 8– ಶನಿ<br>ಉತ್ತರ 9</td><td>ಸಿಂಹ</td></tr>
<tr><td></td><td>ಮೂಲ 1 2 3 4<br>ಪೂರ್ವಾಷಾಡ 5 6 7 8<br>ಉತ್ತರಾಷಾಡ –9</td><td>ವಿಶಾಖ – 1<br>ಅನೂರಾಧ 2 3– 4 5 ಚಂದ್ರನು<br>ಜ್ಯೇಷ್ಠ 6 7 8 9</td><td>ಚಿತ್ತ 1 2<br>ಸ್ವಾತಿ 3 4 5 6<br>ವಿಶಾಖ 7 8 9</td><td>ಉತ್ತರ 1 2 3<br>ಹಸ್ತ 4 5 6 7<br>ಚಿತ್ತ 8 9</td><td></td></tr>
<tr><td></td><td>ಧನಸ್ಸು</td><td>ವೃಶ್ಚಿಕ</td><td>ತುಲಾ</td><td>ಕನ್ಯಾ</td><td></td></tr>
</table>

**49ನೇ ಚಿತ್ರ.**

ಓದುಗರೆಲ್ಲರಿಗೂ ಸುಲಭವಾಗಿ ಜನ್ಮಲಗ್ನ ಕುಂಡಲಿಯಲ್ಲಿ ಹನ್ನೆರಡು ಗ್ರಹಗಳನ್ನು ಲಗ್ನಗಳಲ್ಲಿ ಗುರುತಿಸುವುದಲ್ಲದೇ ಆಯಾ ಲಗ್ನಗಳಲ್ಲಿ ಯಾವ ನಕ್ಷತ್ರದಲ್ಲಿ, ಯಾವ ಪಾದದಲ್ಲಿ ಆ ಗ್ರಹಗಳು ಇವೆಯೋ ಸುಲಭವಾಗಿ ಅರ್ಥವಾಗುವುದಕ್ಕೆ ನಕ್ಷತ್ರಗಳ ಹೆಸರುಗಳನ್ನು ಲಗ್ನದಲ್ಲಿ ಇಡುತ್ತಾ, ಅವುಗಳೊಂದಿಗೆ ನಕ್ಷತ್ರಗಳ ನಾಲ್ಕು ಪಾದಗಳನ್ನು ಕೂಡಾ ತೋರಿಸಿ ಜನನ ಕಾಲದಲ್ಲಿನ ಗ್ರಹಗಳಿರುವ ನಕ್ಷತ್ರ ಪಾದವನ್ನು ಕೂಡಾ ತೋರಿಸುವುದು ನಡೆದಿದೆ. ಪೂರ್ವಕಾಲದಲ್ಲಿ ಜ್ಯೋತಿಷ್ಯರು ಬಹಳ ಶ್ರಮಪಟ್ಟು ಜನ್ಮಕುಂಡಲಿಯನ್ನು, ಜನ್ಮ ಲಗ್ನವನ್ನು ತಿಳಿದುಕೊಳ್ಳುತ್ತಿದ್ದರು. ಈದಿನ ಇಂತಹ ಶ್ರಮ ಸ್ವಲ್ಪವೂ ಇಲ್ಲದೇ ಹುಟ್ಟಿದ ದಿನಾಂಕ, ಹುಟ್ಟಿದ ಸಮಯವನ್ನು ಹೇಳಿದರೆ ಆ ದಿನ ಜನ್ಮ ಲಗ್ನ ಯಾವುದಾಗಿರುವುದು, ಉಳಿದ ಲಗ್ನಗಳಲ್ಲಿ ಗ್ರಹಗಳು ಎಲ್ಲಿರುವುದು, ದಶಗಳು ಯಾವಾಗಿರುವುದು ಎಲ್ಲಾ ವಿವರಗಳನ್ನು ಈದಿನ ಕಂಪ್ಯೂಟರ್ ಮೂಲಕ ಕ್ಷಣಗಳಲ್ಲಿ ತಿಳಿದುಹೋಗುತ್ತಿವೆ. ಪೂರ್ವದಲ್ಲಿ ಒಬ್ಬ ವ್ಯಕ್ತಿಯ ಜಾತಕಲಗ್ನವನ್ನು ನೋಡುವುದಕ್ಕೆ ಆತನು ಹುಟ್ಟಿದ ಸಂವತ್ಸರ ಪಂಚಾಂಗವನ್ನೇ ನೋಡಬೇಕಾಗಿರುವುದರಿಂದ, ಜ್ಯೋತಿಷ್ಯರು ಕಳೆದುಹೋದ ನೂರು ವರ್ಷಗಳ ಪಂಚಾಂಗಗಳನ್ನು ಕೂಡಾ ತಮ್ಮ ಹತ್ತಿರ ಇಟ್ಟುಕೊಳ್ಳುತ್ತಿದ್ದರು. ಈ ದಿನ ಅಂತಹ ಅವಶ್ಯಕತೆ ಇಲ್ಲದೆ ನೂರು ವರ್ಷಗಳ ಪಂಚಾಂಗಗಳನ್ನು ಕಂಪ್ಯೂಟರ್‌ನಲ್ಲಿ ಒದಗಿಸುವುದರಿಂದ, ನೂರು ವರ್ಷದ ಪಂಚಾಂಗವನ್ನಾಗಲಿ ಅಥವಾ ಐವತ್ತು ಅರವತ್ತು ವರ್ಷದ ಪಂಚಾಂಗ ವಿಷಯಗಳನ್ನಾಗಲಿ ಸುಲಭವಾಗಿ ತಿಳಿಯಬಹುದು. ಅಷ್ಟೇ ಅಲ್ಲದೆ ಯಾವ ಗಣಿತ ಹಾಕದಂತೆ ಲಗ್ನವನ್ನೂ, ನಕ್ಷತ್ರವನ್ನೂ, ದಶಗಳನ್ನೂ ನಿಮಿಷಗಳ ಅವಧಿಯಲ್ಲಿ ತಿಳಿಯಬಹುದು. ಈಗ ಎಲ್ಲಾ ಸೌಕರ್ಯಗಳು ಇದ್ದರೂ, ಈ ಶಾಸ್ತ್ರ ಹೀಗಿದೆಯೆಂದು ತಿಳಿಯುವುದಕ್ಕೆ ವರಸೆ ಕ್ರಮದಲ್ಲಿ ಎಲ್ಲಾ ವಿಷಯಗಳನ್ನು ನಾವು ಬರೆದು ತೋರಿಸುವುದು ನಡೆದಿದೆ. ಇಲ್ಲಿಯವರೆಗು ಗ್ರಹಚಾರವನ್ನು ತಿಳಿಯುವುದಕ್ಕೆ ಬೇಕಾದ ವಿವರವನ್ನು ನೀಡಿದ್ದೇವೆ. ಈಗ ದಶಗಳು ಎಂದರೆ ಏನು? ದಶಾಚಾರ ಎಂದರೆ ಏನು? ಎನ್ನುವ ವಿಷಯವನ್ನು ವಿವರಿಸಿಕೊಳ್ಳೋಣ.

## 37 ದಶಗಳು ಎಂದರೆ ಏನು?

ಸ್ವಲ್ಪಮಟ್ಟಿನ ವಿದ್ಯೆ ಕಲಿತವರಿಗೆ ಕನಿಷ್ಟ ಐದನೆತರಗತಿ ಓದಿದವರಿಗಾದರೂ ದಶ ಎಂದರೆ ಗಣಿತದ ಪ್ರಕಾರ ಹತ್ತು ಎಂದು ತಿಳಿಯಬಲ್ಲದು. ಹತ್ತು ಎನ್ನುವ ಸಂಖ್ಯೆ ನಮ್ಮ ಜೀವನದಲ್ಲಿ ಅನೇಕ ವಿಷಯಗಳಲ್ಲಿ ಉಪಯೋಗಿಸಿಕೊಂಡು ಮಾತನಾಡುತ್ತಿರುತ್ತೇವೆ. ಈಗ ಇಲ್ಲಿ ನಾವು ಹೇಳಿಕೊಳ್ಳುವುದು ಸ್ವತಃವಾಗಿ ಮನುಷ್ಯನ ಜೀವನದಲ್ಲಿ ಕರ್ಮಕ್ಕೆ ಸಂಬಂಧಿಸಿರುವುದು. ಆದ್ದರಿಂದ ಈ ದಶಗಳನ್ನು ಜಾಗ್ರತೆಯಾಗಿ ತಿಳಿದುಕೊಳ್ಳೋಣ. ದಶ ಎಂದರೇ ಹತ್ತು ಎಂದು, ದಶಗಳು ಎಂದರೆ ಕೆಲವು ಹತ್ತುಗಳೆಂದು ತಿಳಿಯುತ್ತಿದೆ. ಆಚರಣೆ ಎಂದರೇ ಮಾಡಲ್ಪಡುವ ಕಾರ್ಯವೆಂದು, ಆಚಾರ ಎಂದರೆ ಮಾಡಲ್ಪಡುವ ವಿಧಾನ ಎಂದು ಅರ್ಥ. ಆಚಾರಿ ಎಂದರೆ ಯಾವ ಕಾರ್ಯವನ್ನು ಹೇಗೆ ಮಾಡಬೇಕೊ ತಿಳಿದಂತಹವನೆಂದು ಅರ್ಥ. ಕೆಲವು ಹತ್ತಾರು ವರ್ಷಗಳು ನಡೆಯುವ ಆಚರಣೆಗಳನ್ನು ತಿಳಿಸುವುದು ದಶಾಚಾರ ಎಂದು ಕರೆಯುತ್ತೇವೆ. ಮನುಷ್ಯನ ಜೀವನದಲ್ಲಿ ಆತನು ಜೀವಿಸುವವರೆಗು ಕೆಲವು ಹತ್ತಾರು ವರ್ಷಗಳಿರುತ್ತವೆ. ಆ ಹತ್ತಾರು ವರ್ಷಗಳಲ್ಲಿ ಪ್ರತ್ಯೇಕಿಸಿ ಕೆಲವು ವರ್ಷಗಳು ಮಾತ್ರ ಒಂದು ಗ್ರಹದ ಅಧೀನದಲ್ಲಿ ಇರಬೇಕೆಂದು ಅದರ ನಂತರ ಕೆಲವು ವರ್ಷಗಳು ಮತ್ತೊಂದು ಗ್ರಹವೊಂದರ ಆಧೀನದಲ್ಲಿ ಇರಬೇಕೆಂದು ತಿಳಿಸುವ ವಿಧಾನವನ್ನು ದಶಾಚಾರ ಎನ್ನುತ್ತಿದ್ದೇವೆ. ಇದಕ್ಕು ಮೊದಲು ನಾವು ತಿಳಿದುಕೊಂಡ ಜ್ಞಾನದಲ್ಲಿ ಆಗಾಮಿ, ಸಂಚಿತ, ಪ್ರಾರಬ್ಧ ಎನ್ನುವ ಮೂರು ಕರ್ಮಗಳು ಇವೆಯೆಂದು ತಿಳಿದುಕೊಂಡಿದ್ದೇವೆ. ಪ್ರಾರಬ್ಧಕರ್ಮದ ಪ್ರಕಾರ ಮನುಷ್ಯನ ಜೀವನ ನಡೆಯುತ್ತದೆಂದು, ಪ್ರಾರಬ್ಧಕರ್ಮ ಪ್ರಕಾರ ಕಾಲಚಕ್ರದಲ್ಲಿನ ಹನ್ನೆರಡು ಗ್ರಹಗಳು ಕರ್ಮವನ್ನು ಆಚರಿಸುವಂತೆ ಮಾಡುತ್ತಾ, ಅನುಭವಿಸುವಂತೆ ಮಾಡುತ್ತಿವೆಯೆಂದು ತಿಳಿದುಕೊಂಡಿದ್ದೇವೆ. ಪ್ರಾರಬ್ಧ ಕರ್ಮಪ್ರಕಾರ ಗ್ರಹಗಳು ಮನುಷ್ಯನಿಂದ ಆಚರಿಸುವಂತೆ ಮಾಡುವ ಕಾರ್ಯಗಳನ್ನು ಗ್ರಹಚಾರ ಎನ್ನುತ್ತಿದ್ದೇವೆ. ಕರ್ಮ ಗ್ರಹಗಳ ಕೈಯಲ್ಲಿ ಒಂದು ಪದ್ಧತಿಯಾಗಿ ಮುಗಿದುಹೋಗುತ್ತಿದೆ ಅಲ್ಲವೆ! ಅದನ್ನೇ

ಗ್ರಹಚಾರ ಎನ್ನುತ್ತಿದ್ದೇವೆ ಅಲ್ಲವೆ! ಹಾಗಿರುವಾಗ ದಶಗಳು ದಶಾಚಾರಗಳು ಎಂದು ಹೇಳುವುದೇನೆಂದು, ದಶಾಚಾರದಲ್ಲಿ ಯಾವ ಕರ್ಮ ಜಾರಿ ಆಗುತ್ತದೆಂದು, ದಶಾಚಾರಗಳು ಇರಬೇಕಾದ ಅವಶ್ಯಕತೆಯೇನು ಎಂದು ಯಾರಾದರೂ ಕೇಳಬಹುದು. ಈ ಪ್ರಶ್ನೆ ಪದ್ಧತಿ ಪ್ರಕಾರ ಯಾರಾದರೂ ಕೇಳಬಹುದು. ಇದು ಹೇತುಬದ್ಧವಾದ ಪ್ರಶ್ನೆಯೇ ಆಗಿರುವುದರಿಂದ ಇದಕ್ಕೆ ಜ್ಯೋತಿಷ್ಯ ಪಂಡಿತರೇ ಸಮಾಧಾನ ಹೇಳಬೇಕು. ನಾನು ಆಧ್ಯಾತ್ಮಿಕ ಶಾಸ್ತ್ರಜ್ಞನು. ಆದ್ದರಿಂದ ಈ ಪ್ರಶ್ನೆಗೆ ನಾನು ಸಮಾಧಾನ ಕೊಡಲಾರೆನು. ನನ್ನದು ಆಧ್ಯಾತ್ಮಿಕವಾದ್ದರಿಂದ ಆ ವಿಷಯದಲ್ಲಿ ಸಮಾಧಾನವನ್ನು ಹೇಳುತ್ತೇನೆ ಹೊರತು, ಜ್ಯೋತಿಷ್ಯಶಾಸ್ತ್ರದಲ್ಲಿನ ಪ್ರಶ್ನೆಗಳಿಗೆ ಸಮಾಧಾನ ಹೇಳುವ ಸಾಮರ್ಥ್ಯ ನನಗಿಲ್ಲ. ಈಗ ಈ ಪ್ರಶ್ನೆಗೆ ಉತ್ತರ ಬೇಕು. ಆದ್ದರಿಂದ ಎಲ್ಲಾ ಶಾಸ್ತ್ರಗಳನ್ನು ತಿಳಿದವನಾಗಿರುವ ನನ್ನಹಿತನು, ನನ್ನನ್ನು ನಡೆಸುವವನು, ನನ್ನ ಪಕ್ಕದಲ್ಲಿಯೇ ಇರುವ ಪಕ್ಕದವನು, ಅತ್ಯಂತ ಹತ್ತಿರವಿರುವವನು (ನಿಯರೆಸ್ಟ್ ನೈಬರ್) ಆದ ಅವನನ್ನು ಕೇಳಿ ಇದಕ್ಕೆ ಉತ್ತರವನ್ನು ಹೇಳುತ್ತೇನೆ. ಆದ್ದರಿಂದ ನಾನು, ನನ್ನವನು ಸೇರಿ ನಾವು ಹೇಳುವುದೇನೆಂದರೆ!

ಬಹಳಜನ ಹಿರಿಯರು ಯಾರು ಮಾಡಿದ ಕರ್ಮವನ್ನು ಅವನು ಅನುಭವಿಸದೆ ತಪ್ಪೋಲ್ಲ ಎಂದಿದ್ದಾರೆ. ಕೆಲವರು ಆತ್ಮಜ್ಞಾನಿಗಳು "ವಿಷ್ಣು, ಈಶ್ವರ, ಬ್ರಹ್ಮದೇವರುಗಳು ಕೂಡಾ ಕರ್ಮಕ್ಕೆ ಅತೀತರಲ್ಲ. ಪ್ರಾರಬ್ಧವನ್ನು ಅವರು ಕೂಡಾ ಅನುಭವಿಸದೆ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ" ಎಂದಿದ್ದಾರೆ. ಅಷ್ಟೇ ಅಲ್ಲದೆ ಒಂದು ಬಾರಿ ಸಂಚಿತಕರ್ಮವಾಗಿ ಬದಲಾಗಿ ಹೋಗಿ ಪುನಃ ಪ್ರಾರಬ್ಧವಾದ ನಂತರ ಅದರಿಂದ ಯಾರೂ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಗ್ರಹಗಳ ಆಧೀನದಲ್ಲಿರುವ ಕರ್ಮವನ್ನು ಯಾವ ಮನುಷ್ಯನಾಗಲಿ, ಎಂತಹ ಕ್ರಿಯೆಯಿಂದಾಗಲಿ, ಸ್ವಲ್ಪಮಟ್ಟಿಗಾದರೂ ತೆಗೆದು ಹಾಕುವುದೂ ಇಲ್ಲ, ಸ್ವಲ್ಪವನ್ನಾದರೂ ಕರ್ಮವನ್ನು ಸೇರಿಸುವುದೂ ಇಲ್ಲ. ಪ್ರತಿ ಮನುಷ್ಯ ನಿತ್ಯವೂ, ಒಂದು ಕ್ಷಣ ಕೂಡಾ ಸುಮ್ಮನಿರದೆ ಕರ್ಮವನ್ನು ಅನುಭವಿಸುವ ವಿಧಾನವನ್ನು

ದೇವರು ನಿರ್ಮಿಸಿದ್ದಾನೆ. ಅಂತಹ ವಿಧಾನವನ್ನು ಯಾರೂ ಅತಿಕ್ರಮಿಸಲಾರರು. ಆದರೇ ಎಷ್ಟೋ ಗಟ್ಟಿಯಾಗಿ ಏರ್ಪಡಿಸಿರುವ ಕರ್ಮ ವಿಧಾನದಿಂದ ಒಂದು ಕ್ಷಣ ಕೂಡಾ ಯಾರೂ ತಪ್ಪಿಸಿಕೊಳ್ಳಲಾರನೆಂದು ಹೇಳಿದ ದೇವರು ಭಗವದ್ಗೀತೆ ಯಲ್ಲಿ ಜ್ಞಾನಯೋಗದಲ್ಲಿ 37 ನೇ ಶ್ಲೋಕದಲ್ಲಿ ಹೀಗೆ ಹೇಳಿದ್ದಾನೆ.

**ಶ್ಲೋ॥ 37ನೇ. ಯಥೈಧಾಂಸಿ ಸಮಿದ್ಧೋಗ್ನಿ ರ್ಭಸ್ಮಸಾತ್ಕುರುತೇರ್ಜುನ।**
**ಜ್ಞಾನಾಗ್ನಿ ಸ್ಸರ್ವಕರ್ಮಾಣಿ ಭಸ್ಮಸಾತ್ಕುರುತೇ ತಥಾ ॥**

**ಭಾವಾರ್ಥ :– "ಯಾವ ವಿಧವಾಗಿ ಅಗ್ನಿಯಲ್ಲಿ ಕಟ್ಟಿಗೆಗಳು ಸುಟ್ಟು ಭಸ್ಮವಾಗಿ ಹೋಗುತ್ತಿವೆಯೋ, ಅದೇ ವಿಧವಾಗಿ ಜ್ಞಾನವೆನ್ನುವ ಅಗ್ನಿಯಲ್ಲಿ ಸರ್ವಕರ್ಮಗಳು ಸುಟ್ಟುಹೋಗುತ್ತಿವೆ." ಎಂದು** ಸ್ವತಃವಾಗಿ ಭಗವಂತನ ರೂಪದಲ್ಲಿರುವ ದೇವರೇ ಹೇಳಿದ್ದಾನೆ. ದೇವರೇ ಕರ್ಮವನ್ನು ಪಾಲಿಸುವುದಕ್ಕೆ ಖಗೋಳದಲ್ಲಿ ದ್ವಾದಶ ಗ್ರಹಗಳನ್ನು ಏರ್ಪಡಿಸಿ, ಅವರನ್ನು ವಿಧಿ ವಿಧಾನವನ್ನು ತಪ್ಪದೆ ನಡೆಸುವಂತೆ ಮಾಡಿದ್ದಾನೆ. ಯಾರೂ ಕರ್ಮದಿಂದ ತಪ್ಪಿಸಿಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದಿದ್ದಾನೆ. ಆದರೆ ತನ್ನ ಗೀತೆಯಲ್ಲಿ ಬ್ರಹ್ಮವಿದ್ಯಾ ಶಾಸ್ತ್ರದ ಪ್ರಕಾರ ಜ್ಞಾನವನ್ನು ತಿಳಿದುಕೊಂಡರೆ, ಅಂತಹವನ ಕರ್ಮವೆಲ್ಲವೂ ಜ್ಞಾನಾಗ್ನಿಯಲ್ಲಿ ಸುಟ್ಟುಹೋಗುತ್ತದೆ ಎಂದಿದ್ದಾನೆ. ಇಲ್ಲಿಯವರೆಗು ನಾವು ತಿಳಿದುಕೊಂಡ ಜ್ಯೋತಿಷ್ಯದ ಪ್ರಕಾರ ಕಾಲಚಕ್ರದಲ್ಲಿ ಗ್ರಹಗಳು ತಿರುಗುತ್ತಿರುವಷ್ಟು ಕಾಲವೂ, ಕರ್ಮಚಕ್ರದಲ್ಲಿ ಕರ್ಮ ಇರುವಷ್ಟು ಕಾಲವೂ, ಜೀವಿಯು ಗುಣ ಚಕ್ರವನ್ನು ಬಿಟ್ಟು ಹೊರಬೀಳುವುದಿಲ್ಲ ಎಂದು ತಿಳಿಯುತ್ತಿದೆ. ಅಷ್ಟೇ ಹೊರತು ಜ್ಞಾನ ಇರುವವನ ಕರ್ಮ ಈ ವಿಧವಾಗಿ ತೊಲಗಿಹೋಗುತ್ತ ದೆಂದು ಎಲ್ಲಿಯೂ ಹೇಳಿಕೊಳ್ಳಲಿಲ್ಲ. ಕರ್ಮಚಕ್ರದಲ್ಲಿನ ಕರ್ಮವನ್ನು ಜ್ಞಾನಿಯಾದವನು ಅನುಭವಿಸದಂತೆ ಹೇಗೆ ತಪ್ಪಿಸಿಕೊಳ್ಳುತ್ತಾನೆ? ಎನ್ನುವ ಪ್ರಶ್ನೆ ಇಲ್ಲಿ ಬರುತ್ತದೆ. ಈ ಪ್ರಶ್ನೆಗೆ ಉತ್ತರವಾಗಿ ನಾವು (ನಾನು+ನನ್ನಆತ್ಮ) ಹೇಳುವುದೇನೆಂದರೇ!

ಗ್ರಹಚಾರ ವಿಧಾನವಾದ ದ್ವಾದಶ ಲಗ್ನಗಳು, ದ್ವಾದಶ ಗ್ರಹಗಳು, ಪ್ರಾರಬ್ಧಕರ್ಮವಿರುವ ವಿಧಾನದಲ್ಲಿ ಕರ್ಮವನ್ನು ತೆಗೆದುಹಾಕುವುದಕ್ಕೆ ಸಾಧ್ಯವೇ ಇಲ್ಲ. ಆದ್ದರಿಂದ ಒಬ್ಬ ಮನುಷ್ಯನ ಜೀವನದಲ್ಲಿನ ಕರ್ಮವನ್ನು ಅವಶ್ಯಕತೆಯನ್ನು ಅನುಸರಿಸಿ ಜ್ಞಾನದ ಪ್ರಕಾರ ತೆಗೆದುಹಾಕುವುದಾಗಲಿ, ತಗಲಿಸುವುದಕ್ಕಾಗಲಿ ಒಂದು ವಿಧಾನವನ್ನು ದೇವರು ಪ್ರತ್ಯೇಕವಾಗಿ ಅಳವಡಿಸಿಟ್ಟಿದ್ದಾನೆ. ಅದನ್ನೇ "ದಶಾಚಾರ" ಎನ್ನುತ್ತಿದ್ದೇವೆ. ದಶಾಚಾರ ಎಂದು ಹೆಸರು ಇಡಲಾದ ವಿಧಾನದಲ್ಲಿ ಜ್ಞಾನದಿಂದ ಪ್ರಾರಬ್ಧವನ್ನು ಸ್ವಲ್ಪ ಇಲ್ಲದಂತೆ ಮಾಡಿಕೊಳ್ಳಬಹುದು. ಹಾಗೇ ಹೊಸದಾಗಿ ಪ್ರಾರಬ್ಧವನ್ನು ತಗಲಿಸಲೂಬಹುದು. ಆದರೇ ಕರ್ಮವನ್ನು ತಗಲಿಸುವ ವಿಧಾನವನ್ನು ದೇವರು ಹೆಚ್ಚಾಗಿ ಹೇಳದಂತೆ, ಕರ್ಮವನ್ನು ತೆಗೆದುಹಾಕುವ ವಿಧಾನವನ್ನೇ ಹೆಚ್ಚಾಗಿ ಹೇಳಿದ್ದಾನೆ. ದೇವರು ಹೇಳಿದ ಬ್ರಹ್ಮವಿದ್ಯಾಶಾಸ್ತ್ರವನ್ನು ಅನುಸರಿಸಿ ಒಬ್ಬ ಮನುಷ್ಯ ಕರ್ಮವನ್ನು ತೆಗೆದುಹಾಕುವುದಾಗಲಿ, ಹಾಗೇ ತಗಲಿಸುವುದಾಗಲಿ ಮಾಡಬಲ್ಲನು. ಗ್ರಹಚಾರ ವಿಧಾನದಲ್ಲಿ ಎಲ್ಲಿಯೂ ಕರ್ಮವನ್ನು ತಗ್ಗಿಸುವುದಾಗಲಿ, ತಪ್ಪಿಸುವುದಾಗಲಿ ಹೇಳಲಿಲ್ಲ. ಆದರೇ ಆ ಕರ್ಮ ಹೋಗುವ ಪ್ರಕ್ರಿಯೆ ದಶಾಚಾರ ಎನ್ನುವ ವಿಧಾನದಲ್ಲಿ ಇದೆಯೆಂದು ತಿಳಿಯಬೇಕು. ಮುಖ್ಯವಾಗಿ ಹೇಳುವುದೇನೆಂದರೇ! ಇಲ್ಲಿಯವರೆಗು ಯಾವ ಜ್ಯೋತಿಷ್ಯ ಪಂಡಿತನಿಗಾದರೂ ಈ ವಿಷಯ ತಿಳಿದಿಲ್ಲ. ಜ್ಯೋತಿಷ್ಯರೆಲ್ಲರಿಗೂ ಗ್ರಹಚಾರ ತಿಳಿದಿದೆ. ಹಾಗೇ ದಶಾಚಾರ ತಿಳಿದಿದೆ. ಆದರೇ ಪ್ರಾರಬ್ಧಕರ್ಮವನ್ನು ರದ್ದುಮಾಡುವ ವಿಧಾನವಾಗಲಿ, ತಗಲಿಸುವ ವಿಧಾನವಾಗಲಿ ದಶಾಚಾರದಲ್ಲಿ ಇದೆಯೆಂದು ತಿಳಿದಿಲ್ಲ. ಜ್ಯೋತಿಷ್ಯದಲ್ಲಿ ಗ್ರಹಚಾರ, ದಶಾಚಾರ ಇರುವಂತೆ ಜ್ಯೋತಿಷ್ಯರೆಲ್ಲರಿಗೂ ತಿಳಿದಿದೆ. ಯಾರ ಜಾತಕವನ್ನು ಬರೆದರೂ ಗ್ರಹಚಾರ, ದಶಾಚಾರವೆನ್ನುವ ಎರಡು ವಿಧಾನಗಳನ್ನು ಬರೆದಿರುತ್ತಾರೆ. ಆದರೇ ಭಗವದ್ಗೀತೆಯಲ್ಲಿ ದೇವರು ಹೇಳಿದ ಕರ್ಮವನ್ನು ಸುಡುವ ವಿಧಾನ ದಶಾಚಾರದಲ್ಲಿ ಇರುವಂತೆ ಬಹುಶಃ ಯಾರಿಗೂ ತಿಳಿದಿಲ್ಲ.

ಪ್ರತಿ ಮಾನವನಿಗಿರುವ ಗ್ರಹಚಾರ, ದಶಾಚಾರಗಳಲ್ಲಿ ಅಜ್ಞಾನಿಗೆ ಗ್ರಹಚಾರ ಮುಖ್ಯ. **ಜ್ಞಾನಿಗೆ ದಶಾಚಾರ ಮುಖ್ಯ.** ಜ್ಞಾನಿಗಳಿಗೆ ಮುಖ್ಯವಾದುದು ದಶಾಚಾರವೆಂದು ಜ್ಞಾನಿಗಳೆಲ್ಲರಿಗೂ ತಿಳಿದಿಲ್ಲ. ಆದ್ದರಿಂದ ಈಗ ಈ ಗ್ರಂಥದ ಮೂಲಕ ಜ್ಞಾನಿಗಳಾದವರೆಲ್ಲರೂ ತಮ್ಮ ಕರ್ಮವನ್ನು ದಶಾಚಾರದಲ್ಲಿ ರದ್ದು ಮಾಡಿಕೊಳ್ಳಬಹುದೆಂದು ತಿಳಿಯಬಹುದು. ಜ್ಞಾನಿಗಳಿಗೆ ಎಷ್ಟೋ ಮುಖ್ಯವಾದ ದಶಾಚಾರವನ್ನು ಕುರಿತು ಎಲ್ಲಾ ಆಗದಿದ್ದರೂ, ಸ್ವಲ್ಪಮಟ್ಟಿಗಾದರೂ ತಿಳಿದು ಕೊಳ್ಳುವುದಕ್ಕೆ ಪ್ರಯತ್ನಿಸೋಣ. ಒಬ್ಬ ಮನುಷ್ಯನಿಗೆ ಗ್ರಹಚಾರ ಆತನ ತಲೆಯಲ್ಲಿನ ಕರ್ಮ, ಕಾಲ, ಗುಣಚಕ್ರಗಳನ್ನನುಸರಿಸಿ ತಿಳಿಯಬಹುದು. ಗ್ರಹಚಾರವನ್ನು ತಿಳಿಯುವುದಕ್ಕೆ ಪಂಚಾಂಗದಲ್ಲಿನ ಐದು ಅಂಗಗಳಾದ (ಭಾಗಗಳಾದ) ತಿಥಿ, ವಾರ, ನಕ್ಷತ್ರ, ಯೋಗ, ಕರಣಗಳಲ್ಲಿ ಮುಖ್ಯವಾಗಿ ಉಪಯೋಗಪಡುವುದು ಒಂದು ಇದೆ. ಅದೇ ನಕ್ಷತ್ರ. ನಕ್ಷತ್ರ ಎನ್ನುವುದು ಐದು ಅಂಗಗಳಲ್ಲಿ ಮಧ್ಯದಲ್ಲಿರುವುದು. ಪಂಚಾಂಗಗಳಿಗೆ ಮಧ್ಯದಲ್ಲಿರುವುದರಿಂದ ನಕ್ಷತ್ರ ಪಂಚಾಂಗಕ್ಕೆ ಕೇಂದ್ರದಂತಾದ್ದು. ತಿಥಿ, ವಾರ, ನಕ್ಷತ್ರ, ಯೋಗ, ಕರಣವೆನ್ನುವ ಐದು ಹೆಸರುಗಳಲ್ಲಿ ನಕ್ಷತ್ರ ಎನ್ನುವ ಹೆಸರು ಪ್ರತ್ಯೇಕತೆ ಇರುವುದಾಗಿ ತಿಳಿಯುತ್ತಿದೆ. ಕ್ಷತ್ರ ಎಂದರೆ ಛತ್ರಿ ಎಂದು ಅರ್ಥ. ಇನ್ನೂ ವಿವರವಾಗಿ ಹೇಳಿಕೊಂಡರೆ ಕ್ಷೇತ್ರಕ್ಕೆ ನೆರಳು ಕೊಡುವುದು ಕ್ಷತ್ರಿಯೆಂದಾಗಲಿ, ಕ್ಷತ್ರ ಎಂದಾಗಲಿ ಹೇಳಬಹುದು. ಛತ್ರಿ ಇಲ್ಲದಿರುವುದನ್ನು, ಯಾವ ನೆರಳನ್ನೂ ಕೊಡದ ಬಯಲನ್ನು ನಕ್ಷತ್ರ ಎನ್ನುತ್ತೇವೆ.

ಆಕಾಶದಲ್ಲಿ ಚಂದ್ರ, ಸೂರ್ಯ, ನಕ್ಷತ್ರಗಳು ಮೂರು ಮಾತ್ರವೇ ಕಾಣಿಸುತ್ತಿರುತ್ತವೆ. ಪ್ರಕಾಶವನ್ನು ಹೊಂದಿ ಸೂರ್ಯ, ಚಂದ್ರ, ನಕ್ಷತ್ರಗಳು ಮೂರು ಕಾಣಿಸುವುದರಿಂದ ಸ್ವಲ್ಪ ವಿವರವಿದೆ. ಸೂರ್ಯ, ಚಂದ್ರ ಇಬ್ಬರು ಒಂದೇ ಗ್ರಹ ಕುಟುಂಬದವರೇ, ಕಾಣಿಸುವ ನಕ್ಷತ್ರ ಮಾತ್ರ ಗ್ರಹ ಕುಟುಂಬದ್ದಲ್ಲ, ಯಾರ ಅಧಿಪತ್ಯ ಇಲ್ಲದವನು ದೇವರು. ಹಾಗೇ ಯಾರ ಕ್ಷತ್ರದ ಕೆಳಗೆ, ಯಾರ ಕ್ಷತ್ರದ ಅಧೀನದಲ್ಲಿ ಇಲ್ಲದಿರುವುದು ನಕ್ಷತ್ರ. ನಕ್ಷತ್ರ ಎನ್ನುವ ಹೆಸರನ್ನು

ಅನುಸರಿಸಿ ಅದನ್ನು ದೇವರಿಗೆ ಪ್ರತಿಯಾಗಿ (ಪ್ರತಿರೂಪವಾಗಿ) ಹೇಳಿಕೊಳ್ಳ ಬಹುದು. ಹೊರಗೆ ಕಾಣಿಸುವ ಸೂರ್ಯ ಚಂದ್ರ ಗ್ರಹಗಳಿಗೆ ಆಧಾರ, ನಿರ್ಮಾಪಕ ದೇವರು ಎನ್ನುವಂತೆ ಸೂರ್ಯ ಚಂದ್ರರು ಇಲ್ಲದ ಅಮಾವಾಸ್ಯೆ ದಿನ ಕೂಡಾ ನಕ್ಷತ್ರಗಳು ಕಾಣಿಸುತ್ತಿರುತ್ತವೆ. ಸೂರ್ಯ ಚಂದ್ರರು ಇಲ್ಲದಂತೆ ಹೋದಾಗ ಕೂಡಾ ನಕ್ಷತ್ರ ಇರುವುದರಿಂದ ನಕ್ಷತ್ರ ಶಾಶ್ವತವಾದ ದೇವರಿಗೆ ಪ್ರತಿರೂಪವಾಗಿ ಹೇಳಿಕೊಳ್ಳುತ್ತಿದ್ದೇವೆ. ಮನುಷ್ಯನ ತಲೆಯಲ್ಲಿ ಕಾಲಚಕ್ರದಲ್ಲಿ ಕಾಣಿಸದಂತೆ ಒಳಗೊಂಡಿರುವ ಸೂರ್ಯ ಚಂದ್ರ ಮುಂತಾದ ಗ್ರಹ ಕುಟುಂಬಕ್ಕೆಲ್ಲ ನಕ್ಷತ್ರ ಆಧಾರವಾಗಿದೆ. ಆದ್ದರಿಂದ ನಕ್ಷತ್ರದ ಆಧಾರದಿಂದಲೇ ಗ್ರಹಚಾರವನ್ನು ತಿಳಿಯಬಹುದು. ನಕ್ಷತ್ರ ಆಧಾರದ ಮೇಲೆಯೇ ಗ್ರಹಗಳು ಪ್ರಯಾಣಿಸುತ್ತಿವೆ. ಪಂಚಾಂಗದಲ್ಲಿ ಕೂಡಾ ಮಧ್ಯದಲ್ಲಿ ನಕ್ಷತ್ರವಿದ್ದು ಇತ್ತ ತಿಥಿ, ವಾರಕ್ಕೆ ಅತ್ತ ಯೋಗ, ಕರಣಗಳಿಗೆ ಕೇಂದ್ರವಾಗಿ ಆಧಾರವಾಗಿದೆ. ಜ್ಯೋತಿಷ್ಯದಲ್ಲಿ ಎಷ್ಟೋ ಪ್ರಾಮುಖ್ಯವಿರುವುದು ನಕ್ಷತ್ರ. ಹೊರಗೆ ಪ್ರಪಂಚದಲ್ಲಿ ಸೂರ್ಯ ಚಂದ್ರರು ಪ್ರಕಾಶಿಸುವ ಗ್ರಹಗಳಾಗಿ ಕಾಣಿಸಿದರೂ ಹಾಗೆಯೇ ಗ್ರಹ ಎನ್ನುವ ಹೆಸರಿಲ್ಲದೇ ನಕ್ಷತ್ರ ಕಾಣಿಸಿದರೂ ಸೂರ್ಯ ಚಂದ್ರರಿರುವಂತೆ ನಕ್ಷತ್ರವಿಲ್ಲ. ಜ್ಯೋತಿಷ್ಯದಲ್ಲಿ ಸೂರ್ಯ ಚಂದ್ರರು ಎಲ್ಲಿಗೆ ಹೋದರೂ ಅಲ್ಲಿ ನಕ್ಷತ್ರವಿರುತ್ತದೆ. ದೇವರು ಕಾಣಿಸದಂತೆ ಪ್ರಪಂಚವೆಲ್ಲಾ ವ್ಯಾಪಿಸಿರುವಂತೆ, ಲಗ್ನ ಕುಂಡಲಿಯಲ್ಲಿ ಎಲ್ಲಾ ಲಗ್ನಗಳಲ್ಲಿ ನಕ್ಷತ್ರ ಕಾಣಿಸದಂತಿದ್ದು ಸೂರ್ಯಚಂದ್ರ ಮುಂತಾದ ಹನ್ನೆರಡು ಗ್ರಹಗಳಿಗೆ ಆಧಾರವಾಗಿದೆ. ದೇವರಿಗೆ ಆಕಾರವಿಲ್ಲದ ಹಾಗೆ, ಜ್ಯೋತಿಷ್ಯದಲ್ಲಿ ನಕ್ಷತ್ರಕ್ಕು ಕೂಡಾ ಆಕಾರವಿಲ್ಲ. ನಕ್ಷತ್ರ ದ್ವಾದಶ ಲಗ್ನಗಳ ಸ್ಥಳವೆಲ್ಲವೂ ಆಕ್ರಮಿಸಿ ಅನೇಕ ಹೆಸರುಗಳಿಂದ ಕರೆಯಲ್ಪಡುತ್ತಿದೆ. ಹೀಗೆ ಎಷ್ಟೋ ವಿಶಿಷ್ಟತೆ ಹೊಂದಿದ ನಕ್ಷತ್ರ ದಶಾಚಾರಕ್ಕೆ ಮೂಲವಾಗಿದೆ. ದಶಾಚಾರವನ್ನು ತಿಳಿಯುವುದಕ್ಕೆ ನಕ್ಷತ್ರವೊಂದರ ಆಧಾರದಿಂದಲೇ ನೋಡಬೇಕು.

ಆಧ್ಯಾತ್ಮಿಕ ವಿದ್ಯೆಯಾದ ಬ್ರಹ್ಮವಿದ್ಯಾಶಾಸ್ತ್ರದ ಪ್ರಕಾರ ದೇವರನ್ನು ವಿಭಜಿಸಿದರೆ ಮೂರು ಆತ್ಮಗಳಾಗಿ ಹೇಳಬಹುದು. ಅಂದರೇ ದೇವರು ಮೂರು

ಆತ್ಮಗಳಾಗಿದ್ದಾನೆಂದು ತಿಳಿಯುತ್ತಿದೆ. ದೇವರು ಜೀವಾತ್ಮ ಆತ್ಮಗಳಾಗಿ ಇರುವುದಲ್ಲದೆ ತನ್ನ ಇರುವಿಕೆ ತಿಳಿಯುವಂತೆ ಮೂರನೆ ಆತ್ಮವಾದ ಪರಮಾತ್ಮನಾಗಿ ಕೂಡಾ ಇದ್ದಾನೆ. ಹೆಸರುಗಳಾಗಿ ವಿಭಜಿಸಿ 27 ಭಾಗಗಳಾಗಿರುವ ನಕ್ಷತ್ರಕ್ಕೆ 27 ಹೆಸರುಗಳಿಟ್ಟು ಹೇಳುವುದು ನಡೆದಿದೆ. ಮೂರು ಆತ್ಮಗಳಾಗಿದ್ದಲ್ಲಿಯೂ ದೇವರಿಂದ ವಿಭಜಿಸಲ್ಪಟ್ಟಿರುವವೇ ಮೂರು ಆತ್ಮಗಳು. ಅದೇ ವಿಧವಾಗಿ 27 ಭಾಗಗಳಾಗಿ 27 ಹೆಸರುಗಳಿಂದಿರುವ ನಕ್ಷತ್ರಗಳೆಲ್ಲ ಒಂದೇ ನಕ್ಷತ್ರವೆಂದು ತಿಳಿಯಬೇಕು. ಮೊದಲು ಏಕವಾಗಿರುವ ದೇವರು ಸೃಷ್ಠಿಯಲ್ಲಿ ಮೂರು ಆತ್ಮಗಳಾಗಿ ತಯಾರಾಗಿದ್ದಾನೆ. ಅದೇ ವಿಧವಾಗಿ ಮೊದಲು ಏಕವಾಗಿರುವ ನಕ್ಷತ್ರ ಮೂರಾಗಿ ವಿಭಜಿಸಲ್ಪಟ್ಟಿದೆ. ಹಾಗೆ ವಿಭಜಿಸಲ್ಪಟ್ಟಿರುವವೇ 1) ಅಶ್ವಿನಿ 2) ಭರಣಿ 3) ಕೃತ್ತಿಕ ಎಂದು ತಿಳಿಸುತ್ತಿದ್ದೇವೆ. ಅಶ್ವಿನಿ ಜೀವಾತ್ಮಗೆ ಗುರುತಾಗಿ, ಭರಣಿ ಆತ್ಮಗೆ ಗುರುತಾಗಿ, ಮೂರನೆಯದಾದ ಕೃತ್ತಿಕ ಪರಮಾತ್ಮಗೆ ಗುರುತಾಗಿದೆ. ಗಣಿತದ ಪ್ರಕಾರ ಸಂಖ್ಯೆಗಳಲ್ಲಿ 3 ಜೀವಾತ್ಮಗೆ ಗುರುತೆಂದು, 6 ಆತ್ಮಗೆ ಗುರುತೆಂದು, 9 ಪರಮಾತ್ಮಗೆ ಗುರುತೆಂದು ಇದಕ್ಕು ಮುನ್ನ **"ಸೃಷ್ಠಿಕರ್ತ ಕೋಡ್"** ಎಂಬ ಗ್ರಂಥದಲ್ಲಿ ಬರೆದಿದ್ದೇವೆ. ಜ್ಯೋತಿಷ್ಯಶಾಸ್ತ್ರದಲ್ಲಿ 1, 2, 3 ಸಂಖ್ಯೆಗಳಲ್ಲಿ 3ನ್ನು ದೇವರಾಗಿ ಗುರುತಿಸಿದ್ದೇವೆ. ಗಣಿತಶಾಸ್ತ್ರದಲ್ಲಿ ಎಲ್ಲಾ ಅಂಕೆಗಳಿಗೆಲ್ಲ ದೊಡ್ಡದಾದ 9 ಸಂಖ್ಯೆಯನ್ನು ದೇವರಾಗಿ ಹೇಳುವುದು ನಡೆದಿದೆ. ಈಗ ನಾವು ಜ್ಯೋತಿಷ್ಯವನ್ನು ಹೇಳುತ್ತಿದ್ದೇವೆ ಆದ್ದರಿಂದ ಈ ಶಾಸ್ತ್ರದ ಪ್ರಕಾರ 3 ಸಂಖ್ಯೆಯನ್ನು ಮುಖ್ಯವಾಗಿ ತೆಗೆದುಕೊಳ್ಳುತ್ತಿದ್ದೇವೆ. ಮೂರು ಸಂಖ್ಯೆಗಳಲ್ಲಿ 1) ಅಶ್ವಿನಿ 2) ಭರಣಿ 3) ಕೃತ್ತಿಕ ಆಗಿ ಇವೆ. ಈ ಮೂರನ್ನು ಗಣಿತದಲ್ಲಿ ದೊಡ್ಡದಾದ ದೇವರಿಗೆ ಗುರುತಾಗಿರುವ 9ರಿಂದ ಹೆಚ್ಚಿಸಬೇಕಾಗಿದೆ. ಆಗ 3 x 9 = 27 ಆಗುತ್ತದೆ. 27 ಸಂಖ್ಯೆಯಲ್ಲಿ ಜೀವಾತ್ಮಗೆ ಸಂಬಂಧಿಸಿರುವವು ಕೆಲವು ನಕ್ಷತ್ರಗಳಾಗಿ, ಆತ್ಮಗೆ ಸಂಬಂಧಿಸಿರುವವು ಕೆಲವು ನಕ್ಷತ್ರಗಳಾಗಿ, ಪರಮಾತ್ಮಗೆ ಸಂಬಂಧಿಸಿರುವವು ಕೆಲವು ನಕ್ಷತ್ರಗಳಾಗಿ ಏರ್ಪಡಿಸಲ್ಪಟ್ಟಿವೆ. 27 ನಕ್ಷತ್ರಗಳನ್ನು ಹೇಗೆ ವಿಭಜಿಸಿದ್ದಾರೋ ಈಗ ತಿಳಿದುಕೊಳ್ಳೋಣ.

| (ಜೀವಾತ್ಮ) | (ಆತ್ಮ) | (ಪರಮಾತ್ಮ) |
|---|---|---|
| 1) ಅಶ್ವಿನಿ | 2) ಭರಣಿ | 3) ಕೃತ್ತಿಕ |
| 4) ರೋಹಿಣಿ | 5) ಮೃಗಶಿರ | 6) ಆರಿದ್ರಾ |
| 5) ಪುನರ್ವಸು | 8) ಪುಷ್ಯಮಿ | 9) ಆಶ್ಲೇಷ |
| 6) ಮಖ | 11) ಪುಬ್ಬ | 12) ಉತ್ತರ |
| 7) ಹಸ್ತ | 14) ಚಿತ್ತ | 15) ಸ್ವಾತಿ |
| 16) ವಿಶಾಖ | 17) ಅನೂರಾಧ | 18) ಜೇಷ್ಟ |
| 19) ಮೂಲ | 20) ಪೂರ್ವಾಷಾಢ | 21) ಉತ್ತರಾಷಾಢ |
| 22) ಶ್ರವಣ | 23) ಧನಿಷ್ಟ | 24) ಶತಭೀಷಂ |
| 25) ಪೂರ್ವಾಭಾದ್ರ | 26) ಉತ್ತರಾಭಾದ್ರ | 27) ರೇವತಿ |

ಈ ವಿಧವಾಗಿ ನಕ್ಷತ್ರಗಳು ಜೀವಾತ್ಮ, ಆತ್ಮ, ಪರಮಾತ್ಮ ಎನ್ನುವ ಮೂರು ಭಾಗಗಳಾಗಿ ವಿಭಜಿಸಲ್ಪಟ್ಟಿವೆ. ಒಂದು ಲಗ್ನಕ್ಕೆ $2\frac{1}{4}$ ನಕ್ಷತ್ರವನ್ನು ನಿರ್ಣಯಿಸಿದಂತೆ ಇಲ್ಲಿ ಅದೇ ವಿಧವಾಗಿ $2\frac{1}{4}$ ಲಗ್ನ ಎಂದರೆ 9 ನಕ್ಷತ್ರ ಪಾದಗಳನ್ನು ಒಂದೊಂದು ಗ್ರಹಕ್ಕೆ ನಿರ್ಣಯಿಸಿ ಆ ಗ್ರಹದ ಹೆಸರಿನಿಂದಲೇ ಕೆಲವು ದಶಾ ಸಂವತ್ಸರಗಳನ್ನು ನಿರ್ಣಯಿಸುವುದು ನಡೆದಿದೆ. ದೈವ ಜ್ಞಾನಿಗಳಿಗಾಗಿ ಜ್ಯೋತಿಷ್ಯದಲ್ಲಿ ದಶಾಸಂವತ್ಸರಗಳನ್ನು ಏರ್ಪಡಿಸುವುದು ನಡದಿದೆ. ಅಜ್ಞಾನಿಗಳಿಗಾಗಿ 12 ಲಗ್ನಗಳನ್ನು ತಯಾರು ಮಾಡಿ ಒಂದೊಂದು ಲಗ್ನಕ್ಕೆ $2\frac{1}{4}$ ನಕ್ಷತ್ರವನ್ನು (9 ನಕ್ಷತ್ರ ಪಾದಗಳನ್ನು) ನಿರ್ಣಯಿಸಿದಂತೆ, ಜ್ಞಾನಿಗಳಿಗಾಗಿ 12 ದಶಗಳನ್ನು ಗ್ರಹಗಳ ಹೆಸರಿನಿಂದ ತಯಾರು ಮಾಡಿ, ಆ ಗ್ರಹದ ಹೆಸರಿನಿಂದಿರುವ ದಶಗಳಿಗೆ ಒಟ್ಟು 120 ಸಂವತ್ಸರಗಳನ್ನು ನಿರ್ಣಯಿಸುವುದು ನಡೆದಿದೆ. ಜ್ಯೋತಿಷ್ಯ ಗ್ರಂಥವನ್ನು ನೋಡಿದರೆ ಹನ್ನೆರಡು ಲಗ್ನಗಳು, ಹನ್ನೆರಡು ಗ್ರಹಗಳು, ಹನ್ನೆರಡು ದಶಗಳು, ಹನ್ನೆರಡು ಹತ್ತುಗಳ (120) ವರ್ಷಗಳು ಕಾಣಿಸುತ್ತಿವೆ.

# 38 ಒಳ್ಳೆಯ ದಶಗಳು – ಕೆಟ್ಟ ದಶಗಳು

ಗ್ರಹಚಾರವನ್ನು ನೋಡುವುದಕ್ಕೆ ಹನ್ನೆರಡು ಲಗ್ನಗಳನ್ನು ನೋಡಿದಂತೆ ದಶಾಚಾರವನ್ನು ನೋಡುವುದಕ್ಕೆ ಲಗ್ನಗಳನ್ನೂ, ಅವುಗಳಲ್ಲಿನ ನಕ್ಷತ್ರಗಳನ್ನೂ ನೋಡಬೇಕಾಗಿರುತ್ತದೆ. ಹುಟ್ಟಿದ ಸಮಯವನ್ನು ನೋಡಿ ಜಾತಕ ಲಗ್ನವನ್ನು ತಿಳಿದುಕೊಂಡಂತೆ ದಶಗಳನ್ನು ತಿಳಿಯುವುದಕ್ಕು ಕೂಡಾ ಹುಟ್ಟಿದ ಸಮಯವನ್ನನು ಸರಿಸಿ ತಿಳಿಯಬೇಕಾದ ಅವಶ್ಯಕತೆಯಿದೆ. ಹುಟ್ಟಿದ ಸಮಯದಲ್ಲಿರುವ ನಕ್ಷತ್ರವನ್ನನು ಸರಿಸಿ ಚಂದ್ರನು ಎಷ್ಟನೇ ಲಗ್ನದಲ್ಲಿದ್ದಾನೋ, ಎಷ್ಟನೇ ನಕ್ಷತ್ರ ಪಾದದಲ್ಲಿದ್ದಾನೋ ತಿಳಿದಂತೆ ಒಬ್ಬ ಮನುಷ್ಯನ ದಶಗಳನ್ನು ತಿಳಿಯುವುದಕ್ಕು ಕೂಡಾ ಹುಟ್ಟಿದ ಸಮಯವನ್ನು ಅನುಸರಿಸಿ ಆ ದಿನ ನಡೆಯುತ್ತಿರುವ ನಕ್ಷತ್ರವನ್ನು ಅನುಸರಿಸಿ ದಶಗಳನ್ನು ತಿಳಿಯಬಹುದು. ಜನನ ಸಮಯದಲ್ಲಿರುವ ಲಗ್ನವನ್ನು ಆ ದಿನ ಪಂಚಾಂಗದಲ್ಲಿ ತಿಳಿಯಬಹುದು. ಪಂಚಾಂಗದಲ್ಲಿನ ಲಗ್ನವನ್ನು ತಿಳಿದಷ್ಟು ಮಾತ್ರಕ್ಕೆ ಆ ಲಗ್ನ ಎಷ್ಟನೇ ಪಾದ (ಭಾಗ)ದಲ್ಲಿ ಜನ್ಮಿಸಿರುವುದು ಸ್ವಲ್ಪ ಗಣಿತವನ್ನು ಉಪಯೋಗಿಸಿ ತಿಳಿಯಬೇಕು. ಹಾಗೆ ತಿಳಿಯುವುದಕ್ಕೆ ಹಿಂದಿನ ದಿನದಂದು ಕಳೆದ ನಕ್ಷತ್ರವನ್ನು ತೆಗೆದುಕೊಂಡು ಅದು ಆ ದಿನ ಕಳೆದು ಹೋದಾಗ, ಹಿಂದಿನ ದಿನದಂದು ಕಳೆದ ಜನ್ಮದಿನ ನಕ್ಷತ್ರವನ್ನು ತಿಳಿದು, ಹಾಗೇ ಪಂಚಾಂಗದ ಪ್ರಕಾರ ಮನುಷ್ಯ ಹುಟ್ಟಿದ ಸಮಯದವರೆಗು ಕಳೆದ ನಕ್ಷತ್ರವನ್ನು ತಿಳಿದು ಹಿಂದಿನ ದಿನ ಕಳೆದ ಮತ್ತು ಪ್ರಸ್ತುತ ದಿನ ಕಳೆದ ನಕ್ಷತ್ರವನ್ನು ಬೆರೆಸಿದಾಗ ಒಟ್ಟಾರೆ ಕಳೆದ ನಕ್ಷತ್ರ ತಿಳಿದುಹೋಗುತ್ತದೆ. ಆಗ ಆ ದಿನ ನಕ್ಷತ್ರ ಎಷ್ಟರವರೆಗಿ ದೆಯೋ ಪಂಚಾಂಗದಲ್ಲಿ ನೋಡಿ ಪಂಚಾಂಗದ ಪ್ರಕಾರ ಕಳೆದಿರುವುದು ತೆಗೆದುಹಾಕಿದಾಗ ನಡೆಯಬೇಕಾಗಿರುವುದು ಉಳಿದುಹೋಗುತ್ತದೆ. ಉಳಿದು ಹೋಗಿರುವುದನ್ನು ಅನುಸರಿಸಿಯಾದರೂ ಅಥವಾ ನಡೆದಿರುವುದನ್ನು ಅನುಸರಿಯಾದರೂ ಆ ದಿನ ಜನನ ಸಮಯಕ್ಕೆ ನಕ್ಷತ್ರ ಎಷ್ಟನೇ ಪಾದದಲ್ಲಿರುವುದು ತಿಳಿದುಹೋಗುತ್ತದೆ. ಆ ದಿನ ನಕ್ಷತ್ರವನ್ನನುಸರಿಸಿ ಹನ್ನೆರಡು ದಶಗಳಲ್ಲಿ ಪ್ರಸ್ತುತ ನಡೆಯುತ್ತಿರುವ ದಶ ಯಾವುದು? ಎಂದು ತಿಳಿಯಬಹುದು. ಜನ್ಮದಲ್ಲಿರುವ ದಶಯನ್ನು ತಿಳಿದರೂ ಅದರ ಹಿಂದೆ ಬರುವ ದಶೆಗಳು ಏನೆಂದು, ಅವು

ಎಷ್ಟು ವರ್ಷಗಳು ಕಳೆಯಬೇಕಾಗಿದೆಯೆಂದು ತಿಳಿಯುತ್ತದೆ. ಈಗ ಉದಾಹರಣೆಗೆ 2009ನೇ ವರ್ಷ ಅಷ್ಟಮಿ ಮಂಗಳವಾರ 17ನೇ ತಾರೀಖು ಬೆಳಿಗ್ಗೆ 9 ಗಂಟೆಗಳಿಗೆ ಜನ್ಮಿಸಿದ ರಂಗಯ್ಯ ಜಾತಕವನ್ನನುಸರಿಸಿ ಆತನು ಜನ್ಮಿಸಿದ ಸಮಯದಲ್ಲಿರುವ ಅನೂರಾಧಾ ನಕ್ಷತ್ರ ಎರಡನೆ ಪಾದವನ್ನು ಅನುಸರಿಸಿ ಆತನಿಗಿರುವ ದಶಗಳನ್ನು ಅವುಗಳ ಸಂವತ್ಸರಗಳನ್ನು ತಿಳಿದುಕೊಳ್ಳೋಣ. ಕಾಲಚಕ್ರದಲ್ಲಿ ಮೇಷದಿಂದ ಹಿಡಿದು ಮೀನದವರೆಗು ಹನ್ನೆರಡು ಭಾಗಗಳು ಇರುವಂತೆ, ಮನುಷ್ಯನ ದಶಗಳಲ್ಲಿ ಹನ್ನೆರಡು ಗ್ರಹಗಳು ಇವೆ. ಮೇಷಲಗ್ನದಲ್ಲಿ ಎಷ್ಟು ನಕ್ಷತ್ರ ಪಾದಗಳಿವೆಯೋ ಅವುಗಳಲ್ಲಿ ಜನ್ಮಿಸಿರುವ ಅದೇ ಸೂರ್ಯ ದಶಗೆ ಪ್ರಾರಂಭವಾಗುತ್ತದೆ. ಹಾಗೇ ಹನ್ನೆರಡು ಲಗ್ನಗಳಿಗೆ ನಕ್ಷತ್ರಗಳಿವೆ ಅಲ್ಲವೆ! ಆ ನಕ್ಷತ್ರಗಳಿಂದಲೇ ದಶಾ ಸಂವತ್ಸರಗಳನ್ನು ತೋರಿಸುವುದು ನಡೆಯುತ್ತದೆ ಕೆಳಗೆ ನೋಡಿರಿ.

| | | | | | | | |
|---|---|---|---|---|---|---|---|
| ಅಶ್ವಿನಿ | – 4, | ಭರಣಿ | – 4, | ಕೃತ್ತಿಕ | – 1 | = | ಸೂರ್ಯದಶ |
| ಕೃತ್ತಿಕ | – 3, | ರೋಹಿಣಿ | – 4, | ಮೃಗಶಿರ | – 2 | = | ಚಂದ್ರದಶ |
| ಮೃಗಶಿರ | – 2, | ಆರಿದ್ರಾ | – 4, | ಪುನರ್ವಸು | – 3 | = | ಕುಜದಶ |
| ಪುನರ್ವಸು | – 1, | ಪುಷ್ಯ | – 4, | ಆಶ್ಲೇಷ | – 4 | = | ರಾಹುದಶ |
| ಮಖ | – 4, | ಪುಬ್ಬ | – 4, | ಉತ್ತರ | – 1 | = | ಗುರುದಶ |
| ಉತ್ತರ | – 3, | ಹಸ್ತ | – 4, | ಚಿತ್ತ | – 2 | = | ಭೂಮಿದಶ |
| ಚಿತ್ತ | – 2, | ಸ್ವಾತಿ | – 4, | ವಿಶಾಖ | – 3 | = | ಶನಿದಶ |
| ವಿಶಾಖ | – 1, | ಅನೂರಾಧಾ | – 4, | ಜೇಷ್ಠ | – 4 | = | ಬುಧದಶ |
| ಮೂಲ | – 4, | ಪೂರ್ವಾಷಾಢ | 4, | ಉತ್ತರಾಷಾಢ | –1 | = | ಕೇತುದಶ |
| ಉತ್ತರಾಷಾಢ | –3, | ಶ್ರವಣಂ | – 4, | ಧನಿಷ್ಟ | – 2 | = | ಶುಕ್ರದಶ |
| ಧನಿಷ್ಟ | – 2, | ಶತಭಿಷಂ | – 4, | ಪೂರ್ವಾಭಾದ್ರ | –3 | = | ಮಿತ್ರದಶ |
| ಪೂರ್ವಾಭಾದ್ರ | –1, | ಉತ್ತರಭಾದ್ರ | – 4, | ರೇವತಿ | – 4 | = | ಚಿತ್ರದಶ |

ಈ ವಿಧವಾಗಿ ನಕ್ಷತ್ರಗಳನ್ನನುಸರಿಸಿ ದಶಗಳನ್ನು ಗುರುತಿಸಬಹುದು. ಯಾವ ನಕ್ಷತ್ರದಲ್ಲಿ ಜನ್ಮಿಸಿದರೆ ಯಾವ ದಶ ಬರುತ್ತದೊ ತಿಳಿಯಬಹುದು. ಇದರಿಂದ ರಂಗಯ್ಯ ಹುಟ್ಟಿದ ಸಮಯದಲ್ಲಿ ಅನೂರಾಧ ನಕ್ಷತ್ರ ಎರಡನೆ ಪಾದ ಇರುವುದರಿಂದ ಆತನದ್ದು ಬುಧದಶಯೆಂದು ಹೇಳಬಹುದು. ಮನುಷ್ಯ ಮರಣಿಸಿದ ತಕ್ಷಣ ಎರಡನೆ ಜನ್ಮಕ್ಕೆ ಹೋಗುವನೆಂದು ಹೇಳಿಕೊಂಡಿದ್ದೇವೆ. ಮರಣ ನಡೆದ ನಂತರ ಜನ್ಮಕ್ಕೆ ಹೋಗುವದರೊಳಗೆ ಎಷ್ಟುಕಾಲ ಕಳೆಯಬಹುದು ಎಂದು ಪ್ರಶ್ನೆ ಬಂದರೆ ಒಂದು ಸೆಕೆಂಡು ಕಾಲ ಕೂಡಾ ಪೂರ್ತಿಯಾಗಿ ಇರುವುದಿಲ್ಲವೆಂದೇ ಹೇಳಬಹುದು. ಮರಣಾ ನಂತರ ಜನ್ಮಿಸಬೇಕಾದ ಸ್ಥಳ ಹತ್ತುಸಾವಿರ ಕಿಲೋಮೀಟರ್‌ಗಳ ದೂರದಲ್ಲಿದ್ದರೂ, ಅಥವಾ ಅದಕ್ಕಿಂತ ಹೆಚ್ಚಾಗಿ ಖಂಡಾಂತರದಲ್ಲಿದ್ದರೂ, ಇನ್ನೂ ಹೆಚ್ಚಾಗಿ ಗ್ರಹಾಂತರಗಳಲ್ಲಿದ್ದರೂ ಒಂದು ಸೆಕೆಂಡು ಕಾಲ ಕೂಡಾ ಪೂರ್ತಿಯಾಗಿ ಹಿಡಿಸುವುದಿಲ್ಲವೆಂದು, ಮರಣಿಸಿದ ಕೂಡಲೇ ಎಲ್ಲಿಯಾದರೂ ಜನ್ಮಿಸುತ್ತಾನೆಂದು ಹೇಳಿಕೊಂಡಿದ್ದೇವೆ. ಯಾವುದೇ ಆಲಸ್ಯವಿಲ್ಲದೆ ಮರಣಿಸಿದ ಕ್ಷಣದಲ್ಲಿಯೇ ಜನ್ಮಿಸಿದಲ್ಲಿಯೂ, ಅದಕ್ಕಿಂತ ಹೆಚ್ಚು ವೇಗದಿಂದ ಸಂಚಿತ ಕರ್ಮ ಪ್ರಾರಬ್ಧವಾಗಿ ಬದಲಾಯಿಸಿ ಹಾಕಲ್ಪಡುತ್ತದೆ. ಯಾರ ಊಹೆಗೂ ಸಿಗದಷ್ಟು ವೇಗವಾಗಿ ಒಂದು ಜೀವನಕ್ಕೆ ಸರಿಹೋಗುವ ಪ್ರಾರಬ್ಧಕರ್ಮವನ್ನು ಸಂಚಿತದಿಂದ ನಿರ್ಣಯಿಸಲ್ಪಡುತ್ತದೆ. ಮರಣಿಸಿದ ಜೀವಿಯು ಗತಜನ್ಮದಲ್ಲಿ ಕಾಲಚಕ್ರವನ್ನನುಸರಿಸಿ ಕರ್ಮಚಕ್ರವನ್ನನುಸರಿಸಿ ಗುಣಚಕ್ರದಲ್ಲಿ ಎಲ್ಲಿರುತ್ತಾನೊ, ಯಾವ ಬದಲಾವಣೆಯಿಲ್ಲದೆ ಅಲ್ಲಿಯೇಯಿದ್ದು ಜನ್ಮಿಸುತ್ತಾನೆ. ಕಾಲಚಕ್ರ, ಕರ್ಮಚಕ್ರ, ಗುಣಚಕ್ರಗಳ ಸಮುದಾಯದಲ್ಲಿ ಯಾವ ಬದಲಾವಣೆ ಇಲ್ಲದೆ ಜನ್ಮ ಉಂಟಾಗುತ್ತಿದೆ. ಅಷ್ಟೇ ಅಲ್ಲದೆ ಹೋದ ಜನ್ಮದಲ್ಲಿ ಯಾವ ದಶಯಲ್ಲಿದ್ದು ಮರಣಿಸಿರುತ್ತಾನೊ, ಅದೇ ದಶಯಲ್ಲಿಯೇ ಮರುಜನ್ಮ ಕೂಡಾ ಇರುತ್ತದೆ. ಒಂದು ದಶಾಕಾಲ ಹತ್ತು ವರ್ಷಗಳಿದ್ದು ಅದರಲ್ಲಿ ಮೂರು ವರ್ಷಗಳ, ನಾಲ್ಕು ತಿಂಗಳ, ಹತ್ತು ದಿನಗಳು ಕಳೆದಿದ್ದರೆ ಮರುಜನ್ಮದಲ್ಲಿ ಅದೇ ದಶ ಪ್ರಾರಂಭವಾಗುತ್ತದೆ. ಹೋದ ಜನ್ಮದಲ್ಲಿ ಮುಗಿದುಹೋದ ಸ್ಥಳದಿಂದಲೇ ಪ್ರಾರಂಭವಾಗಿ ಗತದಲ್ಲಿ ಆ ದಶಯಲ್ಲಿ ನಡೆಯಬೇಕಾದ ಆರು ವರ್ಷಗಳ,

ಏಳು ತಿಂಗಳ ಇಪ್ಪತ್ತು ದಿನಗಳು ಕಳೆದ ನಂತರ ಎರಡನೇ ದಶ ಪ್ರಾರಂಭವಾಗುತ್ತದೆ. ಜನ್ಮದಲ್ಲಿ ಕರ್ಮ ಬದಲಾದರೂ ಕಾಲಚಕ್ರ ಲಗ್ನಗಳಾಗಲಿ, ದಶಾ ಸಂವತ್ಸರಗಳಾಗಲಿ, ಗುಣಚಕ್ರದಲ್ಲಿನ ಗುಣಗಳಾಗಲಿ ಬದಲಾಗುವುದಿಲ್ಲ. ಇದಕ್ಕು ಮುನ್ನ ಯಾವ ನಕ್ಷತ್ರದಲ್ಲಿ ಹುಟ್ಟಿದವರು ಯಾವ ದಶಯಲ್ಲಿ ಹುಟ್ಟುತ್ತಾರೋ ತಿಳಿದುಕೊಂಡಿದ್ದೇವೆ. ಈಗ ಯಾವ ದಶ ಎಷ್ಟು ವರ್ಷಗಳ ಪರಿಮಾಣವಿದೆಯೋ ತಿಳಿದುಕೊಳ್ಳೋಣ.

ಒಬ್ಬ ಮನುಷ್ಯನ ಜೀವನದವೊಂದು ಪರಿಮಾಣವು 120 ವರ್ಷಗಳಾಗಿ ನಿರ್ಣಯಿಸಲ್ಪಟ್ಟಿದೆ. 120 ವರ್ಷಗಳಲ್ಲಿ ಒಬ್ಬ ಮನುಷ್ಯ ಎಷ್ಟುಬಾರಿ ಮರಣಿಸಿದರೂ, ಎಷ್ಟು ಬಾರಿ ಹೊಸ ಜನ್ಮಕ್ಕೆ ಹೋದರೂ ಅವುಗಳನ್ನು ದೇವರ ದೃಷ್ಠಿಯಲ್ಲಿ ಅಷ್ಟು ಜನ್ಮಗಳಾಗಿ ಲೆಕ್ಕಿಸಲ್ಪಡುವುದಿಲ್ಲ. 120 ವರ್ಷಗಳಿಗೆ ಒಂದು ಜನ್ಮವಾಗಿ ಲೆಕ್ಕಿಸುವುದಕ್ಕೆ ನಿರ್ಣಯ ಮಾಡಲಾಗಿದೆ. 120 ವರ್ಷಗಳು ಕಳೆದರೇನೆ ಒಂದು ಜೀವನ ಅಥವಾ ಒಂದು ಜನ್ಮವಾಗಿ ಲೆಕ್ಕಿಸುವುದಕ್ಕೆ ಶಾಸನ ಮಾಡಲ್ಪಟ್ಟಿದೆ. ಮನುಷ್ಯನಿಗಾದರೂ ಬೇರೆ ಪ್ರಾಣಿಗಾದರೂ, ಇತರ ಕ್ರಿಮಿಗಾದರೂ ಒಂದೇ ನಿರ್ಣಯದ ಪ್ರಕಾರ 120 ವರ್ಷಗಳಿಗೊಂದುಬಾರಿ ಜನ್ಮವಾಗಿ ಗುರುತಿಸಬಹುದು. 120 ವರ್ಷಗಳಲ್ಲಿ ಒಂದು ಪ್ರಾಣಿ ಅಥವಾ ಒಂದು ಮೃಗ ಮೂವತ್ತುಬಾರಿ ಮರಣಿಸಿ ಮತ್ತೆ ಜನ್ಮಿಸಿದರೂ ಅವೆಲ್ಲವೂ ಎಲ್ಲಾ ಜನ್ಮಗಳಾಗಿ ಲೆಕ್ಕಿಸಲ್ಪಡದೆ ಒಂದೇ ಜನ್ಮವಾಗಿ ಲೆಕ್ಕಿಸಲ್ಪಡುತ್ತದೆ. ಅದಕ್ಕೆ ಸೂತ್ರವಿದೆ. ಮಾನವನ ಗ್ರಹಚಾರದಲ್ಲಿ ಹನ್ನೆರಡು ಗ್ರಹಗಳಿರುವಂತೇ, ದಶಾಚಾರದಲ್ಲಿ ಕೂಡಾ ಹನ್ನೆರಡು ದಶಗಳಿವೆ. ಹನ್ನೆರಡು ದಶಗಳು ಒಂದುಬಾರಿ ಮುಗಿದುಹೋಗುವುದಕ್ಕೆ ಒಟ್ಟು 120 ವರ್ಷಗಳ ಕಾಲ ಹಿಡಿಸುತ್ತದೆ. ಹಾಗೆ ಹನ್ನೆರಡು ದಶಗಳು ಒಂದುಬಾರಿ ತಿರುಗಿದಾಗಲೇ ಒಂದು ಜನ್ಮವಾಗಿ ಲೆಕ್ಕಿಸಬಹುದು. ಸೂರ್ಯ ದಶಯಿಂದ ಪ್ರಾರಂಭವಾದ ದಶ ಪುನಃ ಅವನ ಜೀವನದಲ್ಲಿ ಬರುವುದಕ್ಕೆ 120 ವರ್ಷಗಳ ಕಾಲ ಹಿಡಿಸುತ್ತಿದೆ. ಆದ್ದರಿಂದ ಯಾರಿಗಾದರೂ 120 ವರ್ಷಗಳಿಗೆ ಒಂದುಬಾರಿ

ಜನ್ಮವೆಂದು ಲೆಕ್ಕಿಸಬೇಕು. ಮನುಷ್ಯನ ಜೀವನದಲ್ಲಿ ಹನ್ನೆರಡು ದಶಗಳಿವೆಯೆಂದು ತಿಳಿದುಕೊಂಡಿದ್ದೇವೆ ಅಲ್ಲವೆ! ಹನ್ನೆರಡು ದಶಗಳು ಸೇರಿ ಒಟ್ಟು 120 ವರ್ಷಗಳೆಂದು ಹೇಳಿಕೊಂಡಿದ್ದೇವೆ ಅಲ್ಲವೇ! ಆದರೇ ಹನ್ನೆರಡು ದಶಗಳ ಕಾಲ ಸಮಾನವಾಗಿ ಇದೆಯಾ? ಅಥವಾ ಒಂದೊಂದು ದಶ ಒಂದೊಂದು ಕಾಲಪರಿಮಿತಿ ಹೊಂದಿದೆಯಾ ಎನ್ನುವ ಪ್ರಶ್ನೆಗೆ ಉತ್ತರವನ್ನು ತಿಳಿದುಕೊಳ್ಳೋಣ. ಗ್ರಹಚಾರದಲ್ಲಿನ ಹನ್ನೆರಡು ಗ್ರಹಗಳಲ್ಲಿ ಆರು ಗ್ರಹಗಳು ಮಿತ್ರರಾಗಿ, ಆರು ಗ್ರಹಗಳು ಶತ್ರುಗಳಾಗಿರುವಂತೆ, ದಶಗಳಲ್ಲಿ ಕೂಡಾ ಆರು ದಶಗಳು ಒಳ್ಳೆಯವಾಗಿ, ಆರು ದಶಗಳು ಕೆಟ್ಟವಾಗಿ ಇವೆ. ಅವುಗಳನ್ನು ಕೆಳಗೆ ನೋಡೋಣ.

ಒಬ್ಬ ಮನುಷ್ಯನ ಜನನ ಕಾಲ ಯಾವ ಲಗ್ನದಲ್ಲಿ ನಡೆದರೂ ಆ ಲಗ್ನವನ್ನು ಅನುಸರಿಸಿ ಹನ್ನೆರಡು ಗ್ರಹಗಳಲ್ಲಿ ಆರು ಮಿತ್ರರಾಗಿ, ಆರು ಶತ್ರುಗಳಾಗಿ ಇರುತ್ತಾರೆಂದು ತಿಳಿದುಕೊಂಡಿದ್ದೇವೆ. ಮಿತ್ರರೆಂದರೇ ಪುಣ್ಯವನ್ನು ಕೊಟ್ಟು ಸುಖವಾಗಿಡುವವರು. ಶತ್ರುಗಳೆಂದರೇ ಪಾಪವನ್ನು ಜಾರಿ ಮಾಡಿ ಕಷ್ಟಕೊಡುವ ವರು ಎಂದು ಅರ್ಥ. ಜನನ ಕಾಲ ಲಗ್ನವನ್ನು ಅನುಸರಿಸಿ ಮಿತ್ರರಾಗಿ ಮತ್ತು ಶತ್ರುಗಳಾಗಿರುವ ಗ್ರಹಗಳನ್ನೇ ದಶಾಚಾರದಲ್ಲಿ ಕೂಡಾ, ಮಿತ್ರ ಶತ್ರುಗಳಾಗಿ ಲೆಕ್ಕಿಸಿಕೊಳ್ಳಬೇಕು. 2009ನೇ ವರ್ಷ ಫೆಬ್ರವರಿ 17ನೇ ತಾರೀಖು ಅಷ್ಟಮಿ ಮಂಗಳವಾರ ಜನ್ಮಿಸಿದ ರಂಗಯ್ಯ ಎಂಬ ವ್ಯಕ್ತಿ ಯೊಬ್ಬನ ಜನನ ನಕ್ಷತ್ರವನ್ನನು ಸರಿಸಿ ಜನ್ಮದಲ್ಲಿಯೇ ಆತನದ್ದು ಬುಧದಶ ಎಂದು ತಿಳಿದುಹೋಗಿದೆ. ಈಗ ರಂಗಯ್ಯನಿಗೆ ಯಾವ ದಶ ಒಳ್ಳೆಯದೋ, ಯಾವ ದಶ ಒಳ್ಳೆಯದಲ್ಲವೊ ತಿಳಿದುಕೊಳ್ಳೋಣ. ಜನನ ಸಮಯದಲ್ಲಿರುವ ಲಗ್ನ ಮೀನ ಲಗ್ನವಾಗುವುದರಿಂದ ಮೀನ ಲಗ್ನಕ್ಕೆ ಯಾರು ಮಿತ್ರರೋ, ಯಾರು ಶತ್ರುಗಳೊ ಅವರೇ ದಶಗಳಲ್ಲಿಯೂ ಮಿತ್ರ ಶತ್ರುಗಳಾಗಿ ಹೇಳಲ್ಪಡುತ್ತಾರೆ. ಅದರ ಪ್ರಕಾರ ಮೀನ ಲಗ್ನಕ್ಕೆ ಮಿತ್ರರು ಶತ್ರುಗಳು ಕೆಳಗಿನ ವಿಧವಾಗಿ ಇದ್ದಾರೆ.

| **ಮಿತ್ರರು** | | **ಶತ್ರುಗಳು** |
|---|---|---|
| ಗುರು | 1x7 | ಬುಧ |
| ಕುಜ | 1x7 | ಶುಕ್ರ |
| ಚಂದ್ರ | 1x7 | ರಾಹು |
| ಸೂರ್ಯ | 1x7 | ಶನಿ |
| ಭೂಮಿ | 1x7 | ಮಿತ್ರ |
| ಕೇತು | 1x7 | ಚಿತ್ರ |

ರಂಗಯ್ಯ ಎನ್ನುವ ವ್ಯಕ್ತಿಗೆ ಜಾತಕದ ಪ್ರಕಾರ ಗುರು, ಕುಜ, ಚಂದ್ರ, ಸೂರ್ಯ, ಭೂಮಿ, ಕೇತು ಎನ್ನುವ ಆರು ಗ್ರಹಗಳು ಅನುಕೂಲರಾಗಿ, ಉಳಿದ ಬುಧ, ಶುಕ್ರ, ರಾಹು, ಶನಿ, ಮಿತ್ರ, ಚಿತ್ರ ಎನ್ನುವ ಆರು ಗ್ರಹಗಳು ವಿರೋಧಿಗಳಾಗಿದ್ದಾರೆ. ಇವರ ಹೆಸರಿನಿಂದಲೇ ದಶಗಳಿರುವುದರಿಂದ ಆಯಾ ಗ್ರಹಗಳ ದಶಗಳಲ್ಲಿ ಒಳ್ಳೆಯವಾಗಿ ಕೆಲವು, ಕೆಟ್ಟವಾಗಿ ಕೆಲವು ಇವೆಯೆಂದು ಹೇಳಬಹುದು. ಮಿತ್ರ ಶತ್ರು ಗ್ರಹಗಳನ್ನು ಅನುಸರಿಸಿ ರಂಗಯ್ಯನಿಗೆ ಆರು ಅನುಕೂಲವಾದ ದಶಗಳು, ಆರು ಅನುಕೂಲವಿಲ್ಲದ ದಶಗಳಿವೆಯೆಂದು ಹೇಳಬಹುದು. ಇಲ್ಲಿಯವರೆಗು ನಕ್ಷತ್ರವನ್ನು ಅನುಸರಿಸಿ ದಶಗಳು, ಅವುಗಳಲ್ಲಿ ಅನುಕೂಲ ಅನಾನುಕೂಲ ದಶಗಳನ್ನು ತಿಳಿದುಕೊಂಡಿದ್ದೇವೆ. ಈಗ ಯಾವ ದಶ ಎಷ್ಟು ಕಾಲ ಇರುತ್ತದೋ ವಿವರವಾಗಿ ತಿಳಿದುಕೊಳ್ಳೋಣ.

## 39 ದಶಗಳ ಕಾಲಗಳು

ಕೆಲವರು ಮಾತುಗಳ ಸಂದರ್ಭದಲ್ಲಿ "ಅವನ ದಶ ಚೆನ್ನಾಗಿದೆ, ಆದ್ದರಿಂದ ಅವನು ಮುಟ್ಟಿದ್ದೆಲ್ಲಾ ಚಿನ್ನವಾಗುತ್ತದೆ" ಎಂದು ಹೇಳುತ್ತಿರುತ್ತಾರೆ. ಬಹಳಜನರಿಗೆ ಅವರ ಗ್ರಹಚಾರಗಳ ಮೇಲೆ ನಂಬಿಕೆಯಿಲ್ಲದಿದ್ದರೂ, ಅವರ ಗ್ರಹಚಾರವನ್ನು ಕುರಿತು ಅವರಿಗೆ ತಿಳಿಯದಿದ್ದರೂ ದಶಗಳಲ್ಲಿಯೇ ಚೆನ್ನಾಗಿ

ನಡೆಯುತ್ತದೆಂದು ಅಂದುಕೊಳ್ಳುತ್ತಿರುತ್ತಾರೆ. ಕೆಲವರು ಜ್ಯೋತಿಷ್ಯರು ಕೂಡಾ ಗ್ರಹಚಾರಕ್ಕಿಂತ ಒಳ್ಳೆಯ ದಶಗಳಲ್ಲಿಯೇ ಚೆನ್ನಾಗಿ ನಡೆಯುತ್ತದೆಂದು ಹೇಳುತ್ತಿರುತ್ತಾರೆ. ಜ್ಯೋತಿಷ್ಯ ವಿಷಯ ತಿಳಿಯದವರು ಕೂಡಾ ದಶ ಚೆನ್ನಾಗಿದ್ದರೆ ಏನಾದರೂ ನಡೆಯುತ್ತದೆಂದು, ಎಷ್ಟು ಲಾಭವಾದರು ಬರುತ್ತದೆಂದು ಹೇಳುತ್ತಿರುತ್ತಾರೆ. ಯಾರಾದರೂ ನಷ್ಟಹೋದರೂ, ಕಷ್ಟಪಡುತ್ತಿದ್ದರೂ ಅವನನ್ನು ನೋಡಿದವರು ಅವನ ದಶ ಚೆನ್ನಾಗಿಲ್ಲ ಆದ್ದರಿಂದ ಹಾಗೆ ನಡೆಯುತ್ತದೆಂದು ಹೇಳುತ್ತಿರುತ್ತಾರೆ. ವಾಸ್ತವಕ್ಕೆ ಪ್ರಪಂಚ ಕರ್ಮಗಳಲ್ಲಿ ಮನುಷ್ಯನ ಮೇಲೆ ದಶಗಳ ಪ್ರಭಾವ ಅಷ್ಟಾಗಿ ಇರುವುದಿಲ್ಲ. ಮನುಷ್ಯ ಪಡುವ ಕಷ್ಟಗಳಿಗಾದರೂ, ಅನುಭವಿಸುವ ಸುಖಗಳಿಗಾದರೂ ಮುಖ್ಯವಾಗಿ ಗ್ರಹಚಾರವೇ ಕಾರಣವೆಂದು ಹೇಳಬಹುದು. ದಶಗಳ ಪ್ರಭಾವ ಪ್ರಪಂಚ ವಿಷಯಗಳಲ್ಲಿ ಕನಿಷ್ಟ ಶೇಕಡ ಹತ್ತರಷ್ಟು ಕೂಡಾ ಇರುವುದಿಲ್ಲ. ಕಾಲಚಕ್ರ ಲಗ್ನಗಳಲ್ಲಿ ಒಳ್ಳೆಯ ಕೆಟ್ಟ ಗ್ರಹಗಳು ತಿರುಗುತ್ತಾ ಕರ್ಮಚಕ್ರದಿಂದ ಒದಗಿಸುವ ಫಲಿತಗಳನ್ನು ಅನುಸರಿಸಿ ಮನುಷ್ಯನವೊಂದು ಕಷ್ಟಸುಖಗಳಿರುತ್ತವೆ. ಕೇವಲ ದೈವಜ್ಞಾನ ವಿಷಯ ಗಳಲ್ಲಿರುವವರಿಗೆ ಮಾತ್ರ ದಶಗಳನ್ನು ಅನುಸರಿಸಿ ಅವನ ಕರ್ಮ ರದ್ದಾಗುವುದು ಇಲ್ಲದಿರುವುದು ತಿಳಿಯುತ್ತದೆ. ಜ್ಞಾನಿಗಳಾದವರಿಗೆ ಒಳ್ಳೆಯ ದಶೆಯಲ್ಲಿ ಅವರ ಕರ್ಮಗಳು ಜ್ಞಾನಾಗ್ನಿಯಿಂದ ಹೆಚ್ಚಾಗಿ ದಹಿಸಲ್ಪಡುತ್ತವೆ. ಕೆಟ್ಟ ದಶಯಲ್ಲಿ ಕರ್ಮಗಳು ಸುಟ್ಟುಹೋಗುವುದರಲ್ಲಿ ತಡವಾಗುತ್ತದೆ. ಒಳ್ಳೆಯ ದಶೆ ಬಂದಾಗ ಜ್ಞಾನಧನ ಹೊಂದಿದವರು ಇತರರ ಕರ್ಮಗಳನ್ನಾಗಲಿ, ತಮ್ಮ ಕರ್ಮಗಳನ್ನಾಗಲಿ ಹೆಚ್ಚಾಗಿ ನಿರ್ಮೂಲಿಸಿಕೊಳ್ಳುವುದಕ್ಕೆ ಅವಕಾಶವಿದೆ. ಒಳ್ಳೆಯ ದಶಗಳಲ್ಲಿ ಬೇಸಿಗೆ ಕಾಲದಲ್ಲಿ ಒಣಗಿದ ಕಟ್ಟಿಗೆಗಳು ಸುಲಭವಾಗಿ ಸುಟ್ಟುಹೋದಂತೆ ಕರ್ಮ ಗಳು ಕೂಡಾ ತಮ್ಮ ಜ್ಞಾನಾಗ್ನಿಯಿಂದ ಸುಟ್ಟುಹೋಗುತ್ತವೆ. ಅದೇ ಕೆಟ್ಟ ದಶಯಲ್ಲಿ ಮಳೆಗಾಲದಲ್ಲಿ ತೋಯ್ದ ಕಟ್ಟಿಗೆಗಳು ಸರಿಯಾಗಿ ಸುಡದಹಾಗೆ ಕರ್ಮಗಳು ದಹಿಸುವುದರಲ್ಲಿ ಸ್ವಲ್ಪ ಆತಂಕ, ಆಲಸ್ಯ ಏರ್ಪಡುತ್ತದೆ. ದಶಗಳೆಲ್ಲ ಮನುಷ್ಯನಲ್ಲಿನ ಜ್ಞಾನ ಅಜ್ಞಾನವನ್ನು ಅನುಸರಿಸಿ ಕೆಲಸ ಮಾಡುತ್ತವೆಂದು ತಿಳಿಯಬೇಕು. ಜ್ಞಾನವಿಲ್ಲದ ಸಾಧಾರಣ ವ್ಯಕ್ತಿಗಳಿಗೆ ಕಾಲ, ಕರ್ಮಚಕ್ರಗಳಿಂದ ಲಭ್ಯವಾಗುವ

ಗ್ರಹಚಾರವನ್ನನುಸರಿಸಿ ಅವರಿಗೆ ಕಷ್ಟಸುಖಗಳಿರುತ್ತವೆ. ಯಾವ ಮನುಷ್ಯನಿಗಾದರೂ ಎಲ್ಲಾ ಅನುಕೂಲವಾಗಿ ಜೀವನ ಸಾಗುತ್ತಿದ್ದರೆ ಅದು ಅವನ ಗ್ರಹಚಾರ ಕರ್ಮಫಲವೆಂದು ತಿಳಿಯಬೇಕು. ಹಾಗಲ್ಲದೆ ಹೆಚ್ಚಾಗಿ ಕಷ್ಟಗಳು ಸಂಭವಿಸುತ್ತಾ, ಎಲ್ಲಾ ವಿಷಯಗಳಲ್ಲಿ ಆತಂಕ ಏರ್ಪಡುವುದಕ್ಕು ಕೂಡಾ ಅವನ ಗ್ರಹಚಾರವೇ ಕಾರಣ.

ಈಗ ದಶಗಳ ಕಾಲವಿಷಯಕ್ಕೆ ಬರೋಣ. ಇಲ್ಲಿಯವರೆಗು ಎಷ್ಟೋಜನ ಮೇಧಾವಿಗಳು ಜ್ಯೋತಿಷ್ಯಶಾಸ್ತ್ರವನ್ನು ಬರೆದಿದ್ದಾರೆ. ಅವರಿಗಿರುವ ಮೇಧಾಶಕ್ತಿ ಮುಂದೆ ನಾನು ಅಲ್ಪನೆಂದು ಒಪ್ಪಿಕೊಳ್ಳದೆ ತಪ್ಪುವುದಿಲ್ಲ. ಅಷ್ಟು ದೊಡ್ಡವರು ಬರೆದಿರುವುದನ್ನು ಅಲ್ಲಗಳೆದು ಅವರು ಬರೆದ ವಿಷಯಗಳು ಕೆಲವು ಶಾಸ್ತ್ರಬದ್ಧತೆ ಇಲ್ಲದಿರುವವೆಂದು ಖಂಡಿಸಿ ಪ್ರತ್ಯೇಕವಾಗಿ ಹೇಳುವುದು ನಮ್ಮ ಕೆಲಸವೇ ಹೊರತು, ನನ್ನ ಕೆಲಸ ಅಲ್ಲವೆಂದು ತಿಳಿಯಬೇಕು. ಜ್ಯೋತಿಷ್ಯ ಶಾಸ್ತ್ರವನ್ನು ಬರೆಯುವ ವಿಜ್ಞಾನವಾಗಲಿ, ಜ್ಞಾನವಾಗಲಿ ನನಗಿಲ್ಲ. ಮೇಲ್ನೋಟಕ್ಕೆ ಈ ಗ್ರಂಥಕರ್ತನಾಗಿ ನಾನು ಕಾಣಿಸಿದರೂ, ವಾಸ್ತವಕ್ಕೆ ಶರೀರದಲ್ಲಿ ಮರ್ಮವಾಗಿದ್ದು ಎಲ್ಲಿಯೂ, ಯಾರಿಗೂ ತಿಳಿಯದವನಾದ ಆತ್ಮವನ್ನು ಎಲ್ಲರೂ ತಿಳಿಯಬೇಕು. ಆತನಿಗೆ ತಿಳಿಯದಿರುವುದು ಏನೂಯಿಲ್ಲ. ಆದ್ದರಿಂದ ಇಲ್ಲಿ ಓದುವ ವಿಷಯಗಳು ಸತ್ಯವೆಂದು, ಶಾಸ್ತ್ರೀಯತೆ ಇರುವವೆಂದು ತಿಳಿದು ಓದಬೇಕು. ಗತದಲ್ಲಿ ಜ್ಯೋತಿಷ್ಯ ಗ್ರಂಥವನ್ನು ಬಹಳಜನ ಬರೆದರೂ ಅದರಲ್ಲಿ ಗ್ರಹಗಳನ್ನು ಒಂಭತ್ತು ಜನರನ್ನು ಮಾತ್ರವೇ ತೋರಿಸಿದ್ದಾರೆ. ಇಲ್ಲಿ ಮಾತ್ರ ಹನ್ನೆರಡು ಮಂದಿ ಗ್ರಹಗಳಿದ್ದಾರೆಂದು ಹೇಳುವುದು ನಡೆದಿದೆ. ದಶಗಳ ವಿಷಯದಲ್ಲಿ ಒಟ್ಟು 120 ವರ್ಷಗಳು ಹೇಳಿದರೂ 120 ಸಂಖ್ಯೆಯನ್ನು ಒಂಭತ್ತು ಜನರಿಗೆ ಸರಿಮಾಡಿ ಹೇಳಿದ್ದಾರೆ. ಅವರು ಹೇಳಿದ ಗ್ರಂಥಗಳಲ್ಲಿ ಹೀಗೆ ಇದೆ.

| | | | |
|---|---|---|---|
| 1) ಸೂರ್ಯನ ದಶ | – 6 ಸಂ॥ | 6) ಶನಿದಶ | – 19 ಸಂ॥ |
| 2) ಚಂದ್ರ ದಶ | – 10 ಸಂ॥ | 7) ಬುಧದಶ | – 17 ಸಂ॥ |
| 3) ಕುಜ ದಶ | – 7 ಸಂ॥ | 8) ಕೇತುದಶ | – 7 ಸಂ॥ |

4) ರಾಹು ದಶ – 18 ಸಂ॥ 9) ಶುಕ್ರದಶ – 20 ಸಂ॥

5) ಗುರು ದಶ – 16 ಸಂ॥

ಒಂಭತ್ತು ಗ್ರಹಗಳನ್ನು ಕ್ರೂರರಾಗಿ, ಸೌಮ್ಯರಾಗಿ ಹೇಳಿ ಅದರಲ್ಲಿ ಐದನ್ನು ಕ್ರೂರ ಗ್ರಹಗಳಾಗಿ, ನಾಲ್ಕು ಸೌಮ್ಯ ಗ್ರಹಗಳಾಗಿ ವಿಭಜಿಸಿದ್ದಾರೆ. ಸೂರ್ಯ, ಕುಜ, ಶನಿ, ರಾಹು, ಕೇತು ಕ್ರೂರರೆಂದು, ಗುರು, ಚಂದ್ರ, ಶುಕ್ರ, ಬುಧರು ಸೌಮ್ಯರೆಂದು ಹೇಳುವುದು ನಡೆದಿದೆ. ಆದರೇ ಈಗ ನಾವು ಬರೆದ ಗ್ರಂಥದಲ್ಲಿ ಕರ್ಮವಿಲ್ಲದ ಆತ್ಮಗಳು, ಕರ್ಮವಿರುವ ಆತ್ಮಯೆನ್ನುವ ಪದ್ಧತಿಯಿಂದ 2:1 ಎನ್ನುವ ಸೂತ್ರದಿಂದ ಗ್ರಹಗಳನ್ನು ಎರಡು ಗುಂಪುಗಳಾಗಿ ವಿಭಜಿಸಿದ್ದೇವೆ. ಈ ಎರಡು ಗುಂಪುಗಳಲ್ಲಿ ಮನುಷ್ಯರ ಕರ್ಮಗಳನ್ನನುಸರಿಸಿ ಗ್ರಹಗಳು ಕ್ರೂರರಾಗಿ, ಸೌಮ್ಯರಾಗಿ ಇಲ್ಲವೆ ಶತ್ರುಗಳಾಗಿ, ಮಿತ್ರರಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಿದ್ದೇವೆ. ಇದೆಲ್ಲವೂ ಮೊದಲು ಬರೆದವರಿಗೆ ವಿರುದ್ಧವಾಗಿ ಕಾಣಿಸಿದರೂ, ವಾಸ್ತವಕ್ಕೆ ಇದು ಸತ್ಯ ಮತ್ತು ಶಾಸ್ತ್ರಬದ್ಧ. ಈಗ ಹೇಳುವ ದಶಗಳ ಸಂವತ್ಸರಗಳು ಕೂಡಾ ಬಹಳ ವ್ಯತ್ಯಾಸವಾಗಿರುತ್ತವೆ. ಆದರೂ ಸತ್ಯವೆನ್ನುವ ಉದ್ದೇಶದಿಂದ ಓದಿರಿ. ಶಾಸ್ತ್ರಬದ್ಧವಾಗಿ ಇದೆಯೋ ಇಲ್ಲವೋ ನೋಡಿರಿ.

| | | | |
|---|---|---|---|
| 1) ಸೂರ್ಯದಶ | – 10 ಸಂ॥ | 7) ಶನಿದಶ | – 13 ಸಂ॥ |
| 2) ಚಂದ್ರದಶ | – 10 ಸಂ॥ | 8) ಬುಧದಶ | – 10 ಸಂ॥ |
| 3) ಕುಜ ದಶ | – 7 ಸಂ॥ | 9) ಕೇತುದಶ | – 7 ಸಂ॥ |
| 4) ರಾಹುದಶ | – 10 ಸಂ॥ | 10) ಶುಕ್ರದಶ | – 13 ಸಂ॥ |
| 5) ಗುರುದಶ | – 13 ಸಂ॥ | 11) ಮಿತ್ರದಶ | – 7 ಸಂ॥ |
| 6) ಭೂಮಿದಶ | – 13 ಸಂ॥ | 12) ಚಿತ್ರ ದಶ | – 7 ಸಂ॥ |
| ಒಟ್ಟು ಸಂ॥ | 63 | ಒಟ್ಟು ಸಂ॥ | 57 |

ಇಲ್ಲಿ ಹನ್ನೆರಡು ದಶಗಳ ಸಂವತ್ಸರಗಳನ್ನು ಹೇಳಿಕೊಂಡಿದ್ದೇವೆ. ಒಂದು ಕಡೆ ಗುರು ನಾಯಕತ್ವದಲ್ಲಿನ ಗ್ರಹಗಳು ವರಸೆ ಕ್ರಮದಲ್ಲಿ ಸೂರ್ಯ, ಚಂದ್ರ, ಕುಜ, ಗುರು, ಭೂಮಿ, ಗ್ರಹಗಳು ಐದು ಇರುವಾಗ, ಅವುಗಳ ಮಧ್ಯದಲ್ಲಿ ಶನಿ ಗುಂಪಿನಲ್ಲಿನ ರಾಹು ಇರುವುದು ನಡೆದಿದೆ. ಅವುಗಳ ಮೊತ್ತ 63 ಸಂ॥ ಬಂದಿದೆ. ಹಾಗೇ ಎರಡನೆ ಕಡೆ ಶನಿ ನಾಯಕತ್ವದಲ್ಲಿನ ಗ್ರಹಗಳು ವರಸೆ ಕ್ರಮವಾಗಿ ಶನಿ, ಬುಧ, ಶುಕ್ರ, ಮಿತ್ರ, ಚಿತ್ರ ಎನ್ನುವ ಐದು ಗ್ರಹಗಳಿರುವಾಗ ಅವುಗಳ ಮಧ್ಯದಲ್ಲಿ ಗುರು ಪಾರ್ಟಿಯಲ್ಲಿನ ಕೇತು ಬಂದು ಬೆರೆತುಹೋಗಿದೆ. ಅವುಗಳ ಮೊತ್ತ 57 ಸಂ॥ ಬಂದಿದೆ. ಮೊದಲ ವರಸೆಯಲ್ಲಿನ ಗುರುಪಾರ್ಟಿ ಗ್ರಹಗಳಲ್ಲಿ ಬೆರೆತಿರುವ ರಾಹುವನ್ನು ತೆಗೆದುಹಾಕಿ ಆ ಸ್ಥಾನದಲ್ಲಿ ಕೇತುವನ್ನು ಇರಿಸಿ ನೋಡಿದರೆ ಒಟ್ಟಾರೆ ಗುರುಪಾರ್ಟಿಯಲ್ಲಿನ ಆರು ಗ್ರಹಗಳ ದಶಾ ಸಂವತ್ಸರಗಳು ಖಚಿತವಾಗಿ 60 ಸಂವತ್ಸರಗಳು ಬರುತ್ತವೆ. ಹಾಗೇ ಎರಡನೆ ಕಡೆ ಇರುವ ಶನಿ ಪಾರ್ಟಿಯಲ್ಲಿನ ಗ್ರಹಗಳಲ್ಲಿ ಬೆರೆತಿರುವ ಕೇತುವನ್ನು ತೆಗೆದುಹಾಕಿ ಅದರಲ್ಲಿ ರಾಹುವನ್ನು ಸೇರಿಸಿ ನೋಡಿದರೆ ಶನಿಪಾರ್ಟಿಯಲ್ಲಿನ ಆರುಗ್ರಹಗಳ ದಶಾ ಸಂವತ್ಸರಗಳು ಖಚಿತವಾಗಿ 60 ವರ್ಷಗಳು ಬರುತ್ತಿವೆ.


| | | | |
|---|---|---|---|
| 1) ಸೂರ್ಯ ದಶ | – 10 ಸಂ॥ | 7) ಶನಿ ದಶ | – 13 ಸಂ॥ |
| 2) ಚಂದ್ರ ದಶ | – 10 ಸಂ॥ | 8) ಬುಧ ದಶ | – 10 ಸಂ॥ |
| 3) ಕುಜ ದಶ | – 7 ಸಂ॥ | 9) ರಾಹು ದಶ | – 10 ಸಂ॥ |
| 4) ಕೇತು ದಶ | – 7 ಸಂ॥ | 10) ಶುಕ್ರ ದಶ | – 13 ಸಂ॥ |
| 5) ಗುರು ದಶ | – 13 ಸಂ॥ | 11) ಮಿತ್ರ ದಶ | – 7 ಸಂ॥ |
| 6) ಭೂಮಿ ದಶ | – 13 ಸಂ॥ | 12) ಚಿತ್ರ ದಶ | – 7 ಸಂ॥ |
| ಒಟ್ಟು ಸಂ॥ | 60 | ಒಟ್ಟು ಸಂ॥ | 60 |

**ದಶಾ ಸಂವತ್ಸರಗಳು ವರಸೆ ಕ್ರಮವಾಗಿ ಬರೆದುಕೊಂಡರೆ ಹೀಗೆ ಇವೆ.**

| | | | |
|---|---|---|---|
| 1. | ಸೂರ್ಯ ದಶ ಕಾಲ | – | 10 ಸಂವತ್ಸರಗಳು |
| 2. | ಚಂದ್ರ ದಶ ಕಾಲ | – | 10 ಸಂವತ್ಸರಗಳು |
| 3. | ಕುಜ ದಶ ಕಾಲ | – | 7 ಸಂವತ್ಸರಗಳು |
| 4. | ರಾಹು ದಶ ಕಾಲ | – | 10 ಸಂವತ್ಸರಗಳು |
| 5. | ಗುರು ದಶ ಕಾಲ | – | 13 ಸಂವತ್ಸರಗಳು |
| 6. | ಭೂಮಿ ದಶ ಕಾಲ | – | 13 ಸಂವತ್ಸರಗಳು |
| 7. | ಶನಿ ದಶ ಕಾಲ | – | 13 ಸಂವತ್ಸರಗಳು |
| 8. | ಬುಧ ದಶ ಕಾಲ | – | 10 ಸಂವತ್ಸರಗಳು |
| 9. | ಕೇತು ದಶ ಕಾಲ | – | 7 ಸಂವತ್ಸರಗಳು |
| 10. | ಶುಕ್ರ ದಶ ಕಾಲ | – | 13 ಸಂವತ್ಸರಗಳು |
| 11. | ಮಿತ್ರ ದಶ ಕಾಲ | – | 7 ಸಂವತ್ಸರಗಳು |
| 12. | ಚಿತ್ರ ದಶ ಕಾಲ | – | 7 ಸಂವತ್ಸರಗಳು |

ಈ ವರಸೆ ಕ್ರಮದಲ್ಲಿಯೇ ಜಾತಕನ ದಶಗಳ ಕಾಲ ಜಾರಿಗೆ ಬರುತ್ತದೆಂದು ತಿಳಿದುಕೊಳ್ಳಬೇಕು. ಮೊದಲು ಒಂಭತ್ತು ಗ್ರಹಗಳ ಜ್ಯೋತಿಷ್ಯಕ್ಕೆ, ಈಗ ಹನ್ನೆರಡು ಗ್ರಹಗಳ ಜ್ಯೋತಿಷ್ಯಕ್ಕೆ ಸ್ವಲ್ಪ ವ್ಯತ್ಯಾಸ ಇರುವುದನ್ನು ಗಮನಿಸಬಹುದು. ಮೊದಲು ಬರೆದುಕೊಂಡ ದಶಗಳಲ್ಲಿ ಗುರುದಶ ಮುಗಿದು ಹೋಗುತ್ತಲೇ ಶನಿದಶ ಆರಂಭವಾಗುತ್ತಿದೆ. ಆದರೇ ಇಲ್ಲಿ ಹೊಸ ವಿಧಾನದಲ್ಲಿ ಗುರುದಶ ಮುಗಿದು ಹೋಗುತ್ತಲೇ ಭೂಮಿದಶ ಪ್ರಾರಂಭವಾಗುತ್ತಿದೆ ಯೆಂದು ತಿಳಿದು ಕೊಳ್ಳಬೇಕು. ಹನ್ನೆರಡು ಗ್ರಹಗಳನ್ನು ಅನುಸರಿಸಿ ಬರೆಯುವ ಹೊಸ ಜಾತಕದಲ್ಲಿ ಪ್ರಸ್ತುತ ನಾವು ಮೇಲೆ ಬರೆದ ದಶಗಳನ್ನು ಅವುಗಳ ಸಂವತ್ಸರಗಳನ್ನು ಉಪಯೋಗಿಸಿ ಬರೆದುಕೊಳ್ಳಬೇಕಾಗಿ ತಿಳಿಸುತ್ತಿದ್ದೇವೆ.

ಸೂರ್ಯ, ಚಂದ್ರ ಮುಂತಾದ ಗುರುಪಕ್ಷದಲ್ಲಿನ ಗ್ರಹಗಳಲ್ಲಿ ಶನಿಪಕ್ಷ ರಾಹು ಬೆರೆತಿರುವುದೇ ಸರಿಯಾದ ಪದ್ಧತಿಯಾಗಿ ದೇವರು ಇಟ್ಟಿದ್ದಾನೆ. ಹಾಗೇ ಶನಿ, ಬುಧನು ಮುಂತಾದ ಶನಿಪಕ್ಷ ಗ್ರಹಗಳಿರುವ ಶನಿ ಪಕ್ಷದಲ್ಲಿ ಕೇತುವು ಇರುವುದೇ ಸರಿಯಾದ ಪದ್ಧತಿಯೆಂದು ದೇವರೇ ಆ ವಿಧವಾಗಿ ಇಟ್ಟಿದ್ದಾನೆ. ರಾಹು ಶನಿ ಪಕ್ಷದವನಾಗಿದ್ದು ದಶಗಳಲ್ಲಿ ಮಾತ್ರ ಗುರುಪಕ್ಷದಲ್ಲಿ ಇರುವುದು ಒಳ್ಳೆಯದೆಂದು ಏಕೆ ಹೇಳುತ್ತಿದ್ದೇವೆಂದರೇ! ಹನ್ನೆರಡು ಗ್ರಹಗಳು ಎರಡು ಗುಂಪುಗಳಾಗಿದ್ದರೂ ಆ ಗುಂಪಿನ ನಾಯಕರು ಒಂದುಕಡೆ ಗುರುವೂ ಮತ್ತೊಂದು ಕಡೆ ಶನಿ ಇರುವಾಗ, ಶನಿ ಗುಂಪಿನಲ್ಲಿನ ರಾಹು, ಗುರುಪಕ್ಷದಲ್ಲಿನ ಕೇತು ಇಬ್ಬರೂ ನಾಯಕತ್ವ ಲಕ್ಷಣಗಳು ಹೊಂದಿದ್ದಾರೆ. ಅಷ್ಟೇ ಅಲ್ಲದೆ ಎರಡು ಗುಂಪುಗಳಲ್ಲಿ ಯಾರು ತಮ್ಮ ಕೆಲಸವನ್ನು ಸಕ್ರಮವಾಗಿ ನಿರ್ವಹಿಸದಿದ್ದರೂ, ಆಯಾಸವನ್ನಾಗಲಿ, ಆಲಸ್ಯವನ್ನಾಗಲಿ ಪ್ರದರ್ಶಿಸಿದರೂ ಎರಡು ಕಡೆಯವರನ್ನು ದಂಡಿಸುವ ನಾಯಕತ್ವ ಇರುವವರಾಗಿದ್ದಾರೆ. ಅಷ್ಟೇ ಅಲ್ಲದೆ ಹನ್ನೆರಡು ಗ್ರಹಗಳಲ್ಲಿ ಹತ್ತು ಗ್ರಹಗಳು ಎಂದರೆ ರಾಹು ಮತ್ತು ಕೇತು ವಿನಹಾ ಎಲ್ಲರೂ ಕಾಲಚಕ್ರದಲ್ಲಿ ನಮ್ಮ ದೃಷ್ಠಿಗೆ ಎಡಗಡೆಯಿಂದ ಬಲಗಡೆಗೆ ಪ್ರಯಾಣಿಸುತ್ತಿರುವಾಗ, ರಾಹು ಮತ್ತು ಕೇತು ಇಬ್ಬರೂ ಬಲದಿಂದ ಎಡಗಡೆಗೆ ಪ್ರಯಾಣಿಸುತ್ತಿದ್ದಾರೆ. ಹತ್ತು ಗ್ರಹಗಳು ಕಾಲಚಕ್ರದಲ್ಲಿ ಎಡಗಡೆಯಿಂದ ಬಲಕ್ಕೆ ಸವ್ಯವಾಗಿ ಪ್ರಯಾಣಿಸುತ್ತಿರುವಾಗ ರಾಹು, ಕೇತು ಇಬ್ಬರೂ ಬಲದಿಂದ ಎಡಗಡೆಗೆ ಅಪಸವ್ಯವಾಗಿ ಪ್ರಯಾಣಿಸುತ್ತಿದ್ದಾರೆ. ಬಸ್ಸು ಮಾರ್ಗದಲ್ಲಿ ಒಂದುಕಡೆಗೆ ಪ್ರಯಾಣಿಸುವ ಬಸ್ಸುಗಳನ್ನು ತನಿಖೆ ಮಾಡುವುದಕ್ಕೆ ಚೆಕಿಂಗ್ ಇನ್ಸ್‌ಪೆಕ್ಟರ್‌ಗಳು ಬಸ್ಸುಗಳಿಗೆ ಎದುರಾಗಿ ಪ್ರಯಾಣಿಸುತ್ತಾ ತಮಗೆ ಎದುರಾಗುತ್ತಿರುವ ಬಸ್ಸುಗಳನ್ನು ನಿಲ್ಲಿಸಿ ಚೆಕ್ ಮಾಡಿದಂತೆ, ಹತ್ತು ಗ್ರಹಗಳಿಗೆ ಎದುರಾಗಿ ಇನ್ಸ್‌ಪೆಕ್ಟರ್‌ಗಳಂತೆ ರಾಹು, ಕೇತುಗಳು ಪ್ರಯಾಣಿಸುತ್ತಿದ್ದಾರೆ. ಹಾಗೆ ರಾಹು ಕೇತುಗಳು ಪ್ರಯಾಣಿಸುವುದರಿಂದ ಗ್ರಹಗಳೆಲ್ಲ ಜಾಗ್ರತೆಯಾಗಿ, ಉತ್ತೇಜವಾಗಿ ಕೆಲಸ ಮಾಡುತ್ತಿವೆ. ಕಾಲಚಕ್ರದಲ್ಲಿ ಹತ್ತು ಗ್ರಹಗಳು ಎಡಗಡೆಯಿಂದ ಬಲಗಡೆಗೆ, ರಾಹು, ಕೇತು ಬಲದಿಂದ ಎಡಗಡೆಗೆ ಪ್ರಯಾಣಿಸುವುದು ನಂತರ ಪುಟದಲ್ಲಿರುವ 50ನೇ ಚಿತ್ರದಲ್ಲಿ ನೋಡಬಹುದು.




50ನೇ ಚಿತ್ರ

ಮೇಲಿನ ವಿಧವಾಗಿ ಎಲ್ಲಾ ಗ್ರಹಗಳಿಗು ರಾಹು ಕೇತು ಎದುರಾಗಿ ಪ್ರಯಾಣಿಸುತ್ತಾ ಎಲ್ಲವನ್ನು ಎದುರುಗಡೆ ನೋಡುತ್ತಾ ಹೋಗುತ್ತಿವೆ. ಉಳಿದ ಹತ್ತು ಗ್ರಹಗಳು ಒಬ್ಬರ ಮುಖವನ್ನು ಒಬ್ಬರು ಎದುರಿಗೆ ನೋಡಿಕೊಳ್ಳುವುದಕ್ಕೆ ಅವಕಾಶ ಇಲ್ಲ. ಎಲ್ಲವೂ ಒಂದೇ ಕಡೆಗೆ ಪ್ರಯಾಣಿಸುತ್ತಿವೆ. ಆದ್ದರಿಂದ ಒಂದಕ್ಕೆ ಮತ್ತೊಂದರ ಬೆನ್ನು ಕಾಣಿಸುತ್ತದೆ ಆದರೆ, ಮುಖ ಕಾಣಿಸುವುದಿಲ್ಲ. ಅಷ್ಟೇ ಅಲ್ಲದೆ ಗುರು ವರ್ಗದಲ್ಲಿ ರಾಹು, ಶನಿವರ್ಗದಲ್ಲಿ ಕೇತುವು ಇರುವುದರಿಂದ ಗುರು ವರ್ಗದಲ್ಲಿನ ರಾಹುನೊಂದಿಗೆ ಸಹ ದಶಗಳ ಸಂವತ್ಸರಗಳು ಒಟ್ಟು 63 ಬರುತ್ತಿವೆ. ಹಾಗೇ ಶನಿವರ್ಗದಲ್ಲಿನ ಕೇತುವಿನೊಂದಿಗೆ ಸಹಾ ಆ ಗುಂಪಿನಲ್ಲಿನ ಗ್ರಹಗಳ ದಶಾ ಸಂವತ್ಸರಗಳು ಒಟ್ಟು 57 ಬರುತ್ತಿವೆ. ಒಬ್ಬ ಮನುಷ್ಯನ ಶರೀರದಲ್ಲಿನ ಬಲ ಎಡ ಭಾಗಗಳು ಎರಡೂ ಯಾರಿಗೂ ಸಮಾನವಾಗಿ ಇಲ್ಲದೇ, ಸ್ವಲ್ಪಮಟ್ಟಿಗೆ ಬಲಗಡೆ ಹೆಚ್ಚಾಗಿರುವುದೂ, ಎಡಗಡೆ ಸ್ವಲ್ಪ ಕಡಿಮೆಯಾಗಿರುವುದು ಎಲ್ಲರಿಗೂ ತಿಳಿದಿದೆ. ಬಲಗೈಯಿಗು, ಎಡಗೈಯಿಗು, ಬಲಗಾಲಿಗೂ ಎಡಗಾಲಿಗೂ

ಸ್ವಲ್ಪವಾದರೂ ವ್ಯತ್ಯಾಸವಿರುತ್ತದೆ. ಶರೀರದಲ್ಲಿ ಯಾವ ವಿಧವಾಗಿ ಬಲ ಎಡಗಳು ಹೆಚ್ಚು ಕಡಿಮೆಯಾಗಿ ಇವೆಯೋ, ಅದೇ ವಿಧವಾಗಿ ಗ್ರಹಗಳ ಬಲ, ಎಡ ಎರಡು ಗುಂಪುಗಳೂ ತಮ್ಮ ತಮ್ಮ ದಶಗಳ ಸಂವತ್ಸರಗಳಲ್ಲಿ ಸ್ವಲ್ಪ ವ್ಯತ್ಯಾಸವಾಗಿರುವುದಕ್ಕೆ ಗುರುವರ್ಗದಲ್ಲಿ ರಾಹುವನ್ನೂ, ಶನಿ ವರ್ಗದಲ್ಲಿ ಕೇತುವನ್ನೂ ಇಡುವುದು ನಡೆದಿದೆ.

## 40 ಹನ್ನೆರಡು ಲಗ್ನಗಳಲ್ಲಿರುವ ಹನ್ನೆರಡು ಗ್ರಹಗಳ ಕೆಲಸವೇನು?

ಕಾಲಚಕ್ರದಲ್ಲಿ ಹತ್ತು ಗ್ರಹಗಳು ಒಂದುಕಡೆ ಪ್ರಯಾಣ ಮಾಡುತ್ತಿರುವಾಗ, ರಾಹು, ಕೇತುಗಳು ಎರಡು ಮತ್ತೊಂದು ಕಡೆ ಪ್ರಯಾಣ ಮಾಡುತ್ತಿವೆಯೆಂದು ತಿಳಿದುಕೊಂಡಿದ್ದೇವೆ. ಎರಡು ಒಂದು ಕಡೆಗೆ, ಹತ್ತು ಮತ್ತೊಂದು ಕಡೆಗೆ ಪ್ರಯಾಣ ಮಾಡುತ್ತಿದ್ದರೂ, ಯಾರು ಯಾವಕಡೆ ಹೋದರೂ, ಅಷ್ಟಕ್ಕೂ ಅವರು ಮಾಡುತ್ತಿರುವ ಕೆಲಸ ಏನು? ಎಂದು ಪ್ರಶ್ನೆಬರಬಹುದು. ಆ ಪ್ರಶ್ನೆಗೆ ಉತ್ತರವಾಗಿ ನಾವು ಹೇಳುವುದೇನೆಂದರೆ! ಕಾಲಚಕ್ರದಲ್ಲಿ ಪ್ರಯಾಣ ಮಾಡುವ ಪ್ರತಿ ಗ್ರಹ ಒಂದು ಉದ್ದೇಶವನ್ನು ಹೊಂದಿ ಪ್ರಯಾಣಿಸುತ್ತಾ ಜವಾಬ್ಧಾರಿಯಿಂದ ಕೆಲಸ ಮಾಡುತ್ತಿವೆ. ನಾವು ಹೇಳಿಕೊಂಡ ಹನ್ನೆರಡು ಗ್ರಹಗಳಲ್ಲಿ ಪ್ರತಿ ಗ್ರಹಕ್ಕು ಸ್ವಲ್ಪ ಪ್ರಕಾಶವಿದೆ. ಗ್ರಹ ತನಗಿರುವ ಪ್ರಕಾಶ ಯಾವುದರ ಮೇಲೆ ಬೀಳುತ್ತದೊ, ಆಗ ಆ ಪ್ರಕಾಶ ಬಿದ್ದ ಸ್ಥಳದಲ್ಲಿ ಏನಾದರೆ ಇದೆಯೋ ಅದನ್ನು ಗ್ರಹ ಗ್ರಹಿಸುತ್ತದೆ. ಗ್ರಹಕ್ಕಿರುವ ಕಿರಣಗಳಿಂದ ಏನನ್ನಾದರೂ ಗ್ರಹಿಸುತ್ತಿದೆ. ಆದ್ದರಿಂದ ಕಿರಣಗಳನ್ನು ಗ್ರಹವೊಂದರ ಕೈಗಳಾಗಿ ಹೋಲಿಸಿಕೊಳ್ಳಬಹುದು. ಇದಕ್ಕು ಮೊದಲೇ ಗ್ರಹಗಳ ಕಿರಣಗಳ ಪ್ರಸಾರವನ್ನನುಸರಿಸಿ ಒಂಭತ್ತು ಗ್ರಹಗಳಿಗು ಎರಡು ಕೈಗಳಿವೆಯೆಂದು, ಪ್ರತ್ಯೇಕಿಸಿ ಶನಿ, ಕುಜ, ಗುರುಗಳಿಗೆ ನಾಲ್ಕು ಕೈಗಳು ಇವೆಯೆಂದು ಹೇಳಿ

ಕೊಂಡಿದ್ದೇವೆ. ಕೈಗಳು ಇವೆಯೆಂದರೇ ಯಾವುದೊ ಒಂದು ಕೆಲಸ ಮಾಡಬೇಕು. ಆದ್ದರಿಂದ ಪ್ರತಿ ಗ್ರಹವು ಬೆಳಕು ಎನ್ನುವ ತನ್ನ ಕೈಗಳಿಂದ ಕೆಳಗೆ ಕರ್ಮಚಕ್ರದಲ್ಲಿನ ಪ್ರಾರಬ್ಧಕರ್ಮವನ್ನು ತೆಗೆದುಕೊಂಡು, ಇನ್ನೂ ಕೆಳಗಿರುವ ಗುಣಚಕ್ರದಲ್ಲಿನ ಜೀವಿಯಮೇಲೆ ಕರ್ಮವನ್ನು ಬಿಡುತ್ತಿವೆ. ಆಗ ಹಾಗೆ ಬಂದಿರುವ ಕರ್ಮವನ್ನು ಜೀವಿಯು ರುಚಿ ನೋಡುತ್ತಿದ್ದಾನೆ. ಕರ್ಮ ರುಚಿ ಸಿಹಿಯಾಗಿ ಇದ್ದರೆ ಹಾಯಾಗಿ ಸುಖವನ್ನು ಅನುಭವಿಸುತ್ತಿದ್ದಾನೆ. ಒಂದುವೇಳೆ ಕರ್ಮ ರುಚಿ ಕಹಿಯಾಗಿದ್ದರೆ ದುಃಖದಿಂದ ಕಷ್ಟವನ್ನು ಅನುಭವಿಸುತ್ತಿದ್ದಾನೆ. ಜೀವಿಯು ಏನು ಅನುಭವಿಸಿದರೂ ಅದೆಲ್ಲವೂ ಗ್ರಹಗಳು ಮಾಡಿದ ಕೆಲಸವೇಯೆಂದು ಹೇಳಬಹುದು.

ಗ್ರಹಗಳು ಕರ್ಮಚಕ್ರದ ಮೇಲೆ ತಮ್ಮ ಕಿರಣಗಳನ್ನು (ಕೈಗಳನ್ನು) ಪ್ರಸರಿಸಿದಾಗ, ಅಲ್ಲಿ ಏನಿದ್ದರೆ ಅದನ್ನೇ ತೆಗೆದುಕೊಂಡು ಕೆಳಗಿರುವ ಜೀವಿಯ ನೆತ್ತಿಯ ಮೇಲೆ ಹಾಕುತ್ತಿವೆ. ಕಾಲಚಕ್ರದಲ್ಲಿನ ಗ್ರಹಗಳು ತಮ್ಮ ಕೆಲಸವನ್ನು ಮಾಡುತ್ತಾ ಅವರಿರುವ ಲಗ್ನಗಳಿಗೆ ಎದುರಿಗೆ ಇರುವ ಕರ್ಮಸ್ಥಾನಗಳಲ್ಲಿನ ಕರ್ಮವನ್ನು ಜೀವಿಗೆ ಒದಗಿಸುತ್ತಿವೆ. ಗ್ರಹಗಳು ಮಾಡುವ ಕೆಲಸದಲ್ಲಿ ಬದಲಾವಣೆಯಿಲ್ಲ. ಅವು ಯಾವಾಗಲೂ ಕೆಲಸ ಮಾಡಬೇಕಾದ್ದೆ. ಹಾಗೆಯೇ ಅನುಭವಿಸುವ ಜೀವಿಯಲ್ಲಿ ಬದಲಾವಣೆಯಿಲ್ಲ. ಅವನು ಯಾವಾಗಲೂ ಅನುಭವಿಸಬೇಕಾದ್ದೆ. ಆದರೆ ಮಧ್ಯದಲ್ಲಿರುವ ಕರ್ಮದಲ್ಲಿ ಮಾತ್ರ ಎಷ್ಟೋ ಬದಲಾವಣೆಯಿದೆ. ಹನ್ನೆರಡು ಗ್ರಹಗಳು ಕರ್ಮಚಕ್ರದಲ್ಲಿನ ಕರ್ಮವನ್ನು ಮಾತ್ರ ಸ್ವೀಕರಿಸುತ್ತಿವೆಯಾಗಲಿ, ಕರ್ಮಕ್ಕೆ ಅತೀತವಾದುದು ಏನನ್ನು ಸ್ವೀಕರಿಸಲಿಲ್ಲವೆಂದು ಹೇಳಬಹುದು. ಒಬ್ಬ ಮನುಷ್ಯನ ಜೀವನದಲ್ಲಿ ಗ್ರಹಗಳು ತಮ್ಮ ಕೆಲಸವನ್ನು ತಾವು ಮಾಡುತ್ತಿವೆ. ಜೀವಿಯು ತನ್ನ ಕೆಲಸವನ್ನು ತಾನು ಮಾಡುತ್ತಿದ್ದಾನೆ. ಜೀವಿಯ ಕೆಲಸ ಅನುಭವಿಸುವುದು ಹೊರತು ಬೇರೆ ಕೆಲಸವಿಲ್ಲ ಎಂಬ ಸೂತ್ರವನ್ನು ಮರೆಯಬಾರದು. ಕಾಲಚಕ್ರದಲ್ಲಾಗಲಿ ಪೂರ್ತಿ ಕೆಳಗಿರುವ

ಗುಣಚಕ್ರದಲ್ಲಾಗಲಿ ಪ್ರತಿ ಜನ್ಮಕ್ಕಿರುವುದೇ ಇರುತ್ತದೆ. ಆದರೇ ಒಂದೇ ಒಂದು ಕರ್ಮಚಕ್ರದಲ್ಲಿ ಮಾತ್ರ ಜನ್ಮ ಜನ್ಮಕ್ಕು ಬದಲಾವಣೆ ಇರುತ್ತದೆ. ಕರ್ಮಚಕ್ರದಲ್ಲಿನ ಕರ್ಮ ಜನ್ಮಜನ್ಮಕ್ಕು ಬದಲಾಗುತ್ತಿರುತ್ತದೆ. ಕಾಲಚಕ್ರದಲ್ಲಿನ ಗ್ರಹಗಳ ಕೆಲಸವನ್ನು ಖಚಿತವಾಗಿ ಇಷ್ಟೇಯೆಂದು ಹೇಳಬಹುದು. ಹಾಗೇ ಗುಣಚಕ್ರದಲ್ಲಿನ ಜೀವಿಯ ಕೆಲಸವನ್ನು ಕೂಡಾ ಇಷ್ಟೇ ಇದೆಯೆಂದು ಹೇಳಬಹುದು. ಆದರೇ ಕರ್ಮಚಕ್ರದಲ್ಲಿನ ಕರ್ಮ ಇಷ್ಟೇ ಇದೆಯೆಂದು ಖಚಿತವಾಗಿ ಹೇಳುವುದಕ್ಕೆ ಅವಕಾಶವಿಲ್ಲ. ಕರ್ಮಚಕ್ರದಲ್ಲಿ ಹನ್ನೆರಡು ಸ್ಥಾನಗಳಲ್ಲಿ ಯಾವ ಕರ್ಮ ಇರುತ್ತದೊ, ಆಯಾ ಸ್ಥಾನಗಳಲ್ಲಿ ಪ್ರವೇಶಿಸಿದ ಗ್ರಹಗಳು ಅಲ್ಲಿರುವ ಕರ್ಮವನ್ನೇ ಕೊಡುತ್ತವೆಂದು, ಹಾಗೆ ಕರ್ಮವನ್ನು ತೆಗೆದುಕೊಂಡು ಜೀವಿಗೆ ಕೊಡುವುದೇ ಗ್ರಹಗಳ ಕೆಲಸವೆಂದು ತಿಳಿಯುತ್ತಿದೆ.

## 41 ಗ್ರಹಗಳ ಹತ್ತಿರ ಏನೂ ಇರುವುದಿಲ್ಲವಾ?

ಕಾಲಚಕ್ರದಲ್ಲಿನ ಗ್ರಹಗಳ ಹತ್ತಿರ ಏನೂ ಇರುವುದಿಲ್ಲ. ಆದರೆ ಒಂದೊಂದು ಗ್ರಹ ಪ್ರಪಂಚದಲ್ಲಿರುವ ವಸ್ತುಗಳಾದ ವಾಹನಗಳು, ಭವನಗಳು, ಆಭರಣಗಳು, ಲೋಹಗಳು, ದ್ರವಗಳು, ಕುಲಗಳು, ಮತಗಳು ಇರುವ ಸಮಸ್ತವು ಹನ್ನೆರಡು ಭಾಗಗಳಾಗಿ ವಿಭಜಿಸಲ್ಪಟ್ಟು ಹನ್ನೆರಡು ಸಮುದಾಯಗಳಾಗಿ ಏರ್ಪಟ್ಟಿವೆ. ಹಾಗೆ ಏರ್ಪಟ್ಟವುಗಳಲ್ಲಿ ಒಂದೊಂದು ಸಮುದಾಯ ಒಂದೊಂದು ಗ್ರಹವೊಂದರ ಅಧೀನದಲ್ಲಿ ಸೇರಿಹೋಗಿ, ಅವೆಲ್ಲವೂ ಆ ಗ್ರಹವೊಂದರ ಸ್ವಂತ ಆಸ್ತಿಗಳಾಗಿವೆ. ಆದ್ದರಿಂದ ಕಾಲಚಕ್ರದಲ್ಲಿನ ಗ್ರಹಗಳ ಹತ್ತಿರ ಏನೂ ಇಲ್ಲದಿದ್ದರೂ, ಭೂಮಿ ಮೇಲಿರುವ ಸಮಸ್ತದ ಮೇಲೆ ಅಧಿಕಾರ ಇರುವವಾಗಿವೆ. ಯಾವ ಗ್ರಹ ಭೂಮಿ ಮೇಲಿರುವ ಯಾವ ವಸ್ತುಗಳ ಮೇಲೆ ಮತ್ತು ಯಾವ ಪದಾರ್ಥದ ಮೇಲೆ ಅಧಿಕಾರವಿದೆಯೋ ಸ್ವಲ್ಪಮಟ್ಟಿಗೆ ತಿಳಿದುಕೊಳ್ಳೋಣ. ಮೊದಲು ಸೂರ್ಯ ಗ್ರಹವೊಂದರ ಅಧೀನದಲ್ಲಿ ಏನಿವೆಯೋ ತಿಳಿದುಕೊಳ್ಳೋಣ.

# ಸೂರ್ಯ

ಪಿತ, ಆತ್ಮ, ತನುವು, ರಾಜ್ಯ, ಪ್ರಭಾವ, ಧೈರ್ಯ, ಅಧಿಕಾರ, ನೇತ್ರ, ಪಿತ್ತ, ಶೂರತ್ವ, ಶಕ್ತಿ, ವಿದೇಶ ಪರ್ಯಟನೆ, ಜ್ಞಾನ ತೇಜ, ಪರಾಕ್ರಮ, ಉಷ್ಣ, ಅಗ್ನಿ, ಧರ್ಮ ಧ್ಯಾಸ, ಹೊಟ್ಟೆ, ಕಣ್ಣು, ಪಾಲನಾಶಕ್ತಿ, ಪ್ರಭುತ್ವ ಭೂಮಿಗಳು, ಕೋರ್ಟು ವ್ಯವಹಾರಗಳು, ಬಂಜರು ಭೂಮಿಗಳು, ದುಂಡಾದ ಆಕಾರವಿರುವ ಹೊಲಗಳು ರಾರಾಜು ಯೋಚನೆ, ಗ್ರಾಮ ಅಧೀನ ಸ್ಥಳಗಳು, ಕೆಂಪುಚಂದನ, ಮುದ್ರಾಧಿಕಾರ, ಬಿಳಿ ಎಕ್ಕೆಗಿಡ, ಪೂರ್ವ, ಆಂಗ್ಲ ವಿದ್ಯೆ, ಆದಿವಾರ, ಚೈತ್ರಮಾಸ, ರಾಜಭವನಗಳು, ಶಾಖವನ್ನು ಹುಟ್ಟಿಸುವ ನೀಲಿ ಬೆಳಕು, ಮೇಲಿನ ಅಂತಸ್ಥುಗಳಿರುವ ಭವನಗಳು ಈ ವಿಧವಾಗಿ ಸೂರ್ಯನ ಅಧೀನದಲ್ಲಿವೆ. ಹೀಗಿರುವುದರಿಂದ ಸೂರ್ಯನು ಕರ್ಮಚಕ್ರದಲ್ಲಿನ ನಾಲ್ಕನೆ ರಾಶಿ ಮೇಲೆ ತನ್ನ ಕಿರಣಗಳನ್ನು ಪ್ರಸರಿಸಿದಾಗ ಆ ಜಾತಕನಿಗೆ ಮೇಲಿನ ಅಂತಸ್ಥು ಭವನಗಳು ಕಟ್ಟಿಸುವ ಪ್ರೇರಣೆ ಮಾಡುತ್ತದೆ. ಒಂದುವೇಳೆ ವ್ಯಕ್ತಿ ಬಡವನಾಗಿದ್ದರೆ, ಭವನ ಕಟ್ಟಿಸುವ ಸಾಮರ್ಥ್ಯ ಇಲ್ಲದವನಾಗಿದ್ದರೆ, ಆತನಿಗೆ ದೊಡ್ಡ ಭವನದಲ್ಲಿ ಬಾಡಿಗೆಗಾದರೂ ಇರುವುದಕ್ಕೆ ಪ್ರೇರಣೆ ಮಾಡುತ್ತದೆ. ಬಾಡಿಗೆಗು ಕೂಡಾ ಇರಲಾರದ ಕರ್ಮ ಇರುವವನಿಗೆ ತಾನು ಕೆಲಸ ಮಾಡುತ್ತಿರುವ ಯಾಜಮಾನನಿಗೆ ಇರುವ ದೊಡ್ಡ ಅಂತಸ್ಥುಗಳ ಭವನದಲ್ಲಿ ವಾಚ್‌ಮೆನ್‌ಆಗಿ ಅಥವಾ ಕೆಲಸದವನನ್ನಾಗಿಯೋ ಇರುವಂತೆ ಮಾಡಿ ಆ ಮನೆಯಲ್ಲಿ ನಿವಾಸ ಇರುವಂತೆ ಮಾಡುತ್ತದೆ. ಎಷ್ಟೋ ಜನ ಬಡವರು ತಮ್ಮದಲ್ಲದ ದೊಡ್ಡ ಭವನಗಳಲ್ಲಿ ವರ್ಕ್‌ಮ್ಯಾನಾಗಿಯೋ, ವಾಚ್‌ಮ್ಯಾನಾಗಿಯೋ, ವಾಟರ್‌ಮ್ಯಾನಾಗಿಯೋ ಇರುತ್ತಾ ಯಾಜಮಾನ ತನ್ನ ಮನೆಯಲ್ಲಿ ಇಲ್ಲದಿದ್ದರೂ ತಾನು ಮಾತ್ರ ಇರುತ್ತಾನೆ, ಈ ವಿಧವಾಗಿ ಸೂರ್ಯನು ಅನುಕೂಲಿಸಿದವರಿಗೆ ಉಂಟಾಗುತ್ತದೆ. ಹೀಗೆ ಅನುಭವಿಸಬೇಕೆಂಬ ಕರ್ಮ ನಾಲ್ಕನೆ ಮನೆಯಲ್ಲಿರುವಾಗ ಆ ಸ್ಥಾನದೊಳಗೆ ಸೂರ್ಯನು ಬಂದಾಗ ಹಾಗೆ ನಡೆಯುತ್ತದೆಂದು ತಿಳಿಯಬೇಕು. ನಾಲ್ಕನೆ ಮನೆಯಲ್ಲಿ ಪಾಪವಿರುವಾಗ ಸೂರ್ಯನು ಅನುಕೂಲನಾಗಿ ಬಂದರೂ ಅಂತಹ

ಸುಖಗಳನ್ನು ಸೂರ್ಯನು ಕೊಡುವುದಿಲ್ಲ. ಒಂದುವೇಳೆ ಸೂರ್ಯನು ಶತ್ರುಗ್ರಹವಾಗಿ ಬಂದರೆ ಗೃಹಕ್ಕೆ ಸಂಬಂಧಿಸಿದ ಸುಖಗಳು ಅಲ್ಲಿಯವರೆಗಿದ್ದರೂ ಆಗ ಇಲ್ಲದಂತೆ ಮಾಡುವುದಕ್ಕೆ ಪ್ರಯತ್ನಿಸುತ್ತಾನೆ. ಇರುವ ದೊಡ್ಡ ಮನೆಯನ್ನು ಕೂಡಾ ಮಾರಿ ಚಿಕ್ಕ ಮನೆಯನ್ನು ಕೊಂಡುಕೊಳ್ಳೋಣ ಎಂದುಕೊಳ್ಳುತ್ತಾನೆ. ಈ ವಿಧವಾಗಿ ಮನುಷ್ಯನ ಬಗ್ಗೆ ಸೂರ್ಯಗ್ರಹ ಕೆಲಸಮಾಡುತ್ತಿದೆ. ಜಾತಕ ಲಗ್ನಕ್ಕೆ ನಾಲ್ಕನೆ ಸ್ಥಾನದಲ್ಲಿ ರವಿ ಇರುವಾಗ ಇಂತಹ ಪ್ರೇರಣೆ ಮಾಡುತ್ತಾನೆ. ಜಾತಕ ಲಗ್ನದಲ್ಲಿ ಸೂರ್ಯನು ಯಾವ ರಾಶಿಮೇಲೆ ಇರುತ್ತಾನೊ ಜೀವನಾಂತ್ಯದವರೆಗು ಆ ರಾಶಿಗೆ ಸಂಬಂಧಿಸಿದ ಕಾರ್ಯಗಳನ್ನೇ ಪ್ರೇರೇಪಿಸುತ್ತಾ ಮನುಷ್ಯನಿಗೆ ಕಷ್ಟಸುಖಗಳನ್ನು ಉಂಟುಮಾಡುತ್ತಿರುತ್ತಾನೆ. ಯಾವ ಜಾತಕನಿಗಾದರೂ ಜಾತಕ ಲಗ್ನದಲ್ಲಿ ಯಾವ ಯಾವ ರಾಶಿಗಳ ಮೇಲೆ ಯಾವಯಾವ ಗ್ರಹಗಳಿರುತ್ತವೊ ಅದರ ಫಲಲಿತವನ್ನು ಅನುಸರಿಸಿ ಜೀವನದಲ್ಲಿ ಇರುತ್ತದೆ. ಕಾಲಚಕ್ರದಲ್ಲಿ ತಿರುಗುವ ಗ್ರಹಗಳು ಮತ್ತೆ ಆ ರಾಶಿಮೇಲಕ್ಕೆ ಬಂದಾಗ ಮೊದಲಿನ ಲಗ್ನದ ಪ್ರಕಾರವೇ ಫಲಿತಗಳನ್ನು ಕೊಡುತ್ತಿರುತ್ತಾರೆ. ಈಗ ಚಂದ್ರನಿಗೆ ಪ್ರಪಂಚದಲ್ಲಿ ಯಾವ ಯಾವ ವಸ್ತುಗಳ ಮೇಲೆ ಅಧಿಕಾರವಿದೆಯೋ ತಿಳಿದುಕೊಳ್ಳೋಣ.

## ಚಂದ್ರ

ಮನುಷ್ಯರಲ್ಲಿ ಬುದ್ಧಿಗೆ ಅಧಿಪತಿ ಚಂದ್ರನು, ಅದೇ ವಿಧವಾಗಿ ನೀರಿಗೆ ಅಧಿಪತಿ ಚಂದ್ರನು. ಹಾಗೇ ಸ್ತ್ರೀಯರಿಗು, ಮನಸ್ಸಿಗು, ಸೌಂದರ್ಯಕ್ಕು, ಜಲ ಸೌಖ್ಯಕ್ಕು, ಬಲಕ್ಕು, ಬೆಳೆಗಳಿಗು, ಬೆಳ್ಳಿಗು, ಯಾತ್ರೆಗಳಿಗು, ಕುದುರೆಸವಾರಿಗು, ನಿದ್ರೆಗು, ವೇಗಕ್ಕು, ಸುಗಂಧಗಳಿಗು, ಮಾತೃ ಪ್ರೀತಿಗು, ಕೋನೇರು, ಬಾವಿಗಳಿಗು, ಕೀರ್ತಿಗು, ಸ್ತ್ರೀ ಸುಖಕ್ಕು, ಬಿಳಿಯ ಮೆತ್ತನೆಯ ಬಟ್ಟೆಗಳಿಗು, ಸಮುದ್ರಗಳಿಗು, ಪುಷ್ಠಿಗು, ಹೂಗಳಿಗು, ನದಿಗಳಿಗು, ಯಾತ್ರೆಗಳಿಗು, ಬಿಳಿಬಣ್ಣಕ್ಕು, ಕೆರೆಗಳಿಗು, ಶ್ವಾಸಕ್ಕು, ಹೊಟ್ಟೆಗು, ಮುತ್ತುಗಳಿಗು, ಮುಖ ಅಲಂಕಾರಕ್ಕು, ಗರ್ಭಕ್ಕು, ಮೃದುತ್ವಕ್ಕು, ಸುಖಭೋಜನಕ್ಕು, ಹಾಲಿಗು, ಮನೋಜಪಕ್ಕು, ವಿಮಾನಯಾನಕ್ಕು,

ವಿಮಾನಗಳಿಗು, ನೌಕೆಗಳಿಗು, ಅಂತಸ್ತುಗಳ ಭವನಗಳಿಗು ಚಂದ್ರನು ಅಧಿಪತಿಯಾಗಿದ್ದಾನೆ. ಅಷ್ಟೇ ಅಲ್ಲದೆ ಸವುಳು ಭೂಮಿಗಳಿಗು, ಲಾಡ್ಜ್‌ಗಳಿಗು, ಮಳೆಗು, ಮುದ್ರಣಾಧಿಕಾರಕ್ಕು, ರಾಜ ಚಿಹ್ನೆಗು, ಸನ್ಮಾನಕ್ಕು, ಧಾನ್ಯಗಳಲ್ಲಿ ಭತ್ತಕ್ಕು, ಬೆಳದಿಂಗಳಿಗು, ಶಯನ ಗೃಹಗಳಿಗು, ಸಂತೋಷಕ್ಕು, ವೀರ್ಯ ಬಲಕ್ಕು, ಅಶ್ವವಾಹನ ಗಳಿಗು, ಜ್ಞಾಪಕಶಕ್ತಿಗು, ದೂರಾಲೋಚನೆಗು, ಶಿರೋ ಆರೋಗ್ಯಕ್ಕು, ಮೆದುಳಿನ ಬಲಕ್ಕು, ಗ್ರಾಹಿತ ಶಕ್ತಿಗು, ಈಜುವುದರಲ್ಲಿನ ನೈಪುಣ್ಯಕ್ಕು, ನದಿ ಸ್ನಾನಕ್ಕು, ನೀರಿನ ಪ್ರದೇಶಗಳಿಗು, ಸವುಳಿಗು, ಜಲಚರಗಳಿಗು, ಇಂಗ್ಲಿಷ್ ಭಾಷೆಗು, ವಿಲಾಸ ವಸ್ತುಗಳಿಗು, ವಾಯುವ್ಯ ದಿಕ್ಕಿಗು, ಸೋಮವಾರಕ್ಕೆ ಬಿಳಿ ಹೂಗಳಿಗು, ಮಲ್ಲಿಗೆ ತೋಟಗಳಿಗು, ಚಂದ್ರನು ಅಧಿಪತಿಯಾಗಿದ್ದಾನೆ.

ಇಲ್ಲಿಗೆ ಮುವತ್ತೈದು ವರ್ಷಗಳ ಕೆಳಗೇ ಚಂದ್ರಗ್ರಹದಲ್ಲಿ ನೀರು ಇಲ್ಲವೆಂದು ಖಗೋಳಶಾಸ್ತ್ರಜ್ಞರು ಹೇಳಿದಾಗ, ನೀರಿಗೆ ಚಂದ್ರನು ಅಧಿಪತಿ ಆಗಿರುವುದರಿಂದ ಚಂದ್ರನಲ್ಲಿ ನೀರು ಅಪಾರವಾಗಿ ಇವೆಯೆಂದು ನಾವು ಹೇಳುವುದು ನಡೆದಿದೆ. ಆಗ ನೀರು ಇಲ್ಲ ಎಂದು ಹೇಳಿದ ಶಾಸ್ತ್ರಜ್ಞರು ಎರಡು ವರ್ಷಗಳ ಕೆಳಗೆ ಚಂದ್ರನಲ್ಲಿ ನೀರು ಇರುವಂತೆ ಅವರ ಪರಿಶೋಧನೆಯಲ್ಲಿ ತಿಳಿದಂತೆ ಹೇಳಿದ್ದಾರೆ. ನೀರಿಗೆ ಚಂದ್ರನು ಅಧಿಪತಿಯಾಗಿರುವುದರಿಂದ ನಾವು ಮುಂಚಿತವಾಗಿಯೇ ನೀರು ಇವೆಯೆಂದು ಹೇಳುವುದು ನಡೆದಿದೆ. ಒಬ್ಬ ಮನುಷ್ಯನ ಜಾತಕದಲ್ಲಿ ಚಂದ್ರನು ವಿರುದ್ಧವಾಗಿ ಇದ್ದಂತಾದರೆ, ಆತನಿಗೆ ಜೀವನದಲ್ಲಿ ನೀರಿನಿಂದ ಅನೇಕ ತೊಂದರೆಗಳಿರುತ್ತವೆಂದು ಹೇಳಬಹುದು. ಯಾವುದೊ ಒಂದು ವಿಧವಾಗಿ ನೀರಿನ ಬಾಧೆಗಳು ಇರುತ್ತವೆ. ಅಂತಹವನು ಬಾವಿಗಳು ತೋಡಿದರೆ ನೀರು ಬರುವುದಿಲ್ಲ. ಬೋರುಗಳು ಹಾಕಿಸಿದರೆ ನೀರುಬಿದ್ದರೂ ಬೋರು ಹೂತು ಹೋಗುವುದೊ ಅಥವಾ ನೀರು ಒಣಗಿಹೋಗು ವುದೋ ನಡೆಯುತ್ತದೆ. ಅಂತಹ ವ್ಯಕ್ತಿ ಎಷ್ಟು ಚೆನ್ನಾಗಿ ಮನೆ ಕಟ್ಟಿಕೊಂಡರೂ ಮಳೆ ನೀರು ಸೋರುವುದೋ, ಮನೆಯೊಳಗೆ ಬರುವುದೋ ನಡೆಯುತ್ತದೆ. ಬಾತ್‌ರೂಮ್‌ನಲ್ಲಿ ನಲ್ಲಿಗಳು ಕೆಟ್ಟುಹೋಗಿ ನೀರಿಗೆ ಆತಂಕ ಏರ್ಪಡುತ್ತದೆ.

ಸೆಪ್ಟಿಕ್‌ಟ್ಯಾಂಕ್ ಪೈಪುಗಳು ಹೂತುಹೋಗಿ ನೀರು ಹೋಗುವುದಕ್ಕೆ ಆತಂಕಗಳು ಏರ್ಪಡುತ್ತಿರುತ್ತವೆ. ಯಾವುದೋ ಒಂದು ವಿಧವಾಗಿ ನೀರಿನ ಸಮಸ್ಯೆಗಳು ಇರುತ್ತವೆ. ಅದೇ ಚಂದ್ರನು ಜಾತಕನಿಗೆ ಮಿತ್ರನಾಗಿದ್ದರೆ ಆತನ ಜೀವನದಲ್ಲಿ ನೀರಿನಿಂದ ಎಂತಹ ಬಾಧೆ ಇರುವುದಿಲ್ಲ. ಉಳಿದ ರಾಶಿಗಳೊಳಗೆ ಚಂದ್ರನು ಹೋದಾಗ ಆ ರಾಶಿಗಳಲ್ಲಿನ ಕರ್ಮವನ್ನು ಅನುಸರಿಸಿ ಪ್ರವರ್ತಿಸುತ್ತಾ ಮನುಷ್ಯನಿಗೆ ಸುಖ ದುಃಖವನ್ನು ಕರ್ಮಪ್ರಕಾರ ಉಂಟುಮಾಡುತ್ತಿದ್ದಾನೆ.

## ಕುಜನು

ಪರಾಕ್ರಮ, ಕೋಪ, ಸೇನಾಧಿಪತ್ಯ, ಸಾಹಸ, ವಿಸ್ಫೋಟನೆ, ಬಾಂಬುಗಳು, ತುಪಾಕಿಗಳು, ಮಾರಣಾಯುಧಗಳು, ಕೋತಿಗಳು, ನಾಯಿಗಳು, ಕೋರೆಗಳಿರುವ ಕ್ರೂರ ಪ್ರಾಣಿಗಳು, ಕೊಂಬುಗಳಿರುವ ಎತ್ತುಗಳು, ಶಸ್ತ್ರವಿದ್ಯೆ, ತರ್ಕಶಾಸ್ತ್ರ, ಶತ್ರುವೃದ್ಧಿ, ಉಷ್ಣ, ಕೆಂಪುಭೂಮಿ, ಕಲ್ಲುಭೂಮಿ, ಬೆಟ್ಟಗಳು, ಬಂಡೆಗಳು, ಕೆಂಪುಬಣ್ಣ, ರಕ್ತ, ಯೌವ್ವನ, ಯುವಕರು, ಯುಕ್ತ ವಯಸ್ಸು ಸ್ತ್ರೀಯರ ಪರಿಚಯ, ಪ್ರಸ್ಥಭೂಮಿ ಛಲ, ಪ್ರಭುಭಕ್ತಿ, ಲಕ್ಷ್ಯವನ್ನು ಭೇದಿಸುವುದು, ಜಯ, ದಕ್ಷಿಣ ದಿಕ್ಕು, ಅರಣ್ಯಗಳು, ಅರಣ್ಯ ಸಂಚಾರ, ಸಂಡ್ರಗಿಡ ಅಥವಾ ಸಂಡ್ರ ಕಟ್ಟಿಗೆಗಳು, ಬೇಟೆ ಯಾಡುವುದು, ಯುವರಾಜ, ಕಟ್ಟಿಗೆಗಳು, ಪ್ರವಾಹ, ಮರಣಶಿಕ್ಷೆ, ಕೋಟೆಗಳು, ಬುರುಜುಗಳು, ಸೋದರಬಲ, ತಂಗಿಯರು, ಕೂದಲು, ಮೀಸೆ, ಕ್ರೂರವಾದ ಮುಖವರ್ಚಸ್ಸು, ದೀರ್ಘಬಾಹುಗಳು, ಅಂಗರಕ್ಷಕರು, ಪೊಲೀಸರು, ಮಿಲಟರಿ, ತೊಗರಿ, ಸನ್ಮಾನಗಳು, ಸೈನ್ಯಬಲ (ಮನುಷ್ಯರ ಬೆಂಬಲ) ಕಲ್ಲಿನ ಗುಹೆಗಳು, ರಚ್ಚಬಂಡೆಗಳು, ಮಂಗಮಾನ್ಯಗಳು, ಕುಂಬಾರ ಮಾನ್ಯಗಳು, ಕುಮ್ಮರಾಮುಗಳು, ವ್ರಣ ವೈದ್ಯ, ಹೀಚುಗಳು, ಕಾಯಿಗಳು, ಮಂಗಳವಾರ, ನಕ್ಸಲೈಟ್‌ಗಳು ಮೊದಲಾದವೆಲ್ಲವೂ ಕುಜಗ್ರಹವೊಂದರ ಅಧೀನದಲ್ಲಿ ಇರುತ್ತವೆ.

ಒಬ್ಬ ವ್ಯಕ್ತಿ ಜಾತಕದಲ್ಲಿ ಕುಜಗ್ರಹವು ಶತ್ರು ಸ್ಥಾನದಲ್ಲಿದ್ದರೆ ಆತನ ಯೌವ್ವನದಲ್ಲಿ ಸುಖ ಇಲ್ಲದಂತೆ ಮಾಡುತ್ತದೆ. ನೀಚ ಸ್ತ್ರೀಯರ ಸಾಂಗತ್ಯವನ್ನು ಉಂಟುಮಾಡುತ್ತದೆ. ಜಾತಕದಲ್ಲಿ ಏಳನೆ ಸ್ಥಾನವನ್ನು ಕುಜನು ನೋಡಿದರೂ, ಕುಜನು ಇದ್ದರೂ ಆತನಿಗೆ ಯುಕ್ತ ವಯಸ್ಸಿನಲ್ಲಿ ಮದುವೆ ಆಗದಂತೆ ಮಾಡುತ್ತದೆ. ಎಂಟನೆ ಸ್ಥಾನವನ್ನು ಕುಜನು ತಾಕಿದರೂ ಆತನು ಆಯುಧಗಳಿಂದ ಸಾಯಲ್ಪಡುತ್ತಾನೆ. ಆರನೆಸ್ಥಾನವನ್ನು ತಾಕಿದರೂ ಅಥವಾ ಸೇರಿದರೂ ಮೃಗಗಳಿಂದ ಗಾಯಪಡುತ್ತಾನೆ. ಇಲ್ಲದಿದ್ದರೆ ಆಯುಧಗಳಿಂದ ದಾಳಿನಡೆದು ಗಾಯವಾಗುವುದು ನಡೆಯುತ್ತದೆ. ಶರೀರದಲ್ಲಿ ಹುಣ್ಣು ಹುಟ್ಟುತ್ತವೆ. ಟಿ.ಬಿ. ರೋಗ, ಕ್ಯಾನ್ಸರ್ ರೋಗ ಕುಜನಿಂದಲೇ ಕುಜನು ಶತ್ರುವಾಗಿ ಆರನೆ ಸ್ಥಾನವನ್ನು ಸೇರಿದಾಗ ಉಂಟಾಗುತ್ತದೆ. ಒಂದುವೇಳೆ ಜಾತಕನಿಗೆ ಕುಜಗ್ರಹ ಮಿತ್ರನಾಗಿದ್ದರೆ ಈಗ ಹೇಳಿದ ಬಾಧೆಗಳೆಲ್ಲ ಇರುವುದಿಲ್ಲ. ಅಂತಹವು ಉಂಟಾಗದಂತೆ ನೋಡಿಕೊಳ್ಳುತ್ತಾನೆ. ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡುತ್ತಾನೆ. ರಸ್ತೆ ಪ್ರಮಾದ ನಡೆದರೂ ಕುಜ ಗ್ರಹ ಅನುಕೂಲವಾಗಿರುವಾಗ ಆತನಿಗೆ ಸ್ವಲ್ಪವೂ ಕೂಡಾ ಗಾಯ ಆಗುವುದಿಲ್ಲ. ಅದೇ ಕುಜನು ಶತ್ರುವಾಗಿದ್ದರೆ ಗಾಯಗಳಪಾಲು ಮಾಡುತ್ತಾನೆ, ರಕ್ತಪಾತವನ್ನು ಹುಟ್ಟಿಸುತ್ತಾನೆ. ಈ ವಿಧವಾಗಿ ಕುಜಗ್ರಹ ಕರ್ಮಚಕ್ರದ ಮೇಲೆ ತನ್ನ ಕಿರಣಗಳನ್ನು ಪ್ರಸರಿಸುತ್ತಾ ಒಂದೊಂದು ಸ್ಥಾನದ ಹತ್ತಿರ ಇರುವಾಗ ಆ ಸ್ಥಾನದಲ್ಲಿರುವ ಕರ್ಮವನ್ನು ಅನುಸರಿಸಿ ಕುಜನಿಂದ ಫಲಿತವು ದಕ್ಕುತ್ತದೆ. ಕುಜಗ್ರಹ ಚುರುಕಾದುದು, ಕೋಪವಿರುವುದು. ಆದ್ದರಿಂದ ಸ್ಥಾನಗಳನ್ನನುಸರಿಸಿ ಕರ್ಮ ಫಲಿತಗಳು ತೀಕ್ಷಣವಾಗಿ ಇರುತ್ತವೆ.

## ಬುಧನು

ಜ್ಯೋತಿಷ್ಯ, ಗಣಿತಶಾಸ್ತ್ರ, ಮಂತ್ರಗಳು, ಯಂತ್ರಗಳು, ವ್ಯಾಪಾರ, ತಾಯಿಕಡೆ ಸಂಬಂಧಿಕರು, ಮಾವನವರು, ಯುಕ್ತಿ, ಶಿಲ್ಪವಿದ್ಯೆ, ಮಂತ್ರ ತಂತ್ರವಿದ್ಯೆಗಳು, ವೇದ ವಿಚಾರಣೆ, ಹಾಸ್ಯ, ಚಿಕಿತ್ಸೆ, ಜ್ಞಾನ, ಲಿಪಿ, ಪೈತ್ಯ,

ದೃಷ್ಟಿಬಲ, ಎಲೆಹಸಿರುಬಣ್ಣ, ಶಿಲ್ಪಕಲೆ, ಚಿತ್ರಲೇಖನ, ಶಿವಭಕ್ತಿ, ದಾಸ ದಾಸಿ ಜನ ಅಭಿವೃದ್ಧಿ, ಸಂಧಿಮಾಡುವುದು, ಚಾಕಚಕ್ಯವಾಗಿ ಮಾತನಾಡುವುದು, ಕುಳ್ಳಗಿರುವುದು, ವಿಚಿತ್ರ ರಚನೆಗಳು, ಯುಕ್ತಿಯುಕ್ತ ಜ್ಞಾನ, ಚಮತ್ಕಾರ, ಸೈಂಟಿಸ್ಟು, ಉತ್ತರ ದಿಕ್ಕು, ಬುಧವಾರ, ಸ್ಮಶಾನಭೂಮಿಗಳು, ಗೋರಿಗಳು, ದಿಬ್ಬಗಳು, ಇಳಿಸುವ ಕಣಗಳು, ದೆವ್ವಗಳ ಮನೆಗಳು, ಬಲಿ ಕೊಡುವ ಸ್ಥಾನಗಳು, ದೆವ್ವಗಳು, ಹಾಳುಬಿದ್ದ ಸ್ಥಳಗಳು, ವ್ಯಾಪಾರ ಸ್ಥಳಗಳು, ಅಂಗಡಿಗಳು, ಶೂನ್ಯಗಳು, ಸೂಕ್ಷ್ಮಗಳು, ಭೂತವೈದ್ಯ, ಉತ್ತರೇಣಿ ಗಿಡ, ಹೆಸರುಕಾಳು ಧಾನ್ಯ ಮುಂತಾದವು ಬುಧ ಗ್ರಹವೊಂದರ ಅಧೀನದಲ್ಲಿವೆ.

ಜಾತಕನಿಗೆ ಬುಧಗ್ರಹ ಶತ್ರು ಸ್ಥಾನದಲ್ಲಿದ್ದರೆ ಬುಧನು ಆರನೆ ಸ್ಥಾನವನ್ನು ತಾಕಿದರೂ ಅಥವಾ ಅದರಲ್ಲಿದ್ದರೂ ಅವನಿಗೆ ದೆವ್ವಗಳ ಬಾಧೆಗಳು ತಪ್ಪುವು ದಿಲ್ಲವೆಂದು ಹೇಳಬಹುದು. ದೆವ್ವಗಳು ಶರೀರದಲ್ಲಿ ರೋಗ ರೂಪವಾಗಿದ್ದೂ ಬಾಧಿಸುತ್ತವೆಂದು ಹೇಳಬಹುದು. ಕರ್ಮ ಬಲವಾಗಿದ್ದರೆ ದೆವ್ವಗಳಿಂದಲೇ ಸಾಯಲ್ಪಡುತ್ತಾನೆಂದು ಹೇಳಬಹುದು. ಬುಧಗ್ರಹ ಅನುಕೂಲವಾಗಿ(ಮಿತ್ರನಾಗಿ) ದ್ದರೆ ದೆವ್ವಗಳ ಬಾಧೆ ಇರುವುದಿಲ್ಲ. ಬುಧನು ಮಿತ್ರಗ್ರಹವಾಗಿ ಆರನೆ ಸ್ಥಾನದಲ್ಲಿ ತಾಕಿದರೂ, ಇದ್ದರೂ, ಆತನು ಚಿಕಿತ್ಸೆಯಿಂದ ಜೀವಿಸುತ್ತಾನೆಂದು, ಅದರಲ್ಲಿ ಭೂತವೈದ್ಯವನ್ನು ಕೂಡಾ ತಿಳಿದಿರುತ್ತಾನೆಂದು ಹೇಳಬಹುದು. ಒಂದುವೇಳೆ ಆತನಿಗೆ ಬುಧನು ಶತ್ರುಗ್ರಹವಾದರೆ ಭೂತವೈದ್ಯವನ್ನು ಮಾಡಿದರೂ ಅದರಿಂದ ದೆವ್ವಗಳು ಹೋಗುವುದಿಲ್ಲ. ಅಷ್ಟೇ ಅಲ್ಲದೆ ದೆವ್ವಗಳೇ ಆತನಿಗೆ ತೊಂದರೆ ಕೊಡುತ್ತವೆ. ಸ್ವಲ್ಪ ಜನರಿಗೆ ನಾಲ್ಕನೆ ಸ್ಥಾನವನ್ನು ಬುಧನು ನೋಡಿದರೆ ಆತನಿಗೆ ಮಿತ್ರ ಗ್ರಹವಾದರೆ ಆತನು ವ್ಯಾಪಾರಸ್ಥನಾಗಿ ಜೀವಿಸುತ್ತಾನೆ. ಆತನಿಗಿರುವ ಕರ್ಮಪ್ರಕಾರ, ಗ್ರಹಗಳ ಮಿತ್ರ ಶತ್ರು ಕಾರಣವನ್ನನುಸರಿಸಿ ವ್ಯಾಪಾರ ವೃತ್ತಿಯಲ್ಲಿ ದೊಡ್ಡ ಹೆಸರನ್ನು ಸಂಪಾದಿಸಿಕೊಳ್ಳುವುದು ನಡೆಯುತ್ತಿದೆ. ಬುಧ ಗ್ರಹವೊಂದರ ಅನುಕೂಲವನ್ನನುಸರಿಸಿ ಯಾರಿಗಾದರೂ ಜ್ಯೋತಿಷ್ಯಶಾಸ್ತ್ರ ಪೂರ್ತಿಯಾಗಿ ತಿಳಿಯಬಲ್ಲದು. ಅಂತಹವನು ಜ್ಯೋತಿಷ್ಯನಾಗಿ ಬದಲಾಗಿ ಹೋಗಬಹುದು.

# ಗುರು

ಹನ್ನೆರಡು ಗ್ರಹಗಳಲ್ಲಿ ಗುರು ಒಂದು ಪಕ್ಷಕ್ಕೆ ನಾಯಕನಾಗಿದ್ದಾನೆ. ಅಂತಹ ಗುರು ಅಧೀನದಲ್ಲಿ ಕೆಳಗೆ ಹೇಳಿರುವವೆಲ್ಲ ಇವೆ. ಭೂಮಿ ಮೇಲಿರುವ ಪ್ರಪಂಚ ಧನವೂ, ವೇದವಿದ್ಯೆ, ಪ್ರಪಂಚ ವಿದ್ಯೆ, ಪುತ್ರರು, ಜ್ಯೋತಿಷ್ಯ, ಗುರುವಾಗಿರುವುದು, ಸತ್ಕರ್ಮ ಮಾಡುವುದು, ಶಬ್ದಶಾಸ್ತ್ರ, ಬ್ರಾಹ್ಮಣತ್ವ, ಯಜ್ಞಾದಿ ಕ್ರತುಗಳು, ಬಂಗಾರ, ಗೃಹ, ಅಶ್ವ, ಗಜ, ಆಚಾರ, ಸುಜನತ್ವ, ಶಾಂತ, ಮಂತ್ರಿತ್ವ, ಐಶ್ವರ್ಯ, ಬಂಧುವೃದ್ಧಿ, ಸತ್ಯ, ಪುರಾಣಗಳು, ಪೌರಾಣಿಕ, ಪುತ್ರಪೌತ್ರ ವೃದ್ಧಿ, ಒಳ್ಳೆಯ ಸಂತತಿ. ಪೂಜನೀಯತೆ, ಅಧಿಕಾರ ಗೌರವಗಳು, ಗ್ರಾಮಾಧಿಕಾರ, ಹರಿಸಿನ ಬಣ್ಣ, ಮಾತಿನ ಚಮತ್ಕಾರ, ಮೇಧಾವಿ, ತೀರ್ಥಯಾತ್ರೆ ದೇವತಾ ದರ್ಶನಗಳು, ಗ್ರಂಥಪಠಿಸುವುದು, ಅಗ್ರಸ್ಥಾನ, ಸಿಹಿಯಾದ ಆಹಾರ, ಸಂಸ್ಕೃತ, ಪಾಂಡಿತ್ಯದಲ್ಲಿ ಪ್ರತಿಭೆ, ಸಂಬಂಧಿಕರ ಬಲ, ಸಂಸ್ಕೃತಭಾಷೆ, ಗ್ರಂಥ ರಚನೆ ಮುಕ್ತಿ ಸಾಧನೆ, ಪೌರೋಹಿತ್ಯ, ಯುಜುರ್ವೇದ, ಸಮಯಸ್ಫೂರ್ತಿ, ಮತಸಿದ್ಧಾಂತ, ದೇವಾಲಯ ನಿರ್ಮಾಣ, ಸವುಳು ಭೂಮಿಗಳು, ಕಲ್ಯಾಣ ಮಂದಿರಗಳು, ಭಜನೆ ಮಂದಿರಗಳು ನಿರ್ಮಿಸುವುದು, ಬೋಧನಾವೃತ್ತಿ ಇನ್ನು ಮುಂತಾದ ವಿಷಯಗಳೆಲ್ಲವೂ ಗುರು ಅಧೀನದಲ್ಲಿವೆಯೆಂದು ತಿಳಿಯಬೇಕು.

ಗುರುಗ್ರಹ ಕರ್ಮರಾಶಿಗಳ ಮೇಲೆ ತನ್ನ ಕಿರಣಗಳನ್ನು ಪ್ರಸರಿಸಿದಾಗ ಅಲ್ಲಿನ ಕರ್ಮಪ್ರಕಾರ ತನ್ನ ಅಧೀನದೊಳಗಿನವುಗಳನ್ನು ಗ್ರಹಿಸಿ ಮನುಷ್ಯನಿಂದ ಅನುಭವಿಸುವಂತೆ ಮಾಡುತ್ತಿದೆ. ಉದಾಹರಣೆಗೆ ಗುರುಗ್ರಹ ಕರ್ಮ ಚಕ್ರದಲ್ಲಿನ ಮೂರನೆ ರಾಶಿ ಮೇಲಕ್ಕೆ ತನ್ನ ಕಿರಣಗಳನ್ನು ಪ್ರಸರಿಸುವಂತೆ ಮಾಡಿದಾಗ ಮೂರನೆ ಸ್ಥಾನದಲ್ಲಿ ಧನ ಚಿನ್ನದ ರಾಶಿಗಳು ಕರ್ಮಪ್ರಕಾರ ಇರುತ್ತವೆ. ಆದ್ದರಿಂದ ಅಲ್ಲಿಗೆ ತನ್ನ ಕಿರಣಗಳನ್ನು ಕಳುಹಿಸಿದ ಗುರು ಆ ಜಾತಕನಿಗೆ ಮಿತ್ರನಾದರೆ ಆ ರಾಶಿಯಲ್ಲಿನ ಬಂಗಾರವನ್ನು ತೆಗೆದು ಜಾತಕನಿಗೆ ಕೊಡುತ್ತಾನೆ. ಹೊರಗಿನ ವ್ಯವಹಾರಗಳಲ್ಲಿ ಮಿಳಿತವಾದ ಮನುಷ್ಯನಿಗೆ ತನಗೆ ಬಂಗಾರ ಯಾವುದೋ

ಒಂದು ವಿಧವಾಗಿ ಲಭ್ಯವಾದಂತೆ ತಿಳಿದರೂ, ವ್ಯಾಪಾರದಲ್ಲಿ ಲಾಭಬಂದು ಬಂಗಾರವನ್ನು ಕೊಂಡರೂ, ಅದೆಲ್ಲವೂ ತಮ್ಮ ತಿಳುವಳಿಕೆಯಿಂದ, ತಾವು ಮಾಡುವ ಕೆಲಸಗಳಿಂದ ಲಭ್ಯವಾಗಿದೆಯೆಂದು ಅಂದುಕೊಂಡರೂ, ಮೇಲ್ನೋಟಕ್ಕೆ ಹೇಗೆ ಕಾಣಿಸಿದರೂ ಯಾರಿಗೂ ತಿಳಿಯದಂತೆ ಗುರು ಗ್ರಹದಿಂದ ಬಂದಿದೆಯೆಂದು ಯಾರೂ ಅಂದುಕೊಳ್ಳುವುದಿಲ್ಲ. ಗುರುಗ್ರಹ ಪ್ರಪಂಚದಲ್ಲಿನ ಬಂಗಾರಕ್ಕೆಲ್ಲ ಅಧಿಪತಿಯೆಂದು, ಗುರುಗ್ರಹ ಒಂದರ ಕಿರಣಗಳ ನೆರಳು ಬೀಳದಿದ್ದರೆ ಯಾರಿಗೂ ಬಂಗಾರ ಲಭ್ಯವಾಗುವುದಿಲ್ಲವೆಂದು ಬಹಳಜನರಿಗೆ ತಿಳಿದಿಲ್ಲ. ಗುರುಗ್ರಹ  ಅನುಕೂಲವಾಗಿ ಮಿತ್ರನಾಗಿ ಇರುವುದರಿಂದ ಇಲ್ಲದ ಬಂಗಾರವನ್ನು ಯಾವುದೊ ಒಂದು ವಿಧವಾಗಿ ಕೊಡುತ್ತಾನೆ. ಅದೇ ಗುರುಗ್ರಹ ಜಾತಕನಿಗೆ ವಿರೋಧಿಯಾಗಿ, ಶತ್ರುವಾಗಿದ್ದರೆ ಹೊರಗೆ ಯಾವುದೋ ಒಂದು ಕಾರಣದಿಂದ ಇರುವ ಬಂಗಾರವನ್ನು ಕೂಡಾ ಇಲ್ಲದಂತೆ ಮಾರುವ ಹಾಗೆ ಮಾಡುತ್ತದೆ. ಮೂರನೆ ಸ್ಥಾನದಲ್ಲಿ ರಾಹು ಹಿಂದೆ ಗುರುವಿದ್ದರೆ ಇರುವ ಬಂಗಾರವನ್ನು ಕಳ್ಳರು ಕದಿಯುವಂತೆ ಮಾಡುತ್ತದೆ. ಈ ವಿಧವಾಗಿ ತನ್ನ ಅಧೀನದಲ್ಲಿರುವ ಯಾವುದನ್ನಾದರೂ ಮನುಷ್ಯನಿಗೆ ಇಲ್ಲದಿರುವುದನ್ನು ಕೊಡುವುದಾಗಲಿ, ಇರುವುದನ್ನು ಗುಂಜಿಕೊಳ್ಳುವುದಾಗಲಿ ಗುರುಗ್ರಹ ಕರ್ಮವನ್ನನುಸರಿಸಿ ಮಾಡುತ್ತಿರುತ್ತದೆ. ಈ ವಿಧವಾಗಿಯೇ ಎಲ್ಲಾ ವಿಷಯಗಳಲ್ಲಿಯೂ ಲೆಕ್ಕಿಸಿ ಹೇಳಿಕೊಳ್ಳಬೇಕು.

## ಶುಕ್ರ ಗ್ರಹ

ದ್ವಾದಶ ಗ್ರಹಗಳಲ್ಲಿ ಮಾನವನಿಗೆ ಸುಖಗಳನ್ನು ಕೊಡುವುದರಲ್ಲಿ ಇದನ್ನು ಮೀರಿದ ಗ್ರಹವಿಲ್ಲ. ಶುಕ್ರನು ಶನಿ ವರ್ಗದೊಳಗಿನವನು, ಶನಿವರ್ಗದವರಿಗೆ ಎಷ್ಟೋ ಬೆಲೆಯುಳ್ಳ ಸುಖಗಳನ್ನು ನೀಡುತ್ತಾನೆ. ಅಂತಹ ಶುಕ್ರಗ್ರಹದ ಅಧೀನದಲ್ಲಿರುವ ವಿಷಯಗಳನ್ನು ಈಗ ನೋಡೋಣ. ಶುಕ್ರನು ಕಳತ್ರಕಾರಕನು ಆದ್ದರಿಂದ ಭೂಮಿಮೇಲೆ ಯಾವ ಮನುಷ್ಯನಿಗಾದರೂ ಹೆಂಡತಿ ಲಭಿಸಬೇಕೆಂದರೆ

ಶುಕ್ರನ ಕಿರಣಗಳ ಮೇಲೆಯೇ ಆಧಾರಪಟ್ಟಿರುತ್ತದೆ. ಅಷ್ಟೇ ಅಲ್ಲದೆ ಆತನ ಅಧೀನದಲ್ಲಿನ ವಿಷಯಗಳು ಹೀಗೆ ಇವೆ. ವಿವಾಹ, ನಾಟಕ ಸಾಹಿತ್ಯ, ಸ್ತ್ರೀಸೌಖ್ಯ, ಕಾಮ, ಭೋಗ, ವ್ಯಭಿಚಾರ, ವಾಹನ ಸುಖ, ಆಭರಣಗಳು, ಐಶ್ವರ್ಯ, ಮುದ್ರಣಾಧಿಕಾರ, ಹಾಸ್ಯ, ಮೇಹ, ವೇಶ್ಯಾಸಂಭೋಗ, ಕನ್ಯತ್ವ ಲಭ್ಯ, ಬಿಳಿ ವಸ್ತ್ರ, ಸುಗಂಧಗಳು, ಸೌಂದರ್ಯ, ಜಲಕ್ರೀಡೆ, ಚಿತ್ರಲೇಖನ, ಕವಿತ್ವ, ಗ್ರಂಥರಚನೆ, ಸಂಗೀತ, ಸಾಮವೇದ, ಮಧ್ಯಪಾನ, ನೃತ್ಯ, ಯುವತಿ, ಮನೋಭಾವನೆಗಳು, ಅಷ್ಟ ಭೋಗಗಳು, ಅಷ್ಟ ಐಶ್ವರ್ಯಗಳು, ಶೃಂಗಾರ ಕಾವ್ಯ ರಚನೆಗಳು, ದೇಹಸುಖ, ಸೌಂದರ್ಯ, ಸುಕುಮಾರ, ವೀಣೆ ಅಥವಾ ವೇಣುಗಾನ, ವಾಹನ ಸೌಖ್ಯ, ಅನ್ಯ ಸ್ತ್ರೀಯರ ಆಲಿಂಗನ, ಬಹು ಸ್ತ್ರೀ ಸಂಗಮ, ಕಲಾನೈಪುಣ್ಯ, ವೀರ್ಯಬಲ, ಶಿವಭಕ್ತಿ, ಶಾಂಭವಿವಿದ್ಯೆ, ಮೃಧುರತಿ, ಸ್ತ್ರೀಯರಿಗೆ ಹೆಚ್ಚು ಪ್ರೀತಿಯಿಂದಿರುವುದು, ವಿವಾಹಗಳಲ್ಲಿ ವಿಂದುಗಳಲ್ಲಿ ಪಾಲ್ಗೊಳ್ಳುವುದು. ಸಭಾ ಸನ್ಮಾನಗಳು, ವೇಶ್ಯರು ಸನ್ನಿಹಿತವಾಗಿರುವುದು. ವ್ಯಸನಗಳಲ್ಲಿ ಸ್ತ್ರೀಗೆ ಒಳಗಾಗುವುದು, ತಾಂಬೂಲ, ಮಾಂಸಭಕ್ಷಣ, ಶಕ್ತಿಪೂಜೆಗಳು, ಪಶುಗಳ ಮನೆಗಳು, ಗಾಡಿಗಳು ಬಿಡುವ ಸ್ಥಳ, ವ್ಯಭಿಚಾರ ಗೃಹಗಳು, ಪಶುಗಳ ಮನೆಗಳು, ಅಡುಗೆ ಸೌದೆಗಳು ಇಡುವ ಜಾಗ, ಶಯನ ಗೃಹಗಳು ನವ ಯೌವ್ವನರ ಮಿತ್ರತ್ವ. ಕಾಮಕೇಳಿ ವಿಲಾಸ. ಈ ವಿಧವಾಗಿ ಶುಕ್ರ ಗ್ರಹವೊಂದರ ಅಧೀನದಲ್ಲಿನ ವಿಷಯಗಳು ಇವೆ.

ಶುಕ್ರಗ್ರಹ ಮಿತ್ರನಾಗಿ ಕಾಲಚಕ್ರದಲ್ಲಿ ತಿರುಗುತ್ತಾ, ಕಳತ್ರ ಸ್ಥಾನವಾದ ಏಳನೆ ಸ್ಥಾನವನ್ನು ತನ್ನ ಕಿರಣಗಳಿಂದ ತಾಕಿದರೆ ಯುಕ್ತವಯಸ್ಸಿನಲ್ಲಿ ಸುಂದರವಾದ ಹೆಂಡತಿಯನ್ನು ಕೊಡುತ್ತದೆ. ಸುಂದರವಾದ ಹೆಂಡತಿಯೇ ಅಲ್ಲದೆ ಆಕೆ ಅನುಕೂಲವಾದ ಹೆಂಡತಿಯಾಗಿರುತ್ತಾಳೆ. ಹೆಂಡತಿಯಿಂದ ಒಳ್ಳೆಯ ಹೆಸರು ಬರುವುದಲ್ಲದೆ ಆಕೆಯಿಂದ ಒಳ್ಳೆಯ ಸುಖ ಲಭಿಸುತ್ತದೆ. ಒಂದುವೇಳೆ ಶುಕ್ರನು ವಿರೋಧಿಯಾದರೇ ಹೆಂಡತಿ ವಿಷಯದಲ್ಲಿ ಮೊದಲು ಹೇಳಿರುವುದಕ್ಕೆ ಭಿನ್ನವಾಗಿರುತ್ತಾನೆ. ಹೆಂಡತಿಯಿಂದ ಮನುಷ್ಯನಿಗೆ ಕಷ್ಟವೇ ಇರುತ್ತದೆ. ಹೀಗೆ ಆಯಾ ಸ್ಥಾನಗಳನ್ನನುಸರಿಸಿ ಗ್ರಹಗಳ ಮಿತ್ರ ಶತ್ರುತ್ವಗಳನ್ನು ಅನುಸರಿಸಿ ಗ್ರಹಗಳ

ಅಧೀನದಲ್ಲಿನ ವಿಷಯಗಳು ಒಳ್ಳೆಯದಾಗಿಯೋ, ಕೆಟ್ಟದಾಗಿಯೋ ಲಭ್ಯ ವಾಗುತ್ತಿರುತ್ತವೆ. ಗ್ರಹ ಜಾತಕದ ಪ್ರಕಾರ ಅನುಕೂಲವಾದರೆ ಅದರ ಅಧೀನದಲ್ಲಿನ ವಿಷಯಗಳೆಲ್ಲ ಒಳ್ಳೆಯದಾಗಿಯೇ ಲಭಿಸುತ್ತವೆ. ಗ್ರಹ ಒಳ್ಳೆಯದು ಅಲ್ಲದಿದ್ದರೆ ಆ ಗ್ರಹದಿಂದ ಅದರ ಅಧೀನದಲ್ಲಿನವು ಏನು ಲಭಿಸುವುದಿಲ್ಲ. ಅಷ್ಟೇ ಅಲ್ಲದೆ ಇರುವವು ಕೂಡಾ ಹೋಗುತ್ತವೆ. ಜಾತಕ ಕುಂಡಲಿಯಲ್ಲಿನ ಎಲ್ಲಾ ಗ್ರಹಗಳ ವಿಷಯಗಳು ಹಾಗೇ ಇರುತ್ತವೆಂದು ತಿಳಿಯಬೇಕು.

## ಶನಿಗ್ರಹ

ಶನಿ ಗ್ರಹದ ಅಧೀನದಲ್ಲಿನ ವಿಷಯಗಳನ್ನು ಇಲ್ಲಿ ಹೇಳಿಕೊಳ್ಳೋಣ. ಆಯುಷ್ಯ, ನೀಚವಿದ್ಯೆ, ನೀಚ ದೇವತೋಪಾಸನೆ, ಮರಣ, ದುಃಖ, ಅಸತ್ಯ, ಅಧರ್ಮ, ಬಂಧನ, ಕುರೂಪ, ಶಾಂತಿ, ದುಷ್ಪ್ರವರ್ತನೆ, ಪಾಪ, ನರಕ, ನೀಚ ಜೀವನ, ರೋಗಗಳು, ದಾಸಿಜನ ಸೌಖ್ಯ, ವಿಧವ ಸೌಖ್ಯ, ನಪುಂಸಕತ್ವ, ಪೌರುಷಹೀನ, ಪಾಪಾರ್ಜನೆ, ಅನಾಚಾರ, ಜೀವಹಿಂಸೆ ಮಾಲಿನ್ಯವಸ್ತ್ರ, ಶಿಥಿಲ ವಸ್ತುಗಳು, ಪಾಪನು, ಕ್ರೂರತ್ವ, ಬೂದಿ ಬಳಿದುಕೊಂಡವನು, ಸನ್ಯಾಸಿ ಅಥವಾ ಸನ್ಯಾಸಿನಿ, ಕಪ್ಪನೆ ವಸ್ತ್ರಗಳು, ಪಾಪಿಗಳೊಂದಿಗೆ ಸ್ನೇಹ, ಶೂದ್ರನು, ವ್ಯವಸಾಯದಾರನು, ಜೈಲು, ಕೃಶಿಸಿದ ಶರೀರ ಇರುವವನು, ಹರಿದ ವಸ್ತ್ರಗಳು ಇರುವವನು, ಬ್ರಾಹ್ಮಣದ್ವೇಷಿ, ಎಮ್ಮೆಗಳಿಗೆ ಅಧಿಪತಿ, ಭಯಂಕರನು, ಪ್ರಾಣಿಗಳೊಂದಿಗೆ ರಮಿಸುವವನು, ನೀಚ ದೇವತೋಪಾಸನೆ, ಪಾತಾಳ ಗೃಹ, ಹೇಸರ ಕತ್ತೆಗಳು, ಕೆಟ್ಟ ಪ್ರವರ್ತನೆ, ದಾರಿದ್ರ್ಯ, ಅಡುಗೆಯವನು, ಮದ್ಯಪಾನ ವಿಕ್ರಯಿಸುವವನು, ಮಾಂಸವಿಕ್ರಯನು, ಮಾಂಸವಿಕ್ರಯಶಾಲೆ, ಭೋಜನ ವಿಕ್ರಯವು, ಕಬ್ಬಿಣದ ಅಂಗಡಿ, ಶಿಥಿಲ ಗೃಹ ಅದರ ನಿವಾಸ, ಕಾಫಿ ಹೋಟಲ್, ದಿನ್ನೆಗಳು, ಮಲವಿಸರ್ಜನ ಸ್ಥಳಗಳು, ಸ್ಮಶಾನ, ಕತ್ತಲಮನೆ, ಈಶ್ವರಿ ಮಾನ್ಯಗಳು, ಸಮಾಧಿಗಳು, ಬನ್ನಿಮರ, ಎಳ್ಳು, ವೃದ್ಧತ್ವ, ಮಾರಣಾಸ್ತ್ರಗಳು, ಶಕ್ತಿ ಆಲಯಗಳು,

ಕಪ್ಪುಬಣ್ಣ, ಕಾಮದಹನ ಸ್ಥಳ, ಪೀರ್ಲ ಗುಂಡವು, ಸಾರಾಯಿ, ಹೆಂಡ, ಅಂಗಡಿಗಳು, ಕಬ್ಬಿಣ, ಕಬ್ಬಿಣದ ವ್ಯಾಪಾರ.

ಇವೆಲ್ಲವೂ ಶನಿ ಅಧೀನದಲ್ಲಿರುವ ವಸ್ತುಗಳ ವಿಷಯಗಳು. ಉದಾಹರಣೆಗೆ ಕಬ್ಬಿಣ ಶನಿ ಅಧೀನದಲ್ಲಿನ ಲೋಹ ಅಲ್ಲವೆ! ಆದ್ದರಿಂದ ಶನಿ ಗ್ರಹ ಅನುಕೂಲವಾದ ಜಾತಕರು ಕೆಲವರು ಕಬ್ಬಿಣದ ವ್ಯಾಪಾರ ಮಾಡುತ್ತಾ, ಶನಿಗ್ರಹದಿಂದ ಒಳ್ಳೆಯ ಲಾಭಗಳನ್ನು ಹೊಂದಿ ದೊಡ್ಡ ಧನಿಕರಾಗಿ ಬದಲಾದವರು ಇದ್ದಾರೆ. ಶನಿಗ್ರಹ ವಿರುದ್ಧವಾಗಿದ್ದರೆ ನಷ್ಟಗಳಲ್ಲಿ ಮುಳುಗಿಸಿ ನೀಚ ವೃತ್ತಿಯನ್ನು ಮಾಡಿಸಿದ ವಿಧಾನ ಕೂಡಾ ಇದೆ. ಶನಿ ಎಂದರೆ ಎಲ್ಲಾ ಕೆಟ್ಟದು ಮಾಡುವವನೆಂದು, ಕಷ್ಟ ಕೊಡುವವನೆಂದು ಎಲ್ಲರೂ ಅಂದುಕೊಳ್ಳುವುದು ನಡೆಯುತ್ತಿದೆ. ಎಲ್ಲರೂ ಅಂದುಕೊಂಡಂತೆ ಶನಿ ಕಷ್ಟ ಕೊಡುವುದಕ್ಕೆ ಮಾತ್ರವೇ ಇದ್ದಾನೆಂದು ಅಂದುಕೊಳ್ಳುವುದು ತಪ್ಪು. ಶನಿ ಕಾಲಚಕ್ರದಲ್ಲಿ ತಿರುಗುವಾಗ ಆತನ ಕಿರಣಗಳು ಕರ್ಮಚಕ್ರದ ಮೇಲೆ ಬೀಳುತ್ತಾ ಹೋಗುತ್ತಿರುತ್ತವೆ ಅಲ್ಲವೇ! ಆಗ ಆ ಸ್ಥಾನಗಳಲ್ಲಿ ಇರುವ ಪಾಪಪುಣ್ಯಗಳನ್ನು ಅನುಸರಿಸಿ ಮನುಷ್ಯನಿಗೆ ಕಷ್ಟಸುಖಗಳು ಉಂಟಾಗುತ್ತಿರುತ್ತವೆ. ಶನಿ ಗ್ರಹ ಮಿತ್ರನಾದರೆ ಎಲ್ಲಾ ಒಳ್ಳೆಯದೇ ನಡೆಯುತ್ತದೆ. ಶತ್ರುವಾದರೆ ಎಲ್ಲಾ ಕೆಟ್ಟದೇ ನಡೆಯುತ್ತದೆಂದು ತಿಳಿಯಬೇಕು. ಆದ್ದರಿಂದ ಯಾವ ಗ್ರಹವಾಗಲಿ ತಾನು ಸ್ವಂತವಾಗಿ ಕೆಟ್ಟದನ್ನು ಉಂಟು ಮಾಡುವುದಕ್ಕೇ ಇದೆಯೆಂದುಕೊಳ್ಳುವುದು ತಪ್ಪು. ಈಗ ರಾಹು ಗ್ರಹವನ್ನು ಕುರಿತು ತಿಳಿದುಕೊಳ್ಳೋಣ.

## ರಾಹು

ಕ್ರೂರತ್ವ, ಪಾಪ, ನೀಚವಿದ್ಯೆ, ನೀಚ ಜೀವನ, ಚೋರ ಜೀವನ, ವಿಷಗಳು, ಸರ್ಪಗಳು, ಚೇಳು, ಮಂಡ್ರಗಬ್ಬೆಗಳು, ಕ್ರಿಮಿಕೀಟಕಾದಿಗಳು, ಹಾಳುಬಿದ್ದ ಗೃಹಗಳು, ಹುತ್ತಗಳು, ಗೆದ್ದಲು, ಅಂಕುಡೊಂಕು, ಉದ್ದಿನ ಬೇಳೆ, ಗರಿಕೆಹುಲ್ಲು,

ಮಾಂಸ ವಿಕ್ರಯ, ಕೊಳೆಯಾದ ವಸ್ತ್ರಗಳು ಧರಿಸುವುದು, ಹೊಗೆಯಬಣ್ಣ, ಮೋಸ ಮಾಡುವುದು, ಹಾವುಗಳನ್ನು ಹಿಡಿಯುವುದು, ಚೆಪ್ಪಲಿ ಹೊಲಿಯುವುದು, ಕಳ್ಳತನ ಮಾಡುವುದು, ಮತ್ತು ಪದಾರ್ಥಗಳನ್ನು ಮಾರುವುದು, ಮತಿನ್ತ ಪದಾರ್ಥಗಳನ್ನು ಸೇವಿಸುವುದು, ಅಪಸವ್ಯವಾಗಿ ತಿರುಗುವುದು. ಚಂಡಾಲತ್ವ, ರಾಕ್ಷಸತ್ವ, ಹತ್ಯೆಗಳು ಮಾಡುವುದು ಮುಂತಾದವೆಲ್ಲವೂ ರಾಹುಗ್ರಹವೊಂದರ ಅಧೀನದಲ್ಲಿರುತ್ತವೆ. ರಾಹು ಗ್ರಹವು ಜಾತಕವನ್ನನುಸರಿಸಿ ಕೆಲವರಿಗೆ ಅನುಕೂಲವಾಗಿ, ಕೆಲವರಿಗೆ ಅನಾನುಕೂಲವಾಗಿ ಇರುತ್ತದೆ. ಅನುಕೂಲ ಇರುವವನಿಗೆ ಜಾತಕದಲ್ಲಿ ಕರ್ಮಚಕ್ರದಲ್ಲಿನ ನಾಲ್ಕನೆ ಸ್ಥಾನದಲ್ಲಿ ರಾಹು ಗ್ರಹವಿದ್ದರೆ ಆ ಜಾತಕನನ್ನು ಪೂರ್ತಿಯಾಗಿ ಕಳ್ಳತನಗಳು, ದೊಡ್ಡ ದರೋಡೆಗಳು ಮಾಡುವುದೇ ವೃತ್ತಿಯಾಗಿ ಮಾಡುವನು. ಕಳ್ಳ ವೃತ್ತಿಗೆ ದೊಡ್ಡವನು ರಾಹು ಆಗಿರುವುದರಿಂದ ಮನುಷ್ಯನನ್ನು ಕಳ್ಳ ವೃತ್ತಿಯಲ್ಲಿ ಲಕ್ಷಗಳು ಸಂಪಾದಿಸುವಂತೆ ಮಾಡುತ್ತದೆ,ರಾಹು ಅನುಕೂಲವಾಗಿದ್ದರೆ ಆ ವೃತ್ತಿಯಲ್ಲಿ ಎಲ್ಲಿಯೂ ಆತಂಕ ಏರ್ಪಡುವುದಿಲ್ಲ. ಅದೇ ವೃತ್ತಿಯಲ್ಲಿ ಧನಿಕನನ್ನು ಮಾಡುವುದೇ ಅಲ್ಲದೇ, ಆತನಿಗೆ ಗೌರವ ಕೂಡಾ ಸಮಾಜದಲ್ಲಿ ಇರುವಂತೆ ಮಾಡುತ್ತದೆ. ಆತನು ದರೋಡೆ ಮಾಡುವವನೆಂದು ತಿಳಿದು ಆತನಿಗೆ ಭಯಪಟ್ಟು ಗೌರವಿಸುತ್ತಾರೆ. ಅದೇ ರಾಹು ಗ್ರಹ ವಿರುದ್ಧವಾಗಿದ್ದರೆ, ಕಳ್ಳತನವನ್ನು ವೃತ್ತಿಯಾಗಿ ಮಾಡಿದರೂ, ಅದರಲ್ಲಿ ಎಷ್ಟೋ ಸಲ ಸಿಕ್ಕಿಬಿದ್ದು ಒದೆ ತಿನ್ನುವುದು. ಪೋಲೀಸ್ ಕೇಸುಗಳು ಬಂದು ಇರುವ ಧನವನ್ನು ಕೂಡಾ ರಿಕವರೀ ಕೆಳಗೆ ಅವರು ಕಸಿದುಕೊಳ್ಳುವುದು ನಡೆಯುತ್ತಿರುತ್ತದೆ. ಆ ಕಳ್ಳ ವೃತ್ತಿಯಲ್ಲಿ ಜೀವನ ದುರ್ಭರವಾಗುತ್ತದೆ. ಜೈಲಿನಲ್ಲಿ ಕಾಲ ಕಳೆಯಬೇಕಾಗಿ ಬರುತ್ತದೆ. ಈ ವಿಧವಾಗಿ ರಾಹುವೊಂದರ ಮಿತ್ರ ಶತ್ರುತ್ವವನ್ನನುಸರಿಸಿ ಫಲಿತವಿರುತ್ತದೆ.

# ಕೇತು

ಕೇತು ಗ್ರಹ ಎಲ್ಲಾರ ದೃಷ್ಠಿಯಲ್ಲಿ ಚಿಕ್ಕದಾದರೂ ನಮ್ಮ ದೃಷ್ಠಿಯಲ್ಲಿ ದೊಡ್ಡದೆಂದು ಹೇಳದೆ ತಪ್ಪುವುದಿಲ್ಲ. ಹನ್ನೆರಡು ಗ್ರಹಗಳಲ್ಲಿ ಹನ್ನೊಂದು ಗ್ರಹಗಳು ಮನುಷ್ಯನನ್ನು ಪೂರ್ತಿಯಾಗಿ ಅಜ್ಞಾನದಲ್ಲಿ ಮುಳುಗಿಸಿ ಪ್ರಪಂಚ ಮಾರ್ಗದಲ್ಲಿ ನಡೆಸಿದಾಗ, ಒಂದು ಕೇತು ಗ್ರಹ ಮಾತ್ರ ಮನುಷ್ಯನಿಗೆ ದೈವಭಕ್ತಿಯನ್ನುಂಟುಮಾಡಿ ದೈವಮಾರ್ಗದಲ್ಲಿ ನಡೆಯುವುದಕ್ಕೆ ಅವಕಾಶ ಏರ್ಪಡಿಸುತ್ತಿದೆ. ಮನುಷ್ಯನಿಗಿರುವ ಶ್ರದ್ಧೆಯನ್ನನುಸರಿಸಿ ತನ್ನ ಮೂಲಕ ಮನುಷ್ಯನಿಗೆ ನಿರಾಕಾರ ಭಕ್ತಿ ಲಭಿಸುವಂತೆ ಮಾಡುತ್ತಿದೆ. ಆದ್ದರಿಂದ ದ್ವಾದಶ ಗ್ರಹಗಳಲ್ಲಿ ಕೇತುವನ್ನು ಮುಖ್ಯವಾದ ಗ್ರಹವಾಗಿ ನಾವು ಹೇಳುತ್ತಿದ್ದೇವೆ. ಅಂತಹ ಕೇತು ಗ್ರಹವೊಂದರ ಅಧೀನದಲ್ಲಿ ಏನಿವೆಯೋ ಈಗ ಗಮನಿಸೋಣ. ಆತ್ಮಜ್ಞಾನದಂತಹ ಜ್ಞಾನ, ಸನ್ಯಾಸತ್ವ, ನಿರಾಕಾರ ಭಕ್ತಿ, ದೈವಭಕ್ತಿ, ಆಶ್ರಮ ನಿವಾಸ. ಸನ್ಯಾಸಿಗಳೊಂದಿಗೆ ಸ್ನೇಹ, ವೇದಾಂತ, ದೇವರ ಧ್ಯಾಸ, ಚಿತ್ರವರ್ಣ, ದರ್ಭೆಗಿಡಗಳು, ಹುರಳಿಕಾಳು, ತಪಸ್ಸು, ಮೌನ, ಅಪಸವ್ಯ ಲಿಪಿಯನ್ನು ಬರೆಯುವುದು ಅಥವಾ ಅಂತಹದ್ದನ್ನು ಓದುವುದು, ವೈರಾಗ್ಯ, ಶೂದ್ರಗೋಷ್ಟಿ, ಮಹಮ್ಮದೀಯರು, ಹೇತುವಾದ ಮೊದಲಾದವೆಲ್ಲವೂ ಕೇತು ಆಧೀನದಲ್ಲಿ ಇರುತ್ತವೆ.

ಕೇತು ಗ್ರಹವೊಂದರ ಕಿರಣಗಳು ಕರ್ಮಚಕ್ರದಲ್ಲಿನ ಐದನೆ ಸ್ಥಾನದ ಮೇಲೆ ಬಿದ್ದರೆ ಐದನೆ ಸ್ಥಾನದಲ್ಲಿರುವ ಪ್ರಪಂಚ ಜ್ಞಾನದಿಂದ ದೇವರ ಜ್ಞಾನದಕಡೆ ಮರಳಿಸುವುದಕ್ಕೆ ಪ್ರಯತ್ನಿಸುತ್ತಾನೆ. ಆಗ ಮನುಷ್ಯನಿಗೆ ಪ್ರಪಂಚ ಜ್ಞಾನದ ಮೇಲೆ ಶ್ರದ್ಧೆ ಇದ್ದರೆ ಅದರಪ್ರಕಾರ ಪ್ರಪಂಚ ಜ್ಞಾನವನ್ನೇ ಉಂಟುಮಾಡುತ್ತಾ, ಪ್ರಪಂಚ ಜ್ಞಾನದಲ್ಲಿ ಹೇತುವಾದವನ್ನು ಉಂಟುಮಾಡಿ ಸತ್ಯಕ್ಕಾಗಿ ಹುಡುಕುವುದಕ್ಕೆ ಪ್ರಯತ್ನಿಸುವಂತೆ ಮಾಡುತ್ತದೆ. ಅಂತಹ ಸತ್ಯಾನ್ವೇಷಣೆಯಲ್ಲಿ ದೇವತೆಗಳನ್ನು ನಮ್ಮದಂತೆ ದೇವರಕಡೆ ದೃಷ್ಠಿ ಹರಿಯುವಂತೆ ಮಾಡುತ್ತದೆ. ಹಾಗಿರುವಾಗ ಮನುಷ್ಯನಿಗೆ ಸ್ವಲ್ಪ ಸ್ವಲ್ಪವಾಗಿ ದೇವರಕಡೆ ಚಿಂತೆ ಉಂಟಾಗುತ್ತದೆ. ಒಂದುವೇಳೆ

ಮೊದಲೇ ದೇವರ ಜ್ಞಾನದ ಮೇಲೆ ಮನುಷ್ಯನಿಗೆ ಶ್ರದ್ಧೆ ಇದ್ದರೆ ಪ್ರಪಂಚ ಜ್ಞಾನಕ್ಕೆ ವಿರುದ್ಧವಾಗಿ ನಡೆದುಕೊಳ್ಳುವಂತೆ ಮನುಷ್ಯನನ್ನು ಪ್ರೇರೇಪಿಸುತ್ತಾನೆ. ಪ್ರಪಂಚ ಮಾರ್ಗಕ್ಕೆ ವಿರುದ್ಧವಾಗಿ ನಡೆಸಿದಾಗ ಆತನು ಯಾರ ಪ್ರಮೇಯವೂ ಇಲ್ಲದಂತೆ ಪ್ರಪಂಚಕ್ಕೆ ವ್ಯತಿರೇಖ ಮಾರ್ಗವಾದ ದೇವರ ಮಾರ್ಗದಕಡೆ ಹೋಗುವಂತೆ ಮಾಡುತ್ತದೆ. ಆದರೂ ದೇವರ ಕಡೆ ಬಾರದೆ ದೇವರಕಡೆ ಎನ್ನುವಂತೆ ಮಾಡುತ್ತದೆ. ಒಂದುವೇಳೆ ಕೇತುಗ್ರಹ ವಿರೋಧಿಯಾಗಿ ಶತ್ರುಪಕ್ಷದಲ್ಲಿದ್ದರೆ, ಮನುಷ್ಯನನ್ನು ಪ್ರಪಂಚ ಜ್ಞಾನದಲ್ಲಿಯೇ ಇರುವಂತೆ ಮಾಡುತ್ತದೆ. ಅಂತಹವರಿಗೆ ಸ್ವಲ್ಪವಾದರೂ ದೈವಜ್ಞಾನದ ಮೇಲೆ ಆಸಕ್ತಿ ಇರುವುದಿಲ್ಲ. ಆತನಿಗೆ ಬಲವಂತವಾಗಿ ದೈವಜ್ಞಾನವನ್ನು ಹೇಳಿದರೂ ಆತನು ತಲೆ ಕೆಡಿಸಿಕೊಳ್ಳುವುದಿಲ್ಲ. ಈ ವಿಧವಾಗಿ ಕೇತು ಗ್ರಹವೊಂದರ ಐದನೆ ರಾಶಿಯಲ್ಲಿನ ಫಲಿತಾಂಶವಿರುವಾಗ ಉಳಿದ ರಾಶಿಗಳ ಫಲಿತಾಂಶಗಳು ಬೇರೆಯಾಗಿ ಇರುತ್ತವೆ.

## ಭೂಮಿ

ಇಲ್ಲಿಯವರೆಗು ಭೂಮಿಯನ್ನು ಗ್ರಹ ಕೂಟಮಿಯೊಳಗೆ ಯಾರೂ ಸೇರಿಸದಿದ್ದರೂ, ನಾವು ಮಾತ್ರ ಇಲ್ಲಿಂದ ಹೇಳಬೇಕಾಗಿ ಬಂದಿದೆ. ಕರ್ಮವನ್ನು ಪಾಲಿಸುವುದರಲ್ಲಿ ಭೂಮಿ ಕೂಡಾ ಪಾತ್ರ ವಹಿಸುತ್ತಿದೆ. ಆದ್ದರಿಂದ ಭೂಮಿಯನ್ನು ಗ್ರಹಕೂಟಮಿಯಲ್ಲಿ ಸೇರಿಸಿ ಹೇಳುವುದಾಗಿದೆ. ಭೂಮಿ ಅಧೀನದಲ್ಲಿ ಕೆಲವು ವಿಷಯಗಳು ಮಾತ್ರ ಇವೆ. ಅವುಗಳಲ್ಲಿ ಗಣಿಗಳು, ಖನಿಜಗಳು ಮುಖ್ಯವಾದವು. ಮನೆ ಸ್ಥಳಗಳು, ಗುಹೆಗಳು, ಮಂಜು ಪ್ರದೇಶಗಳು, ಹಿಮಪಾತ, ಅಂಗೈ, ಅಂಗಾಲುಗಳು ನವೆಯಾಗುವುದು, ಅಂಗೈ, ಅಂಗಾಲುಗಳು ಸೀಳುವುದು, ಚರ್ಮರೋಗಗಳು, ಸುವಾಸನೆಗಳು, ಸುಗಂಧ ದ್ರವ್ಯಗಳು, ಪೈಲ್ಸ್(ಮೂಲವ್ಯಾದಿ) ಮುಂತಾದವು ಭೂಮಿ ಅಧೀನದಲ್ಲಿವೆ.

## ಮಿತ್ರ

ಮಿತ್ರ ಗ್ರಹ ಕತ್ತಲೆ ಗ್ರಹ. ಆದ್ದರಿಂದ ಮಿತ್ರ ಅಧೀನದಲ್ಲಿ ನಿದ್ರೆ, ನಿದ್ರೆಯಲ್ಲಿನ ಕದಲಿಕೆಗಳು ಇರುತ್ತವೆ. ಮಿತ್ರ ಕತ್ತಲೆ ಗ್ರಹವಾಗಿರುವುದರಿಂದ ಕತ್ತಲೆಯಲ್ಲಿರುವ ನಿದ್ರೆಗೆ ಅಧಿಪತಿಯಾಗಿದೆ. ಅಷ್ಟೇ ಅಲ್ಲದೆ ನಿದ್ರೆಯಲ್ಲಿ ಬರುವ ತಲೆನೋವು, ನಿದ್ರೆಲೇಮಿ, ಮಾನಸಿಕ ವ್ಯಾಧಿಗಳು ಮಿತ್ರ ಗ್ರಹದಿಂದಲೇ ಉಂಟಾಗುತ್ತವೆ. ಆತ್ಮಜ್ಞಾನಕ್ಕೆ ಮಿತ್ರ ದಾರಿತೋರಿಸುತ್ತದೆ. ಸ್ವಪ್ನಗಳು ಕೂಡಾ ಮಿತ್ರ ಅಧೀನದಲ್ಲಿ ಇರುವವೇಯೆಂದು ತಿಳಿಯಬೇಕು. ನಿದ್ರೆಯಲ್ಲಿನ ಕದಲಿಕೆಗಳು, ಸ್ವಪ್ನದಲ್ಲಿನ ಕದಲಿಕೆಗಳಿಗೆ ಮಿತ್ರ ಗ್ರಹವೇ ಕಾರಣ.

## ಚಿತ್ರ

ಮನುಷ್ಯ ಅಕಾಲ ಮರಣ ಹೊಂದಿದ ನಂತರ, ಜೀವಿಯು ಬದುಕಿದ್ದು ಪರಕಾಯ ಪ್ರವೇಶ ಮಾಡುವುದನ್ನು (ಮತ್ತೊಂದು ಶರೀರದಲ್ಲಿ ಸೇರುವುದನ್ನು) ಆ ಶರೀರದಲ್ಲಿ ಎಷ್ಟು ಕಾಲ ಇರಬೇಕೆಂಬ ವಿಷಯವನ್ನು ಚಿತ್ರಗ್ರಹ ಸೂಚಿಸುತ್ತದೆ. ಸೂಕ್ಷ್ಮಶರೀರದೊಂದಿಗಿದ್ದು ಯಾರೊಳಗೂ ಸೇರದೆ ಇರುವ ವಿಷಯವನ್ನು ಸೂಕ್ಷ್ಮವಾಗಿರುವ ಕಾಲದಲ್ಲಿ ಜ್ಞಾನ ಹೊಂದುವ ಅವಕಾಶವನ್ನು ಚಿತ್ರಗ್ರಹ ಸೂಚಿಸುತ್ತದೆ. ಒಂದುವೇಳೆ ಚಿತ್ರಗ್ರಹ ಶತ್ರುವಾದರೆ ಯಾರೊಳಗೂ ಸೇರದಂತಿರುವುದು, ಉಳಿದ ಸೂಕ್ಷ್ಮಗಳಿಂದ ಬಾಧೆ ಬೀಳುವುದು ನಡೆಯುತ್ತಿರುತ್ತದೆ. ಚಿತ್ರ ಗ್ರಹ ಅಕಾಲಮೃತ್ಯುವನ್ನೂ, ತಾತ್ಕಾಲಿಕ ಮರಣವನ್ನು ಕೂಡಾ ಸೂಚಿಸುತ್ತದೆ. ಸೂಕ್ಷ್ಮಶರೀರದೊಂದಿಗಿರುವ ಸಮಯದಲ್ಲಿ ಮನೋಬಾಧೆಗಳು ಇಲ್ಲದಂತೆ ಜ್ಞಾನಚಿಂತೆಯಲ್ಲಿರುವಂತೆ ಚಿತ್ರಗ್ರಹ ಮಾಡುತ್ತದೆ. ಚಿತ್ರಗ್ರಹ ಅದೃಶ್ಯವಾಗಿದ್ದು ದಿನದಲ್ಲಿ ಕೆಲವು ನಿಮಿಷಗಳು ಮಾತ್ರ ಕಾಣಿಸುತ್ತದೆನ್ನುವ ಸೂಚನೆಯಾಗಿ ಸೂಕ್ಷ್ಮಶರೀರ ಅದೃಶ್ಯವಾಗಿದ್ದು ಸ್ವಲ್ಪ ಸಮಯ ಮಾತ್ರ ಇತರರಲ್ಲಿ ಸೇರಿ ಹೊರಗೆ ತಿಳಿಯುವಂತೆ ಮಾಡುತ್ತಿದೆ.

ಹನ್ನೆರಡು ಗ್ರಹಗಳ ಅಧೀನದಲ್ಲಿರುವ ವಿಷಯ, ವಸ್ತು ಸಮುದಾಯವನ್ನು ತಿಳಿದುಕೊಂಡಿದ್ದೇವೆ. ಗ್ರಹಗಳ ಅಧೀನದಲ್ಲಿ ಇನ್ನೂ ನಮಗೆ ತಿಳಿಯದ ಅನೇಕಗಳಿವೆ. ನಾವು ಸ್ವಲ್ಪಮಟ್ಟಿಗೆ ಹೇಳಿಕೊಂಡಿದ್ದೇವೆ. ಆದರೆ ಅನುಭವವನ್ನನುಸರಿಸಿ ಇನ್ನೂ ಕೆಲವು ವಿಷಯಗಳನ್ನು ತಿಳಿಯಬೇಕಾಗಿದೆ. ಜ್ಯೋತಿಷ್ಯಶಾಸ್ತ್ರದಲ್ಲಿ ಪರಿಶೋಧನೆಗಳು ನಡೆಯುತ್ತಿಲ್ಲ. ಆದ್ದರಿಂದ ಈ ಶಾಸ್ತ್ರ ಉಳಿದ ನಾಲ್ಕು ಶಾಸ್ತ್ರಗಳಂತೆ ಅಭಿವೃದ್ಧಿ ಹೊಂದಲಿಲ್ಲವೆಂದು ಹೇಳಬಹುದು. ಅಭಿವೃದ್ಧಿ ಆಗದಿರುವುದು ಒಂದು ಲೋಪವಾದರೆ, ಇರುವುದು ಕೂಡಾ ಕಾಲಕ್ರಮದಲ್ಲಿ ಇಲ್ಲದಂತೆ ಹೋಗುವುದೂ, ಬದಲಾವಣೆಹೊಂದಿ ಹೋಗುವುದೂ ಮತ್ತೊಂದು ಲೋಪ. ಆದ್ದರಿಂದ ಜ್ಯೋತಿಷ್ಯವು ಶಾಸ್ತ್ರದಂತೆ ಕಾಣಿಸದೆ ಕೆಲವರ ದೃಷ್ಠಿಯಲ್ಲಿ ಮೂಢನಂಬಿಕೆಯಾಗಿ ಕಾಣಿಸುತ್ತಿದೆ. ಉಳಿದ ಶಾಸ್ತ್ರಗಳಾದ ಗಣಿತ, ಖಗೋಳ, ರಸಾಯನ, ಭೌತಶಾಸ್ತ್ರಗಳಲ್ಲಿ ಪರಿಶೋಧನ ನಡೆದಂತೆ ಜ್ಯೋತಿಷ್ಯ ಶಾಸ್ತ್ರದಲ್ಲಿ ಪರಿಶೋಧನೆ ನಡೆಯಲಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಆದರೆ ಇರುವ ವಿಷಯಗಳು ಕೂಡಾ ಕಾಲಕ್ರಮದಲ್ಲಿ ಬದಲಾವಣೆಹೊಂದಿ ಬೇರೆ ವಿಧವಾಗಿ ಬದಲಾಗಿವೆಯೆಂದು ಬಹಳ ಜನರಿಗೆ ತಿಳಿದಿಲ್ಲ. ಈಗ ಆ ವಿಷಯಗಳು ಅವಶ್ಯಕತೆ ಇಲ್ಲದಿದ್ದರೂ ತಿಳಿದುಕೊಳ್ಳುವುದು ಒಳ್ಳೆಯದು. ಹಾಗೆ ತಿಳಿದುಕೊಳ್ಳುವುದರಿಂದ ಉಳಿದ ವಿಷಯಗಳಾದರೂ ಬದಲಾಗದಂತೆ ಇರಬಹುದು.

## 42 ಯೋಗ, ಕರಣ ಎಂದರೇನು?

ಪಂಚಾಂಗವನ್ನು ವಿಭಜಿಸಿದರೆ ಐದು ಭಾಗಗಳಾಗಿದೆಯೆಂದು ಮೊದಲೇ ಹೇಳಿಕೊಂಡಿದ್ದೇವೆ. ಪಂಚಾಂಗದಲ್ಲಿ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಎನ್ನುವ ಐದು ಭಾಗಗಳಿದ್ದರೂ ಇವುಗಳೇ ಪಂಚಾಂಗಗಳು ಎಂದು ಬಹಳ ಜನರಿಗೆ ತಿಳಿದಿಲ್ಲ. ಈ ಐದು ಭಾಗಗಳಲ್ಲಿ ನಕ್ಷತ್ರ ಜ್ಯೋತಿಷ್ಯದಲ್ಲಿ ಮುಖ್ಯಪಾತ್ರ ಪೋಷಿಸುತ್ತಿದೆಯೆಂದು ಕೂಡಾ ಹಿಂದಿನ ಪುಟಗಳಲ್ಲಿ ಹೇಳಿಕೊಂಡಿದ್ದೇವೆ. ವಾರ ಎಂದರೆ ಏನೋ ಎಲ್ಲರಿಗೂ ತಿಳಿದಿದೆ. ಪ್ರತಿ ದಿನ ಯಾವುದೋ

ಒಂದು ವಾರದ ಹೆಸರು ಬರುತ್ತಿದೆ. ದಿನದ ಹೆಸರನ್ನು ವಾರ ಎನ್ನುತ್ತಿದ್ದೇವೆ. ಪ್ರತಿ ದಿನ ಒಂದು ವಾರವಿದ್ದಂತೆ, ಪ್ರತಿ ವಾರಕ್ಕು (ದಿನಕ್ಕು) ಒಂದು ನಕ್ಷತ್ರ ಇದೆ. ಹಾಗೇ ಒಂದು ತಿಥಿಯು ಇದೆ. ವಾರ ಎಲ್ಲರಿಗೂ ತಿಳಿದಿದೆ. ಆದರೇ ಕೆಲವರಿಗೆ ತಿಥಿ ನಕ್ಷತ್ರಗಳನ್ನು ಕುರಿತು ತಿಳಿದಿಲ್ಲ. ಇಂದಿನ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವವರಿಗೆ ಇವುಗಳನ್ನು ಕುರಿತು ತಿಳಿದುಕೊಳ್ಳುವ ಅವಕಾಶವಿಲ್ಲ. ಆದ್ದರಿಂದ ಈಗಿನ ಯುವಕರಿಗೆ ತಿಥಿ ನಕ್ಷತ್ರಗಳು ತಿಳಿದಿಲ್ಲವೆಂದೇ ಹೇಳಬಹುದು. ತಿಥಿ, ವಾರ, ನಕ್ಷತ್ರಗಳನ್ನು ಕುರಿತು ಈಗಿನ ಯುವಕರಲ್ಲಿ ಕೆಲವರಿಗೆ ತಿಳಿಯದಿದ್ದರೂ ಹಿರಿಯರೆಲ್ಲರಿಗೂ ಬಹಳ ಜನರಿಗೆ ತಿಥಿ, ವಾರ, ನಕ್ಷತ್ರಗಳನ್ನು ಕುರಿತು ತಿಳಿದಿದೆ. ಇನ್ನು ಯೋಗ, ಕರಣ ಎನ್ನುವವುಗಳ ವಿಷಯಕ್ಕೆ ಬಂದರೆ ಅವುಗಳ ವಿಷಯ ಬಹಳ ಜನ ಹಿರಿಯರಿಗು ಕೂಡಾ ತಿಳಿದಿಲ್ಲವೆಂದೇ ಹೇಳಬಹುದು. ಒಂದುವೇಳೆ ಕೆಲವರಿಗೆ ಇವುಗಳ ವಿಷಯ ತಿಳಿದಿದ್ದರೂ ಅವುಗಳ ಅಸಲಾದ ಭಾವವೇನೊ ತಿಳಿದಿಲ್ಲ. ಈ ವಿಷಯದಲ್ಲಿ ನನಗು ಕೂಡಾ ಸರಿಯಾಗಿ ತಿಳಿದಿಲ್ಲವೆಂದೇ ಹೇಳುತ್ತಿದ್ದೇನೆ. ಏಕೆಂದರೇ! ಯೋಗ, ಕರಣ ವಿಷಯದಲ್ಲಿ ಎರಡು ಭಾವಗಳು ಇವೆ. ಪಂಚಾಂಗ, ಜ್ಯೋತಿಷ್ಯ ತಿಳಿದವರಿಗೆ ಯೋಗ, ಕರಣ ಎಂದರೇ ಒಂದು ವಿಧವಾಗಿ ತಿಳಿದಿವೆ. ಪಂಚಾಂಗದಲ್ಲಿರುವ ಯೋಗ, ಕರಣ ಎನ್ನುವ ಎರಡು ಕಾಲಕ್ರಮೇಣ ಅವುಗಳ ಅರ್ಥಗಳು, ಸಂಖ್ಯೆಗಳು, ಹೆಸರುಗಳು ಎಲ್ಲಾ ಬದಲಾಗಿಹೋಗಿವೆ. ಮೊದಲು ಜ್ಯೋತಿಷ್ಯಕ್ಕಾಗಿ ತಯಾರು ಮಾಡಿದ ಯೋಗ, ಕರಣಗಳು ಬೇರೆ, ಈದಿನ ಕೆಲವರಿಗೆ ಮಾತ್ರ ತಿಳಿದ ಯೋಗ, ಕರಣಗಳು ಬೇರೆಯೆಂದು ಹೇಳಬಹುದು. ಈದಿನ ಕೆಲವರಿಗೆ ತಿಳಿದ ಯೋಗ ಕರಣಗಳ ಹೆಸರುಗಳು, ಸಂಖ್ಯೆಗಳು ಹೀಗೆ ಇವೆ.

**ಯೋಗಗಳು :–** ಒಟ್ಟು = 27, ಅವುಗಳ ಹೆಸರುಗಳು ವರಸೆಕ್ರಮದಲ್ಲಿ 1. ವಿಷ್ಕಂಭ 2. ಪ್ರೀತಿ 3. ಆಯುಷ್ಮಾನ್ 4. ಸೌಭಾಗ್ಯ 5. ಶೋಭನ 6. ಅತಿಗಂಡ 7. ಸುಕರ್ಮ 8. ಧೃತಿ 9. ಶೂಲ 10. ಗಂಡಾಂತರ 11. ವೃದ್ಧಿ 12. ಧ್ರುವ 13. ವ್ಯಾಘಾತ 14. ಹರ್ಷಣ 15. ವಜ್ರ 16. ಸಿದ್ಧಿ 17. ವ್ಯತಿಪಾತ್

18. ವರಿಯಾನ್ 19. ಪರಿಘಮ 20. ಶಿವ 21. ಸಿದ್ಧ 22 ಸಾಧ್ಯ 23. ಶುಭ 24. ಶುಭ್ರ 25. ಬ್ರಹ್ಮ 26. ಇಂದ್ರ 27. ವೈಧೃತಿ. ಈ 27 ಯೋಗಗಳನ್ನು ಕೆಲವು ಗ್ರಂಥಗಳಲ್ಲಿ ಬರೆದಿದ್ದಾರೆ. ಅವುಗಳನ್ನೇ ನಾವು ಶೇಖರಿಸಿ ಇಲ್ಲಿ ತೋರಿಸಿದ್ದೇವೆ. ಇವು ಯಾವುವೋ, ಏತಕ್ಕಿವೆಯೋ, ಇವುಗಳ ಪ್ರಯೋಜನೆ ಏನೋ ನನಗೆ ಮಾತ್ರ ಸ್ವಲ್ಪವೂ ಕೂಡಾ ತಿಳಿದಿಲ್ಲ.

ಈ ಯೋಗಗಳು 27 ಎಂದು ಅವುಗಳ ಹೆಸರುಗಳನ್ನು ಕೂಡಾ ಬರೆದವರು ಇದೇ ಪದ್ಧತಿಯಲ್ಲಿಯೇ ಕರಣಗಳನ್ನು ಕೂಡಾ ಬರೆದಿದ್ದಾರೆ. ಅವರಿಗೆ ತಿಳಿದ ವಿಧಾನದಲ್ಲಿ ಕರಣಗಳು 11 ಎಂದು ಹೇಳುತ್ತಾ ಅವುಗಳ ಹೆಸರುಗಳನ್ನು ಕೂಡಾ ಹೀಗೆ ಹೇಳಿದ್ದಾರೆ. ಕರಣಗಳು ಒಟ್ಟು (11) ಹನ್ನೊಂದು. ಅವುಗಳ ಹೆಸರುಗಳು ವರಸೆಯಾಗಿ ಹೀಗಿವೆ. 1. ಬವ 2. ಬಾಲವ 3. ಕೌಲವ 4. ತೈತುಲ 5. ಗರಜಿ 6. ವರಾಜಿ 7. ಭದ್ರ 8. ಶಕುನಿ 9. ಚತುಷ್ಪಾತ್ 10. ನಾಗವ 11. ಕಿಂಸ್ತುಘ್ನ.

27 ಯೋಗಗಳೊಂದಿಗೆ 11 ಕರಣಗಳನ್ನು ಕೂಡಾ ಕೆಲವು ಗ್ರಂಥಗಳಲ್ಲಿ ಬರೆದಿದ್ದಾರೆ ಇವು ಕೂಡಾ ಏತಕ್ಕಿವೆಯೋ, ಇವುಗಳ ಪ್ರಯೋಜನೆ ಏನೋ ನನಗೆ ಸ್ವಲ್ಪವೂ ತಿಳಿದಿಲ್ಲ. ನನ್ನ ಮಾತನ್ನು ಕೇಳಿದ ಕೆಲವರಿಗೆ ಆಶ್ಚರ್ಯ ಉಂಟಾಗಿ ಪಂಚಾಂಗದಲ್ಲಿ ಭಾಗಗಳಾಗಿರುವ ಯೋಗ, ಕರಣಗಳನ್ನು ತಿಳಿದಿಲ್ಲವೆಂದು ಹೇಳುತ್ತಿರುವ ನೀವು, ಜ್ಯೋತಿಷ್ಯಶಾಸ್ತ್ರವನ್ನು ಹೇಗೆ ಬರೆಯುತ್ತಿದ್ದೀರ? ಎಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಏನೆಂದರೆ! ಯೋಗ ಕರಣಗಳೆಂದರೇ ನನ್ನ ಭಾವನೆಯಲ್ಲಿ ಬೇರೆ ಅರ್ಥ ಇದೆಯೆಂದು, ಅವು ಇವು ಅಲ್ಲವೆಂದು ಅಂದುಕೊಳ್ಳುತ್ತಿದ್ದೇನೆ. ಇತರರಿಗೆ ತಿಳಿದ ಯೋಗ, ಕರಣಗಳು ನನಗೆ ತಿಳಿದಿಲ್ಲ. ನನಗೆ ತಿಳಿದ ಯೋಗ ಕರಣಗಳು ಇತರರಿಗೆ ತಿಳಿಯದಿರಬಹುದು. ಇತರರಿಗೆ ತಿಳಿದರೂ, ತಿಳಿಯದಿದ್ದರೂ ನನ್ನ ಭಾವನೆಯಲ್ಲಿ ಯೋಗ ಎಂದರೇ ಸೇರುವಿಕೆ ಎಂದು, ಕರಣ ಎಂದರೆ ಮಾಡುತ್ತಿರುವವನೆಂದು

ಅಥವಾ ಮಾಡುತ್ತಿದೆಯೆಂದು ಅರ್ಥ. ಇವುಗಳನ್ನು ಕುರಿತು ಎಲ್ಲರಿಗೂ ತಿಳಿಸಬಲ್ಲೆನು.

ನಮಗೆ ತಿಳಿದ ಯೋಗ, ಕರಣ ಎರಡು ವಿಧಗಳು ಇವೆ. ಒಂದು ಜ್ಯೋತಿಷ್ಯ ಭಾವದ ಪ್ರಕಾರ, ಎರಡು ಆಧ್ಯಾತ್ಮಿಕ ಭಾವದ ಪ್ರಕಾರ ಎರಡು ವಿಧಗಳ ಭಾವಗಳು ಇವೆ. ಜ್ಯೋತಿಷ್ಯ ಭಾವದ ಪ್ರಕಾರ ಹೇಳಿಕೊಂಡರೆ, ಎರಡು ಗ್ರಹಗಳ ಸೇರುವಿಕೆಯನ್ನು ಯೋಗ ಎಂದು ಹೇಳುತ್ತಿರುತ್ತಾರೆ. ಒಂದೇ ಲಗ್ನದಲ್ಲಿ ಎರಡು ಗ್ರಹಗಳು ಸೇರಿದರೆ, ಆ ಗ್ರಹಗಳ ಹೆಸರಿನಿಂದ ಅದನ್ನು ಯೋಗ ಎನ್ನುತ್ತೇವೆ. ಉದಾಹರಣೆಗೆ ಬುಧನು, ಸೂರ್ಯನು ಒಂದೇ ಲಗ್ನದಲ್ಲಿ ಸೇರಿದಾಗ ನಡೆಯುವ ಕಾಲವನ್ನು "ಬುಧಾರ್ಕ ಯೋಗ" ಎನ್ನುತ್ತಾರೆ. ಎರಡು ಶುಭಗ್ರಹಗಳು ಒಂದು ಲಗ್ನದಲ್ಲಿ ಬೆರೆತರೂ ಅವರಿಬ್ಬರು ಬೆರೆತು ಕೊಡುವ ಒಳ್ಳೆಯ ಫಲಿತಗಳನ್ನು ಅನುಭವಿಸುವ ಕಾಲವನ್ನು ಯೋಗ ಎಂದು ಕರೆಯಲಾಗುತ್ತಿದೆ. ಹೊರಗಿನ ದೃಷ್ಟಿಗೆ ಕೆಲಸಗಳನ್ನು ಮಾಡುವವನನ್ನು ಕರಣ ಎನ್ನುತ್ತಿದ್ದೇವೆ. "ಕರಣವಾದವನು ಯೋಗ ಅನುಭವಿಸುತ್ತಾನೆ" ಎಂದು ಜ್ಯೋತಿಷ್ಯದಲ್ಲಿ ಪೂರ್ವದಲ್ಲಿ ಹೇಳುತ್ತಿದ್ದರು. ಇನ್ನು ಬ್ರಹ್ಮವಿದ್ಯಾಶಾಸ್ತ್ರದ ಪ್ರಕಾರ ಜೀವಾತ್ಮ ಆತ್ಮ ಎನ್ನುವ ಎರಡು ಆತ್ಮಗಳ ಸೇರುವಿಕೆಯನ್ನು ಯೋಗ ಎನ್ನುತ್ತಾರೆ. ಕೆಲಸ ನಡೆಯುವುದಕ್ಕೆ ಕಾರಣವಾದ ಕರ್ಮವನ್ನು ಕರಣ ಎನ್ನುತ್ತಿದ್ದೇವೆ. ಜ್ಯೋತಿಷ್ಯದಲ್ಲಿ ಎರಡು ಗ್ರಹಗಳ ಸೇರುವಿಕೆ ಯೋಗವಾದರೆ, ಆಧ್ಯಾತ್ಮಿಕದಲ್ಲಿ ಎರಡು ಆತ್ಮಗಳ ಸೇರುವಿಕೆ ಯೋಗವಾಗುತ್ತದೆ. ಹಾಗೆಯೇ ಜ್ಯೋತಿಷ್ಯದಲ್ಲಿ ಕೆಲಸ ನಡೆಯುವುದಕ್ಕೆ ಕಾರಣವಾದ ಮನುಷ್ಯನನ್ನು ಕರಣ ಎನ್ನುತ್ತೇವೆ. ಆಧ್ಯಾತ್ಮಿಕದಲ್ಲಿ ಕಾರ್ಯ ನಡೆಯುವುದಕ್ಕೆ ಕಾರಣವಾದ ಕರ್ಮವನ್ನು ಕರಣ ಎನ್ನುತ್ತೇವೆ. ಆದರೇ ಪಂಚಾಂಗದಲ್ಲಿ ಎರಡು ಅಂಗಗಳಾದ ಯೋಗ, ಕರಣಗಳನ್ನು ಯೋಗಗಳಾಗಿ ಗ್ರಹಗಳ ಸೇರುವಿಕೆಯನ್ನು, ಕರಣವಾಗಿ ಕೆಲಸ ಮಾಡುತ್ತಿರುವ ಮನುಷ್ಯನನ್ನು ಲೆಕ್ಕಿಸಿಕೊಳ್ಳಬಹುದು.

ಪಂಚಾಂಗದಲ್ಲಿ ತಿಥಿ, ವಾರ, ನಕ್ಷತ್ರ ಎನ್ನುವ ಮೂರು ಅಂಗಗಳನ್ನು ಒಂದುಕಡೆ, ಯೋಗ ಕರಣಗಳನ್ನು ಒಂದುಕಡೆ ಎರಡು ಭಾಗಗಳಾಗಿ ವಿಭಜಿಸಿಕೊಳ್ಳಬಹುದು. ಏಕೆಂದರೆ ತಿಥಿ, ವಾರ, ನಕ್ಷತ್ರಗಳು ಮೂರರ ಮುಖಾಂತರ ಯೋಗ ಕರಣಗಳನ್ನು ತಿಳಿಯಬಹುದು. ಆದ್ದರಿಂದ ಯೋಗ ಕರಣಗಳಿಗೆ ತಿಥಿ, ವಾರ, ನಕ್ಷತ್ರಗಳು ಮುಖ್ಯವೆಂದು ಹೇಳಬಹುದು. ತಿಥಿ, ವಾರ, ನಕ್ಷತ್ರಗಳೆನ್ನುವ ಮೂರರಲ್ಲಿ ಯಾರಿಗೂ ಎಂಥಹ ಅನುಮಾನಗಳೂ ಇಲ್ಲ, ಅವು ಎಲ್ಲರಿಗು ತಿಳಿದಿರುವವೇ. ಆದರೇ ಎರಡು ಆದ ಯೋಗ, ಕರಣಗಳ ವಿಷಯದಲ್ಲಿ ಕೆಲವರು ಯಾರಿಗೂ ಹೊಂದಿಕೆಯಾಗದ 27 ಯೋಗಗಳು, 11 ಕರಣಗಳೆಂದು ಹೇಳುವುದು ನಮಗೆ ಪೂರ್ತಿ ಅರ್ಥವಾಗದ ವಿಷಯ. ಅವರು ಹೇಳಿದ ಯೋಗ, ಕರಣಗಳು ಪಂಚಾಂಗದಲ್ಲಾಗಲಿ, ಜ್ಯೋತಿಷ್ಯದಲ್ಲಾಗಲಿ ಅವುಗಳ ಉಪಯೋಗವೇನೋ ಅವುಗಳನ್ನು ಹೇಳಿದವರೇ ಹೇಳಬೇಕಾಗಿರುತ್ತದೆ.

ಇದಕ್ಕು ಮುನ್ನ ಗ್ರಹಗಳನ್ನು ಕುರಿತು ಹೇಳಿಕೊಂಡಿದ್ದೇವೆ. ಎಲ್ಲರೂ ಹೇಳಿಕೊಂಡ ನವಗ್ರಹಗಳನ್ನು ಹೇಳದೆ, ಪ್ರತ್ಯೇಕ ದ್ವಾದಶ ಗ್ರಹಗಳನ್ನು ಹೇಳಿಕೊಂಡಿದ್ದೇವೆ. ಮೂರು ಗ್ರಹಗಳ ವ್ಯತ್ಯಾಸ ಏಕೆ ಬಂದಿದೆಯೋ ಒಂಭತ್ತು ಗ್ರಹಗಳನ್ನು ಹೇಳಿದವರನ್ನೇ ಕೇಳಬೇಕು. 27 ಯೋಗಗಳನ್ನು, 11 ಕರಣಗಳನ್ನು ಹೇಗಾದರೆ ಅಲ್ಲಗಳೆದಿದ್ದೇವೊ, ಹಾಗೇ ನವಗ್ರಹಗಳನ್ನು ಅಲ್ಲಗಳೆದು ದ್ವಾದಶ ಗ್ರಹಗಳು ಸತ್ಯವೆಂದು ಹೇಳಿದ್ದೇವೆ. ಅಷ್ಟೇ ಅಲ್ಲದೆ ಉಳಿದ ಮೂರು ಗ್ರಹಗಳಿಗು ದಶಾಕಾಲಗಳು ಹೇಗಿವೆಯೋ ಹೇಳಿಕೊಂಡಿದ್ದೇವೆ. ದಶಾಕಾಲ ಪರಿಮಿತಿ ಬಳಿ ಶನಿ ವರ್ಗಕ್ಕು ಗುರುವರ್ಗಕ್ಕು ಸಮಾನವಾಗಿ 60 ಸಂವತ್ಸರಗಳಿವೆಯೆಂದು ಹೇಳಿದ್ದೇವೆ. ದಶಗಳ ಕಾಲವನ್ನು ಸರಿಮಾಡಿ ಹೇಳುವುದೇ ಅಲ್ಲದೇ ಗ್ರಹಗಳ ಅಧೀನದಲ್ಲಿರುವವುಗಳನ್ನು ಹೇಳುತ್ತಾ ಎಲ್ಲರೂ ಬಿಟ್ಟುಹಾಕಿದ ಮೂರು ಗ್ರಹಗಳಾದ ಭೂಮಿ, ಮಿತ್ರ, ಚಿತ್ರ ಗ್ರಹಗಳ ಸ್ವಂತ ಅಧೀನದಲ್ಲಿ ಇರುವವ್ಯಾವೋ ಹೇಳಿದ್ದೇವೆ. ನಾವು ಹೇಳಿದ ಹನ್ನೆರಡು ಗ್ರಹಗಳ ವಿಷಯದಲ್ಲಿ ಬಹಳಜನ

ವಿಭೇಧಿಸುತ್ತಾರೆಂದು ತಿಳಿದು ನೀವು ಮೊದಲು ಓದಿರುವವೆಲ್ಲ ಸತ್ಯ ಅಲ್ಲವೆಂದು ತಿಳಿಸುವುದಕ್ಕೆ ನಮಗಿಂತ ಮೊದಲು ಹೇಳಿದವರ ಯೋಗಗಳು 27, ಕರಣಗಳು 11 ಎಷ್ಟು ಸತ್ಯವೋ ನೋಡಿರೆಂದು ಹೇಳಿದ್ದೇವೆ. ಯಾವಕಡೆ ನೋಡಿದರೂ 27 ಯೋಗಗಳು, 11 ಕರಣಗಳು ಅರ್ಥವಾಗದೆ ಹೋಗುತ್ತಿವೆ. ನಾವು ಹೇಳಿದ ಯೋಗಗಳು, ಕರಣಗಳು ಸುಲಭವಾಗಿ ಅರ್ಥವಾಗುತ್ತವೆ. ಈಗ ಎಲ್ಲರಿಗೂ ಹೊಸದಾಗಿರುವ ಹನ್ನೆರಡು ಗ್ರಹಗಳೆನ್ನುವ ಮಾತನ್ನೂ, ಹಾಗೇ ಬದಲಾವಣೆ ಹೊಂದಿದ ದಶಗಳ ಸಂವತ್ಸರಗಳನ್ನೂ ಸತ್ಯವೆಂದು ಪ್ರತಿ ಒಬ್ಬರೂ ತಿಳಿಯಬೇಕು. ಹನ್ನೆರಡು ಗ್ರಹಗಳನ್ನು, ಹನ್ನೆರಡು ದಶಗಳನ್ನು ಬಿಟ್ಟು ಜ್ಯೋತಿಷ್ಯವನ್ನು ನೋಡುವುದರಿಂದ ಹೆಚ್ಚಾಗಿ ಜ್ಯೋತಿಷ್ಯ ಅಶಾಸ್ತ್ರವಾಗಿ ಕಾಣಿಸುತ್ತಿದೆ. ಆದ್ದರಿಂದ ಕೆಲವರು ಅದೇ ಕೆಲಸವಾಗಿ ಜ್ಯೋತಿಷ್ಯ ಮೂಢನಂಬಿಕೆ ಯೆಂದು, ಜ್ಯೋತಿಷ್ಯವು ಶಾಸ್ತ್ರವಲ್ಲವೆಂದು ಹೇಳುತ್ತಾ, ಅದನ್ನು ಸಂಘ ಸೇವೆಯಾಗಿ ಹೇಳಿಕೊಳ್ಳುತ್ತಿದ್ದಾರೆ.

ಸೃಷ್ಠಿ ಆದಿಯಿಂದ ಆರುಶಾಸ್ತ್ರಗಳು ತಯಾರಾಗಿವೆ. ದೇವರೇ ಅವುಗಳನ್ನು ಮನುಷ್ಯರಿಗೆ ಒದಗಿಸಿದ್ದಾನೆಂದು ಹೇಳಬಹುದು. ಪ್ರಪಂಚದಲ್ಲಿ ಪ್ರತಿ ವಿಷಯವನ್ನು ನಿರ್ಣಯಿಸಿ ತೋರಿಸುವುದು ಶಾಸ್ತ್ರ. ಶಾಸ್ತ್ರಸಮ್ಮತವಾದಾಗಲೇ ಅದು ಸತ್ಯವಾದುದೆಂದು, ಶಾಸ್ತ್ರಬದ್ಧವಲ್ಲದ್ದು ಯಾವುದಾದರೂ ಅದು ಅಸತ್ಯವೆಂದು ಹೇಳುವುದಕ್ಕೆ ದೇವರು ಶಾಸ್ತ್ರಗಳನ್ನು ಸೃಷ್ಠಿಸಿದ್ದಾನೆ. ಪ್ರಪಂಚದಲ್ಲಿ ಷಟ್ ಶಾಸ್ತ್ರಗಳಾಗಿರುವವುಗಳಲ್ಲಿ ಜ್ಯೋತಿಷ್ಯವು ಶಾಸ್ತ್ರ ಅಲ್ಲವೆಂದರೇ ಆರು ಶಾಸ್ತ್ರಗಳಲ್ಲಿ ಒಂದಾದ ಜ್ಯೋತಿಷ್ಯ ಇಲ್ಲದೇಹೋಗಿ ಕೊನೆಗೆ ಐದು ಶಾಸ್ತ್ರಗಳು ಉಳಿದು ಹೋಗುತ್ತವೆ. ಒಂದು ಶಾಸ್ತ್ರ ಲೋಪಿಸಿದರೆ ಶಾಸ್ತ್ರಗಳ ಸಮತುಲ್ಯತೆ ಕಡಿಮೆಯಾಗಿ ಕೊನೆಗೆ ಯಾವ ಶಾಸ್ತ್ರವೂ ಇಲ್ಲದೇ ಹೋಗುವುದಕ್ಕೆ ಅವಕಾಶ ಏರ್ಪಡುತ್ತದೆ. ಆಗ ಯಾವ ವಿಷಯಕ್ಕೂ ಪ್ರಪಂಚದಲ್ಲಿ ಹದ್ದು ಪೊದ್ದು ಇಲ್ಲದೇ ಹೋಗುತ್ತದೆ. ಅದರಿಂದ ನಾಸ್ತಿಕತ್ವ ಏರ್ಪಟ್ಟು ಕೊನೆಗೆ ದೇವರೇ ಇಲ್ಲವೆನ್ನುವ ವಾದ ಹೊರಗೆ ಬಂದು ಬಲಶಾಲಿಯಾಗುತ್ತದೆ. ಅಂತಹ ಪರಿಸ್ಥಿತಿ ಬಾರದಂತಿರುವುದಕ್ಕೆ ಶಾಸ್ತ್ರಗಳು ಆರೆಂದು ಗ್ರಹಿಸಿ ಅವುಗಳನ್ನು ತಿಳಿದುಕೊಳ್ಳುವುದಕ್ಕೆ ಪ್ರಯತ್ನಿಸೋಣ.

ಜ್ಯೋತಿಷ್ಯಕ್ಕೆ ಅನುಕೂಲವಾಗಿ ಇರುವ ಕೆಲವು ಅಂಶಗಳನ್ನು ತೆಗೆದುಕೊಳ್ಳೋಣ. ಅದರಲ್ಲಿ ಗ್ರಹಗಳು ಭೂಮಿಮೇಲಿರುವ ಯಾವ ಯಾವ ಜಾತಿಗಳ ಮೇಲೆ ಅಧಿಕಾರ ಹೊಂದಿವೆಯೋ ತಿಳಿದುಕೊಳ್ಳೋಣ.

| | | | |
|---|---|---|---|
| 1) ಸೂರ್ಯನು | – ಕ್ಷತ್ರಿಯ | 2) ಚಂದ್ರನು | – ಬ್ರಾಹ್ಮಣ |
| 3) ಕುಜನು | – ನಾಯಿಬ್ರಾಹ್ಮಣ | 4) ಬುಧನು | – ವೈಶ್ಯ |
| 5) ಗುರು | – ಬ್ರಾಹ್ಮಣ | 6) ಶುಕ್ರನು | – ನಂಭೀಬ್ರಾಹ್ಮಣ |
| 7) ಶನಿ | – ಮಾದಿಗ, ಹೊಲೆಯ | 8) ರಾಹು | – ವಾಲ್ಮೀಕಿ (ಬೇಡರು) |
| 9) ಕೇತು | – ಇಸ್ಲಾಮಿಯರು | 10) ಭೂಮಿ | – ಜೈನರು |
| 11) ಮಿತ್ರ | – ಕ್ರೈಸ್ತರು | 12) ಚಿತ್ರ | – ಸಿಕ್ಕರು |

ಹನ್ನೆರಡು ಗ್ರಹಗಳು ಭೂಮಿ ಮೇಲಿರುವ ಎಲ್ಲಾ ಕುಲಗಳನ್ನು ತಮ್ಮ ಅಧೀನದಲ್ಲಿ ಇಟ್ಟುಕೊಂಡಿವೆ. ಇಲ್ಲಿ ಗಮನಿಸಿಕೊಳ್ಳಬೇಕಾಗಿರುವುದು ಏನೆಂದರೇ! ಸೂರ್ಯನು ಕ್ಷತ್ರಿಯ ಕುಲವನ್ನು ಒಂದನ್ನೇ ತನ್ನ ಅಧೀನದಲ್ಲಿಟ್ಟುಕೊಳ್ಳದೆ, ಕ್ಷತ್ರಿಯರಿಗೆ ಸಮಾನವಾಗಿರುವ ಕುಲಗಳೆಲ್ಲವನ್ನು ತನ್ನ ಅಧೀನದಲ್ಲಿ ಇಟ್ಟು ಕೊಂಡಿದ್ದಾನೆಂದು ತಿಳಿಯಬೇಕು. ರಾಜರು (ಕ್ಷತ್ರಿಯರು) ಮತ್ತು ಬಟ್ರಾಜರು ಇಬ್ಬರೂ ಸೂರ್ಯನ ಅಧೀನದಲ್ಲಿ ಇರುವಂತೆ ಲೆಕ್ಕಿಸಿಕೊಳ್ಳಬೇಕು. ಹಾಗೇ ಚಂದ್ರನ ಅಧೀನದಲ್ಲಿ ಬ್ರಾಹ್ಮಣ ಜಾತಿಗಳೆಲ್ಲ ಬರುತ್ತವೆಂದು ತಿಳಿಯಬೇಕು. ಶನಿ ಅಧೀನದಲ್ಲಿ ಮಾದಿಗ ಕುಲ ಅಲ್ಲದೆ ಅದಕ್ಕೆ ಸಮಾನವಾದವೆಲ್ಲ ಲೆಕ್ಕಿಸಬೇಕು. ರಾಹು ಅಧೀನದಲ್ಲಿ ಒಂದು ವಾಲ್ಮೀಕಿ ಕುಲ ಮಾತ್ರವಲ್ಲದೆ ಕೊರವರು (ಎರಿಕಲ), ಯಾನಾದಿ ಮೊದಲಾದ ಗಿರಿಜನರೆಲ್ಲರೂ ಇರುವಂತೆ ತಿಳಿಯಬೇಕು. ಹೀಗೆ ತಿಳಿಯುವುದರಿಂದ ಜ್ಯೋತಿಷ್ಯವು ಸುಲಭವಾಗುತ್ತದೆ. ಏನು ವೃತ್ತಿ ಮಾಡುತ್ತಿದ್ದಾ ನೆಂದು ಜ್ಯೋತಿಷ್ಯದಲ್ಲಿ ಪ್ರಶ್ನೆ ಬಂದಾಗ ನಾಲ್ಕನೆ ಸ್ಥಾನದಲ್ಲಿ ಬುಧಗ್ರಹ ಶುಭನಾಗಿ (ಮಿತ್ರನಾಗಿ)ಇದ್ದರೆ ಆತನು ವ್ಯಾಪಾರ ಮಾಡುತ್ತಿದ್ದಾನೆಂದು ಅಥವಾ ವ್ಯಾಪಾರದಲ್ಲಿ ಏರಿಕೆ ಆಗಬಲ್ಲನೆಂದು ಹೇಳಬಹುದು. ಈ ವಿಧವಾಗಿ ಚಿಕ್ಕ ಪ್ರಶ್ನೆಗಳಿಗು

ಉತ್ತರವನ್ನು ಇಂತಹ ಸಮಾಚಾರದ ಮೂಲಕ ಸುಲಭವಾಗಿ ಹೇಳಬಹುದು. ಆದ್ದರಿಂದ ಈಗ ಹನ್ನೆರಡು ಗ್ರಹಗಳು ಯಾವ ಯಾವ ಬಣ್ಣಗಳ ಮೇಲೆ ಅಧಿಕಾರ ಹೊಂದಿವೆಯೋ ನೋಡಿಕೊಳ್ಳೋಣ.

| | |
|---|---|
| 1) ಸೂರ್ಯನು – ಗೋಧಿಬಣ್ಣ | 2) ಚಂದ್ರನು – ಬಿಳಿಬಣ್ಣ |
| 3. ಕುಜನು – ಕೆಂಪುಬಣ್ಣ | 4) ಬುಧನು – ಎಲೆಹಸಿರು ಬಣ್ಣ |
| 5 ಗುರು – ಹರಿಶಿನ ಬಣ್ಣ | 6) ಶುಕ್ರನು – ಬಿಳಿ ಬಣ್ಣ |
| 7 ಶನಿ – ಕಪ್ಪು ಬಣ್ಣ | 8) ರಾಹು – ಸಿಮೆಂಟು ಬಣ್ಣ |
| 9) ಕೇತು–ಕೆಲವು ಬೆರೆತಬಣ್ಣಗಳು | 10) ಭೂಮಿ – ನೀಲಿಬಣ್ಣ |
| 11) ಮಿತ್ರ – ಅಡಿಕೆಬಣ್ಣ | 12) ಚಿತ್ರ – ಎಳೆ ಹರಿಶಿನ |

ಈ ಬಣ್ಣಗಳು ತಿಳಿಯುವುದರಿಂದ ಜಾತಕನಿಗೆ ಅನುಕೂಲವಾದ ಬಣ್ಣಗಳ ಬಟ್ಟೆಗಳು ಮಾತ್ರ ಆತನಿಗೆ ಶುಭವನ್ನು (ಒಳ್ಳೆಯದನ್ನು) ಉಂಟು ಮಾಡುತ್ತವೆಂದು, ಉಳಿದ ಬಣ್ಣಗಳು ಜಾತಕನಿಗೆ ವಿರುದ್ಧ ಗ್ರಹಗಳಾಗಿರುವುದರಿಂದ ಆ ಬಣ್ಣದ ಬಟ್ಟೆಗಳು ಧರಿಸಿದರೆ, ಅವುಗಳಿಂದ ಅಶುಭ ಕೆಡುಕು ನಡೆಯುತ್ತದೆಂದು ತಿಳಿಯಬಹುದು. ಆಗ ಅವರಿಗೆ ಅನುಕೂಲವಾದ ಗ್ರಹಗಳ ಬಟ್ಟೆಗಳನ್ನೇ ಧರಿಸುವುದಕ್ಕೆ ಅವಕಾಶವಿರುತ್ತದೆ. ತಮಗೆ ಅನುಕೂಲವಾದ ಗ್ರಹಗಳ ವೊಂದು ಬಣ್ಣ ವಸ್ತ್ರಗಳ ಮೇಲೆ ಆ ಬಣ್ಣಗಳ ಅಧಿಪತಿಗಳ (ಗ್ರಹಗಳ) ಕಿರಣಗಳು ಹೆಚ್ಚಾಗಿ ಪ್ರಸರಿಸುತ್ತವೆ. ಆದ್ದರಿಂದ ಜಾತಕನಿಗೆ ಗ್ರಹಬಲ ಬಟ್ಟೆಗಳ ಬಣ್ಣಗಳಿಂದ ಲಭಿಸಬಹುದೆಂದು ಹೇಳಬಹುದು. ಆದ್ದರಿಂದ ಹನ್ನೆರಡು ಗ್ರಹಗಳ ಆಧೀನ ದಲ್ಲಿರುವ ಬಣ್ಣಗಳನ್ನು ತಿಳಿದುಕೊಳ್ಳುವುದು ಒಳ್ಳೆಯದು. ಅಷ್ಟೇ ಅಲ್ಲದೆ ಕುಜಗ್ರಹ ಅನುಕೂಲವಾದುದಾಗಿದ್ದು ಜನ್ಮಲಗ್ನಗಳಲ್ಲಿ ಇರುವುದರಿಂದ ಅಲ್ಲಿಂದ 4, 7, 8 ಸ್ಥಾನಗಳನ್ನು ನೋಡುವುದರಿಂದ ಆ ಜಾತಕನಿಗೆ ಕೆಂಪುಬಣ್ಣದ ಬಟ್ಟೆಗಳ ಮೇಲೆ ಆಸಕ್ತಿ ಇರುತ್ತದೆಂದು ಕೂಡಾ ಹೇಳಬಹುದು. ಈಗ ಗ್ರಹಗಳ ಅಧೀನ ದಲ್ಲಿರುವ ರುಚಿಗಳ ವಿಷಯವನ್ನು ಕುರಿತು ತಿಳಿದುಕೊಳ್ಳೋಣ.

1) ಸೂರ್ಯನು – ಕಾರದ ಪುಡಿ 2) ಚಂದ್ರನು – ಉಪ್ಪು (ಚೌಳುಪ್ಪು)
3) ಕುಜನು – ಬೇವಿನ ಕಹಿ 4) ಬುಧನು – ಒಗರು
5) ಗುರು – ಪೂರ್ತಿ ಸಿಹಿ 6) ಶುಕ್ರನು – ನಿಂಬೆ ಹುಳಿ
7) ಶನಿ – ಕರಕ್ಕಾಯಿ ಒಗರು 8) ರಾಹು – ಮೆಣಸಿನಕಾಳಿನ ಕಾರ
9) ಕೇತು – ಉಪ್ಪು 10) ಭೂಮಿ – ಈರೇಕಾಯಿ ಕಹಿ
11) ಮಿತ್ರ – ಎಳೆ ಸಿಹಿ 12) ಚಿತ್ರ – ಹುಣಿಸೆ ಹುಳಿ

ಜಾತಕನಿಗೆ ಅನುಕೂಲವಾದ ಗ್ರಹಗಳನ್ನನುಸರಿಸಿ ಆ ಗ್ರಹಗಳ ಅಧೀನದಲ್ಲಿರುವ ರುಚಿಗಳ ಮೇಲೆ ಇಷ್ಟವಿರುತ್ತದೆ. ಆದ್ದರಿಂದ ಕೆಲವರು ಕೆಲವು ರುಚಿಗಳನ್ನೇ ಹೆಚ್ಚಾಗಿ ಇಷ್ಟಪಡುತ್ತಿರುತ್ತಾರೆ. ಅಷ್ಟೇ ಅಲ್ಲದೆ ಶತ್ರುಗ್ರಹಗಳ ರುಚಿಗಳ ಆಹಾರಗಳಿಂದ ಯಾವಾಗಾದರೂ ಅನಾರೋಗ್ಯ ಉಂಟಾಗುವುದಕ್ಕೆ ಅವಕಾಶವಿರುತ್ತದೆ. ಹಾಗೇ ಅನುಕೂಲವಾದ ಗ್ರಹಗಳ ಅಧೀನದಲ್ಲಿನ ರುಚಿಗಳ ಆಹಾರದಿಂದ ಆರೋಗ್ಯವಾಗಿರುವುದು ಕೂಡಾ ನಡೆಯುತ್ತಿರುತ್ತದೆ. ಕೆಲವರಿಗೆ ಅವರ ಶತ್ರುಗ್ರಹಗಳ ರುಚಿಗಳ ಆಹಾರ ಶರೀರಕ್ಕೆ ಸರಿಹೋಗುವುದಿಲ್ಲ (ಅಲರ್ಜಿ ಆಗುತ್ತದೆ) ಆಗ ಸರಿಹೋಗದ ಆಹಾರಗಳನ್ನು ಬಿಡುವುದು ಒಳ್ಳೆಯದು. ಆದ್ದರಿಂದ ಯಾವ ಜಾತಕನಿಗೆ ಯಾವ ರುಚಿಗಳ ಆಹಾರ ಸರಿಹೋಗುತ್ತದೋ ತಿಳಿದುಕೊಳ್ಳುವುದು ಒಳ್ಳೆಯದು. ಈಗ ಗ್ರಹಗಳ ಲಿಂಗಭೇದವನ್ನು ಕುರಿತು ತಿಳಿದುಕೊಳ್ಳೋಣ.

1) ಸೂರ್ಯನು – ಪುರುಷ
2) ಚಂದ್ರನು – ಸ್ತ್ರೀ
3) ಕುಜನು – ಪುರುಷ
4) ಬುಧನು – ನಪುಂಸಕನು
5) ಗುರು – ಪುರುಷ
6) ಶುಕ್ರನು – ಸ್ತ್ರೀ
7) ಶನಿ – ನಪುಂಸಕ
8) ರಾಹು – ಸ್ತ್ರೀ
9) ಕೇತು – ನಪುಂಸಕ
10) ಭೂಮಿ – ಪುರುಷ
11) ಮಿತ್ರ – ಸ್ತ್ರೀ
12) ಚಿತ್ರ – ನಪುಂಸಕ

ಒಟ್ಟು ಹನ್ನೆರಡು ಗ್ರಹಗಳಲ್ಲಿ ನಾಲ್ವರು ಪುರುಷ ಗ್ರಹಗಳು, ನಾಲ್ವರು ಸ್ತ್ರೀ ಗ್ರಹಗಳೂ ಉಳಿದ ನಾಲ್ವರು ನಪುಂಸಕ ಗ್ರಹಗಳೆಂದು ತಿಳಿಯಬೇಕು. ಉದಾಹರಣೆಗೆ ಶುಕ್ರನು – ಸ್ತ್ರೀ ಎಂದು ಬರೆದಿರುವುದರಿಂದ ಶುಕ್ರಗ್ರಹ ಸ್ತ್ರೀ ಜಾತಿ ಗ್ರಹವೇನೊ ಎಂದುಕೊಳ್ಳಬಾರದು. ಭೂಮಿ ಮೇಲಿರುವ ಸಮಸ್ತಕ್ಕು ಹನ್ನೆರಡು ಗ್ರಹಗಳೇ ಅಧಿಪತಿಗಳೆಂದು ಹೇಳಿಕೊಂಡಿದ್ದೇವೆ ಅಲ್ಲವೆ! ಅದರ ಪ್ರಕಾರ ಭೂಮಿ ಮೇಲಿರುವ ಸ್ತ್ರೀಯರಿಗೆ, ಪುರುಷರಿಗೆ, ನಪುಂಸಕರಿಗೆ ಗ್ರಹಗಳು ಅಧಿಪತಿಗಳಾಗಿ ಇದ್ದಾರೆ ಆದರೆ, ಗ್ರಹಗಳು ಸ್ತ್ರೀಯರಾಗಿ, ಪುರುಷರಾಗಿ, ನಪುಂಸಕರಾಗಿ ಇಲ್ಲವೆಂದು ನೆನಪಿಟ್ಟುಕೊಳ್ಳಬೇಕು. ಈಗ ಯಾವ ಗ್ರಹ ಯಾರಿಗೆ ಕಾರಕರೋ ತಿಳಿದುಕೊಳ್ಳೋಣ.

| | |
|---|---|
| 1) ಸೂರ್ಯನು – ತಂದೆಗೆ | 7) ಶನಿ – ಆಯುವಿಗೆ |
| 2) ಚಂದ್ರನು – ತಾಯಿಗೆ | 8) ರಾಹು – ಚೋರರಿಗೆ |
| 3) ಕುಜನು – ಸೋದರರಿಗೆ | 9) ಕೇತುವು – ನಿರಾಕಾರ ಜ್ಞಾನಕ್ಕೆ |
| 4) ಬುಧನು – ಮಾವನಿಗೆ | 10) ಭೂಮಿ – ಅಜ್ಞಾನಕ್ಕೆ |
| 5) ಗುರು – ಪುತ್ರನಿಗೆ | 11) ಮಿತ್ರ – ಮಿತ್ರನಿಗೆ |
| 6) ಶುಕ್ರನು – ಹೆಂಡತಿಗೆ | 12) ಚಿತ್ರ – ಶತ್ರುವಿಗೆ. |

ಈ ವಿಧವಾಗಿ ಹನ್ನೆರಡು ಗ್ರಹಗಳು ತಾಯಿ ತಂದೆಯಿಂದ ಹಿಡಿದು ಜ್ಞಾನ ಅಜ್ಞಾನದವರೆಗು ಮುಖ್ಯವಾದ ವಿಷಯಗಳ ಮೇಲೆ ಅಧಿಕಾರ ಹೊಂದಿವೆಯೆಂದು ತಿಳಿಯುತ್ತಿದೆ. ಒಬ್ಬ ವ್ಯಕ್ತಿಗಿರುವ ಪುತ್ರನು ಒಳ್ಳೆಯವನಾ, ಅಲ್ಲವಾ? ತಂದೆಯ ಮಾತು ಕೇಳುತ್ತಾನಾ, ಕೇಳುವುದಿಲ್ಲವಾ ಎನ್ನುವ ಪ್ರಶ್ನೆಗಳಿಗೆ ಪುತ್ರನಿಗೆ ಅಧಿಕಾರಿಯಾದ ಗುರು ಗ್ರಹವನ್ನು ನೋಡಿ, ಗುರುಗ್ರಹ ಅನುಕೂಲ ವಾದುದಾದರೆ ಪುತ್ರನು ಅನುಕೂಲವಾಗಿ ಇರುತ್ತಾನೆಂದು ಗುರು ಗ್ರಹ ಶತ್ರುವಾಗಿದ್ದರೆ ಆತನ ಪುತ್ರನು ಕೂಡ ಮಾತು ಕೇಳುವುದಿಲ್ಲವೆಂದು ಹೇಳಬಹುದು.

ಗುರು ಗ್ರಹ ಇರುವ ಸ್ಥಾನವನ್ನನುಸರಿಸಿ ವಿರುದ್ಧತೆ ಎಷ್ಟು ಎನ್ನುವುದರನ್ನಾಗಲಿ, ಅನುಕೂಲತೆ ಎಷ್ಟು ಎನ್ನುವುದನ್ನಾಗಲಿ ನಿರ್ಣಯಿಸಬಹುದು. ಅದೇ ವಿಧವಾಗಿ ಜ್ಞಾನ ವಿಷಯಕ್ಕೆ ಬಂದರೇ ಜ್ಞಾನ ಕರ್ಮಕ್ಕೆ ಅತೀತವಾದುದು ಅಲ್ಲವೆ! ಹಾಗಿರುವಾಗ ಕೇತು ಗ್ರಹ ಜ್ಞಾನಕ್ಕೆ ಹೇಗೆ ಅಧಿಪತಿಯಾಗಿದೆಯೆಂದು ಕೆಲವರಿಗೆ ಪ್ರಶ್ನೆ ಬರಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೇ! ಜ್ಞಾನ ಕರ್ಮಕ್ಕೆ ಅತೀತವಾದುದು, ಅದು ಮನುಷ್ಯನ ಶ್ರದ್ಧೆಯನ್ನನುಸರಿಸಿ ಲಭ್ಯವಾಗುತ್ತದೆ. ಇಲ್ಲಿ ಕೇತುವನ್ನು ತೋರಿಸುವುದು ಏಕೆಂದರೇ ಮನುಷ್ಯನ ಶ್ರದ್ಧೆ ಯಾವ ಜ್ಞಾನದಕಡೆ ಇದೆಯೋ ತಿಳಿಯುವುದಕ್ಕೆ ಮಾತ್ರ. ಕೇತು ಅನುಕೂಲವಾದ ಗ್ರಹವಾದರೆ ಆ ವ್ಯಕ್ತಿ ಅಸಲಾದ ದೇವತಾರಾಧನೆಯಾಗಲಿ ಜ್ಞಾನದಕಡೆ ನಡೆಯುತ್ತಾನೆಂದು, ಅನುಕೂಲವಾದ ಗ್ರಹ ಅಲ್ಲದಿದ್ದರೆ ಆತನ ಶ್ರದ್ಧೆ ನಿಜವಾದ ನಿರಾಕಾರ ದೇವರಕಡೆ ಅಲ್ಲದೇ, ದೇವತೆಗಳಕಡೆ ಇರುತ್ತದೆಂದು ತಿಳಿಯುವುದಕ್ಕೆ ಮಾತ್ರವೇಯೆಂದು ತಿಳಿಯಬೇಕು. ಜ್ಞಾನ ಮನುಷ್ಯನ ಶ್ರದ್ಧೆಯನ್ನನುಸರಿಸಿಯೇ ಬರುತ್ತದಾಗಲಿ ಗ್ರಹಬಲವನ್ನು ಅನುಸರಿಸಿ ಬರುವುದಿಲ್ಲ. ಆದ್ದರಿಂದ ಜ್ಞಾನ ಕರ್ಮಕ್ಕೆ ಅತೀತವಾದುದೆಂದೇ ಹೇಳುತ್ತಿದ್ದೇವೆ. ಇನ್ನು ಹೇಳಬೇಕೆಂದರೆ ಮನುಷ್ಯನಿಗೆ ಎಂತಹ ಶ್ರದ್ಧೆ ಇದೆಯೋ ಕೇತುವನ್ನನುಸರಿಸಿ ತಿಳಿದರೂ, ಅವನ ಶ್ರದ್ಧೆ ಪ್ರಕಾರ ಏಕೈಕ ದೇವರ ಮೇಲಾಗಲಿ, ಸಾಮೂಹಿಕ ದೇವತೆಗಳ ಮೇಲಾಗಲಿ ಉಂಟಾಗುವ ಜ್ಞಾನ ಆತಂಕಗಳು ಇಲ್ಲದಂತೆ ತಿಳಿಯುತ್ತದಾ, ಆತಂಕಗಳಿಂದ ತಿಳಿಯುತ್ತದಾ ಎನ್ನುವ ವಿಷಯ ಅಜ್ಞಾನಕ್ಕೆ ಅಧಿಪತಿಯಾಗಿ ಸೂಚಿಸಿದ ಭೂಮಿಯನ್ನನುಸರಿಸಿ ತಿಳಿಯುತ್ತದೆ. ಅಷ್ಟೇ ಹೊರತು ಭೂಗ್ರಹ ಅನುಕೂಲವಾಗಿ ಇಲ್ಲದಪಕ್ಷದಲ್ಲಿ ಜ್ಞಾನ ತಿಳಿಯದೆಂದು ಹೇಳುವುದಕ್ಕೆ ಸಾಧ್ಯವಿಲ್ಲ. ಜ್ಞಾನ ಮಾರ್ಗದಲ್ಲಿ ಆತಂಕವನ್ನನುಸರಿಸಿ ತಿಳಿಸುವುದೇ ಭೂಗ್ರಹವೆಂದು ತಿಳಿಯಬೇಕು. ಈಗ ಯಾವ ಗ್ರಹದಿಂದ ಯಾವ ರೋಗ ಬರುತ್ತದೋ ತಿಳಿದುಕೊಳ್ಳೋಣ.

1. **ಸೂರ್ಯನು –** ಅತಿಸಾರ, ಜ್ವರ, ಉಷ್ಣ ಆಗುವುದು, ಶ್ವಾಸಸಂಬಂಧ ರೋಗಗಳು ಉಂಟಾಗುತ್ತವೆ.

2. **ಚಂದ್ರ** – ಪಾಂಡುರೋಗ (ರಕ್ತಹೀನತೆ) ಕಾಮಾಲೆ, ಜಲ ರೋಗಗಳು, ಆಯಾಸ, ನಾಸಿಕಾರಂಧ್ರಗಳಲ್ಲಿ ಬಾಧೆ, ಸ್ತ್ರೀ ಸಂಬಂಧ ವ್ಯಾಧಿಗಳು, ಮೂತ್ರ ಸರಿಯಾಗಿ ಬರದಂತಿರುವುದು.

3. **ಕುಜನು** – ವರಿಬೀಜಗಳು (ಬೀಜದ ಬಾವು), ಕತ್ತಿ ಹಿರಿತ ಅಥವಾ ಕತ್ತಿಯ ಗಾಯಗಳು, ಮಶೂಚಿ, ಕಫ, ವ್ರಣಗಳು (ಹುಣ್ಣುಗಳು), ಗ್ರಂಥಿಗಳ ರೋಗ (ಥೈರಾಯಿಡ್ ಮೊದಲಾದವು.)

4. **ಬುಧ** – ಉದರಬಾಧೆಗಳು, ಕುಷ್ಟ ರೋಗ, ಉಷ್ಣ, ನೋವುಗಳು, ಮರ್ಮಾವಯವಗಳ ಬಾಧೆಗಳು, ದೆವ್ವಗಳಿಂದಾಗಲಿ, ಕ್ಷುದ್ರ ದೇವತೆಗಳಿಂದಾಗಲಿ ಬರುವ ಶರೀರ ರೋಗಗಳು ಅಥವಾ ಬಾಧೆಗಳು.

5. **ಗುರು** – ಕಾಣಿಸದ ಮರ್ಮಸ್ಥಾನ ರೋಗಗಳು, ಶುಕ್ಲ ನಷ್ಟ ವ್ಯಾಧಿಗಳು, ಕಾಲು ಉರಿ.

6. **ಶುಕ್ರನು** – ಮಧುಮೇಹ, ಸ್ತ್ರೀಯರಿಂದ ಸಂಕ್ರಮಿಸುವ ಸುಖವ್ಯಾಧಿಗಳು, ಪರ ಯುವತಿಯರಿಗಾಗಿ ಕಾಮ ವಿಕಾರ, ಮೂತ್ರ ರೋಗಗಳು, ಅತಿ ಮೂತ್ರ, ಎಚ್.ಐ.ವಿ ರೋಗ, ಗನೇರಿಯಾ, ಸಿಫಿಲಿಸ್ ರೋಗಗಳು.

7. **ಶನಿ** – ಮೂಲವ್ಯಾಧಿ, ಕೀಲುಗಳ ವ್ಯಾಧಿಗಳು

8. **ರಾಹು** – ಮೂರ್ಛೆ, ಅಪಸ್ಮಾರ, ಮಶೂಚಿ, ಉಷ್ಣ ರೋಗಗಳು

9. **ಕೇತು** – ತುರಿಕೆ, ರಹಸ್ಯ ವ್ಯಾಧಿಗಳು, ಕ್ಯಾನ್ಸರ್

10. **ಭೂಮಿ** – ಅಂಗಾಲು, ಅಂಗೈ ಉರಿಗಳು, ಕಾಲು ಕೈಗಳು ಸೀಳುವುದು.

11. **ಮಿತ್ರ** – ತಲೆನೋವು, ಬೆನ್ನುಮೂಳೆ ನೋವು, ಸೊಂಟ ನೋವು, ಮನೋರೋಗಗಳು

12. **ಚಿತ್ರ** – ಮೊಣಕಾಲು ನೋವುಗಳು, ಎದೆನೋವು.

ಈ ವಿಧವಾಗಿ ಎಷ್ಟೋ ರೋಗಗಳು ಹನ್ನೆರಡು ಗ್ರಹಗಳ ಆಧೀನದಲ್ಲಿವೆ. ಮನುಷ್ಯ ಮಾಡಿಕೊಂಡ ಕರ್ಮವನ್ನನುಸರಿಸಿ ಕರ್ಮಪ್ರಕಾರ ಆಯಾ ಗ್ರಹಗಳಿಂದ ಆಯಾ ರೋಗಗಳು ಬರುತ್ತವೆ. ಇಲ್ಲಿ ಹೇಳಿದ ರೋಗಗಳೇ ಅಲ್ಲದೇ ಅವುಗಳಿಗೆ ಅನುಬಂಧವಾದ ರೋಗಗಳು ಯಾವಾದರೂ ಬರಬಹುದು. ಈಗ ಗ್ರಹಗಳ ಅಧೀನದಲ್ಲಿನ ಕಲ್ಲುಗಳ ವಿಷಯ ತಿಳಿದುಕೊಳ್ಳೋಣ.

| | | | |
|---|---|---|---|
| 1) ಸೂರ್ಯ – | ಕೆಂಪು | 2) ಚಂದ್ರ – | ಮುತ್ತು |
| 3) ಕುಜನು – | ಹವಳ | 4) ಬುಧನು – | ಹಸಿರು |
| 5) ಗುರು – | ಪುಷ್ಯರಾಗ | 6) ಶುಕ್ರನು – | ವಜ್ರ |
| 7) ಶನಿ – | ನೀಲಿ | 8) ರಾಹು – | ಗೋಮೇಧಿಕ |
| 9) ಕೇತು – | ವೈಢೂರ್ಯ | 10) ಭೂಮಿ – | ಕಪ್ಪುಕಲ್ಲು |
| 11) ಮಿತ್ರ – | ಕೆಂಪುಕಲ್ಲು | 12) ಚಿತ್ರ – | ಬಿಳಿಕಲ್ಲು |

ಹನ್ನೆರಡು ಗ್ರಹಗಳ ಆಧೀನದಲ್ಲಿ ಮೇಲೆ ಹೇಳಿದ ಕಲ್ಲುಗಳಿವೆ. ಆದರೇ ಕೆಲವರು ಈ ಕಲ್ಲುಗಳನ್ನು ತಮ್ಮ ಉಂಗುರದಲ್ಲಿ ಧರಿಸುತ್ತಿರುತ್ತಾರೆ. ಹಾಗೆ ಧರಿಸುವುದರಿಂದ ಹನ್ನೆರಡು ಕಲ್ಲುಗಳಿಗೆ ಅಧಿಪತಿಗಳಾದ ಹನ್ನೆರಡು ಗ್ರಹಗಳು ತಮಗೆ ಅನುಕೂಲವಾಗಿ ಇರುತ್ತಾರೆಂದು, ಅವರಿಂದ ಯಾವ ತೊಂದರೆಗಳು ಉಂಟಾಗುವುದಿಲ್ಲವೆಂದು ಕೆಲವರು ಜ್ಯೋತಿಷ್ಯರು ಹೇಳುವುದರಿಂದ ಅವರು ರತ್ನಗಳ ಉಂಗುರಗಳು ಧರಿಸುತ್ತಿರುತ್ತಾರೆ. ಹಾಗೆ ಧರಿಸುವುದರಿಂದ ಧರಿಸಿದ ಮನುಷ್ಯನಿಗೆ ಅನುಕೂಲವಾದ ಗ್ರಹಗಳಿಂದ ಯಾವ ತೊಂದರೆಗಳು ಇರುವುದಿಲ್ಲ. ಆದರೇ ಆ ಮನುಷ್ಯನಿಗೆ ಶತ್ರುವರ್ಗಗಳಾದ ಆರು ಗ್ರಹಗಳ ಕಲ್ಲುಗಳು ಆ ಗ್ರಹಗಳ ಕಿರಣಗಳನ್ನು ಹೆಚ್ಚಾಗಿ ಆಕರ್ಷಿಸುವುದರಿಂದ ಕಲ್ಲು ಧರಿಸಿದ ವ್ಯಕ್ತಿಗೆ ತೊಂದರೆಗಳು ಉಂಟಾಗುತ್ತವೆ. ಆದ್ದರಿಂದ ಯಾವ ಮನುಷ್ಯನಾದರೂ ತನಗೆ ಮಿತ್ರರಾಗಿರುವ ಗ್ರಹಗಳ್ಯಾವುವೊ ತಿಳಿದು, ಆ ಗ್ರಹಗಳಿಗೆ ಸಂಬಂಧಿಸಿದ

ಕಲ್ಲುಗಳನ್ನೇ ಧರಿಸುವುದು ಒಳ್ಳೆಯದು. ಶತ್ರುವರ್ಗ ಗ್ರಹಗಳ ಕಲ್ಲುಗಳು ಧರಿಸಬಾರದು. ಈಗ ಗ್ರಹಗಳ ಅಧೀನದಲ್ಲಿನ ದಿಕ್ಕುಗಳನ್ನು ತಿಳಿದುಕೊಳ್ಳೋಣ.

1) ಸೂರ್ಯ – ಪೂರ್ವದಿಕ್ಕು 2) ಚಂದ್ರ – ವಾಯುವ್ಯದಿಕ್ಕು

3) ಕುಜನು – ದಕ್ಷಿಣದಿಕ್ಕು 4) ಬುಧ – ಉತ್ತರದಿಕ್ಕು

5) ಗುರು – ಈಶಾನ್ಯದಿಕ್ಕು 6) ಶುಕ್ರನು – ಆಗ್ನೇಯದಿಕ್ಕು

7) ಶನಿ – ಪಶ್ಚಿಮ ದಿಕ್ಕು 8) ರಾಹು – ನೈರುತ್ಯದಿಕ್ಕು

9) ಕೇತು – ಮೇಲಕ್ಕೆ 10) ಭೂಮಿ – ಕೆಳಕ್ಕೆ

11) ಮಿತ್ರ – ಮೇಲಕ್ಕೆ 12) ಚಿತ್ರ – ಕೆಳಕ್ಕೆ

ಈ ವಿಧವಾಗಿ ಹನ್ನೆರಡು ಗ್ರಹಗಳಿಗೆ ಹತ್ತು ದಿಕ್ಕುಗಳು ಅಧೀನದಲ್ಲಿವೆ. ಮೇಲಿನ ದಿಕ್ಕಿಗೆ ಕೇತು, ಮಿತ್ರ ಎರಡು ಗ್ರಹಗಳು ಅಧಿಪತಿಗಳಾಗಿವೆ. ಹಾಗೇ ಕೆಳಗಿನ ದಿಕ್ಕಿಗೆ ಭೂಮಿ, ಚಿತ್ರ ಎರಡು ಗ್ರಹಗಳು ಅಧಿಪತಿಗಳಾಗಿರುವುದರಿಂದ ಹನ್ನೆರಡು ಗ್ರಹಗಳಿಗೆ ಹತ್ತು ಗ್ರಹಗಳು ಬಂದಿವೆ. ಈಗ ದ್ವಾದಶ ಗ್ರಹಗಳ ಅಧೀನದಲ್ಲಿ ಯಾವ ಯಾವ ಧಾನ್ಯಗಳಿವೆಯೋ ತಿಳಿದುಕೊಳ್ಳೋಣ.

1) ಸೂರ್ಯ – ಗೋಧಿ 2) ಚಂದ್ರನು – ಅಕ್ಕಿ

3) ಕುಜನು – ತೊಗರಿ 4) ಬುಧನು – ಹೆಸರುಕಾಳು

5) ಗುರು – ಕಡ್ಲೆಕಾಳು 6) ಶುಕ್ರನು – ಅಲಸಂದಿ

7) ಶನಿ – ಎಳ್ಳು 8) ರಾಹು – ಉದ್ದಿನಕಾಳು

9) ಕೇತು – ಹುರಳಿಕಾಳು 10) ಭೂಮಿ – ಜೋಳ

11) ಮಿತ್ರ – ರಾಗಿ 12) ಚಿತ್ರ– ಅಲಸಂದೆ

ಹನ್ನೆರಡು ಗ್ರಹಗಳ ಅಧೀನದಲ್ಲಿರುವ ಧಾನ್ಯಗಳನ್ನು ನೋಡಿದ್ದೇವೆ ಅಲ್ಲವೆ! ಗ್ರಹಗಳ ಮಿತ್ರ ಶತ್ರು ವರ್ಗಗಳನ್ನನುಸರಿಸಿ ಆರು ಗ್ರಹಗಳು ಮಿತ್ರರಾಗಿವೆ. ಜಾತಕನಿಗೆ ಜ್ಯೋತಿಷ್ಯದ ಪ್ರಕಾರ ಯಾವುವು ಮಿತ್ರಗ್ರಹಗಳೊ ತಿಳಿಯುತ್ತದೆ ಅಲ್ಲವೆ! ಮಿತ್ರ ಗ್ರಹಗಳ ಅಧೀನದಲ್ಲಿನ ಆರುವಿಧಗಳ ಧಾನ್ಯಗಳಿಂದ ಆ ವ್ಯಕ್ತಿಗೆ (ಆ ಜಾತಕನಿಗೆ) ಆರೋಗ್ಯ ಕೈಗೂಡುತ್ತದೆಂದು, ಉಳಿದ ಆರು ಶತ್ರು ಗ್ರಹಗಳ ಧಾನ್ಯಗಳಿಂದ ಪೋಷಕ ಪದಾರ್ಥಗಳು ಲಭಿಸುವುದಿಲ್ಲವೆಂದು, ಆ ಧಾನ್ಯ ಆಹಾರದಿಂದ ಅನಾರೋಗ್ಯಗಳು ಉಂಟಾಗುತ್ತವೆಂದು ಹೇಳಬಹುದು. ಗ್ರಹಗಳನ್ನು ಅನುಸರಿಸಿ ಸರಿಹೋಗದ ಆಹಾರವನ್ನು ಗುರುತಿಸಿಕೊಳ್ಳಬಹುದು. ಉದಾಹರಣೆಗೆ ಸೂರ್ಯನು ಶತ್ರುವರ್ಗದಲ್ಲಿನ ಗ್ರಹವಾದರೆ ಸೂರ್ಯನ ಧಾನ್ಯವಾದ ಗೋಧಿಯಿಂದ ಮಾಡಿದ ರೊಟ್ಟಿಗಳು, ಚಪಾತಿಗಳು, ಪೂರಿಗಳು ಮೊದಲಾದ ಪದಾರ್ಥಗಳನ್ನು ತಿಂದರೇ ಅಜೀರ್ಣವಾಗಿರುವುದು, ಗಂಟಲಲ್ಲಿ ಉರಿ ಬರುವುದು ನಡೆಯುತ್ತಿರುತ್ತದೆ. ಅಂತಹವರು ಗೋಧಿಗಳ ಆಹಾರ ಸರಿಹೋಗುವುದಿಲ್ಲವೆಂದು ಅಕ್ಕಿಯ ಅನ್ನವನ್ನೇ ತಿನ್ನುತ್ತಿರುತ್ತಾರೆ. ಕೆಲವರಿಗೆ ಹುಳ್ಳಿಕಾಳನ್ನು ತಿಂದರೆ ವಿಪರೀತವಾದ ಉಷ್ಣವಾಗುತ್ತದೆ. ಕೆಲವು ಸ್ತ್ರೀಯರಿಗೆ ಉಷ್ಣದಿಂದ ತಿಂಗಳಿಗೆ ಒಂದುಸಲ ಬರುವ ಬಹಿಷ್ಟು (ಮುಟ್ಟು) ತಿಂಗಳಾಗದ ಮೊದಲೇ ಬರುತ್ತದೆ ಮತ್ತು ಹೆಚ್ಚಾಗಿ ಬರುತ್ತದೆ. ಕೆಲವರಿಗೆ ಜೋಳವನ್ನು ತಿಂದರೆ ಸರಿಹೋಗುವುದಿಲ್ಲ, ವಿರೇಚನಗಳಾಗುತ್ತವೆ. ಅದಕ್ಕೆ ಕಾರಣ ಭೂಗ್ರಹ ದವರಿಗೆ ಸರಿಹೋಗುವುದಿಲ್ಲವೆಂದು, ಶತ್ರುವಾಗಿದೆಯೆಂದು ತಿಳಿಯಬೇಕು. ಈ ವಿಧವಾಗಿ ಗ್ರಹಗಳು ಅವುಗಳ ಧಾನ್ಯವನ್ನು ಕುರಿತು ತಿಳಿಯಬಹುದು. ಈಗ ಹನ್ನೆರಡು ಗ್ರಹಗಳಿಗೆ ಅಧೀನದಲ್ಲಿರುವ ದಿನಗಳನ್ನು, ಅವುಗಳ ಹೆಸರುಗಳಿಂದ ಸಹಾ ನೋಡೋಣ.

| | | | | | |
|---|---|---|---|---|---|
| 1) | ಸೂರ್ಯ | – | ಭಾನುವಾರ | – | ಸೂರ್ಯಗ್ರಹ |
| 2) | ಚಂದ್ರ | – | ಸೋಮವಾರ | – | ಚಂದ್ರ ಗ್ರಹ |
| 3) | ಕುಜ | – | ಮಂಗಳವಾರ | – | ಭೂ ಗ್ರಹ |

| | | | | | |
|---|---|---|---|---|---|
| 4) | ಬುಧ | – | ಬುಧವಾರ | – | ರಾಹು ಗ್ರಹ |
| 5) | ಗುರು | – | ಗುರುವಾರ | – | ಕೇತು ಗ್ರಹ |
| 6) | ಶುಕ್ರನು | – | ಶುಕ್ರವಾರ | – | ಮಿತ್ರ ಗ್ರಹ |
| 7) | ಶನಿ | – | ಶನಿವಾರ | – | ಚಿತ್ರ ಗ್ರಹ |
| 8) | ರಾಹು | – | ಬುಧವಾರ | – | ಬುಧ ಗ್ರಹ |
| 9) | ಕೇತು | – | ಗುರುವಾರ | – | ಗುರು ಗ್ರಹ |
| 10) | ಭೂಮಿ | – | ಮಂಗಳವಾರ | – | ಕುಜ ಗ್ರಹ |
| 11) | ಮಿತ್ರ | – | ಶುಕ್ರವಾರ | – | ಶುಕ್ರ ಗ್ರಹ |
| 12) | ಚಿತ್ರ | – | ಶನಿವಾರ | – | ಶನಿ ಗ್ರಹ |

ಇಲ್ಲಿ ಹನ್ನೆರಡು ಗ್ರಹಗಳವೊಂದು ವಾರಗಳ ಹೆಸರುಗಳು (ದಿನಗಳ ಹೆಸರುಗಳು) ತಿಳಿದುಹೋಗಿವೆ. ಗ್ರಹಗಳ ಮಿತ್ರ ಶತ್ರುತ್ವಗಳನ್ನು ಅನುಸರಿಸಿ ಯಾರಿಗೆ ಯಾವ ದಿನ ಅನುಕೂಲವಾದುದೊ, ಯಾವ ದಿನ ಅನುಕೂಲ ವಿಲ್ಲದಿರುವುದೊ ತಿಳಿದುಕೊಳ್ಳಬಹುದು.

ಒಬ್ಬ ವ್ಯಕ್ತಿಗೆ ಶುಭ ಗ್ರಹಗಳು (ಮಿತ್ರ ಗ್ರಹಗಳು) ಯಾವುವೊ, ಅಶುಭ ಗ್ರಹಗಳು (ಶತ್ರು ಗ್ರಹಗಳು) ಯಾವುವೊ ತಿಳಿಯಬೇಕೆಂದರೇ ಆತನ ಜಾಫತಕ ತಿಳಿಯಬೇಕು. ಆತನ ಜಾಫತಕ (ಜಾತಕ) ತಿಳಿಯುವುದಕ್ಕೆ ತಪ್ಪದೆ ಆತನ ಹುಟ್ಟಿದ ತಾರೀಖು, ಹುಟ್ಟಿದ ಸಮಯ ಇರಬೇಕು. ಹುಟ್ಟಿದ ದಿನಾಂಕವನ್ನನುಸರಿಸಿ ಆ ದಿನ ತಿಥಿ, ವಾರಗಳನ್ನು ತಿಳಿಯಬಹುದು. ಹಾಗೇ ಹುಟ್ಟಿದ ಸಮಯಗಳನ್ನು ಅನುಸರಿಸಿ ಆ ದಿನವೊಂದರ ನಕ್ಷತ್ರವನ್ನು ತಿಳಿಯಬಹುದು. ಹುಟ್ಟಿದ ತಾರೀಖನ್ನು, ಸಮಯವನ್ನನುಸರಿಸಿ ಜ್ಯೋತಿಷ್ಯರಾದವರು ಆ ದಿನ ಪಂಚಾಂಗದ ಪ್ರಕಾರ ಜಾಪತಕವನ್ನು ನಿರ್ಣಯಿಸುತ್ತಾರೆ. ಆ ದಿನ ಪಂಚಾಂಗವನ್ನನುಸರಿಸಿ ಆ ವ್ಯಕ್ತಿ

ಹುಟ್ಟಿದ ಸಮಯದಲ್ಲಿ ಕಾಲಚಕ್ರದಲ್ಲಿ ಯಾವ ಗ್ರಹ ಎಲ್ಲಿರುವುದು ತಿಳಿದು ಹೋಗುತ್ತದೆ. ಹಾಗೆ ತಿಳಿದಿರುವುದನ್ನನುಸರಿಸಿ ಹನ್ನೆರಡು ಲಗ್ನಗಳಲ್ಲಿ ಹನ್ನೆರಡು ಗ್ರಹಗಳು ಎಲ್ಲಿರುವುದು ಬರೆದು ನೋಡಿಕೊಳ್ಳಬಹುದು. ಹಾಗೆ ಬರೆದುಕೊಂಡಿರುವುದನ್ನು ಜನ್ಮಲಗ್ನಕುಂಡಲಿ ಎನ್ನುತ್ತಾರೆ. ಪಂಚಾಂಗದ ಪ್ರಕಾರ ಜನನ ಸಮಯದಲ್ಲಿ ಕಾಲಚಕ್ರದಲ್ಲಿನ ಸೂರ್ಯನು ತನ್ನ ಕಿರಣಗಳನ್ನು ಕರ್ಮಚಕ್ರದ ಮೇಲೆ ಎಲ್ಲಿ ಪ್ರಸರಿಸುತ್ತಿದ್ದಾನೊ ಅದಕ್ಕೆ ಸರಿಯಾಗಿ ಕಾಲಚಕ್ರ ದಲ್ಲಿರುವ ಲಗ್ನವನ್ನು ಜನ್ಮ ಲಗ್ನವಾಗಿ ಲೆಕ್ಕಿಸಲ್ಪಡುತ್ತದೆ. ಜನ್ಮಲಗ್ನವನ್ನು ತನ್ನ ಸ್ಥಾನವಾಗಿ (ಶರೀರ ಸ್ಥಾನವಾಗಿ) ಲೆಕ್ಕಿಸಿ ಅಲ್ಲಿಂದ ಉಳಿದ ಗ್ರಹಗಳನ್ನು ಉಳಿದ ಲಗ್ನಗಳಲ್ಲಿ ಇರುವಂತೆ ಲೆಕ್ಕಿಸಿಕೊಳ್ಳಬೇಕು. ಪಂಚಾಂಗದ ಪ್ರಕಾರ ಯಾವ ಗ್ರಹ ಯಾವ ಲಗ್ನದಲ್ಲಿ ಇರುವುದು, ಆ ಲಗ್ನದಲ್ಲಿ ಯಾವ ಪಾದದಲ್ಲಿರುವುದು ಗುರುತಿಸಬಹುದು. ಆ ವಿಧವಾಗಿ ಒಬ್ಬ ಮನುಷ್ಯ ಹುಟ್ಟಿದ ಸಮಯವನ್ನು, ದಿನವನ್ನು ಅನುಸರಿಸಿ ಯಾವಾಗಾದರೂ ಆತನ ಲಗ್ನಕುಂಡಲಿ ಯನ್ನು ಬರೆದುಕೊಳ್ಳಬಹುದು. ಒಂದುಸಲ ಬರೆದುಕೊಂಡ ಜಾತಕಲಗ್ನ ಆತನ ಜೀವನಾಂತ್ಯದವರೆಗು ಕೆಲಸಮಾಡುತ್ತದೆ. ಜೀವನದಲ್ಲಿ ಯಾವ ಸಮಸ್ಯೆ ಯನ್ನಾದರೂ ಜಾತಕದಲ್ಲಿ ಹೇಗಿದೆಯೋ ನೋಡಿಕೊಳ್ಳಬಹುದು. ಜನ್ಮ ಸಮಯದಲ್ಲಿ ಯಾವ ಲಗ್ನದಲ್ಲಿ ಯಾವ ಗ್ರಹವಿದೆಯೋ ಆ ಗ್ರಹಗಳು ಕಾಲಗಮನದಲ್ಲಿ ಎಲ್ಲಿ ತಿರುಗಿದರೂ ಯಾವ ಲಗ್ನದಲ್ಲಿ ಇದ್ದರೂ ಜೀವನಾಂತ್ಯ ದವರೆಗು ಮೊದಲಿನ ನಿರ್ಣಯದ ಪ್ರಕಾರವಿರುವಂತೇ ತಮ್ಮ ಪ್ರಭಾವ ತೋರಿಸುತ್ತಿರುತ್ತದೆ. ಉದಾಹರಣೆಗೆ ಒಬ್ಬ ಜಾತಕನ ಜನ್ಮ ಸಮಯದಲ್ಲಿರುವ ಲಗ್ನಕುಂಡಲಿಯನ್ನು ನಂತರ ಪುಟದಲ್ಲಿ 51ನೇ ಚಿತ್ರದಲ್ಲಿ ನೋಡೋಣ.

| | | | |
|---|---|---|---|
| | ಗುರು<br>ಭೂಮಿ | ಸೂರ್ಯ<br>ಶುಕ್ರ | ಕೇತು<br>ಮಿತ್ರ |
| ಚಂದ್ರ | **ವೃಶ್ಚಿಕ ಲಗ್ನ** | | ಶನಿ |
| ಬುಧನು | | | |
| ರಾಹು<br>ಚಿತ್ರ | ಲಗ್ನ | | ಕುಜ |

**51ನೇ ಚಿತ್ರ.**

ಇದು ಒಬ್ಬ ವ್ಯಕ್ತಿ 25 ವರ್ಷಗಳ ಕೆಳಗೆ ಹುಟ್ಟಿದಾಗ ಆ ದಿನವಿರುವ ಗ್ರಹಗಳು ಕಾಲಚಕ್ರದಲ್ಲಿ ಎಲ್ಲಿರುವುದು ಗುರುತಿಸುವುದು ನಡೆದಿದೆ. ಸೂರ್ಯ ಕಿರಣಗಳು ಕರ್ಮಚಕ್ರದಲ್ಲಿನ ಒಂದು ಸ್ಥಾನದಲ್ಲಿ ಬಿದ್ದಾಗ ಅದಕ್ಕೆ ಸರಿಯಾಗಿರುವ ಕಾಲಚಕ್ರದಲ್ಲಿನ ವೃಶ್ಚಿಕ ಲಗ್ನವನ್ನು ಗುರುತಿಸಿದ್ದೇವೆ. ಅದೇ ವೃಶ್ಚಿಕ ಲಗ್ನವನ್ನೇ ಜನ್ಮಲಗ್ನವಾಗಿ ಹೇಳುತ್ತಿದ್ದೇವೆ. ಲಗ್ನದಲ್ಲಿ ಯಾವ ಗ್ರಹ ಇಲ್ಲದಿದ್ದರೂ ಅದಕ್ಕೆ ಎದುರಾಗಿ ಏಳನೆ ಮನೆಯಲ್ಲಿರುವ ಸೂರ್ಯನು, ಶುಕ್ರನು ಇಬ್ಬರೂ ಲಗ್ನದಲ್ಲಿನ ಕರ್ಮವನ್ನು ಅವರ ಕೈಗಳಿಂದ ಸ್ವೀಕರಿಸಬಲ್ಲರು. ಆದ್ದರಿಂದ ಅವರು ಜನ್ಮಲಗ್ನವಾದ ವೃಶ್ಚಿಕದಲ್ಲಿ ಇಲ್ಲದಿದ್ದರೂ ಇದ್ದಂತೇ ಆಗುತ್ತಿದೆ. ಅದೇ ವಿಧವಾಗಿ ಕುಜ ಗ್ರಹ 4, 7, 8 ಸ್ಥಾನಗಳಲ್ಲಿನ ಕರ್ಮವನ್ನು ಗ್ರಹಿಸಬಲ್ಲದು. ಆದ್ದರಿಂದ ನಾಲ್ಕನೆ ಸ್ಥಾನವಾದ ಧನಸ್ಸುನಲ್ಲಿಯೂ, ಏಳನೆ ಸ್ಥಾನವಾದ ಮೀನದಲ್ಲಿಯೂ, ಎಂಟನೆ ಸ್ಥಾನವಾದ ಮೇಷದಲ್ಲಿಯೂ ಇದ್ದಂತೇ ಲೆಕ್ಕಿಸಬೇಕು. ಹಾಗೇ ಗುರುವು

ಮೇಷ ಲಗ್ನದಲ್ಲಿ ಇರುವುದರಿಂದ ಆ ಗ್ರಹಕ್ಕೆ 5, 7, 9 ಸ್ಥಾನಗಳಲ್ಲಿನ ಕರ್ಮವನ್ನು ಗ್ರಹಿಸುವಂತೆ ಕೈಗಳು ಇರುವುದರಿಂದ ಮೇಷದಿಂದ ಐದನೆ ಲಗ್ನವಾದ ಸಿಂಹದಲ್ಲಿಯೂ, ಏಳನೆ ಸ್ಥಾನವಾದ ತುಲಾ ಲಗ್ನದಲ್ಲಿಯೂ, ಒಂಭತ್ತನೇ ಲಗ್ನವಾದ ಧನಸ್ಸುನಲ್ಲಿಯೂ ಗುರು ಗ್ರಹ ಇದ್ದಂತೇ ಲೆಕ್ಕಿಸಿಕೊಳ್ಳಬೇಕು. ಹಾಗೇ ಶನಿ ಗ್ರಹಕ್ಕೂ ಸಹ ನಾಲ್ಕು ಕೈಗಳಿವೆಯೆಂದು ಹೇಳಿಕೊಂಡಿದ್ದೇವೆ. ಒಂದು ಕೈಯಿಂದ ಪ್ರಸ್ತುತವಿರುವ ಕರ್ಕಾಟಕ ಲಗ್ನದಲ್ಲಿನ ಕರ್ಮವನ್ನು ಗ್ರಹಿಸಿದಾಗ, 3,7,10 ಸ್ಥಾನಗಳಲ್ಲಿನ ಕರ್ಮವನ್ನು ಗ್ರಹಿಸುವಂತೆ ಉಳಿದ ಮೂರು ಕೈಗಳು ಇರುವುದರಿಂದ ಶನಿ ಇರುವ ಲಗ್ನದಿಂದ ಮೂರನೆ ಲಗ್ನವಾದ ಕನ್ಯಾಲಗ್ನ ದಲ್ಲಿಯೂ, ಏಳನೆ ಲಗ್ನವಾದ ಮಕರದಲ್ಲಿಯೂ, ಹತ್ತನೇ ಲಗ್ನವಾದ ಮೇಷದಲ್ಲಿರುವ ಕರ್ಮವನ್ನು ಗ್ರಹಿಸುತ್ತದೆ. ಆದ್ದರಿಂದ ಕನ್ಯಾ, ಮಕರ, ಮೇಷಗಳಲ್ಲಿ ಕೂಡಾ ಎಲ್ಲಾ ಗ್ರಹಗಳಿರುವಂತೇ ಲೆಕ್ಕಿಸಿಕೊಳ್ಳಬೇಕು. ಹಾಗೆ ಗುರುತಿಸಿಕೊಂಡರೆ ಜಾತಕಲಗ್ನ ಹೇಗಿರುತ್ತದೊ ಒಂದುಸಲ ನಂತರ ಪುಟದಲ್ಲಿರುವ 52ನೇ ಚಿತ್ರದಲ್ಲಿ ನೋಡೋಣ.

ಜನ್ಮಲಗ್ನದಲ್ಲಿ (ಜನ್ಮ ಸಮಯದಲ್ಲಿ) ಶನಿ ಕರ್ಕಾಟಕದಲ್ಲಿದೆ ಆದರೂ ಆತನ ಕೈಗಳಿಂದ ಕನ್ಯಾ, ಮಕರ, ಮೇಷದಲ್ಲಿ ಕೂಡಾ ಇರುವಂತೆ ಗುರುತಿಸಿ ಕೊಂಡಿದ್ದೇವೆ. ಆಗ ಶನಿ ನಾಲ್ಕು ಕಡೆ ಕಾಣಿಸುತ್ತಿದ್ದಾನೆ. ಆದರೇ ಆತನು ವಾಸ್ತವವಾಗಿ ಎಲ್ಲಿದ್ದಾನೆ, ಆತನು ಕೈಗಳಿಟ್ಟಿರುವ ಸ್ಥಾನಗಳ್ಯಾವುವು ಎಂದು ತಿಳಿಯುವುದಕ್ಕೆ, ಕೈಗಳಿರುವ ಸ್ಥಾನಗಳಲ್ಲಿ ಗುರುತಿಸಿದ ಶನಿ ಪಕ್ಕದಲ್ಲಿ ಒಂದು ಅಡ್ಡಗೆರೆಯನ್ನು ಗುರುತಾಗಿಟ್ಟಿದ್ದೇವೆ. ಅಡ್ಡಗೆರೆಗಳಿರುವ ಕಡೆ ಆ ಗ್ರಹದ ಕೈಗಳಿರುವಂತೆ ತಿಳಿಯಬೇಕು. ಈ ವಿಧವಾಗಿ ಗುರುತಿಸಿದಲ್ಲಿಯೂ ಅದು ಸಂಪೂರ್ಣವಾಗಿ ಯಾರಿಗಾದರೂ ಅರ್ಥವಾಗುವುದಕ್ಕೆ ಹೊರಗೆ ಕಾಣಿಸುವಂತೆ ಜನ್ಮ ಸಮಯದಲ್ಲಿ ಲಗ್ನವಾದ ವೃಶ್ಚಿಕ ಲಗ್ನವನ್ನು ಒಂದನೆ ನಂಬರಾಗಿ ಗುರುತಿಸಿ, ಅಲ್ಲಿಂದ ಪ್ರಾರಂಭಿಸಿ ತುಲಾ ಲಗ್ನದವರೆಗು ವರಸೆಯಾಗಿ 12 ಸ್ಥಾನಗಳಿಗೆ ಅಂಕೆಗಳನ್ನು ಗುರುತಿಸಿಕೊಳ್ಳಬೇಕು. ಆಗ ಜನ್ಮಲಗ್ನದಿಂದ ಯಾವ ಲಗ್ನ ಎಷ್ಟನೇ

<table>
<tr><td>ಕುಜ–</td><td>ಗುರು<br>ಭೂಮಿ<br>ಶನಿ–<br>ಕುಜ–</td><td>ಸೂರ್ಯ<br>ಶುಕ್ರ</td><td>ಕೇತು<br>ಮಿತ್ರ</td></tr>
<tr><td>ಚಂದ್ರ</td><td colspan="2" rowspan="2">ಜಾತಕ ಲಗ್ನ</td><td>ಶನಿ</td></tr>
<tr><td>ಬುಧ<br>ಶನಿ–</td><td>ಗುರು–</td></tr>
<tr><td>ರಾಹು<br>ಚಿತ್ರ<br>ಕುಜ–<br>ಗುರು–</td><td>ಸೂರ್ಯ–<br>ಶುಕ್ರ–</td><td>ಗುರು–</td><td>ಶನಿ–<br>ಕುಜ</td></tr>
</table>

**52ನೇ ಚಿತ್ರ.**

ನಂಬರಿನದಾಗುತ್ತಿದೆಯೋ ಸುಲಭವಾಗಿ ತಿಳಿಯುತ್ತಿದೆ. ನಂತರ ಪುಟದಲ್ಲಿನ 53ನೇ ಚಿತ್ರದಲ್ಲಿ ಅಂಕೆಗಳಿಂದ ಕೂಡಿಕೊಂಡ ಜನ್ಮ ಲಗ್ನವನ್ನು ನೋಡೋಣ.

ಕೊನೆಗೆ ಈ ವಿಧವಾಗಿ ಜಾತಕನು ಹುಟ್ಟಿದ ಸಮಯದಲ್ಲಿ ಗ್ರಹಗಳು ಇರುವಂತೆ ಗುರುತಿಸಿಕೊಂಡಿದ್ದೇವೆ. ಮನುಷ್ಯನ ಜನ್ಮ ಜನನದಿಂದಲೇ ಮೊದಲಾಗುತ್ತಿದೆ. ಆದ್ದರಿಂದ ಜನ್ಮ ಲಗ್ನವನ್ನು ಒಂದನೇ ನಂಬರಾಗಿ ಗುರುತಿಸಿಕೊಳ್ಳಬೇಕು. ಆ ದಿನ ಹನ್ನೆರಡು ಗ್ರಹಗಳು ಎಲ್ಲಿರುತ್ತವೊ ಆ ಸ್ಥಾನಗಳನ್ನನುಸರಿಸಿ ಆ ಜಾತಕನಿಗೆ ಜೀವನವೆಲ್ಲಾ ಫಲಿತಗಳನ್ನು ಲೆಕ್ಕಿಸಬೇಕಾಗಿದೆ. ಜನ್ಮಿಸಿದ ದಿನದಂದು ಜನನ ಸಮಯದಲ್ಲಿ ಸೂರ್ಯನ ಸ್ಥಿತಿಯನ್ನು ಅನುಸರಿಸಿ ಆ ಸಮಯದಲ್ಲಿನ ಲಗ್ನವನ್ನು ಜನ್ಮಲಗ್ನವಾಗಿ ಗುರುತಿಸಿಕೊಳ್ಳುತ್ತಿದ್ದೇವೆ. ಆ ಸಮಯದಲ್ಲಿ ಹುಟ್ಟಿದವನನ್ನು ವೃಶ್ಚಿಕ ಲಗ್ನ ಜಾತಕನಾಗಿ ಹೇಳುತ್ತಿದ್ದೇವೆ. ಕಾಲಚಕ್ರದಲ್ಲಿ ಇರುವುದು ಒಟ್ಟು ಹನ್ನೆರಡು ಗ್ರಹಗಳೇ ಆದಾಗ, ಇಲ್ಲಿ ಜನ್ಮ

| | | | |
|---|---|---|---|
| ಕುಜ–<br>5 | ಗುರು<br>ಭೂಮಿ<br>ಶನಿ–<br>ಕುಜ– 6 | ಸೂರ್ಯ<br>7 ಶುಕ್ರ | ಕೇತು<br>ಮಿತ್ರ<br>ರಾಹು–<br>8 ಚಿತ್ರ– |
| ಚಂದ್ರ<br>4 | **ಜಾತಕ ಲಗ್ನ** | | ಶನಿ<br>9 ಬುಧ– |
| ಬುಧ<br>ಶನಿ–<br>3 | **ವೃಶ್ಚಿಕ ಲಗ್ನ** | | ಗುರು–<br>ಚಂದ್ರ–<br>10 |
| ರಾಹು<br>ಚಿತ್ರ ಕೇತು<br>ಕುಜ–,ಮಿತ್ರ–<br>ಗುರು– 2 | ಸೂರ್ಯ–<br>ಶುಕ್ರ– ಲಗ್ನ<br>1 | ಗುರು–<br>ಭೂಮಿ– 12 | ಶನಿ–<br>ಕುಜ<br>11 |

**53ನೇ ಚಿತ್ರ**

ಲಗ್ನ ಕುಂಡಲಿಯಲ್ಲಿ ಕಾಣಿಸುತ್ತಿರುವುದು ಒಟ್ಟು ಮೂವತ್ತಾಗಿ ಇವೆ. ಗ್ರಹಗಳಿಗಿರುವ ಕೈಗಳನ್ನು ಕೂಡಾ ಬೆರೆಸಿ ಗ್ರಹಗಳಾಗಿ ಲೆಕ್ಕಿಸಿದರೆ ಮೂವತ್ತು ಸಂಖ್ಯೆ ಬರುತ್ತಿದೆ. ಒಟ್ಟು ಗ್ರಹಗಳಿರುವುದು = 12, ಪ್ರತಿ ಗ್ರಹವು ಎದುರಾಗಿರುವ ಏಳರಲ್ಲಿರುವುದನ್ನು ಗ್ರಹಿಸುತ್ತಿದೆ. ಆದ್ದರಿಂದ ಅಲ್ಲಿಯೂ ಸಹ ಆ ಗ್ರಹವಿರುವಂತೆ ಲೆಕ್ಕಿಸಿದರೆ 12+12=24 ಆಗುತ್ತದೆ. ಹನ್ನೆರಡು ಗ್ರಹಗಳಲ್ಲಿ ಗುರು, ಕುಜ, ಶನಿ ಪ್ರತ್ಯೇಕಿಸಿ ಎರಡು ಸ್ಥಾನಗಳಲ್ಲಿನವುಗಳನ್ನು ಸ್ವೀಕರಿಸುತ್ತದೆ. ಆದ್ದರಿಂದ ಅಲ್ಲಿಯೂ ಕೂಡಾ ಆ ಮೂರು ಗ್ರಹಗಳನ್ನು ಇರುವಂತೆ ಲೆಕ್ಕಿಸಿಕೊಂಡರೆ 3x2=6 ಆಗುತ್ತದೆ. 24+6ನ್ನು ಸೇರಿಸಿದರೆ ಮೊತ್ತ 30 ಸಂಖ್ಯೆಯಾಗಿ ಕಾಣಿಸುತ್ತಿದೆ. ಅದೇ ವಿಧವಾಗಿ ನಾವು ಗುರುತಿಸಿಕೊಂಡ ಜನ್ಮಕುಂಡಲಿಯಲ್ಲಿ 30 ಗ್ರಹಗಳು 12 ಲಗ್ನಗಳಲ್ಲಿ ಕಾಣಿಸುತ್ತಿವೆ. ಜನ್ಮ ಲಗ್ನದಲ್ಲಿ ಗ್ರಹಗಳು ಯಾವ ಸ್ಥಾನದಲ್ಲಿ ಇವೆಯೋ ಜೀವನಾಂತ್ಯದವರೆಗು ಅದೇ ಸ್ಥಾನವನ್ನನುಸರಿಸಿ ಫಲಿತವನ್ನು ಕೊಡುತ್ತಿರುತ್ತವೆ.

ಈ ಜಾತಕನ ವಿಷಯದಲ್ಲಿ ಒಂದು ಪ್ರಶ್ನೆ ಬಂದಿದೆ. ಅದೇನೆಂದರೇ! ಈ ಜಾತಕನು ಭವಿಷ್ಯತ್ತಿನಲ್ಲಿ ಏನು ವ್ಯಾಪಾರ ಮಾಡುತ್ತಾನೆ? ಎಂದು ಕೇಳಿದಾಗ ಆ ಪ್ರಶ್ನೆಗೆ ಉತ್ತರವನ್ನು ಜ್ಯೋತಿಷ್ಯದ ಪ್ರಕಾರ ಹುಡುಕಬೇಕಾದಾಗ, ಮೊಟ್ಟಮೊದಲು ಹನ್ನೆರಡು ಗ್ರಹಗಳಲ್ಲಿ ಯಾವಯಾವ ಗ್ರಹಗಳು ಈತನ ವಿಷಯದಲ್ಲಿ ಒಳ್ಳೆಯದಾಗಿ (ಮಿತ್ರರಾಗಿ) ಕೆಲಸ ಮಾಡುತ್ತಿವೆಯೋ, ಯಾವಯಾವ ಗ್ರಹಗಳು ಕೆಟ್ಟದಾಗಿ (ಶತ್ರುಗಳಾಗಿ) ಕೆಲಸ ಮಾಡುತ್ತಿವೆಯೋ ತಿಳಿಯಬೇಕಾಗಿದೆ. ಜನ್ಮ ಲಗ್ನ ವೃಶ್ಚಿಕಲಗ್ನವಾದ್ದರಿಂದ ಸರಿ ಬೆಸ (2:1) ಎನ್ನುವ ಸೂತ್ರದ ಪ್ರಕಾರ ಹನ್ನೆರಡು ಗ್ರಹಗಳನ್ನು ಮಿತ್ರರಾಗಿ, ಶತ್ರುಗಳಾಗಿ ವಿಭಜಿಸಿ ನೋಡಬಹುದು. ಮೇಷ ಲಗ್ನಕ್ಕೆ 8, 9 ಲಗ್ನಗಳಾಗಿ ವೃಶ್ಚಿಕ, ಧನಸ್ಸು ಇವೆ ಆದ್ದರಿಂದ ಬೆಸ ಸರಿ ಸೂತ್ರದ ಪ್ರಕಾರ ವೃಶ್ಚಿಕ, ಧನಸ್ಸು ಎರಡು ಲಗ್ನಗಳ ಅಧಿಪತಿಗಳು ಆ ಜಾತಕನಿಗೆ ಮಿತ್ರರಾಗಿದ್ದಾರೆ. ಆ ಎರಡು ಲಗ್ನಗಳ ನಂತರ ಎರಡು ಲಗ್ನಾಧಿಪತಿಗಳನ್ನು ಶತ್ರುಗಳಾಗಿ ಗುರುತಿಸಿದರೆ ರಾಹು, ಶನಿ ಶತ್ರುಗಳಾಗಿದ್ದಾರೆಂದು ತಿಳಿಯುತ್ತಿದೆ. ಆ ವಿಧವಾಗಿ ವೃಶ್ಚಿಕ ಲಗ್ನ ಜಾತಕನಿಗೆ ಮಿತ್ರ ಶತ್ರುಗಳು ಈ ವಿಧವಾಗಿ ಇದ್ದಾರೆ.

| √ | X |
|---|---|
| **ಮಿತ್ರರು** | **ಶತ್ರುಗಳು** |
| 8. ಭೂಗ್ರಹ | 10. ರಾಹು ಗ್ರಹ |
| 9. ಕೇತು ಗ್ರಹ | 11. ಶನಿ ಗ್ರಹ |
| 12 ಗುರು ಗ್ರಹ | 2. ಮಿತ್ರ ಗ್ರಹ |
| 1. ಕುಜ ಗ್ರಹ | 3. ಚಿತ್ರ ಗ್ರಹ |
| 4. ಚಂದ್ರ ಗ್ರಹ | 6. ಬುಧ ಗ್ರಹ |
| 5. ಸೂರ್ಯ ಗ್ರಹ | 7. ಶುಕ್ರ ಗ್ರಹ |

ಈಗ ವೃಶ್ಚಿಕಲಗ್ನ ಜಾತಕನಿಗೆ ಶಾಶ್ವತವಾಗಿ ಭೂಮಿ, ಕೇತು, ಗುರು, ಕುಜ, ಚಂದ್ರ, ಸೂರ್ಯಗ್ರಹಗಳು ಮಿತ್ರರಾಗಿ ಇದ್ದಾರೆಂದೂ, ಹಾಗೆಯೇ ರಾಹು, ಶನಿ, ಮಿತ್ರ, ಚಿತ್ರ, ಬುಧ, ಶುಕ್ರ ಗ್ರಹಗಳು ಶಾಶ್ವತವಾಗಿ ಶತ್ರುಗಳಾಗಿ ಇದ್ದಾರೆಂದೂ ತಿಳಿದುಹೋಗಿದೆ. ಈಗ ಕೇಳಿದ ಪ್ರಶ್ನೆ ವ್ಯಾಪಾರವನ್ನು ಕುರಿತಿರುವುದು. ಆದ್ದರಿಂದ ವ್ಯಾಪಾರ ಯಾರ (ಯಾವಗ್ರಹ) ಅಧೀನದಲ್ಲಿ ಇದೆಯೆಂದು ನೋಡಿದರೆ ವ್ಯಾಪಾರ ಬುಧಗ್ರಹವೊಂದರ ಅಧೀನದೊಳಗಿನದೆಂದು ತಿಳಿದುಹೋಗಿದೆ. ವ್ಯಾಪಾರಕ್ಕೆ ಅಧಿಪತಿಯಾದ ಬುಧನು ಶತ್ರುವರ್ಗದಲ್ಲಿರುವ ಗ್ರಹವಾಗಿರುವುದರಿಂದ ಮತ್ತು ಬುಧಗ್ರಹ ಪಾಪ ಸ್ಥಾನದಲ್ಲಿ ಇರುವುದರಿಂದ, ಆ ಜಾತಕನಿಗೆ ವ್ಯಾಪಾರ ಸರಿಹೋಗುವುದಿಲ್ಲವೆಂದು, ಒಂದು ವೇಳೆ ವ್ಯಾಪಾರ ಮಾಡಿದರೂ ಅದರಲ್ಲಿ ಆತನಿಗೆ ನಷ್ಟವೇ ಬರುತ್ತದೆಂದು ತಿಳಿಯುತ್ತಿದೆ. ಆದ್ದರಿಂದ ಆತನಿಗೆ ಯಾವ ವ್ಯಾಪಾರವೂ ಸರಿಹೋಗುವುದಿಲ್ಲವೆಂದು ಹೇಳಬಹುದು. ಆದರೇ ಆತನ ಜೀವನ ಸಾಗುವುದಕ್ಕೆ ಯಾವ ಜೀವನ, (ಯಾವ ಕೆಲಸವನ್ನು) ಮಾಡುವನೆಂದು ಕೇಳಿದರೇ ಅದಕ್ಕೆ ಸಮಾಧಾನವಾಗಿ ಹೀಗೆ ಹೇಳಬಹುದು. ಮುಖ್ಯವಾಗಿ ನಾಲ್ಕನೆ ಸ್ಥಾನದಲ್ಲಿ ಚಂದ್ರನಿರುವುದರಿಂದ, ಚಂದ್ರನು ಒಂಬತ್ತನೆಯ ಸ್ಥಾನಾಧಿಪತಿ ಆಗಿರುವುದರಿಂದ, ಚಂದ್ರನು ಹತ್ತನೆಯ ಸ್ಥಾನವಾದ ಸಿಂಹಲಗ್ನ ವನ್ನು ತಾಕುವುದರಿಂದ ಆತನು ತನ್ನ ಬುದ್ಧಿವಂತಿಕೆಯಿಂದ ಜೀವಿಸುವನೆಂದೂ, ಚಂದ್ರನ ಕಾರಣವಾಗಿ ಬುದ್ಧಿವಂತಿಕೆಯಿಂದ ವಾದಿಸುವ ಲಾಯರ್ ಕೆಲಸವನ್ನು ಮಾಡುವನೆಂದೂ, ಚಂದ್ರನು ರಾಜನಾದ ಸೂರ್ಯನ ಸ್ಥಾನವನ್ನು ತಾಕುತ್ತಿರುವುದರಿಂದ ಪಬ್ಲಿಕ್ ಪ್ರಾಸಿಕ್ಯೂಟರ್ (ಸರ್ಕಾರಿ ವಕೀಲು) ಆಗಿ ಕೆಲಸ ಮಾಡುವನೆಂದೂ, ಹಾಗೆ ಸ್ವಲ್ಪ ಕಾಲ ಸುಮಾರು 12 ವರ್ಷಗಳು ಕೆಲಸ ಮಾಡಿದ ನಂತರ ನ್ಯಾಯವಾದಿಯಿಂದ ನ್ಯಾಯಾಧಿಪತಿಯಾಗಿ (ಜಡ್ಜಿಯಾಗಿ) ಕೆಲಸ ಮಾಡುವನೆಂದು ಹೇಳಬಹುದು. ಹತ್ತನೆಯ ಸ್ಥಾನವನ್ನು ಚಂದ್ರನು ನೋಡುವುದರಿಂದ ಸರ್ಕಾರದ ಪರವಾಗಿ ಮುದ್ರಣ ಅಧಿಕಾರವಿರುವ ವ್ಯಕ್ತಿಯಾಗಿ ಕೆಲಸ ಮಾಡುವನೆಂದು ಹೇಳಬಹುದು. ಈ ವಿಧವಾಗಿ ಸ್ಥಾನವನ್ನನುಸರಿಸಿಯೂ, ಗ್ರಹವನ್ನನುಸರಿಸಿಯೂ ಹೇಳಬಹುದು. ಕರ್ಕಾಟಕ, ಸಿಂಹ ಎರಡು ರಾಜ

ಮಂತ್ರಿಗೆ ಸಂಬಂಧಿಸಿರುವವು ಆದ್ದರಿಂದ ಅವುಗಳೊಂದಿಗೆ ಸಂಬಂಧವಿರುವವನು ಪ್ರಭುತ್ವ ಧನದೊಂದಿಗೆ ಜೀವಿಸುವುದೇ ಅಲ್ಲದೆ ಶಾಸಿಸುವ ಅಧಿಕಾರವನ್ನು ಹೊಂದಿರುತ್ತಾನೆ. ಚಂದ್ರನು ನಾಲ್ಕನೆ ಸ್ಥಾನದಿಂದ ಹತ್ತನೆಯದಾದ ಸಿಂಹವನ್ನು ತಾಕುವುದರಿಂದ ಮುದ್ರೆ ಹಾಕಿ ಶಾಸಿಸುವ ಅಧಿಕಾರವನ್ನು ಹೊಂದುವಂತೆ ಮಾಡಿ ಜಡ್ಜಿಯಾಗಾಗಲಿ, ಜಸ್ಟೀಸ್‌ಯಾಗಾಗಲಿ ನಿಲ್ಲಿಸುವುದು. ಕೇಳಿದ ಪ್ರಶ್ನೆಯನ್ನನುಸರಿಸಿ ಅದಕ್ಕೆ ಸಂಬಂಧಿಸಿದ ಸ್ಥಾನವನ್ನೂ, ಹಾಗೆಯೇ ಲಗ್ನಾಧಿಪತಿ ಯನ್ನು ಆಧಾರ ಮಾಡಿಕೊಂಡು ಉತ್ತರವನ್ನು ಹೇಳಬಹುದು.

ಆತನು (ಜಾತಕನು) ಹುಟ್ಟಿದಾಗ ದಿನಾಂಕವನ್ನು ಹುಟ್ಟಿದ ಸಮಯವನ್ನು ಆತನ ತಾಯಿತಂದೆಯರು ನೆನಪಿಟ್ಟುಕೊಂಡು, ತಮ್ಮ ಮಗ 25 ವರ್ಷಗಳ ವಯಸ್ಸು ಬಂದ ನಂತರ ಹೇಗೆ ಜೀವಿಸುತ್ತಾನೋಯೆಂದು, ಜ್ಯೋತಿಷ್ಯನನ್ನು ಕೇಳುವುದರಿಂದ, ಜ್ಯೋತಿಷ್ಯನು ಜಾತಕನು ಹುಟ್ಟಿದ ದಿನಾಂಕವನ್ನು, ಹುಟ್ಟಿದ ಸಮಯವನ್ನನುಸರಿಸಿ ಆ ಸಂವತ್ಸರ ಪಂಚಾಂಗವನ್ನು ನೋಡಿ, ಹುಟ್ಟಿದ ಸಮಯದಲ್ಲಿ ಗ್ರಹಗಳು ಎಲ್ಲಿವೆಯೋ ತಿಳಿದುಕೊಂಡು, ಆ ದಿನ ಜನ್ಮ ಲಗ್ನವನ್ನು ತಿಳಿದುಕೊಂಡಿದ್ದಾನೆ. ಜನ್ಮ ಲಗ್ನ ತಿಳಿದ ನಂತರ ಜಾತಕನಿಗೆ ಅನುಕೂಲವಾದ ಗ್ರಹಗಳು ಯಾವುವೋ, ಅನಾನುಕೂಲವಾದ ಗ್ರಹಗಳು ಯಾವುವೋ ತಿಳಿದುಕೊಂಡು, ನಂತರ ಕೇಳಿದ ಪ್ರಶ್ನೆಗೆ ಸಂಬಂಧಿಸಿದ ಲಗ್ನವನ್ನು ಲಗ್ನಾಧಿಪತಿಯನ್ನು ತಿಳಿದು ಆಗ ಉತ್ತರವನ್ನು ಹೇಳುವುದಾಗಿದೆ. ಜನ್ಮ ಲಗ್ನವನ್ನನುಸರಿಸಿ ಗುರುತಿಸಿದ ಒಂದನೆಯ ನಂಬರಿನಿಂದ ಹನ್ನೆರಡು ನಂಬರ್‌ಗಳ ಲಗ್ನಗಳನ್ನು ಹನ್ನೆರಡು ಕರ್ಮಚಕ್ರ ರಾಶಿಗಳಾಗಿ ಲೆಕ್ಕಿಸಿಕೊಳ್ಳಬೇಕು. ನಂತರವೇ ಮೇಷದಿಂದ ಮೀನದವರೆಗು ಕಾಲಚಕ್ರದಲ್ಲಿ ಗ್ರಹಗಳಿವೆಯೆಂದು ತಿಳಿಯಬೇಕು. ಹನ್ನೆರಡು ಭಾಗಗಳ ಸ್ಥಳಗಳನ್ನು (ಕುಂಡಲಿಯನ್ನು) ಕರ್ಮಚಕ್ರ ರಾಶಿಗಳಾಗಿ ಸಂಖ್ಯೆಗಳೊಂದಿಗೆ ಗ್ರಹಗಳಿವೆ. ಮೇಷಾದಿ ಮೀನಗಳೆನ್ನುವ ಹೆಸರುಗಳಿರುವವು ಲಗ್ನಗಳೆಂದು ತಿಳಿಯಬೇಕು. ಮೊದಲು ಯಾರಿಗಾದರೂ ಸ್ವಲ್ಪ ಗೊಂದಲ ವಾಗಿದ್ದರೂ ಚೆನ್ನಾಗಿ ಯೋಚಿಸಿ ಅರ್ಥಮಾಡಿಕೊಂಡರೇ ಸುಲಭವಾಗಿ ಅರ್ಥವಾಗಬಲ್ಲದು.

ಕರ್ಮಚಕ್ರದಲ್ಲಿನ ಹನ್ನೆರಡು ರಾಶಿಗಳಲ್ಲಿ ಕರ್ಮ ಇರುತ್ತದೆ. ಹಾಗೆಯೇ ಕಾಲಚಕ್ರದಲ್ಲಿನ ಮೇಷ ಮುಂತಾದ ಹೆಸರುಗಳಿರುವ ಲಗ್ನಗಳಲ್ಲಿ ಗ್ರಹಗಳು ಇರುತ್ತವೆಂದು ಮೊದಲೇ ಹೇಳಿದ್ದೇವೆ. ಆದ್ದರಿಂದ ಜ್ಯೋತಿಷ್ಯವನ್ನು ಹೇಳುವ ಯಾವ ಜ್ಯೋತಿಷ್ಯನಾದರೂ ಕುಂಡಲಿಯಲ್ಲಿನ ಪ್ರಶ್ನೆಗೆ ಸಂಬಂಧಿಸಿದ ಸ್ಥಾನವನ್ನೂ ಹಾಗೆಯೇ ಆ ಪ್ರಶ್ನೆಗೆ ಸಂಬಂಧಿಸಿದ ಗ್ರಹವನ್ನು ಮುಖ್ಯವಾಗಿ ನೋಡಿಕೊಂಡು ಆ ಎರಡರ ಆಧಾರದಿಂದಲೇ ಉತ್ತರವನ್ನು ಹೇಳಬೇಕು. ಇಂದಿನ ಕಾಲದಲ್ಲಿ ಹುಟ್ಟಿದ ದಿನಾಂಕ, ಹುಟ್ಟಿದ ಸಮಯ ಇದ್ದರೇ 80 ವರ್ಷಗಳ ನಂತರವಾದರೂ ಕಂಪ್ಯೂಟರ್ ಮುಖಾಂತರ ಜಾತಕಲಗ್ನವನ್ನು ಬರೆದುಕೊಳ್ಳಬಹುದು.

## 43 ರಾಶಿ – ಗ್ರಹ

ಇದಕ್ಕೂ ಮೊದಲೇ ಕರ್ಮಚಕ್ರದಲ್ಲಿನ ಭಾಗಗಳನ್ನು ರಾಶಿಗಳೆನ್ನುತ್ತೇವೆಂದು ಹೇಳಿಕೊಂಡಿದ್ದೇವೆ. ಹಾಗೆಯೇ ಕಾಲಚಕ್ರದಲ್ಲಿನ ಭಾಗಗಳನ್ನು ಲಗ್ನಗಳೆನ್ನುತ್ತೇವೆ. ಕಾಲಚಕ್ರದಲ್ಲಿನ ಲಗ್ನಗಳಲ್ಲಿ, ಗ್ರಹಗಳು ತಿರುಗುತ್ತಿರುತ್ತವೆಂದು ಹೇಳಿದ್ದೇವೆ. ಇದಕ್ಕೂ ಮೊದಲು ಒಬ್ಬ ವ್ಯಕ್ತಿ ಯಾವ ವ್ಯಾಪಾರ ಮಾಡುವನೆಂದು ಪ್ರಶ್ನೆಬಂದಾಗ, ಜ್ಯೋತಿಷ್ಯದ ಪ್ರಕಾರ ಆತನ ಭವಿಷ್ಯತ್ತಿನಲ್ಲಿನ ಜೀವನ ವಿಧಾನವನ್ನು ಕುರಿತು ಹೇಳುತ್ತಾ ಆತನು ವ್ಯಾಪಾರ ಮಾಡುವುದಿಲ್ಲ, ಉದ್ಯೋಗವನ್ನು ಮಾಡುತ್ತಾನೆಂದು ಹೇಳಿದ್ದೇವೆ. ಅಷ್ಟೇ ಅಲ್ಲದೆ ಕೋರ್ಟಿನಲ್ಲಿ ಜಡ್ಜಿಯಾಗಾಗಲಿ, ಜಸ್ಟೀಸ್‌ಯಾಗಾಗಲಿ ಉದ್ಯೋಗ ಮಾಡಬಹುದೆಂದು ಹೇಳುವುದು ನಡೆದಿದೆ. ಹಾಗೆ ಹೇಳುವುದಕ್ಕೆ ಕಾರಣ ಏನಿದೆ ಎನ್ನುವ ವಿಷಯವನ್ನು ವಿವರವಾಗಿ ಹೇಳಿದ್ದೇವೆ. ಅಷ್ಟೇ ಅಲ್ಲದೆ ಯಾವ ಜಾತಕನ ಪ್ರಶ್ನೆಗಾದರೂ ಉತ್ತರ ಹೇಳುವುದಕ್ಕೆ ಯಾವ ಜ್ಯೋತಿಷ್ಯನಾದರೂ ಮುಖ್ಯವಾಗಿ ಪ್ರಶ್ನೆಗೆ ಸಂಬಂಧಿಸಿದ ಸ್ಥಾನವನ್ನೂ, ಹಾಗೆಯೇ ಪ್ರಶ್ನೆಗೆ ಸಂಬಂಧಿಸಿದ ಗ್ರಹವನ್ನೂ ನೋಡಬೇಕೆಂದು ಹೇಳಿದ್ದೇವೆ. ಲಗ್ನ ಗ್ರಹವನ್ನನುಸರಿಸಿ, ಕರ್ಮಸ್ಥಾನವನ್ನನುಸರಿಸಿ ಜ್ಯೋತಿಷ್ಯದ ಪ್ರಕಾರ ಭವಿಷ್ಯತ್ತನ್ನು ಹೇಳಬಹುದು. ವೃತ್ತಿ ಅಥವಾ ಉದ್ಯೋಗ, ವ್ಯಾಪಾರವನ್ನು

ಕುರಿತು ನೋಡುವುದಕ್ಕೆ ಮೊದಲು ಕೇಳಿದ ಪ್ರಶ್ನೆಯಲ್ಲಿ ಯಾವ ಗ್ರಹವನ್ನು ನೋಡಿದ್ದೇವೊ, ಯಾವ ಸ್ಥಾನವನ್ನು ನೋಡಿದ್ದೇವೋ ಬರೆದಿದ್ದೇವೆ. ಆದ್ದರಿಂದ ಜ್ಯೋತಿಷ್ಯಕ್ಕೆ ಪ್ರಶ್ನೆಗೆ ಸಂಬಂಧಿಸಿದ **ಸ್ಥಾನ, ಗ್ರಹ** ಮುಖ್ಯ ಎಂದಿದ್ದೇವೆ.

ಇದಕ್ಕೂ ಮೊದಲು ಯಾವ ಗ್ರಹ ಅಧೀನದಲ್ಲಿ ಯಾವ ವಸ್ತುಗಳು, ಯಾವ ವಿಷಯಗಳು ಇವೆಯೋ ಬರೆದುಕೊಂಡಿದ್ದೇವೆ. ಹನ್ನೆರಡು ಗ್ರಹಗಳ ಅಧೀನದಲ್ಲಿ ಎಲ್ಲಾ ವಿಷಯಗಳನ್ನು ತಿಳಿದುಕೊಂಡಿದ್ದೇವೆ. ಆದರೇ ಯಾವ ರಾಶಿಯಲ್ಲಿ ಯಾವ ಕರ್ಮವಿದೆಯೆಂದು ಗತದಲ್ಲಿ ಹೇಳುತ್ತಾ ಹನ್ನೆರಡು ರಾಶಿಗಳನ್ನು ಗುರುತಿಸಿ, ಅವುಗಳಲ್ಲಿ ಅಂಗೀ ಅರ್ಧಾಂಗಿ ಎಂದು ಎರಡು ಭಾಗಗಳನ್ನು ತೋರಿಸಿ, ಅದರಲ್ಲಿ ಕೆಲವು ವಿಷಯಗಳನ್ನು ಮಾತ್ರ ಹೊಂದಿಸಿ ತೋರಿಸಿದ್ದೇವೆ. ಆದರೇ ಎಷ್ಟೋ ವಿಷಯಗಳನ್ನು ಅಲ್ಲಿ ತೋರಿಸಲಿಲ್ಲ. ಆದ್ದರಿಂದ ಮೇಲಿನ ಪ್ರಶ್ನೆಗೆ ಉತ್ತರವನ್ನು ಹೇಳುತ್ತಾ ಹತ್ತನೆಯ ಸ್ಥಾನವನ್ನು ನೋಡಬೇಕೆಂದು ಹೇಳಿದ್ದೇವೆ. ಹತ್ತನೆಯ ಸ್ಥಾನದಲ್ಲಿ ಜೀವನ ವಿಧಾನವಿದೆಯೆಂದು ಮೊದಲು ಹೇಳಲಿಲ್ಲ. ಆಗ ಹೇಳದ ವಿಷಯಗಳನ್ನು ಪೂರ್ತಿಯಾಗಿ ಈಗ ಹೇಳುತ್ತಿದ್ದೇವೆ ಜಾಗ್ರತೆಯಾಗಿ ನೋಡಿರಿ.

## ಪ್ರಥಮ ಸ್ಥಾನ (ತನುವು)

ಶರೀರ, ಆತ್ಮ, ರೂಪ, ಸ್ವಭಾವ, ಅಂಗ ಸೌಷ್ಟವವನ್ನು ಕುರಿತಿರುವ ಮುಂತಾದ ವಿಷಯಗಳು ಪ್ರಥಮ ರಾಶಿಯಲ್ಲಿ ಇರುತ್ತವೆ. ಕರ್ಮಚಕ್ರದಲ್ಲಿನ ಮೊದಲ ಸ್ಥಾನದಲ್ಲಿ ಶರೀರಕ್ಕೆ ಸಂಬಂಧಿಸಿದ ಪುಣ್ಯ ಇರುತ್ತದೆ. ಇದು ಪುಣ್ಯ ಸ್ಥಾನವೇ ಆದರೂ ಶತ್ರು ಗ್ರಹ (ಪಾಪವನ್ನು ಪಾಲಿಸುವ ಗ್ರಹ) ಆ ಸ್ಥಾನದೊಳಗೆ ತನ್ನ ಕಿರಣಗಳನ್ನು ಪ್ರಸರಿಸಿದರೇ ಅಲ್ಲಿರುವ ಪುಣ್ಯವನ್ನು ಆ ಕಿರಣಗಳು ಗ್ರಹಿಸದೆ ತಮಗೆ ಹಿಡಿಸದಂತಿರುವುದರಿಂದ ಆ ಜಾತಕನು ಪುಣ್ಯದ ಪ್ರಕಾರ ಒಳ್ಳೆಯ ಶರೀರ ಹೊಂದಲಾರದೆ ಹೋಗುವನು. ಅಲ್ಲಿಗೆ ಕಿರಣಗಳಿಂದ

ನೋಡುವುದು ಪಾಪಗ್ರಹವಾದಾಗ ತನ್ನ ಪ್ರಭಾವದಿಂದ ಬಲಹೀನವಾದ ದೇಹವೂ, ಅಂಗಲೋಪವಿರುವ ದೇಹವನ್ನೂ, ಅನಾರೋಗ್ಯಗಳಿಗೆ ಅನುವಾಗಿ ಇರುವ ದೇಹವನ್ನೂ, ಅಂಗಸೌಷ್ಟವ ಇಲ್ಲದ ದೇಹವನ್ನೂ ಲಭಿಸುವಂತೆ ಮಾಡುವನು. ಶುಭಗ್ರಹವಿದ್ದರೆ ಒಳ್ಳೆಯ ಬಲವಾದ ಶರೀರ, ಒಳ್ಳೆಯ ಸುಂದರ ವಾದ ಶರೀರ, ಒಳ್ಳೆಯ ಅಳತೆಗಳಿರುವ ಅಂಗಸೌಷ್ಟವವಿರುವ ಶರೀರವನ್ನು ಆ ಜಾತಕನು ಹೊಂದಿರುತ್ತಾನೆ. ಮೊದಲ ಸ್ಥಾನವಾದ ಶರೀರ ಸ್ಥಾನದಲ್ಲಿ ಯಾವ ಗ್ರಹವೂ ಇಲ್ಲದಿದ್ದರೂ, ಯಾವ ಗ್ರಹವೂ ತನ್ನ ಹಸ್ತಗಳಿಂದ ತಾಕದಿದ್ದರೂ ಅಂತಹವನಿಗೆ ಮಧ್ಯತರಗತಿ ಆರೋಗ್ಯ, ಅಂದ, ಅಂಗಸೌಷ್ಟವ ಇರುವ ಶರೀರ ವಿರುತ್ತದೆ. ಈ ವಿಧವಾಗಿ ಒಬ್ಬ ವ್ಯಕ್ತಿಗೆ (ಜಾತಕನಿಗೆ) ಶರೀರ ಹೇಗಿರುತ್ತದೆಂದು ಜ್ಯೋತಿಷ್ಯದ ಮುಖಾಂತರ ಆತನ ಕರ್ಮಚಕ್ರದಲ್ಲಿನ ಪ್ರಥಮ ಸ್ಥಾನವನ್ನು ನೋಡಿ ಹೇಳಬಹುದು.

## ದ್ವಿತೀಯ ಸ್ಥಾನ (ಧನ)

ಎರಡನೆ ಸ್ಥಾನ ಧನಸ್ಥಾನವೆಂದು ಹೆಸರುಗಳಿಸಿದ್ದರೂ ಆ ಸ್ಥಾನದಲ್ಲಿ ಒಂದು ಧನ ವಿಷಯವೇ ಅಲ್ಲದೆ, ಉಳಿದ ವಿಷಯಗಳ ಕರ್ಮಗಳು ಸಹ ಇರುತ್ತವೆ. ಉಳಿದವುಗಳಲ್ಲಿ ವಾಕ್ಕು ಮುಖ್ಯವಾದುದು. ಅಷ್ಟೇ ಅಲ್ಲದೆ ಕುಟುಂಬ, ನೇತ್ರ, ಕರ್ಣ (ಕಿವಿ) ಮುಖವರ್ಚಸ್ಸು, ಮರಣ ಮುಂತಾದವು ಇರುತ್ತವೆ. ಅವೇ ಅಲ್ಲದೆ ವಾಕ್‌ಚತುರತೆ, ಸತ್ಯವಚನಗಳು ನುಡಿಯುವುದು, ಮಾತಿಗೆ ಎಲ್ಲರೂ ಸಮ್ಮತಿಸುವುದು, ಮಾತನಾಡಲ್ಪಟ್ಟ ಮಾತುಗಳು ಎಲ್ಲರನ್ನೂ ಆಕರ್ಷಿಸುವಂತಿರುತ್ತವೆ. ಎರಡನೆ ಸ್ಥಾನದಲ್ಲಿ ಶುಭಗ್ರಹವಿದ್ದರೂ (ಮಿತ್ರಗ್ರಹ ವಿದ್ದರೂ) ಅಥವಾ ಬೇರೆ ಸ್ಥಾನದಲ್ಲಿದ್ದು ತನ್ನ ಹಸ್ತದಿಂದ ಅಲ್ಲಿಂದ ತಾಕಿದರೂ, ಮುಖವರ್ಚಸ್ಸಿನಲ್ಲಿ ಪ್ರತ್ಯೇಕತೆ ಹೊಂದಿರುತ್ತದೆ. ಕಣ್ಣುಗಳು ಸೊಗಸಾಗಿ ಸೊಂಪಾಗಿ ಆಕರ್ಷಣೆಯಾಗಿ ಇರುತ್ತವೆ. ಆಯುರ್ ಬಲವಿರುತ್ತದೆ. ಒಳ್ಳೆಯ ಕುಟುಂಬ ದೊಂದಿಗೆ ಇರುವುದಲ್ಲದೇ ಆ ಕುಟುಂಬ ದೈವಭಕ್ತಿ ಇರುವುದಾಗಿ ಇರುತ್ತದೆ.

ಒಂದುವೇಳೇ ಎರಡನೆ ಸ್ಥಾನದಲ್ಲಿ ಶತ್ರು ಗ್ರಹ (ಪಾಪ ಗ್ರಹ) ಇದ್ದರೂ ಅಥವಾ ತಾಕಿದರೂ ಅಲ್ಲಿರುವ ಪುಣ್ಯವನ್ನು ಒದಗಿಸದೆ ಪಾಪವನ್ನು ಒದಗಿಸುತ್ತದೆ. ದ್ವಿತೀಯ ಸ್ಥಾನದಲ್ಲಿ ಪಾಪಪುಣ್ಯಗಳು ಎರಡೂ ಇರುತ್ತವೆ. ಆದ್ದರಿಂದ ಪಾಪಗ್ರಹ ಮುಖದಲ್ಲಿ ಅಂದವಿಲ್ಲದಂತೆ, ಮಾತಿನಲ್ಲಿ ಆಕರ್ಷಣೆ ಇಲ್ಲದಂತೆ ಮಾಡುತ್ತದೆ. ಕುಟುಂಬದಲ್ಲಿ ಅನ್ಯೋನ್ಯತೆ ಇಲ್ಲದಂತೆ ಮಾಡುತ್ತದೆ. ಧನವನ್ನು ಇಲ್ಲದಂತೆ ಮಾಡಿ ಕಷ್ಟ ಕೊಡುತ್ತದೆ. ಈ ರೀತಿಯಾಗಿ ಒಳ್ಳೆಯ, ಕೆಟ್ಟ ಗ್ರಹಗಳು ಎರಡನೆ ಸ್ಥಾನದಲ್ಲಿ ಇದ್ದಾಗ ಮಾಡುತ್ತವೆ. ಒಂದುವೇಳೆ ಯಾವ ಗ್ರಹವೂ ಇಲ್ಲದ ಪಕ್ಷದಲ್ಲಿ ಆತನ ಎರಡನೆ ಸ್ಥಾನದಲ್ಲಿನ ವಿಷಯಗಳು ಆತನಿಗೆ ಮಧ್ಯ ರೀತಿಯಲ್ಲಿ ಬರುತ್ತಿರುತ್ತವೆ. ಒಳ್ಳೆಯ ಕೆಡಕುಗಳಿಲ್ಲದೆ ತಟಸ್ಥವಾಗಿ ಇರುತ್ತವೆ. ಕಾಲಕ್ರಮದಲ್ಲಿ ಅಲ್ಲಿಗೆ ಬಂದು ಹೋಗುವ ಗ್ರಹಗಳು ತಮ್ಮ ಇಷ್ಟವನ್ನನುಸರಿಸಿ ಅಲ್ಲಿನ ಫಲಿತಗಳನ್ನು ಕೊಡುತ್ತಿರುತ್ತವೆ.

## ತೃತೀಯ – ಸೋದರ ಸ್ಥಾನ

ಮೂರನೆ ಸ್ಥಾನ ಪಾಪಸ್ಥಾನ. ಇದು ಪಾಪಕೋನದಲ್ಲಿ ಮೂರನೆಯದಾಗಿ ಇರುವುದರಿಂದ ಈ ಸ್ಥಾನದಲ್ಲಿ ಪಾಪ ಮಾತ್ರ ಇರುತ್ತದೆ. ತೃತೀಯ ಸ್ಥಾನದಲ್ಲಿ ಪುಣ್ಯವಿಲ್ಲದಿದ್ದರೂ ಅಲ್ಲಿರುವ ಗ್ರಹಗಳನ್ನನುಸರಿಸಿಯಾಗಲಿ, ಅಲ್ಲಿ ತಾಕುತ್ತಿರುವ ಗ್ರಹವನ್ನನುಸರಿಸಿಯಾಗಲಿ ಫಲಿತವಿರುತ್ತದೆ. ಪಾಪ ಗ್ರಹ ಮೂರನೆಯ ಸ್ಥಾನವನ್ನು ತಾಕುವುದರಿಂದ ಅಥವಾ ಇರುವುದರಿಂದ ಆ ಸ್ಥಾನಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಪೂರ್ತಿ ವಿರುದ್ಧತೆ ಇರುತ್ತದೆ. ತನಗಿಂತ ಚಿಕ್ಕವರಾದ ತಂಗಿಯರಿದ್ದು ಅವರಿಂದ ಅನೇಕ ಬಾಧೆಗಳು ಬರುವಂತೆ ಮಾಡುತ್ತದೆ. ಅವರ ಮದುವೆಗಳು ಆಗುವವರೆಗು ತನಗೆ ಮದುವೆ ಆಗದಂತಿರುವುದರಿಂದ ಮದುವೆ ಪೂರ್ತಿ ಆಲಸ್ಯವಾಗುತ್ತದೆ. ದಾಯಾದಿಗಳಿಂದ ತೊಂದರೆಗಳಿರುತ್ತವೆ. ಸ್ವಂತ ಅಣ್ಣತಮ್ಮಂದಿರು ಸಹ ವಿರುದ್ಧವಾಗಿ ಮಾತನಾಡುತ್ತಿರುತ್ತಾರೆ. ಮತ್ತು ಜಗಳವಾಡುತ್ತಿರುತ್ತಾರೆ. ಶಾಂತಿ ಇಲ್ಲದಂತೆ ಹೋಗಿ

ಕೋಪ ಬರುತ್ತಿರುತ್ತದೆ. ಒಂದುವೇಳೆ ಶುಭಗ್ರಹ ಇದ್ದಂತಾದರೆ ಅಣ್ಣ ತಮ್ಮಂದಿರಿಂದ ಸುಖ ಇಲ್ಲದಿದ್ದರೂ ವಿರುದ್ಧತೆ ಇಲ್ಲದಂತೆ ಸಾಧಾರಣವಾಗಿ ಇರುತ್ತಾರೆ. ಒಳ್ಳೆಯ ಗ್ರಹವಿರುವ ಆ ಸ್ಥಾನದಲ್ಲಿ ಪುಣ್ಯ ಸ್ವಲ್ಪವಾದರೂ ಇಲ್ಲದಿರುವುದರಿಂದ ಮೇಲೆ ಹೇಳಿರುವ ವಿಷಯಗಳಲ್ಲಿ ಸುಖ ಇರುವುದಿಲ್ಲ. ಹಾಗೆಂದು ಕಷ್ಟ ಇರುವುದಿಲ್ಲ. ಈ ಸ್ಥಾನದಲ್ಲಿ ಪಾಪ ಮಾತ್ರ ಇರುವುದರಿಂದ ಧನ ಇಲ್ಲದಂತೆ ಮಾಡುತ್ತದೆ. ಜೀವನ ವಿಧಾನವನ್ನು ಕೆಡಿಸಿ ನೀಚ ಜೀವನ ಮಾಡುವಂತೆ ಮಾಡುತ್ತದೆ. ತಂದೆ ಆಸ್ತಿ ತನಗೆ ದಕ್ಕದಂತೆ ಹೋಗುತ್ತದೆ. ಉತ್ಸಾಹ ಇಲ್ಲದಂತೆ ಹೋಗಿ ಅಶಾಂತಿಯಿಂದ ಜೀವಿಸುವಂತೆ, ಸೇವಕಾವೃತ್ತಿಯಲ್ಲಿ ಕಾಲಕಳೆಯುವಂತೆ ಮಾಡುತ್ತದೆ.

## ಚತುರ್ಥ – ಮಾತೃಸ್ಥಾನ

ನಾಲ್ಕನೆ ಸ್ಥಾನ ಅಂಗೀ ಭಾಗದಲ್ಲಿ ಕೇಂದ್ರವಾಗಿದ್ದರೂ ಇದು ಪಾಪ ಪುಣ್ಯಗಳ ಎರಡಕ್ಕೂ ನಿಲಯ. ಈ ಸ್ಥಾನ ತಾಯಿಗೂ, ವಾಹನಕ್ಕೂ, ಭೂಮಿಗೂ, ಗೃಹಕ್ಕೂ, ಕೋನೇರು, ಬಾವಿ, ಕೆರೆಗಳಿಗೂ, ವ್ಯವಸಾಯಕ್ಕೂ, ಪಶುವೃದ್ಧಿಗೂ, ಬೆಳೆಗಳಿಗೂ, ಬಂಧುಗಳಿಗೂ ನಿಲಯವಾಗಿ ಇದೆ. ಸಕಲ ವಸ್ತುಗಳು ಇರುವ ಸ್ಥಳ, ಸಮಸ್ತ ಬೆಳೆಗಳು ಬೆಳೆಯುವ ಸ್ಥಳ ಈ ಸ್ಥಾನದಲ್ಲೇ ಇದೆ. ಈ ಸ್ಥಾನದಲ್ಲಿ ಒಂದು ಶುಭ ಗ್ರಹವಿದ್ದರೂ ಅಥವಾ ಈ ಸ್ಥಾನವನ್ನು ತಾಕಿದರೂ, ವಸ್ತುಬಲವಿರುತ್ತದೆ. ಈ ಸ್ಥಾನದಲ್ಲಿನ ಪುಣ್ಯವನ್ನು ಶುಭಗ್ರಹ (ಪುಣ್ಯ ಗ್ರಹ) ಸ್ವೀಕರಿಸಿ ಜಾತಕನಿಗೆ ಕೊಡುವುದರಿಂದ ಗೃಹಗಳು, ಗೃಹದಲ್ಲಿನ ವಸ್ತುಗಳು, ಧನ, ಕನಕ, ವಸ್ತುವಾಹನಗಳು, ಭೂಮಿಗಳು, ಜಲಾಶಯಗಳು, ಬಾವಿಗಳು, ವನಗಳು ಉಂಟಾಗುತ್ತವೆ. ಅಷ್ಟೇ ಅಲ್ಲದೆ ಬಂಧು ಮಿತ್ರರ ಪರಿವಾರ, ದಾಸ ಜನರು, ಪಶುವೃದ್ಧಿ, ಹಾಲಿನ ವೃದ್ಧಿ, ಧಾನ್ಯವೃದ್ಧಿ ಬಹಳ ಉಂಟಾಗುತ್ತವೆ. ನಂಬಿಕಸ್ತರಾದ ಬಂಧುಗಳ ಬಲ ಉಂಟಾಗುತ್ತದೆ. ಮಾತೃಪ್ರೀತಿ ಹೆಚ್ಚಾಗಿ ಇರುತ್ತದೆ. ಶುಭ ಕಾರ್ಯಗಳಿಗೆ ಪ್ರಯಾಣ ಮಾಡಿಸುತ್ತದೆ. ಸೌಖ್ಯಗಳನ್ನು ಉಂಟುಮಾಡಿ

ಕೀರ್ತಿ ಗೌರವಗಳನ್ನು ಹೆಚ್ಚಿಗೆ ಮಾಡುತ್ತದೆ. ಪ್ರತಿ ಕಾರ್ಯ ಜಯವಾಗಿ ಸಾಗುತ್ತದೆ. ತಾಯಿ ಕಡೆಯವರನ್ನು ಬೆಳೆಸುತ್ತದೆ. ಕ್ರಿಮಿ ಕೀಟಾದಿ ಬಾಧೆಗಳನ್ನು ಇಲ್ಲದಂತೆ ಮಾಡುತ್ತದೆ. ನಿಕ್ಷೇಪಗಳು ಸಿಗಬಹುದು. ಗೃಹಪ್ರವೇಶಗಳು ನಡೆಯುತ್ತವೆ. ವಸತಿ ಗೃಹಗಳು ಕಟ್ಟಿಸುತ್ತದೆ. ಪ್ರವಾಹ ಸಮೀಪ ಭೂಮಿಗಳು, ಸಾರವಂತವಾದ ಭೂಮಿಗಳು ಉಂಟಾಗುವಂತೆ ಮಾಡುತ್ತದೆ. ವಿದ್ಯಾವಂತರ, ಗಾಯಕರ, ಗೌರವನೀಯರ, ಉದ್ಯೋಗಿಗಳ ಮಿತ್ರತ್ವವನ್ನುಂಟುಮಾಡುತ್ತದೆ. ಕುದುರೆಗಳು, ಆನೆಗಳು, ನಾಯಿಗಳು ಮುಂತಾದವುಗಳನ್ನು ವೃದ್ಧಿ ಮಾಡುತ್ತದೆ. ಶುಭಕಾರ್ಯಗಳನ್ನು, ದೈವಕಾರ್ಯಗಳನ್ನು, ಮನೆಯಲ್ಲೇ ಮಾಡಿಸುತ್ತದೆ. ಶಯನ ಗೃಹವೂ, ಶಯನ ವಸ್ತುಗಳು ಹೆಚ್ಚಾಗಿ ಇರುತ್ತವೆ. ವೈಭವ ಗೃಹಗಳನ್ನು, ದೇವತಾ ಮಂದಿರಗಳ ನಿರ್ಮಾಣಗಳನ್ನೂ ಮಾಡಿಸುತ್ತದೆ. ಧರ್ಮಛತ್ರ ನಿರ್ಮಾಣವನ್ನು ಮಾಡಿಸುತ್ತದೆ. ಧರ್ಮಛತ್ರಗಳನ್ನು ಧರ್ಮ ಬಾವಿಗಳನ್ನು ಕಟ್ಟಿಸಿ ಕೀರ್ತಿಯನ್ನು ಸಂಪಾದಿಸುವುದಲ್ಲದೇ ವೈಭೋಗದಿಂದ ಜೀವಿಸುವಂತೆ ಮಾಡುತ್ತದೆ. ಆದರೇ ಇಲ್ಲಿ ಚತುರ್ಥದಲ್ಲಿ ಒಂದು ಪಾಪ ಗ್ರಹವಿದ್ದರೂ, ತಾಕಿದರೂ, ಮೇಲೆ ಹೇಳಿರುವ ಫಲಿತಗಳಿಗೆಲ್ಲಾ ವಿರುದ್ಧದಲ್ಲಿ ಫಲಿತಗಳಿರುತ್ತವೆ.

## ಪಂಚಮ – ವಿದ್ಯಾಸ್ಥಾನ

ಈ ಸ್ಥಾನದಲ್ಲಿ ಕೇವಲ ಪುಣ್ಯ ಮಾತ್ರ ಇರುತ್ತದೆ. ಕೋನಗಳಲ್ಲಿ ಪುಣ್ಯಕ್ಕೆ ಸಂಬಂಧಿಸಿದ ಕೋನ. ಈ ಸ್ಥಾನ ವಿದ್ಯಾಸ್ಥಾನವೇ ಆದರೂ ಮುಖ್ಯವಾಗಿ ಜ್ಞಾನಕ್ಕೆ ನಿಲಯವಾದ ಸ್ಥಾನ. ಜ್ಞಾನವೆಂದರೆ ಪ್ರಪಂಚ ಜ್ಞಾನವೆಂದು ತಿಳಿಯಬೇಕು. ಆದ್ದರಿಂದ ಈ ಸ್ಥಾನ ಯುಕ್ತಾಯುಕ್ತ ವಿವೇಕಕ್ಕೆ, ಸಮಯಸ್ಫೂರ್ತಿಗೆ, ಗ್ರಾಹಿತಾಶಕ್ತಿಗೆ, ಜ್ಞಾಪಕಶಕ್ತಿಗೆ ನಿಲಯವೆಂದು ಹೇಳಬಹುದು. ವಿದ್ಯಾಸ್ಥಾನವಾಗುವುದರಿಂದ ಜಾತಕನು ಎಲ್ಲಿಯವರೆಗು ಓದಬಲ್ಲನೆಂದು, ಮೊದಲಿಗೇ ಓದು ಹತ್ತುತ್ತದಾ ಹತ್ತುವುದಿಲ್ಲವಾ ಎಂದೂ, ಓದಿನಲ್ಲಿ ಮಂದವಾಗಿ ಇರುತ್ತಾನಾ, ಚುರುಕಾಗಿ ಇರುತ್ತಾನಾ ಎಂದೂ ಈ ಸ್ಥಾನವನ್ನನುಸರಿಸಿಯೇ ತಿಳಿಯಬಹುದು. ಐದನೆ

ಸ್ಥಾನ ಪೂರ್ತಿ ಪುಣ್ಯ ಸ್ಥಾನವಾಗುವುದರಿಂದ ಇಲ್ಲಿ ಮಿತ್ರವರ್ಗದಲ್ಲಿನ ಯಾವ ಗ್ರಹ ನೋಡಿದರೂ ಅಥವಾ ತನ್ನ ಹಸ್ತಗಳಿಂದ ತಾಕಿದರೂ ಎಲ್ಲಾ ಒಳ್ಳೆಯ ಫಲಿತಗಳೇ ಜಾತಕನಿಗೆ ಲಭಿಸುತ್ತವೆ. ಐದನೆ ಸ್ಥಾನದಲ್ಲಿ ಸಂತಾನಕ್ಕೆ ಸಂಬಂಧಿಸಿದ ಕರ್ಮ ಇರುವುದರಿಂದ ಪುಣ್ಯ ಗ್ರಹದಿಂದ ಒಳ್ಳೆಯ ಸಂತಾನ ಉಂಟಾಗುತ್ತದೆ. ಪ್ರಪಂಚ ಜ್ಞಾನಕ್ಕೆ ನಿಲಯವಾದ ಸ್ಥಾನವಾಗುವುದರಿಂದ ಅನುಕೂಲವಾದ ಗ್ರಹ ಬಲದಿಂದ ಮಂತ್ರಿ ಪದವಿ ಲಭಿಸುತ್ತದೆ. ಅಷ್ಟೇ ಅಲ್ಲದೆ ಒಳ್ಳೆಯ ನಡವಳಿಕೆ ಇರುವವರಾಗಿ ನಿಶ್ಚಯ ಬುದ್ಧಿ ಇರುವವನಾಗಿ ಬಂಧು, ಮಿತ್ರರಿಗೆ ಸಲಹೆದಾರನಾಗಿ ಇರುತ್ತಾನೆ. ಪುಣ್ಯ ಗ್ರಹದಿಂದ ವಿದ್ಯಾ, ವಿನಯ, ವಿಧೇಯತೆ, ವಿವೇಕ ಉಂಟಾಗುತ್ತವೆ. ಮುಖ್ಯವಾದ ವಿಷಯಗಳನ್ನು ತಿಳಿದುಕೊಳ್ಳುವುದು, ಒಳ್ಳೆಯ ವಿಷಯಗಳನ್ನು ಮಾತನಾಡುವುದು ದೂರದ ಆಲೋಚನೆಗಳನ್ನು ಮಾಡುವುದು ಇರುತ್ತದೆ. ಇನ್ನೂ ಘನತೆ, ಗಾಂಭೀರ್ಯ, ಗ್ರಾಮಾಧಿಕಾರ ಉಂಟಾಗುತ್ತದೆ. ಗ್ರಂಥ ರಚನೆಯಲ್ಲಿ ಪ್ರಾವೀಣ್ಯತೆ, ಮಂತ್ರೋಪಾಸನೆಯಲ್ಲಿ ಪ್ರಸನ್ನತೆ ಉಂಟಾಗುತ್ತದೆ. ದಾನ ಮಾಡುವುದು, ನ್ಯಾಯವಾಗಿ ನಡೆದುಕೊಳ್ಳುವುದು, ಪಾಪಪುಣ್ಯಗಳಲ್ಲಿ ವಿಮರ್ಶಿಸುವುದು, ಪಾಂಡಿತ್ಯದಲ್ಲಿ ಪ್ರತಿಭೆ, ಜ್ಞಾನಶಕ್ತಿ, ಜ್ಞಾಪಕಶಕ್ತಿ, ಗ್ರಾಹಿತಶಕ್ತಿ, ಕೈಕೆಲಸದ ನೈಪುಣ್ಯತೆ, ಯಂತ್ರಗಳನ್ನು ಸರಿಮಾಡುವ ಯುಕ್ತಿ ಇರುತ್ತದೆ. ಮಂತ್ರ, ತಂತ್ರ, ಯಂತ್ರ ಬಲ ಉಂಟಾಗುತ್ತದೆ. ಗುರುತ್ವ, ಗುರು ಸ್ಥಾನ ಹೊಂದಿರುತ್ತಾನೆ. ಕಾರ್ಯಜಯ, ನಿದಾನ, ಅಧಿಕಾರ, ಅನ್ನದಾನ, ವಂಶಾಭಿವೃದ್ಧಿ, ನೀತಿ, ನಿಯಮ, ಶಾಂತಿಯನ್ನುಂಟುಮಾಡುತ್ತದೆ. ಕೀರ್ತಿ ಗೌರವಗಳು ವ್ಯಾಪಿಸುವಂತೆ ಮಾಡುತ್ತದೆ. ಯಾರೂ ನೋಡದವುಗಳನ್ನು, ಯಾರೂ ಕೇಳದವುಗಳನ್ನು ಕಂಡುಕೊಳ್ಳುವ ಶಕ್ತಿಯನ್ನು ಕೊಡುತ್ತದೆ. ಅಧರ್ಮಗಳನ್ನು ಖಂಡಿಸುವುದು, ಪ್ರಜೆಗಳಿಗೆ ಹಿತನಾಗಿ, ಗುರುವಾಗಿ ತೋರಿಸುತ್ತದೆ. ಇತರರು ಕೇಳಿದ ಪ್ರಶ್ನೆಗೆ ಚೂಟಿಯಾಗಿ ಉತ್ತರವನ್ನು ಕೊಡುವ ಸಾಮರ್ಥ್ಯವನ್ನುಂಟುಮಾಡುತ್ತದೆ. ಒಂದುವೇಳೆ ಐದನೆ ಸ್ಥಾನದಲ್ಲಿ ಪಾಪಗ್ರಹ

ವಿದ್ದರೂ ಪುಣ್ಯವನ್ನು ಕೊಡುವುದಿಲ್ಲ, ಪಾಪವಿಲ್ಲ ಆದ್ದರಿಂದ ಕೆಟ್ಟದನ್ನೂ ಮಾಡಲಾರದು. ಪುಣ್ಯ ಗ್ರಹ ಇಲ್ಲದಿರುವುದರಿಂದ ಗ್ರಹಗಳ ಸಂಚಾರದಲ್ಲಿ ಯಾವ ಗ್ರಹ ಆ ಸ್ಥಾನದೊಳಗೆ ಬಂದರೆ ಅದಕ್ಕೆ ಅನುಕೂಲವಾದವುಗಳನ್ನು ಉಂಟುಮಾಡುತ್ತದೆ.

## ಆರನೆಯದು – ಶತ್ರುಸ್ಥಾನ

ಆರನೆಯ ಸ್ಥಾನ ಪಾಪಪುಣ್ಯ ಮಿಶ್ರಮ ಸ್ಥಾನ. ಇಲ್ಲಿರುವ ಮಿತ್ರ ಗ್ರಹವನ್ನು (ಪುಣ್ಯಗ್ರಹವನ್ನು) ಅನುಸರಿಸಿ ಒಳ್ಳೆಯದೂ, ಶತ್ರು ಗ್ರಹವನ್ನು (ಪಾಪ ಗ್ರಹವನ್ನು) ಅನುಸರಿಸಿ ಕೆಟ್ಟದೂ ನಡೆಯುತ್ತಿರುತ್ತದೆ. ಇಲ್ಲಿ ಶುಭಗ್ರಹವಿದ್ದರೂ ಅಥವಾ ತಾಕಿದರೂ ಪುಣ್ಯ ಫಲ ಲಭ್ಯವಾಗುವುದರಿಂದ ಶತ್ರು, ರುಣ, ರೋಗ, ಸಮಸ್ಯೆಗಳು ಇರುವುದಿಲ್ಲ. ಬಡ್ಡೀ ವ್ಯಾಪಾರದಿಂದ, ವೈದ್ಯವೃತ್ತಿಯಿಂದ ಧನಾರ್ಜನ ಉಂಟುವಮಾಡಿಸುತ್ತದೆ. ಶತ್ರುಗಳು ಇರುವುದಿಲ್ಲ, ಇದ್ದರೂ ಅವರೇ ನಶಿಸಿಹೋಗುವರು, ಋಣಬಾಧೆಗಳಿರುವುದಿಲ್ಲ. ಋಣ ಗಳಿದ್ದರೂ ಸುಲಭವಾಗಿ ತೀರಿಹೋಗುತ್ತವೆ. ರೋಗಗಳು ಬರುವುದಿಲ್ಲ, ಒಂದುವೇಳೆ ಬಂದರೂ ಸುಲಭವಾಗಿ ಹೋಗುತ್ತವೆ. ಕಲಹಭಯ, ಮನೋಚಿಂತೆ, ಇತರರು ದ್ವೇಷಿಸುವುದು, ಅಪವಾದಗಳು, ಅಪನಿಂದನೆಗಳು, ಅನುಮಾನಗಳು, ಕೆಟ್ಟ ವ್ಯಸನಗಳ ಬಾಧೆಗಳು ಇರುವುದಿಲ್ಲ. ಅಷ್ಟೇ ಅಲ್ಲದೆ ಹಣ ವೃಥಾ ಖರ್ಚಾಗುವುದಿಲ್ಲ. ಸಾಲಗಳು ಕೊಡುವುದರಲ್ಲಿಯೂ, ತರುವುದರಲ್ಲಿಯೂ, ಕೊಡಿಸುವುದರಲ್ಲಿಯೂ ಎಂತಹ ತೊಂದರೆಗಳು ಇರುವುದಿಲ್ಲ. ಆರನೆ ಸ್ಥಾನವನ್ನು ಸೇರುವ ಪುಣ್ಯಗ್ರಹಗಳನ್ನನುಸರಿಸಿ ಫಲಿತಗಳಿರುತ್ತವೆ. ಒಂದುವೇಳೆ ಪಾಪ ಗ್ರಹವಿದ್ದರೂ ಅಥವಾ ಅಲ್ಲಿ ತಾಕಿದರೂ ಶತ್ರು, ಋಣ, ರೋಗ ಸಮಸ್ಯೆಗಳು ಜೀವನವೆಲ್ಲಾ ಇರುತ್ತವೆ. ಯಾವ ಗ್ರಹ ಇಲ್ಲದಿದ್ದರೂ ಅತ್ತ ಇತ್ತ ಅಲ್ಲದೆ ಮಾಧ್ಯಮ ರೀತಿಯಲ್ಲಿ ನಡೆಯುತ್ತಿರುತ್ತದೆ.

# ಸಪ್ತಮ – ಕಳತ್ರ ಸ್ಥಾನ

ಇದು ಪೂರ್ತಿ ಪಾಪಸ್ಥಾನ. ಇಲ್ಲಿ ಪಾಪಗ್ರಹವಿದ್ದರೆ ಅದರಲ್ಲಿನ ಪಾಪವನ್ನು ಒದಗಿಸಿ ಮನುಷ್ಯನನ್ನು ಬಹಳ ಕಷ್ಟಗಳಿಗೀಡುಮಾಡುತ್ತದೆ. ಜೀವನದಲ್ಲಿ ಹೆಂಡತಿ ಸೌಖ್ಯ ಇಲ್ಲದಂತೆ ಮಾಡುತ್ತದೆ. ಯೌವ್ವನ ಕಾಲವೆಲ್ಲಾ ವ್ಯರ್ಥವಾಗುತ್ತದೆ. ವಿವಾಹ ಆಗುವುದೇ ಕಷ್ಟವಾಗುತ್ತದೆ. ಒಂದುವೇಳೆ ವಿವಾಹವಾದರೂ ಅದು ಸ್ವಲ್ಪ ಕಾಲಕ್ಕೇ ಕೆಟ್ಟುಹೋಗಿ ಹೆಂಡತಿ ಬಿಟ್ಟು ಹೋಗುತ್ತಾಳೆ. ಇರುವಷ್ಟು ಕಾಲ ಗಂಡ ಹೆಂಡತಿಯರಿಗೆ ಯಾವ ಮಾತ್ರ ಹೊಂದಿಕೆಯಾಗುವುದಿಲ್ಲ. ಜೀವನದಲ್ಲಿ ಮುಖ್ಯವಾದವಳು ಹೆಂಡತಿಯಾದರೆ ಆ ಹೆಂಡತಿಯಿಂದ ಸುಖವಿಲ್ಲದೆ ಯಾವಾಗಲೂ ಕಷ್ಟವೇ ಇರುವುದರಿಂದ, ಮತ್ತೆ ಕೆಲವು ಕಾರಣಗಳಿಂದ ಪೂರ್ತಿ ಬೇಸರಗೊಂಡು ಮನೋಶಾಂತಿ ಇಲ್ಲದಂತೆ ಹೋಗುತ್ತದೆ. ಅದಕ್ಕೆ ಜೊತೆಯಾಗಿ ಆ ಸ್ಥಾನದಲ್ಲಿ ಎಂಟನೆಯ ಸ್ಥಾನಾಧಿಪತಿ ಇದ್ದರೂ, ಎಂಟನೆಯ ಸ್ಥಾನದಲ್ಲಿ ಪಾಪಗ್ರಹವಿದ್ದರೂ ಅಂತಹವನು ಹೆಂಡತಿಯಿಂದ ಮನೋಕಲಹದಿಂದ ಕೊನೆಗೆ ಆತ್ಮಹತ್ಯೆ ಮಾಡಿಕೊಳ್ಳುವನು.

ಕಳತ್ರ ಎಂದರೆ ಪೂರ್ತಿ ಹೆಂಡತಿ ಸಂಬಂಧವಾಗಿರುವುದರಿಂದ ಸಪ್ತಮ ಸ್ಥಾನದಲ್ಲಿ ಶುಭಗ್ರಹವಿದ್ದರೂ ಅಥವಾ ಶುಭಗ್ರಹ ತನ್ನಕೈಗಳಿಂದ ತಾಕಿದರೂ ಕಳತ್ರದಿಂದ ಲಭಿಸುವ ಎಲ್ಲ ವಿಧಗಳ ಕಷ್ಟಗಳು ಇಲ್ಲದಂತೆ ಹೋಗುತ್ತವೆ. ಆ ಸ್ಥಾನದಲ್ಲಿ ಪುಣ್ಯವಿಲ್ಲದಿದ್ದರೂ ಶುಭಗ್ರಹವಿರುವುದರಿಂದ ಶುಭಗ್ರಹದ ಎದುರುಗಡೆ ಒಂದನೆ ಸ್ಥಾನದಲ್ಲಿರುವ ಪುಣ್ಯಗಳನ್ನು ಗ್ರಹಿಸಿ, ಆ ಪುಣ್ಯದಿಂದ ಶರೀರ ಸುಖವನ್ನು ಒದಗಿಸಬೇಕಾದ ಕರ್ತವ್ಯ ತನಗಿದೆ. ಆದ್ದರಿಂದ ಹೆಂಡತಿಯಿಂದ ಶರೀರ ಸುಖ ಒದಗಿಸುತ್ತದೆ. ಆಗ ಒಂದನೆಯ ಸ್ಥಾನದಲ್ಲಿನ ಶರೀರ ಸೌಷ್ಟವ, ಶರೀರ ಅಂದದಿಂದ ಹೆಂಡತಿಯನ್ನು ಆಕರ್ಷಿತಳನ್ನಾಗಿ ಮಾಡಿ ಸುಖವನ್ನು ಒದಗಿಸುತ್ತದೆ. ಹಾಗೆಯೇ ಉಳಿದ ವಿಷಯಗಳಾದ ಹೆಂಡತಿ ಮೂಲಕ ಧನ ಉಂಟಾಗುವಂತೆ ಮಾಡುತ್ತದೆ. ವಿವಾಹ ಇದ್ದಕ್ಕಿದ್ದಂತೆ ನಡೆಯುವಂತೆ ಮಾಡುತ್ತದೆ. ಸ್ತ್ರೀ ಸಾಂಗತ್ಯ,

ಸುಗಂಧಗಳು, ಮಧುರ ಪಾನೀಯಗಳು, ಮಧುರ ಫಲಹಾರಗಳು, ಪುಷ್ಪಗಳು, ತಾಂಬೂಲ ಊಹಿಸದ ರೀತಿಯಲ್ಲಿ ಲಭ್ಯವಾಗುತ್ತವೆ. ಇತರ ಸ್ತ್ರೀಯರನ್ನು ಆಕರ್ಷಿಸುವುದು ಅವರಿಂದ ಸುಖವನ್ನು ಹೊಂದುವುದು ಒಂದು ಸ್ಥಾನದಲ್ಲಿ ಇರುವುದರಿಂದ ಆತನಿಗೆ ಹೆಂಡತಿಯೇ ಇತರ ಸ್ತ್ರೀ ಕೆಳಗೆ ಜಮಕಟ್ಟಿ ಆಕೆಯಿಂದ ಸುಖ ಸ್ನೇಹವು ಲಭ್ಯವಾಗುವಂತೆ ಶುಭಗ್ರಹ ಮಾಡುತ್ತದೆ. ಸಕಾಲ ನಿದ್ರೆ ಸಕಾಲ ಮೈಥುನವು ಲಭಿಸುತ್ತದೆ. ಮಲಗುವ ಕೊಠಡಿಯೂ ಸಹ ಸುಖಗಳಿಗೆ ಅನುಕೂಲವಾಗಿ ಲಭಿಸುತ್ತದೆ. ಇದೆಲ್ಲವೂ ಶುಭಗ್ರಹದಿಂದ ಪ್ರಥಮ ಸ್ಥಾನವನ್ನನುಸರಿಸಿ ಇರುತ್ತದೆ. ಮೊದಲ ಸ್ಥಾನದಲ್ಲಿ ಮತ್ತೊಂದು ಶುಭಗ್ರಹವಿದ್ದು ಅಲ್ಲಿಂದ ಏಳನೆಯ ಸ್ಥಾನವನ್ನು ತಾಕುವುದರಿಂದ, ಏಳನೆಯ ಸ್ಥಾನದಲ್ಲಿ ಮತ್ತೊಂದು ಶುಭಗ್ರಹವಿದ್ದರೂ, ಅಂತಹ ಜಾತಕನಿಗೆ ಗ್ರಹಗಳ ಮೂಲದಿಂದ ಒಂದನೆ ಸ್ಥಾನ ಪುಣ್ಯವನ್ನು ಎದುರುಗಡೆ ಇರುವ ಏಳನೆ ಸ್ಥಾನದಲ್ಲಿ ಜಾರಿಯಾದ ಹಾಗೆ ಭ್ರಮಿಸುವಂತೆ ಮಾಡಿ ಸುಖಗಳನ್ನು ಕೊಡುವರೆಂದು ತಿಳಿಯಬೇಕು.

## ಅಷ್ಟಮ – ಆಯುಸ್ಥಾನ

ಕರ್ಮ ಚಕ್ರದಲ್ಲಿನ ಎಂಟನೆ ಸ್ಥಾನದಲ್ಲಿ ಪಾಪ, ಪುಣ್ಯ ಎರಡೂ ಇವೆ. ಈ ಸ್ಥಾನದಲ್ಲಿ ಎಷ್ಟೋ ವಿಷಯಗಳಿದ್ದರೂ, ಆಯುಷ್ಯ ವಿಷಯಕ್ಕೇ ಹೆಚ್ಚಿನ ಪ್ರಾಧಾನ್ಯತೆ ಇದೆ. ಆದ್ದರಿಂದ ಈ ಸ್ಥಾನವನ್ನು ಆಯುಸ್ಥಾನ ಎನ್ನುತ್ತಾರೆ. ಈ ಸ್ಥಾನದಲ್ಲಿ ಆಯುರ್ಧಾಯವಿರುವಾಗ ಮರಣವನ್ನು ಸಹ ಹೇಳಬಹುದು. ಅಷ್ಟೇ ಅಲ್ಲದೆ ಜಾತಕನ ಜೀವನ, ದುಃಖವು, ನರಕ, ಪಾಪಕೃತ್ಯಗಳು ಮಾಡುವುದು ಮುಂತಾದವು ಇವೆ. ಇವೆಲ್ಲವೂ ಪಾಪ ಮತ್ತು ಪುಣ್ಯಗಳನ್ನನುಸರಿಸಿ ಇರುತ್ತವೆ. ಈ ಸ್ಥಾನದಲ್ಲಿ ಒಳ್ಳೆಯ ಗ್ರಹ (ಶುಭಗ್ರಹ) ಇದ್ದರೂ ಅಥವಾ ತಾಕಿದರೂ ಜಾತಕನು ಹೆಚ್ಚಿನ ಕಾಲ ಜೀವಿಸುವನೆಂದು ಹೇಳಬಹುದು. ಪುಣ್ಯಗ್ರಹ ಇರುವುದರಿಂದ ಆ ಸ್ಥಾನದಲ್ಲಿನ ಪುಣ್ಯವನ್ನು ಮಾತ್ರ ಸ್ವೀಕರಿಸಿ ಮನುಷ್ಯನಿಗೆ ಒದಗಿಸುವುದರಿಂದ ಜಾತಕನು ದೇಹಪುಷ್ಠಿ, ವೀರ್ಯಪುಷ್ಠಿ ಹೊಂದಿ ಕಾಮ

ಸೌಖ್ಯವನ್ನು ಅನುಭವಿಸುವನು. ಹೆಚ್ಚಿನ ಕನ್ಯೆಯರೊಂದಿಗೆ ಸಂಬಂಧ ಉಂಟಾಗು ವಂತೆ ಮಾಡುತ್ತದೆ. ದೀರ್ಘನಾಡಿ ಹೊಂದಿರುವುದರಿಂದ ರತಿಕೇಳಿಯಲ್ಲಿ ಹೆಚ್ಚಿನ ಕಾಲ ಕಳೆಯುತ್ತಾನೆ. ಅವಮಾನಗಳು, ಕಲಹಗಳು ಇಲ್ಲದಂತೆ ಮಾಡುತ್ತದೆ. ಅಂಗಲೋಪವಿರುವುದಿಲ್ಲ, ಸ್ತ್ರೀಯರಿಂದ ದುಃಖವಿರುವುದಿಲ್ಲ. ಶತ್ರುಭಯ ಇರುವುದಿಲ್ಲ. ಕಾರಾಗಾರ ಪ್ರಾಪ್ತಿಯಾಗಲಿ, ಕಾನೂನನ್ನು ಮೀರಿ ನಡೆಯುವುದಾ ಗಲಿ ಇರುವುದಿಲ್ಲ. ಪ್ರಾಣಿ ವಧೆ ಮಾಡುವುದಿಲ್ಲ, ಪಾಪ ಭೀತಿ ಇರುತ್ತದೆ. ಅಕಾಲಮೃತ್ಯು ಭಯವಿರುವುದಿಲ್ಲ. ಮಾಡುವ ಕೆಲಸದಲ್ಲಿ ಪ್ರತಿಭೆ ಹೊಂದಿರುತ್ತಾನೆ. ಕಳತ್ರ ಸುಖವಿರುತ್ತದೆ, ಅನ್ಯ ಸ್ತ್ರೀಯರ ಸಾಂಗತ್ಯ ಉಂಟಾಗುತ್ತದೆ. ಒಂದು ವೇಳೆ ಜನನ ಸಮಯದಲ್ಲಿ ಈ ಸ್ಥಾನದಲ್ಲಿ ಪಾಪ ಗ್ರಹ ಇದ್ದಂತಾದರೆ ಅದು ಅಲ್ಲಿರುವ ಪಾಪವನ್ನು ಸ್ವೀಕರಿಸಿ ಜಾತಕನಿಗೆ ಒದಗಿಸುತ್ತದೆ. ಪುಣ್ಯವನ್ನು ತೆಗೆದುಕೊಳ್ಳುವುದಿಲ್ಲ. ಪಾಪ ಗ್ರಹದಿಂದ ಆತನಿಗೆ ಪಾಪ ಕರ್ಮ ಅನುಭವಗಳೇ ಉಂಟಾಗುತ್ತವೆ. ಅಕಾಲ ಮೃತ್ಯು ಏರ್ಪಡುತ್ತದೆ. ಒಂದುವೇಳೇ ಅಕಾಲ ಮೃತ್ಯು ಇಲ್ಲದಿದ್ದರೂ ಆಯುಷ್ಯ ಬೇಗನೇ ಮುಗಿದುಹೋಗುತ್ತದೆ. ಅಂದರೆ ಅಲ್ಪಾಯುಷ್ಕನಾಗುತ್ತಾನೆ. ಪರಾಭವಗಳು ಉಂಟಾಗುತ್ತವೆ. ಕಾರಾಗಾರ ಪ್ರಾಪ್ತಿ ಉಂಟಾಗುತ್ತದೆ. ಇತರರಿಂದ ಪ್ರಾಣಹಾನಿ ಭಯವಿರುತ್ತದೆ. ಸ್ತ್ರೀ ಸುಖ ಇರುವುದಿಲ್ಲ. ಸ್ಪರ್ಶನಾಡಿ ಇರುವವನಾಗಿ ಗಂಡಸುತನವಿದ್ದರೂ ನಿಮಿಷ ಅಥವಾ ಅರ್ಧ ನಿಮಿಷದಲ್ಲಿ ಕಾಮವಾಂಛೆ ತೀರಿಹೋಗುತ್ತದೆ. ಅದರಿಂದ ನಿರಾಶೆ ಏರ್ಪಡುತ್ತದೆ. ಸ್ತ್ರೀಯರಿಂದ ಅವಮಾನ ಉಂಟಾಗುತ್ತದೆ. ಎಂಟನೆ ಸ್ಥಾನದಲ್ಲಿ ಶತ್ರುಗ್ರಹವಾಗಿ ರಾಹುವಿರುವ ವಿಷಾಹಾರದಿಂದಾಗಲಿ, ಹಾವಿನ ಕಡಿತದಿಂದಾಗಲೀ ಮರಣಿಸುವನೆಂದು ಹೇಳಬಹುದು. ಚಂದ್ರನು ಪಾಪಿಯಾಗಿ ಅಷ್ಟಮದಲ್ಲಿರುವ ನೀರಿನ ಗಂಡಾಂತರದಿಂದ ಮರಣಿಸುವನೆಂದು ಹೇಳಬಹುದು. ಹಾಗೆಯೇ ಶುಕ್ರನು ಶತ್ರುಗ್ರಹವಾಗಿ ಎಂಟನೆಯ ಸ್ಥಾನದಲ್ಲಿ ಇದ್ದಂತಾದರೆ ಜೀವನದಲ್ಲಿ ಸಮಯ ನೋಡಿ ಅಗ್ನಿಯಿಂದ ಸುಟ್ಟು ಮರಣಿಸುವನೆಂದು ಹೇಳಬಹುದು. ಒಂದುವೇಳೆ ಬುಧಗ್ರಹ ಎಂಟನೆ ಸ್ಥಾನದಲ್ಲಿ ಇದ್ದಂತಾದರೆ ಜಾತಕನ ಶರೀರದಲ್ಲಿ ದೆವ್ವಗಳು ಸೇರಿ ಡಾಕ್ಟರ್‌ಗಳಿಗೆ ಅರ್ಥವಾಗದ ರೋಗವನ್ನು ಕಲ್ಪಿಸಿ ದೆವ್ವಗಳೇ

ಸಾಯಿಸುತ್ತವೆ. ಎಂಟನೆಯ ಸ್ಥಾನದಲ್ಲಿ ಕುಜಗ್ರಹ ಅಶುಭ ಗ್ರಹವಾಗಿ ಇದ್ದಂತಾದರೆ ಅಂತಹ ಜಾತಕನು ಆಯುಧಗಳಿಂದ ಸಾಯಿಸಲ್ಪಡುವನೆಂದು ಹೇಳಬಹುದು. ಕುಜಗ್ರಹಕ್ಕೆ ಭೂಗ್ರಹ ಜೊತೆಯಾಗಿದ್ದರೆ ಬಾಂಬುಗಳಿಂದಾಗಲೀ, ತುಪಾಕಿಗಳಿಂದಾಗಲೀ ಜಾತಕನಿಗೆ ಮರಣ ಸಂಭವಿಸುತ್ತದೆ. ಉಳಿದ ಸ್ವಪಕ್ಷಗ್ರಹ ಯಾವುದು ಜೊತೆಯಾಗಿದ್ದರೂ ರಸ್ತೆ ಅಪಘಾತದಲ್ಲಿ ರಕ್ತಸಿಕ್ತವಾಗಿ ಮರಣಿಸುವಂತೆ ಮಾಡುತ್ತದೆ. ಒಂದುವೇಳೆ ಜನನ ಕಾಲದಲ್ಲಿ ಈ ಸ್ಥಾನದಲ್ಲಿ ಯಾವ ಗ್ರಹ ಇಲ್ಲದಿದ್ದರೂ, ತಾಕದಿದ್ದರೂ ಆತನಿಗೆ (ಜಾತಕನಿಗೆ) ಒಳ್ಳೆಯ ಫಲಿತಗಳಾಗಲಿ ಅಥವಾ ಕೆಟ್ಟ ಫಲಿತಗಳಾಗಲಿ ಉಂಟಾಗದೆ ಜೀವನ ಸಾಧಾರಣವಾಗಿ ನಡೆದುಹೋಗುತ್ತದೆ. ಅಂತಹವನು ದೀರ್ಘನಾಡಿ, ಸ್ಪರ್ಶನಾಡಿ ಇಲ್ಲದೆ ಮಧ್ಯನಾಡಿ ಹೊಂದಿರುತ್ತಾನೆಂದು ಸಹ ಹೇಳಬಹುದು.

## ನವಮ ಸ್ಥಾನ - ಪಿತೃಸ್ಥಾನ

ಕರ್ಮಚಕ್ರದಲ್ಲಿ ನಾಲ್ಕು (4) ಐದು (5) ಸ್ಥಾನಗಳು ಎಷ್ಟೋ ಮುಖ್ಯವಾದವು. ಹಾಗೆಯೇ ಒಂಭತ್ತು (9) ಹತ್ತು (10) ಸ್ಥಾನಗಳು ಸಹ ಮುಖ್ಯವಾದವುಗಳಾಗಿ ಇವೆ. ಜಾತಕಚಕ್ರದಲ್ಲಿ ನಾಲ್ಕು, ಐದು ಸ್ಥಾನಗಳು ಎಷ್ಟು ಪ್ರಶಸ್ತ್ಯ ಹೊಂದಿವೆಯೋ ಅಷ್ಟು ಪ್ರಾಮುಖ್ಯತೆ ಹೊಂದಿರುವವು. ಒಂಭತ್ತು (9), ಹತ್ತು (10) ಸ್ಥಾನಗಳೆಂದು ಎಲ್ಲರೂ ತಿಳಿಯಬೇಕು. ಮನುಷ್ಯನ ಜೀವನದಲ್ಲಿ ಆಸ್ತಿಬಲ (ಸಂಪತ್ತಿನ ಬಲ), ಬುದ್ಧಿಬಲ ಎಷ್ಟೋ ಮುಖ್ಯವಾದವು. ಆಸ್ತಿಬಲ ನಾಲ್ಕನೆ ಸ್ಥಾನದಲ್ಲಿಯೂ, ಬುದ್ಧಿಬಲ ಐದನೆ ಸ್ಥಾನದಲ್ಲಿಯೂ ಇವೆ. ಹಾಗೆಯೇ ಮನುಷ್ಯನ ಜೀವನದಲ್ಲಿ ಧನ ಬಲ, ಗೌರವ ಎಷ್ಟೋ ಅವಶ್ಯವಾದವು. ಧನಬಲ ಒಂಭತ್ತನೆ ಸ್ಥಾನದಲ್ಲಿಯೂ, ಗೌರವ ಹತ್ತನೆಯ ಸ್ಥಾನದಲ್ಲಿಯೂ ಇರುವುದರಿಂದ ಕರ್ಮಚಕ್ರದಲ್ಲಿ ಈ ನಾಲ್ಕು ಸ್ಥಾನಗಳು ಮುಖ್ಯವಾದವುಗಳೇಯೆಂದು ತಿಳಿಯುತ್ತಿದೆ. ನಾಲ್ಕು, ಐದು ಸ್ಥಾನಗಳಲ್ಲಿ ನಾಲ್ಕನೆಯ ಸ್ಥಾನದಲ್ಲಿ ಪಾಪಪುಣ್ಯಗಳು ಎರಡೂ ಇರುವಾಗ ಅದು ಅಂಗೀ ಭಾಗಕ್ಕೆ ಕೇಂದ್ರವಾಗಿ ಇದೆ. ಐದನೆ ಸ್ಥಾನ ಪೂರ್ತಿ

ಪುಣ್ಯಸ್ಥಾನವಾಗಿದೆಯೆಂದು ಈ ಗ್ರಂಥ ಓದಿದವರಿಗೆಲ್ಲಾ ತಿಳಿದಿದೆ. ಹಾಗೆಯೇ ಒಂಭತ್ತು ಹತ್ತು ಸ್ಥಾನಗಳಲ್ಲಿ ಹತ್ತನೆಯ ಸ್ಥಾನ ಅರ್ಧಾಂಗಿ ಭಾಗಕ್ಕೆ ಕೇಂದ್ರವಾಗಿದ್ದು ಪಾಪಪುಣ್ಯಗಳಿಗೆ ನಿಲಯವಾಗಿರುವಾಗ, ಒಂಭತ್ತನೆಯ ಸ್ಥಾನ ಮಾತ್ರ ಪೂರ್ತಿ ಪುಣ್ಯಸ್ಥಾನವಾಗಿದ್ದು, ಪುಣ್ಯ ಸ್ಥಾನಗಳಿಗೆ ಕೋನವಾಗಿದೆ. ಈಗ 1,5,9 ಎನ್ನುವ ಮೂರು ಕೋನಗಳಲ್ಲಿ 9ನೆ ಸ್ಥಾನವಾಗಿ ಇರುವುದನ್ನು ಕುರಿತು ತಿಳಿದುಕೊಳ್ಳೋಣ. ಇದು ಪೂರ್ತಿ ಪುಣ್ಯಸ್ಥಾನವೇ ಆದರೂ ಈ ಸ್ಥಾನದಲ್ಲಿ ಜನನ ಕಾಲ ಸಮಯದಲ್ಲಿ ಮಿತ್ರ ವರ್ಗಕ್ಕೆ ಸೇರಿ ಪುಣ್ಯವನ್ನು ಪಾಲಿಸುವ ಶುಭಗ್ರಹ ಇರಬಹುದು ಅಥವಾ ಶತ್ರುವರ್ಗಕ್ಕೆ ಸಂಬಂಧಿಸಿದ ಪಾಪವನ್ನು ಪಾಲಿಸುವ ಅಶುಭಗ್ರಹ ಇರಬಹುದು.

ಜನನ ಸಮಯದಲ್ಲಿ ಪುಣ್ಯವನ್ನು ಪಾಲಿಸುವ ಶುಭಗ್ರಹ ಒಂಭತ್ತನೆ ಸ್ಥಾನದಲ್ಲಿ ಇದ್ದರೂ ಅಥವಾ ಆ ಸ್ಥಾನವನ್ನು ಶುಭಗ್ರಹವೊಂದರ ಕೈಗಳು ತಾಕಿದರೂ ಒಳ್ಳೆಯ ಫಲ ಉಂಟಾಗುತ್ತದೆ. ತಂದೆ ಸಂಪಾದಿಸಿದ ಆಸ್ತಿ ಜಾತಕನಿಗೆ ತೃಪ್ತಿಯಾಗಿ ಲಭಿಸುತ್ತದೆ. ಭಕ್ತಿ, ದಾನ, ತಪಸ್ಸುಗಳನ್ನು ಚಿತ್ತಶುದ್ಧಿಯಿಂದ ಮಾಡುತ್ತದೆ. ದೈವಭಕ್ತಿ ಮತ್ತು ಗುರು ಭಕ್ತಿ ಈ ಜಾತಕನಿಗೆ ಇರುತ್ತದೆ. ಒಂಭತ್ತನೆಯ ಸ್ಥಾನವನ್ನು ಭಾಗ್ಯಸ್ಥಾನವೆಂದು ಸಹ ಹೇಳಬಹುದು. ಏಕೆಂದರೆ ಹಣದ ರೂಪದಲ್ಲಿರುವ ಧನ ಈ ಸ್ಥಾನದಿಂದಲೇ ಲಭಿಸುತ್ತಿದೆ. ಇಲ್ಲಿರುವ ಶುಭಗ್ರಹ ಈ ಸ್ಥಾನದಲ್ಲಿನ ಪುಣ್ಯವನ್ನು ಸ್ವೀಕರಿಸಿ ಹಣದರೂಪದಲ್ಲಿ ಕೊಡುತ್ತದೆ. ಹಣದ ಚಲಾವಣೆ ಚೆನ್ನಾಗಿ ಇರುವುದಲ್ಲದೇ ಹಣ ನೆಲೆಸಿರುತ್ತದೆ. ಹಣವನ್ನು ಈ ಜಾತಕನು ಸುಲಭವಾಗಿ ಸಂಪಾದಿಸಿ ನೆಲೆಸಿಟ್ಟುಕೊಳ್ಳುತ್ತಾನೆ. ಈ ಸ್ಥಾನದಲ್ಲಿರುವ ಪುಣ್ಯದಿಂದ ಶುಭ ಕಾರ್ಯಗಳು ಹೆಚ್ಚಾಗಿ ನಡೆಯುತ್ತವೆ. ಶುಭಕಾರ್ಯಗಳನ್ನು ಮಾಡುವುದು, ಭಾಗವಹಿಸುವುದು ನಡೆಯುತ್ತದೆ. ಒಳ್ಳೆಯವರ ಸಹವಾಸ, ಭಕ್ತರ, ಜ್ಞಾನಿಗಳ ಸ್ನೇಹ ಉಂಟಾಗುತ್ತದೆ. ಸಕಲ ಐಶ್ವರ್ಯಗಳು ಉಂಟಾಗುತ್ತವೆ. ವಿವಾಹಗಳು ವೈಭವವಾಗಿ ನಡೆಸುತ್ತದೆ. ವಿವಾಹಗಳಲ್ಲಿ ಭಾಗವಹಿಸಿ ಗೌರವವನ್ನು ಪುಣ್ಯವನ್ನು ಸಂಪಾದಿಸಿಕೊಳ್ಳುವನು. ನ್ಯಾಯ ಸಮ್ಮತವಾದ ಆದಾಯ ಲಭಿಸುತ್ತದೆ. ಜ್ಞಾನ ಮಾರ್ಗದಲ್ಲಿ ಜೀವನ ಕಳೆಯಬೇಕೆನ್ನುವ ಆಲೋಚನೆ ಬರುತ್ತದೆ. ಒಂದು

ವೇಳೆ ಇಲ್ಲೊಂದು ಪಾಪ ಗ್ರಹವಿದ್ದರೂ ಮೇಲೆ ಹೇಳಿರುವ ವಿಷಯಗಳೆಲ್ಲವು ಗಳಿಗೂ ವಿರುದ್ಧವಾಗಿ ಮಾಡುವುದಕ್ಕೆ ಪ್ರಯತ್ನಿಸುತ್ತದೆ. ಉದಾಹರಣೆಗೆ ಶುಕ್ರನು ಶುಭಗ್ರಹವಾಗಿ ಒಂಭತ್ತನೆಯ ಸ್ಥಾನದಲ್ಲಿದ್ದರೆ, ಶುಕ್ರನು ಐಶ್ವರ್ಯಕ್ಕೆ (ಹಣಕ್ಕೆ) ಅಧಿಪತಿಯಾಗಿರುವುದರಿಂದ ಜಾತಕನಿಗೆ ಹಣ ಸಮೃದ್ಧಿಯಾಗಿ ಇರುತ್ತದೆ. ಒಂದು ವೇಳೆ ಶುಕ್ರನು ಅಶುಭಗ್ರಹವಾಗಿ ಒಂಭತ್ತನೆ ಸ್ಥಾನದಲ್ಲಿದ್ದರೆ ನೂರು ರೂಪಾಯಿಗಳು ಸಹ ಇಲ್ಲದ ಸ್ಥಿತಿ ಏರ್ಪಡುತ್ತದೆ. ಬಡವನಾಗಿ ಬದುಕಬೇಕಾಗಿ ಬರುತ್ತದೆ. ಮೂರನೆ ಸ್ಥಾನ ಎದುರಾಗಿ ಇರುವುದರಿಂದ ಅಲ್ಲಿನ ಪಾಪದಿಂದ ಇಲ್ಲಿ ನಿರ್ಭಾಗ್ಯನನ್ನು ಮಾಡುವುದು. ಹಾಗೆಯೇ ಗುರು ಈ ಸ್ಥಾನಕ್ಕೆ ಶುಭನಾಗಿದ್ದ ಗುರು ಬಂಗಾರಕ್ಕೆ ಅಧಿಪತಿಯಾಗಿರುವುದರಿಂದ ಬಂಗಾರವನ್ನು ಹೆಚ್ಚಾಗಿ ಉಂಟುಮಾಡುತ್ತದೆ. ಅದೇ ಗುರುವು ಅಶುಭನಾಗಿದ್ದರೆ ತನ್ನ (ಗುರು) ಅಧೀನದಲ್ಲಿರುವ ಬಂಗಾರವನ್ನು ಸ್ವಲ್ಪವಾದರೂ ಇಲ್ಲದಂತೆ ಮಾಡುತ್ತದೆ. ಈ ವಿಧವಾಗಿ ಒಂದು ಸ್ಥಾನದಲ್ಲಿನ ಶುಭಾಶುಭಗಳನ್ನು ಸ್ಥಾನವನ್ನನುಸರಿಸಿಯೂ, ಗ್ರಹವನ್ನನುಸರಿಸಿಯೂ ತಿಳಿಯಬಹುದು.

## ದಶಮಸ್ಥಾನ – ಜೀವನ ಸ್ಥಾನ

ಅರ್ಧಾಂಗಿ ಭಾಗದಲ್ಲಿ ಕೇಂದ್ರವಾದ ದಶಮ ಸ್ಥಾನದಲ್ಲಿ ಪಾಪಪುಣ್ಯಗಳು ಎರಡೂ ಇವೆ. ಈ ಸ್ಥಾನದಲ್ಲಿ ಪುಣ್ಯವನ್ನು ಒದಗಿಸುವ ಶುಭಗ್ರಹ ಇದ್ದಂತಾದರೆ, ಜೀವನೋಪಾದಿಗಳಾದ ಉನ್ನತ ವೃತ್ತಿಯಾಗಲಿ, ದೊಡ್ಡ ಉದ್ಯೋಗವಾಗಲಿ, ಒಳ್ಳೆಯ ವ್ಯಾಪಾರವಾಗಲಿ ಉಂಟಾಗುವಂತೆ ಶುಭಗ್ರಹ ಮಾಡುತ್ತದೆ. ರಾಜಕೀಯವೇ ವೃತ್ತಿಯಾಗಿರುವವನಿಗೆ ಪಾಲನಾಶಕ್ತಿಯನ್ನು, ಅದಕ್ಕೆ ಬೇಕಾದ ಯುಕ್ತಿಯನ್ನು ಜಾತಕನಿಗೆ ಶುಭಗ್ರಹ ಕೊಡುತ್ತದೆ. ಯುಕ್ತಿಯಿಂದ ಕೆಲಸವಾಗಲಿ, ವ್ಯಾಪಾರವಾಗಲಿ, ರಾಜಕೀಯವಾಗಲಿ ಮಾಡುವವನಿಗೆ ಕೀರ್ತಿ ಗೌರವ ಪ್ರತಿಷ್ಠೆಗಳು ಉಂಟಾಗುವಂತೆ ಮಾಡುತ್ತದೆ. ಮಾಡುವ ವೃತ್ತಿಯಲ್ಲಿ ಗೌರವ ಲಭಿಸುವುದರಿಂದ ಪ್ರಜೆಗಳು ಸನ್ಮಾನ ಮಾಡುತ್ತಾರೆ. ಹಾಗೆಯೇ ಸರ್ಕಾರದವರು

ಸಹ ಸನ್ಮಾನ ಮಾಡುವರು. ತಾಳ್ಮೆ, ನಿಗ್ರಹಶಕ್ತಿ ಹೊಂದಿರುತ್ತಾರೆ. ಸಕಲ ಸಂಪದಗಳು ದಿನದಿನಾಭಿವೃದ್ಧಿ ಹೊಂದುತ್ತವೆ. ಒಳ್ಳೆಯ ಭವನಗಳು ನಿರ್ಮಿಸಿಕೊಳ್ಳುತ್ತಾರೆ. ದೇವತಾ ಮಂದಿರಗಳು, ಮಂಟಪಗಳು ನಿರ್ಮಿಸುವನು. ದೈವ ಕಾರ್ಯಗಳನ್ನು ಮಾಡಿಸುವುದು, ಪಾಲ್ಗೊಳ್ಳುವುದು ನಡೆಯುತ್ತದೆ. ಸ್ವಂತ ಸಂಪಾದನೆ ಬೆಳೆದು ಜೀವನಕ್ಕೆ ಆತಂಕವಿಲ್ಲದೆ ನಡೆಯುತ್ತದೆ. ಮುದ್ರಣಾ ವಿಷಯದಲ್ಲಿ ಪ್ರತಿಭೆಹೊಂದಿ ಗೃಹಗಳನ್ನು ನಿರ್ಮಿಸಿದ ಹಾಗೆ ಗ್ರಂಥಗಳನ್ನು ತಯಾರು ಮಾಡಬಲ್ಲನು, ಬರೆಯಬಲ್ಲನು. ಇದರಿಂದ ಪ್ರಜಾಧರಣೆ ಬೆಳೆಯುತ್ತದೆ. ಅಷ್ಟ ಭೋಗಗಳನ್ನು ಅನುಭವಿಸುತ್ತಾ, ಎದುರಿಲ್ಲದ ಜೀವನವನ್ನು ಕಳೆಯುವನು. ಈ ಸ್ಥಾನದಲ್ಲಿ ಸೂರ್ಯನಾಗಲಿ, ಚಂದ್ರನಾಗಲೀ ಶುಭರಾಗಿದ್ದರೂ ಉನ್ನತವಾದ ಸರ್ಕಾರಿ ಉದ್ಯೋಗಿಯಾಗಿ (ಕಲೆಕ್ಟರ್ ಆಗಿ) ಪ್ರಜಾಪಾಲನೆ ಮಾಡುವನು. ಉದ್ಯೋಗಿ ಉದ್ಯೋಗವನ್ನು ಬಿಟ್ಟು ರಾಜಕೀಯದಲ್ಲಿ ಇದ್ದಂತಾದರೆ ಮಂತ್ರಿಪದವಿ ಹೊಂದಿ ಪ್ರಜೆಗಳನ್ನು ಪಾಲನೆ ಮಾಡುವನು. ದಶಮ ಸ್ಥಾನದಲ್ಲಿ ಕುಜಗ್ರಹ ಶುಭಗ್ರಹವಾಗಿದ್ದರೆ ಆತನು ಸರ್ಕಾರಿ ವೈದ್ಯನಾಗಿ ಒಳ್ಳೆಯ ಆಪರೇಷನ್‌ಗಳು ಮಾಡುವ ಡಾಕ್ಟರಾಗಿ ಪ್ರಜೆಗಳಲ್ಲಿ ಒಳ್ಳೆಯ ಹೆಸರು ತರುತ್ತದೆ. ಕುಜಗ್ರಹದೊಂದಿಗೆ ಸೂರ್ಯನೋ, ಚಂದ್ರನೋ ಹತ್ತನೆಯ ಸ್ಥಾನದಲ್ಲಿ ಇರುವುದರಿಂದ ಜಾತಕನು ಮಿಲಿಟರಿಯಲ್ಲಿ ದೊಡ್ಡ ಡಾಕ್ಟರಾಗಿ ಇರುತ್ತಾನೆ. ಇದೇ ಸ್ಥಾನದಲ್ಲಿ ಶುಕ್ರಗ್ರಹವಿದ್ದರೆ ಜೀವನವೆಲ್ಲಾ ಸುಖಮಯವಾಗಿ ಹೋಗುತ್ತದೆ. ಎಲ್ಲಾ ಸುಖಗಳೊಂದಿಗೆ ಅಷ್ಟ ಐಶ್ವರ್ಯಗಳೊಂದಿಗೆ ಜೀವನ ಕಳೆದುಹೋಗುತ್ತದೆ. ಈ ವಿಧವಾಗಿ ಗ್ರಹವನ್ನನು ಸರಿಸಿ ನಡೆಯುತ್ತಿರುತ್ತದೆ. ಒಂದುವೇಳೆ ದಶಮ ಸ್ಥಾನದಲ್ಲಿ ಪಾಪಗ್ರಹವಿದ್ದರೆ ಮೇಲೆ ಹೇಳಿರುವವುಗಳಿಗೆ ಭಿನ್ನವಾಗಿ, ವಿರುದ್ಧವಾಗಿ ನಡೆಯುತ್ತದೆ. ಕರ್ಮಚಕ್ರದಲ್ಲಿನ ಹತ್ತನೆಯ ಸ್ಥಾನದಲ್ಲಿನ ಪಾಪವನ್ನನುಸರಿಸಿ ಪಾಪಗ್ರಹಗಳು ಅಲ್ಲಿ ಸೇರುವಂತೆ ಪ್ರಕೃತಿಯಿಂದ ದೇವರು ಮಾಡಿಸಿದ್ದಾನೆ. ಪಾಪಗ್ರಹ ಗಳಿರುವುದರಿಂದ ಜೀವನವೇ ವೃಥಾ ಅನಿಸಿದಂತಿರುತ್ತದೆ. ಜೀವನಕ್ಕಾಗಿ ನಿರಂತರ ಬಾಧೆಪಡುತ್ತಾ ಬದುಕಬೇಕಾಗಿ ಬರುತ್ತದೆ.

# ಏಕಾದಶ ಸ್ಥಾನ – ಲಾಭ ಸ್ಥಾನ

ಕರ್ಮಚಕ್ರದಲ್ಲಿ ಹನ್ನೊಂದನೆಯ ಸ್ಥಾನ ಪಾಪ ಕೋನದಲ್ಲಿ ಕೊನೆಯದಾಗುತ್ತದೆ. ಈ ಸ್ಥಾನದಲ್ಲಿ ಕೇವಲ ಪಾಪ ಮಾತ್ರ ಇರುತ್ತದೆ. ಅಲ್ಲಿ ಸೇರಿದ ಶುಭ ಗ್ರಹಗಳಿಂದ ಎದುರು ಸ್ಥಾನದಲ್ಲಿನ ಪುಣ್ಯ ಉಪಯೋಗವಾಗುವುದರಿಂದ ಸ್ವಲ್ಪಮಟ್ಟಿಗೆ ಒಳ್ಳೆಯದು ನಡೆಯುತ್ತದೆ. ಪಾಪಗ್ರಹವಿದ್ದರೂ ಧನಾರ್ಜನೆಯಲ್ಲಿ ಕಷ್ಟ, ಲಾಭದಲ್ಲಿ ನಷ್ಟ, ಜಯದಲ್ಲಿ ಅಪಜಯ ಉಂಟಾಗುತ್ತದೆ. ವಿದ್ಯೆ ಇಲ್ಲದಂತೆ ಹೋಗುತ್ತದೆ. ತಂದೆ ಆಸ್ತಿಯನ್ನು ಕಳೆದುಕೊಳ್ಳಬೇಕಾಗುತ್ತದೆ. ಜೀವನ ದುಃಖಮಯವಾಗುತ್ತದೆ. ಸಪ್ತ ವ್ಯಸನಗಳಲ್ಲಿ ಕೆಲವುಗಳಿಗೆ ಅಭ್ಯಾಸ ವಾಗುತ್ತಾನೆ. ಈ ವಿಧವಾಗಿ ಅಲ್ಲಿ ಸೇರುವ ಪಾಪಗ್ರಹಗಳನ್ನನುಸರಿಸಿ ದುಷ್ಫಲಿತ ಗಳಿರುತ್ತವೆ. ಒಂದುವೇಳೆ ಹನ್ನೊಂದನೆಯ ಸ್ಥಾನದಲ್ಲಿ ಒಂದು ಶುಭಗ್ರಹವಿದ್ದರೂ ಅಥವಾ ತಾಕಿದರೂ ಜಾತಕನಿಗೆ ಗ್ರಹವನ್ನನುಸರಿಸಿ ಒಳ್ಳೆಯದು ನಡೆಯುತ್ತದೆ. ಈ ಸ್ಥಾನವನ್ನು ಲಾಭಸ್ಥಾನವೆಂದು ಹಿರಿಯರು ಹೇಳಿದ್ದಾರೆ ಆದ್ದರಿಂದ ಇಲ್ಲಿರುವ ಗ್ರಹವನ್ನನುಸರಿಸಿ ವರದಕ್ಷಿಣೆ ರೂಪದಲ್ಲಿ ಒಂದುಸಲ ಹಣಬರುವಂತೆ ಆ ಗ್ರಹ ಮಾಡುತ್ತದೆ. ಬುಧಗ್ರಹವಿದ್ದರೇ ವರದಕ್ಷಿಣೆ ಕಾಣಿಕೆಗಳ ರೂಪದಲ್ಲಿ ಒಳ್ಳೆಯ ಲಾಭವನ್ನು ಕೈಗೂಡಿಸುತ್ತದೆ. ಒಂಭತ್ತನೆಯ ಸ್ಥಾನಾಧಿಪತಿ ಇದ್ದರೆ, ಅವನಿಗೆ ಲಾಟರಿಯಿಂದ ಲಾಭ ಬರುತ್ತದೆ. ಲಗ್ನಾಧಿಪತಿಯಿದ್ದರೆ ಯಾವಾಗಲೂ ಲಂಚದ ರೂಪದಲ್ಲಿಯೋ ಅಥವಾ ಕಮೀಷನ್ ರೂಪದಲ್ಲಿಯೋ ಹಣ ಬರುವಂತೆ ಮಾಡುತ್ತದೆ. ಪಂಚಮಾಧಿಪತಿ ಯಿದ್ದರೆ ಮೆಡಿಕಲ್ ಕಾಲೇಜ್‌ನಂತಾದ್ದು ಒದಗಿಸಿ ಅದರಿಂದ ಡೊನೇಷನ್‌ಗಳ ರೂಪದಲ್ಲಿ ಹಣ ವಿಪರೀತವಾಗಿ ಬರುವಂತೆ ಮಾಡುತ್ತದೆ. ಈ ಸ್ಥಾನದಲ್ಲಿ ಇಬ್ಬರು ಅಥವಾ ಮೂವರು ಶುಭ ಗ್ರಹಗಳು ಇದ್ದರೆ ಇದ್ದಕ್ಕಿದ್ದಂತೆ ಕೋಟಿಗಟ್ಟಲೆ ಹಣ ಬರುವ ಲಾಟರೀಗಳು ತಗಲುತ್ತವೆ. ವ್ಯಾಪಾರದಲ್ಲಿ ವಿಪರೀತವಾಗಿ ಲಾಭಗಳು ಬರುತ್ತವೆ. ಅಣ್ಣ, ಅಕ್ಕಂದಿರ ಆಸ್ತಿಗಳು ಲಭಿಸುತ್ತವೆ. ಒಂದೇ ರೂಪವಾಗಿ ಅಲ್ಲದೆ ಅನೇಕ ರೂಪಗಳಲ್ಲಿ ಅನೇಕ ಲಾಭಗಳು

ಬರುವಂತೆ ಹೊಂದಿಕೆಯಾಗುತ್ತದೆ. ಇದು ಹನ್ನೊಂದನೆಯ ಸ್ಥಾನವಾಗುವುದರಿಂದ ಪಾಪಕಾರ್ಯಗಳು ಮಾಡುವುದರಿಂದ ಜಾತಕನು ಧನವನ್ನಾರ್ಜಿಸುವನು. ಲೇಖನ ವೃತ್ತಿಯಾದ ಪತ್ರಕರ್ತನಾಗಿದ್ದು ಧನವನ್ನು ಚೆನ್ನಾಗಿ ಸಂಪಾದಿಸಬಲ್ಲನು. ಐದನೆ ಸ್ಥಾನಕ್ಕೆ ಎದುರಾಗಿ ಇರುವುದರಿಂದ ಅದರಲ್ಲಿನ ವಿದ್ಯೆಯನ್ನೂ, ಪ್ರತಿಭೆಯನ್ನೂ, ಗ್ರಾಹಿತಶಕ್ತಿಯನ್ನು, ಶಿಲ್ಪಕಲೆ ವಿದ್ಯೆಯನ್ನು ಕಲಿಯುತ್ತಾನೆ. ಎಷ್ಟೋ ಆದಾಯಗಳು ಇರುವ ಸ್ಥಾನವಾದ್ದರಿಂದ ಇದನ್ನು ಲಾಭಸ್ಥಾನವೆಂದು ಕರೆದಿದ್ದಾರೆ. ಅಷ್ಟೇ ಅಲ್ಲದೆ ವೃತ್ತಿಯಲ್ಲಿ ಬರುವುದಕ್ಕಿಂತ ಹೆಚ್ಚಿನ ಲಾಭ ಬರುವುದರಿಂದ ಪ್ರವೃತ್ತಿ ಸ್ಥಾನವೆಂದಿದ್ದಾರೆ. ಮೇಲ್ನೋಟಕ್ಕೆ ಕಾಣಿಸುವುದಕ್ಕೆ ಇದು ಪ್ರವೃತ್ತಿ ಸ್ಥಾನವಾಗಿದ್ದರೂ ಮೊದಲೇ ಇದು ಪಾಪಸ್ಥಾನವಾಗಿದ್ದು, ಇದರಲ್ಲಿ ಮಾಡುವುದೆಲ್ಲಾ ಇತರರದ್ದು ಕಸಿದುಕೊಂಡು ಲಾಭ ಹೊಂದುವುದು ಹೊರತುಪಡಿಸಿ ಏನೂ ಇಲ್ಲ. ಅದರಿಂದ ಪಾಪ ಬರುವುದು ಹೊರತುಪಡಿಸಿ ಪುಣ್ಯ ಬರುವ ಅವಕಾಶ ಇಲ್ಲ. ಆದ್ದರಿಂದ ಕೆಲವರು ಇದು ಪ್ರವೃತ್ತಿ ಸ್ಥಾನವೆಂದರೂ ನಾವು ಮಾತ್ರ ಇದನ್ನು ನೀಚ ವೃತ್ತಿ ಸ್ಥಾನವೇ ಹೊರತು ಇದರಲ್ಲಿ ಪ್ರವೃತ್ತಿ ಇಲ್ಲವೆಂದು ಹೇಳುತ್ತಿದ್ದೇವೆ.

## ದ್ವಾದಶ ಸ್ಥಾನ - ವ್ಯಯ ಸ್ಥಾನ

ಮೊದಲ ಸ್ಥಾನ ಜನನ ಸ್ಥಾನವಾಗುವುದರಿಂದ, ಜನನದಲ್ಲಿ ಶರೀರ ಲಭಿಸುವುದರಿಂದ ಅದನ್ನು ತನುವು (ಶರೀರ) ಸ್ಥಾನವೆಂದಿದ್ದಾರೆ. ಕೊನೆಯದಾದ ಹನ್ನೆರಡನೆಯ ಸ್ಥಾನ ಬಂದರೂ ಶರೀರ ನಾಶವಾಗಿ ಹೋಗುವುದು ಆದ್ದರಿಂದ ಅದನ್ನು ವ್ಯಯ (ನಾಶ) ಸ್ಥಾನವೆಂದಿದ್ದಾರೆ. ಜೀವನದ ಕೊನೆಯ ಭಾಗ ಈ ಸ್ಥಾನದಲ್ಲಿಯೇ ಇರುತ್ತದೆ. ಇದು ಜೀವನಕ್ಕೆ ಕೊನೆಯ ಕಾಲವೊಂದರ ವಿಧಿ ವಿಧಾನವನ್ನು ತಿಳಿಸುವುದು. ಆದ್ದರಿಂದ ವಯಸ್ಸಾದ ನಂತರ ವೃದ್ಧಾಪ್ಯದಲ್ಲಿ ನಡೆಯುವ ವಿಷಯಗಳು ಇಲ್ಲಿ ತಿಳಿಯುತ್ತವೆ. ಪ್ರಾರಬ್ಧಕರ್ಮ ಪ್ರಾರಂಭ ವಾಗುವುದು ಮೊದಲಸ್ಥಾನದಲ್ಲಿ ಆದಾಗ ಪ್ರಾರಬ್ಧ ಕರ್ಮ ಮುಗಿದುಹೋಗುವುದು

ಹನ್ನೆರಡನೆಯ ಸ್ಥಾನದಲ್ಲಿ, ಆದ್ದರಿಂದ ಪ್ರಾರಂಭವಾಗುವ ಪ್ರಥಮ ಸ್ಥಾನವನ್ನು ಜನನ ಸ್ಥಾನವೆಂದು ಕರೆದಿದ್ದಾರೆ. ಮುಗಿದುಹೋಗುವ ಸ್ಥಾನವನ್ನು ಮರಣ ಸ್ಥಾನ ಎಂದಿದ್ದಾರೆ. ಹನ್ನೆರಡನೆಯ ಸ್ಥಾನದಲ್ಲಿ ಕರ್ಮ ಮುಗಿದುಹೋಗುತ್ತಿದೆ. ಆದ್ದರಿಂದ ಆತನ (ಜಾತಕನ) ಆಯುಷ್ಯ ಇಷ್ಟುಯೆಂದು ಹೇಳಬಹುದು. ಆದರೇ ಇಲ್ಲಿ ಒಂದು ಸಿಕ್ಕು (ತೊಡಕು) ಸಮಸ್ಯೆ ಇರುವುದರಿಂದ ಈ ವಿಷಯದಲ್ಲಿ ಸತ್ಯ ಹೇಳುವುದಕ್ಕೆ ಅವಕಾಶ ಇಲ್ಲ. ಆ ಸಿಕ್ಕು ಸಮಸ್ಯೆಯನ್ನು ನಂತರ ಹೇಳುತ್ತೇನೆ. ಈಗ ದ್ವಾದಶ ಸ್ಥಾನವನ್ನು ಕುರಿತು ಹೇಳಿಕೊಂಡರೇ ಇದು ಪಾಪಪುಣ್ಯಗಳ ಮಿಶ್ರಮಸ್ಥಾನ. ಮಿಶ್ರಮ ಎಂದರೇ ಬೆರೆತುಹೋಗಿವೆಯೆಂದಲ್ಲ, ಎರಡೂ ಒಂದೇಸ್ಥಾನದಲ್ಲಿ ಇವೆಯೆಂದು ಅರ್ಥ. ಆದ್ದರಿಂದ ಇಲ್ಲಿ ಒಂದು ಪುಣ್ಯ ಗ್ರಹವಾದ ಶುಭಗ್ರಹವಿದ್ದರೇ ಇಲ್ಲಿ ಯಾವುದಾದರೂ ದುರ್ವಿನಿಯೋಗ ವಾಗುವುದಿಲ್ಲ. ಹಣವಾಗಲೀ, ಧಾನ್ಯವಾಗಲೀ, ನೀರಾಗಲೀ ಖರ್ಚು ಮಾಡುವ ಯಾವುದಾದರೂ ದುರ್ವಿನಿಯೋಗವಾಗುವುದಿಲ್ಲ. ಕೆಟ್ಟ ಉಪಯೋಗಗಳಿಗೆ ಅಲ್ಲದೆ ಒಳ್ಳೆಯದಾಗಿ ಉಪಯೋಗಪಡುತ್ತದೆ. ಕೇತುಗ್ರಹ ವಿದ್ದರೇ (ಶುಭಗ್ರಹವಾಗಿ) ಆಧ್ಯಾತ್ಮಿಕ ಚಿಂತನೆಯುಂಟುಮಾಡಿ ಹಿಂದೂ ಭಗವದ್ಗೀತೆ ಯನ್ನು, ಮುಸ್ಲಿಮ್ ಖುರ್‌ಆನ್‌ನನ್ನು, ಕ್ರೈಸ್ತವನಾದರೇ ಬೈಬಲ್‌ನ್ನು ಓದುವಂತೆ ಮಾಡುತ್ತದೆ. ಗುರು ಗ್ರಹವಿದ್ದರೆ ಜ್ಞಾನವಿಷಯಗಳೆಂದು ಹೆಸರಿಟ್ಟಿರುವುದನ್ನು ಓದುವನು. ಉಳಿದ ನಾಲ್ಕು ಗ್ರಹಗಳಲ್ಲಿ ಯಾವುದೇ ಒಂದಿದ್ದರೂ ಸತ್ ಗ್ರಂಥಗಳನ್ನು ಓದುವಂತೆ ಮಾಡುತ್ತದೆ. ಸತ್ ಗ್ರಂಥ ಪಠನದಿಂದ ದೈವಭಕ್ತಿ ಉಂಟಾಗಿ ಮುಕ್ತಿಗೋಸ್ಕರ ಪ್ರಯತ್ನಿಸುವನು. ಪ್ರಯತ್ನಿಸದೆ ಹೋದರೂ ಮುಕ್ತಿ ಒಂದಿದೆಯೆಂದು ತಿಳಿದುಹೋಗುತ್ತದೆ. ನಂತರ ಶುಭಗ್ರಹ ಯಾವುದಿದ್ದರೂ ಪಾಪಭೀತಿಯನ್ನುಂಟು ಮಾಡಿ, ನರಕ ಲೋಕವನ್ನು ತಪ್ಪಿಸಿ ಸ್ವರ್ಗಲೋಕ ಪ್ರಾಪ್ತಿ ಉಂಟುಮಾಡುತ್ತದೆಂದು ತಿಳಿಯುತ್ತಿದೆ. ಅಷ್ಟೇ ಅಲ್ಲದೆ ಅಲ್ಲಿಯವರೆಗಿದ್ದ ಮನುಷ್ಯನಲ್ಲಿನ ಪಶುತ್ವವನ್ನು ಬಿಡಿಸಿ ಮಾನವತ್ವವನ್ನು ಕಲ್ಪಿಸುತ್ತದೆ. ಅಲ್ಲಿಯವರೆಗು

ಮಾಡುತ್ತಿರುವ ಪ್ರಾಣಿ ವಧೆಯನ್ನು ಬಿಡಿಸಿ ಅಲ್ಲಿ ಖರ್ಚಾಗುವ ಹಣವನ್ನು ಇತರರಿಗೆ ಉಪಯೋಗಿಸಿ, ಅದರಿಂದ ನಂತರ ಒಳ್ಳೆಯ ಜನ್ಮ ಪಡೆಯುವುದಕ್ಕೆ ಅವಕಾಶವನ್ನು ಕಲ್ಪಿಸುತ್ತದೆ. ಮರಣ ಸಮಯದಲ್ಲಿ ಹೆಚ್ಚಿನ ಕಷ್ಟಗಳು ಇಲ್ಲದಂತೆ ನಿಶ್ಚಿಂತೆಯಾಗಿ ಇರುವಂತೆ ಮಾಡುತ್ತದೆ. ಜಾತಕನು ಮರಣಿಸಿದಾಗ ಪ್ರಜೆಗಳು ಹೆಚ್ಚಿನ ಜನ ಬಂದು ಆತನನ್ನು ಕುರಿತು ಹೇಳಿಕೊಳ್ಳುವಂತೆ ಮಾಡುತ್ತದೆ. ಆತನು ಮರಣಿಸಿದ ಕಡೆ ಎಲ್ಲಾ ಅನುಕೂಲತೆ ಗಳಿದ್ದು ಶವಯಾತ್ರೆ ಚೆನ್ನಾಗಿನಡೆಯುವಂತೆ ಮಾಡುತ್ತದೆ. ಒಂದುವೇಳೆ ದ್ವಾದಶ ಸ್ಥಾನದಲ್ಲಿ ಜನನ ಸಮಯದಲ್ಲಿ ಪಾಪಗ್ರಹವಿದ್ದರೂ (ಶತ್ರುವರ್ಗದಲ್ಲಿನ ಗ್ರಹವಿದ್ದರೂ) ಜಾತಕನು ಎಷ್ಟು ದೊಡ್ಡವನಾದರೂ, ಎಷ್ಟು ಧನಿಕನಾದರೂ ಮರಣಿಸುವ ಸಮಯಕ್ಕೆ ಬಂಧುಮಿತ್ರರು, ಹೆಂಡತಿ ಮಕ್ಕಳು ಇಲ್ಲದ ಕಡೆ ಸಾವು ಲಭಿಸುತ್ತದೆ. ಆತನು ಇಂತಹ ವ್ಯಕ್ತಿ ಎಂದು ಸಹ ಹೊರಗೆ ತಿಳಿಯದೆ ಹೋಗುವುದರಿಂದ ಅನಾಥಶವದ ಕೆಳಗೆ ಜಮಕಟ್ಟಿ ಯಾವ ಸಂಬಂಧ ಇಲ್ಲದವರು ಏನೂ ಬಾಧೆಪಡದಂತೆ ಅಂತಿಮ ಸಂಸ್ಕಾರಗಳು ಮಾಡುವರು. ಅಂತಹ ಸಾವುಗಳು ಎಷ್ಟೋ ಜನರಿಗೆ ಉಂಟಾಗಿವೆ. ಆಗ ಅವರಿಗೆ ಅವರ ಜಾತಕದಲ್ಲಿಯೇ ಹನ್ನೆರಡನೆಯ ಸ್ಥಾನದಲ್ಲಿ ಪಾಪಗ್ರಹವಿದೆಯೆಂದು ತಿಳಿಯಬಹುದು. ಯಾವಾಗಲೋ 80 ವರ್ಷಗಳ ಸಮಯದಲ್ಲಿ ಹುಟ್ಟಿದ ಸಮಯದಲ್ಲಿ ಇರುವ ಗ್ರಹಗಳನ್ನನುಸರಿಸಿ 80 ವರ್ಷಗಳವರೆಗು ಜೀವನ ಸಾಗುವುದೇ ಅಲ್ಲದೆ ಮರಣಸಮಯದಲ್ಲಿ ಸಹ ಜಾತಕದಲ್ಲಿನ (ಜನನ ಸಮಯದಲ್ಲಿನ) ಗ್ರಹಗಳ ಪ್ರಾಬಲ್ಯವನ್ನನುಸರಿಸಿಯೇ ನಡೆಯುತ್ತದೆ. ಆದ್ದರಿಂದ ಜೀವನವನ್ನು ಶಾಸಿಸಿ ನಡೆಸುವುದು ಜಾಪಥಕ (ಜಾತಕ). ಜಾಪಥಕ ಇಲ್ಲದ ಜೀವನವನ್ನು ಕುರಿತು ಅಂದಾಜು ಹಾಕುವುದಕ್ಕೆ ಸಾಧ್ಯವಾಗುವುದಿಲ್ಲ. ಆದ್ದರಿಂದ ಜನ್ಮದಿಂದ ಸಾವಿನವರೆಗು ದಿಕ್ಸೂಚಿಯಂತೆ ಇರುವ ಜಾತಕವನ್ನು ಎಲ್ಲರೂ ಬರೆದುಕೊಂಡಿರುವುದು ಒಳ್ಳೆಯದು.

# ಮರಣ ವಿಷಯದಲ್ಲಿ ಸಿಕ್ಕು ಸಮಸ್ಯೆ

ಇದಕ್ಕೂ ಮೊದಲು ದ್ವಾದಶ ಸ್ಥಾನವನ್ನು ಕುರಿತು ತಿಳಿದುಕೊಂಡಿದ್ದೇವೆ. ಪ್ರಥಮ ಸ್ಥಾನದಲ್ಲಿ ಕರ್ಮ ಪ್ರಾರಂಭವಾಗಿ ದ್ವಾದಶ ಸ್ಥಾನದಲ್ಲಿ ಕರ್ಮ ಮುಗಿದುಹೋಗುತ್ತಿದೆ. ಆದ್ದರಿಂದ ಹನ್ನೆರಡನೆಯ ಸ್ಥಾನವನ್ನು ಆಧಾರ ಮಾಡಿಕೊಂಡು ಆಯುಷ್ಷನ್ನು ನಿರ್ಣಯಿಸಿ ಹೇಳಬಹುದೆಂದು, ಆಯುಷ್ಯ ಮುಗಿದುಹೋಗುವುದು ಮರಣವಾಗುವುದರಿಂದ, ಈ ಜಾತಕನು ಇಂತಹ ವರ್ಷ ಮರಣಿಸುವನೆಂದು ಹೇಳಬಹುದು. ಆದರೇ ಜ್ಯೋತಿಷ್ಯಶಾಸ್ತ್ರದ ಪ್ರಕಾರ ಹೇಳಿರುವುದು ಸತ್ಯವೇ ಆದರೂ ಮರಣ ಯಾವುದಾಗಿರುವುದು ಪ್ರಜೆಗಳಿಗೆ ತಿಳಿಯದಿದ್ದ ಕಾರಣದಿಂದ ಮನುಷ್ಯ ಅಕಾಲಮರಣವನ್ನು ಹೊಂದಿದರೂ, ತಾತ್ಕಾಲಿಕ ಮರಣವನ್ನು ಹೊಂದಿದರೂ ಅದನ್ನೇ ಮನುಷ್ಯ ಮರಣ ಎಂದುಕೊಳ್ಳುವುದರಿಂದ ದೊಡ್ಡ ಸಿಕ್ಕು ಸಮಸ್ಯೆ ಏರ್ಪಡುತ್ತಿದೆ. ಜ್ಯೋತಿಷ್ಯದ ಪ್ರಕಾರ ಒಂದು ವರ್ಷದ ಮುಂದೆ ಹಿಂದೆಯಾಗಿ ಸಾವಿನ ಸಮಾಚಾರವನ್ನು ಹೇಳ ಬಹುದು. ಆದರೆ ಮನುಷ್ಯನಿಗೆ ಮೂರು ವಿಧಗಳ ಮರಣಗಳಿರುವುದರಿಂದ, ಅವುಗಳಲ್ಲಿ ಹೇಳಲ್ಪಟ್ಟಿರುವುದು ಗುರುತಿಸಲ್ಪಡದಿರುವುದರಿಂದ, ಹೇಳಿದ ಕಾಲಕ್ಕಿಂತ ಮೊದಲು ಬರುವ ಅಕಾಲ, ತಾತ್ಕಾಲಿಕ ಮರಣಗಳನ್ನು ಕಾಲಮರಣದೊಂದಿಗೆ ಹೋಲಿಸಿ ಕೊಳ್ಳುವುದರಿಂದ, ಹೇಳಿದ ಸತ್ಯ ಅಸತ್ಯವಾಗಿ ಕಾಣಿಸುತ್ತಿದೆ. "ಹೇಳಿದ ಕಾಲಕ್ಕಿಂತ ಮೊದಲೇ ಅಕಾಲ ಮರಣದಿಂದಾಗಲಿ, ತಾತ್ಕಾಲಿಕ ಮರಣದಿಂದಾಗಲಿ ಮರಣಿಸಿದರೂ ಹೇಳಿದ ಸತ್ಯ ಅಸತ್ಯವಾಗಿ ಕಾಣಿಸಬಹುದು ಆದರೆ, ಹೇಳಿದ ಸಮಯಕ್ಕಿಂತ ಐದು ಅಥವಾ ಆರು ವರ್ಷಗಳು ಆಲಸ್ಯವಾಗಿ ಮರಣಿಸಿದರೆ ಆಗ ಹೇಳಿದ ಮಾತು ಅಸತ್ಯವೇ ಆಗುತ್ತದಲ್ಲವೆ!" ಎಂದು ಯಾರಾದರೂ ಕೇಳಬಹುದು. ಇದು ಹೇತುಬದ್ಧವಾದ ಪ್ರಶ್ನೆಯೇ ಆಗಿರುವುದರಿಂದ ಇದಕ್ಕೆ ಉತ್ತರ ಏನೆಂದರೆ!

ಪ್ರಾರಬ್ಧಕರ್ಮ ಹುಟ್ಟಿದ ಸಮಯದಲ್ಲಿ ನಿರ್ಣಯಿಸಲ್ಪಟ್ಟಿದೆ. ಅದೂ ಸಂಚಿತ ಕರ್ಮದಿಂದ ತೆಗೆದು ಕೊಟ್ಟಿರುವುದನ್ನು ಪ್ರಾರಬ್ಧಕರ್ಮ ಎನ್ನುತ್ತಿದ್ದೇವೆ.

ಪ್ರಾರಬ್ಧಕರ್ಮದ ಪ್ರಕಾರ 70 ವರ್ಷಗಳಿಗೆ ಮರಣ ನಿರ್ಣಯಿಸಲ್ಪಟ್ಟಂತೆ ತಿಳಿದು ಈತನ ಆಯುಷ್ಯ 70 ವರ್ಷಗಳೆಂದು ಹೇಳಿದ್ದೇವೆಂದುಕೊಳ್ಳಿ. ಜ್ಯೋತಿಷ್ಯದ ಪ್ರಕಾರ ಆ ಮಾತು ಸತ್ಯವೇ ಆದರೂ ಆ ಜಾತಕನು 80 ವರ್ಷಗಳವರೆಗು ಬದುಕಿ ಮರಣಿಸಿದ್ದಾನೆಂದುಕೊಳ್ಳಿ. ಆಗ ಜ್ಯೋತಿಷ್ಯನು ಹೇಳಿರುವುದು ಪೂರ್ತಿ ಅಸತ್ಯವಾಗುತ್ತದೆ. ಒಂದುವೇಳೆ 70 ವರ್ಷಗಳು ಆಯುಷ್ಯ ನಿರ್ಣಯಿಸಲ್ಪಟ್ಟ ವ್ಯಕ್ತಿ 50 ವರ್ಷಗಳಿಗೇ ಮರಣಿಸಿದ್ದಾನೆಂದುಕೊಳ್ಳಿ ಆಗಲೂ ಸಹ ಜ್ಯೋತಿಷ್ಯದಿಂದ ಹೇಳಿದ ಮಾತು ಅಸತ್ಯವಾಗಿ ಕಾಣಿಸುತ್ತದೆ. ಈ ಎರಡಕ್ಕೂ ಸಮಾಧಾನ ಹೇಳಬೇಕಾದ ಜವಾಬ್ದಾರಿ ನಮಗಿದೆ. ಈ ಪ್ರಶ್ನೆಗಳಿಗೆ ಜ್ಯೋತಿಷ್ಯರು ಉತ್ತರ ಹೇಳಬೇಕು, ಆದರೆ ಅವರು ಉತ್ತರ ಹೇಳಲಾರದ ಪರಿಸ್ಥಿತಿಯಲ್ಲಿದ್ದಾರೆ. ಕಾರಣವೇನೆಂದರೆ! ಜ್ಯೋತಿಷ್ಯವನ್ನು ಜ್ಯೋತಿಯೊಂದಿಗೆ (ಜ್ಞಾನದೊಂದಿಗೆ) ಹೇಳುತ್ತಿಲ್ಲ. ಜ್ಞಾನ ಇಲ್ಲದಿರುವಾಗ ಜ್ಯೋತಿಷ್ಯದಲ್ಲಿ ಜ್ಯೋತಿ ಇಲ್ಲದಂತೆ ಹೋಗುತ್ತಿದೆ. ಆದ್ದರಿಂದ ಪೂರ್ತಿ ಕರ್ಮ ವಿಧಾನ ತಿಳಿಯದಂತೆ ಹೋಗಿ ಅದಕ್ಕೆ ಸರಿಯಾದ ಸಮಾಧಾನ ಇಲ್ಲದಂತೆ ಹೋಗಿದೆ. ಆದರೆ ನಾವು ಹೇಳುವ ಉತ್ತರವೇನೆಂದರೆ!

ಮನುಷ್ಯನಿಗೆ ಜೀವನವಿದ್ದಂತೇ ಅಕಾಲಮರಣ, ತಾತ್ಕಾಲಿಕ ಮರಣಗಳು ಕರ್ಮವನ್ನನುಸರಿಸಿ ಕೆಲವರಿಗೆ ಬರುತ್ತಿವೆ. ಕೆಲವರಿಗೆ ಬರುತ್ತಿಲ್ಲ. ಈ ಎರಡು ಮರಣಗಳಿರುವುದು ಕೂಡ ಬಹಳ ಜನರಿಗೆ ತಿಳಿದಿಲ್ಲ. ಜ್ಞಾನಿಗಳಾದವರಿಗೂ ಸಹ ತಾತ್ಕಾಲಿಕ ಮರಣವಿದ್ದಂತೆ ತಿಳಿದಿಲ್ಲ. ಈ ಎರಡು ಮರಣಗಳು ಪೂರ್ತಿ ಮರಣವಲ್ಲ. ಈ ಎರಡು ಮರಣಗಳು ಹೊಂದಿದವರು ಜೀವನವನ್ನು ಸಾಗಿಸುತ್ತಲೇ ಇದ್ದಾರೆ. ಈ ಎರಡು ಮರಣಗಳೊಂದಿಗೆ ಅವರ ಜೀವನ ಮುಗಿದುಹೋಗಲಿಲ್ಲ. ಆದ್ದರಿಂದ ಅವರು ಬದುಕಿದ್ದಾರೆಂದೇ ಹೇಳಬಹುದು. ಈ ವಿಷಯ ನಿಮಗೆ ಹೊಸದಾಗಿದ್ದರೆ, ನಮ್ಮ ರಚನೆಗಳಲ್ಲಿನ **"ಮರಣ ರಹಸ್ಯ"** ಓದಿದರೆ ಪೂರ್ತಿ ಸಮಾಚಾರ ತಿಳಿಯಬಲ್ಲದು. ಮನುಷ್ಯ ಈ ಎರಡು ಮರಣಗಳಿಂದ ಮರಣಿಸಿದಂತೆ ಕಾಣಿಸಿದರೂ ನಮಗೆ ತಿಳಿಯದಂತೆ ಜೀವಿಸಿದ್ದು

ನಂತರ ಜ್ಯೋತಿಷ್ಯದಲ್ಲಿ ನಿರ್ಣಯಿಸಿದಂತೇ 70 ವರ್ಷಗಳ ಆಯುಷ್ಯದಲ್ಲಿ ಮರಣಿಸಿದರೂ, ಆ ವಿಷಯ ಇತ್ತ ಜ್ಯೋತಿಷ್ಯನಿಗಾಗಲಿ, ಪ್ರಜೆಗಳಿಗಾಗಲಿ ತಿಳಿಯದಂತೆ ಹೋಗುತ್ತಿದೆ. ಮರಣ ಯಾವಾಗ ನಡೆದಿರುವುದು ತಿಳಿಯದವರು, ಜ್ಯೋತಿಷ್ಯದಲ್ಲಿ ಜಾತಕದ ಪ್ರಕಾರ 70 ವರ್ಷಗಳು ಆಯುಷ್ಯ ಎಂದು ಹೇಳುವುದು ಪೂರ್ತಿ ತಪ್ಪಾಗಿ ಲೆಕ್ಕಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಯಾರಾದರೂ ತಪ್ಪಾಗಿ ಅರ್ಥೈಸಿಕೊಳ್ಳುವುದಕ್ಕೆ ಅವಕಾಶವಿದೆ. ಆದ್ದರಿಂದ ಅವರ ತಪ್ಪೇ ಹೊರತು, ಜ್ಯೋತಿಷ್ಯದ ತಪ್ಪು ಅಲ್ಲವೆಂದು ಹೇಳಬಹುದು. ಅಕಾಲಮರಣ ಹೊಂದಿದವನು ಪುನಃ ಕಾಲಮರಣದ ಪೂರ್ತಿ ಕರ್ಮ ಮುಗಿದುಹೋದಾಗ ಹೊಂದುವನು. ಅದರ ಪ್ರಕಾರ 50 ವರ್ಷಗಳ ವಯಸ್ಸಿನಲ್ಲಿ ಮರಣಿಸಿದವನು (ಅಕಾಲ ಮರಣ ಹೊಂದಿದವನು) ಉಳಿದ 20 ವರ್ಷಗಳು ಸೂಕ್ಷ್ಮವಾಗಿ ಕಾಣಿಸದೆ ಜೀವಿಸುತ್ತಿರುವನು. ನಂತರ ಅವನು 20 ವರ್ಷಗಳ ಜೀವನವನ್ನು ಕಳೆದು ಮರಣಿಸುವನು. ಈ ವಿಧಾನದಲ್ಲಿ ಮನುಷ್ಯರು ತಪ್ಪಾಗಿ ಅರ್ಥೈಸಿಕೊಳ್ಳುವುದು ಹೊರತುಪಡಿಸಿ ಜ್ಯೋತಿಷ್ಯದ ತಪ್ಪಲ್ಲವೆಂದು ತಿಳಿಯುತ್ತಿದೆ.

ಇನ್ನು ಜ್ಯೋತಿಷ್ಯದ ಪ್ರಕಾರ 70 ವರ್ಷಗಳ ಆಯುಷ್ಯ ಇದೆಯೆಂದು ಹೇಳಲ್ಪಟ್ಟವನು 80 ವರ್ಷಗಳಿಗೆ ಮರಣಿಸಿದರೆ, ಆಗ ಆಯುಷ್ಯ ಇರುವುದು 70 ವರ್ಷಗಳೇ ಅಲ್ಲವೆ! ಹಾಗಿರುವಾಗ ಹತ್ತು ವರ್ಷಗಳು ಹೆಚ್ಚಾಗಿ ಹೇಗೆ ಬದುಕಿದ್ದಾನೆಂದು ಕೇಳಬಹುದು. ಹೇಗೆ ಬದುಕಿದರೂ ಜ್ಯೋತಿಷ್ಯದ ಪ್ರಕಾರ 70 ವರ್ಷಗಳು ಆಯುಷ್ಯ ಎನ್ನುವ ಮಾತು ಅಸತ್ಯವಾದುದಲ್ಲವೆ ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಏನೆಂದರೆ! ವಿಷಯವನ್ನು ವಿವರಿಸಿಕೊಂಡು ನೋಡುವುದಾದರೆ ಇಲ್ಲಿಯೂ ಸಹ 70 ವರ್ಷಗಳ ಆಯುಷ್ಯ ತಪ್ಪು ಅಲ್ಲವೆಂದು ತಿಳಿಯುತ್ತಿದೆ. ತಪ್ಪೆಂದು ಎದುರುಗಡೆ ಕಾಣಿಸುತ್ತಿದ್ದರೆ ತಪ್ಪು ಅಲ್ಲ ಎನ್ನುವುದೇನೆಂದು ಕೆಲವರು ಅಂದುಕೊಳ್ಳಬಹುದು. ಹಾಗೆ ಪ್ರಶ್ನೆ ಬರುತ್ತದೆಂದೇ ವಿವರಿಸಿಕೊಂಡು ನೋಡಬೇಕೆಂದು ಮೊದಲೇ ಹೇಳಿದ್ದೇವೆ. ಆದ್ದರಿಂದ ಈಗ ನಾವು ಈ ವಿಷಯವನ್ನು ಕುರಿತು ವಿವರಿಸಿಕೊಂಡು ನೋಡೋಣ.

ಯಾವಾಗಲೋ 70 ವರ್ಷಗಳ ಕೆಳಗೆ ಜಾತಕನ ಆಯುಷ್ಯವನ್ನು ಕುರಿತು ಹೇಳಿದಾಗ, 70 ಕಳೆದ ನಂತರ, 80 ವರ್ಷಗಳು ಬದುಕಿದ ನಂತರ ಆಯುಷ್ಷನ್ನು ಕುರಿತು ಹೇಳಿದ ಮಾತು ತಪ್ಪೆಂದು ತಿಳಿಯುತ್ತಿದೆ. ಈಗ ಇಷ್ಟು ವರ್ಷಗಳಿಗೆ ತಪ್ಪೆಂದು ತಿಳಿದರೂ, ತಪ್ಪಾಗಿ ಹೇಳಿರುವುದು ಯಾವಾಗ ಎಂದು ನೋಡಿದರೆ ಆ ಮನುಷ್ಯ ಹುಟ್ಟಿದಾಗ ಅಲ್ಲವೆ! ಆಗ ಸತ್ಯವಾದುದು, ಆ ದಿನ ಶಾಸ್ತ್ರಬದ್ಧವಾಗಿ ಹೇಳಲ್ಪಟ್ಟಿರುವುದು ಈಗ ಅಸತ್ಯ ಹೇಗೆ ಆಗಿದೆಯೆಂದು ನೋಡಿದರೆ ಆಗ ಹೇಳಿರುವುದು ಅಂದಿಗೇ ಸತ್ಯ, ಈಗ ನಡೆದಿರುವುದು ಇಂದಿಗೇ ಸತ್ಯವೆಂದು ಹೇಳಬಹುದು. ನಮ್ಮ ಮಾತು ಕೇಳಿದ ಕೆಲವರಿಗೆ ನಮ್ಮ ಮಾತಿನಲ್ಲಿನ ಸತ್ಯ ಅರ್ಥವಾಗದೆ ನಮ್ಮನ್ನು ಅಸತ್ಯವಾದಿಗಳಾಗಿ ವರ್ಣಿಸಬಹುದು. ಆದರೆ ಎಲ್ಲರಿಗೂ ತಿಳಿಯದ ಸತ್ಯವೊಂದು ಇದೆ. ಜಾತಕನು ಹುಟ್ಟಿದ ದಿನ ಜಾತಕವನ್ನನುಸರಿಸಿ ಆತನು 70 ವರ್ಷಗಳು ಬದುಕಬೇಕೆಂದು ಇರುವುದು ಸತ್ಯವೇ. ಆದರೆ 70 ವರ್ಷಗಳ ಜೀವನದಲ್ಲಿ ಆತನು ಸ್ವಲ್ಪಮಟ್ಟಿಗೆ ದೈವಜ್ಞಾನದ ಪ್ರಕಾರ ನಡೆದುಕೊಳ್ಳುವುದರಿಂದ ಕರ್ಮ ಬದಲಾಗುವುದಕ್ಕೆ ಅವಕಾಶವಿರುವ ದಶಾ ಸಂವತ್ಸರದಲ್ಲಿ ವ್ಯತ್ಯಾಸ ಬಂದು ಆತನ ಆಯುಷ್ಯ ಹತ್ತು ವರ್ಷಗಳು ಬೆಳೆದಿದೆ. ಮೊದಲು ಶಾಸ್ತ್ರಬದ್ಧವಾಗಿರುವುದು 70 ವರ್ಷಗಳ ಆಯುಷ್ಯವೂ ಸತ್ಯ, ಜ್ಞಾನದಿಂದ ಕರ್ಮ ಬದಲಾಗಿ ಹತ್ತು ವರ್ಷಗಳು ಬೆಳೆದಿರುವುದೂ ಸತ್ಯ. ಆದ್ದರಿಂದ ಜನನ ಲಗ್ನದಲ್ಲಿ ಇದ್ದಂತೆ 70 ವರ್ಷಗಳ ಆಯುವು ಸತ್ಯ. ನಂತರ 80 ವರ್ಷಗಳ ಬದುಕು ಸಹ ಸತ್ಯವೇ. ದಶಾಸಂವತ್ಸರಗಳು ಜೀವನದ ಮಧ್ಯಕಾಲದಲ್ಲಿ ಇವೆ. ಮನುಷ್ಯ ದೈವಜ್ಞಾನವನ್ನು ಅನುಸರಿಸಿದರೆ, ಆಯಾ ಗ್ರಹಗಳು ಪಾಲಿಸಬೇಕಾದ ಕರ್ಮಗಳು, ಆಯಾ ಗ್ರಹಗಳೊಂದರ ದಶಗಳಲ್ಲಿ ನಶಿಸಿ ಹೋಗಬಲ್ಲವು. ಆದ್ದರಿಂದ ಮೊದಲು ಹುಟ್ಟಿದಾಗ ನಿರ್ಣಯಿಸಲ್ಪಟ್ಟ ಕರ್ಮಕ್ಕೂ ನಂತರ ಮಧ್ಯ ಕಾಲದಲ್ಲಿ ಮಾರ್ಪಾಟಾದ ಕರ್ಮಕ್ಕೂ ವ್ಯತ್ಯಾಸವಿದೆ. ಜ್ಞಾನದ ಪ್ರಕಾರ ಕರ್ಮ ಕಡಿಮೆಯಾಗಿದೆಯೆಂದು ಅರ್ಥ ಮಾಡಿಕೊಳ್ಳಬಹುದಲ್ಲವೆ! ಎಂದು ನಾವು ಹೇಳುತ್ತಿದ್ದೇವೆ. ಆದರೆ ನಮ್ಮ ಮಾತು ಕೇಳಿದ ನಂತರ ಕೆಲವರು ಹೀಗೆ ಪ್ರಶ್ನಿಸಬಹುದು. “ಜ್ಞಾನ ತಿಳಿದು ಅದರ ಪ್ರಕಾರ ಆಚರಿಸಿದರೆ

ಗೀತೆಯಲ್ಲಿ ಹೇಳಿದಂತೆ ಕರ್ಮ ಕಡಿಮೆಯಾಗುವ ಮಾತು ವಾಸ್ತವವೇ ಆದರೆ ಅದನ್ನು ನಾವು ಒಪ್ಪಿಕೊಳ್ಳುತ್ತಿದ್ದೇವೆ. ಆ ಲೆಕ್ಕದ ಪ್ರಕಾರ 70 ವರ್ಷಗಳು ಬದುಕಬೇಕಾದವನು 65 ವರ್ಷಗಳಿಗೋ ಅಥವಾ 60 ವರ್ಷಗಳಿಗೋ ಮರಣಿಸಿದ್ದಾನೆಂದರೆ, ಕರ್ಮ ಕಡಿಮೆಯಾಗಿರುವುದಕ್ಕೆ ಹಾಗೆ ಆಯುಷ್ಯ ಕೂಡಾ ಕಡಿಮೆಯಾಗಿ ಮೊದಲೇ ಮರಣಿಸಿದ್ದಾನೆಂದು ಅಂದುಕೊಳ್ಳುತ್ತೇವೆ. ಆದರೆ ಇಲ್ಲಿ 10 ವರ್ಷಗಳು ಹೆಚ್ಚಿಗೆ ಬದುಕಿದ್ದಾನಲ್ಲವೆ! ಅದಕ್ಕೆ ನೀವೇನನ್ನುತ್ತೀರ". ಎಂದು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಹೀಗೆ ಇದೆ.

ಯಾವ ಮನುಷ್ಯನಿಗಾದರೂ ಪ್ರಪಂಚ ವಿಷಯಗಳಲ್ಲಿ ಪ್ರವರ್ತಿಸುವ ಪ್ರವರ್ತನೆಯನ್ನನುಸರಿಸಿ ಪ್ರಾರಬ್ಧ ಕರ್ಮ ಏರ್ಪಡಿಸಲ್ಪಟ್ಟಿರುತ್ತದೆ. ಗ್ರಹಚಾರದ ಪ್ರಕಾರ ಒಂದು ಕ್ಷಣವೂ ಸಹ ಕರ್ಮ ಬಿಡದೆ ಮನುಷ್ಯನನ್ನು ನಡೆಸುತ್ತಿರುತ್ತದೆ. ಕರ್ಮಪ್ರಕಾರ ದೇವರನ್ನು ತಿಳಿಯುವುದಕ್ಕಾಗಲಿ, ದೇವರ ಜ್ಞಾನವನ್ನು ತಿಳಿಯುವುದಕ್ಕಾಗಲಿ, ದೇವರ ಜ್ಞಾನದ ಮೇಲೆ ಶ್ರದ್ಧೆ ಉಂಟಾಗುವುದಕ್ಕಾಗಲಿ ಕರ್ಮ ಕಾರಣವಲ್ಲ. ಹಾಗಿರುವಾಗ ಕರ್ಮಕ್ಕೆ ಅತೀತವಾಗಿ ದೇವರಕಡೆ ಮನುಷ್ಯ ಹೋಗುವುದಕ್ಕೆ ತಕ್ಕಂತೆ ಗ್ರಹಗಳ ದಶಗಳನ್ನು ದೇವರು ಏರ್ಪಡಿಸಿದ್ದಾನೆ. ಗ್ರಹಗಳ ದಶಾಕಾಲದಲ್ಲಿ ಮಿತ್ರ ಶತ್ರು ಗ್ರಹಗಳು ಮನುಷ್ಯ ದೇವರಮೇಲೆ ಶ್ರದ್ಧೆಹೊಂದಿ ದೈವಮಾರ್ಗದಲ್ಲಿ ಪ್ರಯಾಣಿಸುವುದಕ್ಕೆ ಆಯಾ ಗ್ರಹಗಳು ತಮ್ಮ ತಮ್ಮ ಕರ್ಮಗಳನ್ನು ಇಲ್ಲದಂತೆ ಮಾಡಬಹುದು. ಕರ್ಮವನ್ನು ಪಾಲಿಸುವವು ಗ್ರಹಗಳೇ ಆಗಿರುವುದರಿಂದ ಜ್ಞಾನವನ್ನನುಸರಿಸಿ, ಜ್ಞಾನಶಕ್ತಿ (ಜ್ಞಾನಾಗ್ನಿ) ಯನ್ನನುಸರಿಸಿ ಕರ್ಮಗಳನ್ನು ನಿರ್ಮೂಲಿಸಬೇಕಾದ ಕಾರ್ಯವನ್ನು ಮಾಡಬೇಕಾದ ಜವಾಬ್ದಾರಿ ಗ್ರಹಗಳ ಮೇಲೆಯೆ ಇದೆ. ಆದ್ದರಿಂದ ಅಂತಹ ಕಾರ್ಯವನ್ನು ಆಚರಿಸುವುದಕ್ಕೆ ಗ್ರಹಗಳ ದಶಗಳು ಏರ್ಪಡಿಸಲ್ಪಟ್ಟಿವೆ. ಗ್ರಹಚಾರದಲ್ಲಿ ರವೆಯಷ್ಟು ಕರ್ಮವನ್ನು ಸಹ ಬಿಡದೆ ಅನುಭವಿಸುವಂತೆ ಮಾಡುವ ಗ್ರಹಗಳು, ತಮ್ಮ ದಶಗಳಲ್ಲಿ ಮಾತ್ರ ದೇವರ ಶಾಸನವನ್ನನುಸರಿಸಿ ಕರ್ಮವನ್ನು ದಹಿಸುವ ಕಾರ್ಯವನ್ನು ಸಹ ಮಾಡುತ್ತವೆ. ಇದಕ್ಕೂ ಮೊದಲು ಇದೇ ಗ್ರಂಥದಲ್ಲಿ "ದಶಗಳು ಎಂದರೆ ಏನು" ಎನ್ನುವ ವಿಭಾಗದಲ್ಲಿ ದೇವರ ವಿಷಯದಲ್ಲಿ

ಮನುಷ್ಯನ ಪ್ರವರ್ತನೆಯನ್ನನುಸರಿಸಿ ಗ್ರಹಗಳು ತಮ್ಮ ದಶಗಳಲ್ಲಿ ಕರ್ಮವನ್ನು ತೆಗೆದುಹಾಕಬಹುದು ಅಥವಾ ಅಂಟಿಸಬಹುದು ಎಂದು ಹೇಳಿದ್ದೇವೆ. ಅಲ್ಲಿ ಕರ್ಮವನ್ನು ತೆಗೆದುಹಾಕುವ ವಿಧಾನವನ್ನು ಗ್ರಹಗಳೇ ಮಾಡುತ್ತಿವೆಯೆಂದು ಹೇಳುತ್ತಾ ಅಲ್ಲಿ ಕರ್ಮ ಇಲ್ಲದಂತೆ ಹೋಗುವುದಕ್ಕೆ ಭಗವದ್ಗೀತೆಯಲ್ಲಿ ಜ್ಞಾನಯೋಗವೆನ್ನುವ ಅಧ್ಯಾಯದಲ್ಲಿ ಹೇಳಿದ 37 ನೇ ಶ್ಲೋಕವನ್ನು ಸಹ ಹೇಳಿದ್ದೇವೆ. ಆ ಶ್ಲೋಕವನ್ನನುಸರಿಸಿ ಜ್ಞಾನವೆನ್ನುವ ಅಗ್ನಿಯಿಂದ ಕರ್ಮಗಳನ್ನು ದಹಿಸುವ ಕಾರ್ಯವನ್ನು ಗ್ರಹಗಳೇ ಮಾಡುತ್ತಿವೆ. ಅಷ್ಟೇ ಅಲ್ಲದೆ ದೇವರ ವಿಷಯದಲ್ಲಿ ಭಕ್ತಿ ಶ್ರದ್ಧೆಗಳಿಗೆ ಬದುಲು ದೇವರನ್ನು ದ್ವೇಷಿಸುವುದು, ದೂಷಿಸುವುದು ಮಾಡಿದವರಿಗೆ ಇಲ್ಲದ ಕರ್ಮಗಳನ್ನು ಅನುಭವಿಸುವಂತೆ ಮಾಡುತ್ತೇನೆಂದು ಭಗವದ್ಗೀತೆಯಲ್ಲಿ ದೈವಾಸುರ ಸಂಪದ್ವಿಭಾಗ ಯೋಗದಲ್ಲಿ 18, 19 ಶ್ಲೋಕಗಳನ್ನು ನೋಡಿದರೆ ತಿಳಿಯುತ್ತಿದೆ. ಪ್ರಪಂಚ ವಿಧಾನದಲ್ಲಿ ಅಲ್ಲದೆ ದೇವರ ಮಾರ್ಗದಲ್ಲಿ ಇಲ್ಲದ ಕರ್ಮಗಳನ್ನು ಗ್ರಹಗಳೇ ಅಂಟಿಸಬೇಕಾಗಿದೆ. ಆದ್ದರಿಂದ ಗ್ರಹಚಾರದಲ್ಲಿ ಮನುಷ್ಯ ದೇವರ ಬಗ್ಗೆ ಪ್ರವರ್ತಿಸುವುದನ್ನನುಸರಿಸಿ ಕರ್ಮವನ್ನು ತೆಗೆದುಹಾಕುವು ದಕ್ಕಾಗಲಿ, ಕರ್ಮವನ್ನು ಅಂಟಿಸುವುದಕ್ಕಾಗಲಿ ಗ್ರಹಗಳೇ ಕರ್ತರು. ಅಂತಹ ದೈವ ಕಾರ್ಯಗಳನ್ನು ಗ್ರಹಗಳೇ ತಮ್ಮ ದಶಗಳಲ್ಲಿ ಮಾಡುತ್ತಿವೆ.

ಒಬ್ಬ ಮನುಷ್ಯ ಕರ್ಮ ಪ್ರಕಾರ ಪ್ರಪಂಚ ವಿಷಯಗಳಲ್ಲಿ ಅಸ್ವತಂತ್ರನಾಗಿ ಪ್ರವರ್ತಿಸಬೇಕಾಗಿರುತ್ತದೆ. ಅದೇ ದೈವವೊಂದರ ವಿಷಯದಲ್ಲಿ ಸ್ವತಂತ್ರವಾಗಿ ಪ್ರವರ್ತಿಸಬಲ್ಲನು. ದೇವರ ವಿಷಯಗಳು ಕರ್ಮ ಅಧೀನದಲ್ಲಿ ಇರುವುದಿಲ್ಲ. ಆದ್ದರಿಂದ ಜೀವಿಯು ದೇವರಿಗೆ ಸ್ವತಃವಾಗಿ ಹತ್ತಿರವಾಗಿ ಹೋಗಬಹುದು. ಅಥವಾ ದೂರವಾಗಿ ಸಹ ಹೋಗಬಹುದು. ದೇವರಿಗೆ ಹತ್ತಿರವಾಗಿ ಹೋದವನಿಗೆ ಇರುವ ಕರ್ಮಗಳು ಇಲ್ಲದಂತೆ ಗ್ರಹಗಳಿಂದಲೇ ತೆಗೆದುಹಾಕಲ್ಪಡುತ್ತವೆ. ಹಾಗೆಯೇ ದೇವರಿಗೆ ದೂರವಾಗಿ ಹೋದವನಿಗೆ ಇಲ್ಲದ ಕರ್ಮಗಳನ್ನು ಗ್ರಹಗಳಿಂದಲೇ ಅಂಟಿಸಲ್ಪಡುತ್ತವೆ. ಆ ಎರಡು ಕೆಲಸಗಳನ್ನು ಗ್ರಹಗಳು ತಮ್ಮ ದಶಗಳಲ್ಲಿ ಮಾಡುವುದಕ್ಕೆ ಅವಕಾಶವಿದೆ. ಈಗ ಅಸಲು ವಿಷಯಕ್ಕೆ ಬರೋಣ. ಹುಟ್ಟಿದ

ಕಾಲದಲ್ಲಿ (ಜಾತಕದಲ್ಲಿ) ಒಬ್ಬ ವ್ಯಕ್ತಿಗೆ 70 ವರ್ಷಗಳ ಆಯುಷ್ಯ ಇದೆಯೆಂದು ಹೇಳಲ್ಪಟ್ಟಾಗ ಆ ಮಾತು ಜ್ಯೋತಿಷ್ಯಶಾಸ್ತ್ರವನ್ನನುಸರಿಸಿ ಸತ್ಯವೆಂದೇ ಹೇಳಬಹುದು. ಆದರೆ ಆ ವ್ಯಕ್ತಿ ತನ್ನ ಇಚ್ಛೆಯಿಂದ ದೇವರ ಜ್ಞಾನವನ್ನು ತಿಳಿದು ಯೋಗಿಯಾಗಿ ಜ್ಞಾನಶಕ್ತಿಯನ್ನು ಸಂಪಾದಿಸಿಕೊಂಡಂತಾದರೆ, ಆ ಮನುಷ್ಯ ದೇವರಿಗೆ ಹತ್ತಿರದವನಾಗುತ್ತಾನೆ. ಆಗ ಆತನ 70 ವರ್ಷಗಳ ಕರ್ಮದಲ್ಲಿ 20 ವರ್ಷಗಳ ಕರ್ಮ ಸುಟ್ಟುಹೋಗಿದೆ. ಆಗ ಆತನು ಇರುವ ಕರ್ಮವನ್ನನುಸರಿಸಿ 50 ವರ್ಷಗಳೇ ಜೀವಿಸುವನು. ಇದು ಜ್ಯೋತಿಷ್ಯಕ್ಕೆ ಸಂಬಂಧವಿಲ್ಲ. ಜ್ಯೋತಿಷ್ಯ ಕರ್ಮವನ್ನನುಸರಿಸಿ ಇರುತ್ತದೆಂದು ನೆನಪಿಟ್ಟುಕೊಳ್ಳಬೇಕು. 70 ವರ್ಷಗಳು ಆಯುಷ್ಯವಿರುವ ವ್ಯಕ್ತಿ ತನ್ನ ಇಷ್ಟಾನುಸಾರ ಅಜ್ಞಾನದಿಂದ ದೇವರನ್ನು ದೂಷಿಸಿ ದೇವರಿಗೆ ದೂರವಾದಾಗ ಇಲ್ಲದ ಕರ್ಮವನ್ನು ಗ್ರಹಗಳೇ ತಮ್ಮ ದಶಗಳಲ್ಲಿ ಅಂಟಿಸುತ್ತಿವೆ. ಆಗ ಅವನಿಗೆ ಆ ಜನ್ಮದಲ್ಲಿ ಕರ್ಮ ಹೆಚ್ಚಾಗಿಹೋಗಿ 70 ವರ್ಷಗಳು ಮಾತ್ರ ಬದುಕಬೇಕಾದವನು 80 ವರ್ಷಗಳು ಬದುಕಬೇಕಾಗುತ್ತದೆ. ಜನನ ಕಾಲದಲ್ಲಿನ ಕರ್ಮ ಪ್ರಕಾರ ಮನುಷ್ಯನ ಆಯುಷ್ಯ 70 ಸಂ॥ ಗಳೆಂದು ಹೇಳುವುದು ಶಾಸ್ತ್ರ ಬದ್ಧವೇಯಾಗುವು ದರಿಂದ ಅದು ಶಾಸ್ತ್ರದ ಪ್ರಕಾರ ಸತ್ಯ. ಆದರೆ ಜೀವನದ ಮಧ್ಯಕಾಲದಲ್ಲಿ ಕರ್ಮಕ್ಕೆ ಸಂಬಂಧವಿಲ್ಲದ ದೈವ ವಿಷಯದಲ್ಲಿ ಕರ್ಮವನ್ನು ತೆಗೆದುಹಾಕುವುದಾಗಲಿ, ಸೇರಿಸಿದಾಗಾಗಲಿ, ನಡೆದ ಬದಲಾವಣೆಗು ಜ್ಯೋತಿಷ್ಯಕ್ಕು ಸಂಬಂಧವಿಲ್ಲ. ಜ್ಯೋತಿಷ್ಯ ಪ್ರಪಂಚ ಸಂಬಂಧವಾದುದು. ಬ್ರಹ್ಮವಿದ್ಯೆ ದೈವ ಸಂಬಂಧವಾದುದು. ಜ್ಯೋತಿಷ್ಯ ಶಾಸ್ತ್ರದ ಪ್ರಕಾರ ಆಯುಷ್ಯ ಹೇಳಲ್ಪಟ್ಟಿದೆ. ಬ್ರಹ್ಮವಿದ್ಯಾ ಶಾಸ್ತ್ರದ ಪ್ರಕಾರ ಆಯುಷ್ಯದಲ್ಲಿ ಹೆಚ್ಚು ಕಡಿಮೆ ನಡೆದಿದೆ. ಆದ್ದರಿಂದ ಆಯುಷ್ಯಕ್ಕೆ ಸಂಬಂಧವಿಲ್ಲದಂತೆ ಜ್ಞಾನಿಗಳಾದವರು (ಜ್ಞಾನಶಕ್ತಿ ಇರುವವರು) ತಮ್ಮ ಆಯುಷ್ಯಕ್ಕಿಂತ ಮೊದಲೇ ಮರಣಿಸುತ್ತಿದ್ದಾರೆ. ಅಜ್ಞಾನಿಗಳಾದವರು ಕರ್ಮವನ್ನು ಬೆಳಸಿಕೊಂಡು ಆಯುಷ್ಯಕ್ಕಿಂತ ಹೆಚ್ಚಿನ ಕಾಲಕ್ಕೆ ಮರಣಿಸುತ್ತಿದ್ದಾರೆ. ಆದ್ದರಿಂದ ಅಂತಹ ಜ್ಞಾನಿಗಳ ವಿಷಯದಲ್ಲಿಯೂ ಅಜ್ಞಾನಿಗಳ ವಿಷಯದಲ್ಲಿಯೂ ಇಷ್ಟೇ ಆಯುಷ್ಯ ಎಂದು ಖಚಿತವಾಗಿ ಹೇಳಲಾರೆವು. ಉದಾಹರಣೆಗೆ ಒಂದು ಅನುಭವದ ವಿಷಯವನ್ನು ಕೆಳಗೆ ವಿವರಿಸುತ್ತೇವೆ ನೋಡಿರಿ.

2011 A. D ಸಂವತ್ಸರ ಮಾರ್ಚ್ ತಿಂಗಳ ಮೊದಲಿನಲ್ಲಿ ಸತ್ಯಸಾಯಿ ಬಾಬಾರವರು ಅನಾರೋಗ್ಯವಾಗಿ ಇದ್ದಾಗ ಆತನ ಆಯುಷ್ಯ ವಿಷಯವನ್ನು ಕುರಿತು ನಮ್ಮ ಭಕ್ತರು ಕೆಲವರು ಕೇಳಿದ್ದಾರೆ. ಸತ್ಯಸಾಯಿಬಾಬಾ ರವರ ವಿಷಯ ಬಹಳ ವರ್ಷಗಳ ಪೂರ್ವದಲ್ಲಿ ಒಂದು ಸಂದರ್ಭದಲ್ಲಿ ಆತನು ದೀರ್ಘಾಯುಷ್ಯ ಇರುವವನೆಂದು ಆತನ ಆಯುಷ್ಯ 96 ವರ್ಷಗಳಿದ್ದರೂ, ಬಹುಶಃ 92 ನೇ ವರ್ಷ ಮರಣಿಸಬಹುದೆಂದು ಹೇಳಿದಂತೆ ಜ್ಞಾಪಕವಿದೆಯೆಂದು ಹೇಳಿದ್ದೇವೆ. ಆಗ ಬಾಬಾರವರ ವಯಸ್ಸು 86 ನೇ ವರ್ಷ ನಡೆಯುತ್ತಿದ್ದಂತೆ ತಿಳಿದಿದೆ. ಅದನ್ನನುಸರಿಸಿ ಆತನು ಈಗಲೇ ಮರಣಿಸುವುದಿಲ್ಲ ಇನ್ನೂ ಐದು ವರ್ಷಗಳು ಬದುಕುತ್ತಾನೆಂದು ಹೇಳಿದ್ದೇವೆ. ಆದರೆ ಬಾಬಾರವರು ಏಪ್ರಿಲ್ 24 ನೇ ದಿನಾಂಕದಂದು ಮರಣಿಸಿದಂತೆ ತಿಳಿದಿದೆ. ಆತನ ಆಯುಷ್ಯ 96 ಆದರೆ ನಾವು ಹೇಳಿರುವುದು 92 ಸಂ॥ಗಳು ಆತನು ಮರಣಿಸಿರುವುದು 86ನೇ ವರ್ಷದಲ್ಲಿ. ಇದನ್ನನುಸರಿಸಿ ನಾವು ಹೇಳಿದ ಆಯುಷ್ಯಕ್ಕಿಂತ ಆರು ವರ್ಷಗಳ ಮೊದಲೇ ಮರಣಿಸಿದ್ದಾನೆ. ಹೇಳಿರುವ ಜ್ಯೋತಿಷ್ಯವು ತಪ್ಪಾ ಎಂದು ಆಲೋಚಿಸಿದರೆ, ಜ್ಯೋತಿಷ್ಯದಲ್ಲಿ ತಪ್ಪಿಲ್ಲವೆಂದು ತಿಳಿಯುತ್ತಿದೆ. ಈ ವಿಷಯದಲ್ಲಿ ಏಕೆ ಹಾಗೆ ನಡೆದಿದೆಯೆಂದು ನೋಡಿದರೆ ಎರಡು ವಿಧಗಳ ಕಾರಣಗಳು ತಿಳಿಯುತ್ತಿವೆ. (ಒಂದು) ಬಾಬಾರವರು ಅಕಾಲಮೃತ್ಯುವಿ ನಿಂದಾದರೂ ಮರಣಿಸಿರಬೇಕು ಇಲ್ಲವೆ (ಎರಡು) ಆರು ವರ್ಷಗಳ ಜೀವಿತ ಕರ್ಮ ಜ್ಞಾನದಿಂದ ಸುಟ್ಟುಹೋಗಿರಬೇಕು. ಬಾಬಾರವರು ಸಾಧಾರಣ ವ್ಯಕ್ತಿ ಅಲ್ಲ, ಆದ್ದರಿಂದ ಆತನ ಆಯುಷ್ಯದಲ್ಲಿ ಆರು ವರ್ಷಗಳ ಕರ್ಮ ಸುಟ್ಟುಹೋಗಿರಬಹುದು. ಅನುಭವಿಸುವುದಕ್ಕೆ ಕರ್ಮವಿಲ್ಲದಿರುವುದರಿಂದ ಬಾಬಾರವರು ಆರು ವರ್ಷಗಳ ಮೊದಲೇ ಮರಣಿಸಿದ್ದಾನೆಂದು ಹೇಳಬಹುದು. ಆದರೇ ಈ ವಿಷಯ ಪೂರ್ತಿಯಾಗಿ ತಿಳಿಯದಿರುವುದರಿಂದ ಜ್ಯೋತಿಷ್ಯವನ್ನೇ ತಪ್ಪಾಗಿ ಅಂದುಕೊಳ್ಳ ಬಹುದು. ವಾಸ್ತವಕ್ಕೆ ಜ್ಯೋತಿಷ್ಯದಲ್ಲಿ ಶಾಸ್ತ್ರಬದ್ಧವಾಗಿ ಆತನು ಮರಣಿಸಬೇ ಕಾಗಿರುವುದು 92 ವರ್ಷಗಳಿಗೆ. ಜ್ಯೋತಿಷ್ಯಕ್ಕೆ ಕರ್ಮಗಳು ಹೊರತು ಜ್ಞಾನದಿಂದ ನಡೆಯುವ ಕೆಲಸಗಳು ತಿಳಿಯುವುದಿಲ್ಲ. ಆದ್ದರಿಂದ ಆತನು ಆರು ವರ್ಷಗಳ

ಮುಂಚೆಯೇ ಮರಣಿಸುವ ವಿಷಯ ಜ್ಯೋತಿಷ್ಯಕ್ಕೆ ತಿಳಿದಿಲ್ಲ. ಜಾತಕ ಬಾಬಾರವರು ಹುಟ್ಟಿದಾಗ ಬರೆದಿರುವುದು. ಆಗ ಕರ್ಮದ ಪ್ರಕಾರ ನಡೆಯುವ ವಿಷಯಗಳೇ ಬರೆಯಬಹುದು. ಜ್ಞಾನದಿಂದ ಮಧ್ಯದಲ್ಲಿ ಬದಲಾಗುವ ವಿಷಯಗಳನ್ನು ಮೊದಲೇ ಬರೆಯುವುದಕ್ಕೆ ಅವಕಾಶ ಇರುವುದಿಲ್ಲ. ಈ ವಿಧವಾಗಿ ಬಹಳ ಜನರ ಆಯುಷ್ಯ ಮುಂದಕ್ಕು ಹಿಂದಕ್ಕು ಹೋದ ಸಂದರ್ಭಗಳು ಇವೆ. ಆದ್ದರಿಂದ ಆಯುಷ್ಯ ವಿಷಯವನ್ನು ಹೇಳುವುದಕ್ಕೆ ಇಂತಹ ಸಿಕ್ಕು ಸಮಸ್ಯೆಗಳಿವೆಯೆಂದು ಮೊದಲೇ ಹೇಳಿದ್ದೇವೆ.

## 44 ಇಂದೂ (ಹಿಂದೂ) ಗಳದ್ದು ಜ್ಯೋತಿಷ್ಯ

ದ್ವಾದಶ ಗ್ರಹಗಳಲ್ಲಿ ಜ್ಞಾನಕ್ಕೆ ಅಧಿಪತಿ ಚಂದ್ರನು. ಚಂದ್ರ ಗ್ರಹದಿಂದಾಗಲಿ, ಚಂದ್ರ ಕಿರಣಗಳಿಂದಾಗಲಿ ಸಂಬಂಧವಿಲ್ಲದೆ ಯಾರಿಗೂ ಜ್ಞಾನ ಲಭಿಸುವುದಿಲ್ಲ. ತ್ರಿಮೂರ್ತಿಗಳಲ್ಲಿ ಒಬ್ಬನಾದ ಶಿವನು ಭಿಕ್ಷಾಟನೆ ಮಾಡುವವನಾದರೂ ತನ್ನ ಶಿಖೆಯಲ್ಲಿ ಅರ್ಧಚಂದ್ರಾಕಾರವನ್ನು ಇಟ್ಟುಕೊಂಡಿದ್ದಾನೆ. ಶಿವನು ಚಂದ್ರಾಕಾರವನ್ನು ಶಿಖೆಯಲ್ಲಿ ಇಟ್ಟುಕೊಳ್ಳುವುದು ಅಲಂಕಾರಕ್ಕೆಂದು ಕೆಲವರಂದುಕೊಂಡಿರಬಹುದು. ಆದರೇ ಶಿವನು ಅರ್ಧಚಂದ್ರಾಕಾರವನ್ನು ಅಲಂಕಾರಭೂಷಣಕ್ಕೆ ಆತನು ಅರ್ಧಚಂದ್ರಾಕಾರವನ್ನು ತಲೆಮೇಲೆ ಇಟ್ಟುಕೊಂಡಿಲ್ಲ. ಜ್ಞಾನಕ್ಕೆ ಗುರುತಾಗಿ ಚಂದ್ರನನ್ನು ತಲೆಮೇಲೆ ಇಟ್ಟುಕೊಳ್ಳುವುದು ನಡೆದಿದೆ. ತಲೆ ಜ್ಞಾನಕ್ಕೆ ನಿಲಯ. ಜ್ಞಾನಕ್ಕೆ ಚಂದ್ರನು ಚಿಹ್ನೆ. ಆದ್ದರಿಂದ ತಲೆಮೇಲೆಯೇ ಚಂದ್ರನನ್ನು ಜ್ಞಾನ ಗುರುತಾಗಿ ಶಿವನು ಇಟ್ಟುಕೊಂಡು ತೋರಿಸುವುದು ನಡೆದಿದೆ. ಪೂರ್ವಕಾಲದಲ್ಲಿ ದೈವಜ್ಞಾನ ತಿಳಿದವರು ಎಲ್ಲಾ ಪ್ರಪಂಚ ದೇಶಗಳಿಗೆಲ್ಲ ಒಂದು ಭಾರತದೇಶದಲ್ಲಿ ಮಾತ್ರ ಇರುತ್ತಿದ್ದರು. ಆದ್ದರಿಂದ ಕೃತಯುಗದಲ್ಲಿಯೇ ಈ ದೇಶವನ್ನು ಜ್ಞಾನಿಗಳ ದೇಶ ಎನ್ನುತ್ತಿದ್ದರು. ಚಂದ್ರನನ್ನು ಜ್ಞಾನ ಚಿಹ್ನೆಯಾಗಿ ಜ್ಯೋತಿಷ್ಯದಲ್ಲಿ ಹೇಳುವುದರಿಂದ ಜ್ಞಾನಿಗಳ ದೇಶವಾದ

ಈ ದೇಶಕ್ಕೆ (ಭಾರತದೇಶಕ್ಕೆ) ಚಂದ್ರನ ದೇಶವೆಂದು ಹೆಸರು ಇತ್ತು. ಚಂದ್ರನನ್ನು ಇಂದೂ ಎಂದು ಕರೆಯುತ್ತಿದ್ದರು. ಇಂದೂ ಎಂದರೆ ಜ್ಞಾನಿ ಎಂದು ಅಥವಾ ಚಂದ್ರನೆಂದು ಅರ್ಥ. ಆದ್ದರಿಂದ ಹಿರಿಯರೆಲ್ಲರೂ ಚೆನ್ನಾಗಿ ಯೋಚಿಸಿ ಕೃತ ಯುಗದಲ್ಲಿಯೇ ಭಾರತದೇಶಕ್ಕೆ ಇಂದೂದೇಶವೆಂದು ನಾಮಕರಣ ಮಾಡಿದ್ದಾರೆ. ಆ ಹೆಸರು ಕಾಲಕ್ರಮದಲ್ಲಿ ಸ್ವಲ್ಪ ಬದಲಾಗಿ ಇಂದೂ ಎನ್ನುವ ಶಬ್ದವನ್ನು ಹಿಂದೂ ಎಂದು ಹೇಳುತ್ತಾ ನುಡಿಯುತ್ತಿದ್ದೇವೆ. ಹಾಗೆ ನುಡಿಯುವುದರಿಂದ ಇಂದೂ ದೇಶ ಸ್ವಲ್ಪ ಹಿಂದೂದೇಶವಾಗಿ ಬರೆಯಲ್ಪಡುತ್ತಿದೆ ಮತ್ತು ಕರೆಯಲ್ಪಡುತ್ತಿದೆ. ಇಂದೂ ಎಂದರೆ ಜ್ಞಾನಿ ಎಂದು ಅರ್ಥವಿದೆ ಆದರೆ, ಹಿಂದೂ ಎಂದರೇ ಆ ಪದಕ್ಕೆ ಅರ್ಥವೇ ಇಲ್ಲ. ನಾವು ಜ್ಯೋತಿಷ್ಯಶಾಸ್ತ್ರವನ್ನು ತಿಳಿದು ಮತ್ತು ಬ್ರಹ್ಮವಿದ್ಯಾಶಾಸ್ತ್ರವನ್ನು ತಿಳಿದು, ನಮ್ಮ ದೇಶ ಚರಿತ್ರೆ ಯುಗಪರ್ಯಂತವು ತಿಳಿದು, ಕೃತಯುಗದಲ್ಲಿಯೇ ಜ್ಞಾನಿಗಳ ದೇಶವೆಂದು ಹೆಸರುಗಳಿಸಿದ ದೇಶವೆಂದು ಆ ದಿನ ಹಿರಿಯರು ನಿರ್ಣಯಿಸಿದ ಇಂದೂದೇಶ ಎನ್ನುವ ಹೆಸರನ್ನು ಹೇಳುತ್ತಾ, ನಾವು ಇಂದೂಗಳೆಂದು ಹೇಳಿದರೇ ವಿಷಯವನ್ನು ಗ್ರಹಿಸಿಕೊಳ್ಳುವ ಸಾಮರ್ಥ್ಯವಿಲ್ಲದವರು ಹಿಂದೂ ಧರ್ಮರಕ್ಷಕರೆಂದು ಹೆಸರು ಇಟ್ಟುಕೊಂಡವರಾಗಿ ಇಂದೂ ಮತ ಪರ ಮತ ಎನ್ನುತ್ತಿದ್ದಾರೆ.

ಕೃತಯುಗದಲ್ಲಿಯೇ ಈ ದೇಶದವರೆಲ್ಲಾ ಜ್ಞಾನಿಗಳಾಗಿದ್ದು ಇಂದೂಗಳೆಂದು ಹೆಸರುಪಡೆದಿದ್ದಾರೆ. ಆ ದಿನ ಬೇರೆ ಮತವೆನ್ನುವುದು ಇಲ್ಲ. ಆದ್ದರಿಂದ ಇಂದೂಮತವೆಂದು ಸಹ ಹೆಸರು ಇಲ್ಲ. ಇರುವವರೆಲ್ಲಾ ಇಂದೂಗಳೇ. ಆದರೇ ಕಲಿಯುಗದಲ್ಲಿ ಎರಡು ಸಾವಿರ ವರ್ಷಗಳ ಹಿಂದೆ ಬುದ್ಧನ ಬೌದ್ಧಮತ ಬಂದ ನಂತರ ಅದನ್ನು ಬೌದ್ಧವೆನ್ನುತ್ತಿದ್ದೇವೆ ಆದ್ದರಿಂದ ಗುರುತಿಗಾಗಿ ಇದನ್ನು ಸಹ ಇಂದೂ (ಹಿಂದೂ) ಮತವೆಂದಿದ್ದಾರೆ. ಆ ಸಮಯಕ್ಕಾಗಲೇ ಇಂದೂ ಹಿಂದೂವಾಗಿ ಬದಲಾಗಿಹೋಗಿದೆ. ಬೌದ್ಧಮತ ಚೆನ್ನಾಗಿ ಪ್ರಚಾರದಲ್ಲಿರುವ ದಿನಗಳಲ್ಲಿ, ಅಶೋಕಚಕ್ರವರ್ತಿಯೇ ಹಿಂದೂ ಮತವನ್ನು ಬಿಟ್ಟು ತನ್ನನ್ನು ಬೌದ್ಧಮತಸ್ಥನನ್ನಾಗಿ ಪ್ರಕಟಿಸಿಕೊಂಡಾಗ, ಅಶೋಕನ

ಮಗ ಮಗಳು ಶ್ರೀಲಂಕ, ಆಫ್ಘನಿಸ್ಥಾನ್ ಮುಂತಾದ ದೇಶಗಳಲ್ಲಿ ಪ್ರಚಾರ ಮಾಡುತ್ತಿರು ವಾಗ, ಸ್ವತಃವಾಗಿ ಅಶೋಕನೇ ಬೌದ್ಧಮತ ವ್ಯಾಪ್ತಿಗೆ ಕೃಷಿ ಮಾಡಿದಾಗ, ಆ ದಿನ ಎಷ್ಟೋ ಜ್ಞಾನವಿಲ್ಲದ ಹಿಂದೂಗಳು ಬೌದ್ಧರಾಗಿ ಬದಲಾಗಿ ಹೋಗುವುದು ನಡೆದಿದೆ. ಅಂತಹ ಸಂದರ್ಭದಲ್ಲಿ ಕೇರಳ ರಾಷ್ಟ್ರದಲ್ಲಿ ಹುಟ್ಟಿದ ಶಂಕರಾಚಾರ್ಯನು ಅದ್ವೈತ ಸಿದ್ಧಾಂತವನ್ನು ಸ್ಥಾಪಿಸಿ ಹಿಂದೂಮತದಿಂದ ಬೌದ್ಧರಾಗಿ ಬದಲಾಗದಂತೆ ಸ್ವಲ್ಪ ಅಡ್ಡ ಕಟ್ಟೆಯನ್ನು ಕಟ್ಟಿದ್ದಾನೆ. ನಂತರ ಸ್ವಲ್ಪ ಕಾಲಕ್ಕೆ ಅದ್ವೈತ ಸಿದ್ಧಾಂತಕ್ಕಿಂತ ಮೆರುಗಾದ ಸಿದ್ಧಾಂತವಾಗಿ ವಿಶಿಷ್ಟಾದ್ವೈತ ಸಿದ್ಧಾಂತವನ್ನು ತಮಿಳನಾಡಿನಿಂದ ರಾಮಾನುಜಾಚಾರ್ಯರು ಪ್ರಚಾರ ಮಾಡಿದ್ದಾನೆ. ನಂತರ ಸ್ವಲ್ಪ ಕಾಲಕ್ಕೆ ಕರ್ನಾಟಕ ರಾಷ್ಟ್ರದಿಂದ ಮಧ್ವಾಚಾರ್ಯರು ದ್ವೈತ ಸಿದ್ಧಾಂತವನ್ನು ಪ್ರಚಾರ ಮಾಡಿದ್ದಾನೆ. ಈ ಮೂರು ಸಿದ್ಧಾಂತಗಳು ಹಿಂದೂ ಮತದೊಳಗಿನವೇ. ಅದ್ವೈತರು ಅಡ್ಡನಾಮಗಳನ್ನು, ವಿಶಿಷ್ಟಾದ್ವೈತರು ನಿಲುವು ನಾಮಗಳನ್ನು ಮುಖದಲ್ಲಿ ಗುರುತಾಗಿ ಇಟ್ಟುಕೊಂಡರೆ, ದ್ವೈತರು ಕುಂಕುಮ ಬೊಟ್ಟನ್ನು ಧರಿಸಿದ್ದಾರೆ. ಅದ್ವೈತರು ವಿಭೂತಿರೇಖೆಗಳನ್ನು, ವಿಶಿಷ್ಟಾದ್ವೈತರು ಬಿಳಿನಾಮವನ್ನು, ಗಂಗ ಸಿಂಧೂರದಿಂದ ಕೆಂಪು ನಾಮವನ್ನು ತಮ್ಮ ಸಿದ್ಧಾಂತಗಳಿಗೆ ಗುರುತಾಗಿ ಹಣೆಯ ಭಾಗದಲ್ಲಿ ಧರಿಸಿದ್ದಾರೆ. ಪ್ರಸ್ತುತ ಕಾಲದಲ್ಲಿ **ಪ್ರಬೋಧಾನಂದ ಯೋಗೀಶ್ವರರಾಗಿ ತ್ರೈತ ಸಿದ್ಧಾಂತವನ್ನು** ಇಂದಿಗೆ 35 ವರ್ಷಗಳ ಕೆಳಗೇ ಪ್ರಕಟಿಸಿ, ಭಗವದ್ಗೀತೆಯನ್ನು ಮುಖ್ಯವಾಗಿ ಪ್ರಚಾರ ಮಾಡುವುದಲ್ಲದೇ, ಅದ್ವೈತದಲ್ಲಿ ಇಲ್ಲಿಯವರೆಗು ಯಾರಿಗೂ ತಿಳಿಯದ ರಹಸ್ಯಗಳನ್ನು ಹೇಳುತ್ತಾ ಬಂದಿದ್ದೇವೆ. ಅವುಗಳನ್ನೇ ಶತ ಗ್ರಂಥಗಳಾಗಿ ಬರೆದಿದ್ದೇವೆ.

ಹಿಂದೂ ಮತದಲ್ಲಿ ಅದ್ವೈತ, ದ್ವೈತ, ವಿಶಿಷ್ಟಾದ್ವೈತವನ್ನು ಪ್ರಕಟಿಸಿದ ಸಿದ್ಧಾಂತಕರ್ತರು ಮೂವರೂ ಇಲ್ಲ. ತ್ರೈತ ಸಿದ್ಧಾಂತವನ್ನು ಪ್ರಕಟಿಸಿದ ನಾವು ಪ್ರತ್ಯಕ್ಷವಾಗಿ ಬದುಕೇ ಇದ್ದೇವೆ. ಚರಿತ್ರೆಯನ್ನು ತಿಳಿದ ನಾವು, ನಾವೆಲ್ಲಾ ಮೊದಲು ಕಲಿಯುಗದಲ್ಲೇ ಇಂದೂಗಳು. ಈದಿನ ಹಿಂದೂಗಳಾಗಿ ಹೇಳಿಕೊಳ್ಳುತ್ತಿದ್ದೇವೆ.

ಆದರೆ ಹಿರಿಯರು ಇಟ್ಟಿರುವುದನ್ನು ತೆಗೆದುಹಾಕಬಾರದೆಂದು ಹಿಂದೂ ಎನ್ನುವ ಕಡೆ ಇಂದೂ ಎಂದು ಬರೆದರೆ, ನಮ್ಮನ್ನು ನೇರವಾಗಿ ಪರಮತದವರು ಈದಿನ ಹಿಂದೂಗಳಲ್ಲಿ ತಯಾರಾಗಿದ್ದಾರೆಂದರೆ, ನಮ್ಮ ಮತವನ್ನು ಗುರುತಿಸಲಾರದ ಕುರುಡರಾಗಿ ಎಷ್ಟು ಅಜ್ಞಾನದಲ್ಲಿ ಮುಳುಗಿಹೋಗಿದ್ದೇವೊ! ನೀವೇ ಆಲೋಚಿಸಿರಿ. ತ್ರೈತ ಸಿದ್ಧಾಂತವೆನ್ನುತ್ತಲೆ ಇದು ತ್ರಿತ್ವ ಎಂದು ಹೇಳುವ ಕ್ರೈಸ್ತರದ್ದೆಂದು, ತ್ರೈತಸಿದ್ಧಾಂತ ಭಗವದ್ಗೀತೆಯನ್ನು ನೋಡಿ ಇದು ಕ್ರೈಸ್ತರ ಭಗವದ್ಗೀತೆಯೆಂದು ಅನ್ನುವವರನ್ನು ಬಹಳ ಜನರನ್ನು ನೋಡಿದ್ದೇವೆ. ಭಗವದ್ಗೀತೆ ಹೆಸರನ್ನು ಅಡ್ಡ ಇಟ್ಟುಕೊಂಡು ಪರಮತವನ್ನು ಪ್ರಚಾರ ಮಾಡುತ್ತಿದ್ದಾರೆಂದು ನಮ್ಮನ್ನು ಅನ್ನುವವರು ಈದಿನ ಹಿಂದೂಗಳಲ್ಲಿ ಇದ್ದಾರೆಂದರೆ, ಹೇಳುವ ಜ್ಞಾನ ಯಾವುದು ಎಂದು ಗುರುತುಹಿಡಿಯಲಾರದ ಅಜ್ಞಾನದಶಯಲ್ಲಿ ಈದಿನ ಹಿಂದೂಗಳು ಇದ್ದಾರೆಂದು ಅರ್ಥವಾಗುತ್ತಿದೆ. ಹೀಗೇ ಇದ್ದರೆ ಹಿಂದೂ ಮತ ಪೂರ್ತಿ ಅಜ್ಞಾನದಲ್ಲಿ ಮುಳುಗಿ ಹೋಗುತ್ತದೆಂದು, ಹಾಗೆ ಆಗದಂತಿರುವುದಕ್ಕೆ ನಾವು **"ದೇವಾಲಯ ರಹಸ್ಯಗಳು", "ಇಂದೂ ಸಾಂಪ್ರದಾಯಗಳು"** ಎನ್ನುವ ಹೆಸರುಗಳಿರುವ ಗ್ರಂಥಗಳನ್ನು, ಭಗವದ್ಗೀತೆಯನ್ನು ಮನೆಮನೆ ತಿರುಗಾಡಿ ಪ್ರಚಾರ ಮಾಡುತ್ತಿದ್ದರೂ ನೀವು ನಮ್ಮ ಊರಿನಲ್ಲಿ ಪ್ರಚಾರ ಮಾಡಬೇಡಿ ಎಂದು ವಾದಕ್ಕೆ ಇಳಿದು, ಹೇಳಿರುವುದನ್ನು ಸ್ವಲ್ಪವಾದರೂ ಕೇಳದಂತೆ ನಮ್ಮನ್ನು ಅವಮಾನವಾಗಿ ಮಾತನಾಡಿದವರು ಇದ್ದಾರೆ. ಇದೆಲ್ಲವೂ ಸಾಧಾರಣ ಮನುಷ್ಯರು ಯಾರೂ ಮಾಡಲಿಲ್ಲ. ನಮ್ಮನ್ನು ಪ್ರತಿಭಟಿಸಿದವರೆಲ್ಲರೂ ನಾವು ಹಿಂದೂ ಧರ್ಮಗಳನ್ನು ರಕ್ಷಿಸುತ್ತೇವೆಂದು ಹೆಸರಿಟ್ಟುಕೊಂಡವರೇ ಎಂದರೆ ಆಶ್ಚರ್ಯಪಡಬೇಕಾಗಿಲ್ಲ. ನಮ್ಮ ಕಣ್ಣ ಮುಂದೆಯೇ ಇಷ್ಟು ಅಜ್ಞಾನ ಸ್ಥಿತಿಯೊಳಗೆ ಹೋದ ಹಿಂದೂಗಳಿಗೆ ಪೂರ್ತಿ ಜ್ಞಾನವನ್ನು ಕಲ್ಪಿಸಿ, ಎಲ್ಲ ಮತಗಳ ಮುಂದೆ ಇಂದೂ (ಹಿಂದೂ) ಜ್ಞಾನ ದೊಡ್ಡದೆಂದು ಅನಿಸುವುದಕ್ಕೆ ಕೃಷಿ ಮಾಡಬೇಕೆಂದುಕೊಂಡಿದ್ದೇವೆ. ಆ ಪದ್ಧತಿಯಲ್ಲಿ ಈ ದಿನ ನಮ್ಮನ್ನು ಸಹ ಪರಮತವೆಂದು ದ್ವೇಷಿಸಿದವರು ಕಣ್ಣು ತೆರೆದು ಹಿಂದೂ (ಇಂದೂ) ಜ್ಞಾನ ಎಷ್ಟೋ ದೊಡ್ಡದೆಂದು ಅರ್ಥ ಮಾಡಿಕೊಳ್ಳುವಂತೆ ಇಲ್ಲಿಯವರೆಗು ಭೂಮಿ ಮೇಲೆ ಯಾರೂ ಹೇಳದ

ಗ್ರಂಥಗಳನ್ನು ಬರೆದು ಕೊಟ್ಟಿದ್ದೇವೆ. ಈಗ **"ಜ್ಯೋತಿಷ್ಯ ಶಾಸ್ತ್ರ"** ಎನ್ನುವ ಗ್ರಂಥವನ್ನು ಸಹ ಕೊಡುತ್ತಿದ್ದೇವೆ. ಈ ಗ್ರಂಥವನ್ನು ಕೊಡುವುದರಲ್ಲಿ ನೀವೆಲ್ಲರೂ ತಿಳಿದುಕೊಳ್ಳಬೇಕಾಗಿರುವುದು ಏನೆಂದರೆ!

ಇಲ್ಲಿಯವರೆಗು ಒಂದು ಹಿಂದೂ (ಇಂದೂ) ಮತದಲ್ಲಿ ಜ್ಯೋತಿಷ್ಯಕ್ಕೆ ಇರುವ ಬೆಲೆ, ಗುರುತು ಯಾವ ಮತದಲ್ಲಿಯೂ ಇಲ್ಲ. ಜ್ಯೋತಿಷ್ಯವೆಂದರೆ ಇದು ಹಿಂದೂಗಳದ್ದೆಂದು ಪಕ್ಕಕ್ಕಿಡುತ್ತಿದ್ದಾರೆ. ಎಲ್ಲಿ ನೋಡಿದರೂ ಮತ ಎನ್ನುವುದು ಪ್ರಜೆಗಳಲ್ಲಿ ಜೀರ್ಣಿಸಿಕೊಂಡು ಹೋಗಿದೆ. ಕೆಲವು ದೇಶಗಳಲ್ಲಿ ಕೆಲವು ವರ್ಗದವರು ಜ್ಯೋತಿಷ್ಯವನ್ನು ಹೇಳಿಕೊಂಡರೂ ಅವರು ನಮ್ಮ ಹಾಗೆ ಪಂಚಾಂಗವನ್ನು ಗ್ರಹಗಳನ್ನು ಅನುಸರಿಸಿ ಹೇಳಿಕೊಳ್ಳುತ್ತಿಲ್ಲ. ನಮ್ಮ ಪಂಚಾಂಗಗಳು ಅವರಿಗೆ ಸ್ವಲ್ಪವಾದರೂ ಅರ್ಥ ಸಹ ಆಗುವುದಿಲ್ಲ. ಪಂಚಾಂಗಗಳು ಬರೆದುಕೊಳ್ಳುವುದು ಅದರ ಪ್ರಕಾರ ಗ್ರಹಗಳನ್ನು ಲೆಕ್ಕಿಸಿಕೊಳ್ಳುವುದು ಒಂದು ಹಿಂದೂ ಮತದಲ್ಲಿಯೇ ಇದೆ. ಆದರೂ ಇಲ್ಲಿಯೂ ಸಹ (ಹಿಂದೂಗಳಲ್ಲಿ ಸಹ) ನಾಸ್ತಿಕರು ತಯಾರಾಗಿ ಜ್ಯೋತಿಷ್ಯವನ್ನು ಮೂಢನಂಬಿಕೆ ಎನ್ನುವವರು ಇದ್ದಾರೆ. ನೀವೇಕೆ ಹಾಗೆ ಅನ್ನುತ್ತಿದ್ದೀರೆಂದು ನಾವು ಅವರನ್ನು ಕೇಳಿದಾಗ ಜ್ಯೋತಿಷ್ಯದಲ್ಲಿ ನಾವು ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಯಾರೂ ಸಮಾಧಾನ ಹೇಳಲಿಲ್ಲ. ಶಾಸ್ತ್ರಬದ್ಧವಲ್ಲದ ಸಮಾಧಾನವನ್ನು ಹೇಳಿದ್ದಾರೆ. ಆದ್ದರಿಂದ ಜ್ಯೋತಿಷ್ಯವು ಅಶಾಸ್ತ್ರೀಯ, ಅಬದ್ಧ, ಮೂಢನಂಬಿಕೆಯೆಂದಿದ್ದೇವೆಂದು ಹೇಳುತ್ತಿದ್ದಾರೆ. ಅವರಿಗೆ ನಾವು ಹೇಳುವ ಸಮಾಧಾನವೇನೆಂದರೆ! ಒಬ್ಬ ವಿದ್ಯಾರ್ಥಿ ಸರಿಯಾಗಿ ಓದದಿದ್ದರೆ, ಕೇಳಿರುವುದಕ್ಕೆ ಸರಿಯಾಗಿ ಸಮಾಧಾನ ಹೇಳದೆ ಹೋದರೆ ಆ ವಿದ್ಯಾರ್ಥಿಯದ್ದು ತಪ್ಪಾಗುತ್ತದೆ ಹೊರತು, ಓದಿನದ್ದು ತಪ್ಪಲ್ಲ. ಹಾಗೆಯೇ ಕೆಲವರು ಜ್ಯೋತಿಷ್ಯರು ಜ್ಯೋತಿಷ್ಯವನ್ನು ಸರಿಯಾಗಿ ತಿಳಿಯದೆ ಸರಿಯಾದ ಸಮಾಧಾನ ಹೇಳದಿರುವಾಗ ಅವರದು ತಪ್ಪಾಗುತ್ತದಾಗಲಿ, ಜ್ಯೋತಿಷ್ಯದ್ದು ತಪ್ಪು ಹೇಗಾಗುತ್ತದೆ. ಗಣಿತವನ್ನು ತಪ್ಪಾಗಿ ಹೇಳಿದರೆ ಹೇಳಿದವನದ್ದು ತಪ್ಪಾಗುತ್ತದಾಗಲಿ ಗಣಿತ ತಪ್ಪಲ್ಲ ಅಲ್ಲವೆ! ಗಣಿತವು ಶಾಸ್ತ್ರ ಅದು ತನ್ನ ಪರಿಧಿ

ಪ್ರಕಾರವೇ ನಡೆಯುತ್ತದೆ. ಹಾಗೇ ಜ್ಯೋತಿಷ್ಯವೂ ಸಹ ಷಟ್ ಶಾಸ್ತ್ರಗಳಲ್ಲಿ ಒಂದು ಶಾಸ್ತ್ರ ಅದರ ಬೆಲೆ ಎಂದಿಗೂ ಬದಲಾಗುವುದಿಲ್ಲ. ಅಂತಹ ಜ್ಯೋತಿಷ್ಯ ಈದಿನ ಹಿಂದೂಗಳದ್ದು ಎಂದು ಹೆಸರು ಬರುವುದು ನಮ್ಮ (ಹಿಂದೂಗಳ) ಅದೃಷ್ಟವೆಂದೇ ಹೇಳಬಹುದು ಏಕೆಂದರೆ! ಗಣಿತ ಶಾಸ್ತ್ರವಾಗಲಿ, ಖಗೋಳ ಶಾಸ್ತ್ರವಾಗಲಿ, ರಸಾಯನ ಶಾಸ್ತ್ರವಾಗಲಿ, ಭೌತ ಶಾಸ್ತ್ರವಾಗಲಿ, ಜಾತೀಯ ಶಾಸ್ತ್ರಗಳಾಗಿ ಪ್ರಪಂಚವೆಲ್ಲಾ ಒಪ್ಪಿಕೊಳ್ಳುತ್ತಿರುವಾಗ ಜ್ಯೋತಿಷ್ಯವು ಶಾಸ್ತ್ರವೇ ಅಲ್ಲವೆಂದು ಹಿಂದೂಗಳಿಗೆ ಅದನ್ನು ಒಪ್ಪಿಸುವುದು ಎಲ್ಲ ವಿಧಗಳಲ್ಲಿ ಒಳ್ಳೆಯದೇ. ಇನ್ನೊಂದು ವಿಷಯವೇನೆಂದರೆ ಬ್ರಹ್ಮವಿದ್ಯಾ ಶಾಸ್ತ್ರವನ್ನು ಸಹ ಇದು ಇಂದೂ (ಹಿಂದೂ) ಮತದ್ದು ಎಂದು ಹೇಳುವುದು ಅವರಿಗೆ ತಿಳಿಯದೇನೆ ನಮಗೆ ಮರ್ಯಾದೆ ಕೊಟ್ಟಂತಾಗಿದೆ.  ಈ ದಿನ ಇತರ ಮತದವರೆಲ್ಲರೂ ಜ್ಯೋತಿಷ್ಯವನ್ನೂ, ಬ್ರಹ್ಮವಿದ್ಯೆಯನ್ನೂ ಮೂಢನಂಬಿಕೆಯಾಗಿ ಪರಿಗಣಿಸುತ್ತಾ ಆ ಎರಡನ್ನೂ ಹಿಂದೂ (ಇಂದೂ) ಮತಕ್ಕೆ ಬಿಟ್ಟುಹಾಕಿದ್ದಾರೆ.

ಈ ದಿನ ಸೂರ್ಯ ಚಂದ್ರ ಮುಂತಾದ ಗ್ರಹಗಳನ್ನು ಆಧಾರ ಮಾಡಿಕೊಂಡು ಹೇಳುವ ಜ್ಯೋತಿಷ್ಯ ಭಾರತದೇಶದಲ್ಲಿ ಇಂದೂಮತ (ಹಿಂದೂಮತ) ದಲ್ಲಿಯೇ ಇದೆಯೆಂದು ಹೇಳುತ್ತಿದ್ದೇವೆ. ಆದರೇ ಪ್ರಾಚೀನರಾದ ನಮ್ಮ ಹಿರಿಯರು ಎಷ್ಟೋ ಬುದ್ಧಿವಂತಿಕೆಯಿಂದ ಎಷ್ಟೋ ವಿಷಯಗಳನ್ನು ಕಂಡುಕೊಂಡು ಅವುಗಳನ್ನು ನಮಗೆ ತಿಳಿಸಿದರೂ, ಕೊನೆಗೆ ಬೆಲೆಯುಳ್ಳ ಆ ಸಮಾಚಾರವನ್ನು ಸ್ವಲ್ಪ ಕೈ ಬಿಟ್ಟುಕೊಂಡಿದ್ದೇವೆಂದು ತಿಳಿಯುತ್ತಿದೆ. ಹಾಗೆ ಕೈಬಿಟ್ಟುಕೊಂಡವುಗಳಲ್ಲಿ ದ್ವಾದಶ ಗ್ರಹಗಳು ಹೋಗಿ ನವಗ್ರಹಗಳಾಗಿವೆ. ಯಾವ ರೀತಿಯಾಗಿ ಇಂದೂ ಎನ್ನುವ ಮಾತನ್ನು ಕೈಬಿಟ್ಟುಕೊಂಡು ಅದರಲ್ಲಿ ಸ್ವಲ್ಪವಾದರೂ ಹಿಂದೂ ಪದವನ್ನು ಹಿಡಿದುಕೊಂಡಂತೆ, ದ್ವಾದಶ ಗ್ರಹಗಳನ್ನು ಕೈ ಬಿಟ್ಟುಕೊಂಡು ಕೊನೆಗೆ ನವಗ್ರಹಗಳನ್ನು ಮಾತ್ರ ಹಿಡಿದುಕೊಂಡಿದ್ದೇವೆ. ಈಗ ನಾವು ಯಾವ ರೀತಿಯಾಗಿ ಇಂದೂ ಪಥಕ್ಕೆ (ಹಿಂದೂ ಮತಕ್ಕೆ) ಪೂರ್ವ ವೈಭವ ತರಬೇಕೆಂದುಕೊಂಡಿದ್ದೇವೋ, ಹಾಗೆಯೇ ಪೂರ್ವಕಾಲದಲ್ಲಿ


"ಜ್ಯೋತಿ ಶಾಸ್ತ್ರ" ಎನ್ನುವ ಹೆಸರಿಂದಿರುವ ಅದಕ್ಕೆ ಪೂರ್ವ ವೈಭವವನ್ನು ತರುವುದಕ್ಕೆ ಈದಿನ ಮಾರ್ಗ ತಪ್ಪಿ ಜ್ಯೋತಿ ಹೋಗಿ ಜ್ಯೋತಿಷ್ಯ ಆದಂತೆ ಹನ್ನೆರಡು ಹೋಗಿ ಒಂಭತ್ತಾಗಿರುವ ಗ್ರಹಗಳಾದ ಅವುಗಳನ್ನು ಪುನಃ ಹನ್ನೆರಡು ಮಾಡಿ ಜ್ಯೋತಿಷ್ಯವನ್ನು ಪುನಃ ಜ್ಯೋತಿಯನ್ನು ಮಾಡುವುದಕ್ಕೆ ಪ್ರಯತ್ನಿಸುತ್ತೇನೆ. ಜ್ಯೋತಿ ಬೆಳಕಿನಲ್ಲಿ ಯಾವುದನ್ನಾದರೂ ನೋಡಿ ಹೇಳುವುದಕ್ಕೆ ಎಲ್ಲರನ್ನೂ ತಯಾರು ಮಾಡುವುದಕ್ಕೆ ಪ್ರಯತ್ನಿಸೋಣ. ಹಿಂದೂ (ಇಂದೂ) ಪಥಕ್ಕೆ ಬಿಟ್ಟುಹಾಕಿದ ಜ್ಯೋತಿಷ್ಯಶಾಸ್ತ್ರವನ್ನೂ, ಬ್ರಹ್ಮವಿದ್ಯಾಶಾಸ್ತ್ರವನ್ನೂ ಎಲ್ಲರಿಗೂ ಉನ್ನತಸ್ಥಾಯಿಯಲ್ಲಿ ಕಾಣಿಸುವಂತೆ ಮಾಡುವುದಕ್ಕೆ ಪ್ರಯತ್ನಿಸೋಣ. ಅದಕ್ಕೆ ತಕ್ಕಂತೆ ಹಿಂದೂಗಳೆಲ್ಲರೂ ತಮ್ಮ ಮಕ್ಕಳು ಹುಟ್ಟಿದ ಸಮಯವನ್ನು ಬರೆದುಕೊಂಡು ಕಂಪ್ಯೂಟರ್‌ನಲ್ಲಿನ ಸಾಫ್ಟ್‌ವೇರ್ ಮುಖಾಂತರ ಜಾತಕ ಚಕ್ರವನ್ನು ಅಂದಿನ ಕಾಲಗ್ರಹಗಳ ಜೋಡಣೆಯನ್ನು ಪ್ರಿಂಟ್ ಅವುಟ್ ತೆಗೆಸಿಕೊಂಡು ಇಟ್ಟುಕೊಳ್ಳಬೇಕು. ಮೊದಲು ಪ್ರತಿ ಹಿಂದೂ ತಮ್ಮ ಜಾತಕಚಕ್ರವನ್ನು ತಮ್ಮ ಹತ್ತಿರ ಇಟ್ಟುಕೊಂಡರೇ ಅದನ್ನು ಕುರಿತು ತಿಳಿದುಕೊಳ್ಳುವುದಕ್ಕಾದರೂ ಕರ್ಮಚಕ್ರ ಜ್ಞಾನವನ್ನು ತಿಳಿದುಕೊಳ್ಳಬಹುದು. ಅದರ ಅನುಬಂಧದಿಂದ ಬ್ರಹ್ಮವಿದ್ಯೆಯನ್ನೇ ತಿಳಿಯಬಹುದು.

## 45 ಮೂರು ಹೊಸ ಗ್ರಹಗಳ ಗಮನವನ್ನು ಹೇಗೆ ಗುರುತಿಸಬೇಕು?

ಮೂರು ಗ್ರಹಗಳು ಈಗ ನಮಗೆ ಹೊಸವೇ ಆದರೂ ಪೂರ್ವದಲ್ಲಿ ಎಲ್ಲರಿಗೂ ಸುಪರಿಚಯವಾದವುಗಳೇ ಎಂದು ಹೇಳಬಹುದು. ಪೂರ್ವದಲ್ಲಿ ಬರೆದ ಗ್ರಂಥಗಳಲ್ಲಿ ಮೂರು ಗ್ರಹಗಳನ್ನು ಯಾರೂ ಬರೆಯಲಿಲ್ಲವೇ ಎಂದು ಯಾರಾದರೂ ನಮ್ಮನ್ನು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನ ಹೀಗೆ ಇದೆ. ಕಾಗದ ತಯಾರಾಗಿ ಮುದ್ರಣಾ ಯಂತ್ರಗಳು ಬಂದ ನಂತರ ಗ್ರಂಥಗಳು

ತಯಾರಾಗಿವೆ. ಮುದ್ರಣಾ ಯಂತ್ರಗಳು ಬಂದು ಸುಮಾರು ಇಲ್ಲಿಗೆ 120 ವರ್ಷಗಳು ಆಗಿದೆಯೆಂದುಕೊಳ್ಳುತ್ತೇನೆ. ಅದಕ್ಕೂ ಮೊದಲು ತಾಳೆ ಎಲೆಗಳ ಮೇಲೆ ದಬ್ಬಣದಿಂದ ಬರೆಯುತ್ತಿದ್ದರು. ಹಾಗೆ ಬರೆದ ತಾಳೆ ಎಲೆಗಳು ಸಾವಿರ ವರ್ಷಗಳಿಗಿಂತ ಹೆಚ್ಚಿನ ಕಾಲ ನೆಲೆಇರುತ್ತಿರಲಿಲ್ಲ. ಸಾವಿರ ಸಂವತ್ಸರಗಳೊಳಗೇ ಅವು ಬದಲಾವಣೆ ಹೊಂದಿ ಮುಟ್ಟಿದರೆ ಮುರಿದು ಹೋಗುವುದು ನಡೆಯುತ್ತಿತ್ತು. ಸಾವಿರ ವರ್ಷಗಳಿಗಿಂತ ಹೆಚ್ಚಾಗಿ ಇರುವುದು ಕಷ್ಟವಾಗಿತ್ತು. ಅದಕ್ಕಿಂತ ಮೊದಲು ಬಟ್ಟೆಗಳ ಮೇಲೆ ಬರೆದು ನೋಡಿದ್ದಾರೆ. ಅವೂ ಸಹ ಸ್ವಲ್ಪ ಕಾಲಕ್ಕೆ ಶಿಥಿಲವಾಗಿ ಹೋಗುತ್ತಿದ್ದವು. ಎಷ್ಟು ಕಷ್ಟಪಟ್ಟರೂ, ಏನು ಬರೆದರೂ ಅದು ನಾಲ್ಕು ಅಥವಾ ಐದು ವರ್ಷಗಳಿಗಿಂತ ಹೆಚ್ಚಿನ ಕಾಲ ಇರುತ್ತಿರಲಿಲ್ಲ. ಹಾಗಿರುವಾಗ ನಲವತ್ತು ಲಕ್ಷ ವರ್ಷಗಳ ಸಮಯದಲ್ಲಿ ಬರೆದ ಜ್ಯೋತಿಷ್ಯ ಅಂದಿಗೆ ಮಾತ್ರವೇ ತಿಳಿದಿದ್ದು, ಗುರುಶಿಷ್ಯರ ಪರಂಪರೆಯಾಗಿ ಒಬ್ಬರ ನಂತರ ಒಬ್ಬರು ತಿಳಿಯುತ್ತಾ ಬಂದರೂ, ತಿಳಿದವರು ಇತರರಿಗೆ ಪೂರ್ತಿ ಹೇಳದೇ, ಕೆಲವು ಉಪದ್ರವಗಳಿಂದ ಅಕಸ್ಮಾತ್ತಾಗಿ ಮರಣಿಸುವುದರಿಂದ ಆ ವಿಷಯಗಳು ಅಲ್ಲಿಗೇ ತಿಳಿಯದಂತೆ ಹೋಗಿವೆ. ಆದ್ದರಿಂದ ಕೃತಯುಗದಲ್ಲೇ ಇರುವ ದ್ವಾದಶ ಗ್ರಹಗಳ ವಿಷಯ ತಿಳಿಯದಂತೆ ಮಾಸಿಹೋಗಿದೆ. ಕೊನೆಗೆ ನವಗ್ರಹಗಳು ಉಳಿದಿವೆ. ಬ್ರಹ್ಮವಿದ್ಯೆ ಕೂಡಾ ಮೊದಲು ಸೃಷ್ಠಿ ಆದಿಯಲ್ಲಿಯೇ ಸೂರ್ಯನು ಮನುವಿಗೆ ಹೇಳಿದರೂ, ಮನುವಿನಿಂದ ಉಳಿದವರಿಗೆ ತಿಳಿದರೂ ಉಳಿದ ಯುಗಗಳಲ್ಲಿ ತಿಳಿಯದಂತೆ ಹೋಗಿದೆ. ಸೂರ್ಯನು ಹೇಳಿದಾಗ ಒಬ್ಬರಿಗೊಬ್ಬರು ಎಲ್ಲರೂ ತಿಳಿದುಕೊಂಡಿದ್ದಾರೆಂದು, ನಂತರ ಸ್ವಲ್ಪಕಾಲಕ್ಕೇ ತಿಳಿಯದಂತೆ ಹೋಗಿದೆಯೆಂದು ಭಗವದ್ಗೀತೆಯಲ್ಲಿನ ಜ್ಞಾನಯೋಗದಲ್ಲಿ 1,2 ಶ್ಲೋಕಗಳಲ್ಲಿ ಹೇಳಿದ್ದಾರೆ. ಎಷ್ಟೋ ಜಾಗ್ರತೆಯಿಂದ ತಿಳಿದುಕೊಂಡ ಬ್ರಹ್ಮವಿದ್ಯೆಯೇ ತಿಳಿಯದಂತೆ ಹೋದಾಗ 40 ಲಕ್ಷಗಳ ಸಂ॥ಗಳ ಸಮಯದಲ್ಲಿ ಹೇಳಿದ ಜ್ಯೋತಿಷ್ಯ ಇಷ್ಟು ಕಾಲ ಇರುವುದಕ್ಕೆ ಅವಕಾಶವೇ ಇಲ್ಲ. ಆದ್ದರಿಂದ ಹೆಸರಿಗೆ ಮಾತ್ರ ಜ್ಯೋತಿಷ್ಯ ಇದೆ ಆದರೆ, ಪೂರ್ವದಲ್ಲಿದ್ದ ಹನ್ನೆರಡು ಗ್ರಹಗಳು ಹೋಗಿ ಅವುಗಳ ಬದುಲು ಒಂಭತ್ತು ಗ್ರಹಗಳ ಜ್ಯೋತಿಷ್ಯ ಉಳಿದಿದೆ. ಈಗ ನಮಗೆ ಬೇಕಾಗಿರುವುದು ಹನ್ನೆರಡು ಗ್ರಹಗಳ ಜ್ಯೋತಿಷ್ಯ

ಶಾಸ್ತ್ರ. ಕೃತಯುಗದಲ್ಲಿಯೇ ಹೇಳಲ್ಪಟ್ಟ, ಹನ್ನೆರಡು ಗ್ರಹಗಳ ವಿಷಯವನ್ನು ನಾವು ತಿಳಿದು ನಿಮಗೆ ತಿಳಿಸಿದರೂ, ಅದಕ್ಕೆ ಸಂಬಂಧಿಸಿದ ಪಂಚಾಂಗಗಳು ಇಲ್ಲ. ಈ ದಿನ ಲಭ್ಯವಾಗುವ ಪಂಚಾಂಗಗಳು ನವಗ್ರಹಗಳನ್ನು ಕುರಿತು ಬರೆದಿರುವವೇ ಹೊರತು, ಹನ್ನೆರಡು ಗ್ರಹಗಳನ್ನು ಕುರಿತು ಬರೆದಿರುವವು ಇಲ್ಲ. ಹಾಗಿರುವಾಗ ಉಳಿದ ಮೂರು ಗ್ರಹಗಳ ವಿಷಯ ಹೇಗೆ ತಿಳಿದಿದೆಯೆಂದು ಪ್ರಶ್ನಿಸಬಹುದು. ಗ್ರಹಗಳ ವಿಷಯಗಳು ಅವುಗಳ ಗಮನಗಳು ಎಲ್ಲವೂ ಪಂಚಾಂಗದಿಂದ ತಿಳಿಯದೇ ಹೋದರೇ ಇಲ್ಲಿಯವರೆಗು ನಾವು ಹೇಳಿದ ಜ್ಯೋತಿಷ್ಯವೇ ತಿಳಿಯದಂತೆ ಹೋಗುತ್ತದೆ. ಇಂತಹ ಸಿಕ್ಕು (ತೊಡಕು) ಸಮಸ್ಯೆ ಬರುತ್ತದೆಂದು ಮುನ್ನೋಟದಿಂದ ದೇವರು ಒಂದು ಒಳ್ಳೆಯ ಕೆಲಸ ಮಾಡಿದ್ದಾನೆ. ಅದರಿಂದ ಮೂರು ಗ್ರಹಗಳ ವಿಷಯ, ಗಮನ ನಾವೇ ಸ್ವತಃವಾಗಿ ತಿಳಿಯಬಹುದು. ಅದು ಹೇಗೆಂದರೆ! ಅದರ ವಿವರವನ್ನು ಈಗ ಜಾಗ್ರತೆಯಾಗಿ ನೋಡಿರಿ. ನವಗ್ರಹಗಳ ಪಂಚಾಂಗದಲ್ಲಿ ಛಾಯಾ ಗ್ರಹಗಳೆಂದು ಹೆಸರು ಗಳಿಸಿದ ರಾಹುವು, ಕೇತುವು ಎರಡು ಗ್ರಹಗಳಿವೆ. ಅವು ಅಲ್ಲದೆ ಉಳಿದ ಏಳು ಗ್ರಹಗಳು ಎಡಗಡೆಯಿಂದ ಬಲಗಡೆಗೆ ತಿರುಗುತ್ತಿರುವಾಗ, ರಾಹು ಕೇತುಗಳು ಮಾತ್ರ ಬಲಗಡೆಯಿಂದ ಎಡಗಡೆಗೆ ತಿರುಗುತ್ತಿದ್ದಂತೆ ತಿಳಿದುಕೊಂಡಿದ್ದೇವೆ. ಅಷ್ಟೇ ಅಲ್ಲದೆ ರಾಹುಗ್ರಹ ಕೇತುಗ್ರಹ ಎರಡೂ ಕಾಲಚಕ್ರ ಲಗ್ನಗಳಲ್ಲಿ ಒಂದೇ ವೇಗ ಹೊಂದಿವೆ. ಎರಡು ಗ್ರಹಗಳಾಗಲೀ ಮೂರು ಗ್ರಹಗಳಾಗಲೀ ಒಂದೇ ವೇಗ ಹೊಂದಿರುವಾಗ ಅವುಗಳಲ್ಲಿ ಒಂದು ಗ್ರಹವೊಂದರ ಸ್ಥಾನ ಎಲ್ಲಿರುವುದು ತಿಳಿದಿರುವುದನ್ನನುಸರಿಸಿ ಉಳಿದ ಗ್ರಹಗಳ ಸ್ಥಾನಗಳನ್ನು ಸುಲಭವಾಗಿ ತಿಳಿಯಬಹುದು. ಒಂದೇ ವೇಗವಿರುವ ಗ್ರಹಗಳ ಮಧ್ಯದೂರ ಎಂದಿಗೂ ಒಂದೇ ವಿಧವಾಗಿ ಇರುತ್ತದೆ. ಆದ್ದರಿಂದ ಒಂದು ಗ್ರಹದ ಕದಲಿಕೆಯನ್ನನುಸರಿಸಿ ಉಳಿದ ಗ್ರಹವೊಂದರ ಕದಲಿಕೆಗಳನ್ನು ತಿಳಿಯಬಹುದು. ಉದಾಹರಣೆಗೆ ಕಾಲಚಕ್ರದಲ್ಲಿ ರಾಹು ಕೇತುಗಳು ಒಂದೇ ವೇಗವನ್ನು ಹೊಂದಿವೆ. ಆದ್ದರಿಂದ ಅವುಗಳ ಗಮನವನ್ನು ಕಾಲಚಕ್ರದಲ್ಲಿ ಹೇಗಿರುವುದು ಗಮನಿಸಿರಿ. ಇದರ ಆಧಾರದಿಂದ ಹೊಸದಾಗಿ ತಿಳಿದ ಮೂರು ಗ್ರಹಗಳನ್ನು ಪಂಚಾಂಗ ಇಲ್ಲದಿದ್ದರೂ ಸುಲಭವಾಗಿ ಪಕ್ಕದ ಪುಟದಲ್ಲಿ ಗ್ರಹಿಸಬಹುದು.


ಮೀನ
ಮೇಷ
ವೃಷಭ
ಮಿಥುನ
ಪೂರ್ವಾಭಾದ್ರ –4
ಉತ್ತರಾಭಾದ್ರ 1 2 3 4
ರೇವತಿ 1 2 3 4
ಅಶ್ವಿನಿ 1 2 3 4
ಭರಣಿ 1 2 3 4
ಕೃತ್ತಿಕ –1
ಕೃತ್ತಿಕ 2 3 4
ರೋಹಿಣಿ 1 2 3 4
ಮೃಗಶಿರ 1 2
ಮೃಗಶಿರ 3–ರವಿ. 4 ಜೂನ್. 14, ಬೆ. 4–19)
ಆರಿದ್ರ 1 2 3 4
ಪುನರ್ವಸು 1 2 3
ಕುಂಭ
ಧನಿಷ್ಟ 3 4
ಶತಭಿಷ 1 2 3 4
ಪೂರ್ವಾಭಾದ್ರ 1 2 3
ಕಾಲಚಕ್ರ 12 ಭಾಗಗಳು
108 ಪಾದಗಳು
ಕೇತು (ಸೆಪ್ಟೆಂಬರ್ 20, 5–30)
ಕೇತು (ಜುಲೈ 2, ರಾತ್ರಿ 11–00)
ಮಿತ್ರ (ಜುಲೈ 2, ರಾತ್ರಿ 11–00)
ಪುನರ್ವಸು –4
ಪುಷ್ಯಮಿ 1 2 3 4
ಆಶ್ಲೇಷ 1 2– 3– 4–
ಕರ್ಕಾಟಕ
ಮಕರ
ಉತ್ತರಾಷಾಢ 2 3 4
ಶ್ರವಣ 1 2 3 4
ಧನಿಷ್ಟ 1 2
ರಾಹು (ಸೆಪ್ಟೆಂಬರ್ 20, ಸಂಜೆ 5–30 ನಿ.)
ರಾಹು (ಜುಲೈ 2, ರಾತ್ರಿ 11–00)
ಚಿತ್ರ (ಜುಲೈ 2, ರಾತ್ರಿ 11–00)
ಮಖ 1 2 3 4
ಪುಬ್ಬ 1 2 3 4
ಉತ್ತರ 1
ಸಿಂಹ
ಮೂಲ 1– 2 3 4 ಭೂಮಿ (ಜೂನ್ 14 ಬೆ. 4–19)
ಪೂರ್ವಾಷಾಡ 1 2 3 4
ಉತ್ತರಾಷಾಡ –1
ವಿಶಾಖ –4
ಅನೂರಾಧ 1 2 3 4
ಜ್ಯೇಷ್ಠ 1 2 3 4
ಚಿತ್ತ 3 4
ಸ್ವಾತಿ 1 2 3 4
ವಿಶಾಖ 1 2 3
ಉತ್ತರ 2 3 4
ಹಸ್ತ 1 2 3 4
ಚಿತ್ತ 1 2
ಧನಸ್ಸು
ವೃಶ್ಚಿಕ
ತುಲಾ
ಕನ್ಯಾ

**54ನೇ ಚಿತ್ರ**

2008ನೇ ವರ್ಷ ಜುಲೈ 2ನೇ ದಿನಾಂಕದಂದು ಧನಿಷ್ಟ 1ನೇ ಪಾದ ರಾಹು ರಾತ್ರಿ 11.00 ಗಂಟೆಗಳಿಗೆ

2008ನೇ ವರ್ಷ ಜುಲೈ 2ನೇ ದಿನಾಂಕದಂದು ಆಶ್ಲೇಷ 3ನೇ ಪಾದ ಕೇತು ರಾತ್ರಿ 11.00 ಗಂಟೆಗಳಿಗೆ

ಎಂದು ಪಂಚಾಂಗದಲ್ಲಿ ಇದೆ. ಅದರ ಪ್ರಕಾರ ಜುಲೈ 2ನೇ ತಾರೀಖು ರಾತ್ರಿ 11.00 ಗಂಟೆಗಳ ಸಮಯದಲ್ಲಿ ರಾಹು ಗ್ರಹ ಕಾಲಚಕ್ರದಲ್ಲಿ ಧನಿಷ್ಟ 1ನೇ ಪಾದದೊಳಗೆ ರಾತ್ರಿ 11 ಗಂಟೆಗಳಿಗೆ ಪ್ರವೇಶಿಸಿದ್ದಾನೆ. ಅದೇ ಸಮಯದಲ್ಲಿ ಒಂದೇ ವೇಗವಿರುವ ಕೇತುಗ್ರಹ ಅದಕ್ಕೆ ಪೂರ್ತಿ ಎದುರಾಗಿರುವ ಆಶ್ಲೇಷ 3ನೇ ಪಾದದೊಳಗೆ ಕೇತು ಪ್ರವೇಶಿಸಿದ್ದಾನೆ. ಹಾಗೆ ಇಬ್ಬರೂ ಒಂದೇ ಬಾರಿ ಪಾದಗಳು ದಾಟುವುದರಿಂದ ಅವರ ಮಧ್ಯೆ ದೂರ ಕೂಡಾ ಬದಲಾಗಲಿಲ್ಲವೆಂದು ತಿಳಿದಿದೆ.

ಜುಲೈ 2ನೇ ತಾರೀಖಿನಂದು ಒಂದೇ ಸಮಯದಲ್ಲಿ ರಾಹು ಕೇತುಗಳು ತಮ್ಮ ಸ್ಥಾನಗಳು ಬದಲಾದಂತೆ ತಿಳಿದಿದೆ. ನಂತರ 2 ತಿಂಗಳ 18 ದಿನಗಳಿಗೆ ಅಂದರೆ ಸೆಪ್ಟೆಂಬರ್ 20 ನೇ ತಾರೀಖು ಸಂಜೆ 5–30ಕ್ಕೆ ರಾಹು ಶ್ರವಣ 4ನೇ ಪಾದದೊಳಗೆ ಹೋಗಿದ್ದಾನೆ. ಅದೇ ದಿನ ಅದೇ ಸಮಯಕ್ಕೆ ಕೇತುವು ಆಶ್ಲೇಷ 2ನೇ ಪಾದದೊಳಗೆ ಹೋಗಿದ್ದಾನೆ. ಅದನ್ನು ಕಾಲಚಕ್ರದಲ್ಲಿ ಗಮನಿಸಿರಿ.

ಸೂರ್ಯಗ್ರಹ ಜೂನ್ 14ನೇ ತಾರೀಖಿನಂದು ಬೆಳಗಿನಜಾವ 4–19 ನಿ॥ ಮೃಗಶಿರ 3ನೇ ಪಾದದಲ್ಲಿ ಮಿಥುನದಲ್ಲಿ ಪ್ರವೇಶಿಸಿದ್ದಾನೆ. ಸೂರ್ಯನು ಮೃಗಶಿರ 3ನೇ ಪಾದದಲ್ಲಿ ಪ್ರವೇಶಿಸಿದರೂ ಬೆ॥ 4–19 ನಿಮಿಷಗಳಿಗೇ ಭೂಮಿ ಸೂರ್ಯನಿಗೆ ಸಮಾನವಾಗಿ ತಿರುಗುತ್ತಾ ಮೂಲ 1ನೇ ಪಾದದಲ್ಲಿ ಧನುರ್‌ಲಗ್ನದಲ್ಲಿ ಪ್ರವೇಶಿಸಿದೆ. ಇದನ್ನು ಸಹ ಕಾಲಚಕ್ರ ಕುಂಡಲಿಯಲ್ಲಿ ಗುರುತಿಸಿದ್ದೇವೆ ನೋಡಿರಿ.

ಮಿತ್ರ, ಚಿತ್ರ, ಭೂಮಿ ವೊಂದರ ಗಮನಗಳು ಕಾಲಚಕ್ರದಲ್ಲಿ ಹೇಗೆ ಇರುವುದು ನಮಗೆ ತಿಳಿಯಬೇಕು. ಪಂಚಾಂಗ ಇಲ್ಲದಿದ್ದರೂ ಆ ಮೂರು ಗ್ರಹಗಳ ಗಮನಗಳು ತಿಳಿಯುವುದು ಬಹಳ ಸುಲಭವಾದ ಕೆಲಸ. ಭೂಮಿ ಯಾವಾಗಲೂ ಸೂರ್ಯನಿಗೆ ಎದುರಾಗಿ ಪ್ರಯಾಣಿಸುತ್ತಾ ಸಮಾನದೂರವಾಗಿ ಇದೆ. ಕಾಲಚಕ್ರದಲ್ಲಿ ಸೂರ್ಯನದ್ದು ಎಷ್ಟು ವೇಗವೋ ಭೂಮಿಯದ್ದು ಸಹ ಅಷ್ಟೇ ವೇಗ ಇದೆ. ಆದ್ದರಿಂದ ಸೂರ್ಯನು ಯಾವ ಸಮಯದಲ್ಲಿ ಲಗ್ನ ಬದಲಾಗುತ್ತಿದ್ದಾನೋ ಅದೇ ಸಮಯದಲ್ಲಿ ಭೂಮಿ ಕೂಡಾ ಲಗ್ನ ಬದಲಾಗುತ್ತಿದೆ. ಮೇಲೆ ಸೂರ್ಯನು ಮಿಥುನ ಲಗ್ನದಲ್ಲಿ ಮೃಗಶಿರ 3ನೇ ಪಾದದಲ್ಲಿ ಪ್ರವೇಶಿಸಿದರೂ 4–19 ನಿಮಿಷಗಳಿಗೇ ಭೂಮಿ ಧನುರ್ ಲಗ್ನದಲ್ಲಿ ಮೂಲ ನಕ್ಷತ್ರ 1ನೇ ಪಾದದಲ್ಲಿ ಪ್ರವೇಶಿಸಿದೆ. ಈ ಪದ್ಧತಿ ಶಾಶ್ವತವಾಗಿ ಇರುವುದು ಆದ್ದರಿಂದ ಸೂರ್ಯನ ವಿಷಯವನ್ನು ಪಂಚಾಂಗದ ಮೂಲಕ ತಿಳಿದುಕೊಂಡು ಅದಕ್ಕೆ ವಿರುದ್ಧವಾಗಿ ಭೂಮಿ ಇದ್ದಂತೆ ಗುರುತಿಸಿಕೊಳ್ಳಬಹುದು. ಮಿತ್ರ, ಚಿತ್ರ ವಿಷಯದಲ್ಲಿ ಕೂಡಾ ಹಾಗೆಯೇ ಮಾಡಬಹುದು. ರಾಹು, ಕೇತು ಸಮಾನ ದೂರದಲ್ಲಿ ಸಮಾನ ವೇಗದಿಂದ ಪ್ರಯಾಣಿಸುತ್ತಿದ್ದಾರೆ. ಅವರ ಹಾಗೇ (ರಾಹು, ಕೇತು ಹಾಗೇ) ಮಿತ್ರ, ಚಿತ್ರ ಸಮಾನ ದೂರದಿಂದ, ಸಮಾನ ವೇಗದಿಂದ ಪ್ರಯಾಣಿಸುತ್ತಿದ್ದಾರೆ. ಆದ್ದರಿಂದ ಆ ಎರಡು ಗ್ರಹಗಳನ್ನು ಕೂಡಾ ಸುಲಭವಾಗಿ ಗುರುತಿಸಬಹುದು. ರಾಹುವಿನ ಕೆಳಗಿನ ಪಾದದಲ್ಲಿ ಚಿತ್ರ, ಕೇತು ಕೆಳಗಿನ ಪಾದದಲ್ಲಿ ಮಿತ್ರ ಗ್ರಹಗಳು ಇವೆ. ಆದ್ದರಿಂದ ರಾಹುವನ್ನು ಆಧಾರ ಮಾಡಿಕೊಂಡು ಚಿತ್ರ ಗ್ರಹವನ್ನು, ಕೇತುವನ್ನು ಆಧಾರ ಮಾಡಿಕೊಂಡು ಮಿತ್ರ ಗ್ರಹವನ್ನು ಗುರುತಿಸಿಕೊಳ್ಳಬಹುದು. ಈ ಮೂರು ಗ್ರಹಗಳಿಗೆ ಪ್ರತ್ಯೇಕಿಸಿ ಪಂಚಾಂಗಗಳು ಇಲ್ಲಿಯವರೆಗು ಇಲ್ಲ. ಭವಿಷ್ಯತ್ತಿನಲ್ಲಿ ಪಂಚಾಂಗಕರ್ತರು ಈ ಗ್ರಹಗಳನ್ನು ಕೂಡಾ ತಮ್ಮ ಪಂಚಾಂಗಗಳಲ್ಲಿ ಬರೆದುಕೊಳ್ಳಬಹುದು. ಪಂಚಾಂಗಗಳಲ್ಲಿ ಸೂರ್ಯ, ರಾಹು, ಕೇತು ಗುರುತಿಸಲ್ಪಟ್ಟಿರುವುದರಿಂದ ಅವರನ್ನು ನೋಡಿ ಭೂಮಿ, ಚಿತ್ರ, ಮಿತ್ರ ಗ್ರಹಗಳನ್ನು ಗುರುತಿಸಿಕೊಳ್ಳಬಹುದೆಂದು ತಿಳಿಸುತ್ತಿದ್ದೇವೆ.

# 46 ಜಾತಕನ ಜಾಘತಕ

ಇಲ್ಲಿಯವರೆಗು ಜ್ಯೋತಿಷ್ಯದ ಪ್ರಕಾರ ಜಾತಕವನ್ನು (ಜಾಘತಕವನ್ನು) ತಿಳಿದುಕೊಳ್ಳುವ ನಿಮಿತ್ತ ಬೇಕಾದ ಸೂತ್ರಗಳೆಲ್ಲವನ್ನೂ ವಿವರಿಸಿಕೊಂಡಿದ್ದೇವೆ. ಈದಿನ ಯಾವ ಮನುಷ್ಯನಿಗಾದರೂ ಹುಟ್ಟಿದ ದಿನಾಂಕ, ಹುಟ್ಟಿದ ಸಮಯವನ್ನು ಕೊಟ್ಟರೇ ಕಂಪ್ಯೂಟರ್‌ನಲ್ಲಿ ಮೊದಲೇ ಸೆಟ್ ಮಾಡಲಾಗಿರುವ ಜಾತಕ ಹೊರಬೀಳುತ್ತದೆ. ಪೂರ್ವಕಾಲದಲ್ಲಿ ಹುಟ್ಟಿದ ದಿನಕ್ಕೆ ಸಂಬಂಧಿಸಿದ ಆ ಸಂವತ್ಸರ ಪಂಚಾಂಗವನ್ನು ತೆಗೆದುಕೊಂಡು ನೋಡಿ ಅದರಿಂದ ಜಾತಕವನ್ನು ತೆಗೆದುಕೊಳ್ಳಬೇಕಾಗಿತ್ತು. ಜನ್ಮಲಗ್ನಕ್ಕಾಗಿ, ದಶಾ ಸಂವತ್ಸರಕ್ಕಾಗಿ ಸ್ವಲ್ಪ ಗಣಿತವನ್ನು ಉಪಯೋಗಿಸಿ ಲೆಕ್ಕಾಚಾರದ ಪ್ರಕಾರ ಬರೆದುಕೊಳ್ಳಬೇಕಾಗಿತ್ತು. ಅದಕ್ಕಾಗಿ ಜ್ಯೋತಿಷ್ಯರು 100 ವರ್ಷಗಳವರೆಗು ಹಳೆ ಪಂಚಾಂಗಗಳನ್ನು ತಮ್ಮ ಹತ್ತಿರ ಬಚ್ಚಿಟ್ಟುಕೊಳ್ಳುತ್ತಿದ್ದರು. ಜಾತಕ ಲಗ್ನಗಳನ್ನು ಬರೆಯುವುದಕ್ಕೆ ಒಂದು ವಾರದವರೆಗು ಹಿಡಿಯುತ್ತಿತ್ತು. ಈ ದಿನ ಅಂತಹ ಅವಶ್ಯ ಇಲ್ಲದಂತೆ ಐದು ನಿಮಿಷಗಳಲ್ಲಿ ಜಾತಕ ಲಗ್ನ ಲಭಿಸುತ್ತಿದೆ. ಇದೆಲ್ಲವೂ ಸರ್ವಸಾಧಾರಣವಾಗಿ ನವಗ್ರಹಗಳ ಜಾತಕಗಳೇ ಕಂಪ್ಯೂಟರ್‌ನಲ್ಲಿ ಲಭಿಸುತ್ತಿವೆ. ನಾವು ಈ ಗ್ರಂಥದಲ್ಲಿ ಹನ್ನೆರಡು ಗ್ರಹಗಳನ್ನು ಹೇಳಿದ್ದೇವೆ. ಆದ್ದರಿಂದ ಅವುಗಳನ್ನು ಅನುಸಂಧಾನಮಾಡಿ ಉಳಿದ ಸೂತ್ರಗಳನ್ನು ಹೇಳಬೇಕಾಗಿ ಬಂದಿದೆ. ಇಲ್ಲಿಯವರೆಗು ನಾವು ಹೇಳಿದ ಸೂತ್ರಗಳನ್ನು ಉಪಯೋಗಿಸಿ ಒಬ್ಬ ಜಾತಕನಿಗೆ ಜೀವನ ಹೇಗಿರುತ್ತದೋ ತಿಳಿಯುವುದಕ್ಕೆ ಉದಾಹರಣೆಗೆ ಯಾವುದೋ ಒಬ್ಬರ ಜಾತಕವನ್ನು ತೆಗೆದುಕೊಂಡು ಹೇಳಬೇಕು. ಯಾರಿಗೂ ತಿಳಿಯದ ಮನುಷ್ಯನವೊಂದು ಜಾತಕವನ್ನು ಕುರಿತು ಹೇಳಿದರೆ ಅದು ನಿಜವೆಷ್ಟೋ ಅಸತ್ಯವೆಷ್ಟೋ ತಿಳಿದಿಲ್ಲ. ಕೆಲವರಿಗೆ ತಿಳಿದ ವ್ಯಕ್ತಿ ಜಾತಕವನ್ನು ಕುರಿತು ಹೇಳಿದರೆ ಅದರಲ್ಲಿ ಸತ್ಯಾಸತ್ಯಗಳು ಕೆಲವಾದರೂ ತಿಳಿಯುತ್ತವೆನ್ನುವ ಉದ್ದೇಶದಿಂದ ಬಹಳ ಜನರಿಗೆ ತಿಳಿದ ಒಬ್ಬ ವ್ಯಕ್ತಿ ಜಾತಕವನ್ನು ಕುರಿತು ವಿವರಿಸಬೇಕೆಂದುಕೊಂಡಿದ್ದೇನೆ.

ವಾಸ್ತವವಾಗಿ ನಾನು ಜ್ಯೋತಿಷ್ಯನು ಅಲ್ಲ. ಆದ್ದರಿಂದ ನಾನು ಯಾರಿಗೂ ಜ್ಯೋತಿಷ್ಯವನ್ನು ಹೇಳುವುದಿಲ್ಲ. ಹಾಗೆಯೇ ಸ್ವಲ್ಪಮಟ್ಟಿಗೆ ವೈದ್ಯವನ್ನು ಕುರಿತು ತಿಳಿದರೂ ನಾನು ವೈದ್ಯನು ಅಲ್ಲ ಚಿಕಿತ್ಸೆ ಮಾಡುವುದಿಲ್ಲ ಆದರೆ, ಆಪತ್ತಿನಲ್ಲಿರುವ ವರು ಬಂದು ಕೇಳಿದರೇ ಅವರಿಗೆ ಸಲಹೆ ಹೇಳಿ ಕಳುಹಿಸುತ್ತಿದ್ದೆನು. ರೋಗವನ್ನು ಕುರಿತು ವಿವರಿಸಿ ಹೇಳಿ ಔಷಧವನ್ನು ಕುರಿತು ಸಲಹೆ ಮಾತ್ರ ಹೇಳುತ್ತಿದ್ದೆನು. ಎಷ್ಟು ಜನರಿಗೆ ರೋಗಗಳು ಹೋಗಿವೆ ಎನ್ನುವುದು ನನಗೆ ತಿಳಿದಿಲ್ಲ ಆದರೆ, ನನಗೆ ಸಲಹೆ ಹೇಳುವುದು ಮಾತ್ರವೇ ತಿಳಿದಿದೆ. ಇಲ್ಲಿ ಮುಖ್ಯವಾಗಿ ಹಿಂದೂ ಸಮಾಜಕ್ಕೆ ಸಂಬಂಧಿಸಿದ ಜ್ಯೋತಿಷ್ಯವು ಕೆಲವರಿಂದ ಅವಹೇಳನ ಮಾಡಲ್ಪಡುತ್ತಿ ರುವುದರಿಂದ ಅಂತಹ ಸ್ಥಿತಿಯಿಂದ ಹೊರಬೀಳುವುದಕ್ಕೆ, ಜ್ಯೋತಿಷ್ಯವೊಂದರ ಬೆಲೆ ಹತ್ತುಮಂದಿಗೆ ತಿಳಿಯುವುದಕ್ಕೆ ನಾವು ಈ ಜ್ಯೋತಿಷ್ಯ ಗ್ರಂಥವನ್ನು ಬರೆಯಬೇಕೆಂದುಕೊಂಡಿದ್ದೇವೆ, ಬರೆದಿದ್ದೇವೆ. ಜ್ಯೋತಿಷ್ಯ ಸತ್ಯವಾ ಅಲ್ಲವಾ ಎಂದು ನಾನು ಪರಿಶೋಧಿಸಿ ಸತ್ಯವೇಯೆಂದು ತಿಳಿದುಕೊಂಡನಂತರ, ಅನುಭವಗಳನ್ನು ನಾನು ನೋಡಿದ ನಂತರ ಇಷ್ಟು ದೊಡ್ಡದಾಗಿ ಇರುವುದನ್ನು ಕುರಿತು ಸ್ವಲ್ಪವಾದರೂ ಇತರರು ತಿಳಿಯುವುದು ಒಳ್ಳೆಯದೆನ್ನುವ ಭಾವದಿಂದ ಜ್ಯೋತಿಷ್ಯದಲ್ಲಿನ ಹೊಸ ವಿಷಯಗಳನ್ನು ಕುರಿತು ಹೇಳುವುದು ನಡೆದಿದೆ. ಜ್ಯೋತಿಷ್ಯ ತಿಳಿದುಕೊಳ್ಳುವುದಕ್ಕೆ ಮಾತ್ರವೇ ಹೊರತು, ಮುಂಬರುವುದನ್ನು ತಿಳಿದುಕೊಂಡು ತಪ್ಪಿಸಿಕೊಳ್ಳುವುದಕ್ಕೆ ಅಲ್ಲ. ತಿಳಿದುಕೊಂಡಷ್ಟು ಮಾತ್ರಕ್ಕೆ ಮುಂಬರುವ ಆಪತ್ತನ್ನು ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಆಪತ್ತು ನಡೆಯದಂತೆ ಇರುವುದಕ್ಕೆ ಶಾಂತಿಗಳು ಮಾಡಬಹುದೆಂದು ಕೆಲವರೆನ್ನುತ್ತಿರುತ್ತಾರೆ. ಅದೆಲ್ಲವೂ ಕೇವಲ ಭ್ರಮೆ ಮಾತ್ರವೆ. ಜಾತಕರೀತಿ ಏನು ನಡೆಯಬೇಕೆಂದು ನಿರ್ಣ ಯಿಸಲ್ಪಟ್ಟಿರುತ್ತದೋ ಅದು ನಡೆದೇ ತೀರುತ್ತದೆ. ಪ್ರಪಂಚ ಕಾರ್ಯಗಳಿಂದ ಏನು ಮಾಡಿದರೂ ನಡೆಯುವುದು ನಡೆಯದೆ ಇರುವುದಿಲ್ಲ. ಕರ್ಮದಿಂದ ತಪ್ಪಿಸಿಕೊಳ್ಳಬೇಕೆಂದರೆ ಒಂದು ಜ್ಞಾನ ಹೊರತು ಮತ್ಯಾವುದೂ ಇಲ್ಲ. ಜ್ಞಾನದಿಂದ ಕರ್ಮ ಸುಟ್ಟುಹೋಗುತ್ತದೆಂದು ಮೊದಲೇ ಹೇಳಿಕೊಂಡಿದ್ದೇವೆ. ಜ್ಞಾನ

ಸಂಬಂಧವಿಲ್ಲದೆ ಕರ್ಮ ಹೋಗುವುದಿಲ್ಲ ಎನ್ನುವುದಕ್ಕೆ ನನ್ನ ಅನುಭವದಲ್ಲಿ ಒಂದು ವಿಷಯವನ್ನು ನೋಡೋಣ.

1994 ನೇ ಸಂವತ್ಸರ ನನಗೆ ಪರಿಚಯವಿರುವ ವ್ಯಕ್ತಿಯವೊಂದು ಜಾತಕವನ್ನು ನೋಡುವುದು ನಡೆದಿದೆ. ಆ ದಿನ ಆತನು ತನ್ನ ಜಾತಕವನ್ನು ನೋಡೆಂದು ನನ್ನನ್ನು ಕೇಳಲಿಲ್ಲ. ಆದರೂ ನಾನೇ ಕೇಳಿ ಆತನು ಹುಟ್ಟಿದ ದಿನವನ್ನೂ, ಹುಟ್ಟಿದ ಸಮಯವನ್ನೂ ತಿಳಿದುಕೊಂಡಿದ್ದೇನೆ. ನಾನು ಯಾವ ವಿಷಯದಲ್ಲಿಯೂ ಹೊರಬೀಳುವುದಿಲ್ಲ. ಆ ದಿನ ನಾನೇ ಏಕೆ ಆತನು ಹುಟ್ಟಿದ ದಿನಾಂಕವನ್ನು (ಡೇಟ್ ಆಫ್ ಬರ್ತ್) ಕೇಳಿದ್ದೇನೋ ನನಗೆ ತಿಳಿದಿಲ್ಲ. ನಂತರ ಆ ಡೇಟ್ ಪ್ರಕಾರ ಜಾತಕವನ್ನು ನೋಡಿ ಆತನ ಜಾತಕವೆಲ್ಲಾ ಚೆನ್ನಾಗಿದೆ ಎಂದು ತಿಳಿದುಕೊಂಡಿದ್ದೇನೆ. ಆದರೆ ಆತನು ಪ್ರಮಾದದಲ್ಲಿ ಅಕಾಲ ಮರಣ ಹೊಂದುವನೆಂದು ತಿಳಿದುಕೊಂಡಿದ್ದೇನೆ. ನನಗೆ ಪರಿಚಯವಿರುವ ಒಬ್ಬ ಒಳ್ಳೆಯ ವ್ಯಕ್ತಿ ಹಾಗೆ ಮರಣಿಸುವನೆಂದು ತಿಳಿಯುವುದು ಕಷ್ಟಕರವೇ, ಆದರೂ ಕರ್ಮವನ್ನು ಯಾವ ಪ್ರಪಂಚ ಶಾಂತಿಗಳಿಂದಾಗಲೀ, ಅನುಭವಿಸದಂತೆ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲ. ಭಗವಂತನು ಹೇಳಿರುವುದರ ಪ್ರಕಾರ ಎಂತಹ ಕರ್ಮವನ್ನಾದರೂ ಜ್ಞಾನದ ಮುಖಾಂತರ ಅದರಿಂದ ತಪ್ಪಿಸಿಕೊಳ್ಳಬಹುದು. ಆದರೇ ಕರ್ಮವಿರುವ ಜಾತಕನಿಗೆ ಜ್ಞಾನ ಇರಬೇಕಲ್ಲವೆ! ಒಂದು ವೇಳೆ ನಾನು ಪ್ರಮಾದವನ್ನು ಕುರಿತು ಹೇಳಿದರೂ ಆ ವ್ಯಕ್ತಿ ನನ್ನ ಮಾತು ಕೇಳುವನೆಂಬ ನಂಬಿಕೆ ಇಲ್ಲ. ಆದ್ದರಿಂದ ಆ ವಿಷಯವನ್ನು ಹಾಗೆಯೇ ಬಿಟ್ಟುಹಾಕಿದ್ದೇವೆ. ಆತನ ಪ್ರಮಾದವನ್ನು ಕುರಿತು ನನಗೆ ಪರಿಚಯವಿರುವ ಅವರೊಂದಿಗೆ ಹೇಳುವುದು ನಡೆದಿದೆ. ಪ್ರಮಾದ ವಿಷಯ ಜ್ಯೋತಿಷ್ಯಶಾಸ್ತ್ರದಿಂದ ತಿಳಿದುಕೊಂಡರೂ, ಆ ಪ್ರಮಾದ ಯಾವುದರಿಂದ ನಡೆಯುತ್ತದೆಂದಾಗಲೀ, ಖಚಿತವಾಗಿ ಯಾವಾಗ ನಡೆಯುತ್ತದೆಂದಾಗಲೀ, ನನಗೂ ಸಹ ತಿಳಿದಿಲ್ಲ. ಮೇಲಾಗಿ ಜ್ಯೋತಿಷ್ಯದ ಮೇಲೆ ನನಗೆ ಸ್ವಲ್ಪಮಟ್ಟಿಗೆ ನಂಬಿಕೆಯಿದ್ದರೂ, ನಾನು ತಿಳಿದುಕೊಂಡಿರುವುದು ವಾಸ್ತವವೇನಾ ಎಂದು ನನಗೇ ಸ್ವಲ್ಪ ಅನುಮಾನವಿತ್ತು. ಆದರೂ ನನ್ನಲ್ಲಿ ಒಂದು ಕಡೆ ಜ್ಯೋತಿಷ್ಯ ಅಸತ್ಯವಲ್ಲ ಎನಿಸುತ್ತಿತ್ತು.

ನಾನು ಎಲ್ಲೂ ಹೊರಗೆ ತಿರುಗಾಡುವುದಿಲ್ಲ, ಯಾರೊಂದಿಗೂ ಹೆಚ್ಚಾಗಿ ಸಂಬಂಧ ಇಟ್ಟುಕೊಳ್ಳುವುದಿಲ್ಲ. ಈಗಲೂ ಕೂಡಾ ನನ್ನ ಗ್ರಂಥಗಳು ಹೆಚ್ಚಾಗಿ ಸಮಾಜದಲ್ಲಿ ಪ್ರಚಾರವಾದರೂ ನಾನು ಯಾರೋ ಸಹ ಬಹಳ ಜನರಿಗೆ ತಿಳಿದಿಲ್ಲ. ಅಂತಹ ನಾನು ನಂತರ 2002 ನೇ ವರ್ಷ ನನ್ನ ಹಿಂದೆ ಜಿಹ್ವಾನಂದಸ್ವಾಮಿ ಬಂದಾಗ ಇಬ್ಬರು ಸೇರಿ ಆ ಜಾತಕನ ಹತ್ತಿರಕ್ಕೆ ಹೋಗಿ ಆ ವರ್ಷ ಆಗಷ್ಟ್ ತಿಂಗಳಲ್ಲಿ ನಡೆಯುವ ಕೃಷ್ಣಾಷ್ಟಮಿ ಸಂದರ್ಭವಾಗಿ ನಡೆಯುವ ಆಧ್ಯಾತ್ಮಿಕ ಸಭೆಯಲ್ಲಿ ನಾವು ಬರೆದ ಒಂದು ಗ್ರಂಥವನ್ನು ಉದ್ಘಾಟನೆ ಮಾಡಬೇಕೆಂದು ಕರೆದಿದ್ದೇವೆ. ಆಗ ಆತನು "ನಾನು ಮತ ಸಂಬಂಧವಾದ ಸಭೆಗಳಿಗೆ ಬರುವುದಿಲ್ಲ" ಎಂದು ಹೇಳುವುದು ನಡೆದಿದೆ. ಅಷ್ಟಕ್ಕೆ ನಾವು ಹಿಂತಿರುಗಿ ಬಂದೆವು. ಆಗ ನನ್ನ ಪಕ್ಕದಲ್ಲಿರುವ ಮನುಷ್ಯನೊಂದಿಗೆ "ಇದು ದೇವರಿಗು ದೇವರ ಜ್ಞಾನಕ್ಕೂ ಸಂಬಂಧಿಸಿದ ಸಭೆ. ಗ್ರಂಥವೂ ಸಹ ಅಂಥಾದ್ದೇ. ಈ ಸಭೆಗೆ ಬಂದಿದ್ದರೇ ಆತನ ಕರ್ಮದಲ್ಲಿ ಸ್ವಲ್ಪ ಬದಲಾವಣೆ ಬರುತ್ತಿತ್ತು" ಎಂದು ಹೇಳಿದ್ದೇವೆ. ಅಲ್ಲಿಗೆ ಆ ವಿಷಯವನ್ನು ನಾವು ಮರೆತುಹೋಗಿದ್ದೇವೆ. ನಂತರ ಕೆಲವು ವರ್ಷಗಳಿಗೆ 2008 ನೇ ಸಂ॥ದಲ್ಲಿ ಆತನು ಪ್ರಯಾಣಿಸುವ ಹೆಲಿಕ್ಯಾಪ್ಟರ್ ಸೇರಬೇಕಾದ ಸ್ಥಳಕ್ಕೆ ಸೇರಲಿಲ್ಲ, ಏನು ನಡೆದಿದೆಯೋ ಎಂದು ಕೆಲವರಂದುಕೊಳ್ಳುವುದನ್ನು ಆಳ್ಳಗಡ್ಡೆ ಎಂಬ ಊರಿನ ಹೋಟಲ್‌ನಲ್ಲಿ ಭೋಜನ ಮಾಡುತ್ತಾ ಕೇಳಿದೆವು. ಆಗ ನನ್ನ ಹಿಂದೆ ಹತ್ತುಮಂದಿ ನನಗೆ ಭಕ್ತರಾದವರೇ ಇದ್ದಾರೆ. ಆಗ ನನ್ನ ತಲೆಯಲ್ಲಿ 1994 ನೆ ಸಂವತ್ಸರದಲ್ಲಿ ನೋಡಿದ ಜಾತಕ ಜ್ಞಾಪಕ ಬಂದಿತು. ನನಗೆ ಆತನ ಪ್ರಯಾಣ ವಾರ್ತೆ ಸುಮಾರು 1–20 ನಿಮಿಷಗಳ ಸಮಯದಲ್ಲಿ ತಿಳಿದಿದೆ. ಒಂದು ನಿಮಿಷ ಆಲೋಚಿಸಿ ಅದು ನಾವು ಜಾತಕದಲ್ಲಿ ನೋಡಿದ ಪ್ರಮಾದವೇ ಆಗಿರುತ್ತದೆಂದುಕೊಂಡು, ಆ ವಿಷಯವನ್ನು ನನ್ನ ಪಕ್ಕದಲ್ಲೇ ಇರುವ ನಮ್ಮವರಿಗೆ ಹೇಳುವುದು ನಡೆದಿದೆ. ನಾನು ಯಾವುದು ಅನವಶ್ಯಕವಾಗಿ ಹೇಳುವುದಿಲ್ಲವೆಂದು ತಿಳಿದ ನಮ್ಮ ಭಕ್ತರು ನಾನು ಹೇಳಿದ ಮಾತನ್ನು ಪೂರ್ತಿ ವಿಶ್ವಾಸಿಸಿದ್ದಾರೆ. ಆತನಿಗೆ ಪ್ರಮಾದ

ನಡೆದಿದೆಯೆಂದು ಎರಡನೆ ದಿನದವರೆಗು ತಿಳಿಯದಿದ್ದರೂ ನಾವು ಮಾತ್ರ ಮೊದಲೇ ಅದು ಪ್ರಮಾದವೇ ಆಗಿರುತ್ತದೆಂದು, ಜಾತಕದ ಪ್ರಕಾರ ನಡೆದಿದೆಯೆಂದು ನಾವು ಅಂದುಕೊಂಡಿದ್ದೇವೆ. ಈ ಸಂಘಟನೆಯಿಂದ ಜ್ಯೋತಿಷ್ಯವು ಪೂರ್ತಿ ಸತ್ಯವೆಂದು ನಾವು ತಿಳಿದುಕೊಂಡಿದ್ದೇವೆ. ನನಗೆ ಸತ್ಯವೆಂದು ತಿಳಿದ ನಂತರ ಅದೇ ವಿಷಯವನ್ನೇ ಹೊರಗೆ ಜ್ಯೋತಿಷ್ಯ ಸತ್ಯವೆಂದು ಹೇಳುತ್ತಿದ್ದೇವೆ.

ನನಗೆ ತಿಳಿದ ಜ್ಯೋತಿಷ್ಯದ ಪ್ರಕಾರ, ಇಲ್ಲಿಯವರೆಗೂ ಈ ಗ್ರಂಥದಲ್ಲಿ ಬರೆದ ಹನ್ನೆರಡು ಗ್ರಹಗಳನ್ನು ಉಪಯೋಗಿಸಿ ಈಗೊಂದು ಜಾತಕವನ್ನು ವಿವರಿಸುತ್ತೇನೆ ನೋಡಿರಿ. ಈ ಜಾತಕನು ಹುಟ್ಟಿದ ದಿನಾಂಕ, ಹುಟ್ಟಿದ ಕಾಲವನ್ನು ನೋಡಿದರೆ ಹೀಗೆ ಇದೆ. 21ನೇ ತಾರೀಖು, ಡಿಸೆಂಬರ್ 1972 ಗುರುವಾರ ರಾತ್ರಿ 1–30 A.M. ಸಮಯದಲ್ಲಿ ಜಮ್ಮಲಮಡುಗು ಪ್ರಾಂತದಲ್ಲಿ ಜನ್ಮಿಸಿದಂತೆ ಇದೆ. ಈತನು ಜನ್ಮಿಸಿದ ಸಮಯದಲ್ಲಿ ಪ್ರಾರಬ್ಧಕರ್ಮ ಹೇಗೆ ನಿರ್ಣಯಿಸಲ್ಪಟ್ಟಿದೆಯೋ, ಆತನ ಜನ್ಮದಲ್ಲಿ ಮೊದಲೇ ನಿರ್ಣಯಿಸಲ್ಪಟ್ಟಿರುವ ಜಾಪಥಕ ಎನ್ನುವ ಜೀವಿತ ಪಥಕ ಏನೆಂದು ನೋಡುವುದಕ್ಕೆ ಮೊದಲು ಖಗೋಳದಲ್ಲಿ ಆ ಸಮಯಕ್ಕೆ ಹನ್ನೆರಡು ಗ್ರಹಗಳು ಯಾವುದು ಎಲ್ಲಿದೆಯೋ ತಿಳಿದುಕೊಳ್ಳಬೇಕು. ಹಾಗೆ ತಿಳಿದುಕೊಳ್ಳುವುದೆ ಅಲ್ಲದೆ ಸೂರ್ಯನ ಕಿರಣಗಳು ಕರ್ಮಚಕ್ರದ ಮೇಲೆ ಯಾವ ಭಾಗದಲ್ಲಿ ಬೀಳುತ್ತಿವೆಯೋ ತಿಳಿಯಬೇಕು. ಇದೆಲ್ಲವೂ ನಾವು ಪಂಚಾಗದಿಂದ ಗ್ರಹಿಸಬೇಕಾಗಿದೆ. ಆದರೂ ಈ ಕಾಲದಲ್ಲಿ ಅಂತಹ ಶ್ರಮ ಯಾರಿಗೂ ಅಗತ್ಯವಿಲ್ಲ. ಎಲ್ಲಾ ಲೆಕ್ಕಗಳನ್ನು ಕಂಪ್ಯೂಟರ್ ಮಾಡಿ ನಮಗೆ ಜಾತಕನ ಜನ್ಮ ಲಗ್ನ, ಜಾತಕನಿಗೆ ಗ್ರಹಗಳು ಯಾವ ಯಾವ ಲಗ್ನಗಳಲ್ಲಿ ಯಾವ ಯಾವ ನಕ್ಷತ್ರಗಳಲ್ಲಿ ಇವೆಯೋ, ಹಾಗೆಯೇ ನಕ್ಷತ್ರವೊಂದರ ಎಷ್ಟನೇ ಪಾದದಲ್ಲಿ ಗ್ರಹವಿದೆಯೋ ಸುಲಭವಾಗಿ ತಿಳಿಯುತ್ತಿದೆ. ಅಷ್ಟೇ ಅಲ್ಲದೆ ಹುಟ್ಟಿದ ಸಮಯದಲ್ಲಿ ಜಾತಕನು ಯಾವ ದಶಯಲ್ಲಿದ್ದಾನೋ, ಮುಂಬರುವ ದಶಗಳು ಯಾವುವೋ ಸಹ ತಿಳಿಯುತ್ತಿದೆ.

ಒಂದು ಜಾತಕವನ್ನು ನೋಡಬೇಕಾಗಿ ಬಂದಾಗ ಜ್ಯೋತಿಷ್ಯನು ಆತನು ಹುಟ್ಟಿದ (ಜಾತಕನು ಹುಟ್ಟಿದ) ಕಾಲವನ್ನು ಆಧಾರ ಮಾಡಿಕೊಂಡು ಮೊದಲು ಲಗ್ನ ಕುಂಡಲಿಯಲ್ಲಿರುವ ಹನ್ನೆರಡು ಲಗ್ನಗಳಲ್ಲಿ ಯಾವ ಲಗ್ನ ಜನ್ಮಲಗ್ನ ವಾಗುತ್ತಿದೆಯೋ ತಿಳಿಯಬೇಕು. ಜನ್ಮ ಲಗ್ನವನ್ನು ತಿಳಿಯುವುದಕ್ಕೆ ಜಾತಕನು ಹುಟ್ಟಿದ ಸಮಯ 1972–12–21ನೇ ತಾರೀಖು ರಾತ್ರಿ 1–30 ನಿಮಿಷಗಳಿಗೆ ಆದಾಗ ಆ ದಿನ ಸೂರ್ಯೋದಯ 6–42 ನಿ॥ಗಳಿಗೆ ನಡೆದಿದೆ. ಪಂಚಾಂಗದ ಪ್ರಕಾರ ಆ ದಿನ ಸೂರ್ಯನು ಮೂಲ ಎರಡನೆ ಪಾದದಲ್ಲಿ ಇರುವುದರಿಂದ ಮೂಲ ನಕ್ಷತ್ರವಿರುವ ಧನುರ್ ಲಗ್ನ ಬೆಳಗ್ಗೆ ಇದೆಯೆಂದು ತಿಳಿದಿದೆ. ಧನುರ್ ಲಗ್ನ ಬೆಳಗಾಗುವುದಕ್ಕಿಂತ ಮುಂಚೆ 27 ನಿಮಿಷಗಳು ಕಳೆದು ಹೋಗಿದೆ. ಬೆಳಗಾದನಂತರ ಉಳಿದ ಧನುರ್‌ಲಗ್ನ 1–40 ನಿ॥ ಗಳು.

21ನೇ ತಾರೀಖು ಸೂರ್ಯೋದಯ ನಡೆದ ಸಮಯ–6–42 ನಿಮಿ॥

ಸೂರ್ಯನು ಮೂಲ ನಕ್ಷತ್ರದಲ್ಲಿ ಎರಡನೆ ಪಾದದಲ್ಲಿ ಇರುವುದರಿಂದ ಆ ದಿನ ಬೆಳಗಾಗುವುದಕ್ಕಿಂತ

| | |
|---|---|
| ಮುಂಚೆಯೇ ಕಳೆದು ಹೋಗಿರುವುದು | – 0–27 ನಿಮಿ॥ |
| ಧನುರ್ ಲಗ್ನ ವೊಂದರ ಪರಿಮಾಣ ಕಾಲ | – 2–07 ನಿಮಿ॥ |
| ಸೂರ್ಯೋದಯಕ್ಕಿಂತ ಮೊದಲೇ ಮುಗಿದು ಹೋದ | |
| ಧನುರ್ ಲಗ್ನ ಕಾಲ | – 0–27 ನಿಮಿ॥ |
| ಉಳಿದ ಧನುರ್ ಲಗ್ನ ಕಾಲ | – 1–40 ನಿಮಿ॥ |
| ಸೂರ್ಯೋದಯ ಕಾಲ | – 6–42 ನಿಮಿ॥ |
| ಬೆಳಗ್ಗೆ | – 8–22 ನಿಮಿ॥ |
| ನಂತರ ನಡೆದ ಮಕರಲಗ್ನ ಪರಿಮಾಣ ಕಾಲ | – 1–52 ನಿಮಿ॥ |
| ಬೆಳಗ್ಗೆ | – 10–14 ನಿಮಿ॥ |
| ನಂತರ ಕಳೆದ ಕುಂಭ ಲಗ್ನ ಪರಿಮಾಣ ಕಾಲ | – 1–39 ನಿಮಿ॥ |

| | | |
|---|---|---|
| | ಬೆಳಗ್ಗೆ | – 11–53 ನಿಮಿ॥ |
| ನಂತರ ಕಳೆದ ಮೀನ ಲಗ್ನ ಪರಿಮಾಣ ಕಾಲ | | – 1–37 ನಿಮಿ॥ |
| | ಮಧ್ಯಾಹ್ನ | – 1–30 ನಿಮಿ॥ |
| ನಂತರ ಕಳೆದ ಮೇಷಲಗ್ನ ಪರಿಮಾಣ ಕಾಲ | | – 1–45 ನಿಮಿ॥ |
| | ಮಧ್ಯಾಹ್ನ | – 3–15 ನಿಮಿ॥ |
| ನಂತರ ಕಳೆದ ವೃಷಭ ಲಗ್ನ ಪರಿಮಾಣ ಕಾಲ | | – 2–01 ನಿಮಿ॥ |
| | ಸಾಯಂಕಾಲ | – 5–16 ನಿಮಿ॥ |
| ನಂತರ ಕಳೆದ ಮಿಥುನ ಲಗ್ನ ಪರಿಮಾಣ ಕಾಲ | | – 2–12 ನಿಮಿ॥ |
| | ರಾತ್ರಿ | – 7–28 ನಿಮಿ॥ |
| ನಂತರ ಕಳೆದ ಕರ್ಕಾಟಕ ಲಗ್ನ ಪರಿಮಾಣ ಕಾಲ | | – 2–12 ನಿಮಿ॥ |
| | ರಾತ್ರಿ | – 9–40 ನಿಮಿ॥ |
| ನಂತರ ಕಳೆದ ಸಿಂಹಲಗ್ನ ಪರಿಮಾಣ ಕಾಲ | | – 2–07 ನಿಮಿ॥ |
| | | – 11–47 ನಿಮಿ॥ |
| ನಂತರ ಕಳೆದ ಕನ್ಯಾಲಗ್ನ ಪರಿಮಾಣ ಕಾಲ | | – 2–05 ನಿಮಿ॥ |
| | ರಾತ್ರಿ | – 1–52 ನಿಮಿ॥ |
| ಜಾತಕನು ಹುಟ್ಟಿದ ಸಮಯ ರಾತ್ರಿ | | – 1–30 ನಿಮಿ॥ |
| ನಡೆಯಬೇಕಾದ ಕನ್ಯಾಲಗ್ನವಿದೆ | | – 0.22 ನಿಮಿ॥ |

ಕನ್ಯಾಲಗ್ನದಲ್ಲಿ 22 ನಿಮಿಷಗಳು ಉಳಿದಿವೆ. ಆದ್ದರಿಂದ ಈ ಜಾತಕನು ಕನ್ಯಾಲಗ್ನದಲ್ಲಿ ಜನ್ಮಿಸಿದ್ದಾನೆಂದು ಹೇಳಬಹುದು. ಕೆಳಗೆ ಜನ್ಮ ಕುಂಡಲಿಯಲ್ಲಿ ಜನನ ಲಗ್ನವಾಗಿ ಕನ್ಯಾಲಗ್ನವನ್ನು ನಿರ್ಣಯಿಸುವುದಾಗಿದೆ. ಹಾಗೆಯೇ ಗುರುತಿಸಿದ್ದೇವೆ. ಲಗ್ನದಿಂದಲೇ ಉಳಿದ ಲಗ್ನಗಳನ್ನು ಲೆಕ್ಕಿಸಿಕೊಳ್ಳಬೇಕು.

ಜಾತಕನ ಹೆಸರು ಜಗನ್, ಆತನ ಜನ್ಮ ನಕ್ಷತ್ರ ಆರಿದ್ರ 2, ಜಗನ್ ಜನ್ಮಲಗ್ನವನ್ನು ನಂತರ ಚಿತ್ರಪಟದಲ್ಲಿ ನೋಡಬಹುದು.

| | | | |
|---|---|---|---|
| | | ಶನಿ () | ಚಂದ್ರ<br>ಕೇತು |
| | **ಕನ್ಯಾಲಗ್ನ** | | |
| | | | |
| ಸೂರ್ಯ<br>ಗುರು<br>ರಾಹು | ಶುಕ್ರ<br>ಬುಧ | ಕುಜ | ಲಗ್ನ |

**55ನೇ ಚಿತ್ರ**

ಜನನ ಸಮಯದಲ್ಲಿ ಹನ್ನೆರಡು ಗ್ರಹಗಳು ಯಾವಯಾವ ಲಗ್ನಗಳಲ್ಲಿರುವುದು ಗುರುತಿಸಿಕೊಂಡಿದ್ದೇವೆ. ಯಾವ ಗ್ರಹ ಯಾವ ನಕ್ಷತ್ರದಲ್ಲಿ ಇದೆಯೋ, ಯಾವ ಪಾದದಲ್ಲಿದೆಯೋ ಕೆಳಗೆ ನೋಡೋಣ.

ಸೂರ್ಯನು – ಮೂಲಾ ನಕ್ಷತ್ರ – 2ನೇ ಪಾದ – ಧನಸ್ಸುನಲ್ಲಿ
ಚಂದ್ರನು – ಆರಿದ್ರಾ ನಕ್ಷತ್ರ – 2ನೇಪಾದ – ಮಿಥುನದಲ್ಲಿ
ಕುಜನು – ವಿಶಾಖಾ ನಕ್ಷತ್ರ – 3ನೇ ಪಾದ – ತುಲಾದಲ್ಲಿ

| | | | | |
|---|---|---|---|---|
| ಬುಧನು | – ಅನೂರಾಧ ನಕ್ಷತ್ರ | – 4ನೇ ಪಾದ | – | ವೃಶ್ಚಿಕದಲ್ಲಿ |
| ಗುರುವು | – ಪೂರ್ವಾಷಾಢ ನಕ್ಷತ್ರ | – 3ನೇ ಪಾದ | – | ಧನಸ್ಸಿನಲ್ಲಿ |
| ಶುಕ್ರ | – ಅನೂರಾಧ ನಕ್ಷತ್ರ | – 2ನೇ ಪಾದ | – | ವೃಶ್ಚಿಕದಲ್ಲಿ |
| ಶನಿ | – ರೋಹಿಣಿ ನಕ್ಷತ್ರ | – 4ನೇ ಪಾದ | – | ವೃಷಭದಲ್ಲಿ |
| ರಾಹುವು | – ಪೂರ್ವಾಷಾಢ ನಕ್ಷತ್ರ | – 3ನೇ ಪಾದ | – | ಧನಸ್ಸಿನಲ್ಲಿ |
| ಕೇತು | – ಪುನರ್ವಸು ನಕ್ಷತ್ರ | – 1ನೇ ಪಾದ | – | ಮಿಥುನದಲ್ಲಿ |
| ಭೂಮಿ | – | | | |
| ಮಿತ್ರ | – | | | |
| ಚಿತ್ರ | – | | | |

ಇನ್ನೂ ಮೂರು ಗ್ರಹಗಳು ಯಾವ ನಕ್ಷತ್ರದಲ್ಲಿ ಯಾವ ಪಾದದಲ್ಲಿ ಇರುವುದು ತಿಳಿದಿಲ್ಲ. ಅದನ್ನು ಮೊದಲು ವಿವರವಾಗಿ ತಿಳಿದುಕೊಳ್ಳೋಣ.

ಜಾತಕನ ಜನ್ಮ ಕುಂಡಲಿಯಲ್ಲಿನ (ಕಾಲಚಕ್ರದಲ್ಲಿನ) ಹನ್ನೆರಡು ಲಗ್ನಗಳಲ್ಲಿ ಒಂಭತ್ತು ಗ್ರಹಗಳನ್ನು ಮಾತ್ರ ಗುರುತಿಸಿಕೊಂಡಿದ್ದೇವೆ. ಉಳಿದ ಮೂರು ಗ್ರಹಗಳನ್ನು ಗುರುತಿಸಿಕೊಳ್ಳಬೇಕಾಗಿದೆ. ಅವುಗಳನ್ನು ಸುಲಭವಾಗಿ ಗುರುತಿಸಿ ಕೊಳ್ಳುವುದಕ್ಕೆ ಜನ್ಮ ಲಗ್ನಕುಂಡಲಿಯನ್ನು (ಕಾಲಚಕ್ರ ಭಾಗಗಳನ್ನು) ನಕ್ಷತ್ರ ಪಾದದಿಂದ ಗುರುತಿಸಿಕೊಳ್ಳುವಂತೆ ದೊಡ್ಡದಾಗಿ ಬರೆದುಕೊಂಡು ನಂತರ ಪುಟದಲ್ಲಿರುವ 56ನೇ ಚಿತ್ರ ಪಟದಲ್ಲಿ ನೋಡೋಣ.

ಭೂಮಿ ಸೂರ್ಯನಿಗೆ ಎದುರಾಗಿ ಸಮಾನ ವೇಗದಿಂದ ತಿರುಗುತ್ತಿದೆ. ಆದ್ದರಿಂದ ಸೂರ್ಯನು ಧನುರ್‌ಲಗ್ನದಲ್ಲಿ ಮೂಲಾ ನಕ್ಷತ್ರ ಎರಡನೇ ಪಾದದಲ್ಲಿ ಇದ್ದರೇ, ಭೂಮಿ ಸೂರ್ಯನಿಗೆ ಎದುರಾಗಿ ಮಿಥುನ ಲಗ್ನದಲ್ಲಿ ಮೃಗಶಿರಾ ನಕ್ಷತ್ರ 4ನೇ ಪಾದದಲ್ಲಿ ಇರುವಂತೆ ತಿಳಿಯುತ್ತಿದೆ. ಹಾಗೆಯೇ ಮಿತ್ರಗ್ರಹ ಕೇತುವು ಕೆಳಗಿನ ಪಾದದಲ್ಲಿರುತ್ತಾ ಕೇತುವನ್ನನುಸರಿಸಿ ಸಮಾನವಾಗಿ ಕದಲುತ್ತಿರುತ್ತದೆ. ಆದ್ದರಿಂದ ಕೇತುವು ಎಲ್ಲಿದ್ದರೆ ಅದರ ಕೆಳಗಿನ ಪಾದವೇ

| ಮೀನ | ಮೇಷ | ವೃಷಭ | ಮಿಥುನ |
|---|---|---|---|
| ಪೂರ್ವಾಭಾದ್ರ – 4<br>ಉತ್ತರಾಭಾದ್ರ 1 2 3 4<br>ರೇವತಿ 1 2 3 4 | ಅಶ್ವಿನಿ 1 2 3 4<br>ಭರಣಿ 1 2 3 4<br>ಕೃತ್ತಿಕ –1 | ಕೃತ್ತಿಕ 2 3 4<br>ರೋಹಿಣಿ 1 2 3 4–ಶನಿ<br>ಮೃಗಶಿರ 1 2 | ಮೃಗಶಿರ 3 4–ಭೂಮಿ<br>ಆರಿದ್ರ 1 2–ಚಂದ್ರ 3 4<br>ಪುನರ್ವಸು 1 – ಕೇತು 2 – ಮಿತ್ರ 3 |
| **ಕುಂಭ**<br>ಧನಿಷ್ಟ 3 4<br>ಶತಭಿಷ 1 2 3 4<br>ಪೂರ್ವಾಭಾದ್ರ 1 2 3 | **ಜನ್ಮ ಲಗ್ನ ಕುಂಡಲಿ** | | **ಕರ್ಕಾಟಕ**<br>ಪುನರ್ವಸು – 4<br>ಪುಷ್ಯ 1 2 3 4<br>ಆಶ್ಲೇಷ 1 2 3 4 |
| **ಮಕರ**<br>ಉತ್ತರಾಷಾಢ 2 3 4<br>ಶ್ರವಣ 1 2 3 4<br>ಧನಿಷ್ಟ 1 2 | | | **ಸಿಂಹ**<br>ಮಖ 1 2 3 4<br>ಪುಬ್ಬ 1 2 3 4<br>ಉತ್ತರ – 1 |
| ಮೂಲ 1 2– ಸೂರ್ಯ 3 4<br>ಪೂರ್ವಾಷಾಢ 1 2 3–ಗುರು, ರಾಹು 4– ಚಿತ್ರ<br>ಉತ್ತರಾಷಾಢ – 1 | ವಿಶಾಖ – 4<br>ಅನೂರಾಧ 1 2– ಶುಕ್ರ 3 4– ಬುಧ<br>ಜ್ಯೇಷ್ಠ 1 2 3 4 | ಚಿತ್ತ 3 4<br>ಸ್ವಾತಿ 1 2 3 4<br>ವಿಶಾಖ 1 2 3–ಕುಜ | ಉತ್ತರ 2 3 4<br>ಹಸ್ತ 1 2 3 4<br>ಚಿತ್ತ 1 2 |
| **ಧನಸ್ಸು** | **ವೃಶ್ಚಿಕ** | **ತುಲಾ** | **ಕನ್ಯಾ** |

**56ನೇ ಚಿತ್ರ**

ಮಿತ್ರದ್ದೆಂದು ತಿಳಿಯಬೇಕು. ಈ ಜಾತಕದ ಪ್ರಕಾರ ಮಿತ್ರ ಪುನರ್ವಸು 2ನೇ ಪಾದದಲ್ಲಿ ಇರುವಂತೆ ತಿಳಿಯುತ್ತಿದೆ. ಇನ್ನು ಚಿತ್ರ ಗ್ರಹವೊಂದರ ವಿಷಯಕ್ಕೆ ಬಂದರೆ ಚಿತ್ರ ಯಾವಾಗಲೂ ರಾಹು ಗ್ರಹವನ್ನು ಅನುಸರಿಸಿ ಕದಲುತ್ತಾ ರಾಹುವಿರುವ ನಕ್ಷತ್ರಕ್ಕಿಂತ ಕೆಳಗಿನ ನಕ್ಷತ್ರದಲ್ಲಿ ಇದೆ. ಆದ್ದರಿಂದ ಚಿತ್ರ ರಾಹುಗಿಂತ ಕೆಳಗಿನ ನಕ್ಷತ್ರದಲ್ಲಿ ಪೂರ್ವಾಷಾಢ 4ನೇ ಪಾದದಲ್ಲಿ ಇರುವಂತೆ ತಿಳಿಯುತ್ತಿದೆ. ಈಗ ಹಿಂದೆ ಖಾಲಿಯಾಗಿ ಬಿಟ್ಟಿರುವ ಮೂರು ಗ್ರಹಗಳ ನಕ್ಷತ್ರಗಳನ್ನು, ಅವುಗಳ ಪಾದಗಳನ್ನು ಗುರುತಿಸಿಕೊಳ್ಳೋಣ.

10) ಭೂಮಿ – ಮೃಗಶಿರ ನಕ್ಷತ್ರ – 4ನೇ ಪಾದ – ಮಿಥುನ
11) ಮಿತ್ರ – ಪುನರ್ವಸು ನಕ್ಷತ್ರ – 2ನೇ ಪಾದ – ಮಿಥುನ
12) ಚಿತ್ರ – ಪೂರ್ವಾಷಾಢ ನಕ್ಷತ್ರ – 4ನೇ ಪಾದ – ಧನಸ್ಸು

ಇಲ್ಲಿಯವರೆಗು ಜನ್ಮಲಗ್ನವನ್ನು, ಜನ್ಮಕುಂಡಲಿಯಲ್ಲಿ ಗ್ರಹಗಳು ಯಾವಯಾವ ಪಾದದಲ್ಲಿರುವುದು, ಹೊಸ ಗ್ರಹಗಳು ಎಲ್ಲಿರುವುದು, ಜಾತಕನ ಜನನ ಸಮಯದಲ್ಲಿ ಯಾವ ದಶ ಇರುವುದು ತಿಳಿದುಕೊಂಡಿದ್ದೇವೆ. ಈಗ 12 ಗ್ರಹಗಳು ಯಾವ ಲಗ್ನದಲ್ಲಿವೆಯೋ, ಯಾವ ಲಗ್ನಗಳನ್ನು ತಮ್ಮ ಕೈಗಳಿಂದ ತಾಕುತ್ತಿದ್ದಾರೋ ಕೆಳಗೆ ತಿಳಿದುಕೊಳ್ಳೋಣ. ಹಾಗೆ ಬರೆದುಕೊಂಡು ನೋಡಿಕೊಳ್ಳುವುದರಿಂದ ಗ್ರಹಗಳು ಸ್ವತಃವಾಗಿ ಇರುವ ಸ್ಥಾನಗಳು ಯಾವುವೋ, ದೂರದಿಂದ ಯಾವ ಗ್ರಹಗಳನ್ನು ತಾಕುತ್ತಿವೆಯೋ ತಿಳಿದುಕೊಳ್ಳೋಣ. ಯಾವ ಜಾತಕನಿಗಾದರೂ ಜನನ ಲಗ್ನಕುಂಡಲಿ ಮುಖ್ಯ. ಹುಟ್ಟಿದ ದಿನ ಹನ್ನೆರಡು ಸ್ಥಾನಗಳಲ್ಲಿರುವ ಗ್ರಹಗಳು ಜೀವನವೆಲ್ಲಾ ಆ ಸ್ಥಾನಗಳನ್ನನುಸರಿಸಿ ವ್ಯವಹರಿಸುತ್ತಿರುತ್ತವೆ. ಹನ್ನೆರಡು ಗ್ರಹಗಳಲ್ಲಿ ಎಂಟು ಗ್ರಹಗಳು ಮುಂದಕ್ಕೆ ತಿರುಗುತ್ತಿರುವಾಗ, ನಾಲ್ಕು ಗ್ರಹಗಳು ಹಿಂದಕ್ಕೆ ಅಪಸವ್ಯವಾಗಿ ತಿರುಗುತ್ತಾ ತಮ್ಮ ಭಾಧ್ಯತೆಗಳನ್ನು ನಿರ್ವಹಿಸುತ್ತವೆ. ಜನನ ಸಮಯದಲ್ಲಿ ಬೇರೆ ಬೇರೆ ಸ್ಥಳಗಳಲ್ಲಿರುವ ಹನ್ನೆರಡು ಗ್ರಹಗಳು ನಂತರ ಅವುಗಳ ವೇಗವನ್ನು ಅನುಸರಿಸಿ ಅವು ಬೇರೆ ಬೇರೆ ಸ್ಥಾನಗಳಲ್ಲಿ ತಿರುಗುತ್ತಿದ್ದರೂ ಜಾತಕನು ಹುಟ್ಟಿದ ಸಮಯದಲ್ಲಿ

ತಮಗೆ ಒಪ್ಪಿಸಲ್ಪಟ್ಟ ವಿಧಿ ವಿಧಾನವನ್ನು ಮರೆಯದೆ ಅದರ ಪ್ರಕಾರವೇ ನಡೆದುಕೊಳ್ಳುತ್ತಾ, ಕಾಲಗಮನದಲ್ಲಿ (ಗ್ರಹ ಗಮನದಲ್ಲಿ) ಯಾವ ಸ್ಥಾನದೊಳಗೆ ಹೋದರೂ ಅಲ್ಲಿರುವ ಫಲಿತವನ್ನು ಕೊಡಬೇಕೆಂದು ನೋಡುತ್ತಿರುತ್ತವೆ. ಒಳ್ಳೆಯ ಗ್ರಹಗಳು ಒಳ್ಳೆಯ ಸ್ಥಾನಗಳೊಳಗೆ ಹೋದಾಗ ಅಲ್ಲಿರುವ ಒಳ್ಳೆಯ ಫಲಿತಗಳನ್ನು ಕೊಡಬೇಕೆಂದು ನೋಡುತ್ತಿರುವರು. ಒಳ್ಳೆಯ ಗ್ರಹಗಳು ಕೆಟ್ಟ ಸ್ಥಾನಗಳೊಳಗೆ ಹೋದಾಗ ಅಲ್ಲಿರುವ ಕೆಟ್ಟ ಫಲಿತಗಳನ್ನು ಯಾವ ಕಾರಣಕ್ಕು ಜಾತಕನಿಗೆ ಕೊಡುವುದಿಲ್ಲ. ಹಾಗೆಯೇ ಕೆಟ್ಟ ಗ್ರಹಗಳು ಕೆಟ್ಟ ಸ್ಥಾನಗಳೊಳಗೆ ಹೋದಾಗ ಅಲ್ಲಿರುವ ಕೆಟ್ಟ ಫಲಿತಗಳನ್ನು ಕೊಟ್ಟು ಕಷ್ಟ ಕೊಡುವುದಕ್ಕೆ ಪ್ರಯತ್ನಿಸುತ್ತಿರುವರು. ಒಂದು ವೇಳೆ ಕೆಟ್ಟ ಗ್ರಹಗಳು ಒಳ್ಳೆಯ ಸ್ಥಾನಗಳೊಳಗೆ ಹೋದಾಗ ಅಲ್ಲಿರುವ ಒಳ್ಳೆಯದನ್ನು ಮುಟ್ಟುವುದಿಲ್ಲ. ಹೇಗಾದರೂ ಜಾತಕನಿಗೆ ಕಷ್ಟ ಕೊಡುವುದೇ ಅವರ ಕೆಲಸ, ಆದ್ದರಿಂದ ಒಳ್ಳೆಯ ಸ್ಥಾನದಲ್ಲಿರುವಾಗ ಕೂಡಾ ಅವರು ಒಳ್ಳೆಯದು ಮಾಡುವುದಿಲ್ಲ. ಜಾತಕನ ಜನ್ಮ ಕರ್ಮವನ್ನನುಸರಿಸಿ ಗ್ರಹಗಳು ಒಳ್ಳೆಯ ಗ್ರಹಗಳಾಗಿ, ಕೆಟ್ಟ ಗ್ರಹಗಳಾಗಿ ವಿಭಜಿಸಲ್ಪಟ್ಟಿದ್ದಾರೆ. ಆದ್ದರಿಂದ ಅವರ ಕರ್ತವ್ಯದ ಪ್ರಕಾರ ಅವರ ಕೆಲಸಗಳನ್ನು ಚಾಚೂ ತಪ್ಪದೆ ಮಾಡುತ್ತಿದ್ದಾರೆ. ಎಷ್ಟೋ ಜವಾಬ್ದಾರಿಯಿಂದ ಕೆಲಸ ಮಾಡುತ್ತಿರುವ ಗ್ರಹಗಳು, ಎಂತಹ ಕರ್ಮವನ್ನಾದರೂ ತಮ್ಮಿಂದಲೆ ಬರುವಂತೆ ತಮ್ಮಿಂದಲೆ ಅನುಭವಿಸುವಂತೆ ಮಾಡುತ್ತಿದ್ದಾರೆ.


ಕರ್ಮ ವಿಷಯದಲ್ಲಿ ಒಟ್ಟಾರೆ ಜವಾಬ್ದಾರಿಯೆಲ್ಲಾ ಹನ್ನೆರಡು ಗ್ರಹಗಳ ಮೇಲೆಯೇ ಇರುವಂತೆ ಪ್ರಕೃತಿ ನೇಮಿಸಿದೆ. ಪ್ರಕೃತಿಯನ್ನು ಆದೇಶಿಸಿದವನು ದೇವರು ಆದಾಗ, ಎಲ್ಲಿಯೂ ದೇವರ ಪಾತ್ರ ಇಲ್ಲದಂತೆ, ದೇವರು ಯಾವ ಕೆಲಸವನ್ನು ಮಾಡದೆ ಪ್ರಪಂಚವೆಲ್ಲವನ್ನು ಪ್ರಕೃತಿ ಶಾಸಿಸಿ ನಡೆಸುತ್ತಿದೆ. ಸೃಷ್ಠಿ ಆದಿಯಲ್ಲೇ ಆದೇಶಿಸಲ್ಪಟ್ಟ ಪ್ರಕೃತಿ, ತಾನು ಎಲ್ಲದಕ್ಕು ಆದೇಶ ಕೊಟ್ಟು ನಡೆಸುತ್ತಿದೆ. ಇವೆಲ್ಲವೂ ಪ್ರತಿನಿತ್ಯ ಒಬ್ಬರಿಗೊಬ್ಬರು ಹೇಳಿಕೊಳ್ಳುವ ವಿಷಯಗಳಲ್ಲ. ಸೃಷ್ಠಿ ಆದಿಯಲ್ಲಿ ಹೇಳಲ್ಪಟ್ಟಂತೆ ಕ್ರಮತಪ್ಪದೆ ಎಲ್ಲಾ ಆಚರಿಸುತ್ತಿವೆ. ಕರ್ಮ ವಿಧಾನವೆಲ್ಲಾ ಹನ್ನೆರಡು ಗ್ರಹಗಳ ಮೂಲಕವೇ ನಡೆಯಬೇಕು. ಕರ್ಮವನ್ನು ಮನುಷ್ಯ

ಕಪಾಲದಲ್ಲಿ ಸೇರಿಸುವುದಕ್ಕಾಗಲಿ, ಆ ಕರ್ಮ ಪ್ರಾರಬ್ಧವಾಗಿ ಹೊರಗೆ ಬಂದಾಗ ಅದನ್ನು ಅನುಭವಿಸುವಂತೆ ಮಾಡುವುದಕ್ಕಾಗಲಿ, ಕರ್ಮ ವಿಷಯದಲ್ಲಿ ಎಲ್ಲಾ ಕೆಲಸಗಳನ್ನೂ ಹನ್ನೆರಡು ಗ್ರಹಗಳು ಮಾಡಬೇಕಾದ್ದೇಯೆಂದು ತಿಳಿಯುತ್ತಿದೆ. ಕರ್ಮ ವಿಧಾನದ ಪ್ರಕಾರ ಕರ್ಮವನ್ನು ಅನುಭವಿಸುವಂತೆ ಮಾಡುವ ಗ್ರಹಚಾರವಾಗಿರುವವು ದ್ವಾದಶ ಗ್ರಹಗಳೇ. ಜ್ಞಾನದಿಂದ ದಹಿಸಲ್ಪಡುವ ಕರ್ಮವನ್ನು ತೊಲಗಿಸುವುದಕ್ಕಾಗಲೀ, ಜ್ಞಾನ ದೂಷಣೆದಿಂದ ಹುಟ್ಟಿ ಬರುವ ಹೊಸ ಕರ್ಮವನ್ನು ಅನುಭವಿಸುವಂತೆ ಮಾಡುವುದಕ್ಕಾಗಲೀ ದಶಾಚಾರ ರೂಪದಲ್ಲಿ ಕೂಡಾ ಹನ್ನೆರಡು ಗ್ರಹಗಳೇ ಇವೆ. ಪ್ರಪಂಚ ವಿಧಿ ವಿಧಾನದ ಪ್ರಕಾರ ಜನನ ಸಮಯವನ್ನನುಸರಿಸಿ ಆ ಜನ್ಮದಲ್ಲಿ ಕಷ್ಟ ಸುಖಗಳನ್ನು ಒದಗಿಸುವ ಒಟ್ಟಾರೆ ವಿಧಾನವನ್ನು ಗ್ರಹಚಾರವೆಂದು ಕರೆಯುತ್ತಿದ್ದಾರೆ. ಹಾಗೆಯೇ ದೈವ ವಿಧಾನವನ್ನನುಸರಿಸಿ ಪ್ರಸ್ತುತ ಜನ್ಮದಲ್ಲಿರುವ ಕಷ್ಟಗಳನ್ನು (ಕರ್ಮಗಳನ್ನು) ಇಲ್ಲದಂತೆ ಮಾಡುವು ದಾಗಲೀ, ಇಲ್ಲದ ಕರ್ಮಗಳನ್ನು ಅಂಟಿಸುವುದಾಗಲಿ, ಮಾಡುವ ಎಲ್ಲಾ ಕಾರ್ಯವಿಧಾನವನ್ನು ದಶಾಚಾರ ಎನ್ನುತ್ತಿದ್ದಾರೆ. ಪ್ರಪಂಚ ಜ್ಞಾನದ ಪ್ರಕಾರ ಪ್ರಾರಬ್ಧ ಕರ್ಮಗಳಲ್ಲಿರುವ ಚಿಕ್ಕ ಕರ್ಮವನ್ನು ತೆಗೆದುಹಾಕುವುದಾಗಲೀ, ಇಲ್ಲದ್ದನ್ನು ಅಂಟಿಸುವುದಾಗಲೀ ಸ್ವಲ್ಪವಾದರೂ ಮಾಡದ ದ್ವಾದಶ ಗ್ರಹಗಳು ದೈವವಿಧಾನದಲ್ಲಿ ಅದೇ ಜನ್ಮದಲ್ಲಿ ತೆಗೆದುಹಾಕುವುದು, ಸೇರಿಸುವುದು ಸಹ ನಡೆಯುತ್ತಿದೆ. ಇಂತಹ ಕಾರ್ಯಗಳಿಗಾಗಿ ದಶೆಗಳು, ದಶಾಚಾರಗಳೆಂದು ಪ್ರತ್ಯೇಕ ವಿಭಾಗವಿದೆಯೆಂದು ಹೇಳಿಕೊಂಡಿದ್ದೇವೆ. ದಶಾಚಾರದಲ್ಲಿ ಒಳ್ಳೆಯ ಕೆಟ್ಟ ದಶಗಳು, ಜ್ಞಾನ ಅಜ್ಞಾನಗಳನ್ನನುಸರಿಸಿ ಕರ್ಮವನ್ನು ಸವರಣೆ ಮಾಡುವುದಕ್ಕೆ ತಯಾರಿ ಮಾಡಲ್ಪಟ್ಟಿವೆ. ಗ್ರಹಚಾರದ ಪ್ರಕಾರ ಒಳ್ಳೆಯ ಫಲಿತಗಳು ಬರುವಾಗ, ಒಳ್ಳೆಯ ಕರ್ಮ ಜಾರಿಯಾಗುವಾಗ, ಒಳ್ಳೆಯ ಕರ್ಮವನ್ನು ಜಾರಿಮಾಡುವವು ಹನ್ನೆರಡು ಗ್ರಹಗಳಲ್ಲಿನನ ಆರು ಗ್ರಹಗಳು. ಆರು ಗ್ರಹಗಳು ಒಂದು ಗುಂಪಾಗಿ ಏರ್ಪಟ್ಟು ಆರು ಗ್ರಹಗಳು ಮತ್ತೊಂದು ಗುಂಪಾಗಿ ತಯಾರಾಗಿ ತಾವು ಜೀವನವೆಲ್ಲಾ ಕೆಟ್ಟದಾಗಿ ಯಾರು ಪ್ರವರ್ತಿಸಬೇಕು (ಪಾಪವನ್ನು ಯಾರು ಹಂಚಬೇಕು) ಎಂದು, ಹಾಗೆಯೇ

ಒಳ್ಳೆಯದಾಗಿ ಪುಣ್ಯವನ್ನು ಯಾರು ಒದಗಿಸಬೇಕೆಂದು ಮನುಷ್ಯ ಹುಟ್ಟಿದಾಗಲೇ ಆತನು ಹುಟ್ಟಿದ ಕಾಲವನ್ನನುಸರಿಸಿ ನಿರ್ಣಯಿಸಿಕೊಂಡು ಜೀವನವೆಲ್ಲಾ ಹಾಗೆಯೇ ಪ್ರವರ್ತಿಸುತ್ತಿರುವರು. ಅದೆಲ್ಲವೂ ಗ್ರಹಚಾರ ಎಂದುಕೊಂಡಿದ್ದೇವೆ.

ಒಬ್ಬ ಮನುಷ್ಯನಿಗೆ ಪುಣ್ಯ ಕರ್ಮ ಜಾರಿಯಾಗುವಾಗ, ಪುಣ್ಯದ ಪ್ರಕಾರ ಒಳ್ಳೆಯ ಸುಖಗಳು ಸಿಗುವಾಗ ಆತನು ದೇವರ ವಿಧಾನದಲ್ಲಿ ಪ್ರವೇಶಿಸಿ ಜ್ಞಾನದೂಷಣೆ ಮಾಡಿದ್ದಾನೆಂದುಕೊಳ್ಳಿ. ಆಗ ದಶಾಚಾರದಲ್ಲಿನ ಕೆಟ್ಟ ಗ್ರಹ ಆತನು ಮಾಡಿದ ದೂಷಣೆಗೆ ಬದಲಾಗಿ ಬಂದಿರುವ ಪಾಪವನ್ನು ಸ್ವೀಕರಿಸಿ ತನ್ನ ದಶಯಲ್ಲಿ ಅವನನ್ನು ಆ ಪಾಪದಿಂದ ಹಿಂಸಿಸುತ್ತಾನೆ. ಜ್ಞಾನ ದೂಷಣೆ ಮಾಡಿದ ವ್ಯಕ್ತಿಗೆ ಜಾರಿಯಾಗುವ ಪಾಪವನ್ನು ಯಾವ ಯೋಗಿಗಳು ಕ್ಷಮಿಸಲಾರರು, ಯಾವ ಜ್ಞಾನವೂ ಅದನ್ನು ದಹಿಸುವುದಿಲ್ಲ. ಅದನ್ನು ತಪ್ಪದೆ ಅನುಭವಿಸುವ ಕ್ಷಮಿಸಲಾಗದ ಪಾಪ ಎನ್ನುತ್ತೇವೆ. ಗ್ರಹಚಾರದಲ್ಲಿರುವ ಕರ್ಮವನ್ನು ಯೋಗಿಗಳಾದವರು ಕ್ಷಮಿಸಬಹುದು. ಜ್ಞಾನ ಪ್ರಾರಬ್ಧಕರ್ಮವನ್ನು ಸುಡಬಲ್ಲದು. ಪ್ರತಿ ಮನುಷ್ಯನಿಗೂ ಗ್ರಹಚಾರ ಸರ್ವಸಾಧಾರಣ. ಅದೆಲ್ಲವೂ ಮನುಷ್ಯ ಮಾಡಿಕೊಂಡ ಪ್ರಾರಬ್ಧಕರ್ಮವನ್ನನುಸರಿಸಿ ಇರುತ್ತದೆ. ಅದರಲ್ಲಿ ಒಂದು ಬಾರಿ ಹುಟ್ಟುವ ಸಮಯದಲ್ಲಿ ನಿರ್ಣಯಿಸಲ್ಪಟ್ಟ ಕರ್ಮವನ್ನು ಪ್ರಪಂಚ ವಿಧಾನದಲ್ಲಿ ಯಾವ ಪ್ರಕ್ರಿಯೆ ಬದಲಾಯಿಸಲಾರದು. ಎಂತಹವನಾಗಲೀ, ಅದರಿಂದ ತಪ್ಪಿಸಿಕೊಳ್ಳುವುದಕ್ಕೆ ಅವಕಾಶವಿಲ್ಲವೆಂದು ಹೇಳಿಕೊಂಡಿದ್ದೇವೆ. ಆದರೇ ದಶಗಳು ಮಾತ್ರ ಪ್ರಪಂಚ ವಿಧಾನದಲ್ಲಿ ಏನೂ ಉಪಯೋಗವಾಗುವುದಿಲ್ಲ. ಅವು ದೈವ ವಿಧಾನದಲ್ಲಿನ ಸೃಷ್ಟಿಸಲ್ಪಡುವ ಪಾಪಗಳಿಗೆ, ಪಾಪ ನಿರ್ಮೂಲನೆಗೆ ತಯಾರು ಮಾಡಲ್ಪಟ್ಟಿವೆಯೆಂದು ತಿಳಿಯಬೇಕು. ಒಂದು ವಿಧವಾಗಿ ಮಾನವನಿಗಿದು ಒಂದು ಕಡೆ ಶಾಪವಂತಾದ್ದು, ಮತ್ತೊಂದು ಕಡೆ ವರವಂತಾದ್ದು. ಜ್ಞಾನ ದೂಷಣೆ ದೈವ ದೂಷಣೆ ಮಾಡಿದವನಿಗೆ ಶಾಪವಂತಾದ್ದೆಂದು ಹೇಳಬಹುದು. ಹಾಗೆಯೇ ದೈವ ಜ್ಞಾನ ಹೊಂದಿದವನಿಗೆ ವರವಂತಾದ್ದೆಂದು ಹೇಳಬಹುದು. ಈ ಎರಡು ವಿಧಾನಗಳಿರುವ ದಶಗಳನ್ನು ಹೇಗೆ ಕಂಡುಕೊಳ್ಳಬೇಕು ಎನ್ನುವ

ವಿಷಯವನ್ನು ನಂತರ ಹೇಳಿಕೊಳ್ಳೋಣ. ಈಗ ಜನ್ಮ ಲಗ್ನ ಕುಂಡಲಿಯಲ್ಲಿನ ಗ್ರಹಗಳಿಗೆ ಅಕ್ಕ ಪಕ್ಕದ ಮನೆ ಯಾವು ಇವೆಯೋ ನಂತರ ಚಿತ್ರದಲ್ಲಿ ನೋಡೋಣ.




ಇಲ್ಲಿ ಮೇಲೆ ತೋರಿಸಿರುವ ಜನ್ಮಲಗ್ನಕುಂಡಲಿಯಲ್ಲಿ ಹನ್ನೆರಡು ಗ್ರಹಗಳನ್ನು ಒಟ್ಟಾರೆ ಮೂವತ್ತು ಸ್ಥಳಗಳಲ್ಲಿ ತೋರಿಸುವುದಾಗಿದೆ. ಹದಿನೆಂಟು (18) ಕಡೆಯಿರುವ ಗ್ರಹಗಳಿಗೆ ಸುತ್ತಲೂ ದುಂಡನೆಯ ಗುರುತು ಹಾಕಲಾಗಿದೆ. ಉಳಿದ ಹನ್ನೆರಡು (12) ಗ್ರಹಗಳಿಗೆ ದುಂಡಾದ ಗುರುತು ಇಲ್ಲ. ದುಂಡಾದ ಗುರುತು ಇಲ್ಲದವು ಜನ್ಮ ಸಮಯದಲ್ಲಿ ಆಯಾ ಸ್ಥಳದಲ್ಲಿವೆಯೆಂದು ತಿಳಿಯಬೇಕು.


ತುಲಾದಲ್ಲಿ ಕುಜನು, ವೃಶ್ಚಿಕದಲ್ಲಿ ಶುಕ್ರ ಬುಧರು, ಧನಸ್ಸುನಲ್ಲಿ ಸೂರ್ಯ ಗುರು ರಾಹು ಚಿತ್ರ ಗ್ರಹಗಳು, ವೃಷಭದಲ್ಲಿ ಶನಿ, ಮಿಥುನದಲ್ಲಿ ಭೂಮಿ ಚಂದ್ರ ಕೇತು ಮಿತ್ರ ಗ್ರಹಗಳು ಜನನ ಸಮಯದಲ್ಲಿ ಇದ್ದಂತೆ ಗುರುತಿಸಿದ್ದೇವೆ. ದುಂಡಾದ ಗುರುತಿನೊಳಗಿರುವ ಗ್ರಹಗಳು ಅಲ್ಲಿ ಇಲ್ಲದಿದ್ದರೂ ತಮ್ಮ ಕೈಗಳಿಂದ ಆ ಲಗ್ನಗಳನ್ನು ತಾಕಿದಂತೆ ಲೆಕ್ಕಿಸಿಕೊಳ್ಳಬೇಕು. ಗ್ರಹಗಳು ಕೈಗಳನ್ನಿಟ್ಟರೂ ಅಲ್ಲಿದ್ದಂತೆ ಲೆಕ್ಕಿಸಲ್ಪಡುತ್ತಿವೆ.

ಈ ಜಾತಕನ ಜನ್ಮ ಲಗ್ನ ಕುಂಡಲಿಯಲ್ಲಿ ಕನ್ಯಾಲಗ್ನ ಜನ್ಮಲಗ್ನವೆಂದು ತಿಳಿದುಹೋಗಿದೆ. ಆತ್ಮಗಳ ವರಸೆ ಪ್ರಕಾರ 2:1 ಎನ್ನುವ ಸೂತ್ರದ ಪ್ರಕಾರ ಕನ್ಯಾಲಗ್ನ ಜಾತಕನಿಗೆ ಶುಭಗ್ರಹ ಅಶುಭಗ್ರಹಗಳು ತಿಳಿದುಹೋಗುತ್ತಿವೆ. ಶುಭ ಎಂದರೆ ಪುಣ್ಯವನ್ನು ಪಾಲಿಸುವ ಮಿತ್ರತ್ವವಿರುವ ಗ್ರಹಗಳೆಂದು, ಅಶುಭ ಎಂದರೆ ಪಾಪವನ್ನು ಪಾಲಿಸುವ ಶತ್ರುತ್ವ ಗ್ರಹಗಳೆಂದು ಹೇಳಬಹುದು. ಕನ್ಯಾಲಗ್ನಕ್ಕೆ ಶುಭ, ಅಶುಭ ಗ್ರಹಗಳು ಹೀಗಿವೆ ನೋಡಿರಿ.

| **ಶುಭ ಗ್ರಹಗಳು**<br>**ಪುಣ್ಯ ಪಾಲಕರು** | **ಅಶುಭ ಗ್ರಹಗಳು**<br>**ಪಾಪ ಪಾಲಕರು** |
|---|---|
| 1) ಬುಧ ಗ್ರಹ | 1) ಭೂ ಗ್ರಹ |
| 2) ಶುಕ್ರ ಗ್ರಹ | 2) ಕೇತು ಗ್ರಹ |
| 3) ಶನಿ ಗ್ರಹ | 3) ಗುರು ಗ್ರಹ |
| 4) ರಾಹು ಗ್ರಹ | 4) ಕುಜ ಗ್ರಹ |
| 5) ಮಿತ್ರ ಗ್ರಹ | 5) ಚಂದ್ರ ಗ್ರಹ |
| 6) ಚಿತ್ರ ಗ್ರಹ | 6) ಸೂರ್ಯ ಗ್ರಹ |

ಭೂಮಿ ಮೇಲೆ ಮನುಷ್ಯ ಜನನ ಸಮಯವನ್ನನುಸರಿಸಿ, ಕಾಲಚಕ್ರದಲ್ಲಿ ಸೂರ್ಯನ ಕದಲಿಕೆಯನ್ನನುಸರಿಸಿ ಜನ್ಮಲಗ್ನವಾದ ತಮ್ಮ ಸ್ಥಾನ ತಿಳಿದು

ಹೋಗುತ್ತಿದೆ. ಕುಂಡಲಿಯಲ್ಲಿನ ಹನ್ನೆರಡು ಸ್ಥಾನಗಳಲ್ಲಿ ಜನ್ಮಲಗ್ನ ಯಾವುದಾದರೆ ಅದು ಶರೀರ ಸ್ಥಾನವಾದಾಗ ಅಲ್ಲಿಂದ ಕೊನೆಯದು ಹನ್ನೆರಡನೆಯದು ವ್ಯಯ ಸ್ಥಾನವಾಗುತ್ತಿದೆ. ಹನ್ನೆರಡು ಲಗ್ನಗಳಲ್ಲಿ ಒಳ್ಳೆಯ ಕೆಟ್ಟ ಗ್ರಹಗಳಿರುವಾಗ, ಹನ್ನೆರಡು ರಾಶಿಗಳಲ್ಲಿ ಅಂದರೆ ಕರ್ಮ ಚಕ್ರ ಸ್ಥಾನಗಳಲ್ಲಿ ಪಾಪಪುಣ್ಯಗಳ ಕರ್ಮಗಳಿರುತ್ತವೆ. ಪುಣ್ಯ ಕೋನಗಳನ್ನು 1,5,9 ಸ್ಥಾನಗಳಲ್ಲಿ ಮನುಷ್ಯನ ಪುಣ್ಯವಿರುವಾಗ, ಪಾಪ ಕೋನಗಳೆನ್ನುವ 3,7,11 ಸ್ಥಾನಗಳಲ್ಲಿ ಪಾಪವಿರುತ್ತದೆ. ಮೂರು ಸ್ಥಾನಗಳಲ್ಲಿ ಪುಣ್ಯ, ಮೂರು ಸ್ಥಾನಗಳಲ್ಲಿ ಪಾಪ ಇರುವಾಗ, ಉಳಿದ ಆರು ಸ್ಥಾನಗಳಲ್ಲಿ ಪಾಪಪುಣ್ಯ ಮಿಶ್ರಮವಿರುತ್ತದೆ. ಕರ್ಮ ಚಕ್ರದಲ್ಲಿನ ಪಾಪ ಪುಣ್ಯ ರಾಶಿಗಳ ಮೇಲೆ ಗ್ರಹಗಳು ಕಿರಣಗಳನ್ನು ಪ್ರಸರಿಸುತ್ತಾ ಕಾಲಚಕ್ರದಲ್ಲಿ ತಿರುಗುತ್ತಿವೆ. ಹಾಗೆ ತಿರುಗುತ್ತಾ ಜನನ ಸಮಯದಲ್ಲಿ ಅವರು ಯಾವ ಲಗ್ನಗಳಲ್ಲಿ ಇದ್ದಾರೋ ಕೆಳಗಿನ ಚಿತ್ರದಲ್ಲಿ ತಿಳಿದುಕೊಳ್ಳೋಣ.



ದುಂಡಾದ ಗುರುತಿನಿಂದ ಗುರುತಿಸಿದ ಗ್ರಹಗಳು ಆ ಸ್ಥಾನದಲ್ಲಿ ಇಲ್ಲದಿದ್ದರೂ ಉಳಿದ ಸ್ಥಾನಗಳಲ್ಲಿ ಇದ್ದು ಅಲ್ಲಿಂದ ತಮ್ಮ ಹಸ್ತಗಳನ್ನಿಟ್ಟು ಈ ರಾಶಿಗಳಲ್ಲಿನ ಕರ್ಮಗಳನ್ನು ಗ್ರಹಿಸುತ್ತವೆಂದು ತಿಳಿಯಬೇಕು. ದುಂಡಾದ ಗುರುತು ಇಲ್ಲದ ಗ್ರಹಗಳು ಜನನ ಸಮಯದಲ್ಲಿ ನಾವು ಗುರುತಿಸಿದ ಲಗ್ನಗಳಲ್ಲಿದ್ದು ಅಲ್ಲೇ ಕೆಲಸ ಮಾಡುತ್ತಿವೆಯೆಂದು ತಿಳಿಯುತ್ತಿದೆ.

ಜಾತಕ ಎಲ್ಲಾ ವಿಧಗಳಲ್ಲಿ ಅರ್ಥವಾಗುವುದಕ್ಕೆ ಜಾತಕ ಲಗ್ನವನ್ನು ಗುರುತಿಸಿಕೊಂಡು ನೋಡಿದ್ದೇವೆ. ಜನ್ಮಲಗ್ನ ಕುಂಡಲಿಯಲ್ಲಿ ಗುರುತಿಸಿಕೊಳ್ಳುವುದು ಏನೂ ಇಲ್ಲ. ಆದ್ದರಿಂದ ಗ್ರಹಚಾರಕ್ಕೆ ಸಂಬಂಧಿಸಿದ ಜನನ ಲಗ್ನ ಪೂರ್ತಿ ತಿಳಿದುಹೋಗಿದೆ. ಗ್ರಹಚಾರದಲ್ಲಿ ಫಲಿತಗಳು ಹೇಗಿವೆ, ಭವಿಷ್ಯತ್ ಹೇಗಿರುತ್ತದೆ ಎನ್ನುವ ವಿಷಯವನ್ನು ದಶಾಚಾರವನ್ನು ಗುರುತಿಸಿದ ನಂತರ ನೋಡೋಣ. ಈಗ ಈ ಜಾತಕನ ದಶಾಚಾರವನ್ನು ಹೇಗೆ ಬರೆದುಕೊಳ್ಳಬೇಕೋ ತಿಳಿದುಕೊಳ್ಳೋಣ. ಜನ್ಮದಿನ ನಕ್ಷತ್ರ ಪರಿಮಾಣವನ್ನು ತಿಳಿದುಕೊಳ್ಳುವುದಕ್ಕೆ ಹಿಂದಿನ ದಿನ ನಕ್ಷತ್ರವನ್ನು ಆಧಾರಮಾಡಿಕೊಂಡು ನೋಡಬೇಕು. ಜಾತಕನು ಹುಟ್ಟಿರುವುದು ಪೌರ್ಣಮಿ ಬುಧವಾರ ರಾತ್ರಿ 1–30 ಗಂಟೆಗಳಿಗೆ ಆಗಿರುವು ದರಿಂದ, ಆ ದಿನ ಮೃಗಶಿರ ರಾತ್ರಿ 6–53 ನಿಮಿಷಗಳಿಗೇ ಮುಗಿದು ಹೋಗಿರುವುದರಿಂದ, ನಂತರ ಕೂಡಲೆ ಆರಿದ್ರ ನಕ್ಷತ್ರ ಪ್ರಾರಂಭವಾಗಿ ಜಾತಕನು ಹುಟ್ಟಿದ ಸಮಯದಲ್ಲಿ ಆರಿದ್ರ ಇರುವುದರಿಂದ ಹಿಂದಿನ ದಿನ ನಕ್ಷತ್ರ ಮೃಗಶಿರ ಆಗುತ್ತಿದೆ. ಆರಿದ್ರ ನಕ್ಷತ್ರವೊಂದರ ಪೂರ್ತಿ ಕಾಲವನ್ನು ತಿಳಿಯುವುದಕ್ಕೆ ಮೃಗಶಿರವನ್ನು ಹೇಗೆ ಉಪಯೋಗಿಸಿಕೊಳ್ಳುತ್ತಿದ್ದೇವೋ ಕೆಳಗೆ ನೋಡಿರಿ. ಪ್ರತಿ ನಕ್ಷತ್ರವೊಂದರ ಪೂರ್ತಿ ಪರಿಮಾಣ 60.00 ಗಳಿಗೆಗಳು. ಆದರೇ ಅದರಲ್ಲಿ ಸ್ವಲ್ಪ ಹೆಚ್ಚಾಗಲಿ, ಕಡಿಮೆಯಾಗಲಿ ನಕ್ಷತ್ರಗಳು ಕಳೆಯುತ್ತಿರುತ್ತವೆ. ಪಂಚಾಂಗದಲ್ಲಿ ಒಂಭತ್ತು ಗ್ರಹಗಳಲ್ಲಿ ಎಂಟು ಗ್ರಹಗಳ ಗಮನಗಳನ್ನು, ನಕ್ಷತ್ರ ಪ್ರವೇಶಗಳನ್ನು ಬರೆದಿರುತ್ತಾರೆ. ಆದರೆ ಒಬ್ಬ ಚಂದ್ರನನ್ನು ಕುರಿತು ಬರೆದಿರುವುದಿಲ್ಲ. ಪಂಚಾಂಗದ ಪ್ರಕಾರ ಯಾವ ಗ್ರಹ ಎಲ್ಲಿರುವುದು, ಯಾವ ಲಗ್ನದಲ್ಲಿ, ಯಾವ

ನಕ್ಷತ್ರದಲ್ಲಿರುವುದು, ತಿಳಿಯಬಹುದು. ಚಂದ್ರನು ಯಾವ ನಕ್ಷತ್ರದಲ್ಲಿರುವುದು ಯಾವ ಲಗ್ನದಲ್ಲಿರುವುದು ತಿಳಿಯಬೇಕೆಂದರೆ ನಾವೇ ಸ್ವತಃವಾಗಿ ಗಣಿತವನ್ನು ಉಪಯೋಗಿಸಿ ತಿಳಿಯ ಬಹುದು. ಗಣಿತವನ್ನು ಹೇಗೆ ಮಾಡಬೇಕೋ ಕೆಳಗ್ಗೆ ಬರೆದು ತೋರಿಸುತ್ತೇವೆ ಅದರ ಪ್ರಕಾರ ಯಾರಾದರೂ ಮಾಡಿಕೊಳ್ಳಬಹುದು.

2–30 ಗಳಿಗೆಗಳಿಗೆ 1 ಗಂಟೆಯಾಗುತ್ತದೆ.

ಪೂರ್ತಿ ನಕ್ಷತ್ರ ಪ್ರಮಾಣ ಕಾಲ: 60–00 (ಗಳಿಗೆಗಳು) – 24–00 ಗಂಟೆಗಳು

| | |
|---|---|
| ಮೃಗಶಿರ ನಕ್ಷತ್ರ ಹಿಂದಿನ ದಿನದ್ದು | : 7–12 (ಗಳಿಗೆ) 6–53 ಗ.ನಿ |
| ನಿನ್ನೆಯ ದಿನ ಉಳಿದ ಆರಿದ್ರ | : 42–48 " 17–07 ಗ.ನಿ |
| ಜನನ ಕಾಲ ದಿನದಂದು ಆರಿದ್ರ | : 13–35 " 5–26 ಗ.ನಿ |
| ಪೂರ್ತಿ ಆರಿದ್ರ ನಕ್ಷತ್ರ ಪರಿಮಾಣ | : 56–23 ಗಳಿಗೆ 22–33 ಗ.ನಿ |
| ಆರಿದ್ರ ಪ್ರಾರಂಭ | : – 6–53 ನಿಮಿ॥ |
| ಜಾತಕನು ಹುಟ್ಟಿದ ಕಾಲ ರಾತ್ರಿ | : – 1–30 ನಿಮಿ॥ |
| ಜನನದ ವರೆಗು ಕಳೆದ ಆರಿದ್ರ ಕಾಲ | : 16–57 ಗಳಿಗೆ 6–47 ನಿಮಿ॥ |
| ಕಳೆದ ಆರಿದ್ರ ಕಾಲ | : 16–57 ಗಳಿಗೆ 6–47 ನಿಮಿ॥ |
| ಪೂರ್ತಿ ಆರಿದ್ರ ನಕ್ಷತ್ರಕಾಲ ಪರಿಮಾಣ | : 56–23 ಗಳಿಗೆ 22–33 ನಿಮಿ॥ |
| ಆರಿದ್ರ ನಕ್ಷತ್ರ ಒಂದು ಪಾದ | : 14–06 ಗಳಿಗೆ 5–38 ನಿಮಿ॥ |
| ಕಳೆದ ಆರಿದ್ರ ಕಾಲ | – 16–57 |
| ಆರಿದ್ರ ಪಾದ 1 | – 14–06 |
| ಆರಿದ್ರ ಎರಡನೆ ಪಾದದಲ್ಲಿ ಕಳೆದಿರುವುದು | – 2–51 |

ಆರಿದ್ರ ಎರಡನೆ ಪಾದವನ್ನನುಸರಿಸಿ ಚಂದ್ರನು ಮಿಥುನ ಲಗ್ನದಲ್ಲಿ ಇದ್ದಂತೆ ತಿಳಿಯುತ್ತಿದೆ.

ಆರಿದ್ರ ನಕ್ಷತ್ರವನ್ನು ವಿಗಳಿಗೆಗಳಲ್ಲಿ ನೋಡಿದರೆ – 3383 ವಿಗಳಿಗೆಗಳು
ಕಳೆದ ಆರಿದ್ರ ಕಾಲವನ್ನು ವಿಗಳಿಗೆಗಳಲ್ಲಿ ನೋಡಿದರೆ – 1017 ವಿಗಳಿಗೆಗಳು

ಇಲ್ಲಿಯವರೆಗು ಜಾತಕನ ವೊಂದು ಗ್ರಹಚಾರದಲ್ಲಿ ಚಂದ್ರನು ಎಲ್ಲಿದ್ದಾನೋ, ಯಾವ ನಕ್ಷತ್ರ ಪಾದದಲ್ಲಿದ್ದಾನೋ ಗಣಿತದ ಮೂಲಕ ತಿಳಿದಿದ್ದೇವೆ. ಕೊನೆಗೆ ಚಂದ್ರನು ಮಿಥುನಲಗ್ನದಲ್ಲಿ ಆರಿದ್ರ ಎರಡನೆ ಪಾದದಲ್ಲಿ ಇರುವಂತೆ ತಿಳಿದಿದೆ. ಜಾತಕನು ಹುಟ್ಟಿದ ಸಮಯದಲ್ಲಿ ಸೂರ್ಯನು ಎಲ್ಲಿದ್ದಾನೆಂದು ತಿಳಿಯುವುದಕ್ಕೆ ಕಳೆದ ಪುಟಗಳಲ್ಲಿ ಹೇಳಿಕೊಂಡಿದ್ದೇವೆ. ಸೂರ್ಯೋದಯದಿಂದ ಜಾತಕನು ಹುಟ್ಟಿದ ಸಮಯದವರೆಗು ಲೆಕ್ಕಿಸಿ ಸೂರ್ಯನನ್ನು ತಿಳಿದು ಆತನಿರುವ ಲಗ್ನ ಕಿರಣಗಳನ್ನನುಸರಿಸಿ ಜಾತಕನ ಜನ್ಮ ಲಗ್ನವನ್ನು ತಿಳಿಯುತ್ತಿದ್ದೇವೆ. ಗ್ರಹಚಾರ ವಿಧಾನದಲ್ಲಿ ಜನ್ಮಲಗ್ನ ಎಷ್ಟು ಪ್ರಾಧಾನ್ಯತೆ ಹೊಂದಿದೆಯೋ, ಹಾಗೆಯೇ ಗ್ರಹಚಾರ ವಿಧಾನದಲ್ಲಿ ಚಂದ್ರನ ಮೂಲಕ ತಿಳಿಯುವ ಪ್ರಾರಂಭ ದಶ ಯಾವುದೋ ತಿಳಿಯುವುದು ಸಹ ಮುಖ್ಯವಾದುದೇ. ಪ್ರಾರಂಭ ದಶಯನ್ನು ತಿಳಿದರೇ ಅದಕ್ಕೆ ಅನುಬಂಧವಾಗಿರುವ ದಶಗಳನ್ನು ವರಸಕ್ರಮದಲ್ಲಿ ತಿಳಿಯಬಲ್ಲೆವು. ಪ್ರಸ್ತುತ ಜನ್ಮದಲ್ಲಿ ಯಾವ ದಶ, ಎಲ್ಲಿಂದ ಪ್ರಾರಂಭವಾಗುತ್ತಿದೆಯೋ ತಿಳಿದರೇ ಗತ ಜನ್ಮದಲ್ಲಿ ಮರಣಿಸಿರುವುದು ಇಂತಹ ದಶಯಲ್ಲಿ ಇಂತಹ ಕಾಲದಲ್ಲಿ ಎಂದು ಹೇಳಬಹುದು. ಇಲ್ಲಿ ಕೆಲವರಿಗೆ ಅನುಮಾನ ಬರಬಹುದು. ಈ ಜನ್ಮದಲ್ಲಿನದ್ದೇ ಸರಿಯಾಗಿ ತಿಳಿಯಲಾರದಂತಿದ್ದೇವೆ. ಹಾಗಿರುವಾಗ ಗತ ಜನ್ಮದಲ್ಲಿನ ಮರಣ ವಿಷಯವನ್ನು ತಿಳಿಯಬಹುದೆನ್ನುವ ಮಾತು ಎಷ್ಟರಮಟ್ಟಿಗೆ ಸತ್ಯವೆಂದು ಕೇಳಬಹುದು. ಅದಕ್ಕೆ ನಾವು ಹೇಳುವುದೇನೆಂದರೆ! ಒಬ್ಬ ಪ್ರಯಾಣಿಕನು ಕಾಲ್ನಡಿಗೆಯಲ್ಲಿ ದೂರ ಪ್ರಯಾಣ ಮಾಡುತ್ತಾ ಮಧ್ಯದಲ್ಲಿ ಚಿಕ್ಕ ಊರುಗಳನ್ನು ಅಲ್ಲಲ್ಲಿ ದೊಡ್ಡ ಊರುಗಳನ್ನು ದಾಟುತ್ತಾ ಹೋಗುತ್ತಿದ್ದಾನೆಂದುಕೊಳ್ಳಿ. ಆತನು ಹಗಲೆಲ್ಲಾ ಪ್ರಯಾಣ ಮಾಡಿ ರಾತ್ರಿ ಹೊತ್ತು ಒಂದು

ಕಡೆ ಇದ್ದು ಪುನಃ ಬೆಳಗ್ಗೆ ಅಲ್ಲಿಂದ ಹೊರಟು ಹೋಗುತ್ತಿದ್ದನು. ಅವನ ವಿಷಯದಲ್ಲಿ ಅವನು ರಾತ್ರಿ ಎಲ್ಲಾದರೆ ನಿಂತಿದ್ದಾನೋ, ಪುನಃ ಬೆಳಗ್ಗೆ ಅಲ್ಲಿಂದಲೇ ಹೊರಡುವನೆಂದು ಹೇಳುವುದರಲ್ಲಿ ಸತ್ಯವಿದ್ದಂತೇ, ಒಬ್ಬ ವ್ಯಕ್ತಿ ತನ್ನ ಸುದೀರ್ಘ ಜೀವನದ ಪ್ರಯಾಣದಲ್ಲಿ ರಾತ್ರಿಯಂತಿರುವ ಮರಣ ಬಂದಾಗ ಯಾವ ಸಮಯದಲ್ಲಿ ಮರಣಿಸಿದ್ದಾನೋ ಅವನು ಪುನಃ ಅದೇ ಸಮಯದಲ್ಲೇ ಜನ್ಮಿಸಿ ತನ್ನ ಜೀವನ ಪ್ರಯಾಣವನ್ನು ಸಾಗಿಸುತ್ತಿದ್ದಾನೆಂದು ಹೇಳುವುದು ಸತ್ಯವೇ ಆಗುತ್ತದೆ. ಒಬ್ಬನು ಗತ ಜನ್ಮದಲ್ಲಿ ಒಂದು ದಶಯಲ್ಲಿ ಯಾವ ವರ್ಷ, ಯಾವ ತಿಂಗಳು, ಯಾವ ದಿನ, ಯಾವ ಗಂಟೆಯಲ್ಲಿ ಮರಣಿಸಿದ್ದಾನೋ ಅದೇ ದಶಯಲ್ಲಿ ಅದೇ ವರ್ಷ, ಅದೇ ತಿಂಗಳು, ಅದೇ ದಿನ, ಅದೇ ಗಂಟೆಯಲ್ಲಿ ಅದೇ ಸಮಯದಲ್ಲಿ ಜನ್ಮಿಸುತ್ತಿದ್ದಾನೆಂದು ತಿಳಿಯುತ್ತಿದೆ. ಗತ ಜನ್ಮ ಸತ್ಯವೆಂದು ತಿಳಿದವನಿಗೆ ಗತಜನ್ಮ ದಶಾಭುಕ್ತಿ ಸಹ ಸತ್ಯವೆಂದು ತಿಳಿಯುತ್ತದೆ. ಗತ ಜನ್ಮದಲ್ಲಿ ದಶಾಭುಕ್ತಿಯನ್ನು ತಿಳಿಯುವುದಕ್ಕೆ ಪ್ರಸ್ತುತ ಜನ್ಮದಲ್ಲಿ ಯಾವ ದಶಯಲ್ಲಿ ಪ್ರಾರಂಭವಾಗುತ್ತಿದೆಯೋ ತಿಳಿಯಬೇಕು. ಹಾಗೆ ತಿಳಿಯುವುದಕ್ಕೆ ಪ್ರಯತ್ನಿಸೋಣ.

ಜಗನ್ ಎನ್ನುವ ವ್ಯಕ್ತಿಯ ಜನನ ಸಮಯದಲ್ಲಿ ಚಂದ್ರನನ್ನು ಕುರಿತು ತಿಳಿದುಕೊಳ್ಳುವುದಕ್ಕೆ ಹಾಕಿದ ಗಣಿತದಲ್ಲಿ ಚಂದ್ರನಿರುವ ಆರಿದ್ರ ನಕ್ಷತ್ರವೊಂದರ ಪೂರ್ತಿ ಪರಿಮಾಣವನ್ನು ಗಳಿಗೆಗಳಲ್ಲಿ 56–23 ಆಗಿ ಇದ್ದಂತೆ ತಿಳಿದು ಕೊಂಡಿದ್ದೇವೆ. ಹಾಗೆಯೇ ಜನನ ಸಮಯಕ್ಕೆ ಕಳೆದ ಆರಿದ್ರ ವೊಂದರ ಪರಿಮಾಣ ಗಳಿಗೆಗಳಲ್ಲಿ 16–57ಆಗಿ ಇದ್ದಂತೆ ತಿಳಿದುಕೊಂಡಿದ್ದೇವೆ. ಆರಿದ್ರ ನಕ್ಷತ್ರವನ್ನನುಸರಿಸಿ ದಶ ವಿಭಜನೆ ನಕ್ಷತ್ರಗಳಲ್ಲಿ ಆರಿದ್ರ ನಕ್ಷತ್ರ ಪೂರ್ತಿ ನಾಲ್ಕು ಪಾದಗಳು ಕುಜ ದಶಯನ್ನು ಗುರುತು ಮಾಡುತ್ತಿವೆ. ಆದ್ದರಿಂದ ಈ ಜಾತಕನು ಕುಜದಶಯಲ್ಲಿ ಹುಟ್ಟಿದ್ದಾನೆ ಎಂದು ತಿಳಿದುಹೋಗಿದೆ. ಕುಜ ದಶೆಯಲ್ಲಿ ಜಾತಕನು ಹುಟ್ಟಿದಾಗ ಆ ದಶೆ ಎಲ್ಲಿಯವರೆಗು ಉಳಿದಿದೆ, ಎಲ್ಲಿಯವರೆಗು ಗತ ಜನ್ಮದಲ್ಲಿ ಮುಗಿದು ಹೋಗಿರುವುದು ತಿಳಿಯಬೇಕು. ಹಾಗೆ ತಿಳಿಯುವುದಕ್ಕೆ ಜನನ ಸಮಯದಲ್ಲಿ

ಕಳೆದ ಆರಿದ್ರ ಕಾಲವನ್ನು ಕುಜದಶಯಿಂದ ಗುಣಿಸಿ ಬಂದಿರುವ ಸಂಖ್ಯೆಯನ್ನು ಪೂರ್ತಿ ಆರಿದ್ರ ಪರಿಮಾಣದಿಂದ ಭಾಗಿಸಿದಾಗ ಎಷ್ಟು ವರ್ಷಗಳು ಗತ ಜನ್ಮದಲ್ಲಿ ಕಳೆದಿರುವುದು ತಿಳಿದುಹೋಗುತ್ತದೆ. ಹಾಗೆ ಭಾಗಿಸಿದಾಗ ಉಳಿದ ಶೇಷವನ್ನು ಹನ್ನೆರಡು ತಿಂಗಳಿಂದ ಹೆಚ್ಚಿಸಿ ನಕ್ಷತ್ರ ಪರಿಮಾಣದಿಂದ ಭಾಗಿಸಿದಾಗ ಎಷ್ಟು ತಿಂಗಳು ಗತ ಜನ್ಮದಲ್ಲಿ ಕಳೆದುಹೋಗಿರುವುದು ತಿಳಿಯುತ್ತದೆ. ಆಗಲೂ ಸಹ ಉಳಿದ ಶೇಷವನ್ನು 30 ದಿನಗಳಿಂದ ಹೆಚ್ಚಿಸಿ ಆರಿದ್ರ ನಕ್ಷತ್ರ ಪರಿಮಾಣದಿಂದ ಭಾಗಿಸಿದಾಗ ಗತ ಜನ್ಮದಲ್ಲಿ ಎಷ್ಟು ದಿನಗಳು ಕಳೆದಿರುವುದು ತಿಳಿಯಬಹುದು. ಹಾಗೇ ಆಗಲೂ ಸಹ ಉಳಿದ ಶೇಷವನ್ನು 24 ಗಂಟೆಗಳಿಂದ ಹೆಚ್ಚಿಸಿ ಬಂದಿರುವ ಸಂಖ್ಯೆಯನ್ನು ನಕ್ಷತ್ರ ಪರಿಮಾಣದಿಂದ ಭಾಗಿಸಿದಾಗ ಗತ ಜನ್ಮದಲ್ಲಿ ಎಷ್ಟು ಗಂಟೆಗಳು ಈ ದಶ ಮುಗಿದಿರುವುದು ತಿಳಿಯಬಲ್ಲದು. ಅದೇ ರೀತಿಯಾಗಿ ನಿಮಿಷಗಳವರೆಗು, ಕೊನೆಗೆ ಸೆಕೆಂಡುಗಳವರೆಗು ಗತ ಜನ್ಮ ಭುಕ್ತಿಯನ್ನು ತಿಳಿಯಬಹುದು. ಕುಜ ದಶ ಒಟ್ಟು ಏಳು (7) ವರ್ಷಗಳಿರುವಾಗ ಅದರಲ್ಲಿ ಎಷ್ಟು ವರ್ಷಗಳು, ಎಷ್ಟು ತಿಂಗಳುಗಳು, ಎಷ್ಟು ದಿನಗಳು, ಎಷ್ಟು ನಿಮಿಷಗಳು ಹಿಂದಿನ ಜನ್ಮದಲ್ಲಿ ಕುಜ ದಶ ಮುಗಿದು ಹೋಗಿರುವುದು ತಿಳಿದು ಉಳಿದ ಕಾಲವನ್ನು ಪ್ರಸ್ತುತ ಜನ್ಮದಲ್ಲಿ ಅನುಭವಿಸಬೇಕಾಗಿದೆಯೆಂದು ಹೇಳಬಹುದು. ಈ ವಿಧವಾಗಿ ಜಾತಕದಲ್ಲಿ ಮುಖ್ಯವಾದ ದಶಾಕಾಲವನ್ನು ತಿಳಿಯಬಹುದು. ಈಗ ಆ ಗಣಿತವನ್ನು ಕುರಿತು ಸ್ವಲ್ಪ ತಿಳಿದುಕೊಳ್ಳೋಣ.

ಆರಿದ್ರ ನಕ್ಷತ್ರ ಪೂರ್ತಿ ಕಾಲ ಪರಿಮಾಣ = **3383 ವಿಗಳಿಗೆಗಳು**

ಜಾತಕನಿಗೆ ಕಳೆದುಹೋದ ಆರಿದ್ರ ನಕ್ಷತ್ರ ಕಾಲ = **1017 ವಿಗಳಿಗೆಗಳು**

ಕಳೆದ ಆರಿದ್ರ ನಕ್ಷತ್ರವೊಂದರ ವಿಗಳಿಗೆಗಳನ್ನು,

ಆರಿದ್ರ ನಕ್ಷತ್ರಕ್ಕೆ ಬರುವ ಕುಜದಶವೊಂದರ

ಏಳು (7) ವರ್ಷಗಳಿಂದ ಗುಣಿಸಿದಾಗ

ಬಂದಿರುವ ವಿಗಳಿಗೆಗಳು = **7119**

ಬಂದಿರುವ ಮೊತ್ತವನ್ನು ಆರಿದ್ರ ನಕ್ಷತ್ರ ಪರಿಮಾಣ ವಿಗಳಿಗೆಗಳಿಂದ

| | |
|---|---|
| ಭಾಗಿಸಿದಾಗ ಬಂದಿರುವ ಭಾಗಗಳ ಸಂಖ್ಯೆ | 1017x7 |
| ಯನ್ನು ಕುಜದಶಯಲ್ಲಿ ಕಳೆದ ಕಾಲವಾಗಿ | 7119 |
| ತಿಳಿಯಬೇಕು. = **2ವರ್ಷಗಳು** | 3383) 7119 (2 ಸಂ॥ಗಳು |
| | 6766 |
| ಉಳಿದ ಶೇಷವನ್ನು 12 ತಿಂಗಳುಗಳಿಂದ | 353 x 12 |
| ಗುಣಿಸಿ ಆರಿದ್ರ ನಕ್ಷತ್ರ ಪರಿಮಾಣ ವಿಗಳಿಗೆ | |
| ಗಳಿಂದ ಭಾಗಿಸಿದಾಗ ಬಂದಿರುವುದು | |
| ತಿಂಗಳುಗಳು = **1 ತಿಂಗಳು** | 3383) 4236 (1 ತಿಂಗಳು |
| ನಂತರ ಉಳಿದ ಶೇಷವನ್ನು 30 ದಿನಗ | |
| ಳಿಂದ ಗುಣಿಸಿ ಆರಿದ್ರ ನಕ್ಷತ್ರ | 3383 |
| ಪರಿಮಾಣದಿಂದ ಭಾಗಿಸಿದಾಗ | 853 x 30 |
| ಬಂದಿರುವ ದಿನಗಳು = **7 ದಿನಗಳು –** 3383) | 25590 (7 ದಿನಗಳು |
| | 23681 |
| ಬಂದಿರುವ ಶೇಷವನ್ನು 24 ಗಂಟೆಗಳಿಂದ | 1909 x 24 |
| ಗುಣಿಸಿ ಆರಿದ್ರ ನಕ್ಷತ್ರ ವಿಗಳಿಗೆಗಳಲ್ಲಿ ಭಾಗಿಸಿದಾಗ | |
| ಬರುವುದು ಗಂಟೆಗಳು = **13 ಗಂಟೆಗಳು** 3383) | 45816 (13 ಗಂಟೆಗಳು |
| ಇದನ್ನನುಸರಿಸಿ ಗತ ಜನ್ಮದಲ್ಲಿ ಕಳೆದ ಕುಜ ದಶ | 3383 |
| 2 ಸಂ॥ಗಳು 1 ತಿಂಗಳು 7 ದಿನಗಳ, | 11986 |
| 13 ಗಂಟೆಗಳೆಂದು ತಿಳಿಯುತ್ತಿದೆ. | 10149 |
| | 1837 |

| | ವರ್ಷ. ತಿಂಗಳು. ದಿನ. ಗಂಟೆ |
|---|---|
| ಆರಿದ್ರ ನಕ್ಷತ್ರದಿಂದ ಜನ್ಮದಲ್ಲಿ ಬಂದಿರುವ ದಶ ಕುಜ ದಶ | – 7–00–00–00 |
| ಗತ ಜನ್ಮ ಭುಕ್ತಿಯಲ್ಲಿ ಮುಗಿದುಹೋದ ಕುಜದಶ | – 2–01–07–13 |
| ಗತಜನ್ಮದಲ್ಲಿ ಖರ್ಚು ಆಗಿ ಉಳಿದ ಕುಜದಶ ಕಾಲ | – 4–10–22–11 |
| ನಂತರ ಬರುವ ರಾಹುದಶ ಕಾಲ | – 10–00–00–00 |
| ಜಾತಕನ ಬಾಲ್ಯದಲ್ಲಿ ನಡೆಯುವ ಕಾಲ | – 14–10–22–11 |
| ನಂತರ ಬರುವ ಗುರುದಶ ಕಾಲ | – 13–00–00–00 |
| ಜಾತಕನ ವಯಸ್ಸು | – 27–10–22–11 |
| ನಂತರ ಬರುವ ಭೂ ದಶಾಕಾಲ | – 13–00–00–00 |
| ಅಂದಿಗೆ ಮನುಷ್ಯನಿಗೆ ವಯಸ್ಸು ಇಲ್ಲಿಯವರೆಗು ಬರುತ್ತದೆ | – 40–10–22–11 |
| ನಂತರ ಬರುವ ಶನಿ ದಶಾಕಾಲ | – 13–00–00–00 |
| ಈ ವಯಸ್ಸಿನವರೆಗು ಶನಿದಶ ಇರುತ್ತದೆ | – 53–10–22–11 |
| ಶನಿದಶ ಮುಗಿದುಹೋದಾಗ ಜಾತಕನಿಗೆ ಇರುವ ವಯಸ್ಸು | – 53–10–22–11 |
| ನಂತರ ಬರುವ ಬುಧ ದಶಾಕಾಲ | – 10–00–00–00 |
| ಅಂದಿಗೆ ಇರುವ ವಯಸ್ಸು | – 63–10–22–11 |
| ನಂತರ ಬರುವ ಕೇತು ದಶಾಕಾಲ | – 7–00–00–00 |
| ಕೇತುದಶ ಮುಗಿದ ನಂತರದ ವಯಸ್ಸು | – 70–10–22–11 |
| ನಂತರ ಬರುವ ಶುಕ್ರ ದಶಾಕಾಲ | – 13–00–00–00 |
| ಶುಕ್ರ ದಶಯಿಂದ ಆದ ವಯಸ್ಸು | – 83–10–22–11 |
| ನಂತರ ಬರುವ ಮಿತ್ರ ದಶಾಕಾಲ | – 7–00–00–00 |
| ಮಿತ್ರ ದಶಯಿಂದಬಂದ ವಯಸ್ಸು | – 90–10–22–11 |
| ನಂತರ ನಡೆಯುವ ಚಿತ್ರ ದಶಾಕಾಲ | – 7–00–00–00 |

| | |
|---|---|
| ವೃದ್ಧಾಪ್ಯದಲ್ಲಿ ವಯಸ್ಸು | – 97–10–22–11 |
| ರವಿ ದಶಾಕಾಲ | – 10–00–00–00 |
| | 107–10–22–11 |
| ಚಂದ್ರ ದಶಾಕಾಲ | – 10–00–00–00 |
| | 117–10–22–11 |
| ಗತ ಜನ್ಮದಲ್ಲಿ ಕಳೆದ ಕುಜದಶ ಕಾಲ (ಭುಕ್ತಿ) | – 2–01–07–13 |
| ಒಟ್ಟು ಹನ್ನೆರಡು (12) ದಶಗಳ ಕಾಲ | – 120–00–00–00 |

ಇಲ್ಲಿಯವರೆಗು ಹನ್ನೆರಡು ಗ್ರಹಗಳ ದಶಗಳನ್ನು ಹೇಳಿಕೊಂಡಿದ್ದೇವೆ ಹನ್ನೆರಡು ಗ್ರಹಗಳ ದಶಗಳೆಲ್ಲವನ್ನೂ ಸೇರಿಸಿದರೆ ಒಟ್ಟು 120 ವರ್ಷಗಳು ಆಗುತ್ತಿವೆ. ಒಬ್ಬ ಮನುಷ್ಯನವೊಂದು ಸಂಪೂರ್ಣ ಆಯುಷ್ಯ 120 ವರ್ಷಗಳೆಂದು ಪೂರ್ವಕಾಲದಲ್ಲಿ ಹಿರಿಯರು ಇದನ್ನನುಸರಿಸಿಯೇ ಹೇಳುತ್ತಿದ್ದರು. ಇಲ್ಲಿ ಪೂರ್ತಿ ವಿವರಕ್ಕೋಸ್ಕರ 12 ದಶಗಳನ್ನು ಬರೆದು ತೋರಿಸಿದ್ದೇವೆ. ಆದರೆ ಪ್ರತಿ ಮನುಷ್ಯ 120 ವರ್ಷಗಳು ಬದುಕುವುದಿಲ್ಲವೆಂದು ಎಲ್ಲರಿಗೂ ತಿಳಿದಿದೆ. 120 ವರ್ಷಗಳು ಬದುಕಬಾರದೆನ್ನುವ ನಿಯಮ ಏನೂ ಇಲ್ಲ. ಆದ್ದರಿಂದ 120 ವರ್ಷಗಳು ಬದುಕುವವರು ಸಹ ಇದ್ದಾರೆ. ಸ್ಥೂಲ ಶರೀರಗಳೊಂದಿಗೆ ಯಾರೂ ಬದುಕಿರದಿದ್ದರೂ ಸೂಕ್ಷ್ಮವಾಗಿ, ಸೂಕ್ಷ್ಮ ಶರೀರದೊಂದಿಗೆ ಎಷ್ಟೋ ಜನ 120 ವರ್ಷಗಳಿಗಿಂತ ಹೆಚ್ಚಿಗೆ ಬದುಕುತ್ತಿರುವವರು ಸಹ ಇದ್ದಾರೆ. ಇಲ್ಲಿ ಹ್ನನೆರಡು ದಶಗಳನ್ನು ಬರೆದಷ್ಟು ಮಾತ್ರಕ್ಕೆ ಈ ಜಾತಕನು ಸಹ 100 ವರ್ಷಗಳ ಮೇಲ್ಪಟ್ಟು ಬದುಕುವನೆಂದು ಸಹ ಹೇಳಲಾರೆವು.

ದಶಗಳ ವಿಷಯವನ್ನು ಕುರಿತು ಹೇಳಿದರೆ ಪ್ರತಿ ದಶಗೂ ಅಂತರ್ದಶ ಗಳೆಂದು ಸಹ ಇವೆ. ಕುಜ ದಶಯಲ್ಲಿ ಅಂತರ್ದಶಗಳು ತಿಳಿಯುವುದಕ್ಕೆ ಒಂದು ಸೂತ್ರವಿದೆ. ಅದರ ಪ್ರಕಾರ ಮೊದಲು ಕುಜದಶಾ ಸಂಖ್ಯೆಯನ್ನು ತಿಳಿಯಬೇಕಾದ ದಶಾ ಸಂವತ್ಸರ ಸಂಖ್ಯೆಯಿಂದ ಗುಣಿಸಿದಾಗ ಬಂದಿರುವ

ಮೊತ್ತವನ್ನು 3ರಿಂದ ಗುಣಿಸಬೇಕು. ನಂತರ ಬಂದಿರುವ ಮೊತ್ತವನ್ನು 30 ಸಂಖ್ಯೆಯಿಂದ ಭಾಗಿಸಬೇಕು. ಆಗ ಭಾಗಿಸಿದಾಗ ಬಂದಿರುವ ಸಂಖ್ಯೆಯನ್ನು ತಿಂಗಳುಗಳಾಗಿ, ಉಳಿದ ಶೇಷವನ್ನು ದಿನಗಳಾಗಿ ಬರೆದುಕೊಳ್ಳಬೇಕು.

ಕುಜದಶ ಸಂಖ್ಯೆಯನ್ನು ಕುಜದಶ ಸಂಖ್ಯೆಯಿಂದಲೇ ಗುಣಿಸಬೇಕು – 7x7=49

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 49x3=147

ಬಂದಿರುವ ಮೊತ್ತವನ್ನು 30ರಿಂದ ಭಾಗಿಸಬೇಕು – 147÷30៖4 ತಿಂಗಳು

120

27 ದಿನಗಳು

1) ಇದರ ಪ್ರಕಾರ ಕುಜದಶಯಲ್ಲಿ ಕುಜ ಅಂತರ್‌ದಶ 4 ತಿಂಗಳುಗಳು, 27 ದಿನಗಳು

ಕುಜದಶ ಸಂಖ್ಯೆಯನ್ನು ರಾಹುದಶಯಿಂದ ಗುಣಿಸಬೇಕು – 7 x 10 = 70

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 70 x 3 ៖ 210

–ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಬೇಕು – 210÷30 (7ತಿಂಗಳುಗಳು

210

2) ಇದರ ಪ್ರಕಾರ ಕುಜದಶಯಲ್ಲಿ ರಾಹು ಅಂತರ್ದಶ – 7 ತಿಂಗಳುಗಳು

ಕುಜದಶ ಸಂಖ್ಯೆಯನ್ನು ಗುರುದಶ ಸಂಖ್ಯೆಯಿಂದ ಗುಣಿಸಬೇಕು – 7 x 13=91

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 91 x 3=273

ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಬೇಕು – 273÷30 (9 ತಿಂಗಳುಗಳು

270

3 ದಿನಗಳು.

3) ಇದರ ಪ್ರಕಾರ ಕುಜದಶಯಲ್ಲಿ ಗುರು ಅಂತರ್ದಶ–9 ತಿಂಗಳ, 3 ದಿನಗಳು

ಕುಜದಶ ಸಂಖ್ಯೆಯನ್ನು ಭೂಮಿದಶ ಸಂಖ್ಯೆಯಿಂದ ಗುಣಿಸಬೇಕು – 7 x13=91

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 91 x 3 =273

ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಬೇಕು – 273÷30 (9 ತಿಂಗಳುಗಳು

270

3 ದಿನಗಳು.

4) ಇದರ ಪ್ರಕಾರ ಕುಜದಶಯಲ್ಲಿ ಭೂಮಿ ಅಂತರ್ದಶ – 9 ತಿಂಗಳ, 3 ದಿನಗಳು

ಕುಜದಶ ಸಂಖ್ಯೆಯನ್ನು ಶನಿದಶ ಸಂಖ್ಯೆಯಿಂದ ಗುಣಿಸಬೇಕು – 7 X 13=91

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 91 X 3=273

ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಬೇಕು –273÷30 (9 ತಿಂಗಳುಗಳು

270

3 ದಿನಗಳು.

5) ಇದರ ಪ್ರಕಾರ ಕುಜದಶಯಲ್ಲಿ ಶನಿ ಅಂತರ್ದಶ – 9 ತಿಂಗಳ, 3 ದಿನಗಳು

ಕುಜದಶೆ ಸಂಖ್ಯೆಯನ್ನು ಬುಧದಶೆ ಸಂಖ್ಯೆಯಿಂದ ಗುಣಿಸಬೇಕು 7X10=70

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು 70X3=210

ಬಂದಿರುವ ಮೊತ್ತವನ್ನು 30ರಿಂದ ಭಾಗಿಸಬೇಕು – 210÷30 (7 ತಿಂಗಳುಗಳು

210

6) ಇದರ ಪ್ರಕಾರ ಕುಜದಶಯಲ್ಲಿ ಬುಧ ಅಂತರ್ದಶ – 7 ತಿಂಗಳುಗಳು

ಕುಜದಶ ಸಂಖ್ಯೆಯನ್ನು ಕೇತುದಶ ಸಂಖ್ಯೆಯಿಂದ ಗುಣಿಸಬೇಕು – 7 X 7 = 49

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 49 X 3 = 147

ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಬೇಕು – 147÷30 (4 ತಿಂಗಳುಗಳು

120

27 ದಿನಗಳು

7) ಇದರ ಪ್ರಕಾರ ಕುಜದಶಯಲ್ಲಿ ಕೇತು ಅಂತರ್ದಶ – 4 ತಿಂಗಳ, 27 ದಿನಗಳು

ಕುಜದಶ ಸಂಖ್ಯೆಯನ್ನು ಶುಕ್ರದಶ ಸಂಖ್ಯೆಯಿಂದ ಗುಣಿಸಬೇಕು – 7X13=91

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 91X3=273

ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಬೇಕು – 273÷30 (9 ತಿಂಗಳುಗಳು

270

3 ದಿನಗಳು

**8) ಇದರ ಪ್ರಕಾರ ಕುಜದಶಯಲ್ಲಿ ಶುಕ್ರ ಅಂತರ್ದಶ – 9 ತಿಂಗಳ, 3 ದಿನಗಳು**

ಕುಜದಶ ಸಂಖ್ಯೆಯನ್ನು ಮಿತ್ರದಶ ಸಂಖ್ಯೆಯಿಂದ ಗುಣಿಸಬೇಕು – 7 X 7= 49

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 49X3=147

ಬಂದಿರುವ ಮೊತ್ತವನ್ನು 30ರಿಂದ ಭಾಗಿಸಬೇಕು – 147÷30=(4 ತಿಂಗಳುಗಳು

120

27 ದಿನಗಳು

**9) ಇದರ ಪ್ರಕಾರ ಕುಜದಶಯಲ್ಲಿ ಮಿತ್ರ ಅಂತರ್ದಶ – 4 ತಿಂಗಳ, 27 ದಿನಗಳು**

ಕುಜದಶ ಸಂಖ್ಯೆಯನ್ನು ಚಿತ್ರದಶ ಸಂಖ್ಯೆಯಿಂದ ಗುಣಿಸಬೇಕು – 7X7=49

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 49X3=147

ಬಂದಿರುವ ಮೊತ್ತವನ್ನು 30ರಿಂದ ಭಾಗಿಸಬೇಕು – 147÷30=(4 ತಿಂಗಳುಗಳು

120

27 ದಿನಗಳು

10) ಇದರ ಪ್ರಕಾರ ಕುಜದಶಯಲ್ಲಿ ಚಿತ್ರ ಅಂತರ್ದಶ – 4 ತಿಂಗಳ, 27 ದಿನಗಳು

ಕುಜದಶ ಸಂಖ್ಯೆಯನ್ನು ಸೂರ್ಯದಶ ಸಂಖ್ಯೆಯಿಂದ ಗುಣಿಸಬೇಕು – 7x10=70

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 70X3=210

ಬಂದಿರುವ ಮೊತ್ತವನ್ನು 30ರಿಂದ ಭಾಗಿಸಬೇಕು – 210÷30= (7 ತಿಂಗಳುಗಳು

210

00

11) ಇದರ ಪ್ರಕಾರ ಕುಜದಶಯಲ್ಲಿ ಸೂರ್ಯ ಅಂತರ್ದಶ – 7 ತಿಂಗಳು

ಕುಜದಶ ಸಂಖ್ಯೆಯನ್ನು ಚಂದ್ರದಶ ಸಂಖ್ಯೆಯಿಂದ ಗುಣಿಸಬೇಕು – 7X10=70

ಬಂದಿರುವ ಮೊತ್ತವನ್ನು 3 ರಿಂದ ಗುಣಿಸಬೇಕು – 70X3=210

ಬಂದಿರುವ ಮೊತ್ತವನ್ನು 30ರಿಂದ ಭಾಗಿಸಬೇಕು – 210÷30=(7 ತಿಂಗಳಗಳು

210

0

12) ಇದರ ಪ್ರಕಾರ ಕುಜದಶಯಲ್ಲಿ ಚಂದ್ರ ಅಂತರ್ದಶ – 7 ತಿಂಗಳುಗಳು

**ಇಲ್ಲಿಗೆ ಕುಜದಶಯಲ್ಲಿ ಹನ್ನೆರಡು ಅಂತರ್ದಶಗಳು ತಿಳಿದುಹೋಗಿವೆ. ಅವುಗಳನ್ನು ಕ್ರಮವಾಗಿ ಬರೆದು ನೋಡೋಣ.**

| | | | |
|---|---|---|---|
| | | | **ಸಂ–ತಿ–ದಿ** |
| 1) ಕುಜದಶಯಲ್ಲಿ | ಕುಜ ಅಂತರ್ದಶ | = | 0–4–27 |
| 2) ಕುಜದಶಯಲ್ಲಿ | ರಾಹು ಅಂತರ್ದಶ | = | 0–7–00 |
| 3) ಕುಜದಶಯಲ್ಲಿ | ಗುರು ಅಂತರ್ದಶ | = | 0–9–03 |
| 4) ಕುಜದಶಯಲ್ಲಿ | ಭೂಮಿ ಅಂತರ್ದಶ | = | 0–9–03 |
| 5) ಕುಜದಶಯಲ್ಲಿ | ಶನಿ ಅಂತರ್ದಶ | = | 0–9–03 |
| 6) ಕುಜದಶಯಲ್ಲಿ | ಬುಧ ಅಂತರ್ದಶ | = | 0–7–00 |
| 7) ಕುಜದಶಯಲ್ಲಿ | ಕೇತು ಅಂತರ್ದಶ | = | 0–4–27 |
| 8) ಕುಜದಶಯಲ್ಲಿ | ಶುಕ್ರ ಅಂತರ್ದಶ | = | 0–9–03 |
| 9) ಕುಜದಶಯಲ್ಲಿ | ಮಿತ್ರ ಅಂತರ್ದಶ | = | 0–4–27 |
| 10) ಕುಜದಶಯಲ್ಲಿ | ಚಿತ್ರ ಅಂತರ್ದಶ | = | 0–4–27 |
| 11) ಕುಜದಶಯಲ್ಲಿ | ಸೂರ್ಯ ಅಂತರ್ದಶ | = | 0–7–00 |
| 12) ಕುಜದಶಯಲ್ಲಿ | ಚಂದ್ರ ಅಂತರ್ದಶ | = | 0–7–00 |
| ಅಂತರ್ದಶಗಳ ಒಟ್ಟು ಕಾಲ | | = | 7–00–00 |

ಕುಜದಶ ಗತಜನ್ಮದಲ್ಲಿ ಮುಗಿದುಹೋಗಿದೆ = 2 ವರ್ಷಗಳು, 1 ತಿಂಗಳು, 7 ದಿನಗಳು, 13 ಗಂಟೆ॥

ಜಾತಕನಿಗೆ ಉಳಿದ ಕುಜದಶಾಕಾಲ 4 ವರ್ಷಗಳ, 10 ತಿಂಗಳ, 22 ದಿನಗಳು, 11 ಗಂಟೆಗಳು

ಜಾತಕನು ಹುಟ್ಟಿದಾಗ ಯಾವ ಅಂತರ್ದಶ ನಡೆಯುತ್ತಿದೆಯೋ ತಿಳಿಯಬೇಕೆಂದರೆ ಕಳೆದ ಕುಜದಶಯಲ್ಲಿ ಒಂದೊಂದು ಅಂತರ್ದಶ

ತೆಗೆದುಹಾಕುತ್ತಾ ಬಂದಾಗ ಕೊನೆಯದಾಗಿ ಉಳಿದಿರುವುದು ಆಗಿನ ಅಂತರ್ದಶ ಎಂದು ತಿಳಿಯಬೇಕು.

| | | |
|---|---|---|
| | | **ವರ್ಷ–ತಿಂ–ದಿನ** |
| ಗತ ಜನ್ಮದಲ್ಲಿ ಕುಜದಶ ಮುಗಿದುಹೋಗಿದೆ | : | 2–1–7 |
| ಕುಜದಶಯಲ್ಲಿ ಕುಜ ಅಂತರ್ದಶ ಕಾಲ | : | 0–4–27 |
| | | 1–8–10 |
| ಕುಜದಶಯಲ್ಲಿ ರಾಹು ಅಂತರ್ದಶಕಾಲ | : | 0–7–00 |
| | | 1–1–10 |
| ಕುಜದಶಯಲ್ಲಿ ಗುರು ಅಂತರ್ದಶ ಕಾಲ | : | 0–9–03 |
| ಉಳಿದ ಭೂಮಿ ಅಂತರ್ದಶ ಕಾಲ | : | 0–4–7 |
| ನಂತರ ಬರುವುದು ಭೂಮಿ ಅಂತರ್ದಶ | : | 9 ತಿಂಗಳ, 3 ದಿನಗಳು |

ಇರುವುದರಿಂದ ಉಳಿದಿರುವುದು 4 ತಿಂಗಳ, 7 ದಿನಗಳು ಆದ್ದರಿಂದ ಆಗ ಭೂಮಿ ಅಂತರ್ದಶ ನಡೆಯುತ್ತಿದೆಯೆಂದು ತಿಳಿಯುತ್ತಿದೆ.

| | | |
|---|---|---|
| ಭೂಮಿ ಅಂತರ್ದಶ | : | 0–9–03 |
| ಉಳಿದ ಭೂಮಿ ಅಂತರ್ದಶ | : | 0–4–7 |
| ನಡೆಯಬೇಕಾದ ಭೂಮಿ ಅಂತರ್ದಶ | : | 0–4–26 |
| ಕುಜದಶಯಲ್ಲಿ ನಡೆಯಬೇಕಾದ ಶನಿ ಅಂತರ್ದಶ | – | 0–9–03 |
| | | 1–1–29 |
| ಕುಜದಶಯಲ್ಲಿ ನಂತರ ನಡೆಯುವ ಬುಧ ಅಂತರ್ದಶ | – | 0–7–00 |

| | | |
|---|---|---|
| | | 1–8–29 |
| ಕುಜದಶಯಲ್ಲಿ ನಂತರ ನಡೆಯುವ ಕೇತು ಅಂತರ್ದಶ | – | 0–4–27 |
| | | 2–1–26 |
| ಕುಜದಶಯಲ್ಲಿ ನಂತರ ನಡೆಯುವ ಶುಕ್ರ ಅಂತರ್ದಶ | – | 0–9–03 |
| | | 2–10–29 |
| ಕುಜದಶಯಲ್ಲಿ ನಂತರ ನಡೆಯುವ ಮಿತ್ರ ಅಂತರ್ದಶ | – | 0–4–27 |
| | | 3–3–26 |
| ಕುಜದಶಯಲ್ಲಿ ನಂತರ ನಡೆಯುವ ಚಿತ್ರ ಅಂತರ್ದಶ | – | 0–4–27 |
| | | 3–8–23 |
| ಕುಜದಶಯಲ್ಲಿ ನಂತರ ನಡೆಯುವ ಸೂರ್ಯ ಅಂತರ್ದಶ | – | 0–7–00 |
| | | 4–3–23 |
| ಕುಜದಶಯಲ್ಲಿ ನಂತರ ನಡೆಯುವ ಚಂದ್ರ ಅಂತರ್ದಶ | – | 0–7–00 |
| ಭುಕ್ತಿ ನಂತರ ಜಾತಕನಿಗೆ ಉಳಿದ ಕುಜದಶ | – | 4–10–23 |

ಈ ವಿಧವಾಗಿ ಜಾತಕನಿಗಿರುವ ಮಹಾ ದಶೆಗಳಲ್ಲಿ ಅಂತರ್ದಶಗಳನ್ನು ಗುರುತಿಟ್ಟುಕೊಳ್ಳಬಹುದು. ಯಾವ ದಶೆಯಲ್ಲಾದರೂ ಅಂತರ್ದಶಗಳು ತಿಳಿಯುವ ಸೂತ್ರವನ್ನು ಮೊದಲೇ ಹೇಳಿದ್ದೇವೆ. ಇರುವ ದಶೆಯನ್ನು ಮತ್ತೊಂದು ದಶಾಸಂವತ್ಸರಗಳಿಂದ ಗುಣಿಸಿ, ಬಂದಿರುವ ಮೊತ್ತವನ್ನು 3 ರಿಂದ ಗುಣಿಸಿ, ನಂತರ ಬಂದಿರುವ ಮೊತ್ತವನ್ನು 30 ರಿಂದ ಭಾಗಿಸಿದಾಗ ಅಂತರ್ದಶಗಳು ತಿಳಿಯುತ್ತವೆ. ಪ್ರತಿ ಜಾತಕಕ್ಕೂ ದಶಗಳನ್ನು ಮತ್ತು ಅಂತರ್ದಶಗಳನ್ನು ಬರೆದುಕೊಡುವುದು ನಡೆಯುತ್ತಿದೆ. ಈ ದಿನ ಬಹಳ ಜನ ಜ್ಯೋತಿಷ್ಯರಾದವರು ಗ್ರಹಚಾರ ಫಲವಿದ್ದಂತೇ ದಶಗಳ ಫಲಿತ ಕೂಡಾ ಇರುತ್ತದೆಂದು ತಿಳಿದು ಅವುಗಳನ್ನು ಕುರಿತು ಹೇಳುತ್ತಿರುವರು. ಆದರೇ ಗ್ರಹಚಾರದಲ್ಲಿ ಇದ್ದಂತೆ

ದಶಾಚಾರದಲ್ಲಿ ಇರುವುದಿಲ್ಲವೆಂದು ಎಲ್ಲರಿಗೂ ತಿಳಿಸುತ್ತಿದ್ದೇವೆ. ಗ್ರಹಚಾರದಲ್ಲಿ ಗ್ರಹಗಳ ಅಧೀನದಲ್ಲಿನ ಕರ್ಮಗಳು ಆಚರಣೆಗೆ ಬರುತ್ತಿವೆ. ಆದ್ದರಿಂದ ಗ್ರಹಗಳಿಂದ ಬರುವ ಆಚರಣೆಗಳನ್ನು ಗ್ರಹಚಾರ ಎಂದು ಕರೆಯುತ್ತಿದ್ದೇವೆ. ಗ್ರಹಚಾರ ಎನ್ನುವ ಪದವನ್ನು ಬೇರ್ಪಡಿಸಿ ನೋಡಿದರೆ ಗ್ರಹ+ಆಚರಣೆ=ಗ್ರಹಾಚರಣೆ ಎನ್ನಬಹುದು. ಹಾಗೆಯೇ ದಶ+ಆಚಾರ=ದಶಾಚಾರ ಎಂದು ಕರೆಯಬಹುದು. ಗ್ರಹಚಾರದಲ್ಲಿ ಗ್ರಹಗಳ ಆಚರಣೆ ಹೊರತು ಏನೂ ಇಲ್ಲವೆಂದು ತಿಳಿಯಬೇಕು.

ದಶಾಚಾರ ಎನ್ನುವ ಹೆಸರು ವಿಭಜಿಸಿ ನೋಡಿದರೆ ದಶ+ಆಚಾರ ಎಂದು ತಿಳಿಯುತ್ತಿದೆ. ದಶ ಎಂದರೆ ಹತ್ತುಯೆಂದು ಎಲ್ಲರಿಗೂ ತಿಳಿದಿದೆ. ಆಚಾರವೆಂದರೆ ಮಾಡುವುದೆಂದು ಅರ್ಥ. ಗ್ರಹಚಾರದಲ್ಲಿದ್ದಂತೆ ದಶಾಚಾರದಲ್ಲಿ ಸಹ ಆಚಾರವಿದೆ. ಆದರೆ ಅಲ್ಲಿ ಗ್ರಹವೆಂದರೆ ಗ್ರಹಿಸಿಕೊಳ್ಳುವುದೆಂದು, ಕರ್ಮವನ್ನು ಗ್ರಹಿಸಿಕೊಳ್ಳುತ್ತಿದೆಯೆಂದು ಹೇಳಿಕೊಂಡಿದ್ದೇವೆ. ಗ್ರಹಗಳು ಮಾಡುವ ಕೆಲಸವನ್ನನುಸರಿಸಿ ಗ್ರಹಚಾರ ಎನ್ನುವುದರಲ್ಲಿ ತಪ್ಪಿಲ್ಲ. ಅವರು ಗ್ರಹಿಸಿಕೊಂಡ ಕರ್ಮವನ್ನು ಆಚರಿಸುವಂತೆ ಮಾಡುತ್ತಿರುವ ಹನ್ನೆರಡನ್ನು, ಹನ್ನೆರಡು ಗ್ರಹಗಳಾಗಿ ಹೇಳಿಕೊಳ್ಳುವುದು ಸರಿಯಾದ ಮಾತಾಗಿಯೇ ಇದೆ. ಆದರೆ ಇಲ್ಲಿ ದಶಾಚಾರದ ಹತ್ತಿರವೇ ಪೂರ್ತಿ ವಿವರ ಕಾಣಿಸುತ್ತಿಲ್ಲ. ದಶಾಚಾರ ಎಂದರೆ ಹತ್ತು ಕೆಲಸಗಳೆಂದು ಅಥವಾ ಹತ್ತು ವಿಧಗಳ ಕೆಲಸಗಳೆಂದು ಅರ್ಥವಲ್ಲವೆ! ಅದರಲ್ಲಿ ಪ್ರತ್ಯೇಕತೆ ಏನಿದೆಯೆಂದು ಕೆಲವರು ಕೇಳಬಹುದು. ಅದಕ್ಕೆ ನಮ್ಮ ಸಮಾಧಾನವೇನೆಂದರೆ! ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ವಿಶ್ವರೂಪವನ್ನು ತೋರಿಸಿದಾಗ ಆ ವಿಶ್ವರೂಪವನ್ನು ನೋಡಿದ ಅರ್ಜುನನು ಆಶ್ಚರ್ಯಪಟ್ಟು ಭಗವಂತನಾದ ಶ್ರೀಕೃಷ್ಣನನ್ನು ದೇವರಂತೆ ಗುರುತಿಸಿ ಆಗ ಅರ್ಜುನನು ತನ್ನ ಮಾತುಗಳಲ್ಲಿ ಒಂದು ಮಾತು ಹೇಳಿದ್ದಾನೆ. ಆ ಮಾತು ದೇವರು ಹೀಗಿದ್ದಾನೆಂದು ಹೇಳಿದಂತಿದೆ. ಅರ್ಜುನನು ಆ ದಿನ ನಮಗೋಸ್ಕರ ಹೇಳದಿದ್ದರೂ ಆತನು ಒಳಗಿನ ಭಾವವನ್ನು ವ್ಯಕ್ತಪಡಿಸಿದಾಗ ನಮಗೆ ಅದರಲ್ಲಿ ದೇವರ ಜ್ಞಾನ ಅರ್ಥವಾಗುತ್ತಿದೆ. ಭಗವದ್ಗೀತೆಯಲ್ಲಿ ವಿಶ್ವರೂಪಸಂದರ್ಶನ ಯೋಗದಲ್ಲಿ 40ನೇ ಶ್ಲೋಕದಲ್ಲಿ ಹೀಗಿದೆ.

**"ಮುಗಿಯುವೆನು ಮುಂದೆ, ಮುಗಿಯುವೆನು ಹಿಂದೆ,**

**ಮುಗಿಯುವೆನು ಸರ್ವ ದಿಕ್ಕುಗಳಲ್ಲಿ"** ಎಂದು ಹೇಳುವುದು ನಡೆದಿದೆ. ಈ ವಾಕ್ಯಗಳು ಎಲ್ಲರಿಗೂ ಅರ್ಥವಾಗುವಂತಹುಗಳೇ. ಇದರಲ್ಲಿ ರಹಸ್ಯವೇನೂ ಇಲ್ಲ. ಆದರೂ ನಾವು ಸರ್ವ ಸಾಧಾರಣ ಅರ್ಥವಿರುವ ಮಾತಾಗಿ ಹೇಳಿಕೊಂಡರೂ ಪ್ರತ್ಯೇಕವಾದ ವಿಶೇಷತೆ ಇದೆ. ಆ ವಿಶೇಷತೆ ಏನೆಂದರೆ! ಎರಡನೆ ವಾಕ್ಯದಲ್ಲಿ "ಮುಗಿಯುವೆನು ಸರ್ವ ದಿಕ್ಕುಗಳಲ್ಲಿ" ಎಂದು ಅಂದಾಗ ಒಟ್ಟು ಎಂಟು ದಿಕ್ಕುಗಳಲ್ಲಿ ಮುಗಿಯುತ್ತಿದ್ದೇನೆಂದು ಅರ್ಥ ಅಲ್ವಾ!. ಎಂಟು ದಿಕ್ಕುಗಳಲ್ಲೇ ಮುಂದೆ ಹಿಂದೆ ಎರಡು ದಿಕ್ಕುಗಳಿವೆಯೆಂದು ಮರೆಯಬಾರದು. ಆದರೆ ಮೊದಲ ವಾಕ್ಯದಲ್ಲಿ "ಮುಗಿಯುವೆನು ಮುಂದೆ, ಮುಗಿಯುವೆನು ಹಿಂದೆ" ಸರ್ವ ದಿಕ್ಕುಗಳಾದ ಎಂಟು ದಿಕ್ಕುಗಳಲ್ಲದೆ ಮುಂದೆ ಹಿಂದೆ ಎನ್ನುವವು ಪ್ರತ್ಯೇಕವಾಗಿ ಇವೆಯಾ ಎಂದು ಅನುಮಾನ ಬರುತ್ತದೆ. ಈ ಮಾತುಗಳು ಸರ್ವ ಸಾಧಾರಣಗಳೆಂದು ಬಿಟ್ಟುಹಾಕಿದರೇ ವಿಶೇಷತೆ ಏನೂ ಇರುವುದಿಲ್ಲ. ಈ ಮಾತನ್ನು ಕುರಿತು ಪ್ರತ್ಯೇಕವಾಗಿ ಯೋಚಿಸಿದರೆ ಯೋಚಿಸುವಂತೆ ಮಾಡುವ ಆತ್ಮ ಒಂದು ಮಾತನ್ನು ಹೇಳುತ್ತಿದೆ. ತಲೆ ತಗ್ಗಿಸಿ ನೋಡಿದರೆ ಕಾಣಿಸುವುದು ಕೆಳಗೆ, ತಲೆ ಎತ್ತಿ ನೋಡಿದರೆ ಕಾಣಿಸುವುದು ಮೇಲೆ, ಕೆಳಗಿನದ್ದು ಯಾವಾಗಲೂ ಕಾಣಿಸುತ್ತಿದೆ ಆದ್ದರಿಂದ ಅದನ್ನು ಮುಂದಿನದ್ದು ಎಂದಿದ್ದಾರೆ. ಅದೇ ಕೆಲಸವಾಗಿ ತಲೆ ಎತ್ತಿ ನೋಡಿದರಾಗಲಿ ಕಾಣಿಸದ ಮೇಲ್ಭಾಗವನ್ನು ಹಿಂದೆ ಎಂದಿದ್ದಾರೆ. ದೇವರು ಸರ್ವ ದಿಕ್ಕುಗಳಾದ ಅಷ್ಟದಿಕ್ಕುಗಳಲ್ಲೇ ಅಲ್ಲ ಮೇಲೆ ಕೆಳಗೆ ಇದ್ದಾನೆ ಆದ್ದರಿಂದ, ಸರ್ವ ದಿಕ್ಕುಗಳಿಗೇ ಅಲ್ಲದೆ ಮುಂದೆ (ಕೆಳಗೆ) ಹಿಂದೆ (ಮೇಲೆ) ಮುಗಿಯುತ್ತಿದ್ದೇನೆಂದು ಅರ್ಜುನನು ಹೇಳುವುದು ನಡೆದಿದೆ. ಆ ದಿನ ಅರ್ಜುನನು ಜ್ಞಾನವಿದ್ದು ಆ ಮಾತನ್ನು ಹೇಳಲಿಲ್ಲ. ಪ್ರತ್ಯಕ್ಷವಾಗಿ ಕಾಣಿಸುವುದನ್ನನುಸರಿಸಿ ಹೇಳಿದ್ದಾನೆ. ಪ್ರತ್ಯಕ್ಷವಾಗಿ ಕಾಣಿಸುವ ದೇವರು ಅಷ್ಟ ದಿಕ್ಕುಗಳಲ್ಲೇ ಅಲ್ಲದೆ, ಮೇಲೆ ಕೆಳಗೂ ಸಹ ಕಾಣಿಸಿದ್ದಾನೆ. ಆದ್ದರಿಂದ ಅರ್ಜುನನು ಹಾಗೆ ಹೇಳಿರುತ್ತಾನೆಂದು ಅಂದುಕೊಳ್ಳೋಣ. ಈಗ ಸುತ್ತಲೂ ಇರುವವು ಎಂಟು ದಿಕ್ಕುಗಳಾದರೆ ಮೇಲೆ ಒಂದು, ಕೆಳಗೆ ಒಂದು ಎಂದು ಎರಡನ್ನೂ

ಸೇರಿಸಿಕೊಂಡರೆ ಒಟ್ಟು ಹತ್ತು ದಿಕ್ಕುಗಳು ಆಗುತ್ತಿವೆ. ದೇವರು ನಮಗೆ ಕಾಣಿಸದಿದ್ದರೂ, ತಿಳಿಯದಿದ್ದರೂ ಹತ್ತು ದಿಕ್ಕುಗಳಲ್ಲಿ ಸರ್ವತ್ರಾ ವ್ಯಾಪಿಸಿದ್ದಾನೆ. ಆದ್ದರಿಂದ ದೇವರನ್ನು ಗುಪ್ತವಾಗಿ ದಶ ಎಂದಿದ್ದಾರೆ. ದೇವರು ಮಾಡುವ ಕೆಲಸವನ್ನಾಗಲೀ, ದೇವರಿಂದ ನಡೆಯುವ ಕೆಲಸವನ್ನಾಗಲೀ ಅರ್ಥದಿಂದ ಇರುವಂತೆ ದಶ+ಆಚಾರ=ದಶಾಚಾರ ಎಂದು ಹೇಳಿದ್ದಾರೆ. ದಶ ಎಂದರೆ ಹತ್ತು ಕಡೆಯಿರುವ ದೇವರೆಂದು ಆಚಾರವೆಂದರೆ ಕೆಲಸವೆಂದು ತಿಳಿಯುತ್ತಿದೆ.

ದಶಾಚಾರ ಭಗವದ್ಗೀತೆಯಲ್ಲಿ ಜ್ಞಾನಯೋಗದಲ್ಲಿ 37ನೇ ಶ್ಲೋಕದಲ್ಲಿ ಹೇಳಿದ ಸಾರಾಂಶದ ಪ್ರಕಾರ ಕರ್ಮವನ್ನು ತೆಗೆದುಹಾಕಬಲ್ಲದು. ಹಾಗೆಯೇ ದೈವಾಸುರ ಸಂಪದ್ವಿಭಾಗ ಯೋಗದಲ್ಲಿರುವ 19ನೇ ಶ್ಲೋಕದಲ್ಲಿ ಹೇಳಿದ ಸಾರಾಂಶದ ಪ್ರಕಾರ ಕರ್ಮವನ್ನು ತಗಲಿಸಬಲ್ಲದು. ಆದ್ದರಿಂದ ದಶಾಚಾರದಲ್ಲಿ ಕರ್ಮ ತೆಗೆದುಹಾಕಲ್ಪಡುತ್ತದೆ ಮತ್ತು ಕರ್ಮ ಸೇರಿಸಲ್ಪಡುತ್ತದೆಂದು ಹೇಳಿದ್ದೇವೆ. ಈ ವಿಧಾನ ದಶಾಚಾರದಲ್ಲಿ ಮಾತ್ರ ಇದೆ. ಗ್ರಹಚಾರದಲ್ಲಿ ಯಾವ ವಿಧಾನ ದಿಂದಾಗಲೀ ಹಳೆ ಕರ್ಮ ತೆಗೆದುಹಾಕಲ್ಪಡುವುದಿಲ್ಲ. ಹಾಗೆಯೇ ಹೊಸ ಕರ್ಮ ಸೇರಿಸಲ್ಪಡುವುದಿಲ್ಲ. ದಶಾಚಾರದಲ್ಲಿ ಮಾತ್ರ ಕರ್ಮವನ್ನು ಇಲ್ಲದಂತೆ ಮಾಡಿ ಕೊಳ್ಳುವ ಅವಕಾಶವನ್ನು ದೇವರು ಕಲ್ಪಿಸಿದ್ದಾನೆ. ಇಲ್ಲಿ ಉದಾಹರಣೆಯಾಗಿ ಒಂದು ವಿಷಯವನ್ನು ಹೇಳುವೆನು ಜಾಗ್ರತೆಯಿಂದ ನೋಡಿರಿ. ಈಗ ನಿಮಗೆ ಜಗನ್ ಎನ್ನುವ ವ್ಯಕ್ತಿ ಜಾಪಥಕವನ್ನು ಕುರಿತು ವಿವರಿಸುತ್ತಾ ಬರುತ್ತಿದ್ದೇವೆ. ಆತನ ಜಾತಕ ಕೆಲವು ವಿಷಯಗಳು ಹೊರತುಪಡಿಸಿ ಎಲ್ಲಾ ವಿಷಯಗಳಲ್ಲಿಯೂ ವಿಶೇಷವಾಗಿದೆಯೆಂದು ಹೇಳುತ್ತಿದ್ದೇವೆ. ಆದರೆ ಆತನ ಆಯುಷ್ಯ ವಿಷಯದಲ್ಲಿ ಒಂದು ಲೋಪವಿದೆಯೆಂದು ಹೇಳಬಹುದು. ಅದೇನೆಂದರೆ! ಶತ್ರುಗ್ರಹ ಅಥವಾ ಅಶುಭಗ್ರಹ ಅಥವಾ ಪಾಪಗ್ರಹ ಎಂದು ಹೇಳಲ್ಪಡುವ ಕುಜ ಗ್ರಹ ಈ ಜಾತಕದಲ್ಲಿ ಸರಿಯಾಗಿ ಎರಡನೆ ಸ್ಥಾನದಲ್ಲಿ ಇದೆ. ಎರಡನೆ ಸ್ಥಾನದಲ್ಲಿ ಇರುವುದಲ್ಲದೇ ತನಗೆ ಎದುರಾಗಿರುವ ಎಂಟನೆಯ ಸ್ಥಾನವನ್ನು ತನಗಿರುವ ನಾಲ್ಕು ಕೈಗಳಲ್ಲಿ ಒಂದರಿಂದ ತಾಕುತ್ತಿದೆ. ತನ್ನಿಂದ ಅಲ್ಲಿರುವುದನ್ನು ಗ್ರಹಿಸಿ ಮನುಷ್ಯನಿಗೆ ಒದಗಿಸುವ

ಕೆಲಸವನ್ನು ಸಹ ಮಾಡುತ್ತಿದೆ. ಎಂಟನೆ ಸ್ಥಾನ ಆಯುಷ್ಯಕ್ಕೆ ಸಂಬಂಧಿಸಿದ ಸ್ಥಾನ ಎನ್ನುತ್ತೇವೆ. ಆಯುಷ್ಯಕ್ಕೆ ಸಂಬಂಧಿಸಿದ ಎಂಟನೆ ಸ್ಥಾನದಲ್ಲಿ ಶತ್ರು ಗ್ರಹವಾದ ಕುಜಗ್ರಹ ಇರುವುದಾಗಲಿ, ಅಲ್ಲಿ ಕೈಯನ್ನಿಟ್ಟು ನೋಡುವುದಾಗಲಿ ಇದ್ದರೆ ಆಯುಸ್ಥಾನ ಚೆನ್ನಾಗಿ ಇಲ್ಲವೆಂದೇ ಹೇಳಬೇಕು. ಇಂತಹ ಜಾತಕವನ್ನೇ ಒಂದನ್ನು ನಂತರ ಚಿತ್ರದಲ್ಲಿ ತೋರಿಸುತ್ತೇನೆ ನೋಡಿರಿ.

| | | | |
|---|---|---|---|
| 6 | 7 | 8 | 9 |
| ಶನಿ 5 | ತುಲಾ ಲಗ್ನ | | ಕೇತು 10 |
| ರಾಹು 4 | | | 11 |
| ರವಿ ಗುರು ಬುಧ ಶುಕ್ರ ಚಂದ್ರ 3 | ಕುಜ 2 | ಲಗ್ನ 1 | 12 |

ಈ ಜಾತಕನ ಕುಂಡಲಿಯಲ್ಲಿ ಅದೇ ಎರಡನೆ ಸ್ಥಾನದಲ್ಲಿಯೇ ಅದೇ ಕುಜಗ್ರಹವೇ ಇರುವುದನ್ನು ನೀವು ನೋಡಬಹುದು.

ಈಗ ನೀವು ನೋಡಿದ ಜಾತಕದಲ್ಲಿ ಎಂಟನೆ ಸ್ಥಾನಕ್ಕೆ ಎದುರಾಗಿ ಇರುವ ಎರಡನೆ ಸ್ಥಾನದಲ್ಲಿ ಕುಜಗ್ರಹವಿದ್ದಂತೆ ಗುರುತಿಸಿದ್ದೇವೆ. ಕುಜಗ್ರಹ ಎಲ್ಲಿದ್ದರೂ, ಅದಕ್ಕೆ ಆ ಸ್ಥಾನಗಳಲ್ಲಿ ಉಪಯೋಗಪಡುವ ಕೈ ಅಲ್ಲದೆ ಉಳಿದ ಮೂರು ಕೈಗಳಿರುತ್ತವೆ. ಆ ಮೂರು ಕೈಗಳಲ್ಲಿನ ಒಂದು ಕೈಯ್ಯನ್ನು ಕುಜಗ್ರಹವಿರುವಕಡೆಯಿಂದ ನಾಲ್ಕನೆ ಸ್ಥಾನದೊಳಗೆ, ಎರಡನೆ ಕೈ ಏಳನೆ ಸ್ಥಾನದೊಳಗೆ, ಮೂರನೆ ಕೈಯ್ಯನ್ನು ಎಂಟನೆ ಸ್ಥಾನದೊಳಗೆ ಇಟ್ಟು ಅಲ್ಲಿರುವವುಗಳನ್ನು ತೆಗೆದುಕೊಂಡು ಜಾತಕನಿಗೆ ಕೊಡಬಲ್ಲದು. ಆಯುಸ್ಥಾನ ಕುಂಡಲಿಯಲ್ಲಿ ಎಂಟನೆ ಸ್ಥಾನವಾದಾಗ, ಆಯುವಿಗೆ ಅಧಿಪತಿ ಶನಿ ಗ್ರಹ. ಈಗ ನೋಡಿದ ಜಾತಕ ಲಗ್ನದಲ್ಲಿ ಐದನೆ ಸ್ಥಾನದಲ್ಲಿ ಶನಿ ಇರುವುದರಿಂದ 2ನೇ ಸ್ಥಾನದಲ್ಲಿ ಕುಜನು ಇರುವುದರಿಂದ ಕುಜನು ತನ್ನಕೈಯಿಂದ ತನಗೆ ನಾಲ್ಕನೆ ಸ್ಥಾನದಲ್ಲಿರುವ ಶನಿಯನ್ನು ತಾಕಿ ಶನಿಹತ್ತಿರವಿರುವ ಜಾತಕನ ಆಯುಷ್ಷನ್ನು ಹರಿಸುವುದಕ್ಕೆ ಅವಕಾಶವಿದೆ. ಆಯುಷ್ಯ ಶನಿದು. ಆಯುಷ್ಯ ಸ್ಥಾನ ಎಂಟನೆ ಸ್ಥಾನ. ಎಂಟನೆ ಸ್ಥಾನವನ್ನು ಸ್ವತಃವಾಗಿ ಕುಜಗ್ರಹ ಎರಡನೆ ಸ್ಥಾನದಿಂದ ಆಕ್ರಮಿಸಿಕೊಂಡಿದೆ. ಆಯುಷ್ಯ ಕಾರಕನಾದ ಶನಿಯನ್ನು ಕೂಡಾ ತನ್ನ ಕೈ ಸ್ಪರ್ಶದಿಂದ ದಾಳಿಮಾಡಿ ಶನಿ ಹತ್ತಿರವಿರುವ ಆಯುಷ್ಯನ್ನು ಸೆಳೆದುಕೊಳ್ಳುವುದಕ್ಕೆ ಸಿದ್ಧವಾಗಿದೆ. ಅಷ್ಟೇ ಅಲ್ಲದೆ ತಮ್ಮ ಗುಂಪು ನಾಯಕನಾದ ಗುರುವಿನೊಂದಿಗಾಗಲಿ, ಉಳಿದ ತಮ್ಮ ಗುಂಪು ಗ್ರಹಗಳೊಂದಿಗೆ ಸೇರಿದಾಗ ಜಾತಕನ ಆಯುಷ್ಯನ್ನು ಸೆಳೆದುಕೊಳ್ಳುವುದು ಮಾಡಬಹುದು. ಜಾತಕನ ಆಯುವನ್ನು ಎಳೆದುಕೊಂಡಾಗ ಅಂದರೆ ಜಾತಕನನ್ನು ಸಾಯಿಸುವಾಗ ಕುಜಗ್ರಹದ ಅಧೀನದಲ್ಲಿರುವ ಆಯುಧಗಳನ್ನಾಗಲೀ, ಕ್ರೂರ ಮೃಗಗಳನ್ನಾಗಲೀ ಉಪಯೋಗಿಸ ಬಹುದು. ಆಯುಧಗಳಲ್ಲಿ ಉತ್ತಮಶ್ರೇಣಿಗೆ ಸಂಬಂಧಿಸಿರುವವು ಬಾಂಬುಗಳು, ತುಪಾಕಿಗಳು ಆದಾಗ, ಮಧ್ಯಮಶ್ರೇಣಿಗೆ ಸಂಬಂಧಿಸಿರುವವು ಅನೇಕ ವಿಧಗಳ ಹರಿತವಾದ ಕತ್ತಿಗಳು ಆದಾಗ, ಕಡಿಮೆ ಶ್ರೇಣಿಗೆ ಸಂಬಂಧಿಸಿದ ಕೋರೆಗಳಿರುವ ಮೃಗಗಳು ಆಯುಧಗಳಾದಾಗ ತನ್ನ ಅಧೀನದಲ್ಲಿರುವ

ಯಾವುದೋ ಒಂದು ಶ್ರೇಣಿ ಆಯುಧಗಳಿಂದ ಮನುಷ್ಯನನ್ನು ಸಾಯಿಸುವುದು. ಎಂದು ಆ ಜಾತಕದಿಂದ ನಾವು ತಿಳಿದುಕೊಳ್ಳಬಹುದು.

ಜಾತಕಲಗ್ನದಲ್ಲಿ ಎಲ್ಲಾ ವಿಷಯಗಳು ಚೆನ್ನಾಗಿದ್ದರೂ ಒಂದು ಆಯುಷ್ಯ ವಿಷಯದಲ್ಲಿ ನಾವು ಹೇಳಿದ ಲೋಪಗಳಿವೆ. ಜಾತಕಲಗ್ನದಲ್ಲಿ ತುಲಾಲಗ್ನ ಶರೀರ ಸ್ಥಾನವಾದ ಮೊದಲ ಸ್ಥಾನವಾಗಿದೆ. ತುಲಾ ಲಗ್ನವನ್ನು ಅನುಸರಿಸಿ ಎಲ್ಲಾ ವಿಷಯಗಳು ಎಲ್ಲವಿಧಗಳಲ್ಲಿ ಚೆನ್ನಾಗಿವೆ. ಒಂದು ಆಯುಸ್ಥಾನವೊಂದು ಸರಿಯಿಲ್ಲ, ಆ ಸ್ಥಾನವನ್ನು ತಾಕಿದವನು ಚೆನ್ನಾಗಿಲ್ಲ. ಈ ಜಾತಕ ಹುಟ್ಟಿರುವುದು 20ನೇ ತಾರೀಖು, ಆಗಷ್ಟು, 1944 ನೇ ವರ್ಷ. ಈತನು ದೇಶಕ್ಕೆ ಪ್ರಧಾನಿಯಾಗಿದ್ದ ರಾಜೀವ್‌ಗಾಂಧೀ. ಜಾಘತಕದಲ್ಲಿ ಅನುಮಾನಗಳಿದ್ದಂತೆ 21 ನೇ ಮೇ ತಿಂಗಳು, 1991 ನೇ ವರ್ಷ ತಮಿಳನಾಡಿನಲ್ಲಿ ಬಾಂಬು ಸ್ಫೋಟಗೊಂಡು ಮರಣಿಸುವುದು ನಡೆದಿದೆ. ಕುಜಗ್ರಹ ಎಲ್ಲಿ ನೋಡಿದರೆ ಅಲ್ಲಿ ರಕ್ತಸಿಕ್ತವಾಗುತ್ತದೆ. ಅದೇ ರೀತಿಯಾಗಿ ಘೋರ ಪ್ರಮಾದವನ್ನು ಕುಜಗ್ರಹವೇ ಮಾಡಿದೆ. ಆ ದಿನ ಗುರುವು ಕುಜನೊಂದಿಗೆ ಬೆರೆಯುವುದರಿಂದ ಕುಜನಿಗೆ ಹೆಚ್ಚಿನ ಬಲವಾಗಿದೆ. ಕುಜ ಗುರುಗಳು ಕರ್ಕಾಟಕದಲ್ಲಿ ಬೆರೆಯುವುದರಿಂದ, ಗುರುಗ್ರಹ ತನ್ನ ಐದು ಹಸ್ತಗಳನ್ನು ಜಾತಕನ ತನ್ನ ಭಾಗವಾದ ತುಲಾಲಗ್ನವನ್ನು ತಾಕುವುದರಿಂದ ಪ್ರಮಾದದಲ್ಲಿ ಶರೀರ ಗುರುತಿಸಲಾರದಷ್ಟು ಛಿದ್ರವಾಗಿಹೋಗಿದೆ. ಈ ರೀತಿಯಾಗಿ ಕುಜಗ್ರಹವೊಂದರ ಕ್ರೂರತ್ವವನ್ನು ನಾವು ಮೊದಲೇ ಊಹಿಸಿದರೂ ಊಹಿಸಿದಂತೇ ಕೊನೆಗೆ ನಡೆದುಹೋಗಿದೆ.

ಅತ್ಯಂತ ಉನ್ನತ ಸ್ಥಾನವಾದ ಸುಪ್ರೀಮ್‌ಕೋರ್ಟ್ ಒಂದು ಜಡ್ಜ್‌ಮೆಂಟ್‌ನ್ನು ಬಿಡುಗಡೆ ಮಾಡಿದ ನಂತರ ಆ ಜಡ್ಜ್‌ಮೆಂಟನ್ನು ಆಧಾರ ಮಾಡಿಕೊಂಡು ಅಂತಹ ಕೇಸುಗಳನ್ನು ಉಳಿದ ಕೋರ್ಟ್‌ಗಳಲ್ಲಿ ವಾದಿಸುವು ದಾಗಲೀ, ತೀರ್ಪು ಹೇಳುವುದಾಗಲೀ ನಡೆಯುತ್ತಿದೆ. ಹಾಗೆಯೇ ದೇಶ ಪ್ರಧಾನಿಯಾಗಿದ್ದ ರಾಜೀವ್‌ಗಾಂಧೀ ಜಾತಕವನ್ನು ಮರಣವನ್ನು ನೋಡಿದ ನಂತರ ಅದು ಒಂದು ಸುಪ್ರೀಂ ಜಡ್ಜ್‌ಮೆಂಟ್‌ನಂತೆ ಅದನ್ನು ಆಧಾರ ಮಾಡಿ

ಕೊಂಡು ಅಂತಹ ಜಾತಕಗಳನ್ನು ಕುರಿತು ಹೇಳಿಕೊಳ್ಳುವುದು ಒಳ್ಳೆಯದೇ. ಏಕೆಂದರೆ ಗ್ರಹಚಾರದಲ್ಲಿ ಹೇಗಿದ್ದರೇ ಹಾಗೇ ನಡೆಯುತ್ತದೆ. ಆದ್ದರಿಂದ ಜಗನ್ ಎನ್ನುವ ವ್ಯಕ್ತಿಯ ಜಾತಕ ಎಲ್ಲ ವಿಧಗಳಲ್ಲಿ ಚೆನ್ನಾಗಿದೆ. ಆದರೇ ಒಂದು ಆಯುವು ವಿಷಯದಲ್ಲಿ ಮಾತ್ರ ರಾಜೀವ್ ಗಾಂಧೀಯವರಿಗಿದ್ದಂತೇ ಎರಡನೆ ಸ್ಥಾನ ಕುಜಗ್ರಹ ಇರುವುದು ವಿಶೇಷ. ರಾಜೀವ್ ಜಾತಕದಲ್ಲಿ ಕುಜನು ಶನಿಯನ್ನು ತಾಕಿ ನೋಡಿದಂತೇ, ಜಗನ್ ಜಾತಕದಲ್ಲಿ ಕೂಡಾ ಕುಜನು ಶನಿಯನ್ನು ತನ್ನಕೈಯಿಂದ ತಾಕುತ್ತಿದ್ದಾನೆ. ಅಷ್ಟೇಅಲ್ಲದೆ ತನ್ನ ಗುಂಪು ನಾಯಕನಾದ ಗುರುವಿನೊಂದಿಗೆ ಕುಜನು ಬೆರೆತು ಎಂಟನೆಸ್ಥಾನದಲ್ಲಿ ಇದ್ದಾರೆ. ಹೀಗೆ ಅನೇಕ ಆಯುವಿಗೆ ಸಂಬಂಧಿಸಿ ಜಗನ್ ಜಾತಕದಲ್ಲಿ ರಾಜೀವ್ ಜಾತಕದಲ್ಲಿನ ಹೋಲಿಕೆಗಳು ಇವೆ. ಹೆಚ್ಚು ಕಡಿಮೆ ಒಂದೇ ಸ್ಥಾಯಿಯನ್ನು ಸೂಚಿಸುವ ಕುಜಗ್ರಹ ದೋಷಗಳು ಇರುವುದರಿಂದ, ಈ ಜಾತಕನಿಗೂ ಸಹ ರಾಜೀವ್‌ಗಾಂಧೀ ಹೋಲಿಕೆಗಳನ್ನು, ಆಯುವಿನ ವಿಷಯಗಳನ್ನು ಹೇಳಬಹುದು. ಒಂದು ಆಯುವಿನ ವಿಷಯದಲ್ಲಿ ಭಯವನ್ನುಂಟುಮಾಡುವ ಕಾರಣಗಳು ಕಾಣಿಸುವಾಗ ಅವುಗಳನ್ನು ತಪ್ಪಿಸಿಕೊಳ್ಳುವುದಕ್ಕೆ ಭಗವದ್ಗೀತೆಯಲ್ಲಿ ಜ್ಞಾನಯೋಗದಲ್ಲಿ 37ನೇ ಶ್ಲೋಕವು ಹೇಳಿದಂತೆ ಜ್ಞಾನದಿಂದ ಮಾತ್ರವೇ ಸಾಧ್ಯವಾಗುತ್ತದೆ. ಜ್ಞಾನವಿಲ್ಲದವನು ಕರ್ಮಗಳನ್ನು ಅನುಭವಿಸುವುದು ತಪ್ಪುವುದಿಲ್ಲ.

ಈದಿನ ಜ್ಯೋತಿಷ್ಯವು ಶಾಸ್ತ್ರವಲ್ಲ ಎನ್ನುವ ವಾದವನ್ನು ತಳ್ಳಿಹಾಕಿ ಜ್ಯೋತಿಷ್ಯ ಆರು ಶಾಸ್ತ್ರಗಳಲ್ಲಿ ಒಂದು ಶಾಸ್ತ್ರವೆಂದು ನಿರೂಪಿಸಿ ಹೇಳುವುದಕ್ಕೆ ಜ್ಯೋತಿಷ್ಯ ಗ್ರಂಥವನ್ನು ಬರೆದಿದ್ದೇವೆ. ನಮ್ಮ ಜ್ಯೋತಿಷ್ಯಕ್ಕೆ ಉದಾಹರಣೆಯಾಗಿ ಜಗನ್ ಎನ್ನುವ ವ್ಯಕ್ತಿ ಜಾತಕವನ್ನು ಬರೆಯುತ್ತಾ ಅದರಲ್ಲಿನ ಆಯುಷ್ಯ ಲೋಪವನ್ನು ತೋರಿಸುವುದು ನಡೆದಿದೆ. ಆತನ (ಜಗನ್) ಜಾತಕಕ್ಕೆ ಉದಾಹರಣೆಯಾಗಿ ನೇರವಾಗಿ ರಾಜೀವ್‌ಗಾಂಧೀಯವರ ಜಾತಕವನ್ನು ತೋರಿಸಬೇಕಾಗಿ ಬಂದಿದೆ. ಜ್ಯೋತಿಷ್ಯವು ಶಾಸ್ತ್ರವೆಂದು ಹೇಳುವುದಕ್ಕೆ ಜ್ಯೋತಿಷ್ಯದ ಪ್ರಕಾರ ನಾವು ಐದು ವರ್ಷಗಳ ಕೆಳಗೇ ಅಂದಾಜು ಹಾಕಿಕೊಂಡಂತೆ ರಾಜೀವ್‌ಗಾಂಧೀ ಮರಣ ನಡೆದುಹೋಗಿದೆ. ಆದ್ದರಿಂದ ಅದೇ ಸ್ಥಾಯಿ

ಪ್ರಮಾದವನ್ನು ತೋರಿಸುತ್ತಿರುವ ಜಾತಕನು ಜಗನ್ ದೈವಜ್ಞಾನವನ್ನು ತಿಳಿದಂತಾದರೆ ಆತನ ದಶಾಚಾರದಲ್ಲಿ ಆ ಕರ್ಮ ತಪ್ಪಿಹೋಗುವುದಕ್ಕೆ ಅವಕಾಶವಿದೆ. ಇಲ್ಲದೆ ಹೋದರೆ ಘೋರ ಪ್ರಮಾದವನ್ನು ಸವಿ ನೋಡಬೇಕಾಗಿ ಬರುತ್ತದೆ.

## 47 ಪಂಚಾಂಗದ ಅವಶ್ಯಕತೆ

ಪಂಚಾಂಗ ಎನ್ನುವ ಹೆಸರನ್ನನುಸರಿಸಿ ಅದರಲ್ಲಿನ ಐದು ಅಂಗಗಳು ಯಾವುವೋ ಮೊದಲೇ ತಿಳಿದುಕೊಂಡಿದ್ದೇವೆ. ಹೆಸರನ್ನನುಸರಿಸಿ ಹೇಳಿಕೊಂಡರೆ ತಿಥಿ, ವಾರ, ನಕ್ಷತ್ರ, ಯೋಗ, ಕರಣ ಎನ್ನುವವುಗಳನ್ನು ಹೇಳುವುದೆಂದು ಅಂದುಕೊಂಡಿದ್ದೇವೆ. ಆದರೂ ಪಂಚಾಂಗದಲ್ಲಿ ಅದರ ಹೆಸರಿಗೆ ಸಂಬಂಧವಿಲ್ಲದ ಬಹಳ ವಿಷಯಗಳು ತಿಳಿದು ಬರುತ್ತಿವೆ. ಮುಖ್ಯವಾಗಿ ದ್ವಾದಶ ಗ್ರಹಗಳು ಪ್ರತಿ ದಿನ ಕಾಲಚಕ್ರದಲ್ಲಿ ಹೇಗೆ ತಿರುಗುತ್ತಿರುವುದು, ಯಾವ ದಿನ ಯಾವ ಗ್ರಹ ಯಾವ ನಕ್ಷತ್ರವನ್ನು ದಾಟುತ್ತಿರುವುದು, ಹನ್ನೆರಡು ಲಗ್ನಗಳಲ್ಲಿ ಯಾವ ದಿನ ಯಾವ ಗ್ರಹ ಎಲ್ಲಿರುವುದು ಒಟ್ಟಾರೆ ಗ್ರಹಗಳ ಗಮನ ಸಮಾಚಾರವೆಲ್ಲವೂ ಪಂಚಾಂಗದಲ್ಲಿ ಇರುತ್ತದೆ. ಗ್ರಹಗಳ ಸಮಾಚಾರವೇ ಅಲ್ಲದೆ ಪ್ರತಿ ದಿನ ಯಾವ ವಾರವಾಗುತ್ತಿದೆ, ಹಾಗೆಯೇ ಪ್ರತಿ ದಿನ ಯಾವ ತಿಥಿಯಾಗುತ್ತಿದೆ, ಅಮಾವಾಸ್ಯೆ ಯಾವಾಗ, ಹುಣ್ಣಿಮೆ ಯಾವಾಗ ಎನ್ನುವ ವಿಷಯಗಳನ್ನು, ನಕ್ಷತ್ರಗಳನ್ನು, ತಿಂಗಳುಗಳನ್ನು ಒಟ್ಟಾರೆ ಕಾಲಕ್ಕೆ ಸಂಬಂಧಿಸಿದ ಸಮಾಚಾರವೆಲ್ಲಾ ಇರುತ್ತದೆ. ನಿತ್ಯವೂ ಗ್ರಹಗಳು ತಮ್ಮ ಪ್ರಯಾಣದಲ್ಲಿ ಯಾವ ಲಗ್ನದಲ್ಲಿ ಎಷ್ಟು ಕಾಲ ಇರುವುದು, ಯಾವ ನಕ್ಷತ್ರಪಾದದಲ್ಲಿ ಎಷ್ಟು ಕಾಲವಿರುವುದು ತಿಳಿಸುತ್ತಾ, ಗ್ರಹಗಳು ಯಾವ ಲಗ್ನವನ್ನು ಯಾವಾಗ ದಾಟುತ್ತಿವೆಯೋ, ಯಾವ ನಕ್ಷತ್ರದಲ್ಲಿ ಯಾವಾಗ ಪ್ರವೇಶಿಸುತ್ತಿವೆಯೋ ಅವುಗಳ ಕಾಲವನ್ನು ಗಂಟೆಗಳಲ್ಲಿಯೂ ಮತ್ತು ಗಳಿಗೆಗಳಲ್ಲಿಯೂ ಪಂಚಾಂಗದಲ್ಲಿರುತ್ತದೆ. ಹಾಗೆಯೇ ಯಾವ ತಿಥಿ ಎಷ್ಟು ಕಾಲ ಇರುವುದು, ಯಾವ ನಕ್ಷತ್ರ ಎಷ್ಟು ಕಾಲವಿರುವುದು ಪಂಚಾಂಗದಲ್ಲಿ

ಬರೆಯಲ್ಪಟ್ಟಿರುತ್ತದೆ. ಗ್ರಹಗಳೆಲ್ಲವುಗಳಿಗೂ ರಾಜ ಮಂತ್ರಿಯಂತಿರುವ ಸೂರ್ಯ, ಚಂದ್ರ ಗ್ರಹಗಳ ಸಮಾಚಾರದಲ್ಲಿ ಅವರಿಗೆ ಗ್ರಹಣಗಳು ಯಾವಾಗ ಉಂಟಾಗುತ್ತಿರುವುದು, ಯಾವಾಗ ಬಿಡುತ್ತಿರುವುದು ಬರೆಯಲ್ಪಟ್ಟಿರುತ್ತದೆ. ಹೀಗೆ ಎಷ್ಟೋ ವಿಷಯಗಳು, ದ್ವಾದಶ ಗ್ರಹಗಳ ಸಮಾಚಾರ ಇರುವುದರಿಂದ ಪಂಚಾಂಗ ಎಲ್ಲರಿಗೂ ಅವಶ್ಯವಾಗಿರುವುದೇ. ಗತಕಾಲದಲ್ಲಿ ನೂರು ವರ್ಷಗಳ ಕೆಳಗೆ ಭಾರತದೇಶದಲ್ಲಿ ಅನ್ಯ ಮತಗಳು ಹೆಚ್ಚಾಗಿ ಇರಲಿಲ್ಲ. ಎಲ್ಲರೂ ಹೆಚ್ಚಾಗಿ ಹಿಂದೂಗಳೇ ಇರುತ್ತಿದ್ದರು. ಆ ಕಾಲದಲ್ಲಿ ಓದು ಬರುತ್ತಿದ್ದ ಪ್ರತಿ ಮನೆಯಲ್ಲೂ ಪಂಚಾಂಗ ಇರುತ್ತಿತ್ತು. ತಮ್ಮ ಮನೆಯಲ್ಲಿ ಯಾರಿಗೆ ಹೆಸರಿಡಬೇಕೆಂದರೂ, ಯಾರಿಗೆ ಮದುವೆ ಮಾಡಬೇಕೆಂದರೂ, ಯಾರು ಎಲ್ಲಿಗೆ ಪ್ರಯಾಣ ಮಾಡಬೇಕೆಂದರೂ, ಪ್ರತಿಯೊಂದಕ್ಕೂ ತಮ್ಮ ಹತ್ತಿರವಿರುವ ಪಂಚಾಂಗವನ್ನು ತೆಗೆದುಕೊಂಡು ಆ ಊರಿನಲ್ಲಿರುವ ಪುರೋಹಿತನ ಹತ್ತಿರಕ್ಕೆ ಹೋಗಿ ಪಂಚಾಂಗವನ್ನು ತೋರಿಸಿ ಯಾವುದಕ್ಕೆ ಯಾವುದು ಒಳ್ಳೆಯದಿನವೋ, ಯಾವುದು ಕೆಟ್ಟ ದಿನವೋ ತಿಳಿದುಕೊಳ್ಳುತ್ತಿದ್ದರು. ಅಷ್ಟೇ ಅಲ್ಲದೆ ಬೀಜ ಬಿತ್ತುವುದಕ್ಕೆ, ನೇಗಿಲು ಕಟ್ಟುವುದಕ್ಕೆ, ಮುಖ್ಯವಾದ ಪ್ರತಿ ಕೆಲಸಕ್ಕೂ ಒಳ್ಳೆಯ ಮುಹೂರ್ತ ಯಾವುದೋ ತಿಳಿದುಕೊಳ್ಳುತ್ತಿದ್ದರು. ಈ ವಿಧವಾಗಿ ಹಿಂದೂ ಆಗಿರುವವನ ಪ್ರತಿ ಮನೆಯಲ್ಲಿಯೂ ಪಂಚಾಂಗವಿರುತ್ತಿತ್ತು.

ಕಾಲಕ್ರಮೇಣ ಪಂಚಾಂಗಗಳು ಬ್ರಾಹ್ಮಣರಿಗೇ ಪರಿಮಿತವಾಗಿ ಹೋಗಿವೆ. ಈ ದಿನ ಓದಿಕೊಳ್ಳುತ್ತಿರುವ ಮಕ್ಕಳನ್ನು ಪಂಚಾಂಗವನ್ನು ಕುರಿತು ಕೇಳಿದರೇ ಅದೇನೋ ನಮಗೆ ತಿಳಿದಿಲ್ಲವೆಂದು ಹೇಳುತ್ತಿದ್ದಾರೆ. ಪಂಚಾಂಗ ಎನ್ನುವ ಹೆಸರು ತಿಳಿಯದವರು ಬಹಳ ಜನ ಇದ್ದಾರೆ. ಅವರಿಗೆ ಹೊರಗಿರುವ ಸೂರ್ಯ ಚಂದ್ರ ಗ್ರಹಗಳು ಮಾತ್ರ ತಿಳಿದಿವೆ ಆದರೆ ಶರೀರದಲ್ಲಿ ತಲೆಯಲ್ಲಿರುವ ದ್ವಾದಶ ಗ್ರಹಗಳು ತಿಳಿದಿಲ್ಲ. ಈ ವಿಧವಾಗಿ ಈದಿನ ಬಹಳ ಜನ ಹಿರಿಯರಿಗೂ ಸಹ ಪಂಚಾಂಗವನ್ನು ಕುರಿತು ತಿಳಿಯದಂತೆ ಹೋಗಿದೆ. ಹಬ್ಬಗಳನ್ನು ಕುರಿತು ತಿಳಿಯಬೇಕೆಂದರೂ ದಿನಾಂಕಗಳನ್ನು ಕುರಿತು ತಿಳಿಯಬೇಕೆಂದರೂ ಎಲ್ಲರಿಗೂ

ಈ ದಿನ ಕ್ಯಾಲೆಂಡರ್‌ಗಳು ಮಾತ್ರ ತಿಳಿದಿದೆ. ಕ್ಯಾಲೆಂಡರ್‌ಗಳಲ್ಲಿಯೇ ತಿಥಿ, ನಕ್ಷತ್ರಗಳಿರುವುದರಿಂದ ಎಲ್ಲರಿಗೂ ಕ್ಯಾಲೆಂಡರ್‌ಗಳು ತಿಳಿದಿವೆಯೆಂದು ಹೇಳಬಹುದು. ಎಲ್ಲಾದರೂ ಒಬ್ಬರೋ ಇಬ್ಬರೋ ಪಂಚಾಂಗಗಳು ನೋಡುವವರಿದ್ದರೂ, ಈ ದಿನ ಕಂಪ್ಯೂಟರ್‌ಗಳಲ್ಲಿ ಜಾತಕಗಳು ಸಹ ಸುಲಭವಾಗಿ ತಿಳಿಯುತ್ತಿರುವುದರಿಂದ ಕೊನೆಗೆ ಬ್ರಾಹ್ಮಣರಿಗೂ ಸಹ ಪಂಚಾಂಗಗಳು ಅವಶ್ಯವಿಲ್ಲದಂತೆ ಹೋಗಿದೆ. ಇತರ ಮತದವರು ಪಂಚಾಂಗ ಹಿಂದೂಗಳದ್ದು ಎಂದು ಅಂದುಕೊಳ್ಳುವುದರಿಂದ ಅವರು ಯಾರೂ ಪಂಚಾಂಗವನ್ನು ತಾಕುವುದು ಕೂಡಾ ತಾಕುವುದಿಲ್ಲ. ಹೀಗೆ ಅನೇಕ ವಿಧಗಳಾಗಿ ಪಂಚಾಂಗ ಈದಿನ ಬಹಳ ಜನರಿಗೆ ತಿಳಿಯದಂತೆ ಹೋಗಿದೆ.

ಈ ದಿನ ನಾವು ಹೇಳುವುದೇನೆಂದರೆ! ಈ ದಿನ ಜ್ಯೋತಿಷ್ಯರೂ ಸಹ ಕಂಪ್ಯೂಟರ್ ಮುಂದೆ ಕುಳಿತುಕೊಂಡು ಭವಿಷ್ಯತ್ತನ್ನು, ಭವಿಷ್ಯತ್ತಿಗೆ ಸಂಬಂಧಿಸಿದ ಮುಹೂರ್ತಗಳನ್ನು ಹೇಳುತ್ತಿದ್ದಾರೆ. ಹಾಗಲ್ಲದೆ ಪ್ರತಿ ಜ್ಯೋತಿಷ್ಯನೂ ಪಂಚಾಂಗವನ್ನು ಹತ್ತಿರದಲ್ಲಿಟ್ಟುಕೊಂಡು ಅದರ ಪ್ರಕಾರ ಭವಿಷ್ಯತ್ತನ್ನಾಗಲೀ, ಮುಹೂರ್ತಗಳನ್ನಾಗಲೀ ಹೇಳುವುದು ಒಳ್ಳೆಯದು. ಹಾಗಲ್ಲದೆ ಕಂಪ್ಯೂಟರ್‌ಗಳಲ್ಲಿ ನೋಡಿ ಹೇಳುವುದರಿಂದ ಶ್ರಮ ಕಡಿಮೆಯಾದರೂ ಮೇಲಿರುವ ಗ್ರಹಗಳ ಅನುಗ್ರಹ ನಮ್ಮ ಮೇಲೆ ಇರುವುದಿಲ್ಲವೆಂದು ನಾನು ಅಂದುಕೊಳ್ಳುತ್ತಿದ್ದೇನೆ. ಆದ್ದರಿಂದ ಜ್ಯೋತಿಷ್ಯಕ್ಕೆ ಯಾರಾದರೂ ಪಂಚಾಂಗವನ್ನೇ ಉಪಯೋಗಿಸಿರೆಂದು ತಿಳಿಸುತ್ತಿದ್ದೇವೆ. ಒಬ್ಬ ವ್ಯಕ್ತಿ ಜ್ಯೋತಿಷ್ಯನಾಗಿ ಬದಲಾಗುವುದಕ್ಕೆ ಜ್ಯೋತಿಷ್ಯಕ್ಕೆ ಅಧಿಪತಿಯಾದ ಬುಧಗ್ರಹ ಸಹಕರಿಸಿದಾಗಲೇ ಒಳ್ಳೆಯ ಜ್ಯೋತಿಷ್ಯನಾಗಿ ಹೆಸರು ಬರಬಲ್ಲದು. ಗ್ರಹಗಳ ಸ್ಥಿತಿಗತಿಗಳು ಮುದ್ರಿಸಿರುವ ಗ್ರಂಥವಾದ ಪಂಚಾಂಗದಲ್ಲಿ ಕಾಣಿಸದ ಶಕ್ತಿ ನಿಕ್ಷಿಪ್ತವಾಗಿದ್ದು ಪಂಚಾಂಗದಮೇಲಿರುವ ಜ್ಯೋತಿಷ್ಯನ ಮನೋಭಾವವನ್ನನುಸರಿಸಿ ಆತನ ಬುದ್ಧಿಗೆ ಸತ್ಯವಾದ ಮಾತುಗಳನ್ನಾಡುವಂತೆ ಸೂಚನೆಗಳು ಕೊಡುತ್ತದೆ. ಕಂಪ್ಯೂಟರ್ ಒಂದು ಯಂತ್ರ ಆಗಿರುವುದರಿಂದ ಗ್ರಹಗಳ ಅನುಗ್ರಹ ಅದರಿಂದ ಲಭಿಸುವುದಿಲ್ಲ. ಆದ್ದರಿಂದ ಹೇಳಿದ ಮಾತು

ಸತ್ಯವಾಗದಂತೆ ಹೋಗುವುದಕ್ಕೆ ಅವಕಾಶವಿದೆ, ಜ್ಯೋತಿಷ್ಯನ ಹತ್ತಿರ ಕಂಪ್ಯೂಟರ್ ಇದ್ದರೂ ಕೆಲವು ಗಣಿತಗಳನ್ನು ಅದರಲ್ಲಿ ಸುಲಭವಾಗಿ ತಿಳಿದರೂ ಕಂಪ್ಯೂಟರ್ ಮುಂದೆ ಪಂಚಾಂಗವನ್ನಿಟ್ಟುಕೊಂಡು, ಅದನ್ನು ಗೌರವಿಸುತ್ತಾ ಜ್ಯೋತಿಷ್ಯವನ್ನು ಹೇಳುವುದು ಒಳ್ಳೆಯ ಕಾರ್ಯವಾಗುತ್ತದೆ.

ಯಾವ ಮನುಷ್ಯ ಯಾವಾಗ ಹುಟ್ಟಿದರೂ ಆತನ ಜಾತಕ ಲಗ್ನವನ್ನು ಪಂಚಾಂಗದ ಮೂಲಕವಾಗಲೀ, ಕಂಪ್ಯೂಟರ್ ಮೂಲಕವಾಗಲಿ ತೆಗೆದು ಕೊಂಡಿದ್ದರೂ ಪ್ರಸ್ತುತ ನಡೆಯುವ ವರ್ತಮಾನ ಕಾಲದಲ್ಲಿ ಗ್ರಹಗಳ ಸ್ಥಿತಿಗತಿಗಳು ಹೇಗಿವೆ, ಗ್ರಹಗಳ ಗಮನದಲ್ಲಿ ನಮಗೆ ಬೇಕಾದ ಲಗ್ನದಲ್ಲಿ ಯಾವ ಗ್ರಹವಿದೆ, ಯಾವ ಗ್ರಹ ಬರುತ್ತಿದೆಯೆಂದು ವರ್ತಮಾನ ಕಾಲ ಪರಿಸ್ಥಿತಿಗಳನ್ನು ತಿಳಿಯುವುದಕ್ಕೆ ಪ್ರತಿಯೊಬ್ಬರೂ ಪಂಚಾಂಗವನ್ನೇ ನೋಡಬೇಕು. ಇದಕ್ಕೂ ಮೊದಲು ರಾಜೀವ್ ಗಾಂಧೀಯವರ ಜನ್ಮ ಕುಂಡಲಿಯನ್ನು ಬರೆದುಕೊಂಡು ನೋಡಿದ್ದೇವೆ. ಆ ಕುಂಡಲಿಯನ್ನು ನಾವು 1983ನೇ ವರ್ಷವೇ ಪತ್ರಿಕೆಯಲ್ಲಿ ನೋಡಿದ್ದೇವೆ. ಆದರೂ ಆ ದಿನ ಆ ಜಾತಕವನ್ನು ಸಂಪೂರ್ಣವಾಗಿ ನೋಡಲಿಲ್ಲ. ಆಗ ನಾನು ಜ್ಯೋತಿಷ್ಯದ ಮೇಲೆ ಪರಿಶೋಧನೆ ಮಾಡುವ ಕಾಲ. ಆದ್ದರಿಂದ ಕೆಲವರ ಜಾತಕಗಳು ಶೇಖರಿಸಿ ಕೆಲವು ವಿಷಯಗಳನ್ನು ಮಾತ್ರ ಅವುಗಳಲ್ಲಿ ನೋಡುವುದು ನಡೆದಿದೆ. ಆಗ ನೋಡದ ವಿಷಯವನ್ನು 1985ನೇ ವರ್ಷ ಪರಿಶೋಧನೆ ನಿಮಿತ್ತ ನೋಡಿದ್ದೇನೆ. ಆಯುವಿನ ವಿಷಯದಲ್ಲಿ ಸ್ವಲ್ಪಮಟ್ಟಿಗೆ ತಿಳಿದರೂ ಆಗ ಅದು ನಿರ್ಧಾರಣವಿಲ್ಲದ ವಿಷಯ ಮಾತ್ರವೇ. ಆದರೇ ಆ ಅಂದಾಜಿನ ಪ್ರಕಾರ ಸ್ವಲ್ಪ ಕಾಲಕ್ಕೆ ನಿಜವಾಗಿದೆ. ಆಗ ಆ ಸಂಘಟನೆಯಿಂದ ಜ್ಯೋತಿಷ್ಯವು ಶಾಸ್ತ್ರವೆಂದು, ಮೂಢನಂಬಿಕೆ ಅಲ್ಲವೆಂದು ಅಂದುಕೊಂಡಿದ್ದೇವೆ. ಆ ಒಂದು ವಿಷಯದಿಂದಲೇ ಜ್ಯೋತಿಷ್ಯವನ್ನು ಶಾಸ್ತ್ರವೆನ್ನಲಿಲ್ಲ. ನಮ್ಮ ಪರಿಶೋಧನೆಯಲ್ಲಿ ಇಂತಹ ಕೆಲವು ಇತರ ವಿಷಯಗಳು ಪ್ರತ್ಯಕ್ಷವಾಗಿ ನಡೆಯುವುದರಿಂದ ಪೂರ್ತಿಯಾಗಿ ಜ್ಯೋತಿಷ್ಯವನ್ನು ಶಾಸ್ತ್ರವೆಂದು ಹೇಳಲಾಗಿದೆ. ಏನಾದರೂ ತಪ್ಪಾದರೆ ಅದು ಜ್ಯೋತಿಷ್ಯನಲ್ಲಿ ಇರುತ್ತದಾಗಲೀ, ಜ್ಯೋತಿಷ್ಯದಲ್ಲಿ ಇರುವುದಿಲ್ಲ.

1985 ನೇ ವರ್ಷ ರಾಜೀವ್‌ಗಾಂಧೀ ಜಾತಕವನ್ನು ನಾವು ನೋಡಿದಾಗ ಅದರಲ್ಲಿ ಆಯುಷ್ಯ ವಿಷಯದಲ್ಲಿ ಸ್ವಲ್ಪ ಅನುಮಾನ ಬಂದು ಒಂದು ಅಂದಾಜಿಗೆ ಬಂದು ಹೀಗೆ ನಡೆಯಬಹುದೆಂದು ಅಂದುಕೊಂಡಿದ್ದೇವೆ. ಅದು ಒಂದು ಊಹೆ ಮಾತ್ರವೇ ಹೊರತು ನಿರ್ಧಾರಣೆ ಅಲ್ಲ. ಆದರೇ ಆಗ ಆತನಿಗೆ ಯಾವ ವರ್ಷ ಪ್ರಮಾದ ನಡೆಯುತ್ತದೆಂದು ತಿಳಿದಿಲ್ಲ. ಯಾವ ಆಯುಧಗಳಿಂದ ಪ್ರಮಾದ ನಡೆಯುತ್ತದೆಂದು ತಿಳಿದಿಲ್ಲ. ಅಷ್ಟೇ ಅಲ್ಲದೆ ನನ್ನ ಅನಿಸಿಕೆಗೆ ಬಂದಿರುವ ವಿಷಯ ಸತ್ಯವೋ ಅಲ್ಲವೋ ಎಂದು ಸಹ ತಿಳಿದಿಲ್ಲ. ಆ ದಿನ ನನ್ನ ಹತ್ತಿರ ಕೆಲವು ಪ್ರಶ್ನೆಗಳಿಗೆ ಉತ್ತರಗಳಿಲ್ಲ. ಅಂದಾಜು ಮಾತ್ರ ಇದೆ. ಆದರೆ ಅದು ಸತ್ಯವಾ ಅಲ್ಲವಾಯೆಂದು ತಿಳಿಯುವುದಕ್ಕೆ ಆರು ಸಂವತ್ಸರಗಳ ಅವಧಿ ಹಿಡಿಯಿತು. ಆದರೆ ಈದಿನವೂ ಸಹ ಜ್ಯೋತಿಷ್ಯದಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರ ಇಲ್ಲದಿದ್ದರೂ ಕೆಲವು ಪ್ರಶ್ನೆಗಳಿಗೆ ನನ್ನ ಪರಿಶೋಧನೆಯಲ್ಲಿ ತಿಳಿದವುಗಳಿಗೆ ನನ್ನ ಹತ್ತಿರ ನಿಜವಾದ ಉತ್ತರಗಳು ಇವೆ. ಜ್ಯೋತಿಷ್ಯ ನನಗೆ ಸಂಬಂಧಿಸಿದ ಶಾಸ್ತ್ರವಲ್ಲ. ಆದ್ದರಿಂದ ಅದನ್ನು ಸ್ವಲ್ಪ ಪರಿಶೋಧಿಸಿ, ನನಗೆ ಬಹಳ ಆಸಕ್ತಿಯಾಗಿರುವ ಬ್ರಹ್ಮವಿದ್ಯಾ ಶಾಸ್ತ್ರವನ್ನು ಪೂರ್ತಿಯಾಗಿ ಪರಿಶೋಧಿಸಿ ತಿಳಿದುಕೊಳ್ಳುವುದು ನಡೆದಿದೆ. ಜ್ಯೋತಿಷ್ಯದಲ್ಲಿ ನನಗೆ ತಿಳಿದಷ್ಟುಮಟ್ಟಿಗೆ ಒಂದು ಸಂಘಟನೆಯ ವಿಷಯದಲ್ಲಿ ಅನುಮಾನ ಬಂದರೆ ಅದು ಯಾವಾಗ ನಡೆಯುತ್ತದೆಂದು ತಿಳಿಯುವುದಕ್ಕೆ ಪ್ರಸ್ತುತ ಕಾಲ ಪಂಚಾಂಗ ಅವಶ್ಯ. ಯಾವುದೋ ಒಂದು ನಡೆಯಬೇಕಾಗಿದ್ದರೆ ಅದು ಯಾವಾಗ ನಡೆಯುತ್ತದೋ ಮೊದಲೇ ಹೇಳುವುದಕ್ಕಿಂತ ಎಂದಿನ ಪಂಚಾಂಗ ಅಂದು ನೋಡಿ ಹೇಳುವುದು ಒಳ್ಳೆಯದು.

ರಾಜೀವ್ ಗಾಂಧೀಯವರ ಜಾಪಥಕದಲ್ಲಿ ಆಯುಷ್ಯ ಸ್ಥಾನದ ಮೇಲೆ 1985ರಲ್ಲಿ ಬಂದಿರುವ ಅನುಮಾನ ಆರು ವರ್ಷಗಳ ನಂತರ 1991 ರಲ್ಲಿ ತೀರಿಹೋಗಿದೆ. ಆ ಸಂವತ್ಸರ ಪಂಚಾಂಗದಲ್ಲಿ ಆತನು ಮರಣಿಸಿದ ದಿನ ಜಾತಕ ಲಗ್ನದಲ್ಲಿ ಯಾವ ಗ್ರಹ ಎಲ್ಲಿದೆಯೆಂದು ನೋಡಿದ್ದೇವೆ. ಆ ದಿನವಿರುವ ಜಾತಕ ಕುಂಡಲಿಯನ್ನು ನೋಡಬಹುದು.

| | | | |
|---|---|---|---|
| 6 | ಬುಧ 7 | ಸೂರ್ಯ 8 | ಕೇತು ಶುಕ್ರ 9 |
| 5 | | | ಕುಜ ಗುರು 10 |
| ಶನಿ 4 | | | ಚ 11 |
| ರಾಹು 3 | 2 | ಲಗ್ನ 1 | 12 |

1991 ನೇ ವರ್ಷ ಮೇ, 21 ನೇ ತಾರೀಖು ರಾಜೀವ್‌ಗಾಂಧೀಯವರಿಗೆ ಇದ್ದ ಗ್ರಹಚಾರ.

ಪಂಚಾಂಗದ ಪ್ರಕಾರ 1991 ಮೇ, 21ನೇ ತಾರೀಖಿನಂದು ಇದ್ದ ಕುಂಡಲಿಯನ್ನು ನೋಡಿದರೆ ಜನನ ಲಗ್ನದಲ್ಲಿ ಎರಡನೆ ಸ್ಥಾನದಲ್ಲಿದ್ದು ಆಯು ಸ್ಥಾನವಾದ ಎಂಟನೆಯ ಸ್ಥಾನದ ಮೇಲೆ ದೊಡ್ಡಸ್ತಿಕೆ ಚಲಾಯಿಸುವ ಕುಜಗ್ರಹ ಗುರುವಿನೊಂದಿಗೆ ಸೇರಿ ಹತ್ತನೆಯ ಸ್ಥಾನದಲ್ಲಿ ಇದೆ. ಅಲ್ಲಿದ್ದ ಕುಜಗ್ರಹ ಗುರುವಿನೊಂದಿಗೆ ಸೇರಿ ಇಬ್ಬರೂ ಶನಿ ಮೇಲೆ ಅವರ ಹಸ್ತಗಳನ್ನಿಟ್ಟು ಶನಿ ಅಧೀನದಲ್ಲಿರುವ ಆಯುಷ್ಯನ್ನು ಕುಜಗ್ರಹ ಎಳೆದುಕೊಳ್ಳುವುದು ನಡೆದಿದೆ. ಜಾತಕದಲ್ಲಿ ಹುಟ್ಟಿದಾಗಲೇ ನಿರ್ಣಯಿಸಲ್ಪಟ್ಟ ಕರ್ಮವನ್ನು ಹುಟ್ಟಿದ ದಿನ ಪಂಚಾಗದಿಂದ ತಿಳಿದರೂ ಅದು ಯಾವಾಗ ನಡೆಯುತ್ತದೆನ್ನುವುದಕ್ಕೆ ಆಗ ಉತ್ತರವಿಲ್ಲ. ಅಂದಿನ ಪಂಚಾಂಗದ ಮುಖಾಂತರ ತಿಳಿಯದಿದ್ದರೂ ಪ್ರಸ್ತುತ ವರ್ತಮಾನ ಕಾಲದಲ್ಲಿರುವ ಪಂಚಾಂಗದಲ್ಲಿ ಮಾತ್ರ ತಿಳಿಯಬಲ್ಲದು. ಆಯುಷ್ಯ ವಿಷಯದಲ್ಲಿ ಅನುಮಾನವಿದ್ದರೂ ಆತನ ಆಯುಷ್ಯ ಯಾವಾಗ ಮುಗಿಯುತ್ತದೆನ್ನುವ ವಿಷಯ ಆ ಸಂಘಟನೆ ನಡೆಯುವ ಕಾಲ ಯಾವಾಗಾಗುತ್ತದೋ ಅಂದಿನ ಪಂಚಾಂಗದಲ್ಲಿ ಆ ಸಂಘಟನೆ ವಿವರಕ್ಕೆ ಸಂಬಂಧಿಸಿದ ಗ್ರಹಚಾರವಿರುತ್ತದೆ. 1991 ನೇ ಸಂವತ್ಸರ ಪಂಚಾಂಗ ಮಾರ್ಚಿ ತಿಂಗಳಲ್ಲಿಯೇ ಲಭಿಸುವುದರಿಂದ ಪ್ರಮಾದ ನಡೆದು ಮರಣಿಸುವುದಕ್ಕಿಂತ

ಮೊದಲು ಎರಡು ತಿಂಗಳ ಹಿಂದೆ ಆ ವಿಷಯ ಲಗ್ನಕುಂಡಲಿಯಲ್ಲಿ ಅರ್ಥವಾಗುತ್ತಿದೆ. ಆ ವರ್ಷದಲ್ಲಿ ನಡೆಯುವ ಘಟನೆ ಆ ಸಂವತ್ಸರ ಪಂಚಾಂಗದಲ್ಲಿಯೇ ಇರುತ್ತದೆ.

1991 ಮೇ, 21ನೇ ತಾರೀಖು ಸರಿಯಾಗಿ ಮಂಗಳವಾರವೇ ಆಗುವುದು ವಿಶೇಷ. ಗ್ರಹಗಳಲ್ಲಿ ಕುಜನನ್ನು ಅಂಗಾರಕನೆಂದು, ಮಂಗಳನೆಂದು ಕರೆಯುತ್ತಿದ್ದೇವೆ. ದಿನಗಳಲ್ಲಿ ಮಂಗಳವಾರ ಕುಜನ ದಿನವೆಂದು ಹೇಳುತ್ತಿದ್ದೇವೆ. ಕುಜನು ತನ್ನ ದಿನವಾದ ಮಂಗಳವಾರವೇ ರಾಜೀವ್‌ಗಾಂಧೀಯನ್ನು ಸಾಯಿಸುವುದು ನಡೆದಿದೆ. ಮಂಗಳವಾರವೇ ಮರಣಿಸುವುದರಿಂದ ಆ ದಿನದ ಅಧಿಪತಿಯಾದ ಕುಜಗ್ರಹದಿಂದ ಆ ಸಂಘಟನೆ ನಡೆದಿದೆಯೆಂದು ತಿಳಿಯುತ್ತಿದೆ. ಮತ್ತೊಂದು ವಿಷಯವೇನೆಂದರೆ ತುಲಾಲಗ್ನ ಜಾತಕನಾದ ರಾಜೀವ್‌ಗಾಂಧೀ ಯವರಿಗೆ ಶತ್ರು ಗ್ರಹಗಳಾಗಿ ಐದು ಗ್ರಹಗಳು ಇವೆ. ಅವು ವರಸೆ ಕ್ರಮವಾಗಿ 1. ಸೂರ್ಯನು 2. ಚಂದ್ರನು 3. ಕುಜನು 4. ಗುರುವು 5. ಕೇತುಗ್ರಹಗಳು. ಈ ಐದುಮಂದಿ ಗುಂಪಿಗೆ ಗುರುವು ನಾಯಕನಾಗಿ ಇದ್ದಾನೆ. ಈ ಶತ್ರು ಗುಂಪಿನೊಳಗಿನ ಗುರುವು, ಕುಜನು ಇಬ್ಬರೂ ಕರ್ಕಾಟಕ ರಾಶಿಯಲ್ಲಿದ್ದು ಕುಜನು ಶರೀರಸ್ಥಾನವಾದ ಮೊದಲ ಸ್ಥಾನವನ್ನು ನೋಡಿ ಶರೀರವನ್ನು ನಾಶ ಮಾಡಿದ್ದಾರೆ. ಆ ಸಂಘಟನೆ ರಾತ್ರಿ 10–21 ನಿಮಿಷಗಳಿಗೆ ನಡೆದಿದೆ. ಇಲ್ಲಿ ಶತ್ರುಗುಂಪಿನೊಳಗಿನ ಗುರು, ಕುಜರೇ ಅಲ್ಲದೆ ಮತ್ತೊಬ್ಬ ಶತ್ರು ಗ್ರಹ ಆ ಲಗ್ನದೊಳಗೆ ಬಂದಿದೆ. ಆಗ ಒಂದೇ ವರ್ಗಕ್ಕೆ ಸೇರಿದ ಮೂರು ಗ್ರಹಗಳು ಕಟಕ ಲಗ್ನದಲ್ಲಿ ಇರುವುದರಿಂದ ಅವರಿಗೆ ಎದುರಾಗಿರುವ ಮಕರ ಲಗ್ನದಲ್ಲಿನ ಶನಿಯನ್ನು ತಾಕಿ ಶನಿಯಿಂದ ಜಾತಕನ ಆಯುಷ್ಯನ್ನು ಎಳೆದುಕೊಂಡಿದ್ದಾರೆ. ಸೂರ್ಯೋದಯದಲ್ಲಿ ಧನುರ್‌ಲಗ್ನದ ಮೇಲಿರುವ ಸೂರ್ಯನು ಎರಡು ಗಂಟೆಗಳಿಗೆ ಒಂದು ಲಗ್ನವನ್ನು ದಾಟುತ್ತಾ ಬಂದು ರಾತ್ರಿ 9–25 ನಿಮಿಷಗಳಿಂದ 11–37 ನಿಮಿಷಗಳವರೆಗು ಕಟಕ ಲಗ್ನ (ಕರ್ಕಾಟಕ ಲಗ್ನ)ದ ಮೇಲೆ ಇರುವುದರಿಂದ ಪ್ರಮಾದ ಸಮಯಕ್ಕೆ ಗುರು, ಕುಜರೊಂದಿಗೆ ಸೂರ್ಯನು

ಕೂಡಾ ಇದ್ದಾನೆಂದು ತಿಳಿಯುತ್ತಿದೆ. ಸೂರ್ಯನು ಕರ್ಕಾಟಕ ಲಗ್ನದಲ್ಲಿ ಸುಮಾರು 2–12 ನಿಮಿಷಗಳಿದ್ದಾನೆ. ಆದರೇ ಸೂರ್ಯನು ಕಟಕ ಲಗ್ನದೊಳಗೆ ಬಂದು ಗುರು ಕುಜರೊಂದಿಗೆ ಬೆರೆತ ನಂತರ ಸುಮಾರು ಗಂಟೆಗಳು 10–21 ನಿಮಿಷಗಳಿಗೆ ಪ್ರಮಾದ ನಡೆದಿದೆ. ಸೂರ್ಯನು ಗುರುವು ಕುಜನಿಗೆ ಸಹಕರಿಸಿ ಶನಿ ಹತ್ತಿರವಿರುವ ಆಯುಷ್ಯನ್ನು ಎಳೆದುಕೊಂಡಿದ್ದಾರೆ. ಅದು ಸೂರ್ಯನು, ಗುರು, ಕುಜರೊಂದಿಗೆ ಸೇರಿದ ಸುಮಾರು ಗಂಟೆಗೆ ಮೇಲೆ ಶನಿಯೊಂದಿಗೆ ಹೋರಾಡಿ ಶನಿಯನ್ನು ಸೋಲಿಸಿ ಶನಿ ಹತ್ತಿರವಿರುವ ಆಯುವನ್ನು ಎಳೆದುಕೊಂಡು ಜಾತಕನಿಗೆ ಮರಣವನ್ನು ಕೊಟ್ಟಿದ್ದಾರೆ.

ಈ ಜಾತಕನು ಹುಟ್ಟಿದ ಸಮಯದಲ್ಲಿನ ಜನ್ಮಕುಂಡಲಿಯಲ್ಲಿ ಯಾವ ಲಗ್ನ ಎಷ್ಟನೆ ಸ್ಥಾನವಾಗಿರುವುದು, ಯಾವ ಗ್ರಹಗಳು ಶತ್ರು ಗ್ರಹಗಳಾಗಿರುವುದು ತಿಳಿಯುತ್ತಿದೆ. ಆತನ ಜಾತಕದ ಪ್ರಕಾರ ಜೀವನವಿರುತ್ತದೆಂದು, ಜೀವನದಲ್ಲಿ ಎಲ್ಲಾ ವಿಷಯಗಳು ಇರುತ್ತವೆಂದು ತಿಳಿಯುತ್ತಿದೆ. ಆದರೆ ಯಾವ ಸಂಘಟನೆ ಯಾವಾಗ ನಡೆಯುತ್ತದೆನ್ನುವ ವಿವರ ಇರುವುದಿಲ್ಲ. 1991 ಮೇ 21ನೇ ದಿನದ ಪಂಚಾಂಗದಲ್ಲಿ ಗುರುವು, ಕುಜನು ಕರ್ಕಾಟಕ ಲಗ್ನದಲ್ಲಿ ಇರುವುದು ನಡೆದಿದೆ. ಆದರೇ 1944 ಆಗಷ್ಟ್ 20ನೇ ತಾರೀಖು ರಾಜೀವ್‌ಗಾಂಧೀ ಹುಟ್ಟಿದ ದಿನದಂದು ಭವಿಷ್ಯತ್ತಿನಲ್ಲಿ ಗುರು ಕುಜರು ಮತ್ತು ಸೂರ್ಯನು ಕರ್ಕಾಟಕ ಲಗ್ನದಲ್ಲಿ ಸೇರಿ ಮಕರದಲ್ಲಿರುವ ಶನಿಯೊಂದಿಗೆ ಹೋರಾಡುತ್ತಾರೆಂದು ತಿಳಿದಿಲ್ಲ ಅಲ್ಲವೆ! ಆದ್ದರಿಂದ ಪ್ರಮಾದವಿರಬಹುದೆಂದು 1991 ಸಂ॥ ಪಂಚಾಂಗದ ಪ್ರಕಾರ ಜನ್ಮ ಲಗ್ನದಲ್ಲಿ ತಿಳಿದರೂ ಅದು ಯಾವಾಗ ನಡೆಯುತ್ತದೆ ಯಾವ ಯಾವ ಗ್ರಹಗಳು ಆ ಸಮಯದಲ್ಲಿ ಪಾಲ್ಗೊಳ್ಳುವರು ಎನ್ನುವ ವಿಷಯ ಆ ದಿನ ತಿಳಿಯದು. ಅದು ಭವಿಷ್ಯತ್ತು ನಡೆದಂತೆಲ್ಲಾ ಬರುವ ಪಂಚಾಂಗಗಳಲ್ಲಿ ತಿಳಿಯುತ್ತದೆ. ಗ್ರಹಗಳು ಕಾಲಚಕ್ರದಲ್ಲಿ ತಿರುಗುವುದರಿಂದ ಅವರ ಪ್ರಯಾಣದಲ್ಲಿ ಯಾರು ಯಾರೊಂದಿಗೆ ಯಾವಾಗ ಬೆರೆಯುವರೋ ಆ ಸಮಾಚಾರ ಪ್ರತಿ ಸಂವತ್ಸರ ಪಂಚಾಂಗದಲ್ಲಿ ಇರುತ್ತದೆ. ಪ್ರತಿ ವರ್ಷ ಪಂಚಾಂಗವನ್ನು

ನೋಡುತ್ತಿದ್ದರೆ ಯಾವುದೋ ಒಂದು ಪಂಚಾಂಗದಲ್ಲಿ ಶತ್ರು ಗ್ರಹಗಳು ಸೇರಿ ಯಾವ ಕುತಂತ್ರ ಮಾಡುತ್ತಿರುವುದು, ಯಾವ ವಿಷಯದ ಮೇಲೆ ಅವರು ಹೆಚ್ಚಿನ ಪ್ರಭಾವವನ್ನು ತೋರಿಸುವುದು ತಿಳಿಯುತ್ತದೆ. ಆದ್ದರಿಂದ ಪ್ರಮಾದಗಳನ್ನು ಒಂದು ವರ್ಷದಲ್ಲಿ ಗುರುತಿಸಿಕೊಳ್ಳಬಹುದು ಆದರೆ, ಅದಕ್ಕಿಂತ ಮೊದಲು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲ.

ನಾನು ಬ್ರಹ್ಮವಿದ್ಯೆಗೆ ಸಂಬಂಧಿಸಿರುವವನು, ಜ್ಯೋತಿಷ್ಯನಲ್ಲ. ಆದ್ದರಿಂದ ಪ್ರತೀ ವರ್ಷ ಪಂಚಾಂಗಗಳನ್ನು ನೋಡುವ ಅಭ್ಯಾಸ ನನಗೆ ಮಾತ್ರ ಇಲ್ಲ. ಆದ್ದರಿಂದ 1991ನೇ ವರ್ಷದ ಪಂಚಾಂಗವನ್ನು ರಾಜೀವ್‌ಗಾಂಧೀ ಮರಣಿಸಿದ ನಂತರ ನೋಡಿದ್ದೇನೆ, ಅದರಲ್ಲಿನ ಲೋಪಗಳನ್ನು ಗ್ರಹಿಸಿದ್ದೇವೆ. ಒಂದುವೇಳೆ ಆ ವರ್ಷದ ಮೊದಲೇ ತಿಳಿಯಬೇಕಾಗಿರುವ ಪಂಚಾಂಗವನ್ನು ತೆಗೆದುಕೊಂಡು ಪ್ರತಿ ತಿಂಗಳು ಹುಡುಕುತ್ತಾ ಬಂದಿದ್ದರೆ ಲೋಪಗಳು ಮೇ ತಿಂಗಳಲ್ಲಿ ಇದ್ದಂತೆ ಕಾಣಿಸುತ್ತಿದ್ದವು. ಒಬ್ಬ ಜಾತಕನಿಗೆ ಅನೇಕ ವಿಷಯಗಳಲ್ಲಿ ಅನೇಕ ಕೋನಗಳಿಂದ ನೋಡಬೇಕಾಗಿರುತ್ತದೆ. ಇದೆಲ್ಲಾ ಒಂದು ವರ್ಷದವರೆಗು ಕಾಲ ಇರುವ ಒಳ್ಳೆಯ ಕೆಟ್ಟ ಕಾಲವನ್ನು ಹುಡುಕುವುದಕ್ಕೆ ಸಮಯ ತಾಳ್ಮೆ ಇರಬೇಕು. ಹಾಗೆ ತಾಳ್ಮೆ, ಸಮಯ ಇರುವವರು ಸಂವತ್ಸರದ ಆರಂಭದಲ್ಲಿಯೇ ಪಂಚಾಂಗವನ್ನು ಹುಡುಕಿ ತಮ್ಮ ತಮ್ಮ ಒಳಿತು ಕೆಡುಕುಗಳನ್ನು ಗ್ರಹಿಸಿಕೊಳ್ಳಬಹುದು. ಒಂದು ಪ್ರಮಾದವನ್ನು ಜಾತಕದಲ್ಲಿ ಸೂಚಿಸಿದರೂ, ಆ ಪ್ರಮಾದ ಯಾವ ವರ್ಷದಲ್ಲಿ ನಡೆಯುತ್ತದೆನ್ನುವುದಕ್ಕೆ ಪ್ರತಿ ವರ್ಷದ ಪಂಚಾಂಗವನ್ನು ನೋಡಬೇಕಾಗಿರುತ್ತದೆ. ಆದ್ದರಿಂದ ಜ್ಯೋತಿಷ್ಯನು ಜಾತಕದಲ್ಲಿನ ಸಮಸ್ಯೆಗಳನ್ನು ಪ್ರಸ್ತುತ ವರ್ತಮಾನ ಪಂಚಾಂಗಗಳಲ್ಲಿ ಹುಡುಕಬೇಕಾಗಿರುತ್ತದೆ. ರಾಜೀವ್‌ಗಾಂಧೀ ಯವರಿಗೆ ಅಪಾಯ ಹುಟ್ಟಿದ ಜಾತಕದಲ್ಲಿದ್ದರೆ, ಅದು ನಡೆಯುವುದಕ್ಕೆ ಬೇಕಾದ ಗ್ರಹಬಲ 1991ನೇ ವರ್ಷದ ಪಂಚಾಂಗದಲ್ಲಿ ಇರುವಂತೆ ಪಂಚಾಂಗವನ್ನು ಹುಡುಕಿದ್ದರೆ ಮೊದಲೇ ತಿಳಿಯುತ್ತಿತ್ತು. ಈಗ ಜಗನ್ ಎನ್ನುವ ವ್ಯಕ್ತಿಯವೊಂದು ಜಾತಕದಲ್ಲಿ ರಾಜೀವ್‌ಗಾಂಧೀಗೆ ನಡೆದ ಪ್ರಮಾದಕ್ಕೆ ಸರಿಹೊಂದುವ ಪ್ರಮಾದ ಇರುವಂತೆ

ಸೂಚನೆಗಳು ಕಾಣಿಸಿದರೂ, ಅದು ಯಾವಾಗ ನಡೆಯುತ್ತದೆ ಎನ್ನುವ ಸಮಾಚಾರ ಜಾತಕದಲ್ಲಿ ಇರುವುದಿಲ್ಲ. ಆದ್ದರಿಂದ ಪ್ರತಿ ವರ್ಷ ಪಂಚಾಂಗ ಬಿಡುಗಡೆಯಾದ ಕೂಡಲೇ ಅದರಲ್ಲಿ ಹನ್ನೆರಡು ತಿಂಗಳು ಹುಡುಕಿ ನೋಡಬೇಕು. ಗ್ರಹಚಾರದಲ್ಲಿ ಹೆಚ್ಚಾಗಿ ಶತ್ರು ಗ್ರಹಗಳು ಒಂದು ಕಡೆ ಸೇರಿದರೂ, ಸೇರಿದ ಶತ್ರು ಗ್ರಹಗಳು ಆಯುಷ್ಯ ಸ್ಥಾನವನ್ನು ತಾಕಿದರೂ, ಆಯುವಿಗೆ ಅಧಿಪತಿಯಾದ ಶನಿ ಗ್ರಹವನ್ನು ಬಂಧಿಸಿದರೂ ಅಷ್ಟಮಾಧಿಪತಿಯಾದವನು ಶತ್ರು ಗ್ರಹಗಳ ಕೈಯ್ಯಲ್ಲಿ ಸಿಲುಕಿಕೊಂಡರೂ ಅದು ಪ್ರಮಾದ ಸಮಯವೆಂದು ಗುರುತಿಸಿಕೊಳ್ಳಬಹುದು.

ಎಷ್ಟೋ ಬುದ್ಧಿಯನ್ನುಪಯೋಗಿಸಿ ಒಬ್ಬ ವ್ಯಕ್ತಿ ಜಾತಕದಲ್ಲಿರುವ ಪ್ರಮಾದವನ್ನು 32ನೇ ಸಂವತ್ಸರ ಪಂಚಾಂಗದಲ್ಲಿ ಗುರುತಿಸಿದ್ದೇವೆಂದುಕೊಳ್ಳಿ. ಆ ಸಂವತ್ಸರ ಯುಗಾದಿ ಆರಂಭದಲ್ಲಿ ಬಂದಿರುವ ಪಂಚಾಂಗವನ್ನು ನೋಡಿ ಈ ಸಂವತ್ಸರ ಏಳು ತಿಂಗಳು ಕಳೆದ ನಂತರ ಎಂಟನೆಯ ತಿಂಗಳಲ್ಲಿ ಅಪಾಯ ನಡೆದು ಜಾತಕನು ಮರಣಿಸುವನೆಂದು ತಿಳಿದಿದೆಯೆಂದುಕೊಳ್ಳೋಣ. ಆಗ ಆ ಜಾತಕನಾಗಲೀ, ಆ ಜಾತಕನಿಗೆ ಅಪಾಯವನ್ನು ಕುರಿತು ತಿಳಿಸಿದ ಜ್ಯೋತಿಷ್ಯನಾಗಲೀ ಯಾವ ಪ್ರಯತ್ನ ಮಾಡಿದರೂ, ಯಾವ ಶಾಂತಿಗಳು ಮಾಡಿದರೂ, ಎಷ್ಟು ಪೂಜೆಗಳು ಮಾಡಿದರೂ ಎಷ್ಟೋ ಮಂದಿ ದೇವತೆಗಳನ್ನು ಆರಾಧಿಸಿ ಹರಕೆ ಸಲ್ಲಿಸಿದರೂ, ಶಾಂತಿ ಹೋಮಗಳು, ಮೃತ್ಯುಂಜಯ ಯಜ್ಞಗಳು ಮಾಡಿದರೂ, ಜ್ಯೋತಿಷ್ಯನು ತನ್ನ ವಿದ್ಯೆಯನ್ನೆಲ್ಲಾ ಉಪಯೋಗಿಸಿ ಜಾತಕನನ್ನು ಪ್ರಮಾದದಿಂದ ಕಾಪಾಡಬೇಕೆಂದುಕೊಂಡರೂ, ಜಾತಕನು ತನ್ನ ಧನವನ್ನು ಉಪಯೋಗಿಸಿ ಶನೀಶ್ವರನಿಗೆ ಬಂಗಾರದ ಕಿರೀಟ ಮಾಡಿಸಿದರೂ, ವಿಘ್ನೇಶ್ವರನಿಗೆ ಗುಡಿ ಕಟ್ಟಿಸಿದರೂ, ಮುಕ್ಕಂಟೀಶ್ವರನಿಗೆ ಕಾಣಿಕೆಗಳು ಸಲ್ಲಿಸಿದರೂ, ಕಪಿಲೇಶ್ವರನಿಗೆ ತೈಲಾಭಿಷೇಕ, ನೀಲಕಂಠೇಶ್ವರನಿಗೆ ರುದ್ರಾಭಿಷೇಕ ಮಾಡಿಸಿದರೂ ಮುಂಬರುವ ಆಪತ್ತು ಬಾರದೆ ಬಿಡುವುದಿಲ್ಲ. ನಡೆಯಬೇಕಾದ ಪ್ರಮಾದ ನಡೆದೇ ನಡೆಯುತ್ತದೆ. ಯಾರೇಯಾಗಲೀ ಕರ್ಮವನ್ನು ಅತಿಕ್ರಮಿಸಿ ಹೋಗಲಾರರು. ಯಾವ ಕ್ರಿಯೆಗಳಿಂದಾಗಲೀ ನಡೆಯಬೇಕಾದ ಕರ್ಮವನ್ನು ತಪ್ಪಿಸಿಕೊಳ್ಳಲಾರರು.

ಗ್ರಹಚಾರದಲ್ಲಿ ಯಾರೂ ಏನೂ ಮಾಡಲಾರರು. ಅದು ಹೇಗಿದ್ದರೇ ಹಾಗೇ ನಡೆದುತೀರುತ್ತದೆ.

ನಡೆಯಬೇಕಾಗಿರುವ ಪ್ರಮಾದವನ್ನು ತಪ್ಪಿಸಿಕೊಳ್ಳುವುದಕ್ಕೆ ಒಂದೇ ಒಂದು ಮಾರ್ಗವಿದೆಯೆಂದು ಮೊದಲೇ ಹೇಳಿಕೊಂಡಿದ್ದೇವೆ. ಅದು ಪ್ರಪಂಚ ಕಾರ್ಯವಲ್ಲ. ಪರಮಾತ್ಮ ಜ್ಞಾನವೆಂದು ಸಹ ಹೇಳಿಕೊಂಡಿದ್ದೇವೆ. ಕರ್ಮವನ್ನು ಜಯಿಸಿ ಪ್ರಮಾದವನ್ನು ತಪ್ಪಿಸುವ ಜ್ಞಾನವನ್ನು ತಿಳಿಯಬೇಕೆಂದರೇ ಮೊದಲು ಆ ಮನುಷ್ಯನಲ್ಲಿ ನಾನು ಇಂತಹ ಮತದವನೆನ್ನುವ ಭಾವನೆ ಹೋಗಬೇಕು. ಆತನ ದೃಷ್ಠಿಯಲ್ಲಿ ದೇವರು ಹೊರತುಪಡಿಸಿ ಮತ ಎನ್ನುವ ಭಾವನೆ ಇಲ್ಲದಿರುವುದು ನಿಜವಾದ ಜ್ಞಾನವಾಗುತ್ತದೆ. ಅಂತಹ ಸ್ವಚ್ಛವಾದ ಜ್ಞಾನವನ್ನು ತಿಳಿದವನೇ ಕರ್ಮವನ್ನು ಜಯಿಸಿ ಪ್ರಮಾದವನ್ನು ತಪ್ಪಿಸಿಕೊಳ್ಳಬಲ್ಲನು. ಸೃಷ್ಠಿಯೆಲ್ಲದಕ್ಕೂ ಅಧಿಪತಿಯಾದ ದೇವರನ್ನು ತಿಳಿದವನು, ಮತಗಳ ಭ್ರಮೆಯನ್ನು ಬಿಟ್ಟವನು, ಶರೀರಾಂತರ್ಗತ ಜ್ಞಾನವನ್ನು ತಿಳಿದವನು, ಎಂತಹ ಕರ್ಮ ಇರುವವನಾದರೂ, ಅವನಿಗೆ ಎಂತಹ ದೊಡ್ಡ ಪ್ರಮಾದ ಇದ್ದರೂ ಅದನ್ನು ಸುಲಭವಾಗಿ ಜಯಿಸಿಕೊಳ್ಳಬಲ್ಲನು. ಅಂತಹ ಜ್ಞಾನಿಯಾಗಿ ಬದಲಾದವನನ್ನು ನೋಡಿದ ಗ್ರಹಗಳು ಸಂತೋಷಿಸಿ ತಮ್ಮ ದಶಗಳಲ್ಲಿ ಆತನಿಗೆ ಸಂಬಂಧಿಸಿದ ಎಷ್ಟೋ ಕರ್ಮಗಳನ್ನು ದಹಿಸಿ ಹಾಕುತ್ತಿದ್ದಾರೆ. ಕರ್ಮವನ್ನು ಮನುಷ್ಯನಿಗೆ ಒದಗಿಸಿ ಅನುಭವಿಸುವಂತೆ ಮಾಡುವ ಗ್ರಹಗಳು ಜ್ಞಾನಿ ಆದವನನ್ನು ಗೌರವಭಾವನೆಯಿಂದ ನೋಡುತ್ತಾ ಆತನ ಕರ್ಮವನ್ನು ಹರಿಸುತ್ತಿವೆ. ಜ್ಯೋತಿಷ್ಯದಲ್ಲಿ ದಶಗಳ ವಿಭಾಗ ಹೀಗಿದೆಯೆಂದು ತಿಳಿಯದವನನ್ನು ಜ್ಯೋತಿಷ್ಯದ ಮೇಲೆ ನಂಬಿಕೆ ಇಲ್ಲದವನನ್ನು ಯಾರೂ ಕಾಪಾಡಲಾರರು.

ಜ್ಯೋತಿಷ್ಯದ ಮೇಲೆ ನಂಬಿಕೆಯಿರುವವರು ಗ್ರಹಚಾರ ಮನುಷ್ಯನದ್ದು, ದಶಾಚಾರ ದೇವರದ್ದೆಂದು ತಿಳಿದವನು ನಿಜವಾದ ಜ್ಯೋತಿಷ್ಯನಾಗುತ್ತಾನೆ. ನಿಜವಾದ ಜ್ಯೋತಿಷ್ಯನು ಪಂಚಾಂಗದಲ್ಲಿ ಕೆಟ್ಟ ಒಳ್ಳೆಯ ಕರ್ಮಗಳನ್ನು ತಿಳಿದವನಾಗಿ, ಅವು ಜಾತಕದಲ್ಲಿನ ಹುಟ್ಟಿದ ಸಮಯದೊಂದಿಗೆ

ಬಂದಿರುವವೆಂದು ತಿಳಿದು, ಜನನ ಸಮಯದಲ್ಲಿ ಬಂದಿರುವವುಗಳನ್ನು ವರ್ತಮಾನ ಪಂಚಾಂಗದಲ್ಲಿ ಯಾವಾಗ ನಡೆಯುವುದು ತಿಳಿಯುವನು. ಜನನ ಸಮಯದಲ್ಲಿ ಕರ್ಮಪ್ರಕಾರ ಉಂಟಾದ ಪ್ರಮಾದಗಳು ಕೆಟ್ಟ ಕಾರ್ಯಗಳೆಲ್ಲವನ್ನೂ ತನ್ನ ಜ್ಞಾನದಿಂದಲೇ ತೊಲಗಿಸಿಕೊಳ್ಳುವುದಕ್ಕೆ ಪ್ರಯತ್ನಿಸುವನು. ಅದೇ ವಿಧಾನವನ್ನು ಇತರರಿಗೂ ಕೂಡ ಬೋಧಿಸುವನು. ಜ್ಯೋತಿಷ್ಯವು ಒಂದು ಜಾತಕದಿಂದಲೇ ಮುಗಿಯುವುದಿಲ್ಲ. ಜ್ಯೋತಿಷ್ಯವು ವರ್ತಮಾನ ಕಾಲ ಪಂಚಾಂಗಗಳ ಮೇಲೆ ಆಧಾರಪಟ್ಟಿರುತ್ತದೆ. ಹಾಗೇ ಜ್ಞಾನ ಭಕ್ತಿ ಭಾವನೆಯಿಂದಲೇ ಪೂರ್ತಿಯಾಗುವುದಿಲ್ಲ. ತಿಳಿದ ಜ್ಞಾನವನ್ನು ಜ್ಞಾನಾಗ್ನಿಯಾಗಿ ಬದಲಾಯಿಸುವ ಬ್ರಹ್ಮವಿದ್ಯಾಶಾಸ್ತ್ರದ ಮೇಲೆ ಆಧಾರಪಟ್ಟಿದೆ.

# 48 ಜ್ಯೋತಿಷ್ಯದಲ್ಲಿ ಪ್ರಶ್ನೆಗಳು

**1. ಜಾತಕದಲ್ಲಿ ಯಾವ ಸಮಸ್ಯೆಯನ್ನಾದರೂ ತಿಳಿಯಬಹುದಾ?**

**ಉ॥** ಜಾತಕ ಎನ್ನುವುದು ಜಾಘತಕವೆಂದು ಮೊದಲೇ ಹೇಳಿದ್ದೇವೆ. ಘತಕ ಎಂದರೆ ಮೊದಲೇ ನಿರ್ಣಯಿಸಿಕೊಂಡಿರುವುದೆಂದು ಅರ್ಥ. ಜೀವನ ಘತಕ ಹುಟ್ಟಿದ ಸಮಯದಲ್ಲೇ ನಿರ್ಣಯಿಸುವುದು ನಡೆದಿದೆ. ಆದ್ದರಿಂದ ಹುಟ್ಟುವುದನ್ನು "ಜಾ" ಎಂದಿದ್ದಾರೆ. ಆಗ ನಿರ್ಣಯ ಮಾಡಲಾಗಿರುವ ಘತಕವನ್ನು ಜಾಘತಕ ಎನ್ನುತ್ತಿದ್ದೇವೆ. ಜೀವನದಲ್ಲಿನ ಎಲ್ಲಾ ಸಮಸ್ಯೆಗಳು ಜಾಘತಕದಲ್ಲಿ ಪ್ರಾರಬ್ಧಕರ್ಮದ ಮೂಲಕ ನಿಕ್ಷಿಪ್ತ ಮಾಡಲ್ಪಟ್ಟಿರುತ್ತವೆ. ಜಾಘತಕವನ್ನು ನಾವು ಹುಟ್ಟಿದ ಸಮಯವನ್ನನುಸರಿಸಿ ಬರೆದುಕೊಂಡರೂ ನಡೆಯುವ ಭವಿಷ್ಯತ್ ಏನೂ ಅರ್ಥವಾಗದೆ ಅಂಧಕಾರದಿಂದ ತುಂಬಿರುತ್ತದೆ. ಆದ್ದರಿಂದ ಭವಿಷ್ಯತ್ ಅಂಧಕಾರದಿಂದ ಕೂಡಿಕೊಂಡಿದೆ. ಆ ಕತ್ತಲಲ್ಲಿ ಏನೂ ಕಾಣಿಸುವುದಿಲ್ಲ. ಆದ್ದರಿಂದ ಮುಂದಿನ ದಿನವಾಗಲೀ, ಮುಂದಿನ ನಿಮಿಷವಾಗಲೀ ಏನು ನಡೆಯುವುದು ತಿಳಿಯದು. ಕತ್ತಲಮಯವಾದ ಜಾತಕವನ್ನು ಜ್ಯೋತಿಯಿಂದ

ತಿಳಿಯಬಹುದು. ಜ್ಞಾನವೆನ್ನುವ ಜ್ಯೋತಿಯನ್ನುಪಯೋಗಿಸಿ ನೋಡಿದರೆ ಜೀವನದಲ್ಲಿನ ಯಾವ ಸಮಸ್ಯೆಯನ್ನಾದರೂ ತಿಳಿಯಬಹುದು. ಜ್ಞಾನ ಜ್ಯೋತಿ ಇರುವವನು ಜ್ಯೋತಿಷ್ಯನು. ಅಜ್ಞಾನವಿರುವವನು ಸಮಸ್ಯೆಯನ್ನು ಕುರಿತು ಕೇಳುವವನು. ಜ್ಞಾನ ತಿಳಿಯದವನು ಪ್ರಪಂಚ ಪ್ರಶ್ನೆಗಳನ್ನೇ ಕೇಳುವನು. ಪ್ರಪಂಚ ಪ್ರಶ್ನೆಗಳಿಗೆ ಉತ್ತರ ಕೊಡುವ ಜ್ಯೋತಿಷ್ಯನು, ತನ್ನ ಪರಿಚಯದಿಂದ ಜ್ಞಾನ ತಿಳಿಯದವನಿಗು ಕೂಡಾ ಜ್ಞಾನದ ಮೇಲೆ ಆಸಕ್ತಿ ಉಂಟಾಗುವಂತೆ ಪ್ರಶ್ನೆಗೆ ಉತ್ತರಕೊಡಬೇಕು.

**2) ಜೋತಿಷ್ಯಕ್ಕು ಭವಿಷ್ಯತ್ತಿಗೂ ವ್ಯತ್ಯಾಸವೇನಿದೆ?**

**ಉ||** ನೋಡುವುದು ದೃಷ್ಠಿ, ನೋಡಲ್ಪಡುವುದು ದೃಶ್ಯ. ಹಾಗೆಯೇ ತಿಳಿಯಪಡಿಸುವುದು ಜ್ಯೋತಿಷ್ಯ, ತಿಳಿಯಲ್ಪಡುವುದು ಭವಿಷ್ಯತ್ತು. ಹಾಗೇ ಜ್ಞಾನದಿಂದ ಕೂಡಿಕೊಂಡಿರುವುದು ಜ್ಯೋತಿಷ್ಯ, ಭಯದಿಂದ ಕೂಡಿಕೊಂಡಿರು ವುದು ಭವಿಷ್ಯತ್ತು. ಜ್ಞಾನದಿಂದ ಕೂಡಿಕೊಂಡವನು ಜ್ಯೋತಿಷ್ಯವನ್ನು ಹೇಳುವನು. ಅಜ್ಞಾನದಿಂದ ಕೂಡಿಕೊಂಡವನು ಭವಿಷ್ಯತ್ತನ್ನು ಕೇಳುವನು. ಭಾವಿತರದವರೆಂದರೆ ಮುಂಬರುವ ಪೀಳಿಗೆಯವರು ಎಂದು ಅರ್ಥ. ಜ್ಯೋತಿ ತರಹ ಎಂದರೆ ಬೆಳಕನ್ನು ಕೊಡುವವರು. ಈಗ ಜ್ಯೋತಿಯನ್ನು (ಜ್ಞಾನವನ್ನು) ಬೆಳಗಿಸಿದರೇ ಅದು ಮುಂಬರುವವರಿಗೆ (ತಿಳಿಯಬೇಕೆನ್ನುವವರಿಗೆ) ಬೆಳಕಾಗಿ ಇರುತ್ತದೆ.

**3) ಜ್ಯೋತಿಷ್ಯ ಎಷ್ಟು ವಿಧಗಳು ಇದೆ?**

**ಉ||** ದೇಶದಲ್ಲಿ ಎಷ್ಟು ಜ್ಞಾನಗಳಿದ್ದರೂ ದೇವರ ಜ್ಞಾನ ಒಂದೇ ಇದೆ. ದೇವರೂ ಒಬ್ಬನೇ ಇದ್ದಾನೆ. ಅದೇ ವಿಧವಾಗಿ ಜ್ಯೋತಿಷ್ಯ ಎನ್ನುವ ಹೆಸರನ್ನು ಎಷ್ಟೋ ಪದ್ಧತಿಗಳಾಗಿ ಹೇಳುವ ವಿಧಾನಗಳಿಗೆ ಇಟ್ಟುಕೊಂಡರೂ ಅವೆಲ್ಲವೂ ಜ್ಯೋತಿಷ್ಯ ಗಳು ಅಲ್ಲ. ಅವುಗಳಿಂದ ಭವಿಷ್ಯತ್ ತಿಳಿಯುವುದಿಲ್ಲ. ದ್ವಾದಶ ಗ್ರಹಗಳ ಮೂಲಕವೇ ಕರ್ಮ ಪಾಲಿಸಲ್ಪಡುತ್ತಿರುವ ವಿಧಾನವನ್ನೇ ಜ್ಯೋತಿಷ್ಯ ಎನ್ನುತ್ತೇವೆ.

**4) ಮುಹೂರ್ತವೆಂದರೆ ಏನು?**

**ಉ॥** ಮೊದಲೇ ನಿರ್ಣಯಿಸಲ್ಪಟ್ಟಿರುವುದು ಮುಹೂರ್ತ. ಮಧ್ಯದಲ್ಲಿ ಮನುಷ್ಯರು ನಿರ್ಣಯಿಸುವುದು ಮುಹೂರ್ತವಲ್ಲ. ಎಲ್ಲಾ ಮುಹೂರ್ತಗಳು ಜನ್ಮದಲ್ಲಿಯೇ ಪ್ರಾರಬ್ಧ ಕರ್ಮದೊಂದಿಗೆ ನಿರ್ಣಯಿಸಲ್ಪಟ್ಟಿರುತ್ತವೆ. ಮಧ್ಯದಲ್ಲಿ ಯಾರೂ ನಿರ್ಣಯಿಸಲಾರರು. ನಿರ್ಣಯಿಸಿದರೂ ಅದನ್ನು ಮುಹೂರ್ತ ವೆನ್ನುವುದಿಲ್ಲ.

**5) ಕೆಲವರು ತಮ್ಮ ಮಕ್ಕಳು ಹುಟ್ಟಿದ ಸಮಯದಲ್ಲಿರುವ ನಕ್ಷತ್ರ ವನ್ನನುರಿಸಿ ಹೆಸರು ಇಡುತ್ತಿದ್ದಾರೆ. ಕೆಲವರು ಏನೂ ನೋಡದೇ ಹೆಸರುಗಳು ಇಡುತ್ತಿದ್ದಾರೆ. ಹಾಗೆ ಇಡುವ ಹೆಸರುಗಳಲ್ಲಿ ಬಲವಿರುತ್ತದಾ? ಹೇಗೆ ಹೆಸರು ಇಡುವುದು ಒಳ್ಳೆಯದು?**

**ಉ॥** ಹುಟ್ಟಿದ ಸಮಯದಲ್ಲಿ ಇರುವ ನಕ್ಷತ್ರವನ್ನನುಸರಿಸಿ, ಆ ನಕ್ಷತ್ರವೊಂದರ ನಾಲ್ಕು ಪಾದಗಳಿಗೆ ಗುರುತಾಗಿ ನಿರ್ಣಯಿಸಲ್ಪಟ್ಟ ನಾಲ್ಕು ಅಕ್ಷರಗಳಲ್ಲಿ ಆಗಿನ ಪಾದಕ್ಕೆ ಸಂಬಂಧಿಸಿದ ಅಕ್ಷರವನ್ನು ಮೊದಲ ಅಕ್ಷರವಾಗಿ ಇರುವಂತೆ ಮಾಡಿ ಹೆಸರನ್ನು ಇಟ್ಟುಕೊಳ್ಳುವುದು ನಡೆಯುತ್ತಿದೆ. ಹಾಗೆ ಹುಟ್ಟಿದ ಸಮಯದಲ್ಲಿರುವ ನಕ್ಷತ್ರಕ್ಕೆ ಸಂಬಂಧಿತ ಅಕ್ಷರದಿಂದ ಹೆಸರು ಇಟ್ಟುಕೊಂಡರೂ, ಹಾಗೆ ಇಟ್ಟುಕೊಳ್ಳದೆ ಬೇರೆ ಹೆಸರನ್ನು ಇಟ್ಟುಕೊಂಡರೂ, ಅದರಲ್ಲಿ ಲಾಭವಾಗಲೀ ನಷ್ಟವಾಗಲೀ ಏನೂ ಇರುವುದಿಲ್ಲ. ಕೆಲವು ಹೆಸರುಗಳು ಕರೆಯುವುದಕ್ಕೆ ಸುಲಭವಾಗಿ ಸುಂದರವಾಗಿ ಇರಬಹುದು. ಕೆಲವು ಹೆಸರುಗಳು ಕಷ್ಟವಾಗಿ ಅಂದಹೀನವಾಗಿ ಒರಟಾಗಿ ಇರುತ್ತವೆ. ಆದರೇ ಅವುಗಳಲ್ಲಿ ಬಲವಿರುವು ದಾಗಲೀ, ಇರದೇಹೋಗುವುದಾಗಲೀ ಏನೂ ಇರುವುದಿಲ್ಲ. ಯಾವ ಮನುಷ್ಯನಿಗೂ ಯಾವ ಹೆಸರಿಂದಲೂ ಎಂತಹ ಬಲಾಬಲಗಳಾಗಲೀ, ಲಾಭನಷ್ಟಗಳಾಗಲೀ ಇರುವುದಿಲ್ಲ.

**6) ಒಬ್ಬರ ಜೀವನದಲ್ಲಿ ಒಂದು ಮದುವೆ ಮಾತ್ರ ನಡೆದಾಗ, ಮತ್ತೊಬ್ಬರ**

**ಜೀವನದಲ್ಲಿ ಎರಡು ಮದುವೆಗಳು ನಡೆಯುವುದನ್ನು ನೋಡಿದ್ದೇವೆ. ಅದಕ್ಕೆ ಕಾರಣವೇನು?**

**ಉ॥** ಒಬ್ಬ ವ್ಯಕ್ತಿ ಜಾತಕದಲ್ಲಿ ಏಳನೇ ಸ್ಥಾನ ಕಳತ್ರ ಸ್ಥಾನವೆನ್ನಲ್ಪಡುತ್ತದೆ. ಕಳತ್ರ ಸ್ಥಾನವೆಂದರೆ ಗಂಡನಿಗೆ ಹೆಂಡತಿ ಕಳತ್ರವಾಗುತ್ತಾಳೆ. ಹಾಗೇ ಹೆಂಡತಿಗೆ ಗಂಡ ಕಳತ್ರವಾಗುವನು. ಕಳತ್ರಸ್ಥಾನವಾದ ಏಳನೆ ಸ್ಥಾನದಲ್ಲಿ ರಾಹುವಾಗಲೀ ಅಥವಾ ಕೇತುವಾಗಲೀ ಇದ್ದಂತಾದರೇ ಆ ಜಾತಕನಿಗೆ ಎರಡನೆ ಮದುವೆ ನಡೆಯುವುದಕ್ಕೆ ಅವಕಾಶವಿದೆ. ಕಳತ್ರ ಎಂದರೆ ಪುರುಷನಿಗೆ ಸ್ತ್ರೀ ಕಳತ್ರವಾಗುತ್ತಾಳೆಂದು, ಸ್ತ್ರೀಗೆ ಪುರುಷನು ಕಳತ್ರವಾಗುವನೆಂದು ಮತ್ತೊಂದು ಅರ್ಥ ಇದೆ. ಆದ್ದರಿಂದ ಒಂದು ವೇಳೆ ಮದುವೆಯಾಗದಿದ್ದರೂ ಸ್ತ್ರೀಯರಿಗೆ ಪುರುಷರೊಂದಿಗೆ, ಪುರುಷರಿಗೆ ಸ್ತ್ರೀಯರೊಂದಿಗೆ ಅಕ್ರಮ ಸಂಬಂಧ ಏರ್ಪಡುವಂತೆ ರಾಹು ಕೇತು ಗ್ರಹಗಳೇ ಮಾಡುತ್ತವೆ. ಕೆಲವರ ಕುಟುಂಬದಲ್ಲಿ ಗಂಡ ಮರಣಿಸಿ ಹೆಂಡತಿ ಇದ್ದರೂ ಆಕೆ ವಿಧವೆಯಾಗಿ ಉಳಿದುಹೋಗುತ್ತಿದ್ದಾಳೆ. ಅಂತಹ ಒಬ್ಬ ಸ್ತ್ರೀಗೆ ಎಂತಹ ಇತರ ಪುರುಷನೊಂದಿಗೆ ಸಂಬಂಧವಿರುವುದಿಲ್ಲ. ಹಾಗೆ ಇರುವುದಕ್ಕೆ ಕಾರಣವೇನೆಂದರೆ! ಕಳತ್ರ ಸ್ಥಾನದಲ್ಲಿ ರಾಹುವಾಗಲೀ, ಕೇತುವಾಗಲೀ ಇದ್ದಾಗ ಅಲ್ಲೇ ಆ ಗ್ರಹಗಳಿಗೆ ವಿರುದ್ಧವಾದ ಎರಡು ಅಥವಾ ಮೂರು ಗ್ರಹಗಳಿದ್ದಂತಾದರೆ ಅಲ್ಲಿ ರಾಹು ಕೇತುಗಳ ಪ್ರಭಾವ ಅಣಗಿ ಹೋಗುತ್ತದೆ. ಅವರು ಮಾಡುವ ಎರಡನೆ ಮದುವೆಗಾಗಲೀ, ಎರಡನೆ ಅಕ್ರಮ ಸಂಬಂಧವಾಗಲೀ ನಡೆಯದಂತೆ ಹೋಗುತ್ತದೆ. ಕಳತ್ರಸ್ಥಾನದಲ್ಲಿ ರಾಹು ಕೇಂದ್ರವಿರುವ ಕಡೆ ಆ ಗ್ರಹಕ್ಕೆ ವಿರುದ್ಧವಾದ ಗ್ರಹಗಳು ಅಲ್ಲದೆ ಅನುಕೂಲವಾದ ಗ್ರಹಗಳಿದ್ದರೆ ಅಂತಹ ಜಾತಕನಿಗೆ ಒಂದು ಮದುವೆಗೆ ಬದುಲು ಎರಡು ಅಥವಾ ಮೂರು ಮದುವೆಗಳು ನಡೆಯುವಂತೆ ಮಾಡಬಲ್ಲರು. ಹಾಗೆಯೇ ಒಂದು ಅಕ್ರಮ ಸಂಬಂಧಕ್ಕೆ ಬದುಲು ಇನ್ನೂ ಕೆಲವು ಅಕ್ರಮ ಸಂಬಂಧಗಳು ಉಂಟುಮಾಡುವರು. ಇದೆಲ್ಲವೂ ಜಾತಕ ಚಕ್ರದಲ್ಲಿನ ಗ್ರಹಗಳು ಆಡಿಸುವ ಆಟಗಳೇ ಹೊರತು ಮನುಷ್ಯ ಸ್ವತಃವಾಗಿ ಎಲ್ಲಿಯೂ ಆಡುತ್ತಿಲ್ಲ.

**7) ಒಬ್ಬ ವ್ಯಕ್ತಿಗೆ ಮದುವೆ ಆಲಸ್ಯವಾಗಿ ವಯಸ್ಸಾದನಂತರ ಆಗುವುದಕ್ಕೆ ಕಾರಣವೇನು? ಹಾಗೇ ಮತ್ತೆ ಕೆಲವರಿಗೆ ಪೂರ್ತಿ ಚಿಕ್ಕ ವಯಸ್ಸಿನಲ್ಲಿಯೇ ಮದುವೆ ನಡೆಯುವುದಕ್ಕೆ ಕಾರಣವೇನಿರಬಹುದು?**

**ಉ॥** ಮನುಷ್ಯನ ಜೀವನದಲ್ಲಿ ಯೌವ್ವನಕ್ಕೆ ಅಧಿಪತಿ ಕುಜಗ್ರಹ. ಹಾಗೆಯೇ ಕಳತ್ರಕ್ಕೆ ಅಧಿಪತಿ ಶುಕ್ರಗ್ರಹ. ಈ ಎರಡು ಗ್ರಹಗಳು ಬೇರೆಬೇರೆ ವರ್ಗಕ್ಕೆ ಸೇರಿವೆ. ಒಂದು ಗ್ರಹ ಪಾಪವರ್ಗ ಅಥವಾ ಶತ್ರುವರ್ಗಕ್ಕೆ ಸೇರಿರುವುದಾದರೇ ಮತ್ತೊಂದು ಗ್ರಹ ಪುಣ್ಯವರ್ಗ ಅಥವಾ ಮಿತ್ರವರ್ಗಕ್ಕೆ ಸೇರಿರುವುದಾಗಿದೆ. ಮನುಷ್ಯನ ಜಾತಕವನ್ನನುಸರಿಸಿ, ಅದರಲ್ಲಿ ಜನ್ಮಲಗ್ನವನ್ನನುಸರಿಸಿ ಗ್ರಹಗಳು ಎರಡು ವರ್ಗಗಳಾಗಿ ವಿಭಜಿಸಲ್ಪಡುತ್ತಿವೆ. ಆ ವಿಧವಾಗಿರುವ ಗ್ರಹಗಳಲ್ಲಿ ಶನಿವರ್ಗದವರು ಪುಣ್ಯವನ್ನು ಪಾಲಿಸುವವರಾಗಿದ್ದಾರೆಂದುಕೊಳ್ಳಿ. ಆಗ ಗುರುವರ್ಗದಲ್ಲಿನ ಗ್ರಹಗಳೆಲ್ಲವೂ ಪಾಪವನ್ನು ಪಾಲಿಸುವವಾಗಿ ಇರುತ್ತವೆ. ಪುಣ್ಯವನ್ನು ಪಾಲಿಸುವ ಗ್ರಹಗಳನ್ನು ಶುಭಗ್ರಹಗಳೆಂದೂ ಮಿತ್ರಗ್ರಹಗಳೆಂದೂ, ಅನುಕೂಲವಾದ ಗ್ರಹಗಳೆಂದೂ ಕರೆಯುತ್ತಿದ್ದೇವೆ. ಅದೇ ಪಾಪವನ್ನು ಪಾಲಿಸುವ ಗ್ರಹಗಳನ್ನು ಅಶುಭಗ್ರಹಗಳೆಂದೂ, ಶತ್ರುಗ್ರಹಗಳೆಂದೂ, ವಿರುದ್ಧವಾದ ಗ್ರಹ ಗಳೆಂದೂ ಕರೆಯುತ್ತಿದ್ದೇವೆ.

ಶನಿವರ್ಗಕ್ಕೆ ಸೇರಿದ ಜಾತಕನಿಗೆ ಜನ್ಮಕುಂಡಲಿಯಲ್ಲಿ ಕಳತ್ರಸ್ಥಾನವಾದ ಏಳನೆ ಸ್ಥಾನದಲ್ಲಿ ಶತ್ರುವರ್ಗಕ್ಕೆ ಸಂಬಂಧಿಸಿದ ಅಶುಭಗ್ರಹವಾದ ಕುಜ ಗ್ರಹ ಇದ್ದಾನೆ. ಆದ್ದರಿಂದ ಕುಜಗ್ರಹ ಯೌವ್ವನಕ್ಕೆ ಅಧಿಪತಿಯಾಗಿರುವುದರಿಂದ ಜಾತಕನ ಯೌವ್ವನವನ್ನು ಅಡವಿಗೆ ಕಾದ ಬೆಳದಿಂಗಳ ಹಾಗೆ ಮಾಡಿ, ಯೌವ್ವನದಲ್ಲಿ ಕಳತ್ರ ಸುಖ ಇಲ್ಲದಂತೆ ಮಾಡುತ್ತದೆ. ಆದ್ದರಿಂದ ಅಂತಹವನಿಗೆ ಜೀವನದಲ್ಲಿ ಮದುವೆಯಾಗುವುದಕ್ಕೆ ಆಲಸ್ಯವಾಗುತ್ತದೆ. ಯಾವುದೋ ಒಂದು ಕಾರಣದಿಂದ ಮದುವೆ ಕುದರದೆ ಕೊನೆಗೆ ವಯಸ್ಸಾಗಿ ಹೋಗುತ್ತದೆ. ವಯಸ್ಸಾದ ನಂತರ ಮದುವೆ ಆಗಬಹುದು. ಕೆಲವರಿಗೆ ಶನಿವರ್ಗ ಶತ್ರುವರ್ಗವಾದಾಗ ಕಳತ್ರಸ್ಥಾನದಲ್ಲಿ

ಶುಕ್ರನಿದ್ದರೂ ಅಥವಾ ಶುಕ್ರ ಹಸ್ತವಿದ್ದರೂ ಕಳತ್ರಕ್ಕೆ ಅಧಿಪತಿಯಾದ ಶುಕ್ರನು ಜಾತಕನಿಗೆ ಅಶುಭವನ್ನುಂಟುಮಾಡುತ್ತಾ ಅವನಿಗೆ ಯೌವ್ವನದಲ್ಲಿ ಮದುವೆ ಯಾದರೂ ಶುಕ್ರಗ್ರಹದಿಂದ ಯೌವ್ವನದಲ್ಲಿ ಹೆಂಡತಿ ಅನುಕೂಲವತಿಯಾಗಿ ಇರುವುದಿಲ್ಲ. ಯೌವ್ವನವೆಲ್ಲಾ ಆ ಜಾತಕನಿಗೆ ಹೆಂಡತಿ ಅನುಕೂಲವಿಲ್ಲದೆ ಸ್ತ್ರೀ ಸೌಖ್ಯವಿಲ್ಲದಂತೆ ಹೋಗುತ್ತದೆ. ಕುಜಗ್ರಹವಾಗಲೀ, ಶುಕ್ರಗ್ರಹವಾಗಲೀ ಶತ್ರುಗಳಾಗಿ ಯಾರಿದ್ದರೂ ಅವನ ಯೌವ್ವನ ವಯಸ್ಸೆಲ್ಲವೂ ಸುಖವಿಲ್ಲದಂತೆ ಹೋಗುತ್ತದೆ. ಕುಜ ಮಿತ್ರವರ್ಗದವನಾಗಿ ಶುಭಗ್ರಹವಾಗಿ ಏಳನೇ ಸ್ಥಾನದಲ್ಲಿದ್ದರೆ ಚಿಕ್ಕವಯಸ್ಸಿ ನಲ್ಲಿಯೇ ಮದುವೆಯಾಗುತ್ತದೆ. ಶುಕ್ರನು ಅಶುಭ ಗ್ರಹವಾದರೂ ಕಳತ್ರಕ್ಕೆ ಸಂಬಂಧವಿಲ್ಲದಂತೆ ಬೇರೆ ಸ್ಥಾನಗಳಲ್ಲಿ ಇದ್ದರೂ ಆತನ ಕಳತ್ರದಲ್ಲಿ ಆತಂಕಗಳು ಇಲ್ಲದಂತೆ ಸಾಗಿಹೋಗುವನು.

**8) ಕೆಲವು ಕುಟುಂಬಗಳಲ್ಲಿ ಗಂಡ ಹೆಂಡತಿ ಇಬ್ಬರೂ ಪ್ರತಿ ಚಿಕ್ಕ ವಿಷಯಕ್ಕೂ ಜಗಳವಾಡುತ್ತಾ, ಒಬ್ಬರ ಮಾತನ್ನು ಮತ್ತೊಬ್ಬರು ಕೇಳದಂತೆ ಸಂಸಾರ ಮಾಡುತ್ತಿರು ವರು. ಅವರು ಹಾಗೆ ಇರುವುದಕ್ಕೆ ಕಾರಣವೇನು?**

**ಉ|** ಯೌವ್ವನ ಕಾರಕನು ಕುಜನು, ಕಳತ್ರ ಕಾರಕನು ಶುಕ್ರನು ಆಗಿರುವು ದರಿಂದ, ಇವರಿಬ್ಬರೂ ಶತ್ರುಗಳಾಗುವುದರಿಂದ ಬಹಳಜನ ಜೀವನದಲ್ಲಿ ಯೌವ್ವನದಲ್ಲಿ ಕಳತ್ರ ಸುಖವಿರುವುದಿಲ್ಲ. ಅಷ್ಟೇ ಅಲ್ಲದೆ ಪೂರ್ತಿ ಶತ್ರುಗಳಾಗಿರುವ ಇವರಿಬ್ಬರೂ ಒಂದೇ ಲಗ್ನದಲ್ಲಿ ಬೆರೆತಿರುವಾಗ ಜನ್ಮಿಸಿದ ಅವರಿಗೆ ಅವರ ಜೀವನವೆಲ್ಲಾ ಗಂಡಹೆಂಡತಿಯರ ಅನ್ಯೋನ್ಯತೆ ಇಲ್ಲದಂತೆ ಸಂಸಾರ ಮಾಡುತ್ತಿರುವರು. ಕುಜಗ್ರಹ ಯಾರಿಗೆ ಅನುಕೂಲವಾಗಿದ್ದರೆ ಅವರಿಗೆ ಕೋಪ ಹೆಚ್ಚಾಗಿರುತ್ತದೆ. ಆದ್ದರಿಂದ ಪ್ರತಿ ವಿಷಯದಲ್ಲೂ ಕೋಪಿಸಿಕೊಳ್ಳುತ್ತಿರುತ್ತಾರೆ. ಹಾಗೇ ಕುಜ ಗ್ರಹ ಅನುಕೂಲವಾಗಿರುವ ಗಂಡಸರಿಗೆ ಶುಕ್ರಗ್ರಹ ಇತರ ಸ್ತ್ರೀಯರ ಸಾಂಗತ್ಯವನ್ನೇರ್ಪಡಿಸುತ್ತದೆ. ಕುಜನು ಶುಕ್ರನು ಇಬ್ಬರೂ ಶತ್ರುಗಳಾಗುವು ದರಿಂದ ಮನುಷ್ಯರ ಜೀವನದಲ್ಲಿ ಗಂಡ ಹೆಂಡತಿಯರು ಸ್ವಲ್ಪವೂ ಹೊಂದಾಣಿಕೆ ಇಲ್ಲದೆ ಜೀವನ ಸಾಗುವಂತೆ ಮಾಡುತ್ತಾರೆ.

**9) ಕೆಲವರು ಮನುಷ್ಯರು ನೋಡುವುದಕ್ಕೆ ಅಂದವಾಗಿ ಇಲ್ಲದಿದ್ದರೂ ಬುದ್ಧಿ ಮಾತ್ರ ದೊಡ್ಡದಾಗಿದ್ದು ಅವರ ಪ್ರವರ್ತನೆ ದೊಡ್ಡದಾಗಿಯೇ ಇರುತ್ತದೆ. ಅವರ ಮೇಧಾಶಕ್ತಿಯಿಂದ ಯಾವ ಸಮಸ್ಯೆಗಾದರೂ ಸುಲಭವಾಗಿ ಉತ್ತರ ಹೇಳುತ್ತಿರುವರು. ಕೆಲವರು ಅಂದವಾಗಿದ್ದರೂ ಬುದ್ಧಿ ಕಡಿಮೆಯವರಾಗಿ ಇರುತ್ತಾರೆ. ಅವರ ಪ್ರವರ್ತನೆ ಕೂಡಾ ಬುದ್ಧಿಯಿಲ್ಲದಂತೆಯೇ ಕಾಣಿಸುತ್ತಿರುತ್ತದೆ. ಹಾಗೆ ಇರುವುದಕ್ಕೆ ಕಾರಣವೇನು?**

ಉ॥ ಕರ್ಮಚಕ್ರದಲ್ಲಿನ ಕರ್ಮ ರಾಶಿಗಳಿರುವ ಭಾಗಗಳಲ್ಲಿ ಐದನೆ ಭಾಗ ಅಥವಾ ಐದನೆ ಸ್ಥಾನದಲ್ಲಿ ಮನುಷ್ಯನ ಮೇಧಸ್ಸಿಗೆ ಸಂಬಂಧಿಸಿದ ಕರ್ಮಗಳಿರುತ್ತವೆ. ಹಾಗೆಯೇ ಕಾಲಚಕ್ರದಲ್ಲಿನ ಹನ್ನೆರಡು ಗ್ರಹಗಳಲ್ಲಿ ಬುದ್ಧಿಗೆ ಅಧಿಪತಿಯಾದವನು ಚಂದ್ರನು. ಜಾತಕಚಕ್ರದಲ್ಲಿ ಚಂದ್ರನು ಐದನೆ ಸ್ಥಾನದಲ್ಲಿ ಇದ್ದರೂ ಅಥವಾ ಚಂದ್ರನ ಹಸ್ತ ಅಲ್ಲಿದ್ದರೂ ಅಂತಹ ವ್ಯಕ್ತಿಗಳು ಒಳ್ಳೆಯ ಬುದ್ಧಿ ಇರುವವರಾಗಿ ಇರುತ್ತಾರೆ. ಐದನೆ ಸ್ಥಾನ ಅಲ್ಲದೆ ಉಳಿದ ಪಾಪಸ್ಥಾನ ಗಳಾದ 3,7,11 ಸ್ಥಾನಗಳಲ್ಲಿ ಇದ್ದಂತಾದರೇ ಇರುವ ಸ್ಥಾನವನ್ನನುಸರಿಸಿ ಪೂರ್ತಿ ಬುದ್ಧಿ ಕಡಿಮೆಯವರಾಗಿ ಇರುತ್ತಾರೆ. ಚಂದ್ರನೊಂದಿಗೆ ಶತ್ರು ಗ್ರಹಗಳು ಬೆರೆತರೆ ಅಲ್ಲಿ ಬೆರೆತ ಗ್ರಹಗಳನ್ನನುಸರಿಸಿ ಬುದ್ಧಿ ಇಲ್ಲದತನವಿರುತ್ತದೆ. ಚಂದ್ರನೊಂದಿಗೆ ಬುಧನು ಶತ್ರುವಾಗಿ ಬೆರೆತಿರುವುದರಿಂದ ವ್ಯಾಪಾರದಲ್ಲಿ ಬುದ್ಧಿಕಡಿಮೆಯಾಗಿ ರುತ್ತದೆಂದು ತಿಳಿಯಬಹುದು. ಹಾಗೇ ಆಯಾ ಗ್ರಹಗಳನ್ನನುಸರಿಸಿ ಹೇಳಬಹುದು.

**10) ಕೆಲವರು ಕಾಲ ಕರ್ಮ ಅನ್ನುತ್ತಿರುತ್ತಾರೆ. ನೀವು ಕಾಲಚಕ್ರ ಕರ್ಮಚಕ್ರ ಅನ್ನುತ್ತೀರ. ಅವು ಕಾಣಿಸುತ್ತವಾ?**

ಉ॥ ಯಾವ ಮನುಷ್ಯನಿಗಾದರೂ ಯಾವ ಕರ್ಮವಿದೆಯೆನ್ನುವುದನ್ನು ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲ. ಏಕೆಂದರೆ ಜಾತಕ ಚಕ್ರದಲ್ಲಿರುವ ಗ್ರಹಗಳನ್ನು ಕಾಲಚಕ್ರದಲ್ಲಿನ ಲಗ್ನಗಳಲ್ಲಿರುವಂತೆ ಹೇಳಿಕೊಳ್ಳುತ್ತಿದ್ದೇವೆ ಆದರೆ, ರಾಶಿಗಳಲ್ಲೆಂದು ಹೇಳಲಿಲ್ಲ. ರಾಶಿಗಳು ಕರ್ಮಚಕ್ರದಲ್ಲಿ, ಲಗ್ನಗಳು ಕಾಲಚಕ್ರದಲ್ಲಿ ಇರುತ್ತವೆ ಎಂದು ಹೇಳಿಕೊಂಡಿದ್ದೇವೆ. ರಾಶಿಯೇ ಕಾಣಿಸದಿರುವಾಗ ಅದರಲ್ಲಿನ ಕರ್ಮ

ಕೂಡಾ ಕಾಣಿಸುವುದಿಲ್ಲ ಅಲ್ಲವೆ! ಜನ್ಮಕುಂಡಲಿಯಲ್ಲಿ ಬರೆದುಕೊಳ್ಳುವ ಭಾಗಗಳನ್ನು ಜನ್ಮಲಗ್ನ ಕುಂಡಲಿ ಎನ್ನುತ್ತಿದ್ದೇವೆ. ಅಷ್ಟೇ ಹೊರತು ಜನ್ಮರಾಶಿ ಕುಂಡಲಿ ಎಂದು ಅನ್ನುತ್ತಿಲ್ಲ. ಪಂಚಾಂಗವನ್ನು ಉಪಯೋಗಿಸಿ ಬರೆದುಕೊಂಡ ಲಗ್ನ ಕುಂಡಲಿಯಲ್ಲಿ ಗ್ರಹಗಳು ತಿಳಿಯುತ್ತಿರುತ್ತವೆ ಆದರೆ, ಕರ್ಮ ಕಾಣಿಸುತ್ತಿಲ್ಲ. ಆದರೂ ಪ್ರತಿ ಕೆಲಸಕ್ಕೂ ಕರ್ಮವೇ ಕಾರಣವೆನ್ನುತ್ತಿದ್ದೇವೆ, ಗ್ರಹವೇ ಕಾರಣವೆನ್ನುತ್ತಿಲ್ಲ. ಕರ್ಮವಿದೆ ಆದರೆ ಕಾಣಿಸುತ್ತಿಲ್ಲ. ಗ್ರಹಗಳು ಮಾತ್ರ ಕಾಣಿಸುತ್ತಿವೆ ಗ್ರಹಗಳು ಇರುವುದು ಕಾಲಚಕ್ರದಲ್ಲಿ, ಆದರೇ ಚಕ್ರದಲ್ಲಿನ ಗ್ರಹಗಳು ಕಾಣಿಸುತ್ತಿವೆ ಆದರೆ, ಕಾಲ ಕಾಣಿಸುತ್ತಿಲ್ಲ. ಕಾಲದ ಕೆಳಗಿರುವ ಕರ್ಮಚಕ್ರ ಕಾಣಿಸುತ್ತಿದೆ ಆದರೆ ಅದರಲ್ಲಿನ ಕರ್ಮ ಕಾಣಿಸುತ್ತಿಲ್ಲ. ಕೆಳಕ್ಕೆ ಬಂದರೇ ಗುಣಚಕ್ರವೂ ಕಾಣಿಸುತ್ತಿಲ್ಲ. ಅದರಲ್ಲಿನ ಗುಣಗಳಾಗಲೀ, ಜೀವಿಯಾಗಲೀ ಯಾರಿಗೂ ಕಾಣಿಸುತ್ತಿಲ್ಲ. ಮೇಲಿರುವ ಕಾಲಚಕ್ರದಲ್ಲಿ ಚಕ್ರವೂ, ಚಕ್ರದಲ್ಲಿನ ಗ್ರಹಗಳೂ ಕಾಣಿಸಿದಾಗ, ಕಾಲ ಕಾಣಿಸುತ್ತಿಲ್ಲ. ಕೆಳಗಿರುವ ಕರ್ಮಚಕ್ರದಲ್ಲಿ ಚಕ್ರವು ಮಾತ್ರ ಕಾಣಿಸುತ್ತಿದೆ ಆದರೆ, ಚಕ್ರದಲ್ಲಿನ ಕರ್ಮ ಕಾಣಿಸುತ್ತಿಲ್ಲ. ಇನ್ನೂ ಕೆಳಗೆ ಹೋದರೆ ಗುಣಚಕ್ರವಿದೆ. ಆದರೇ ಅಲ್ಲಿ ಚಕ್ರವೂ ಕಾಣಿಸುತ್ತಿಲ್ಲ. ಅದರಲ್ಲಿನ ಗುಣಗಳೂ ಕಾಣಿಸುತ್ತಿಲ್ಲ. ಗುಣಗಳಲ್ಲಿರುವ ಜೀವಿಯೂ ಕಾಣಿಸುತ್ತಿಲ್ಲ. ನಾವು ಚೆನ್ನಾಗಿ ಮನೋದೃಷ್ಟಿಯನ್ನಿಟ್ಟು ಆಲೋಚಿಸಬೇಕು. ಮೇಲಿರುವ ಕಾಲಚಕ್ರದಲ್ಲಿ ಚಕ್ರವೂ ಗ್ರಹಗಳೂ ಎರಡೂ ಕಾಣಿಸಿದಾಗ, ಅದರ ಕೆಳಗಿರುವ ಕರ್ಮಚಕ್ರದಲ್ಲಿ ಚಕ್ರ ಮಾತ್ರ ಕಾಣಿಸಿದಾಗ, ಅದಕ್ಕಿಂತ ಕೆಳಗೆ ಗುಣಚಕ್ರ, ಗುಣಗಳು, ಜೀವಿಯಲ್ಲಿ ಯಾವೊಂದೂ ಕಾಣಿಸಲಿಲ್ಲ. ಇದನ್ನನುಸರಿಸಿ ಮೇಲಕ್ಕೆ ಹೋದಂತೆಲ್ಲಾ ದೃಷ್ಟಿ ಬೆಳೆಯುತ್ತದೆಂದು, ಕೆಳಕ್ಕೆ ಬರುತ್ತಿದ್ದಂತೆಲ್ಲಾ ದೃಷ್ಟಿ ಕಡಿಮೆಯಾಗುತ್ತದೆಂದು ಅರ್ಥವಾಗುತ್ತಿದೆ. ನಿಮಗೆ ಅರ್ಥವಾದರೂ ಅರ್ಥವಾಗದಿದ್ದರೂ ನಾವು ಹೇಳುವುದೇನೆಂದರೆ, ಕಾಲವೂ ಕಾಣಿಸುವುದಿಲ್ಲ, ಕರ್ಮವೂ ಕಾಣಿಸುವುದಿಲ್ಲ. ಕಾಲ ಕರ್ಮ ಯಾರಿಗೋಸ್ಕರ ಇವೆಯೋ ಆ ಜೀವಿಯೂ ಅಲ್ಲೇ ಇರುವ ಗುಣಗಳೂ ಯಾವುವೂ ಕಾಣಿಸುವುದಿಲ್ಲ. **ಪ್ರಪಂಚದಲ್ಲಿ ಯಾವ ಮನುಷ್ಯನೂ ಈ ಮೂರನ್ನೂ ನೋಡಲಾರನು.** ಆದರೇ ಈಗ ಕೆಲವರು ಬುದ್ಧಿವಂತಿಕೆಯಿಂದ

ನನ್ನನ್ನು ಒಂದು ಪ್ರಶ್ನೆಯನ್ನು ಕೇಳಬಹುದು. ಅದೇನೆಂದರೇ! "ನೀವು ಬರೆದ ಗ್ರಂಥಗಳಲ್ಲಿ ಇದು ಕಾಲಚಕ್ರವೆಂದು, ಅದರಕೆಳಗೆ ಇದು ಕರ್ಮಚಕ್ರವೆಂದು, ಅದರ ಕೆಳಗೆ ಗುಣಚಕ್ರವೆಂದು ಚಿತ್ರಬಿಡಿಸಿ ತೋರಿಸಿ ಅದರಲ್ಲಿ ಜೀವಿ ಹೀಗಿದ್ದಾನೆಂದು, ಗುಣಗಳು ಹೀಗಿವೆಯೆಂದು ಚಿತ್ರದೊಂದಿಗೆ ಸಹ ತೋರಿಸಿದ್ದೀರ. ಯಾವ ಮನುಷ್ಯ ನೋಡಲಿಲ್ಲವೆಂದು ಹೇಳಿದ ನೀವೇ ಆ ಚಿತ್ರಗಳನ್ನು ತೋರಿಸಿದ್ದೀರ ಅಲ್ಲವೆ! ಗುಣಚಕ್ರ ಅದರಲ್ಲಿನ ಮೂರು ಭಾಗಗಳು ಹೇಗಿರುತ್ತವೋ ತಿಳಿಯದ ನಮಗೆ ಗುಣ ಭಾಗಗಳನ್ನೂ ಜೀವಿಯ ಆಕಾರವನ್ನೂ ತೋರಿಸಿದ್ದೀರಲ್ಲ!" ಎಂದು ಕೇಳಬಹುದು. ಅದಕ್ಕೆ ನಮ್ಮ ಉತ್ತರ ಹೀಗಿದೆ ನೋಡಿರಿ. ಪ್ರಪಂಚದಲ್ಲಿ ಯಾವ ಮನುಷ್ಯನೂ ನೋಡಲಿಲ್ಲ ಎನ್ನುವ ಮಾತು ಬ್ರಹ್ಮವಿದ್ಯಾಶಾಸ್ತ್ರದೊಳಗಿನ ಶಾಸನ. ಆ ಶಾಸನ ಎಂದಿಗೂ ಬದಲಾಗುವುದಿಲ್ಲ, ಅಸತ್ಯವೂ ಅಲ್ಲ. ಆದರೇ ನೀವು ಹೇಗೆ ಹೇಳಿದ್ದೀರೆಂದು ನೀವು ಕೇಳಿರುವುದು ಹೇತುಬದ್ಧವೇ ಆದರೂ ಅದಕ್ಕೆ ನಾನೂ ಸಹ ಹೇತುಬದ್ಧವಾಗಿಯೇ ಸಮಾಧಾನ ಕೊಡುತ್ತಿದ್ದೇನೆ. ಅಲ್ಲಿ ವಾಕ್ಯದಲ್ಲಿ ಯಾವ ಮನುಷ್ಯನೂ ನೋಡಲಿಲ್ಲ ಎನ್ನುವ ಮಾತನ್ನು ನೋಡಿದ ನಂತರ ನಿಮಗೆ ಮತ್ತೊಂದು ಜ್ಞಾಪಕ ಸಹ ಬರಬೇಕಾಗಿದೆ. ಜನನ ಮರಣ ಸಿದ್ಧಾಂತವನ್ನು ಹೇಳಿದಾಗ ಈ ವಿಷಯ ಪ್ರಪಂಚದಲ್ಲಿ ಹುಟ್ಟಿದವನಿಗೆ ಯಾರಿಗೂ ತಿಳಿದಿಲ್ಲವೆಂದು ಹೇಳಿದಾಗ ಈಗ ಕೇಳಿದ ಪ್ರಶ್ನೆ ಆಗಲೇ ಕೇಳಬೇಕಾಗಿತ್ತು. ಆದರೂ ಪರವಾಗಿಲ್ಲ. ಈಗ ಕೇಳಿದ್ದೀರ ಆದ್ದರಿಂದ ಸಂತೋಷಪಡೋಣ. **ಜನನ ಮರಣ ಸಿದ್ಧಾಂತ**ದಲ್ಲಿನ ವಿಷಯವಾಗಲೀ, ಈಗ ಹೇಳಿದ ಕಾಲ, ಕರ್ಮ ಹೇಳಿದ ವಿಷಯವಾಗಲೀ ಯಾವ ಮನುಷ್ಯನಿಗೂ ತಿಳಿದಿಲ್ಲವೆಂದು ಹೇಳಿದಾಗ ಇದು ಒಬ್ಬ ಮನುಷ್ಯ ಹೇಳಿದ ವಿಷಯವೆಂದು ನೀವು ಹೇಗೆ ಅಂದುಕೊಳ್ಳುತ್ತಿದ್ದೀರ? ನಿಮಗೆ ಕಾಣಿಸುವುದು ಮನುಷ್ಯನೇ ಆದರೂ ನಾನು ಹೇಳಿದಂತೆ ಅಂದುಕೊಳ್ಳುವುದು ನಿಮ್ಮ ತಪ್ಪು. ನಾನು ಎಷ್ಟೋ ಬಾರಿ ಹೇಳಿದ್ದೇನೆ. ಈಗಲೂ ಸಹ ಗುರುತು ಮಾಡುತ್ತಿದ್ದೇನೆ. ನನಗೆ ಏನೂ ತಿಳಿದಿಲ್ಲ. ಆದ್ದರಿಂದ ಯಾರಿಗೂ ತಿಳಿಯದೆಂದು ಹೇಳಿದ ದೇವರ ಮಾತು ವಾಸ್ತವ. ಯಾವ ರಹಸ್ಯವಾದರೂ ನಮ್ಮ ಶರೀರದಲ್ಲಿರುವ ಆತ್ಮಕ್ಕೇ ತಿಳಿದಿದೆ.

ಆತ್ಮ ಎಲ್ಲರನ್ನೂ ನಡೆಸುತ್ತಾ ಇತ್ತ ಜೀವಿಯಾಗಿ ಅತ್ತ ದೇವರಾಗಿ ಭ್ರಮಿಸುವಂತೆ ಮಾಡುತ್ತಾ, ತಾನು ಮಾತ್ರ ಯಾರಿಗೂ ತಿಳಿಯದೆ ನಿಶ್ಶಬ್ಧವಾಗಿದೆ. ಎಲ್ಲದಕ್ಕೂ ಅಧಿಪತಿಯಾದ ದೇವರು ತನಗೂ ನಮಗೂ ಮಧ್ಯದಲ್ಲಿ ಆತ್ಮವನ್ನಿಟ್ಟು ಸಾಕ್ಷಿಯಾಗಿ ವಿನೋದವನ್ನು ನೋಡುತ್ತಿದ್ದಾನೆ. ಹೇಗಾದರೇನು, ಎಲ್ಲಾ ತಿಳಿದಿದೆಯೆಂದುಕೊಂಡ ಜೀವಿಗೆ ಏನೂ ತಿಳಿದಿಲ್ಲವೆಂದು ನಿಜವಾಗಿಯೂ ಯಾವ ಜೀವಿಗೂ ತಿಳಿದಿಲ್ಲ. ಆದ್ದರಿಂದ ಕಾಲ ಯಾರಿಗೂ ತಿಳಿಯದು. ಹಾಗೇ ಕರ್ಮ ಕಾಣಿಸುವುದಿಲ್ಲ. ಜೀವಿಯು, ಗುಣಗಳನ್ನು ಸ್ವತಃವಾಗಿ ಯಾರೂ ನೋಡಲಿಲ್ಲ. ನಾವು ತೋರಿಸಿದರೆ ನೀವು ನೋಡಿದ್ದೀರ, ನಾವು ಹೇಳಿದರೇ ನೀವು ಕೇಳಿದ್ದೀರ. ಅಷ್ಟೇ ಹೊರತು ದೇವರ ಮಾತಿನ ಪ್ರಕಾರ ನಾವು ಹೊರತು ಯಾರೂ ಸ್ವತಃವಾಗಿ ನೋಡಲಿಲ್ಲವೆಂದು ಹೇಳಬಹುದು.

**11) ನಮಗೆ ಜ್ಯೋತಿಷ್ಯ ತಿಳಿಯಬೇಕೆಂದರೆ ಈ ಗ್ರಂಥವನ್ನು ಓದಿದರೆ ಅರ್ಥವಾಗುತ್ತದಾ?**

**ಉ॥** ಸಹಜವಾಗಿ ಯಾರ ಗ್ರಂಥವನ್ನು ಅವರು ದೊಡ್ಡದಾಗಿ ಹೇಳಿ ಕೊಳ್ಳುವರು. ಆದ್ದರಿಂದ ಈ ಗ್ರಂಥ ಓದಿದರೆ ಚೆನ್ನಾಗಿ ಅರ್ಥವಾಗುತ್ತದೆಂದು ನಾನು ಹೇಳಿದರೂ, ಅದು ಅರ್ಥವಾಗುವುದಕ್ಕೂ, ಅರ್ಥವಾಗದಂತಿರುವುದಕ್ಕೂ ಒಂದು ವಿಧಾನವನ್ನು ಅನುಸರಿಸಿ ನೋಡಿದರೆ ದ್ವಾದಶ ಗ್ರಹಗಳಲ್ಲಿ ಒಂದು ಬುಧ ಗ್ರಹ ಅನುಕೂಲ ಇಲ್ಲದಿರುವಾಗ ಜ್ಯೋತಿಷ್ಯ ಅರ್ಥವಾಗುವುದಿಲ್ಲ. ಬುಧ ಗ್ರಹವು ಜನ್ಮ ಲಗ್ನದಲ್ಲಿ ಅನುಕೂಲವಾದ ಮಿತ್ರ ಗ್ರಹವಾಗಿ ಐದನೆ ಸ್ಥಾನದಲ್ಲಿ ಇದ್ದರೂ, ತನ್ನ ಕೈಯಿಂದ ತಾಕಿದರೂ, ಅಂತಹ ಜಾತಕನಿಗೆ ಜ್ಯೋತಿಷ್ಯದ ಮೇಲೆ ಆಸಕ್ತಿ ಉಂಟಾಗಿ ಅದನ್ನು ತಿಳಿಯುವಂತೆ ಮಾಡುತ್ತದೆ. ಆಸಕ್ತಿ ಬೆಳೆದಂತೆಲ್ಲ ಜ್ಯೋತಿಷ್ಯ ಶಾಸ್ತ್ರ ಅರ್ಥವಾಗುತ್ತಾ ಬರುತ್ತದೆ. ಯಾವುದೂ ಒಂದೇ ಸಲ ಬರುವುದಿಲ್ಲ ಕಾಲಕ್ರಮೇಣ ಬರಬಲ್ಲದು.

**12) ಗತಕಾಲದಲ್ಲಿ ಬಹಳ ಜನ ಜ್ಯೋತಿಷ್ಯಶಾಸ್ತ್ರ ರಚನಕಾರರು ಅವರವರ**

**ಗ್ರಂಥಗಳಾದ ಜ್ಯೋತಿಷ್ಯ ಫಲಗ್ರಂಥ, ಯವನ ಜಾತಕ, ಜಾತಕ ಮಾರ್ತಾಂಡ, ಜಾತಕ ಚಂದ್ರಿಕ ಮುಂತಾದ ಪುಸ್ತಕಗಳಲ್ಲಿ ಸೂರ್ಯನು, ಕುಜನು, ಶನಿ, ರಾಹು, ಕೇತುಗಳನ್ನು ಕ್ರೂರರೆಂದೂ, ಬುಧ, ಗುರು, ಶುಕ್ರ, ಚಂದ್ರರನ್ನು ಸೌಮ್ಯರೆಂದು ಹೇಳಿದ್ದಾರೆ. ಇನ್ನೂ ಬಹಳ ಪುಸ್ತಕಗಳಲ್ಲಿ ಈ ಮಾತೇ ಇದೆ. ಬೇರೆ ಜ್ಯೋತಿಷ್ಯರೆಲ್ಲರೂ ಈ ವಿಷಯವನ್ನೇ ಹೇಳುತ್ತಿದ್ದಾರೆ. ಅದು ಎಷ್ಟರಮಟ್ಟಿಗೆ ವಾಸ್ತವ?**

**ಉ॥** ಅದು ಯಾವ ಕಾರಣಕ್ಕೂ ವಾಸ್ತವ ಅಲ್ಲವೆಂದು ಹೇಳುತ್ತಿದ್ದೇವೆ. ಒಳ್ಳೆಯ ಕೆಲಸವನ್ನು ಮಾಡುವವರನ್ನು ಶುಭರೆಂದೂ, ಕೆಟ್ಟ ಕೆಲಸ ಮಾಡುವ ವರನ್ನು ಅಶುಭರೆಂದೂ ಅನ್ನಬಹುದು. ಕಾಲಚಕ್ರದಲ್ಲಿನ ಗ್ರಹಗಳು ಕೆಲವು ಪುಣ್ಯವನ್ನು ಪಾಲಿಸುವವಾಗಿ, ಕೆಲವು ಪಾಪವನ್ನು ಪಾಲಿಸುವವಾಗಿ ಇರುವ ಮಾತು ವಾಸ್ತವ.

ಪಾಪವನ್ನು ಪರಿಪಾಲಿಸುವವರನ್ನು ಕ್ರೂರರು, ಪಾಪಿಗಳು, ಅಶುಭರು, ಶತ್ರುಗಳು ಎಂದು ಕರೆಯಬಹುದು. ಹಾಗೆಯೇ ಪುಣ್ಯವನ್ನು ಪರಿಪಾಲಿ ಸುವವರನ್ನು ಸೌಮ್ಯರು, ಪುಣ್ಯರು, ಶುಭರು, ಮಿತ್ರರು ಎಂದು ಕರೆಯಬಹುದು. ಗ್ರಹಗಳು ಎರಡು ಗುಂಪುಗಳಾಗಿ ಇರುವುದು ವಾಸ್ತವವೇ ಆದರೂ, ಒಂದು ಲಗ್ನ ಜಾತಕನಿಗೆ ಪಾಪವನ್ನು ಪಾಲಿಸುತ್ತಾ ಕ್ರೂರರಾಗಿ ಇದ್ದವರೇ ಮತ್ತೊಂದು ಲಗ್ನ ಜಾತಕನಿಗೆ ಪುಣ್ಯವನ್ನು ಪಾಲಿಸುವವರಾಗಿ ಸೌಮ್ಯರಾಗಿ ಇದ್ದಾರೆ. ಜಾಫತಕ ಲಗ್ನಗಳನ್ನನುಸರಿಸಿ ಕೆಲವರಿಗೆ ಶಾಶ್ವತವಾಗಿ ಕ್ರೂರರಾಗಿರುವ ಗ್ರಹಗಳು, ಮತ್ತೊಂದು ಜಾಫತಕ ಲಗ್ನವನ್ನನುಸರಿಸಿ ಇನ್ನು ಕೆಲವರಿಗೆ ಶಾಶ್ವತವಾಗಿ ಸೌಮ್ಯರಾಗಿ ಇದ್ದಾರೆ. ಆದ್ದರಿಂದ ಎಲ್ಲರಿಗೂ ಶಾಶ್ವತವಾಗಿ ಕ್ರೂರ ಗ್ರಹಗಳು ಇಲ್ಲ, ಹಾಗೇ ಸೌಮ್ಯ ಗ್ರಹಗಳು ಇಲ್ಲ. ಹಾಗೆ ಎಲ್ಲರಿಗೂ ಶಾಶ್ವತವಾಗಿ ಕೆಲವು ಗ್ರಹಗಳು ಕ್ರೂರರಾಗಿ ಇದ್ದಾರೆಂದರೇ, ಅದು ಶಾಸ್ತ್ರಬದ್ಧತೆ ಇಲ್ಲದಂತೆ ಇಷ್ಟ ಬಂದಹಾಗೆ ಹೇಳಿರುವುದಾಗುತ್ತದೆ. ಜ್ಯೋತಿಷ್ಯವು ಷಟ್‌ಶಾಸ್ತ್ರಗಳಲ್ಲಿ ಒಂದು ಶಾಸ್ತ್ರ ಆದ್ದರಿಂದ ಸೂತ್ರಬದ್ಧತೆ ಹೊಂದಿದೆ. 2:1 ಎನ್ನುವ ಸೂತ್ರದ ಪ್ರಕಾರ,

ಮಿತ್ರರು ಶತ್ರುಗಳು ಎನ್ನುವ ಎರಡು ವರ್ಗಗಳನ್ನು ವಿಭಜಿಸಿದ್ದೇವೆ. ಅದರ ಪ್ರಕಾರ ಒಬ್ಬನಿಗೆ ಮಿತ್ರರಾದ ಗ್ರಹಗಳು ಮತ್ತೊಬ್ಬನಿಗೆ ಶತ್ರುಗಳು ಆಗಬಹುದು. ಆರು ಲಗ್ನಗಳಿಗೆ ಶತ್ರುಗಳಾಗಿ, ಕ್ರೂರರಾಗಿ ವರ್ತಿಸುವ ಗ್ರಹಗಳು, ಮತ್ತೊಂದು ಆರು ಲಗ್ನಗಳಿಗೆ ಮಿತ್ರರಾಗಿ, ಸೌಮ್ಯರಾಗಿ ವರ್ತಿಸುತ್ತಿದ್ದಾರೆ. ಒಂದು ಶಾಸ್ತ್ರವನ್ನು ಅನುಸರಿಸಿ, ಅದರಲ್ಲಿಯೂ ಒಂದು ಸೂತ್ರವನ್ನು ಅನುಸರಿಸಿ ಯಾರು ಯಾರಿಗೆ ಸೌಮ್ಯರೋ, ಯಾರು ಯಾರಿಗೆ ಕ್ರೂರರೋ ನಾವು ವಿವರಿಸಿ ಹೇಳಿದ್ದೇವೆ. ಹಾಗಲ್ಲದೆ ಯಾವ ಲಗ್ನವನ್ನೂ ಆಧಾರ ಮಾಡಿಕೊಂಡು ನೋಡದೆ, ಯಾವ ಸೂತ್ರವನ್ನೂ ಅನುಸರಿಸದಂತೆ ರವಿ, ಶನಿ, ಕುಜ, ರಾಹು, ಕೇತುಗಳನ್ನು ಕ್ರೂರರೆನ್ನುವುದು, ಗುರು, ಬುಧ, ಶುಕ್ರ, ಚಂದ್ರರನ್ನು ಸೌಮ್ಯರು ಎನ್ನುವುದು ಪೂರ್ತಿ ಶಾಸ್ತ್ರವಿರುದ್ಧವೆಂದು ಹೇಳುತ್ತಿದ್ದೇವೆ. ಸಂಸ್ಕೃತದಲ್ಲಿ ಇಷ್ಟಬಂದ ಹಾಗೆ ಶ್ಲೋಕಗಳನ್ನು ಹೆಣೆದು ಹೇಳಿದಷ್ಟು ಮಾತ್ರಕ್ಕೆ ಅದರಲ್ಲಿ ಶಾಸ್ತ್ರೀಯತೆ ಇಲ್ಲದೆ ಹೋದರೇ ಅದು ವಾಸ್ತವವಲ್ಲ. ಇಲ್ಲೊಂದು ಉದಾಹರಣೆಯನ್ನು ನೋಡೋಣ.

**ಶ್ಲೋ ॥ ದುಃಖಾವಹಾ ಧನವಿಶಾಕರಾಃ ಪ್ರದಿಷ್ಟಾ ವಿತ್ತಸ್ಥಿತಾ ರವಿಶನ್ಯೈಶ್ಚರ ಭೂಮಿಪುತ್ರಾಃ**
**ಚಂದ್ರೋಬುದ್ಧಸ್ಸುರ ಗುರುರ್ಭೃಗುನಂದನೋವಾ, ಸರ್ವೇಧನಸ್ಯ ನಿಚಯುಲ ಕುರುದೇ ಧನಸ್ಥಾಃ**

**ತಾತ್ಪರ್ಯ :** ದ್ವಿತೀಯ ಸ್ಥಾನದಲ್ಲಿ ರವಿ, ಶನಿ, ಕುಜರಲ್ಲಿ ಯಾರಿದ್ದರೂ ಧನ ನಾಶನವನ್ನು, ಅಧಿಕ ದುಃಖವನ್ನುಂಟುಮಾಡಿ ಹಿಂಸಿಸುವರು. ಚಂದ್ರ, ಬುಧ, ಶುಕ್ರರಲ್ಲಿ ಯಾವ ಒಬ್ಬರಿದ್ದರೂ ಧನಲಾಭವನ್ನುಂಟುಮಾಡುವರು.

ಈ ಶ್ಲೋಕವೂ ಅದರ ತಾತ್ಪರ್ಯವೂ "ಯವನ ಜಾತಕ" ಎನ್ನುವ ಪುಸ್ತಕದಲ್ಲಿ ಬರೆಯಲ್ಪಟ್ಟಿದೆ. ಇದರಲ್ಲಿ ನಾವು ಕೇಳುವುದೇನೆಂದರೇ! ದ್ವಿತೀಯದಲ್ಲಿ ಕೆಟ್ಟ ಗ್ರಹಗಳಿದ್ದರೇ, ಧನನಾಶ ದುಃಖ ಉಂಟಾಗುತ್ತದೆನ್ನುವುದನ್ನು ಒಪ್ಪಿಕೊಳ್ಳುತ್ತೇನೆ. ಆದರೆ ಯಾವ ಲಗ್ನ ದ್ವಿತೀಯದಲ್ಲಿ ಇವರು ಹೇಳಿದ ಗ್ರಹಗಳು ಇದ್ದಾರೋ ಹೇಳದೆ ಹೋಗುವುದು, ಮತ್ತು ರವಿ, ಶನಿ, ಕುಜರು, ಯಾವ ಲಗ್ನಕ್ಕೆ ಕ್ರೂರರೋ,

ಹೇಗೆ ಕ್ರೂರರಾಗಿದ್ದಾರೋ ಹೇಳದೆ ಹೋಗುವುದು ಪೂರ್ತಿ ಅಶಾಸ್ತ್ರೀಯತೆ ಎಂದು ಹೇಳಬಹುದು. ನಾವು 2:1 ಎನ್ನುವ ಆತ್ಮಗಳ ಸೂತ್ರವನ್ನು ಅನುಸರಿಸಿ ಗ್ರಹಗಳನ್ನು ಎರಡು ಗುಂಪುಗಳಾಗಿ ಮಾಡಿದ್ದೇವೆ. ಅವುಗಳನ್ನೇ ಗುರುವರ್ಗ, ಶನಿವರ್ಗ ಎಂದು ಸಹ ಹೇಳಿದ್ದೇವೆ. ಶನಿ, ಬುಧ, ಶುಕ್ರ, ರಾಹುಗಳನ್ನು ಒಂದು ಗುಂಪಿನಲ್ಲಿ; ಸೂರ್ಯ, ಚಂದ್ರ, ಕುಜ, ಗುರು, ಕೇತುರನ್ನು ಒಂದು ಗುಂಪಿನಲ್ಲಿ ಇವೆಯೆಂದು ನಾವು ಹೇಳಿದರೆ ಜ್ಯೋತಿ ತಿಳಿಯದವರು ಎರಡು ಗುಂಪಿನವರನ್ನು ಬೆರೆಸಿಕೊಂಡು ಸೂರ್ಯ, ಕುಜ, ಶನಿ, ರಾಹು, ಕೇತುರನ್ನು ಕ್ರೂರರೆಂದಿದ್ದಾರೆ. ಇದರಲ್ಲಿ ನಮ್ಮ ಲೆಕ್ಕದ ಪ್ರಕಾರ ಸೂರ್ಯ, ಕುಜ, ಕೇತುಗಳು ಗುರುವರ್ಗದವರಾದಾಗ, ಈ ಮೂವರಲ್ಲಿ ಪ್ರತಿಪಕ್ಷ ಗುಂಪಿನಲ್ಲಿನ ರಾಹು, ಶನಿ ಬೆರೆತು ಹೋಗುವುದು ಪೂರ್ತಿ ತಪ್ಪು. ಅಷ್ಟೇ ಅಲ್ಲದೆ 1x7 ಎನ್ನುವ ಸೂತ್ರದ ಪ್ರಕಾರ ಸೂರ್ಯನಿಗೆ ಬದ್ಧ ಶತ್ರು ಶನಿ ಆಗುವನು. ಹಾಗೆಯೇ ಶನಿಗೆ ಬದ್ಧಶತ್ರು ಸೂರ್ಯನಾಗುವನು. ಅಂತಹವರು ಒಂದು ಗುಂಪಿನಲ್ಲಿ ಕ್ರೂರರಾಗಿ ಇದ್ದಾರೆಂದು ಹೇಳುವುದು ಅಸಂಬದ್ಧ, ಅಶಾಸ್ತ್ರೀಯ. ಆದ್ದರಿಂದ ಸಂಸ್ಕೃತ ಶ್ಲೋಕದಲ್ಲಿರುವ ತಪ್ಪು ಸಮಾಚಾರವನ್ನು ನಂಬಬೇಡಿ. ಇಂತಹ ಅಶಾಸ್ತ್ರೀಯತೆ ಜ್ಯೋತಿಷ್ಯದಲ್ಲಿ ಕಾಣಿಸುತ್ತಿದೆ. ಆದ್ದರಿಂದ ಇಂದಿನ ಹೇತುವಾದಿಗಳು, ನಾಸ್ತಿಕವಾದಿಗಳು ಜ್ಯೋತಿಷ್ಯವು ಶಾಸ್ತ್ರವಲ್ಲ ಎನ್ನುತ್ತಿದ್ದಾರೆ. ಟೀವಿ 9 ಅವರು ಜ್ಯೋತಿಷ್ಯ ಮೂಢನಂಬಿಕೆ ಎನ್ನುತ್ತಿದ್ದಾರೆ. ಆದ್ದರಿಂದ **ನಾವು ಪೂರ್ತಿ ಶಾಸ್ತ್ರೀಯತೆಯೊಂದಿಗೆ ಈ ಗ್ರಂಥವನ್ನು ಬರೆದು, ಜ್ಯೋತಿಷ್ಯಶಾಸ್ತ್ರ ಷಟ್‌ಶಾಸ್ತ್ರಗಳಲ್ಲಿ ಐದನೆ ಶಾಸ್ತ್ರವೆಂದು ಹೇಳುತ್ತಿದ್ದೇವೆ.**

**13) ಇಲ್ಲಿಯವರೆಗು ಹೇಳಿದ ಅತಿರಥರು, ಮಹಾರಥರು ಗ್ರಹಗಳು ಒಂಭತ್ತೇಯೆಂದು ಹೇಳಿದಾಗ, ಯಾರೂ ಹೇಳದ ಮೂರು ಗ್ರಹಗಳನ್ನು ನೀವು ಹೇಳಿದ್ದೀರ. ನೀವು ಎಲ್ಲೂ ಯಾರಿಗೂ ಜ್ಯೋತಿಷ್ಯ ಹೇಳಿರುವುದು ಸಹ ಇಲ್ಲ. ಭವಿಷ್ಯತ್ತು (ಜ್ಯೋತಿಷ್ಯ) ಹೇಳುವ ಅನುಭವವಾಗಲೀ, ಅಭ್ಯಾಸವಾಗಲೀ ಇಲ್ಲದ ನೀವು ಏಕಾಏಕಿ ದ್ವಾದಶ ಗ್ರಹಗಳನ್ನು ಪ್ರಕಟಿಸಿ, ಜ್ಯೋತಿಷ್ಯ ಗ್ರಂಥವನ್ನು**

**ಶಾಸ್ತ್ರಬದ್ಧವಾಗಿ, ಸೂತ್ರಯುಕ್ತವಾಗಿ ಬರೆಯುತ್ತಿದ್ದೇವೆನ್ನುತ್ತಿದ್ದೀರ. ಇದು ಸಂಭವವಾಗುತ್ತದಾ?**

**ಉ॥** ಇಲ್ಲಿಯವರೆಗು ಹೇಳಿದವರು ರಥರೋ, ಅತಿರಥರೋ, ಮಹಾ ರಥರೋ, ವೀರರೋ, ಶೂರರೋ ನನಗೆ ತಿಳಿಯದು. ಜ್ಯೋತಿಷ್ಯದಲ್ಲಿ ನಾನು ಮಾತ್ರ ಕೇವಲ ರಥನು ಕೂಡಾ ಅಲ್ಲ. ಹಾಗಿರುವಾಗ ನೀನು ಬರೆಯುವುದು ಸಕ್ರಮವೇನಾ ಎಂದು ನನ್ನನ್ನು ಕೇಳುವುದರಲ್ಲಿ ನಿಮ್ಮ ತಪ್ಪೇನೂ ಇಲ್ಲ. ನಿಮ್ಮ ಪ್ರಶ್ನೆಗೆ ನಾವು ಹೇಳುವ ಸಮಾಧಾನವೇನೆಂದರೆ! ನನಗೆ ಜ್ಯೋತಿಷ್ಯ ತಿಳಿದಿಲ್ಲ ಆದರೆ, ನನ್ನ ಶರೀರದಲ್ಲಿ ನನ್ನ ಪಕ್ಕದಲ್ಲೇ ಇರುವವನಿಗೆ, ಷಟ್‌ಶಾಸ್ತ್ರಗಳು ಸಂಪೂರ್ಣವಾಗಿ ತಿಳಿದಿವೆ. ಇಲ್ಲಿ ಒಂದು ಸೂತ್ರವನ್ನು ಉದಾಹರಣೆಯಾಗಿ ನೋಡಿದರೆ ಒಂದು ಕಬ್ಬಿಣದ ತುಣುಕು ಪಕ್ಕದಲ್ಲಿ ಅಯಸ್ಕಾಂತ ಇದ್ದರೂ, ಒಂದುವೇಳೆ ಅಯಸ್ಕಾಂತದ ಪಕ್ಕದಲ್ಲಿ ಕಬ್ಬಿಣದ ತುಣುಕು ಇದ್ದರೂ ಕಬ್ಬಿಣದ ಚೂರೇ ಅಯಸ್ಕಾಂತವಾಗಿ ಬದಲಾಗುತ್ತದೆ, ಆದರೆ ಅಯಸ್ಕಾಂತ ಕಬ್ಬಿಣದ ಚೂರಾಗಿ ಬದಲಾಗುವುದಿಲ್ಲ. ಹಾಗೆಯೇ ಒಬ್ಬ ತಿಳಿಯದವನ ಪಕ್ಕದಲ್ಲಿ ತಿಳಿದವನಿದ್ದರೂ, ಒಂದುವೇಳೇ ತಿಳಿದವನ ಪಕ್ಕದಲ್ಲಿ ತಿಳಿಯದವನಿದ್ದರೂ, ತಿಳಿಯುದವನೇ ತಿಳಿದವನಾಗಿ ಬದಲಾಗುವನು. ಆದರೆ ತಿಳಿದವನು ತಿಳಿಯದವನಾಗಿ ಬದಲಾಗುವುದಿಲ್ಲ. ಈ ಸೂತ್ರದ ಪ್ರಕಾರ, ನಾನು ಜ್ಯೋತಿಷ್ಯ ತಿಳಿಯದವನೇ, ಆದರೇ ಜ್ಯೋತಿಷ್ಯ ತಿಳಿದವನ ಪಕ್ಕದಲ್ಲಿ ಇದ್ದೇನೆ. ಆದ್ದರಿಂದ ಅಸಲಾದ ಜ್ಯೋತಿಷ್ಯವೇನೋ ನನಗೆ ತಿಳಿದಿದೆ. ಇಬ್ಬರೂ ಸೇರಿ ನಿಮಗೆ ಹೇಳುತ್ತಿದ್ದೇವೆ. ಈ ಸೂತ್ರದ ಪ್ರಕಾರವೇ ಸೈನ್ಸ್ ಅಭಿವೃದ್ಧಿಯಾಗದ ಪುರಾತನ ಕಾಲದಲ್ಲಿಯೇ, ಪಾಶ್ಚಾತ್ಯರು ಬಟ್ಟೆಗಳು ಸಹ ಧರಿಸದ ಅನಾಗರಿಕ ಕಾಲದಲ್ಲಿಯೇ, ಖಗೋಳ ಪರಿಶೋಧನೆಗಳು ಇಲ್ಲದ ಕಾಲದಲ್ಲಿಯೇ, ಯಾವ ವ್ಯೋಮನೌಕೆಗಳು ಆಕಾಶದೊಳಗೆ ಹೋಗದ ಕಾಲದಲ್ಲಿಯೇ, ಕೆಲವರು ಮಹರ್ಷಿಯರು ಒಂಭತ್ತು ಗ್ರಹಗಳನ್ನೂ, ಅವುಗಳ ವೇಗವನ್ನೂ, ಗ್ರಹಣಗಳನ್ನೂ ಕಂಡುಹಿಡಿದು ಹೇಳಿದ್ದಾರೆ. ತಮ್ಮ ಪಕ್ಕದವನನ್ನು ಗುರುತಿಸಿದವರು ಪಕ್ಕದವನು ಹೇಳಿದಂತೇ ಹೇಳಿದ್ದಾರೆ.

ಈದಿನ ಎಷ್ಟೋ ವ್ಯಯಪ್ರಯಾಸಗಳಿಂದ ಆಕಾಶದೊಳಕ್ಕೆ ಉಪಗ್ರಹವೆನ್ನುವ ರಾಕೆಟ್ ಕಳುಹಿಸಿ, ಕುಜಗ್ರಹ ಕೆಂಪಾಗಿ ಇದೆಯೆಂದು, ಈಗೀಗ ಖಗೋಳ ಶಾಸ್ತ್ರಜ್ಞರು ಹೇಳುತ್ತಿದ್ದಾರೆ. ಕುಜಗ್ರಹ ಕೆಂಪಗೆ ಇದೆಯೆಂದು ಕೆಲವು ಲಕ್ಷಗಳ ವರ್ಷಗಳ ಪೂರ್ವದಲ್ಲೇ ನಮ್ಮ ಮಹರ್ಷಿಗಳು ಹೇಳಿದ್ದಾರೆ. ಯಾವ ಶಾಸ್ತ್ರವೂ ಅಭಿವೃದ್ಧಿಯಾಗದ ಆ ಕಾಲದಲ್ಲಿಯೇ, ಅವರು ಚಂದ್ರನು ಬಿಳಿಯ ಸವುಳು ಭೂಮಿಯೆಂದು ಸಹ ಹೇಳಿದ್ದಾರೆ. ಅವರು ಆ ದಿನಗಳಲ್ಲಿ ಅವರ ಪಕ್ಕದವನನ್ನು ಗುರುತಿಸಿ, ಅವನು ಹೇಳಿದಂತೆ ಹೇಳಿದ್ದಾರೆ ಹೊರತು, ಅವರು ಚಂದ್ರನ ಮೇಲಕ್ಕೆ, ಕುಜನ ಮೇಲಕ್ಕೆ ಹೋಗಿ ನೋಡಲಿಲ್ಲ. ಹಾಗೆಯೇ ಅವರು ಹೇಳಿದ ಪದ್ಧತಿ ಯಾವುದೋ, ಅದರ ಪ್ರಕಾರ ನನ್ನ ಶರೀರದಲ್ಲಿ, ನನ್ನ ಪಕ್ಕದಲ್ಲೇ ಇರುವ ಅವನ ಸಹಕಾರದಿಂದಲೇ, ಈ ದಿನ ನಾನು ಗ್ರಹಗಳು ಒಂಭತ್ತು ಅಲ್ಲ ಒಟ್ಟು ಹನ್ನೆರಡೆಂದು ಹೇಳುತ್ತಿದ್ದೇನೆ. ಅರ್ಥವಾಗಿದೆಯಾ, ಇನ್ನೂ ಏನಾದರೂ ಅನುಮಾನವಿದೆಯಾ? ಪಕ್ಕದವನು ನಿಮ್ಮಲ್ಲಿಯೂ ಸಹ ಇದ್ದಾನೆ, ಆದರೆ ನಿಮ್ಮಲ್ಲಿ ನೀವು ಹೊರತುಪಡಿಸಿ ಯಾರೂ ಇಲ್ಲವೆನ್ನುವ ಅಂಧಕಾರದಲ್ಲಿ ಇದ್ದೀರ. ಆದ್ದರಿಂದ ಪಕ್ಕದವನನ್ನು ವಿಸ್ಮರಿಸಿಹೋಗಿದ್ದೀರ. ಅವನನ್ನು ತಿಳಿಯಬೇಕೆಂದರೆ 'ಜ್ಞಾನಾಂಜನ' ಎನ್ನುವ ಕಾಡಿಗೆ(ಕಣ್ಣುಕಪ್ಪು) ಬೇಕು. ಕಾಡಿಗೆಯಿಂದಲೇ ಕುರುಡುತನ ಹೋಗಿ ಆತನು ಕಾಣಿಸುತ್ತಾನೆ. ಜ್ಞಾನಾಂಜನ ಬೇಕೆಂದರೇ ಷಟ್‌ಶಾಸ್ತ್ರಗಳಲ್ಲಿ ಕೊನೆಯ ಆರನೆ ಶಾಸ್ತ್ರವಾದ ಬ್ರಹ್ಮವಿದ್ಯಾಶಾಸ್ತ್ರವನ್ನು ತಿಳಿಯಲೇಬೇಕು. ಅದೆಲ್ಲಿದೆಯೋ ನಮಗೆ ತಿಳಿದಿಲ್ಲವೇ ಎಂದುಕೊಳ್ಳಬೇಡಿ. ಅದೇ ಭಗವದ್ಗೀತೆ. ಚೂಟಿಯಾಗಿ ಹೇಳಬೇಕೆಂದರೇ ಅದೇ **"ತ್ರೈತಸಿದ್ಧಾಂತ ಭಗವದ್ಗೀತೆ"**. ಅದನ್ನು ಓದಿದರೇ ನಿಮ್ಮಲ್ಲಿಯೇ ನಿಮ್ಮ ಪಕ್ಕದಲ್ಲಿಯೇ ಇರುವವನು ತಿಳಿಯುವನು. ಅವನನ್ನು ತಿಳಿದುಕೊಂಡರೇ ಅವನಿಂದ ಯಾವ ರಹಸ್ಯವಾದರೂ ತಿಳಿದುಕೊಳ್ಳಬಹುದು.

**14) ಒಬ್ಬ ವ್ಯಕ್ತಿ ವ್ಯವಸಾಯಕ್ಕೋಸ್ಕರ ಬಾವಿಯನ್ನು ತೋಡಿದರೆ ನೀರು ಬರಲಿಲ್ಲ. ಬೋರು ಹಾಕಿದರೆ ನೀರು ಬಿದ್ದಿವೆ ಆದರೆ ಬೋರು ಹೂತು ಹೋಗುತ್ತಿದೆ**

**ಅದರಿಂದ ನೀರು ಬರಲಿಲ್ಲ. ಎರಡು ಕಡೆ ಬೋರು ಹಾಕಿದರೂ ಹಾಗೇ ಆಗಿದೆ. ಆತನಿಗೆ ನೀರು ಅನುಕೂಲ ಇಲ್ಲವಾ?**

**ಉ॥** ನೀರಾಗಲೀ, ಅಗ್ನಿಯಾಗಲೀ, ಪ್ರಪಂಚದಲ್ಲಿ ಯಾವ ವಸ್ತುವಾಗಲೀ, ಎಲ್ಲವೂ ಗ್ರಹಗಳ ಅಧೀನದಲ್ಲಿ ಇರುತ್ತವೆ. ಯಾರಿಗೂ ನೀರಿನ ಅನುಕೂಲ ಅನಾನುಕೂಲ ಇಲ್ಲ ಎನ್ನುವುದು ಸರಿಯಾದುದಲ್ಲ. ಏಕೆಂದರೆ ನೀರು ಚಂದ್ರಗ್ರಹವೊಂದರ ಅಧೀನದಲ್ಲಿ ಇರುತ್ತವೆ. ಚಂದ್ರಗ್ರಹ ಅನುಕೂಲವಿದ್ದರೇ ನೀರು ಅನುಕೂಲವಾಗುತ್ತದೆ. ಚಂದ್ರನು ಅನುಕೂಲ ಇಲ್ಲದೇ ಹೋದರೇ ನೀರಿನ ಅನುಕೂಲ ಇರುವುದಿಲ್ಲ. ಯಾವ ವಸ್ತುವಿಗಾದರೂ ಆ ವಸ್ತುವಿನವೊಂದು ಅಧಿಪತಿ ಗ್ರಹ ಯಾರೋ ಆ ಗ್ರಹ ಅನುಕೂಲ ಅನಾನುಕೂಲದ ಮೇಲೆ ಆಧಾರಪಟ್ಟು ಆ ವಸ್ತು ಲಭಿಸುವುದು, ಲಭಿಸದಿರುವುದು ತಿಳಿಯುತ್ತದೆ. ಲಭಿಸಿದರೂ ಒಳ್ಳೆಯದು ಲಭಿಸುತ್ತದಾ ಇಲ್ಲವಾ ಎನ್ನುವ ವಿಷಯ ಕೂಡಾ ಆ ಗ್ರಹವನ್ನನುಸರಿಸಿ ಮತ್ತು ಆ ಗ್ರಹದೊಂದಿಗೆ ಬೆರೆತ ಉಳಿದ ಗ್ರಹಗಳನ್ನನುಸರಿಸಿ, ಆ ವಸ್ತುವಿರುವ ರಾಶಿ ಸ್ಥಾನವನ್ನನುಸರಿಸಿ ವಸ್ತು ಲಭ್ಯವಾಗುತ್ತದಾ ಇಲ್ಲವಾಯೆಂದು ಲಭ್ಯವಾದರೂ ಎಂತಾದ್ದು ಲಭ್ಯವಾಗುತ್ತದೆಂದು ತಿಳಿಯಬಲ್ಲದು. ಚಂದ್ರನು ಅನುಕೂಲವಿದ್ದಂತಾದರೇ ಬಾವಿಯನ್ನು ತೋಡಿದರೂ, ಬೋರು ಹಾಕಿದರೂ ನೀರು ಸುಲಭವಾಗಿ ಲಭ್ಯವಾಗುತ್ತದೆ. ಒಂದು ವೇಳೆ ಚಂದ್ರನು ಶತ್ರು ಗ್ರಹವಾದರೇ ನೀರು ಬೀಳುವುದಿಲ್ಲ. ಚಂದ್ರನು ಶತ್ರುಗ್ರಹವಾಗಿ ನಾಲ್ಕನೆ ಸ್ಥಾನವನ್ನು ತಾಕಿದಾಗ ಅಥವಾ ನಾಲ್ಕನೆ ಸ್ಥಾನದಲ್ಲೇ ಇರುವಾಗ ಆತನ ನಿವಾಸ ಗೃಹದಲ್ಲಿ ಕೂಡಾ ನೀರು ಅನುಕೂಲವಾಗಿ ಇರುವುದಿಲ್ಲ. ಮಳೆ ಬಂದರೆ ಯಾವುದೋ ಒಂದು ವಿಧವಾಗಿ ನೀರು ಮನೆಯೊಳಗೆ ಬರುತ್ತವೆ. ಎಷ್ಟು ಒಳ್ಳೆಯ ಮನೆಯಾದರೂ ಚಂದ್ರನು ಸರಿಯಾಗಿ ಇಲ್ಲದೆ ಹೋದರೇ ಆ ಮನೆ ನೀರು ಸೋರುವ ಮನೆಯಾಗಿ ಇರುತ್ತದೆ. ಅದೆಲ್ಲಾ ಚೆನ್ನಾಗಿದೆಯೆಂದರೆ ಬಾತ್‌ರೂಮ್‌ನಲ್ಲಿ ನೀರು ಬರದಂತೆ ಹೋಗುವುದೋ ಅಥವಾ ಕೊಳೆನೀರು ಹೊರಗೆ ಹೋಗದಂತೆ ಇರುವುದೋ ನಡೆಯುತ್ತದೆ. ಒಂದನ್ನು ಸರಿಮಾಡಿದರೇ

ನೀರನ್ನು ಕುರಿತಾದ ಹೊಸ ಸಮಸ್ಯೆಗಳು ಬರುತ್ತಲೇ ಇರುತ್ತವೆ. ಒಳ್ಳೆಯ ನೀರಿನಲ್ಲಿ ಉಪ್ಪುನೀರು ಮಿಶ್ರಮವಾಗಿ ಕೂಡ ಬರುತ್ತವೆ. ಹಾಗೇ ಬೋರಿನ ನೀರಿನೊಳಗೆ ಕೊಳೆ ನೀರು ಸೇರಿ ಅದೇ ನೀರು ಬರಬಹುದು. ಹೀಗೆ ಅನೇಕ ನೀರಿನ ಸಮಸ್ಯೆಗಳು ಬರಬಲ್ಲವು.

**15) ಕೆಲವು ಮಂದಿ ತಮ್ಮ ಹೊಲದ ಹತ್ತಿರ ದಾರಿ ಸರಿಯಾಗಿ ಇಲ್ಲದೆ ತೊಂದರೆ ಪಡುತ್ತಿರುವರು. ಹಾಗೇ ಕೆಲವು ಮಂದಿ ತಮ್ಮ ಮನೆಯ ಹತ್ತಿರ ದಾರಿ ಇಲ್ಲದೆ ತೊಂದರೆ ಪಡುತ್ತಿರುವರು. ಆ ರೀತಿ ಯಾಕೆ ನಡೆಯುತ್ತಿರುತ್ತದೆ?**

**ಉ॥** ಪ್ರಪಂಚದಲ್ಲಿ ಪ್ರತಿಯೊಂದಕ್ಕೂ ಗ್ರಹಗಳೇ ಅಧಿಪತಿಗಳು. ಹಾಗೆಂದು ಗ್ರಹಗಳನ್ನು ದೇವರುಗಳೆಂದುಕೊಳ್ಳಬಾರದು. ಸರ್ಕಾರದಿಂದ ಬರಪರಿಹಾರ ಸಹಾಯ ಬಂದಾಗ ಮೊದಲು ಆ ಹಣ ಜಿಲ್ಲಾ ಕಲೆಕ್ಟರ್ ಹತ್ತಿರಕ್ಕೆ ಬಂದು, ಕಲೆಕ್ಟರ್‌ನಿಂದ ಮಂಡಲ ಆಫೀಸರ್ ಹತ್ತಿರಕ್ಕೆ ಬಂದು ಕೊನೆಗೆ ಬ್ಯಾಂಕ್ ಕ್ಯಾಷಿಯರ್ ಮೂಲಕ ನಿನಗೆ ಬಂದಿದೆಯೆಂದುಕೊಳ್ಳೋಣ. ಪ್ರತಿ ಸಹಾಯ ಎಲ್ಲಿಂದ ಹಣ ಬಂದರೂ ಬ್ಯಾಂಕ್ ಕ್ಯಾಷಿಯರ್‌ನಿಂದಲೇ ತೆಗೆದುಕೊಳ್ಳಬೇಕಾಗಿದೆ. ಹಾಗೆಂದು ಕ್ಯಾಷಿಯರನ್ನೇ ಸರ್ಕಾರ ಎಂದುಕೊಳ್ಳಬಾರದು. ಹಾಗೆಯೇ ಗ್ರಹಗಳು ಕೂಡಾ ಇರುವ ಕರ್ಮವನ್ನು ಕೊಡುವ ಕ್ಯಾಷಿಯರ್‌ನಂತಹವು. ಮನುಷ್ಯನಿಗೆ ಸೃಷ್ಠಿಯಿಂದ ಏನು ಲಭಿಸಿದರೂ ಗ್ರಹಗಳ ಮೂಲಕವೇ ಲಭಿಸಬೇಕು. ಗ್ರಹ ಗಳೆಲ್ಲವೂ ಪ್ರಕೃತಿ ಅಧೀನದಲ್ಲಿ ಇರುವಾಗ, ಪ್ರಕೃತಿ ಪರಮಾತ್ಮ ಅಧೀನದಲ್ಲಿ ಇದೆ. ಕೊನೆಗೆ ಎಲ್ಲದಕ್ಕೂ ದೊಡ್ಡವ ದೇವರೇ. ಈಗ ಅಸಲು ವಿಷಯಕ್ಕೆ ಬಂದರೆ ಭೂಮಿಮೇಲೆ ದಾರಿಗಳೆಲ್ಲವೂ ಕುಜಗ್ರಹ ಅಧೀನದಲ್ಲಿ ಇರುತ್ತವೆ. ಜಾತಕದಲ್ಲಿ ಕುಜಗ್ರಹ ವಿರೋಧಿಯಾಗಿ ನಾಲ್ಕನೆ ಸ್ಥಾನದಲ್ಲಿದ್ದರೂ, ನಾಲ್ಕನೆ ಸ್ಥಾನವನ್ನು ತನ್ನ ಕೈಯ್ಯಿಂದ ತಾಕಿದರೂ, ಹೊಲಗಳು ಗೃಹಗಳ ದಾರಿಗಳಲ್ಲಿ ಆತಂಕಗಳು ಏರ್ಪಡುತ್ತವೆ. ಮಾತುಮಾತಿಗೂ ದಾರಿಗಳಿಗೆ ಸಂಬಂಧಿಸಿರುವ ಸಮಸ್ಯೆಗಳು ಬರುತ್ತಿರುತ್ತವೆ. ಕುಜನು ದಕ್ಷಿಣ ದಿಕ್ಕಿಗೆ ಅಧಿಪತಿಯಾಗಿರುವುದರಿಂದ ದಕ್ಷಿಣ ದಿಕ್ಕಿಗಿರುವ ದಾರಿಗಳಲ್ಲಿಯೇ ಹೆಚ್ಚಿನ ಸಮಸ್ಯೆಗಳು ಬರುತ್ತವೆ. ದಾರಿಗಳೇ

ಅಲ್ಲದೆ ಮನೆಗಳು ಕೂಡಾ ದಕ್ಷಿಣದ ಕಡೆ ಬಾಗುವುದೋ ಅಥವಾ ದಕ್ಷಿಣದ ಕಡೆ ಗೋಡೆಗಳು ಸೀಳಿ ಹೋಗುವುದೋ ನಡೆಯುತ್ತಿರುತ್ತದೆ. ಇಂತಹ ಕುಜ ದೋಷಗಳಿಗೆ ಯಾವ ಗೃಹಶಾಂತಿಗಳಾಗಲಿ, ಅಷ್ಟ ದಿಗ್ಬಂಧನ ಯಂತ್ರಗಳಾಗಲೀ, ಯಾವ ವಿಧವಾದ ಉಪಶಮನ ಮಾರ್ಗಗಳೂ ಕೆಲಸಕ್ಕೆ ಬರುವುದಿಲ್ಲ.

**16) ಕೆಲವರು ಎಷ್ಟು ಸಂಪಾದಿಸಿದರೂ ಕೊನೆಗೆ ಹಣದಿಂದ ತೊಂದರೆಗಳನ್ನು ಅನುಭವಿಸುತ್ತಿರುವರು. ಯಾವಾಗಲೂ ಸಾಲಗಳಲ್ಲಿ ಸಿಲುಕಿಕೊಂಡಿರುತ್ತಾರೆ. ಹಾಗೆ ಏಕೆ ನಡೆಯುತ್ತಿದೆ.?**

ಉ॥ "ಧನಮೂಲ ಮಿದಮ್ ಜಗತ್" ಎಂದು ಕೆಲವರೆನ್ನುತ್ತಿರುವರು. ಪ್ರತಿಯೊಂದಕ್ಕೂ ಧನವೇ ಮೂಲವಾದುದಾಗಿ ಕಾಣಿಸುತ್ತಿದ್ದರೂ, ಧನಕ್ಕೆ ಮೂಲ ಶುಕ್ರಗ್ರಹ ಮತ್ತು ಗುರುಗ್ರಹವೆಂದು ಹೇಳಬಹುದು. ಗುರು ಗ್ರಹ ಹಣವನ್ನು ನೆಲೆ ಇರಿಸಿ ಧನಿಕನನ್ನಾಗಿ ಮಾಡುತ್ತದೆ. ಶುಕ್ರಗ್ರಹವಾದರೆ ಹಣವನ್ನು ನೆಲೆ ಇರಿಸದೆ ಪ್ರವಾಹದಂತೆ ಕದಲಿಸುತ್ತಾ ಹಣದ ಮೂಲಕ ಎಲ್ಲ ಸುಖಗಳನ್ನು ಅನುಭವಿಸುವಂತೆ ಮಾಡುವುದು. ಆದ್ದರಿಂದ ಕದಲುವ ಹಣಕ್ಕೆ ಶುಕ್ರಗ್ರಹ, ಕದಲದ ಹಣಕ್ಕೆ ಗುರುಗ್ರಹ ಅಧಿಪತಿಗಳಾಗಿದ್ದಾರೆ. ಈ ಎರಡು ಗ್ರಹಗಳು ಅವರ ಜಾತಕದಲ್ಲಿ ವಿರುದ್ಧ ಸ್ಥಾನಗಳಲ್ಲಿದ್ದರೂ, ವಿರುದ್ಧ ಗ್ರಹಗಳೊಂದಿಗೆ ಬೆರೆತರೂ ಹಣ ಬರುತ್ತಿದ್ದರೂ ಅದು ತಮ್ಮ ಹತ್ತಿರ ನಿಲ್ಲದೆ ಅವಶ್ಯಗಳಿಗೆ ಕಡಿಮೆ ಬರುತ್ತಾ ತೊಂದರೆಗಳು ಬೀಳಬೇಕಾಗಿರುತ್ತದೆ. ಗುರು, ಶುಕ್ರರು ಜಾತಕನಿಗೆ ಅನುಕೂಲವಾಗಿದ್ದರೂ ಅಂತಹವರು ಹಣದಿಂದ ಯಾವ ತೊಂದರೆಗಳು ಇಲ್ಲದಂತೆ ಬದುಕುತ್ತಿರುವರು.

**17) ಕೆಲವರು ಬಡವರಾದರೂ ಅವರಿಗೆ ಸ್ವಂತ ಮನೆ ಇರುತ್ತದೆ. ಕೆಲವರು ಧನಿಕರಾದವರಿಗೆ ಸ್ವಂತ ಮನೆ ಇರುವುದಿಲ್ಲ. ಅದಕ್ಕೆ ಕಾರಣವೇನು ಇರಬಹುದು.**

**ಉ॥** ಸ್ವಂತ ಮನೆಯಾಗಲೀ, ಸ್ವಂತ ಭೂಮಿಗಳಾಗಲೀ ಎಲ್ಲವೂ ಸ್ಥಿರಾಸ್ಥಿಗಳು ಎನ್ನಲ್ಪಡುತ್ತವೆ. ಸ್ಥಿರಾಸ್ಥಿಗಳಿಗೆ ಸ್ಥಾನ ಜನ್ಮ ಕುಂಡಲಿಯಲ್ಲಿ ನಾಲ್ಕನೆ ಸ್ಥಾನ.

ಅಲ್ಲಿ ಒಂದು ಶುಭಗ್ರಹವಿದ್ದಂತಾದರೆ ಆತನಿಗೆ ಸ್ವಂತ ಮನೆ ಮುಂತಾದ ಸ್ಥಿರಾಸ್ಥಿಗಳು ಉಂಟಾಗುತ್ತವೆ. ಅಲ್ಲಿ ಅಶುಭಗ್ರಹವಿದ್ದಂತಾದರೆ ಸ್ವಂತ ಸ್ಥಿರಾಸ್ಥಿಗಳು ಯಾವುವೂ ಇರುವುದಿಲ್ಲ. ಜಾತಕದಲ್ಲಿ ನಾಲ್ಕನೆ ಸ್ಥಾನದಲ್ಲಿ ಒಂದು ಒಳ್ಳೆಯ ಗ್ರಹವಿದ್ದರೂ ಅಥವಾ ತಾಕಿದರೂ ಆತನಿಗೆ ಸ್ವಂತ ಗೃಹವಿರುತ್ತದೆ. ಹಾಗೆ ಗ್ರಹಚಾರ ಒಳ್ಳೆಯದಾಗಿ ಇಲ್ಲದವರಿಗೆ ಸ್ವಗೃಹ ಇರುವುದಿಲ್ಲ.

**18) ನೀವು ಮೂರು ಹೊಸ ಗ್ರಹಗಳನ್ನು ಕುರಿತು ಹೇಳಿದ್ದೀರ. ಅವುಗಳ ಪ್ರಭಾವ ಎಲ್ಲರ ಮೇಲೂ ಇರುತ್ತದಾ? ಇಲ್ಲವೆ ಕೆಲವರ ಮೇಲೆಯೇ ಇರುತ್ತದಾ?**

ಉ॥ ಎಲ್ಲರ ಮೇಲೂ ಸಮಾನವಾಗಿ ಅವುಗಳ ಪ್ರಭಾವವಿರುತ್ತದೆ. ಕೆಲವರ ಮೇಲೆ ಅವುಗಳ ಪ್ರಭಾವವಿದ್ದು ಕೆಲವರ ಮೇಲೆ ಇರುವುದಿಲ್ಲವೆನ್ನುವುದಕ್ಕೆ ಅವಕಾಶವೇ ಇಲ್ಲ. ಇಲ್ಲಿಯವರೆಗು ಯಾವ ಗ್ರಹವೂ ಹಾಗೆ ಇರಲಿಲ್ಲ. ಎಲ್ಲ ಗ್ರಹಗಳು ಎಲ್ಲರಿಗೂ ಸಮಾನವಾಗಿ ಇವೆ.

**19) ಹೊಸ ಗ್ರಹಗಳನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರಾ? ನಿಮ್ಮ ಮಾತು ಸತ್ಯವೆಂದು ನಂಬುತ್ತಾರಾ?**

ಉ॥ ಒಪ್ಪಿಕೊಳ್ಳುವುದೂ, ಒಪ್ಪಿಕೊಳ್ಳದೆ ಹೋಗುವುದೂ ನನಗೆ ಸಂಬಂಧವಿಲ್ಲ. ನನ್ನ ಮಾತು ಸತ್ಯವೆಂದು ಸಹ ನಾನು ಹೇಳುವುದಿಲ್ಲ. ದೇವರು ಹೇಳಿದ ಜ್ಞಾನವನ್ನೇ ಕೆಲವರು ಒಪ್ಪಿಕೊಳ್ಳುತ್ತಿದ್ದಾರೆ. ಕೆಲವರು ಒಪ್ಪಿಕೊಳ್ಳುತ್ತಿಲ್ಲ. ಹಾಗಿರುವಾಗ ದೇವರ ಜ್ಞಾನವನ್ನೇ ಒಪ್ಪಿಕೊಳ್ಳದವರಿರುವಾಗ, ನನ್ನ ಜ್ಞಾನವನ್ನಾಗಲೀ, ನನ್ನ ಸೂತ್ರಗಳನ್ನಾಗಲೀ ಒಪ್ಪಿಕೊಳ್ಳಿರೆಂದು ನಾನು ಹೇಳುತ್ತಿಲ್ಲ. ತಿಳಿದುಕೊಳ್ಳಿರೆಂದು, ಆಲೋಚಿಸಿರೆಂದು ಮಾತ್ರವೇ ಹೇಳುತ್ತಿದ್ದೇವೆ.

**20) ಹದಿನೈದು ದಿನಗಳ ಕೆಳಗೆ ಹೈದರಾಬಾದ್ ಹೈವೇ ಮೇಲೆ ಬಸ್ಸು ಬೆಂಕಿ ಹೊತ್ತಿಕೊಂಡು ಸುಟ್ಟುಹೋಗಿದೆ. ಅದರಲ್ಲಿ 44 ಮಂದಿ ಮರಣಿಸುವುದು ನಡೆದಿದೆ. ಡ್ರೈವರ್ ಕ್ಲೀನರ್ ಹೊರತುಪಡಿಸಿ ಅವರೊಂದಿಗೆ ತಪ್ಪಿಸಿಕೊಂಡ ಇಬ್ಬರಿಗೂ ಕೂಡಾ ಸ್ವಲ್ಪ ಸುಡುವುದು ನಡೆದಿದೆ. ಬೆಳಗಿನ ಜಾವ ಐದು ಗಂಟೆಗಳ ಸಮಯದಲ್ಲಿ**

**ಹೋಗುತ್ತಿರುವ ಬಸ್ಸಿಗೆ ಸ್ವಲ್ಪ ಪ್ರಮಾದ ನಡೆದು ಅಷ್ಟು ಮಂದಿ ಮರಣಿಸುವುದು ನಡೆದಿದೆ ಅಲ್ಲವೆ! ಅಲ್ಲಿ ಮರಣಿಸಿದವರ ಗ್ರಹಚಾರಗಳನ್ನು ನೋಡಿದರೇ ಒಬ್ಬೊಬ್ಬರಿಗೆ ಒಂದೊಂದು ವಿಧವಾಗಿರುತ್ತವೆ. ಹಾಗಿರುವಾಗ, ಎಲ್ಲರಿಗೂ ಕರ್ಮ ಒಂದೇ ವಿಧವಾಗಿ ಇಲ್ಲವೆಂದು ತಿಳಿಯುತ್ತಿದೆ. ಎಲ್ಲರ ಕರ್ಮ ಒಂದೇ ವಿಧವಾಗಿ ಅವರ ಜಾತಕಗಳಲ್ಲಿ ಇಲ್ಲದಿದ್ದರೂ ಎಲ್ಲರೂ ಒಂದೇ ಕಡೆ ಬಸ್ಸಿನಲ್ಲೇ ಹೊರಬೀಳದಂತೆ ಮರಣಿಸುವುದಕ್ಕೆ ಕಾರಣವೇನು? ನಾವು ಈ ವಿಧವಾಗಿಯೇ ಪ್ರಶ್ನಿಸಿದರೇ ಬಹಳ ಜನ ಜ್ಯೋತಿಷ್ಯರು ಸರಿಯಾದ ಉತ್ತರ ಹೇಳಲಿಲ್ಲ. ನೀವು ನಮ್ಮ ಪ್ರಶ್ನೆಗೆ ಸರಿಯಾದ ಉತ್ತರ ಹೇಳಬಲ್ಲಿರಾ?**

**ಉ॥** ಕೊನೆಯಲ್ಲಿ ನಮ್ಮ ಪ್ರಶ್ನೆಗೆ ನೀವು ಉತ್ತರ ಹೇಳಬಲ್ಲಿರಾ? ಎಂದು ಕೇಳಿದ್ದೀರ. ಅವರು ಮರಣಿಸಿರುವುದಕ್ಕೆ ಉತ್ತರ ಹೇಳಬೇಕಾ? ಅಥವಾ ನೀವು ಹೇಳಬಲ್ಲಿರಾ ಹೇಳಲಾರೆರಾ ಎನ್ನುವ ಪ್ರಶ್ನೆಗೆ ಉತ್ತರ ಹೇಳಬೇಕಾ? ಯಾವುದಕ್ಕೆ ಉತ್ತರ ಬೇಕೋ ಮೊದಲು ನೀವು ಹೇಳಿದರೆ ನಂತರ ನಾನು ಹೇಳಬಲ್ಲೆನೋ ಇಲ್ಲವೋ ಹೇಳುತ್ತೇನೆ.

**21) ನಾವು ಕೊನೆಯದಾಗಿ ಕೇಳಿದ ಮಾತಿಗೆ ನೀವು ಹೇಳಬಲ್ಲಿರಾ ಎನ್ನುವ ಮಾತಿಗೇ ಉತ್ತರ ಹೇಳಿರಿ?**

**ಉ॥** ನೀವು ಮೀನು ಮಾರುವವನ ಹತ್ತಿರಕ್ಕೆ ಹೋಗಿ “ನೀನು ನನಗೆ ಬೇಕಾಗಿರುವ ಮೀನನ್ನು ಮಾರುತ್ತೀಯಾ” ಎಂದು ಕೇಳಿದಂತಿದೆ. ಮೀನು ಮಾರುವವನ ಹತ್ತಿರ ಎಲ್ಲಾ ವಿಧಗಳ ಮೀನುಗಳೂ ಇರುತ್ತವೆ. ಮೊದಲು ನಿನಗೆ ಬೇಕಾದ ಮೀನು ಯಾವುದೋ ಕೇಳಿದರೇ ಬಹುಶಃ ಇದ್ದರೆ ಕೊಡುತ್ತೇವೆ, ಇಲ್ಲದಿದ್ದರೆ ಇಲ್ಲ ಎಂದು ಹೇಳುತ್ತಾರೆ. ಹಾಗಲ್ಲದೆ ಮೊದಲೇ ನನಗೆ ಬೇಕಾದ ಮೀನು ಎಂದರೇ ಪುನಃ ನಾನು ಯಾವ ಮೀನು ಎಂದು ಕೇಳುವುದು ನಂತರ ನೀನು ಹೇಳುವುದು ಅದಕ್ಕೆ ಬದುಲು ಆಗ ನಾನು ಹೇಳುವುದು ನಡೆಯಬೇಕು. ಅಷ್ಟು ರಾದ್ಧಾಂತವಿಲ್ಲದಂತೆ ನಿನಗೆ ಬೇಕಾದ ಸಿದ್ಧಾಂತ ಮೀನು

ಯಾವುದೋ ಹೇಳಿದರೆ ನನ್ನ ಹತ್ತಿರ ಬರೀ ಮೀನುಗಳಿವೆಯೋ, ಸಿದ್ಧಾಂತ ಮೀನುಗಳಿವೆಯೋ ನನಗೂ ಸಹ ತಿಳಿದುಹೋಗುತ್ತದೆ ಅಲ್ಲವೆ! ಈಗ ನೀವು ಕೇಳಿದ ಪ್ರಶ್ನೆ ಸೂತ್ರಬದ್ಧವಾದುದು. ಅದಕ್ಕೆ ನನ್ನ ಹತ್ತಿರ ಇರುವವೆಲ್ಲಾ ಸಿದ್ಧಾಂತಬದ್ಧವಾದವುಗಳು, ಸೂತ್ರಬದ್ಧವಾದವುಗಳು ಆದ್ದರಿಂದ ನಾವು ಸುಲಭವಾಗಿ ಹೇಳಬಲ್ಲೆವು. ಅದೇ ಪ್ರಶ್ನೆಯನ್ನೇ ಮತ್ತೊಂದು ಬಾರಿ ಚಿಕ್ಕ ಚಿಕ್ಕ ಪ್ರಶ್ನೆಗಳಾಗಿ ಕೇಳು.

**22) ಒಂದೇ ಸಮಯದಲ್ಲಿ, ಒಂದೇ ವಿಧ ಕರ್ಮ ಇಲ್ಲದವರಿಗೆ, ಬೇರೆ ಬೇರೆ ಕರ್ಮಗಳಿರುವವರಿಗೆ ಒಂದೇ ಪ್ರಮಾದ ನಡೆಯುತ್ತದಾ?**

**ಉ॥** ಈಗ ನನ್ನದು ಉತ್ತರವಲ್ಲ ಪ್ರಶ್ನೆ. ಒಂದೇ ಕರ್ಮಯೆಂದಾಗಲೀ, ಬೇರೆ ಬೇರೆ ಕರ್ಮಗಳೆಂದಾಗಲೀ ಅನ್ನುವುದಕ್ಕೆ ಕರ್ಮಗಳೇನಾದರೂ ಕಾಣಿಸುತ್ತವಾ? ಕಾಣಿಸದಿರುವವನ್ನು ನೀವು ಹೇಗೆ ನಿರ್ಧಾರ ಮಾಡಿ ಹೇಳುತ್ತಿದ್ದೀರ? ಇದು ನನ್ನ ಪರವಾಗಿ ಪ್ರಶ್ನೆಯಾದರೂ ಇದಕ್ಕೆ ನೀವು ಉತ್ತರ ಹೇಳಲಾರಿರಿ. ಏಕೆಂದರೆ ಕರ್ಮಗಳು ಯಾರಿಗೂ ಕಾಣಿಸುವುದಿಲ್ಲ. ಕಾಣಿಸದ ಕರ್ಮಗಳನ್ನು ಕುರಿತು ಅಪೋಹ ಪಡುವುದಕ್ಕಿಂತ ಕರ್ಮಗಳನ್ನು ಮೀರಿರುವುದು, ಕರ್ಮಗಳನ್ನು ನೋಡುವಂಥಾದ್ದು ಮತ್ತೊಂದು ಇದೆ. ಅದುವೇ ದೇವರ ಜ್ಞಾನ. ದೇವರ ಜ್ಞಾನ ಹೊಂದಿ ನೋಡಿದಂತಾದರೆ ಅವರೆಲ್ಲರೂ ಹಾಗೆ ಮರಣಿಸುವುದಕ್ಕೆ ಕಾರಣ ತಿಳಿಯಬಲ್ಲದು. ನಾವು ಹೇಳಿರುವುದನ್ನೇ ಎಲ್ಲರೂ ನಂಬಬೇಕು ಎಂದು ನಾನು ಹೇಳುತ್ತಿಲ್ಲ. ಏಕೆಂದರೆ ನಾವು ಹೇಳುವ ಮಾತು ಎಲ್ಲರಿಗೂ ಅರ್ಥವಾಗದೆ ಹೋಗಬಹುದು. ಅರ್ಥವಾಗದಿರುವಾಗ ನಂಬುವುದಕ್ಕೆ ಅವಕಾಶ ಇರುವುದಿಲ್ಲ. ಆದ್ದರಿಂದ ನಾನು ಹೇಳುವುದು ಎಲ್ಲರಿಗೂ ಉತ್ತರ ಅಲ್ಲ. ಅರ್ಥವಾಗುವಂತಹ ಕೆಲವರಿಗೆ ಮಾತ್ರವೇ ಉತ್ತರವೆಂದು ತಿಳಿಯಬೇಕು. ನನಗೆ ತಿಳಿದಮಟ್ಟಿಗೆ ದೇವರಿಗೆ ತಿಳಿಯದಂತೆ ಏನೂ ನಡೆಯುವುದಿಲ್ಲ. ದೇವರು ಎಲ್ಲದಕ್ಕೂ ಸಾಕ್ಷಿ ಎಂದು ಸಹ ಮರೆಯಬಾರದು. ಬಸ್ಸಿನಲ್ಲಿ ಸತ್ತುಹೋದವರೆಲ್ಲರೂ ತಮ್ಮ ಮರಣವನ್ನು ಊಹಿಸಿಕೊಂಡಿರುವುದಿಲ್ಲ. ಅವರ ಕರ್ಮ ಪ್ರಕಾರ ವಿವಿಧ

ಕೆಲಸಗಳ ನಿಮಿತ್ತ ಹೊರಟವರಿಗೆ ಕರ್ಮಗಳೆಲ್ಲವೂ ಒಂದೇ ವಿಧವಾಗಿ ಸಹ ಇಲ್ಲ. ವಾಸ್ತವವಾಗಿ ಅವರ ಕರ್ಮಪ್ರಕಾರ ಅವರು ಹೈದರಾಬಾದ್‌ಗೆ ಹೋಗಿ ವಿವಿಧ ಕೆಲಸಗಳಲ್ಲಿ ತೊಡಗಬೇಕಾಗಿದೆ. ವಾಸ್ತವವಾಗಿ ನೀವು ಅಂದುಕೊಂಡಂತೇ ಆ ಸಮಯಕ್ಕೆ ಮರಣಿಸುವಂತೆ ಯಾರ ಕರ್ಮವೂ ಇಲ್ಲ. ಆದರೂ ಮರಣಿಸಿದ್ದಾರೆ. ಕರ್ಮ ವಿನಹಾ ನಡೆಯುವುದಿಲ್ಲವೆಂದು ಕರ್ಮ ಸಿದ್ಧಾಂತವಿರುವಾಗ ಅವರ ಕರ್ಮದ ಪ್ರಕಾರ ಅವರು ಹೈದರಾಬಾದ್‌ಗೆ ಹೋಗದಂತೆ ಮಧ್ಯದಲ್ಲಿ ಮರಣಿಸುವುದೇನೆಂದು ನಮಗೂ ಸಹ ಪ್ರಶ್ನೆ ಬಂದಿದೆ. ಶಾಸ್ತ್ರ ಶಾಸನವಾಗಿ ನಡೆದೇ ತೀರುತ್ತದೆ. ಕರ್ಮಸಿದ್ಧಾಂತದ ಪ್ರಕಾರ ಕರ್ಮ ಬೇರೆಯಾಗಿ ಇರುವಾಗ, ನಡೆಯಬಾರದ್ದು ಹೇಗೆ ನಡೆದಿದೆಯೆನ್ನುವ ಪ್ರಶ್ನೆ ಯಾರಿಗಾದರೂ ಬಾರದೆ ಇರುವುದಿಲ್ಲ. ಒಂದು ಸಂಘಟನೆ ನಡೆದಿದೆಯೆಂದರೆ ಅದು ಸತ್ಯ. ನಡೆದಿರುವುದು ಸತ್ಯವೇ ಆದಾಗ ಅದನ್ನು ಶಾಸ್ತ್ರ ಎನ್ನುತ್ತೇವೆ. ಏಕೆಂದರೆ ಶಾಸ್ತ್ರ ಎಂದರೆ ಸತ್ಯ ಎಂದೂ, ಸತ್ಯ ಎಂದರೆ ಶಾಸ್ತ್ರವೆಂದು ಸೂತ್ರವಿದೆ. ಶಾಸ್ತ್ರದ ಪ್ರಕಾರ ಅವರ ಕೆಲಸಗಳು ಹೈದರಾಬಾದ್‌ನಲ್ಲಿ ನಡೆಯಬೇಕಾಗಿರುವಾಗ ಅದನ್ನು ಅಲ್ಲಗಳೆದು ಮಧ್ಯದಲ್ಲಿ ಪ್ರಮಾದ ನಡೆದಿದೆ. ನಡೆದಿರುವುದು ಪ್ರತ್ಯಕ್ಷ ಸತ್ಯವಾದ್ದರಿಂದ ಅದೂ ಶಾಸ್ತ್ರದ ಪ್ರಕಾರವೇ ನಡೆದಿದೆಯೆಂದರೆ ಇಲ್ಲಿ ಶಾಸ್ತ್ರ ಎನ್ನುವುದು ಪರಸ್ಪರ ವಿರುದ್ಧವಾಗುತ್ತದೆ. ಚೆನ್ನಾಗಿ ಯೋಚಿಸಿದರೇ ಶಾಸ್ತ್ರ ಎಂದಿಗೂ ಪರಸ್ಪರ ವಿರುದ್ಧವಾಗಿ ಇರುವುದಿಲ್ಲ. ಇಲ್ಲಿ ಯಾವುದೋ ಕಗ್ಗಂಟು ಬಿದ್ದಿದೆಯೆಂದು ಅರ್ಥವಾಗುತ್ತಿದೆ. ನಮಗೆ ಅರ್ಥವಾಗದ ಕಗ್ಗಂಟನ್ನು ಬಿಚ್ಚಿಕೊಂಡು ನೋಡಿದರೇ ಒಂದು ವಿಷಯ ಅರ್ಥವಾಗುತ್ತಿದೆ. ಪ್ರಪಂಚ ಕರ್ಮಗಳ ರಿಕಾರ್ಡನ್ನು ಬದಲಾಯಿಸುವುದು ಒಂದೇ ಒಂದು ಇದೆ. ಅದೇ ದೈವಜ್ಞಾನ. ದೈವಜ್ಞಾನ ಪ್ರಪಂಚ ಕರ್ಮವನ್ನು ಅತಿಕ್ರಮಿಸಬಲ್ಲದು ಆದರೆ, ಪ್ರಪಂಚ ಕರ್ಮ ದೈವಜ್ಞಾನವನ್ನು ಏನೂ ಮಾಡಲಾರದು. ಯಾರಾದರೇ ದೈವಜ್ಞಾನ ದೂಷಣೆಗೆ ಪಾತ್ರರಾಗಿದ್ದಾರೋ ಅವರೆಲ್ಲರನ್ನೂ ಜ್ಞಾನ ಗುರುತಿಟ್ಟುಕೊಂಡು ಸಮಯವನ್ನು ನೋಡಿ ಒಂದು ಕಡೆ ಸೇರಿಸಿ ಎಲ್ಲರನ್ನೂ ಅವರ ಕರ್ಮಗಳಿಗೆ ಅತೀತವಾಗಿ ಸುಟ್ಟುಹಾಕಿದೆ. ಈ ಮಾತನ್ನು ನಾವು

ಹೇಳಿದರೆ ಇದೆಲ್ಲಾ ಕಟ್ಟುಕಥೆಯೆಂದು ಕೆಲವರನ್ನಬಹುದು. ಯಾರು ಏನೆಂದುಕೊಂಡರೂ ಫರವಾಗಿಲ್ಲ. ನನಗೆ ತಿಳಿದ ಸತ್ಯವನ್ನು ನಾನು ಹೇಳಿದ್ದೇನೆ. ಅವರು ಯಾವಾಗ ಜ್ಞಾನವನ್ನು ದೂಷಿಸಿದ್ದಾರೋ ನೀವು ಹೇಳಬಲ್ಲಿರಾ ಎಂದು ಕೆಲವರು, ನಮ್ಮವನು ಒಳ್ಳೆಯವನು ದೈವಭಕ್ತಿ ಇರುವವನು ಅಂತಹವನು ದೈವಜ್ಞಾನವನ್ನು ಏಕೆ ದೂಷಿಸುತ್ತಾನೆ ನೀವು ಹೇಳುವುದೆಲ್ಲಾ ಅಸತ್ಯ ಎಂದು ಕೆಲವರು ಕೇಳಬಹುದು. ಅವರು ಯಾವಾಗ ದೂಷಿಸಿರುವುದು, ಹೇಗೆ ದೂಷಿಸಿರುವುದು ನನಗೂ ಸಹ ತಿಳಿದಿಲ್ಲ. ಆದರೆ ದೂಷಿಸಿರುವುದು ಮಾತ್ರ ವಾಸ್ತವ. ನನ್ನ ಮಾತು ಸತ್ಯವೆನ್ನುವುದಕ್ಕೆ ಈಗ ಪ್ರಸ್ತುತ ಅಂತಹ ಪಾಪ ಮಾಡಿಕೊಂಡವರನ್ನು ಕುರಿತು ಹೇಳುತ್ತೇನೆ ಕೇಳಿರಿ. ದೇವರ ಮೇಲೆ ವಿಶ್ವಾಸವಿರುವವರು, ಧರ್ಮ ರಕ್ಷಕರಾದವರು, ನಿತ್ಯವೂ ಭಕ್ತಿಯಿಂದ ಯಾವುದೋ ಒಂದು ದೇವರನ್ನು ಪೂಜಿಸುವವರು ಈದಿನ ದೈವ ಜ್ಞಾನ ದೂಷಣೆ ಮಾಡುತ್ತಾ ಅಂತಹ ಕೆಲಸವನ್ನು ನಾವು ಮಾಡುತ್ತೇವಾ? ನಾವು ಮಾಡಿರುವುದೆಲ್ಲಾ ಒಳ್ಳೆಯದೆಂದೇ ಅಂದುಕೊಳ್ಳುತ್ತಿದ್ದಾರೆ. ಆದರೂ ಅಂತಹವರು ಈಗಾಗಲೇ ಬಹಳ ಜನ ದೈವಜ್ಞಾನಕ್ಕೆ ವಿರೋಧಿಗಳಾಗಿದ್ದಾರೆ. ಅಂತಹವರೆಲ್ಲರಿಗೂ ಯಾವಾಗಲೋ ಒಂದು ಬಾರಿ ಹೇಳದೆಯೇ ನಡೆದ ಬಸ್ಸು ಪ್ರಮಾದದಂತೆ ಯಾವುದೋ ಒಂದು ಪ್ರಮಾದ ನಡೆಯುತ್ತದೆ. ಆಗ ಅವರೆಲ್ಲರೂ ಅಲ್ಲಿ ಒಟ್ಟುಗೂಡುವರೆಂದು ನಮಗೆ ತಿಳಿದಿದೆ, ದೇವರಿಗೆ ತಿಳಿದಿದೆ ಯಾರು ಏನು ತಪ್ಪು ಮಾಡಿರುವುದು. ಆದ್ದರಿಂದ ಯಾರನ್ನೂ ದೇವರು ಕಾಪಾಡಲಿಲ್ಲ. ತನಗೇ ವಿರೋಧಿಗಳಾದವರನ್ನು ಆತನು ಏಕೆ ಕಾಪಾಡುವನು? ಪ್ರಸ್ತುತ ಕಾಲದಲ್ಲಿ ದೇವರು ಭಗವಂತನಾಗಿ ಬಂದು ಹೇಳಿದ ಭಗವದ್ಗೀತೆಯನ್ನು ಕಾಲಿನಿಂದ ಹೊಡೆದು ನಡುರಸ್ತೆಯಲ್ಲಿ ಬೆಂಕಿ ಇಟ್ಟು ಸುಟ್ಟವರು ದೈವಭಕ್ತಿ ಇರುವವರೇ. ನಾವು ಸೃಷ್ಠಿಕರ್ತ ಕೋಡ್‌ಯೆಂದು ಭಗವದ್ಗೀತೆಯಲ್ಲಿ 15ನೇ ಅಧ್ಯಾಯದಲ್ಲಿ 16,17 ಶ್ಲೋಕಗಳ ನಂಬರ್‌ಗಳನ್ನು ಸಹ ಬರೆದು "9 6 3" ಎಂದು ಗೋಡೆಗಳ ಮೇಲೆ ಬರೆದರೆ ಇದು ಕ್ರೈಸ್ತರದ್ದೆಂದು ಅದರ ಮೇಲೆ ಮಲವನ್ನು ಚಲ್ಲಿದವರು ಇದ್ದಾರೆ. ನಾವು (ನಮ್ಮ ಭಕ್ತರೆಲ್ಲರೂ) ಭಗವದ್ಗೀತೆಯನ್ನೂ ಅದಕ್ಕೆ

ಅನುಬಂಧವಾದ ಗ್ರಂಥಗಳನ್ನೂ ಮನೆಮನೆ ತಿರುಗಾಡಿ ಭಗವದ್ಗೀತಾ ಪ್ರಚಾರ ಮಾಡಿದರೇ ಕ್ರೈಸ್ತರು ಹೊರತುಪಡಿಸಿ ಹಿಂದೂಗಳು ಹೀಗೆ ತಿರುಗುವುದಿಲ್ಲ ನೀವು ಭಗವದ್ಗೀತೆ ಮುಸುಗಿನಲ್ಲಿ ಕ್ರೈಸ್ತವವನ್ನು ಪ್ರಚಾರ ಮಾಡುತ್ತಿದ್ದೀರೆಂದು ದೂಷಿಸಿ ಆ ಊರಿನಿಂದ ಹೋಗಿರೆಂದು, ಹೋಗದಿದ್ದರೆ ನಿಮ್ಮ ಪುಸ್ತಕಗಳನ್ನು ಸುಟ್ಟುಹಾಕುತ್ತೇವೆ, ನಿಮ್ಮನ್ನು ಹೊಡೆಯುತ್ತೇವೆಂದವರು ಸಹ ಇದ್ದಾರೆ. ತ್ರೈತ ಸಿದ್ಧಾಂತ ಭಗವದ್ಗೀತೆಯನ್ನು ಓದಿರೆಂದು ನಾವು ಎಷ್ಟೋ ಖರ್ಚುಮಾಡಿ ಗೋಡೆಗಳ ಮೇಲೆ ಬರೆಯಿಸಿದರೆ ಅದರ ಕಾರಣದಿಂದ ಕೇಸು ಹಾಕಿ ಕೋರ್ಟಿಗೆ ಎಳೆದು 20 ದಿನಗಳು ಜೈಲುಶಿಕ್ಷೆ ಹಾಕಿಸಿದವರಿದ್ದಾರೆ. ಆ ದಿನ ಕೋರ್ಟಿನಲ್ಲಿ ಇದು ತಪ್ಪಾ ಒಪ್ಪಾಯೆಂದು ನೋಡದಂತೆ, ಸ್ವಲ್ಪವಾದರೂ ಆಲೋಚಿಸದಂತೆ ತೀರ್ಪು ಹೇಳಿ ಜೈಲಿಗೆ ಕಳುಹಿಸಿದ ಜಡ್ಜಿಯನ್ನು ಕೂಡಾ ಜ್ಞಾನ ನೆನಪಿಟ್ಟುಕೊಂಡಿದೆ. ಹಿಂದಿನ ತರದಲ್ಲಿ ಜ್ಞಾನದೂಷಣೆ ಮಾಡಿದವರೆಲ್ಲರೂ ಬಸ್ಸಿನಲ್ಲಿ ಸುಟ್ಟುಹೋಗುವುದು ನಡೆದಿದೆ. ಈ ತರದಲ್ಲಿ ಜ್ಞಾನದೂಷಣೆ ಮಾಡಿದವರು ಮಹಾನಂದಿ, ಗುಂತಕಲ್ಲು, ಹೈದರಾಬಾದ್, ಭುವನಗಿರಿ, ಕಡಪದಲ್ಲಿ ದೇವರ ದೃಷ್ಠಿಯಲ್ಲಿ ನಮೂದು ಮಾಡಲ್ಪಟ್ಟಿದ್ದಾರೆ. ಈದಿನ ಹಿಂದೂಧರ್ಮ ರಕ್ಷಣೆ ಮಾಡುತ್ತೇವೆನ್ನುವವರೇ ಹೆಚ್ಚಾಗಿ ಗುರುತಿಸಲ್ಪಟ್ಟಿದ್ದಾರೆ. ನಾವು ಬರೆದಿರುವುದು ಏನಿದೆಯೆಂದು ನೋಡದಂತೆ ಜ್ಞಾನವನ್ನು ಹೇಳನವಾಗಿ ಮಾತನಾಡಿದಾಗ ದೇವರಿಗೆ ಕೋಪ ಬರುವುದಿಲ್ಲವಾ! ಎಷ್ಟೋ ಮಂದಿ ಜ್ಞಾನಿಗಳಾದ ಹಿಂದೂಗಳು ಇದು ದೊಡ್ಡ ಜ್ಞಾನ ನಮ್ಮ ಅದೃಷ್ಟದಂತೆ ಇಷ್ಟು ಕಾಲಕ್ಕೆ ನಮಗೆ ಸಿಕ್ಕಿದೆ ಎಂದು ಸಂತೋಷಪಡುತ್ತಿದ್ದರೇ ಹಿಂದೂ ಧರ್ಮಗಳೆಂದರೆ ಏನೋ ತಿಳಿಯದ ಮೂರ್ಖರು ನಾವು ಹಿಂದೂ ರಕ್ಷಕರೆಂದು ಹೇಳುತ್ತಾ, ಯಾವ ಜ್ಞಾನವೂ ತಿಳಿಯದವರಾಗಿ ಜ್ಞಾನವನ್ನು ಕುರಿತು, ಗ್ರಂಥರೂಪದಲ್ಲಿರುವ ಜ್ಞಾನವನ್ನು ಕುರಿತು ದೂಷಿಸಿ ಮಾತನಾಡಿದರೇ ಅದು ಪ್ರತ್ಯೇಕವಾದ ಕರ್ಮಾತೀತ ಪಾಪವಲ್ಲದೆ ಏನಾಗುತ್ತದೆ. ಭಗವದ್ಗೀತೆಯಲ್ಲಿ ಕ್ಷರಾಕ್ಷರ ಪುರುಷೋತ್ತಮರಾಗಿ ದೇವರು ತನ್ನನ್ನು ಕುರಿತು ವರ್ಣಿಸಿ ಹೇಳಿದರೇ, ತ್ರೈತ ಸಿದ್ಧಾಂತದ ಮೂಲಕ ಆ ವಿಷಯವನ್ನು ನಾವು ಹೇಳಿದಾಗ ಇದು ಅದ್ವೈತ, ದ್ವೈತಗಳ ಹಾಗೆ

ತ್ರೈತವು ಹಿಂದೂ ಮತದೊಳಗಿನದ್ದೇ ಎನ್ನುವ ಪರಿಜ್ಞಾನ ಇಲ್ಲದೆ ತ್ರೈತಸಿದ್ಧಾಂತ ಭಗವದ್ಗೀತೆಯನ್ನು ನಾವು ಒಪ್ಪಿಕೊಳ್ಳುವುದಿಲ್ಲ ಎಂದು ಸುಟ್ಟವರನ್ನು ನಾವು ಭಕ್ತಿಪರರೇ ಎಂದಾಗ ದೇವರು ಒಪ್ಪಿಕೊಳ್ಳುತ್ತಾನಾ! ಜ್ಞಾನ ಎಂದರೆ ಏನು ಅದು ಎಷ್ಟು ಶಕ್ತಿವಂತವಾದುದೆಂದು ಅದರ ಬಗ್ಗೆ ತಿಳಿಯದೆ ನಾವು ಒಳ್ಳೆಯವರು ನಾವು ಹಿಂದೂ ರಕ್ಷಕರು ಎಂದರೇ ದೇವರು ಒಪ್ಪಿಕೊಳ್ಳುತ್ತಾನಾ? ಎಲ್ಲಾಕಡೆ ತುಂಬಿರುವ ದೇವರ ಮುಂದೆಯೇ ಆತನ ಗೀತೆಯನ್ನು ಸುಟ್ಟವರನ್ನು, ಆತನ ಜ್ಞಾನವನ್ನು ದೂಷಿಸಿದವರನ್ನು ಬಿಡದಂತೆ ಮುಂಬರುವ ಕಾಲಗಳಲ್ಲಿ ಯಾವಾಗಲೋ ಒಂದು ಬಾರಿ ತಪ್ಪಿಗೆ ತಕ್ಕ ಶಿಕ್ಷೆ ಹಾಕದೆ ಬಿಡುವುದಿಲ್ಲ. ನಮ್ಮಿಂದ ಬರೆಯಲ್ಪಟ್ಟಿರುವ ಗ್ರಂಥಗಳು ಕೆಲವು ಶಕ್ತಿವಂತವಾಗಿ ಪ್ರತ್ಯಕ್ಷವಾಗಿ ಕಾಣಿಸುತ್ತಿವೆ. ಗ್ರಂಥವನ್ನು ಓದಿದರೇ ಎಷ್ಟೋ ಜ್ಞಾನಶಕ್ತಿ ಉಂಟಾಗುತ್ತಿದೆ. ಹತ್ತಿರ ಇಟ್ಟುಕೊಂಡರೇ ಕೆಲವು ರೋಗಗಳು ಸಹಿತ ದೂರವಾಗುತ್ತಿವೆ. 48 ಪುಟಗಳಿರುವ **"ಮಂತ್ರ-ಮಹಿಮೆ"** ಎನ್ನುವ ಚಿಕ್ಕ ಗ್ರಂಥವನ್ನು ಹತ್ತಿರದಲ್ಲಿಟ್ಟರೆ ಚೇಳಿನ ನೋವನ್ನು ನಿಮಿಷದಲ್ಲಿ ತೆಗೆದುಹಾಕುತ್ತಿದೆ. ಇಷ್ಟು ಪ್ರತ್ಯಕ್ಷವಾಗಿ ಒಂದು ಗ್ರಂಥವೇ ಇದ್ದರೆ ಅದಕ್ಕಿಂತ ದೊಡ್ಡದಾಗಿರುವ ಕೆಲವು ಗ್ರಂಥಗಳಲ್ಲಿ ಎಷ್ಟೋ ದೈವಶಕ್ತಿ ಇದೆ. ಭಗವದ್ಗೀತೆ ಎಲ್ಲದಕ್ಕಿಂತ ಮೀರಿದ ಶಕ್ತಿ ಇರುವುದು. ಅಂತಹವುಗಳನ್ನು ದೂಷಿಸಿದರೆ ಅದರ ಫಲ ಹೇಗಿರುತ್ತದೋ ಬುದ್ಧಿವಂತರು ಊಹಿಸಿಕೊಳ್ಳಬಹುದು. **"ಸೃಷ್ಟಿಕರ್ತ ಕೋಡ್ 666"** ಯೆಂದು ಕ್ರೈಸ್ತರು ಬರೆದರೆ ಅವರಿಗೆ ವಿರುದ್ಧವಾಗಿ ಅದು ಮಾಯೆ ಕೋಡ್‌ಯೆಂದು ದೇವರ ಕೋಡ್ ಇದುಯೆಂದು 9 6 3 ನ್ನು ನಾವು ಬರೆದರೆ ಅದು ಏನು 64 ಪುಟಗಳ ಆ ಗ್ರಂಥದಲ್ಲಿ ಏನಿದೆ ಎಂದು ನೋಡದೆ ಕುರುಡರಂತೆ ಜ್ಞಾನವನ್ನು ದೂಷಿಸಿದವರಿಗೆ ಅವರಿಗೆ ಬಿದ್ದ ಶಿಕ್ಷೆಯೇ ಬೀಳುತ್ತದೆಂದು ಹೈದರಾಬಾದ್‌ಗೆ ಬರುತ್ತಿರುವ ಬಸ್ಸು ಪ್ರಮಾದ ಸಾಕ್ಷಿಯಾಗಿ ನಿಂತಿದೆ. ನೀವು ಹೇಗೆ ಹೇಳಬಲ್ಲಿರೆಂದು ನಿಮ್ಮ ಮಾತು ವಾಸ್ತವವೆಂದು ನಾವು ನಂಬುವುದಕ್ಕೆ ಆಧಾರವೇನುಯೆಂದು ಯಾರಾದರೂ ಕೇಳಿದರೇ ಅವರಿಗೆ ನಾವು ಹೇಳುವುದೇನೆಂದರೆ! ದೇವರಿಗೆ ಎಲ್ಲರೂ ಸಮಾನ ಪ್ರಪಂಚ ಸಂಬಂಧ ಕರ್ಮಗಳು ಹೇಗಿದ್ದರೂ ಅವು ಕೇವಲ ಕಷ್ಟ ಸುಖಗಳಿಂದಲೇ

ತೀರಿಹೋಗುತ್ತವೆ. ಆದರೇ ದೇವರ ಸಂಬಂಧವಾದವು ಘೋರವಾಗಿ ಇರುತ್ತವೆ. ಅವು ಒಂದು ಜನ್ಮಕ್ಕೇ ಪರಿಮಿತಿಯಲ್ಲ. ಎರಡು ಯುಗಗಳ ಪರ್ಯಂತರ ಜನ್ಮಜನ್ಮಗಳಿಗು ಬಾಧಿಸುವುದು.

ಪ್ರಸ್ತುತ ಜನ್ಮದಲ್ಲಿ ಎಲ್ಲರ ಎದುರುಗಡೆ ಎಲ್ಲಾ ಮತಗಳಿಗು ಮೀರಿದ ಜ್ಞಾನ ಇಂದೂ (ಹಿಂದೂ) ಮತದಲ್ಲಿಯೇ ಇದೆ. ಅಷ್ಟು ದೊಡ್ಡ ಜ್ಞಾನ ನಮ್ಮ ಮುಂದೆ ಇರುವಾಗ ಅದನ್ನು ಗುರುತಿಸದೆ ಅನವಶ್ಯಕವಾಗಿ ದೈವದೂಷಣೆ, ಜ್ಞಾನದೂಷಣೆ ಮಾಡಿದವರಿಗೆ ಶಿಕ್ಷೆಗಳು ಬೀಳುವುದು ಖಾಯಂ ಎಂದು ನಿರೂಪಿಸುವುದಕ್ಕೆ ಬಸ್ಸು ಪ್ರಮಾದ ನಡೆದಿದೆಯೆಂದು ನಾವು ನಂಬುತ್ತಿದ್ದೇವೆ. ಈಗ ಪ್ರಮಾದದಲ್ಲಿ ಹೋದವರೆಲ್ಲರೂ ಗತದಲ್ಲಿ, ಗತ ಜನ್ಮದಲ್ಲಿ ಎಂತಹವರೋ ತಿಳಿದಿಲ್ಲ ಅಲ್ಲವೆ! ನಿಮಗೆ ತಿಳಿಯದಿದ್ದರೂ ನಮಗೆ ತಿಳಿದ ಸತ್ಯದಿಂದ ಈದಿನ ಕೂಡಾ ದೇವರ ಜ್ಞಾನವನ್ನು ದೂಷಿಸಿದವರು ಅನವಶ್ಯಕವಾಗಿ ದೈವಾಗ್ರಹಕ್ಕೆ ಗುರಿಯಾಗಿದ್ದಾರೆಂದು ತಿಳಿಯುತ್ತಿದೆ. ಅಂತಹವರೆಲ್ಲರಿಗೂ ಇಂತಹ ಶಿಕ್ಷೆಯೇ ಬೀಳುತ್ತದೆಂದು ದೇವರೇ ತಿಳಿಸುವಂತೆ ಹೈವೇನಲ್ಲಿ ಸುಟ್ಟುಹೋದ ಹೈದರಾಬಾದ್ ಬಸ್ಸು ನಂಬರ್ "9 6 3" ಇದು ನಾವು ದೇವರ ಗುರುತೆಂದು ಹೇಳಿದ ನಂಬರೇಯೆಂದು ಗುರುತಿಟ್ಟುಕೊಳ್ಳಿ. ಬಸ್ಸು ಬೆಂಗಳೂರಿನವರದ್ದಾದರೂ ಮೊದಲು ನಮ್ಮ ಆಶ್ರಮವಿರುವ ತಾಡಿಪತ್ರಿ ಎಂಬ ಊರಿನದ್ದೇಯೆಂದು ತಿಳಿಯಿರಿ. ನಾವು ದೇವರ ಗುರುತು 9 6 3 ಎಂದು ಬರೆದ ನಂತರ ಅದೇ ನಂಬರ್‌ನಿಂದ ನಾವಿರುವ ಇದೇ ಪ್ರಾಂತದಲ್ಲಿ ಬಂದಿದೆ. ಈ ಪ್ರಾಂತದಿಂದ ಬಂದಿರುವ ಬಸ್ಸು, ನಾವು ಪ್ರಕಟಿಸಿದ 9 6 3 ನಂಬರೇ ಇರುವ ಬಸ್ಸಿನಲ್ಲಿ ಪ್ರಮಾದ ನಡೆದಿದೆಯೆಂದರೇ ಇಲ್ಲಿನ ಜ್ಞಾನ ಅಗ್ನಿಯಂಥಾದ್ದೆಂದು ದೈವದೂಷಣೆ ಮಾಡಿದ ನಿಮ್ಮನ್ನು ಸಹ ಬಿಡದೆ ಮರುಜನ್ಮದಲ್ಲಾದರೂ ಹೀಗೇ ಸುಟ್ಟುಹಾಕುತ್ತೇನೆಂದು ಹೇಳಿದಂತಿದೆ. ಆದ್ದರಿಂದ ಈಗಿನಿಂದಾದರೂ ಇದು ಅಸಲಾದ ಹಿಂದೂಗಳ ಜ್ಞಾನವೆಂದೂ, ಇದು ಅಗ್ನಿಯಂತಹ ಜ್ಞಾನವೆಂದು ತಿಳಿದು ಜಾಗ್ರತೆಯಿಂದಿರಿ. ಈಗಿನಿಂದಾದರೂ ಯಾರೂ ದೈವಾಗ್ರಹಕ್ಕೆ ಗುರಿಯಾಗದಂತೆ ಇರಬೇಕೆಂದು

ತಿಳಿಸುತ್ತಿದ್ದೇವೆ. ಈಗ ಬರೆಯಲ್ಪಟ್ಟ ಗ್ರಂಥ ಜ್ಯೋತಿಷ್ಯ ಗ್ರಂಥ. ಜ್ಯೋತಿಷ್ಯವು ಒಂದು ಹಿಂದೂಗಳಿಗೆ ಹೊರತುಪಡಿಸಿ ಬೇರೆಯಾರಿಗೂ ತಿಳಿದಿಲ್ಲ. ಕೆಲವರು ಹಿಂದೂಗಳಿಗೆ ಜ್ಯೋತಿಷ್ಯ ತಿಳಿದರೂ, ಜ್ಯೋತಿಷ್ಯಶಾಸ್ತ್ರ ಪೂರ್ತಿ ಸಕ್ರಮವಾಗಿ ತಿಳಿದಿಲ್ಲ. ಈಗ ಇಂದೂಗಳಲ್ಲಿಯೇ (ಹಿಂದೂಗಳಲ್ಲಿಯೇ) ಯಾರಿಗೂ ತಿಳಿಯದ ರಹಸ್ಯವಾಗಿರುವ ಜ್ಯೋತಿಷ್ಯ ಸೂತ್ರಗಳನ್ನು ಈ ಗ್ರಂಥದಲ್ಲಿ ಬರೆಯುವುದು ನಡೆದಿದೆ. ಜ್ಯೋತಿಷ್ಯದಲ್ಲಿ ಬಹಳ ಬುದ್ಧಿವಂತರಾದವರೂ ಸಹ ತಿಳಿಯದ ರಹಸ್ಯಗಳನ್ನು ಹೇಳುವುದು ನಡೆದಿದೆ. ಇತ್ತ ಜ್ಯೋತಿಷ್ಯರಿಗೂ ಅತ್ತ ಜ್ಞಾನಿಗಳಿಗೂ ಇಬ್ಬರಿಗೂ ಉಪಯೋಗಪಡುವಂತೆ ಜ್ಯೋತಿಷ್ಯದಲ್ಲಿನ ದಶಾಚಾರವನ್ನು ಕುರಿತು ಹೇಳುವುದು ನಡೆದಿದೆ. ದಶಾಚಾರ ಎಂದರೆ ಏನೋ ತಿಳಿದರೇ ಅವನು ಜ್ಯೋತಿಷ್ಯನಾದರೂ ಪೂರ್ತಿ ಜ್ಞಾನಿ ಆಗಬಲ್ಲನು.

**23) ಬಸ್ಸು ಅಪಘಾತವನ್ನು ಕುರಿತು ಹೇಳುತ್ತಿದ್ದರೇ ಎಲ್ಲಾ ನಮಗೆ ಹೊಸದಾಗಿ ಇದೆ. ನಮಗೆ ಪೂರ್ತಿ ಏನೂ ತಿಳಿಯದೆ ಹೋದರೂ ನೀವು ಹೇಳುವ ಮಾತು ನಿಜವೇ ಆಗಿರಬಹುದೆಂದು ಸ್ವಲ್ಪಸ್ವಲ್ಪವಾಗಿ ಅರ್ಥವಾಗುತ್ತಿದೆ. ಕೆಲವು ರಸ್ತೆ ಅಪಘಾತಗಳನ್ನು ನಾನು ನನ್ನ ಸ್ನೇಹಿತರು ನೋಡಿದ್ದೇವೆ. ರಸ್ತೆ ಚೆನ್ನಾಗಿದ್ದರೂ ಯಾವ ಆತಂಕಗಳು ತೊಂದರೆಗಳು ಇಲ್ಲದಿದ್ದರೂ ಒಂದೇ ಸ್ಥಳದಲ್ಲಿ ಹೆಚ್ಚಿನ ಅಪಘಾತಗಳು ನಡೆಯುತ್ತಿರುತ್ತವೆ. ಅದು ಸ್ಥಳ ಪ್ರಭಾವವೆನ್ನುತ್ತೀರಾ? ಗ್ರಹ ಪ್ರಭಾವವೆನ್ನುತ್ತೀರಾ?**

**ಉ||** ಎಲ್ಲಿ ಏನು ನಡೆದರೂ ಅದೆಲ್ಲವೂ ದ್ವಾದಶ ಗ್ರಹಗಳ ಮೂಲಕವೇ ನಡೆಯಬೇಕು. ಗ್ರಹಗಳು ಕರ್ಮವನ್ನು ಹಂಚುವವರು ಮಾತ್ರವೇ, ಕಾರ್ಯಗಳನ್ನು ಗ್ರಹಗಳು ಮಾಡುವುದಿಲ್ಲ. ಕಾರ್ಯಗಳನ್ನು ಮಾಡುವವರು ಕಾಣಿಸುವವರು ಕೆಲವರು ಕಾಣಿಸದವರು ಸಹ ಕೆಲವರು ಇದ್ದಾರೆ. ರಸ್ತೆ ಅಪಘಾತಗಳು ನಡೆಯುವುದರಲ್ಲಿ ಕಾಣಿಸದವರ ಪಾತ್ರ ಹೆಚ್ಚಾಗಿ ಇದೆ. ರಸ್ತೆ ಅಪಘಾತಗಳಲ್ಲೇ ಅಲ್ಲದೆ ಮತ್ತೆಷ್ಟೋ ಕಾರ್ಯಗಳನ್ನು ಕಾಣಿಸದವರು ಮಾಡುತ್ತಿದ್ದಾರೆ. ಅಮೆರಿಕಾ ಇನ್ನು ಕೆಲವು ದೇಶಗಳಲ್ಲಿ ಅಂತಹ ಕೆಲಸಗಳನ್ನು ಮಾಡುವವರೆಲ್ಲರನ್ನು

ಗ್ರಹಾಂತರವಾಸಿಗಳೆಂದು ಹೆಸರಿಟ್ಟು ಅವರು ಅವರ ವಾಹನಗಳಾದ ಫ್ಲೈಯಿಂಗ್ ಸಾಸರ್ಸ್ ಎನ್ನುವವುಗಳ ಮೂಲಕ (U.F.O ಗಳ ಮೂಲಕ) ಭೂಮಿ ಮೇಲೆಗೆ ಬಂದು ಕೆಲವು ಕಾರ್ಯಗಳನ್ನು ಮಾಡಿಹೋಗಿದ್ದಾರೆಂದು ಅವು ಇಲ್ಲಿಯತನಕ ಅರ್ಥವಾಗದ ರಹಸ್ಯಗಳಾಗಿ ಉಳಿದು ಹೋಗಿವೆಯೆಂದು ಹೇಳುತ್ತಿರುವರು. ನಮ್ಮ ದೇಶ (ಭಾರತದೇಶ) ದಲ್ಲಿ ಯಾರಿಗೂ ಅರ್ಥವಾಗದ ಕೆಲಸಗಳು ನಡೆದರೇ ಯಾವುದೋ ಶಕ್ತಿಗಳು ಮಾಡಿದ್ದಾರೆಂದು ಅನ್ನುತ್ತಾರೆ. ಅದೇ ಅಮೆರಿಕಾದಲ್ಲಾದರೇ ನೇರವಾಗಿ ಗ್ರಹಾಂತರವಾಸಿಗಳೆಂದು ಏಲಿಯನ್ಸ್ ಎಂದು ಹೆಸರಿಟ್ಟು ಹೇಳುತ್ತಿರುವರು. ಯಾರು ಏನು ಹೇಳಿದರೂ ಒಂದು ಕೆಲಸ ನಡೆದಿದೆಯೆಂದರೆ ಅದು ಹನ್ನೆರಡು ಗ್ರಹಗಳ ಮೂಲಕವೇ ನಡೆಯಬೇಕು. ಮೇಲಿರುವ ಗ್ರಹಗಳು ನಡೆಸಿದರೆ ಕಾಣಿಸುವವರು, ಕಾಣಿಸದವರು ಎಲ್ಲರೂ ನಡೆಯುತ್ತಿದ್ದಾರೆ. ಅಷ್ಟೇ ಹೊರತು ಸ್ಥಳ ಪ್ರಭಾವಗಳೆಂದು ಎಲ್ಲೂ ಇರುವುದಿಲ್ಲ. ಸ್ಥಳ ಪ್ರಭಾವ ಎಂದರೇ ಅದು ಮೂಢನಂಬಿಕೆಯಾಗುತ್ತದೆ.

ರಸ್ತೆ ಅಪಘಾತಗಳಿಗೆ ಕಾರಣ ಕಾಣಿಸದ ಕರ್ಮವಾದಾಗ ಜಾರಿಯಾಗುವುದು ಎಷ್ಟೋ ವಿಧಗಳಿರುತ್ತವೆ. ಒಂದೇ ಸ್ಥಳದಲ್ಲಿ ಹೆಚ್ಚಿನ ಪ್ರಮಾದಗಳು ನಡೆಯುವುದು ಅಲ್ಲಿ ಪ್ರಮಾದಗಳು ನಡೆಯುವುದಕ್ಕೆ ಅವಕಾಶ ಇಲ್ಲದಿದ್ದರೂ, ರಸ್ತೆ ಎಲ್ಲಾ ವಿಧಗಳಲ್ಲಿ ಚೆನ್ನಾಗಿದ್ದರೂ, ಊಹಿಸದ ರೀತಿಯಲ್ಲಿ ಅಪಘಾತಗಳು ನಡೆಯುವುದನ್ನು ನೋಡಿದರೆ ನಮಗೆ ತಿಳಿಯದಿರುವುದೇನೋ ಅಲ್ಲಿ ನಡೆಯುತ್ತಿದೆಯೆಂದು ಅರ್ಥವಾಗಬಲ್ಲದು. ಪ್ರಾರಬ್ಧದ ಪ್ರಕಾರ ಕೆಲವು ಕರ್ಮಗಳನ್ನು ಅನುಭವಿಸುವಂತೆ ಮಾಡಿದರೂ ಅವುಗಳನ್ನು ನೋಡಿ ಇತರರು ಸ್ವಲ್ಪ ಜ್ಞಾನಿಗಳಾಗಿ ಬದಲಾಗಬಲ್ಲರೆಂದು, ಜ್ಞಾನದ ಮೇಲೆ ಆಸಕ್ತಿ ಬೆಳೆಯುತ್ತದೆಂದು ತಿಳಿದು ಪ್ರಮಾದಗಳನ್ನು ಉಂಟುಮಾಡುತ್ತಿರುವರು. ಭೂಮಿ ಮೇಲೆ ದೈವಜ್ಞಾನ ಇರುವವರು ಕಾಣಿಸದ ಸೂಕ್ಷ್ಮ ರೂಪದಲ್ಲಿ ಎಷ್ಟೋ ಇದ್ದಾರೆ. ಅವರು ದೈವಜ್ಞಾನದ ಮೇಲೆ ಶ್ರದ್ಧೆ ಇರುವವರಾಗಿದ್ದು, ಜ್ಞಾನವನ್ನು ತಿಳಿದವರಾಗಿದ್ದು ಅಜ್ಞಾನಿಗಳನ್ನು ನೋಡಿ ಅವರನ್ನು ಜ್ಞಾನಿಗಳನ್ನಾಗಿ ಬದಲಾಯಿಸುವುದಕ್ಕೆ ಪ್ರಯತ್ನ

ಮಾಡುತ್ತಿರುವರು. ಎಷ್ಟು ಪ್ರಯತ್ನ ಮಾಡಿದರೂ ಜ್ಞಾನವನ್ನು ತಿಳಿಯದೆ ಅಜ್ಞಾನ ಮಾರ್ಗದಲ್ಲಿ ಹೋಗುವವರ ಮೇಲೆ ಕೋಪಹೊಂದಿ ಪ್ರಮಾದಗಳನ್ನು ಉಂಟುಮಾಡುತ್ತಾರೆ. ಹೆಚ್ಚಾಗಿ ಒಂದೇ ಸ್ಥಳದಲ್ಲಿ ಅಪಘಾತಗಳು ನಡೆಯುವುದಕ್ಕೆ ಕಾರಣ ಆ ಸ್ಥಳದಲ್ಲಿ ಕಾಣಿಸದ ಶಕ್ತಿ ಒಂದು ರಸ್ತೆ ಮೇಲೆ ಕಾವಲು ಕಾಯುತ್ತಾ, ಬಂದು ಹೋಗುವ ವಾಹನಗಳನ್ನು ಗಮನಿಸುತ್ತಾ ಇರುತ್ತದೆ. ಬ್ರೇಕ್ ಇನ್‌ಸ್ಪೆಕ್ಟರ್‌ಗಳು ತಮಗೆ ಅನುಕೂಲವಾದ ಕಡೆ ರಸ್ತೆ ಪಕ್ಕದಲ್ಲಿ ಇರುತ್ತಾ ಬಂದು ಹೋಗುವ ವಾಹನಗಳನ್ನು ಗಮನಿಸುತ್ತಾ ಅನುಮಾನವಿರುವ ಕೆಲವರನ್ನು ನಿಲ್ಲಿಸಿ ತನಿಖೆ ಮಾಡಿ ಕಳುಹಿಸುವಂತೆ ಕಾಣಿಸದ ಶಕ್ತಿಗಳು ಕೆಲವು ರಸ್ತೆ ಪಕ್ಕದಲ್ಲಿದ್ದು, ದೂರದಿಂದ ಬರುವ ವಾಹನದಲ್ಲಿ ವ್ಯಕ್ತಿಗಳು ಯಾರಾಗಿರುವುದು, ಎಲ್ಲಿಗೆ ಹೋಗುವುದು, ಯಾವ ಕಾರ್ಯದ ಮೇಲೆ ಹೋಗುವುದು ಗ್ರಹಿಸುವರು. ವಾಹನ ಹತ್ತಿರಕ್ಕೆ ಬರುವುದಕ್ಕಿಂತ ಮೊದಲೇ ಎಲ್ಲ ವಿಷಯಗಳನ್ನು ಗ್ರಹಿಸುವರು. ವಾಹನದಲ್ಲಿ ಬರುವವರು ಮದುವೆ ಕಾರ್ಯಕ್ಕೆ ಹೋಗುವವರಾಗಲೀ ಅಥವಾ ದೇವತೆಗಳ ಹತ್ತಿರಕ್ಕೆ ಹೋಗುವವರಾಗಲೀ ಇದ್ದಂತಾದರೆ, ಅಂತಹವರನ್ನು ಆಯ್ಕೆ ಮಾಡಿಕೊಂಡು ಅಪಘಾತಗಳನ್ನು ಉಂಟುಮಾಡುವರು. ರಸ್ತೆ ಪಕ್ಕದಲ್ಲಿರುವ ಭೂತಗಳು ದೇವರ ಜ್ಞಾನವನ್ನು ಹೊಂದಿರುವರು. ದೇವರ ಜ್ಞಾನ ಇಲ್ಲದವರು ರಸ್ತೆಯ ಮೇಲೆ ಬರುತ್ತಿರುವಾಗಲೇ ಗ್ರಹಿಸಿದ ಭೂತಗಳು ಅವರನ್ನು ಏನೂ ಮಾಡದೆ ಬಿಟ್ಟುಹಾಕುತ್ತವೆ. ಹಾಗೆ ಭೂತಗಳು ರಸ್ತೆ ಮೇಲೆ ಕಾವಲು ಕಾಯುತ್ತಿರುವಾಗ ದೇವಸ್ಥಾನಗಳಿಗೆ ಹೋಗುವವರಾಗಲೀ, ಯಾವ ದೇವತೆ ನಿಮಿತ್ತ ಹೋಗುವವರಾಗಲೀ ಅಥವಾ ಮದುವೆ ಕಾರ್ಯಕ್ಕೆ ಹೋಗುವವರಾಗಲೀ ಆ ರಸ್ತೆ ಮೇಲೆ ದೂರದಿಂದ ಬರುತ್ತಿರುವಾಗಲೇ ಅಲ್ಲಿರುವ ಭೂತಗಳು ಅವರನ್ನು ಗ್ರಹಿಸಿ ದೇವಸ್ಥಾನಗಳಿಗೆ ಹೋಗುವ ದೇವತಾ ಭಕ್ತರ ಮೇಲೆಯೂ, ಮದುವೆ ಕಾರ್ಯಗಳ ನಿಮಿತ್ತ ಹೋಗುವವರ ಮೇಲೆಯೂ ಕೋಪಿಸಿಕೊಂಡು ಅವರು ಪ್ರಯಾಣಿಸುವ ವಾಹನವನ್ನು ಪ್ರಮಾದಕ್ಕೆ ಗುರಿ ಮಾಡುವರು. ಹಾಗೆಂದು ಮದುವೆಗೆ ಹೋಗುವ ಎಲ್ಲಾ ವಾಹನಗಳಿಗೂ ಪ್ರಮಾದಗಳು ನಡೆಯುವುದಿಲ್ಲ. ಹಾಗೆಯೇ ದೇವತೆಗಳಿಗೆ ಹೋಗುವವರ

ವಾಹನಗಳು ಎಲ್ಲಾ ಪ್ರಮಾದಕ್ಕೆ ಗುರಿಯಾಗುವುದಿಲ್ಲ. ಕೆಲವು ವಾಹನಗಳು ಮದುವೆಯವರವಾಗಲೀ, ದೇವತೆಗಳಿಗೆ ಹೋಗುವವರವಾಗಲೀ ಪ್ರಮಾದಕ್ಕೆ ಗುರಿಯಾಗುವುದು ಕೆಲವು ಆಗದಂತೆ ಹೋಗುವುದಕ್ಕಾಲಿ ಕಾರಣವಿದೆ. ಅದೇನೆಂದರೆ! ವಾಹನಗಳಿಗೆ ಅಧಿಪತಿ ಶುಕ್ರನು. ರಹದಾರಿಗಳಿಗೆ ಅಧಿಪತಿ ಕುಜಗ್ರಹ. ದೇವತೆಗಳಿಗೆ ಹೋಗುವವರ ಮೇಲೆ, ಮದುವೆಗಳ ವಿಷಯದ ಮೇಲೆ ಕೋಪ ಹೊಂದಿದ ಭೂತಗಳು ರಸ್ತೆಯ ಪಕ್ಕದಲ್ಲಿ ಇದ್ದರೂ, ಎಲ್ಲರನ್ನೂ ಗ್ರಹಿಸುತ್ತಿದ್ದರೂ ಶುಕ್ರಗ್ರಹವೊಂದರ ನೋಟವಿಲ್ಲದೆ ವಾಹನ ಬಲವಿಲ್ಲದವರನ್ನು ಕುಜಗ್ರಹ ವಿರುದ್ಧವಾಗಿರುವವರನ್ನು ತಪ್ಪದೆ ಪ್ರಮಾದಕ್ಕೆ ಗುರಿ ಮಾಡುತ್ತವೆ. ಕುಜ, ಶುಕ್ರರು ಒಬ್ಬರಿಗೊಬ್ಬರು ಪೂರ್ತಿ ಶತ್ರುಗಳು. ಕುಜಗ್ರಹ ಕೆಂಪು ಬಣ್ಣ ಇರುವಂಥದ್ದು. ಶುಕ್ರಗ್ರಹ ಬಿಳಿ ಬಣ್ಣ ಹೊಂದಿರುವಂಥದ್ದು. ಕೆಂಪು ಬಣ್ಣ ಹೊಂದಿರುವ ವಾಹನ ಕುಜನಿಗೆ ಪೂರ್ತಿ ವಿರುದ್ಧವಾಗುವುದರಿಂದ ಅಂತಹ ಬಣ್ಣದ ವಾಹನಗಳು ಪ್ರಮಾದಕ್ಕೆ ಗುರಿಯಾಗಬಲ್ಲವು. ಶುಕ್ರನು ತನ್ನ ವಾಹನವನ್ನು ಕಾಪಾಡಿಕೊಳ್ಳಬೇಕೆಂದು ಪ್ರಯತ್ನಿಸಿದರೂ ರಸ್ತೆಯೆಲ್ಲಾ ಕುಜನದ್ದೇ ಆಗಿರುವು ದರಿಂದ ರಸ್ತೆ ಸರಿಯಾಗಿ ಇಲ್ಲದೆ ಹೋಗಿರುವುದರಿಂದಲೂ ಸಹ ಪ್ರಮಾದ ನಡೆಯಬಹುದು. ರಸ್ತೆಗು ವಾಹನಗಳಿಗೂ ಅಧಿಪತಿಗಳಾದ ಕುಜ ಶುಕ್ರರನ್ನು ಅನುಸರಿಸಿ ಭೂತಗಳು ಪ್ರಮಾದವನ್ನು ಉಂಟುಮಾಡುವವು. ಭೂತಗಳು ರಸ್ತೆ ಪಕ್ಕದಲ್ಲಿ ಒಂದೇ ಕಡೆ ಇರುವುದರಿಂದ ಒಂದೇ ಸ್ಥಳದಲ್ಲಿಯೇ ಪ್ರಮಾದಗಳು ಹೆಚ್ಚಾಗಿ ನಡೆಯುತ್ತಿರುತ್ತವೆ. ಬ್ರೇಕ್ ಇನ್‌ಸ್ಪೆಕ್ಟರ್ ಯಾವಾಗಲೂ ಒಂದೇ ಕಡೆ ಇರುವುದಿಲ್ಲವೆನ್ನುವಂತೆ ಕೆಲವು ಭೂತಗಳು ಸಹ ಸ್ಥಳಗಳನ್ನು ಬದಲಾಯಿಸಿ ಪ್ರಮಾದಗಳು ಮಾಡುತ್ತವೆ. ಶುಕ್ರನು ಅಗ್ನಿಗೂ ಸಹ ಅಧಿಪತಿ ಆಗಿರುವುದರಿಂದ ಕುಜಗ್ರಹ ಅನುಕೂಲ ಇರುವವರು ಪ್ರಯಾಣಿಸುವ ವಾಹನ ತನ್ನದೇ ಆಗಿರುವುದರಿಂದ ಶುಕ್ರನು ತನ್ನ ವಾಹನವನ್ನು ತನ್ನ ಅಗ್ನಿಯಿಂದ ಸುಟ್ಟುಹಾಕುವನು. ಆಗ ಆ ಪ್ರಮಾದದಲ್ಲಿ ಕಪ್ಪು ಬಣ್ಣಕ್ಕೆ ಬದಲಾಗಿ ಮರಣಿಸುವರು. ಕುಜನು ಕೆಂಪು ಬಣ್ಣಕ್ಕೂ, ಕೆಂಪು ಬಣ್ಣ ಹೊಂದಿದ ರಕ್ತಕ್ಕೂ ಅಧಿಪತಿಯಾಗಿರುವು ದರಿಂದ ಪ್ರಮಾದದಲ್ಲಿ ರಕ್ತ ಹೊರಗೆ ಬಾರದಂತೆ ಕೆಂಪು ಬಣ್ಣ ಎಲ್ಲಿಯೂ

ಕಾಣಿಸದಂತೆ ಮನುಷ್ಯರ ದೇಹಗಳನ್ನು ಕಪ್ಪು ಮಾಡುತ್ತವೆ. ಅಂತಹ ಪ್ರಮಾದಗಳನ್ನು ನೋಡಿದ ಕೂಡಲೇ ಇದು ಶುಕ್ರಗ್ರಹ ಮಾಡಿದ ಪ್ರಮಾದವೆಂದು ಹೇಳಬಹುದು. ಹಾಗಲ್ಲದೆ ರಕ್ತಸಿಕ್ತವಾಗಿ ಕಾಣಿಸುವ ಪ್ರಮಾದಗಳನ್ನು ಕುಜನು ಮಾಡಿರುವವೆಂದು ಹೇಳಬಹುದು. ಮದುವೆಯೆಂದರೆ ಕುಜನಿಗೆ ಸರಿಹೋಗುವುದಿಲ್ಲ. ದೇವತಾ ಭಕ್ತಿಯೆಂದರೆ ಶುಕ್ರಗ್ರಹಕ್ಕೆ ಸರಿಹೋಗುವುದಿಲ್ಲ. ಶುಕ್ರನು ರಾಕ್ಷಸ ಗುರುವು ಆದ್ದರಿಂದ ದೇವತೆಗಳೆಂದರೆ ದ್ವೇಷ. ಹೀಗೆ ಪ್ರಮಾದಗಳು ನಡೆಯುವುದಕ್ಕೆ ಗ್ರಹಗಳು ಕಾರಣವಾದಾಗ, ಅವುಗಳನ್ನು ಜಾರಿ ಮಾಡುವ ಭೂತಗಳು ಕೆಲವು ಭೂಮಿಮೇಲೆ ಇವೆಯೆಂದು ಹೇಳಬಹುದು. ಒಂದು ರಸ್ತೆ ಮೇಲೆಯೇ ಅಲ್ಲದೆ ಎಲ್ಲಾದರೂ ಮದುವೆ ವಿಷಯದಲ್ಲಿ ಕುಜನು, ದೇವತೆಗಳ ವಿಷಯದಲ್ಲಿ ಶುಕ್ರನು ವಿರುದ್ಧವಾಗಿಯೇ ಇರುತ್ತಾರೆ. ಆದ್ದರಿಂದ ಈ ಎರಡು ವಿಷಯಗಳಲ್ಲಿ ಪ್ರಮಾದಗಳು ಯಾವಾಗಾದರೂ ಎಲ್ಲಾದರೂ ನಡೆಯಬಹುದು.

**24) ಶುಕ್ರನು ವಾಹನಗಳಿಗೆ ಅಧಿಪತಿಯಾಗಿರುವುದರಿಂದ ಶನಿ ವರ್ಗದವರೆಲ್ಲರಿಗೂ ವಾಹನ ಯೋಗ ಇರಬಹುದು. ಗುರುವರ್ಗದವರೆಲ್ಲರಿಗೂ ವಾಹನ ಯೋಗ ಇರುವುದಿಲ್ಲವೆಂದು ಅವರಿಗೆ ವಾಹನಗಳಿರುವುದಿಲ್ಲವೆಂದು ಹೇಳಬಹುದಾ?**

**ಉ॥** ಹಾಗಾದರೆ ಪ್ರಪಂಚದಲ್ಲಿ ಕೆಲವು ವಸ್ತುಗಳು ಕೆಲವರಿಗೇ ಪರಿಮಿತವಾಗಿ ಇತರ ವರ್ಗದವರಿಗೆ ಇಲ್ಲದಂತೆ ಹೋಗಬಹುದು. ವಸ್ತುಗಳು ಯಾರ ಅಧೀನದಲ್ಲಿದ್ದರೂ ಅವರವರ ಕರ್ಮವನ್ನನುಸರಿಸಿ ಲಭಿಸಬೇಕೆನ್ನುವ ಸೂತ್ರದ ಪ್ರಕಾರ ಲಭಿಸಬೇಕಾಗಿವೆ. ಹಾಗಲ್ಲದೆ ಹೋದರೆ ಎಲ್ಲಾ ಅಯೋಮಯವಾಗುತ್ತದೆ. ಭೂಮಿ ಮೇಲಿರುವ ಮನುಷ್ಯರೆಲ್ಲರೂ ಗುರು ವರ್ಗದವರಾಗಿಯೂ, ಶನಿ ವರ್ಗದವರಾಗಿಯೂ ಇದ್ದಾರೆ. ನೀವಂದುಕೊಂಡಂತಾದರೆ ಗುರುವು ಅಧೀನದಲ್ಲಿರುವ ಬಂಗಾರ ಶನಿ ವರ್ಗದವರ ಹತ್ತಿರ ಇಲ್ಲದಂತೆ ಹೋಗಬೇಕು. ಹಾಗೆಯೇ ಶನಿ ವರ್ಗದಲ್ಲಿನ ವಾಹನಗಳು ಗುರು ವರ್ಗದವರ ಹತ್ತಿರ ಇಲ್ಲದಂತೆ ಹೋಗಬೇಕು. ಹಾಗಾಗದಂತೆ ಅವರ ಕರ್ಮಾನುಸಾರ ಎಲ್ಲಾ ಎಲ್ಲರಿಗು ಲಭಿಸುವಂತೆ ದೇವರು ಮಾಡಿದ್ದಾನೆ. ಒಂದು ವರ್ಗದಲ್ಲಿನ ವಸ್ತು ಮತ್ತೊಂದು

ವರ್ಗದವರಿಗೆ ಹೇಗೆ ಲಭಿಸುತ್ತಿರುವುದು ಒಂದು ಉದಾಹರಣೆಯೊಂದಿಗೆ ತಿಳಿದುಕೊಳ್ಳೋಣ. ರಾಜೀವ್‌ಗಾಂಧೀ ಜಾತಕವನ್ನು ನೋಡಿದಾಗ ಆತನಿಗೆ ಶತ್ರು ಗ್ರಹಗಳು ಗುರು ವರ್ಗದವರೆಂದು, ಶನಿ ವರ್ಗದವರು ಮಿತ್ರ ಗ್ರಹಗಳೆಂದು ತಿಳಿದಿದೆ. ರಾಜೀವ್ ಮರಣಿಸಿದ ದಿನ ಆಯುಷ್ಯಕ್ಕೆ ಅಧಿಪತಿ ಶನಿಯಾಗಿರುವು ದರಿಂದ ಶನಿಗೆ ಶತ್ರುಗಳಾದ ಗುರು, ಕುಜರು ಮತ್ತು ಸೂರ್ಯನು ಮೂವರೂ ಸೇರಿ ಶನಿ ಮೇಲೆ ದಾಳಿ ಮಾಡಿ ಶನಿ ಹತ್ತಿರವಿರುವ ರಾಜೀವ್‌ಗಾಂಧೀ ಆಯುಷ್ಷನ್ನು ಸೆಳೆದುಕೊಂಡಿದ್ದಾರೆ. ಇದನ್ನನುಸರಿಸಿ ಒಂದೇ ಪಕ್ಷದವರಾದ ಇಬ್ಬರು ಮೂವರು ಗ್ರಹಗಳು ಒಂದಾಗಿ ಇತರ ಗ್ರಹಗಳ ಹತ್ತಿರವಿರುವ ಫಲಿತಗಳನ್ನು ಸಹ ಎಳೆದುಕೊಳ್ಳುವರು. ಗುರು ವರ್ಗೀಯರ ಮಧ್ಯದಲ್ಲಿ ಸಿಲುಕಿ ಶುಕ್ರನು ತನ್ನ ವಸ್ತುಗಳನ್ನು ಶತ್ರು ವರ್ಗಕ್ಕೆ ಕೊಡಬೇಕಾಗಿ ಬರುತ್ತಿದೆ. ಆದ್ದರಿಂದ ಶನಿ ವರ್ಗದವರ ಹತ್ತಿರ ಗುರುವು ಬಂಗಾರವಿದೆ. ಹಾಗೆಯೇ ಗುರುವರ್ಗೀಯರ ಹತ್ತಿರ ಶುಕ್ರನ ವಾಹನಗಳು, ಶನಿ ಕಬ್ಬಿಣ, ಬುಧನ ಬಣ್ಣದ ಕಲ್ಲುಗಳು, ವಜ್ರಗಳು ಇವೆ. ಹೀಗೆ ಕರ್ಮವನ್ನನುಸರಿಸಿ ಯಾವ ವಸ್ತು ಯಾರ ಹತ್ತಿರವಾದರೂ ಇರಬಹುದು.

**25) ಒಬ್ಬ ವ್ಯಕ್ತಿ ಎಷ್ಟೋ ಎತ್ತರದಿಂದ ಕೆಳಗೆಬಿದ್ದರೂ ಆತನಿಗೆ ಒಂದು ಮೂಳೆ ಸಹ ಮುರಿಯಲಿಲ್ಲ. ಮತ್ತೊಬ್ಬನು ಎರಡು ಅಡಿಗಳ ಮಂಚದ ಮೇಲಿಂದ ಕೆಳಗೆ ಬಿದ್ದರೇ ಕಾಲು, ಕೈ ಎರಡೂ ಮುರಿದಿವೆ. ನಿಮ್ಮ ಮಾತಿನ ಪ್ರಕಾರ ಪ್ರತಿಯೊಂದು ಗ್ರಹಗಳಿಂದಲೇ ನಡೆಯುತ್ತಿವೆಯೆನ್ನುವಂತಾದರೆ ಕೊನೆಗೆ ಮೂಳೆಗಳು ಮುರಿಯುವುದು ಸಹ ಗ್ರಹಗಳಿಂದಲೇ ನಡೆದಿರಬೇಕು ಅಲ್ಲವೆ! ಹಾಗಿರುವಾಗ ಎಷ್ಟೋ ಮೇಲಿಂದ ಬಿದ್ದ ಒಬ್ಬನಿಗೆ ಯಾವುದೇ ಮೂಳೆಗಳು ಮುರಿಯದಂತೆ ಹೋಗುವುದು, ಮತ್ತೊಬ್ಬನಿಗೆ ಮಂಚದ ಮೇಲಿಂದ ಬಿದ್ದರೆ ಮೂಳೆಗಳು ಮುರಿಯುವುದು ಏಕೆ ನಡೆದಿದೆ?**

**ಉ॥** ಪ್ರಪಂಚದಲ್ಲಿ ಕಲ್ಲಿಗೂ, ಶರೀರದಲ್ಲಿ ಮೂಳೆಗೂ ಅಧಿಪತಿ ಕುಜ ಗ್ರಹವೇ. ಗ್ರಹಚಾರದಲ್ಲಿ ಕುಜಗ್ರಹ ವಿರುದ್ಧವಾದಾಗ ಯಾರಿಗಾದರೂ ಕೆಳಗಿನಿಂದ

ಬಿದ್ದರೂ ಮೂಳೆಗಳು ಮುರಿಯುವಂತೆ ಮಾಡುವನು. ಅದೇ ಕುಜಗ್ರಹ ಅನುಕೂಲವಾದುದಾಗಿ ಇರುವಾಗ ಅವನು ಎಷ್ಟು ಎತ್ತರದಿಂದ ಕೆಳಗೆ ಬಿದ್ದರೂ ಮೂಳೆಗಳು ಮುರಿಯದೆ ಹೋಗಬಹುದು. ಕುಜಗ್ರಹ ಶತ್ರುಗ್ರಹವಾಗಿ ಆರನೆ ಸ್ಥಾನವನ್ನು ತಾಕಿದರೂ ಅಲ್ಲಿ ಇದ್ದರೂ ಆ ಜಾತಕನಿಗೆ ಕೀಲು ನೋವುಗಳು, ಮೊಣಕಾಲು ನೋವುಗಳು ಬರುತ್ತವೆ. ಕಣ್ಣಿನಿಂದ ರಕ್ತ ಸೋರುತ್ತದೆ. ರಕ್ತ ಹೀನತೆ ರೋಗ ಬರುತ್ತದೆ. ಮೂಳೆಗಳ ವಿಷಯವೆಲ್ಲಾ ಕುಜನು ಅಧಿಪತಿ ಯಾಗಿದ್ದು ನೋಡಿಕೊಳ್ಳುವನು.

**26) ಕೆಲವರು ಸಂಗೀತವನ್ನು ಕಲಿತು ಅದರಲ್ಲಿ ಎಷ್ಟೋ ಪ್ರಾವೀಣ್ಯತೆ ಹೊಂದಿರುತ್ತಾರೆ. ಅದಕ್ಕೆ ಯಾವ ಗ್ರಹ ಅನುಕೂಲವಾಗಿರಬೇಕು.**

ಉ॥ ಸಂಗೀತಕ್ಕೆ ಶುಕ್ರನು ಅಧಿಪತಿ ಆ ಗ್ರಹದ ನೋಟವಿಲ್ಲದಿದ್ದರೆ ಯಾರಿಗೂ ಸಂಗೀತ ಹತ್ತುವುದಿಲ್ಲ.

**27) ನಮಗೆ ತಿಳಿದಮಟ್ಟಿಗೆ ರಾಜೀವ್‌ಗಾಂಧೀ ರಕ್ತಸಿಕ್ತವಾಗಿ ಮರಣಿಸಿದ್ದಾನೆ. ಮಹಾತ್ಮಾಗಾಂಧೀ ಕೂಡಾ ರಕ್ತ ಸೋರಿ ಮರಣಿಸಿದ್ದಾನೆ. ಒಳ್ಳೆಯ ವ್ಯಕ್ತಿಗಳಾದವರು ಇಬ್ಬರೂ ಹಾಗೆಯೇ ಮರಣಿಸುವುದರಿಂದ ನಮಗೆ ಅಂದರೇ ಪ್ರಜೆಗಳಿಗೆ ಏನಾದರೂ ಒಳ್ಳೆಯದು ನಡೆಯುತ್ತದಾ?**

**ಉ॥** ಅವರು ಮರಣಿಸುವುದಕ್ಕೂ ನಿಮಗೆ ಒಳ್ಳೆಯದು ನಡೆಯುವುದಕ್ಕೂ ಸಂಬಂಧವೇನಿದೆ. ಹಾಗೆ ಅಂದುಕೊಳ್ಳುವುದಕ್ಕೆ ಅವಕಾಶವಿಲ್ಲ. ಅವರ ಕರ್ಮದ ಪ್ರಕಾರ ಅವರು ಮರಣಿಸುವುದು ನಡೆದಿದೆ. ಅವರನ್ನು ಸಾಯಿಸಿರುವುದು ಪ್ರಜೆಗಳೇ ಪುನಃ ಅವರ ಸಾವು ಪ್ರಜೆಗಳಿಗೆ ಒಳ್ಳೆಯದು ಮಾಡುತ್ತದಾ ಎಂದು ಕೇಳುವುದೇನು? ನೀನು ನಮಗೆ ಬೇಡ ಎಂದು ಗಾಂಧೀಯನ್ನು, ರಾಜೀವ್‌ಗಾಂಧೀ ಯನ್ನು ಸಾಯಿಸಿದ ಮನುಷ್ಯರಿಗೆ ಅವರ ಸಾವು ಏನಾದರೂ ಒಳ್ಳೆಯದು ಮಾಡುತ್ತದಾ ಎಂದು ಕೇಳುವುದು ಬಹಳ ತಿಳಿವಳಿಕೆಯಿಲ್ಲದ ಪ್ರಶ್ನೆಯೆಂದು ಹೇಳುತ್ತಿದ್ದೇನೆ.

**28) ಯಾವಾಗಲೋ ಮರಣಿಸಿದ ಯೇಸು ಕೂಡಾ ರಕ್ತ ಸೋರಿಸೇ ಮರಣಿಸಿದ್ದಾನೆ ಅಲ್ಲವೆ! ಈಗ ಈ ನಾಯಕರನ್ನು ಪ್ರಜೆಗಳು ಸಾಯಿಸಿದಂತೆ ಆಗ ಆತನನ್ನು ಕೂಡಾ ಪ್ರಜೆಗಳೇ ಸಾಯಿಸುವುದು ನಡೆದಿದೆ ಅಲ್ಲವೆ! ಆತನು ತನ್ನ ರಕ್ತ ಸೋರಿಸಿ ಮರಣಿಸಿದ್ದಾನೆ ಅಲ್ಲವೆ! ಹಾಗೆಯೇ ಇವರೂ ಸಹ ಇವರ ರಕ್ತವೇ ಸೋರಿಸಿ ಮರಣಿಸಿದ್ದಾರೆ ಅಲ್ಲವೆ! ಹಾಗಿರುವಾಗ ಇವರಿಂದ ಯಾವ ಪ್ರಯೋಜನೆ ಇರುವುದಿಲ್ಲವಾ? ಯಾವಾಗಲೋ ಎರಡು ಸಾವಿರ ವರ್ಷಗಳ ಪೂರ್ವಕಾಲದಲ್ಲಿ ಮರಣಿಸಿದ ಯೇಸುವಿನಿಂದ ಈಗಲೂ ಕೂಡಾ ಪಾಪಗಳು ಹೋಗುತ್ತವೆ ಪಾಪಕ್ಷಮಾಪಣೆಗೇ ರಕ್ತ ಸೋರಿಸಿರುವುದೆಂದು ಅನ್ನುತ್ತಿದ್ದಾರಲ್ಲ! ಹಾಗಿರುವಾಗ ಪ್ರಸ್ತುತ ಈಗಲೇ ಮರಣಿಸಿದವರ ರಕ್ತದಿಂದ ನಮ್ಮ ಪಾಪ ಹೋಗುವುದಿಲ್ಲವಾ?**

**ಉ॥** ಯೇಸು ತನ್ನ ರಕ್ತದಿಂದ ನಿಮ್ಮ ಪಾಪಗಳು ಹೋಗುತ್ತವೆಂದು ಎಲ್ಲೂ ಹೇಳಲಿಲ್ಲ. ಒಂದು ಕಡೆ "**ನನ್ನ ನಿಬಂಧನ ರಕ್ತ**" ಯೆಂದು ಉಚ್ಚರಿಸಿದ್ದಾನೆ. ಆ ಮಾತು ಜ್ಞಾನವನ್ನು ಕುರಿತು ಹೇಳಿದ ಮಾತೇ ಹೊರತು ಬೇರೆ ಅಲ್ಲ. ಯೇಸು ವಿಷಯದಲ್ಲಿ ಕ್ರೈಸ್ತವರೆಲ್ಲರೂ ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ. ಇನ್ನು ಮಹಾತ್ಮಾಗಾಂಧೀಯವರಾಗಲೀ, ರಾಜೀವ್‌ಗಾಂಧೀಯವರಾಗಲೀ ಅವರ ಕರ್ಮದಿಂದ ಗ್ರಹಚಾರ ಚೆನ್ನಾಗಿಲ್ಲದೆ ಹೋಗಿದ್ದಾರೆ. ಅವರನ್ನು ಸಾಯಿಸಿದ ಪಾಪ ಸಾಯಿಸಿದವರಿಗೆ ಬಂದಿರುತ್ತದೆ. ಅಷ್ಟೇ ಹೊರತು ಪಾಪ ಹೋಗಿರುವುದಿಲ್ಲ. ಇಬ್ಬರೂ ಕರ್ಮದಿಂದಲೇ ಮರಣಿಸಿದ್ದಾರೆ ಎನ್ನುವುದಕ್ಕೆ ಪೂರ್ತಿ ಆಧಾರಗಳಿವೆ. ಇನ್ನೂ ಮುಖ್ಯವಾಗಿ ಗಮನಿಸಬೇಕಾದ ವಿಷಯವೇನೆಂದರೆ! ಇಬ್ಬರೂ ಕುಜಗ್ರಹವೊಂದರ ಪ್ರಥಮ ಶ್ರೇಣಿ ಆಯುಧದಿಂದಲೇ ಮರಣಿಸುವುದು ನಡೆದಿದೆ. ರಾಜೀವ್‌ಗಾಂಧೀಯವರ ಜಾತಕಚಕ್ರವನ್ನು ನೋಡಿದ್ದೀರ. ಮಹಾತ್ಮಾಗಾಂಧೀ ಯವರ ಜಾತಕ ಬಹುಶಃ ಯಾರಿಗೂ ತಿಳಿದಿಲ್ಲವೆಂದುಕೊಳ್ಳುತ್ತೇನೆ. ಈಗ ಮರಣವನ್ನು ಕುರಿತಾದ ಕರ್ಮ ಸಮಸ್ಯೆ ಬಂದಿದೆ ಆದ್ದರಿಂದ, ಒಂದು ಬಾರಿ ಎರಡು ಜಾತಕಗಳನ್ನು ಪರಿಶೀಲಿಸಿ ನೋಡೋಣ.

| | | | |
|---|---|---|---|
| ಭೂಮಿ 6 | 7 | ಗುರು 8 | 9 |
| 5 | ತುಲಾ ಲಗ್ನ | | ರಾಹು ಚಿತ್ರ 10 |
| ಕೇತು ಮಿತ್ರ 4 | | | ಚಂದ್ರ 11 |
| 3 | ಶನಿ 2 | ಬುಧ,ಶುಕ್ರ 1 ಕುಜ ಲಗ್ನ | ರವಿ 12 |

ಮಹಾತ್ಮಾಗಾಂಧೀಯವರ
ಜಾತಕ ಕುಂಡಲಿ
02–10–1869 ಜನನ

1) ಆಯು ಸ್ಥಾನವಾದ ಎಂಟನೆಯ ಸ್ಥಾನವನ್ನು ಕುಜನು ತಾಕಿದ್ದಾನೆ.
2) ಆಯುಷ್ಯಕ್ಕೆ ಅಧಿಪತಿಯಾದ ಶನಿಯನ್ನು ಗುರುವು ತಾಕುತ್ತಿದ್ದಾನೆ.

ಮುಖ್ಯವಾಗಿ ಈ ಎರಡು ವಿಷಯಗಳನ್ನು ಮಹಾತ್ಮಾಗಾಂಧೀಯವರ ಜಾತಕದಿಂದ ನೋಡಿದ್ದೇವೆ. ಕುಜನು ಎಂಟನೆಯ ಸ್ಥಾನವನ್ನು ನೋಡುವುದರಿಂದ ಅಕಾಲಮರಣವನ್ನೇ ಉಂಟುಮಾಡುತ್ತದೆಂದು ಹೇಳಬಹುದು. ಗುರುವು ತನಗೆ ಜೊತೆಯಾಗಿ ಇನ್ನೂ ಒಂದು ಎರಡು ಗ್ರಹಗಳು ಬಂದಾಗ ಆಯುಷ್ಷನ್ನು ಬಲವಂತವಾಗಿ ಎಳೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತದೆ.

| | | | |
|---|---|---|---|
| 6 | 7 | 8 | ಭೂಮಿ 9 |
| ಶನಿ 5 | ತುಲಾ ಲಗ್ನ | | ಕೇತು ಮಿತ್ರ 10 |
| ರಾಹು ಚಿತ್ರ 4 | | | 11 |
| ಗುರು ರವಿ ಚಂದ್ರ ಬುಧ ಶುಕ್ರ 3 | ಕುಜ 2 | ಲಗ್ನ 1 | 12 |

ಜನನ 20–08–1944
ರಾಜೀವ್‌ಗಾಂಧೀಯವರ
ಜನ್ಮಲಗ್ನ ಕುಂಡಲಿ

1) ಆಯುಸ್ಥಾನವಾದ ಎಂಟನೆಯ ಸ್ಥಾನವನ್ನು ಕುಜನು ತಾಕಿದ್ದಾನೆ.

2) ಆಯುಷ್ಯಕ್ಕೆ ಅಧಿಪತಿಯಾದ ಶನಿಯನ್ನು ಕುಜನು ತಾಕುತ್ತಿದ್ದಾನೆ.

ರಾಜೀವ್‌ಗಾಂಧೀಯವರ ಜನನದಲ್ಲಿ ಕೂಡಾ ಮಹಾತ್ಮಾಗಾಂಧೀಯವರ ಜನನದಲ್ಲಿ ಇದ್ದಂತೇ ಇದೆ. ಆಯುಸ್ಥಾನವನ್ನು ಕುಜನು ಮುಟ್ಟಿಕೊಳ್ಳುವುದೂ, ಆಯುವಿಗೆ ಅಧಿಪತಿಯಾದ ಶನಿಯನ್ನು ಶತ್ರುವಾದ ಕುಜನು ನೋಡುವುದೂ ಇದೆ.

ಈ ಮೂರು ಜಾತಕಗಳಲ್ಲಿಯೂ ಆಯುಸ್ಥಾನವನ್ನು ರಕ್ತಪಿಪಾಸಿಯಾದ ಕುಜಗ್ರಹವೇ ತನ್ನ ಕೈಯಿಂದ ನೋಡುವುದು ವಿಶೇಷ. ಎರಡನೆ ಸೂತ್ರದಲ್ಲಿ ಮೂರು ಜಾತಕಗಳಲ್ಲಿಯೂ ಆಯುಷ್ಯನ್ನು ಕೊಡುವ ಶನಿಯನ್ನು ಗಾಂಧೀಯವರ ಜಾತಕದಲ್ಲಿ ಗುರುವು ನೋಡಿದಾಗ, ಉಳಿದ ರಾಜೀವ್, ಜಗನ್ ಜಾತಕಗಳಲ್ಲಿ ಕುಜನೇ ತಾಕಿದ್ದಾನೆ.

| | | | |
|---|---|---|---|
| 7 | 8 | ಶನಿ 9 | ಭೂಮಿ ಚಂದ್ರ ಕೇತು ಮಿತ್ರ 10 |
| 6 | ಕನ್ಯಾಲಗ್ನ | | 11 |
| 5 | | | 12 |
| ರಾಹು ಗುರು ರವಿ ಚಿತ್ರ 4 | ಶುಕ್ರ ಬುಧ 3 | ಕುಜ 2 | ಲಗ್ನ 1 |

ಗಾಂಧೀ, ರಾಜೀವ್ ಗಾಂಧೀ ಇಬ್ಬರ ಜಾತಕಗಳಲ್ಲಿ ಇದ್ದಂತೆ ಮತ್ತೊಂದು ಜಾತಕವೂ ಸಹ ಇದ್ದಂತೆ ಗಮನಿಸಬಹುದು. ಇದು ಉದಾಹರಣೆಗೆ ತೋರಿಸುವ ಜಾತಕವೆಂದು ತಿಳಿಯಬೇಕು.

1) ಆಯುಸ್ಥಾನವಾದ ಎಂಟನೆಯ ಸ್ಥಾನವನ್ನು ಕುಜಗ್ರಹ ತಾಕಿದೆ

2) ಆಯುಷ್ಯಕ್ಕೆ ಅಧಿಪತಿಯಾದ ಶನಿಯನ್ನು ಕುಜನು ತಾಕುತ್ತಿದ್ದಾನೆ.

ಗಾಂಧೀ, ರಾಜೀವ್‌ಗಾಂಧೀ ಇಬ್ಬರ ಜಾತಕಗಳಲ್ಲಿ ಆಯುಷ್ಯ ವಿಷಯ ದಲ್ಲಿ ಒಂದೇ ವಿಧವಾಗಿವೆ. ಆದ್ದರಿಂದ ಈ ಮೂವರ ಮರಣಗಳು ಒಂದೇ ವಿಧವಾಗಿ ನಡೆದಿವೆ.

**29) ಒಬ್ಬ ವ್ಯಕ್ತಿಗೆ ನಾಗರಹಾವು ಕಚ್ಚಿದಾಗ ಒಬ್ಬ ವೈದ್ಯನ ಹತ್ತಿರಕ್ಕೆ ಕರೆದುಕೊಂಡು ಹೋಗಿ ಚಿಕಿತ್ಸೆ ಮಾಡಿಸಿದ್ದೇವೆ. ಆತನು ವಿಷದಿಂದ ಹೊರಬಿದ್ದು ಬದುಕಿದ್ದಾನೆ. ನಂತರ ಹತ್ತು ದಿನಗಳಿಗೆ ಮತ್ತೊಬ್ಬ ವ್ಯಕ್ತಿ ನಾಗರಹಾವು ಕಡಿತಕ್ಕೆ ಗುರಿಯಾಗಿದ್ದಾನೆ. ಆಗ ಆತನನ್ನು ವೈದ್ಯನ ಹತ್ತಿರಕ್ಕೆ ತೆಗೆದುಕೊಂಡು ಹೋಗುವುದು ನಡೆದಿದೆ. ವೈದ್ಯನು ಎಲ್ಲರಿಗೂ ಮಾಡಿದಂತೇ ಶ್ರದ್ಧೆಯಿಂದ ಚಿಕಿತ್ಸೆ ಮಾಡಿದ್ದಾನೆ. ಆದರೂ ಹಾವು ಕಡಿತಕ್ಕೆ ಗುರಿಯಾದ ಮನುಷ್ಯ ಬದುಕಲಿಲ್ಲ. ಒಬ್ಬನೇ ವೈದ್ಯನು, ಅದೇ ಚಿಕಿತ್ಸೆ ಒಬ್ಬರಿಗೆ ಚೆನ್ನಾಗಾಗುವುದು ಮತ್ತೊಬ್ಬರಿಗೆ ಚೆನ್ನಾಗಾಗದೆ ಹೋಗುವುದಕ್ಕೆ ಕಾರಣವೇನಿರುತ್ತದೆ. ಇದಕ್ಕೂ ಸಹ ಗ್ರಹಚಾರವಿರುತ್ತದಾ?**

ಉ॥ ಪ್ರಪಂಚದಲ್ಲಿ ಪ್ರತಿಯೊಂದಕ್ಕೂ ಗ್ರಹಚಾರವೇ ಕಾರಣ. ಗ್ರಹಚಾರವಿಲ್ಲದೆ ಏನೂ ನಡೆಯುವುದಿಲ್ಲ. ಪ್ರಪಂಚದಲ್ಲಿ ಹಾವುಗಳಿಗು, ಅವುಗಳ ವಿಷಕ್ಕು ಅಧಿಪತಿ ರಾಹುಗ್ರಹ. ರಾಹುಗ್ರಹ ವಿರುದ್ಧತೆ ಇರುವವನಿಗೆ ಇರುವ ಸ್ಥಾನವನ್ನನುಸರಿಸಿ ಗ್ರಹಬಲವನ್ನನುಸರಿಸಿ ಹಾವು ಕಚ್ಚುವುದು ಸಂಭವಿಸುತ್ತದೆ. ರಾಹುವಿರುವ ಕಡೆ ಶುಭಗ್ರಹಗಳು ಎರಡಿದ್ದರೂ ಒಂದಿದ್ದರೂ ಆತನು ಚಿಕಿತ್ಸೆಯಿಂದ ಬದುಕಬಲ್ಲನು. ರಾಹುಗ್ರಹ ಆಯುಸ್ಥಾನವಾದ ಎಂಟನೆ ಸ್ಥಾನದಲ್ಲಿ ಇದ್ದರೂ, ರಾಹು ಗ್ರಹದೊಂದಿಗೆ ಆಯು ಕಾರಕನಾದ ಶನಿ ಕೂಡ ಇದ್ದರೇ ಅಂತಹವನು ಕಡಿತದ ನಂತರ ಬದುಕುವುದು ಕಷ್ಟ. ರಾಹುಗ್ರಹ ಕೆಲವರಿಗೆ ಅನುಕೂಲ ಗ್ರಹವಾಗಿರುವುದರಿಂದ ಹಾವುಗಳು ಅವರನ್ನು ಏನೂ ಮಾಡುವುದಿಲ್ಲ. ಕಚ್ಚುವುದಕ್ಕು ಹೋಗುವುದಿಲ್ಲ. ರಾಹು ಅನುಕೂಲವಾಗಿರುವವನ ಮನೆಯ ಸುತ್ತಾ ಹಾವುಗಳ ಸಂಚಾರವಿದ್ದರೂ ಅವುಗಳಿಂದ ಎಂತಹ ತೊಂದರೆಗಳು ಇರುವುದಿಲ್ಲ. ಸೊಳ್ಳೆಗಳು, ಇರುವೆಗಳು, ಕ್ರಿಮಿ ಕೀಟಗಳು, ಸರ್ಪಗಳು ಎಲ್ಲವೂ ರಾಹುವಿನ ವೊಂದು ಅಧೀನದಲ್ಲಿ ಇರುತ್ತವೆ. ರಾಹುವಿನ ಅನುಕೂಲವಿಲ್ಲದೆ

ಹೋದರೇ ಮನೆಯಲ್ಲಿ ಇರುವೆಗಳಿಂದಲೂ ಸಹ ಕಷ್ಟಗಳು ಬೀಳಬೇಕಾಗಿ ಬರುತ್ತದೆ. ಇದೆಲ್ಲವೂ ಗ್ರಹಚಾರವನ್ನನುಸರಿಸಿಯೇ ನಡೆಯುತ್ತಿರುತ್ತದೆ.

**30) ಪ್ರಪಂಚದಲ್ಲಿ ಪ್ರತಿಯೊಂದೂ ಗ್ರಹಗಳ ಅಧೀನದಲ್ಲಿ ಇರುತ್ತದೆಂದು ಹೇಳುತ್ತಿದ್ದೀರಲ್ಲ! ಆದರೇ ಜ್ಞಾನವೆನ್ನುವುದು ಯಾರ ಅಧೀನದಲ್ಲಿ ಇರುತ್ತದೆ?**

**ಉ॥** ಜ್ಞಾನ ಎಂದರೇ, ಎರಡು ವಿಧಗಳ ಜ್ಞಾನಗಳಿವೆ. ಒಂದು ಪ್ರಪಂಚ ಜ್ಞಾನವಿದೆ. ಎರಡನೆಯದು ಪರಮಾತ್ಮ ಜ್ಞಾನವಿದೆ. ಅವುಗಳಲ್ಲಿ ಯಾವ ಜ್ಞಾನವನ್ನು ಉದ್ದೇಶಿಸಿ ಕೇಳುತ್ತಿದ್ದೀರೋ ಹೇಳಿರಿ.

**31) ನಾವು ಕೇಳುತ್ತಿರುವುದು ಎರಡು ಜ್ಞಾನಗಳನ್ನು ಕುರಿತು?**

**ಉ॥** ಒಂದು ಚಾಕುವಿಗೆ ಹಿಡಿಭಾಗ ಕೊನೆಭಾಗ ಎಂದು ಎರಡು ಭಾಗಗಳಾಗಿ ಇರುತ್ತದೆ. ಕೊನೆ ಭಾಗ ಮಾತ್ರ ಇತರರನ್ನು ಇರಿಯಬಲ್ಲದು. ಹಿಡಿ ಭಾಗ ಯಾರನ್ನೂ ಇರಿದು ಸಾಯಿಸುವುದಿಲ್ಲ. ಚಾಕು ಎನ್ನುವುದು ಒಂದೇ ಆದರೂ ಹಿಡಿಭಾಗ ಕೊನೆಭಾಗ ಒಂದೇ ಚಾಕುವಿನೊಳಗೆ ಇರುವಂತೆ ಜ್ಞಾನ ಎನ್ನುವ ಹೆಸರು ಒಂದೇ ಆದರೂ ಅದರಲ್ಲಿ ಕರ್ಮ ಇರುವುದೂ, ಕರ್ಮ ಇಲ್ಲದಿರುವುದೂ ಎಂದು ಎರಡು ವಿಧಗಳ ಜ್ಞಾನಗಳು ಇವೆ. ಒಂದು ಪ್ರಪಂಚ ಜ್ಞಾನ, ಅದು ಕರ್ಮ ಆಧೀನದಲ್ಲಿ ಇರುತ್ತದೆ. ಎರಡನೆಯದು ಪರಮಾತ್ಮ ಜ್ಞಾನ. ಇದು ಕರ್ಮ ಆಧೀನದಲ್ಲಿ ಇರುವುದಿಲ್ಲ. ಪರಮಾತ್ಮ ಜ್ಞಾನವೆಲ್ಲಾ ದೇವರ ಆಧೀನದಲ್ಲಿ ಇರುತ್ತದೆ. ಪ್ರಪಂಚ ಜ್ಞಾನ ಕರ್ಮ ಆಧೀನದಲ್ಲಿದ್ದು ಗ್ರಹಚಾರದ ಮೂಲಕ ಲಭಿಸುತ್ತದೆ. ದೇವರ ಜ್ಞಾನ ದೇವರ ಆಧೀನದಲ್ಲಿದ್ದು ದೇವರಿಂದಲೇ ಲಭಿಸಬಲ್ಲದು.

**32) ಮಕ್ಕಳು ಇಲ್ಲದ ಸ್ತ್ರೀಯರು, ನನಗೆ ಸಂತತಿ ಇಲ್ಲ ಭವಿಷ್ಯತ್ತಿನಲ್ಲಿ ಮಕ್ಕಳು ಹುಟ್ಟುತ್ತಾರಾ ಎಂದು ಕೇಳಿದರೇ ಜ್ಯೋತಿಷ್ಯದ ಪ್ರಕಾರ ಹೇಗೆ ಹೇಳಬೇಕು?**

**ಉ॥** ಯಾರು ಸಂತತಿಯನ್ನು ಕುರಿತು ಕೇಳಿದ್ದಾರೋ ಅವರ ಜಾತಕ

ಕುಂಡಲಿ ನೋಡಿ ಅದರಿಂದ ಉತ್ತರ ಹೇಳಬೇಕಾಗಿರುತ್ತದೆ. ಜಾತಕ ಲಗ್ನದಲ್ಲಿ ಒಂದು ವಿಷಯವನ್ನು ಕುರಿತು ನೋಡುವಾಗ ಆ ವಿಷಯಕ್ಕೆ ಸಂಬಂಧಿಸಿದ ಸ್ಥಾನವನ್ನೂ, ಆ ವಿಷಯಕ್ಕೆ ಸಂಬಂಧಿಸಿದ ಗ್ರಹವನ್ನು ಕುರಿತು ನೋಡಬೇ ಕಾಗಿರುತ್ತದೆ. ಸ್ಥಾನ ಬಲವನ್ನು ಗ್ರಹಬಲವನ್ನು ಎರಡನ್ನೂ ಸಮನ್ವಯ ಪಡಿಸಿಕೊಂಡು ನೋಡಿದಾಗ ಸರಿಯಾದ ಫಲಿತವನ್ನು ತೆಗೆದು ಹೇಳಬಲ್ಲೆವು. ಈಗ ಕೇಳಿದ ವಿಷಯ ಸಂತಾನಕ್ಕೆ ಸಂಬಂಧಿಸಿರುವುದು, ಆದ್ದರಿಂದ ಸಂತತಿಯವೊಂದು ವಿಷಯ ಕರ್ಮಚಕ್ರದಲ್ಲಿ ಯಾವ ಸ್ಥಾನದಲ್ಲಿ ಇರುತ್ತದೆಂದು ನೋಡಿದರೆ ಅದು ಐದನೆ ಸ್ಥಾನವೆಂದು ತಿಳಿಯುತ್ತಿದೆ. ಐದನೆ ಸ್ಥಾನದಲ್ಲಿ ಪುಣ್ಯ ಇರುತ್ತದೆ. ಆ ಪುಣ್ಯದಲ್ಲಿ ಪ್ರಪಂಚಜ್ಞಾನ, ವಿಷಯಗ್ರಾಹಿತಶಕ್ತಿ, ಸಂತಾನ ಮುಂತಾದ ವಿಷಯಗಳೆಲ್ಲವೂ ರಾಶಿಗಳಾಗಿ (ಕುಪ್ಪೆಗಳಾಗಿ) ಇರುತ್ತವೆ. ಆದ್ದರಿಂದ ಐದನೆ ಸ್ಥಾನದಲ್ಲಿ ಸಂತಾನಕ್ಕೆ ಸಂಬಂಧಿಸಿದ ವಿಷಯವನ್ನು ನೋಡ ಬೇಕಾಗಿರುತ್ತದೆ. ಒಂದು ಸ್ಥಾನವನ್ನನುಸರಿಸಿ, ಎರಡು ಗ್ರಹವನ್ನನುಸರಿಸಿ ನೋಡಬೇಕು. ಸಂತಾನಕ್ಕೆ ಸಂಬಂಧಿಸಿದ ಗ್ರಹಗಳು ಎರಡು ಇವೆ. ಅದರಲ್ಲಿ ಒಂದು ಚಂದ್ರನು, ಎರಡನೆಯದು ಗುರುವು. ಗಂಡು ಮಕ್ಕಳನ್ನು ಕುರಿತು ನೋಡಬೇಕಾಗಿ ಬಂದಾಗ ಗುರುವನ್ನು ನೋಡಿ ಹೇಳಬೇಕು. ಕೇವಲ ಸಂತಾನ ವನ್ನು ಕುರಿತು ಕೇಳುವಾಗ ಚಂದ್ರನನ್ನು ನೋಡಿ ಹೇಳಬೇಕು. ಐದನೆ ಸ್ಥಾನದಲ್ಲಿ ಅಶುಭಗ್ರಹಗಳಿದ್ದರೂ, ಸಂತಾನ ಕಾರಕರಾದ ಚಂದ್ರನು ಅಶುಭಸ್ಥಾನ ದಲ್ಲಿದ್ದರೂ ಅಶುಭಗ್ರಹಗಳಿಂದ ಬೆರೆತಿದ್ದರೂ ಅವರ ಸಂತಾನವನ್ನು ಅಶುಭಗ್ರಹಗಳು ಸೆಳೆದುಕೊಂಡು ಸಂತಾನ ಇಲ್ಲದಂತೆ ಮಾಡುವರು. ಗುರುವಾಗಲೀ, ಚಂದ್ರನಾಗಲೀ ಒಳ್ಳೆಯ ಸ್ಥಾನದಲ್ಲಿದ್ದರೂ ಐದನೆ ಸ್ಥಾನದಲ್ಲಿ ಶತ್ರುಗ್ರಹಗಳು ಇಲ್ಲದೆ ಶುಭಗ್ರಹವಿದ್ದರೂ, ಅವರಿಗೆ ತಪ್ಪದೆ ಸಂತಾನ ಶೀಘ್ರದಲ್ಲಿ ಉಂಟಾ ಗುತ್ತದೆಂದು ತಿಳಿಯುತ್ತಿದೆ.

**33) ಈಗ ಪ್ರಪಂಚದಲ್ಲಿಯೇ ಇಸ್ಲಾಮ್ ಸಮಾಜಕ್ಕೆ ಪೂಜ್ಯ ಭಾವ, ಗೌರವ ಭಾವ ಹೊಂದಿರುವ ಮುಹಮ್ಮದ್ ಪ್ರವಕ್ತರವರ ಜಾತಕವನ್ನು ಕೊಡುತ್ತೇವೆ. ಆ ಜಾತಕದಲ್ಲಿ ವಿಶೇಷತೆ ಏನು ಇದೆಯೋ ತಿಳಿಸಬಲ್ಲಿರಾ?**

| | | | |
|---|---|---|---|
| 2 | ಬುಧ ಸೂರ್ಯ 3 | ರಾಹು ಚಿತ್ರ ಶುಕ್ರ 4 | 5 |
| ಲಗ್ನ 1 | ಕುಂಭ ಲಗ್ನ | | ಕುಜ 6 |
| 12 | | | ಚಂದ್ರ 7 |
| 11 | ಶನಿ ಮಿತ್ರ ಕೇತು 10 | ಗುರು ಭೂಮಿ 9 | 8 |

ಜನನ 20–04–571
ಹಗಲು 1–10 ನಿ॥
ಶುಕ್ರದಶಾ ಶೇಷ
0–3 ತಿಂಗಳ,
15 ದಿನಗಳು

**ಉ॥** ಈತನವೊಂದು ವಿಶಿಷ್ಠತೆ ಪೂರ್ತಿ ಪ್ರಪಂಚಕ್ಕೇ ತಿಳಿಯುತ್ತದೆ. ಈತನು ಪ್ರಪಂಚದಲ್ಲಿ ಒಂದು ಹೊಸ ಸಮಾಜವನ್ನೇ ತಯಾರು ಮಾಡಿ ಅದು ಶಾಶ್ವತವಾಗಿ ಇರುವಂತೆ ಮಾಡಿದ್ದಾನೆ. ಆದ್ದರಿಂದ ಮುಹಮ್ಮದ್ ಪ್ರವಕ್ತರ ಹೆಸರು ತಿಳಿಯದವರು ಯಾರೂ ಇರುವುದಿಲ್ಲ. ನೀವು ಏಕೆ ಪ್ರವಕ್ತರ ಜಾತಕವನ್ನು ತೋರಿಸಿ ಕೇಳುತ್ತಿದ್ದೀರೋ ನೀವು ಹೇಳದಿದ್ದರೂ ನನಗೆ ಅರ್ಥವಾಗಿದೆ. ನಿಮ್ಮ ಉದ್ದೇಶದಲ್ಲಿ ಜ್ಯೋತಿಷ್ಯವು ಹಿಂದೂ ಮತಸ್ಥರಿಗೆ ಹೊರತುಪಡಿಸಿ ಇತರ ಮತದವರಿಗೆ ವರ್ತಿಸುವುದಿಲ್ಲವೆನ್ನುವ ಭಾವವಿದೆ. ಆದ್ದರಿಂದ ನಾವು ಏನು ಹೇಳುತ್ತೇವೋಯೆಂದು ಕೇಳುತ್ತಿದ್ದೀರ. ಸರಿ ನಿಮ್ಮಂತಹ ಭಾವವೇ ಇತರರಿಗೂ ಸಹ ಎಷ್ಟೋ ಜನರಿಗೆ ಇರಬಹುದು. ನಿಮ್ಮ ಅನುಮಾನ ಯಾರಿಗೂ ಇಲ್ಲದಂತಿರುವುದಕ್ಕೆ ನಿಮ್ಮ ಮಾತಿಗೆ ಏನು ಹೇಳುತ್ತಿದ್ದೇವೆಂದರೆ! ಪ್ರಪಂಚದಲ್ಲಿ ಮತ ಎನ್ನುವುದು ಮನುಷ್ಯರು ಇಟ್ಟುಕೊಂಡಿರುವುದೇ ಹೊರತು, ದೇವರು ಇಟ್ಟಿರುವುದಲ್ಲ. ದೇವರ ದೃಷ್ಠಿಯಲ್ಲಿ ಮನುಷ್ಯರೆಲ್ಲಾ ಸಮಾನವೇ! ಆದ್ದರಿಂದ ಜ್ಞಾನದಿಂದ ನೋಡಿದರೇ, ಜ್ಞಾನದಿಂದ ಹುಟ್ಟಿ ಬಂದಿರುವ ಜ್ಯೋತಿಶಾಸ್ತ್ರವಾದ ಜ್ಯೋತಿಷ್ಯ ಶಾಸ್ತ್ರ ಪ್ರಪಂಚದಲ್ಲಿ ಎಲ್ಲ ಮತದವರಿಗೂ, ಎಲ್ಲ ಸಮಾಜದವರಿಗೂ ಸಮಾನವಾಗಿ ವರ್ತಿಸುತ್ತದೆ. ಪ್ರಪಂಚದಲ್ಲಿ ಹುಟ್ಟಿದ ಪ್ರತಿ ಜೀವರಾಶೀ, ಪ್ರತಿ ಮನುಷ್ಯ ಗ್ರಹಚಾರದ ಪ್ರಕಾರವೇ ಕದಲಿಸಲ್ಪಡುತ್ತಿದ್ದಾರೆ. ಆಡಿಸಲ್ಪಡುತ್ತಿದ್ದಾರೆ. ಆದ್ದರಿಂದ ಜ್ಯೋತಿಷ್ಯ ಒಬ್ಬ ಹಿಂದೂಗಳಿಗೇ ಅಂದುಕೊಳ್ಳುವುದು ತಪ್ಪು.

ಈಗ ನೀವು ಕೇಳಿದ ಪ್ರಶ್ನೆ ಹತ್ತಿರಕ್ಕೆ ಬರೋಣ. ನೀವು ಈ ಜಾತಕದಲ್ಲಿನ ವಿಶಿಷ್ಠತೆಯನ್ನು ಕುರಿತು ಕೇಳಿದ್ದೀರ. ಪ್ರಪಂಚದಲ್ಲಿ ಯಾರಿಗೆ ಯಾವುದು ವಿಶೇಷವಾಗಿದ್ದರೂ, ಜ್ಞಾನಿಗಳ ದೃಷ್ಠಿಯಲ್ಲಿ ದೇವರ ಜ್ಞಾನವೇ ವಿಶೇಷವಾಗಿ ಇರುತ್ತದೆ. ಆದ್ದರಿಂದ ಪ್ರವಕ್ತರ ಜಾತಕದಲ್ಲಿರುವ ಮುಖ್ಯ ಸಾರಾಂಶ ವಾದುದನ್ನು ಕುರಿತು ಹೇಳಿಕೊಳ್ಳೋಣ. ಮನುಷ್ಯ ಕೆಲವು ದಿನಗಳು ಬದುಕಿ ಭೌತಿಕವಾಗಿ ಮರಣಿಸಿದರೂ, ಆತನನ್ನು ಬಹಳ ಕಾಲ ಮನುಷ್ಯರ ಮಧ್ಯೆ ಬದುಕುವಂತೆ ಮಾಡುವುದು ಆತನ ಕೀರ್ತಿ ಪ್ರತಿಷ್ಠೆಗಳೆಂದು ಹೇಳಬಹುದು. ಒಂದು ದೈವಜ್ಞಾನ ಹೊರತುಪಡಿಸಿ ಪ್ರತಿಯೊಂದೂ ಜಾತಕದಲ್ಲಿ ಇರುತ್ತದೆ. ಕೀರ್ತಿ ಪ್ರತಿಷ್ಠೆಗಳು ಯಾರ ಜಾತಕದಲ್ಲಾದರೂ ಹತ್ತನೆಯ ಸ್ಥಾನದಲ್ಲಿ ಇರುತ್ತವೆ. 14 ನೂರು ವರ್ಷಗಳ ಪೂರ್ವದಲ್ಲಿ ಮರಣಿಸಿದ ಮುಹಮ್ಮದ್ ಪ್ರವಕ್ತರು ಇಂದಿಗೂ ಮನುಷ್ಯರ ಮಧ್ಯೆ ಜ್ಞಾಪಕವಾಗಿ ಇದ್ದಾನೆನ್ನುವುದಕ್ಕೆ ಕಾರಣ ಆತನ ಜೀವನದಲ್ಲಿ ಆತನು ಸಾಧಿಸಿಕೊಂಡ ಕೀರ್ತಿಯೇಯೆಂದು ಹೇಳಬಹುದು. ಆತನ ಕೀರ್ತಿ ಎಂತಾದ್ದೆಂದು ನೋಡಿದರೆ ಅದು ಹತ್ತನೆ ಸ್ಥಾನದಲ್ಲಿ ಇರುತ್ತದೆಂದುಕೊಂಡಿದ್ದೇವೆ ಅಲ್ಲವೆ!

ಪ್ರವಕ್ತರ ಜಾತಕದಲ್ಲಿ ಹತ್ತನೆಯ ಸ್ಥಾನದಲ್ಲಿ ಏನಿದೆಯೋ ಈಗ ಗಮನಿಸೋಣ. ಪ್ರವಕ್ತರ ಜಾತಕದಲ್ಲಿ ಹತ್ತನೆಯಸ್ಥಾನ ವೃಶ್ಚಿಕಲಗ್ನ ಆಗುತ್ತಿದೆ. ಹತ್ತನೆಯ ಸ್ಥಾನದಲ್ಲಿ ಪ್ರವಕ್ತರ ಜನನ ಸಮಯಕ್ಕೆ ಶನಿ, ಕೇತು ಗ್ರಹಗಳು ಎರಡು ಇವೆ. ಈ ಎರಡು ಗ್ರಹಗಳು ಬಹಳ ಜನರಿಗೆ ತಿಳಿದಿರುವವೇ. ಜ್ಯೋತಿಷ್ಯರಾದವರಿಗೆಲ್ಲಾ ಸುಪರಿಚಯ ಗ್ರಹಗಳೇ. ಆದರೇ ಅದೇ ದಶಮ ಸ್ಥಾನದಲ್ಲಿ ಮಿತ್ರ ಗ್ರಹ ಮತ್ತೊಂದು ಇದೆ. ಮಿತ್ರಗ್ರಹ ಯಾರಿಗೂ ತಿಳಿದಿಲ್ಲ. ಯಾರಿಗೂ ತಿಳಿಯದ ಮಿತ್ರಗ್ರಹ ಪೂರ್ತಿ ಕತ್ತಲ ಗ್ರಹ. ಯಾರೂ ಅದನ್ನು ಗುರುತಿಸಲಾರರು. ಯಾವ ಪರಿಕರಗಳ ಮೂಲಕವಾದರೂ, ಯಾವ ರೇಡಿಯೇಷನ್ ಕಿರಣಗಳ ಮೂಲಕವಾದರೂ ಗುರುತಿಸಲ್ಪಡದ ಗ್ರಹ ಮಿತ್ರ ಗ್ರಹ. ಈದಿನ ಮುಹಮ್ಮದ್ ಪ್ರವಕ್ತರ ಹೆಸರು ಶಾಶ್ವತವಾಗಿ ಮನುಷ್ಯರ ಮಧ್ಯದಲ್ಲಿ ಇರುವುದಕ್ಕೆ ಕಾರಣ ಮಿತ್ರಗ್ರಹವೆಂದೇ ಹೇಳಬಹುದು. ರಾಹುವು ವಿಗ್ರಹಾರಾಧನೆ

ಭಕ್ತಿಯನ್ನು ಉಂಟುಮಾಡುವವನಾಗಿರುವಾಗ, ಕೇತುವು ನಿರಾಕಾರ ಭಕ್ತಿಯನ್ನುಂಟುಮಾಡುವುದಾಗಿ ಇದೆ. ಚೆನ್ನಾಗಿ ಜ್ಞಾಪಕವಿಟ್ಟುಕೊಳ್ಳಿ ನಾವು ಹೇಳುವುದು ನಿರಾಕಾರಭಕ್ತಿಯನ್ನೇ ಹೊರತು, ನಿರಾಕಾರ ಜ್ಞಾನವನ್ನಲ್ಲ. ಜ್ಞಾನ ಎಂದಿಗೂ ಗ್ರಹಗಳ ಆಧೀನದಲ್ಲಿ ಇರುವುದಿಲ್ಲ. ರಾಹುವಿನದ್ದು ಭಕ್ತಿಯೇ ರಾಹುವಿಗೆ ವಿರುದ್ಧವಾದ ಕೇತುವಿನದ್ದೂ ಭಕ್ತಿಯೇ. ರಾಹುವಿನದ್ದು ಸಾಕಾರ ಭಕ್ತಿಯಾದರೇ, ಕೇತುವಿನದ್ದು ನಿರಾಕಾರ ಭಕ್ತಿಯೆಂದು ಗುರುತಿಟ್ಟು ಕೊಳ್ಳಬೇಕು. ಕೇತು ಹತ್ತನೆಯ ಸ್ಥಾನದಲ್ಲಿರುವುದರಿಂದ, ಆತನ ಜೀವನ ವೃತ್ತಿ, ಪ್ರವೃತ್ತಿ ಎರಡೂ ನಿರಾಕಾರ ಭಕ್ತಿಯ ಮೇಲೆ ಸಾಗುವಂತೆ ಮಾಡಿದೆ. ನಿರಾಕಾರ ಭಕ್ತಿಯಲ್ಲಿರುವ ಪ್ರಾರ್ಥನೆ ಅವರ ಜೀವನದಲ್ಲಿ ಇರುತ್ತಿತ್ತು. ನಿರಾಕಾರ ಪ್ರಾರ್ಥನೆಯಾದ ನಮಾಜ್ ಈದಿನ ಮುಸ್ಲೀಮ್ ಸಮಾಜದಲ್ಲಿ ಪೂರ್ತಿಯಾಗಿ ಇದೆ. ಪ್ರವಕ್ತರು ಸ್ಥಾಪಿಸಿದ ಪ್ರಾರ್ಥನೆ ಇಂದಿಗೂ ಅಚ್ಚಳಿಯದೆ ಮುಸ್ಲೀಮ್‌ರಲ್ಲಿ ಬೇರೂರುವಂತೆ ಮಾಡಿರುವುದು ಮಿತ್ರಗ್ರಹ. ನಿರಾಕಾರ ಭಕ್ತಿಯನ್ನುಂಟು ಮಾಡಿರುವುದು ಕೇತುಗ್ರಹವಾದಾಗ, ಅದನ್ನೇ ಪ್ರವಕ್ತರ ಕೀರ್ತಿಗೆ ಆಧಾರವಾಗಿ ಎಲ್ಲರಲ್ಲಿ ನಿಲ್ಲಿಸಿರುವುದು ಮಿತ್ರಗ್ರಹ. ಸಾಕಾರ ಭಕ್ತಿಯಲ್ಲಿ ಹಿಂದೂಗಳು ಮತ್ತೆ ಕೆಲವರು ಮುಳುಗಿಹೋಗಿ ಸಾಕಾರ ಭಕ್ತಿಗೆ ಕೇಂದ್ರಗಳಾಗಿ ದೇವಾಲಯ ಗಳನ್ನು ನಿರ್ಮಿಸಿಕೊಂಡಾಗ, ಪ್ರವಕ್ತರು ಅದಕ್ಕೆ ಭಿನ್ನವಾಗಿ ಮುಸ್ಲೀಮ್ ಸಮಾಜವನ್ನು ತಯಾರು ಮಾಡಿ ನಿರಾಕಾರಭಕ್ತಿಯನ್ನು ಅವರಲ್ಲಿರಿಸಿ, ನಿರಾಕಾರ ಭಕ್ತಿಗೆ ಕೇಂದ್ರಗಳಾಗಿ ಪ್ರಾರ್ಥನಾಮಂದಿರಗಳಾದ ಮಸ್ಜೀದ್‌ಗಳನ್ನು ನಿರ್ಮಿಸಿದ್ದಾನೆ. ಆದಿನ ಪ್ರವಕ್ತರು ಪ್ರತ್ಯೇಕ ಸಮಾಜವನ್ನು (ನಿರಾಕಾರಭಕ್ತಿ ಸಮಾಜವನ್ನು) ಸ್ಥಾಪಿಸುವುದಕ್ಕೆ ಕಾರಣ ಕೇತು ಗ್ರಹವಾದಾಗ, ಆತನ ಕೀರ್ತಿಯನ್ನು ಸದಾಕಾಲ ಇರುವಂತೆ ಮಿತ್ರಗ್ರಹವು ಮುಸ್ಲೀಮ್ ಸಮಾಜವು ಒಟ್ಟಾರೆ ಪ್ರವಕ್ತರನ್ನು, ಆತನು ಏರ್ಪಡಿಸಿದ ವಿಧಾನವನ್ನು ಮರೆತುಹೋಗದೆ ಆಚರಿಸುವಂತೆ ಮಾಡಿದೆ. ಪ್ರವಕ್ತರ ಜೀವನದಲ್ಲಿ ಮುಖ್ಯವಾದ ವಿಶಿಷ್ಟತೆ ಅದೇಯೆಂದು ನಾವು ಹೇಳುತ್ತಿದ್ದೇವೆ.

**34) ಜ್ಯೋತಿಷ್ಯವು ಗ್ರಹಚಾರ, ದಶಾಚಾರ ಎಂದು ಎರಡು ವಿಧಗಳಾಗಿ**

**ಇದೆಯಲ್ಲವೆ! ಜ್ಯೋತಿಷ್ಯವು ಎರಡು ವಿಧಗಳಾಗಿರುವಾಗ, ಅದನ್ನು ಹೇಳುವ ಜ್ಯೋತಿಷ್ಯರು ಒಂದೇ ವಿಧವಾಗಿದ್ದಾರಲ್ಲ! ಇದಕ್ಕೆ ನೀವೇನನ್ನುತ್ತೀರಾ.**

**ಉ॥** ಜ್ಯೋತಿಷ್ಯವು ಎರಡು ವಿಧಗಳಾಗಿರುವುದು ವಾಸ್ತವ. ಆದರೇ ಜ್ಯೋತಿಷ್ಯರು ಸಹ ಎರಡು ವಿಧಗಳಾಗಿ ಇರಬೇಕು. ಆದರೆ ಎಲ್ಲರಿಗೂ ಒಂದೇ ವಿಧದ ಜ್ಯೋತಿಷ್ಯರು ಕಾಣಿಸುತ್ತಿದ್ದಾರೆ. ಪಂಚಾಂಗವನ್ನು ತೆಗೆದುಕೊಂಡು, ತಿಥಿ, ವಾರ, ನಕ್ಷತ್ರಗಳ ಆಧಾರದಿಂದ ಹೇಳುವ ಜ್ಯೋತಿಷ್ಯರೆಲ್ಲರೂ ಒಂದೇ ವಿಧದ ಜ್ಯೋತಿಷ್ಯರಾಗುತ್ತಾರೆ. ಅಂತಹ ಮೊದಲ ರೀತಿಯ ಜ್ಯೋತಿಷ್ಯರೇ ಎಲ್ಲಾದರೂ ಕಾಣಿಸುತ್ತಿರುವರು. ಎರಡನೆ ವಿಧಕ್ಕೆ ಸೇರಿದ ಜ್ಯೋತಿಷ್ಯರು ಇರಬೇಕು ಆದರೆ ಅವರು ಯಾರಾದರೂ ಇದ್ದಾರೋ ಇಲ್ಲವೋ ತಿಳಿದಿಲ್ಲ. ಎಲ್ಲಾದರೂ ಇರಬಹುದು, ಇರದೇ ಹೋಗಬಹುದು. ಮೊದಲ ವಿಧಕ್ಕೆ ಸಂಬಂಧಿಸಿದ ಜ್ಯೋತಿಷ್ಯವನ್ನೇ ನಾವೂ ಸಹ ಇಲ್ಲಿಯವರೆಗು ಬರೆದುಕೊಂಡಿದ್ದೇವೆ, ಹೇಳಿ ಕೊಂಡಿದ್ದೇವೆ. ಎರಡನೆ ಬಗೆಯ ಜ್ಯೋತಿಷ್ಯನನ್ನು ಕುರಿತು ಹೇಳಿಕೊಂಡರೇ ಆತನು ನಾನು ಜ್ಯೋತಿಷ್ಯನೆಂದು ಪ್ರತ್ಯೇಕವಾಗಿ ಇರುವುದಿಲ್ಲ. ಅಂತಹ ಎರಡನೆ ವಿಧದ ಜ್ಯೋತಿಷ್ಯನು ಇದ್ದಕ್ಕಿದ್ದಂತೆ ಭವಿಷ್ಯತ್ತನ್ನು ಹೇಳುವನು. ಆತನು ಪಂಚಾಂಗದೊಂದಿಗೆ ಕೆಲಸವಿಲ್ಲದಂತೆ, ಯಾವ ಜಾತಕವನ್ನು ನೋಡದಂತೆ ಹೇಳಿರುವುದನ್ನು ಜ್ಯೋತಿಷ್ಯ ಎನ್ನದಂತೆ ಮುಂಬರುವುದನ್ನು ಹೇಳಬಲ್ಲನು. ಮೊದಲ ವಿಧದ ಜ್ಯೋತಿಷ್ಯನ್ಯಾರಾದರೂ ಗ್ರಹಚಾರ ವನ್ನನುಸರಿಸಿ ಹೇಳುವನು. ಎರಡನೆ ವಿಧದ ಜ್ಯೋತಿಷ್ಯನಾದವನು ಯಾವುದನ್ನೂ ಆಧಾರ ಮಾಡಿಕೊಂಡು ಹೇಳುವುದಿಲ್ಲ. ಅಂತಹವನು ಏನು ಹೇಳಿದರೇ ಅದೇ ನಡೆಯುತ್ತದೆ. ಇರುವುದನ್ನು ಅನುಸರಿಸಿ ಹೇಳುವವನು ಜ್ಯೋತಿಷ್ಯನು. ಹೇಳಿರುವುದನ್ನು ಅನುಸರಿಸಿ ನಡೆಯುವುದು ಕಾಲಜ್ಞಾನ. ಭವಿಷ್ಯತ್ ಎಂದರೂ ಕಾಲಜ್ಞಾನವೆಂದರೂ ಎರಡೂ ಒಂದೇ ಆದರೆ ನೋಡಿ ಹೇಳುವುದು ಜ್ಯೋತಿಷ್ಯ. ನೋಡದೆ ಹೇಳುವುದು ಕಾಲಜ್ಞಾನ. ಯಾವುದನ್ನೂ ನೋಡದಂತೆ ಹೇಳಿದವರಲ್ಲಿ ನಮಗೆ ತಿಳಿದಮಟ್ಟಿಗೆ ಶ್ರೀ ಪೋತುಲೂರಿ ವೀರಬ್ರಹ್ಮಯ್ಯನವರು ಇದ್ದಾನೆ. ತಾವು ಜ್ಯೋತಿಷ್ಯರೆಂದು ಪ್ರಕಟಿಸಿಕೊಳ್ಳದವರಲ್ಲಿ ಎರಡನೆ ವಿಧಕ್ಕೆ ಸೇರಿದ ಜ್ಯೋತಿಷ್ಯರಿರಬಹುದು.

ಪೂರ್ವಕಾಲದಲ್ಲಿ ಎರಡನೆ ವಿಧದ ಜ್ಯೋತಿಷ್ಯರು ಆಗಾಗ ಕೆಲವರಿದ್ದಂತೆ ಕೇಳಿದ್ದೇವೆ. ಅಂತಹವರಲ್ಲಿ ಮುಖ್ಯಸ್ಥ ತ್ರೇತಾಯುಗದಲ್ಲಿರುವ ರಾವಣಬ್ರಹ್ಮ. ಕಳೆದ ಸ್ವಲ್ಪ ಕಾಲದ ಕೆಳಗೆ ಉದಾಹರಣೆಯಾಗಿ ಹೇಳಿಕೊಳ್ಳುವುದಕ್ಕೆ ವೀರ ಬ್ರಹ್ಮಯ್ಯನವರು ಕಾಣಿಸುತ್ತಿದ್ದಾರೆ. ರಾವಣಬ್ರಹ್ಮ ಕಾಲಜ್ಞಾನವನ್ನು ಪೂರ್ತಿಯಾಗಿ ತಿಳಿದ ತ್ರಿಕಾಲ ಜ್ಞಾನಿ. ರಾವಣಬ್ರಹ್ಮ ತ್ರಿಕಾಲಜ್ಞಾನಿಯೆಂದು ಹೆಸರುಗಳಿಸಿದರೆ, ವೀರಬ್ರಹ್ಮಯ್ಯನವರು ಕಾಲಜ್ಞಾನಿಯೆಂದು ಹೆಸರು ಗಳಿಸಿದ್ದಾರೆ. ರಾವಣಬ್ರಹ್ಮ ಮೂರು ಕಾಲಗಳಿಗೆ ಜ್ಞಾನಿಯಾಗಿ ಇಂದಿಗೂ ತ್ರಿಕಾಲಜ್ಞಾನಿಯಾಗಿ ಹೆಸರು ಗಳಿಸಿದ್ದಾನೆ. ವೀರಬ್ರಹ್ಮಯ್ಯನವರು ಭವಿಷ್ಯತ್ ಕಾಲಕ್ಕೆ ಜ್ಞಾನಿಯಾಗಿ ಕಾಲಜ್ಞಾನಿ ಯೆಂದು ಹೆಸರುಪಡೆದಿದ್ದಾನೆ. ಇವರಿಬ್ಬರೂ ನಮಗೆ ನಮೂನೆಗೆ ಹೇಳಲ್ಪಡುವ ಎರಡನೆ ವಿಧದ ಜ್ಯೋತಿಷ್ಯರೆಂದು ತಿಳಿಯುತ್ತಿದೆ. ಪೂರ್ವದಲ್ಲಿ ಹಿರಿಯರಾದವರು ಎರಡನೆ ವಿಧದ ಕಾಣಿಸದ ಜ್ಯೋತಿಷ್ಯರಾಗಿ ಇದ್ದರೇ, ಈದಿನ ಮೊದಲ ವಿಧದ ಜ್ಯೋತಿಷ್ಯವನ್ನು ಸಹ ಸರಿಯಾಗಿ ತಿಳಿದವರು ಇಲ್ಲದಂತೆ ಹೋಗುವುದು ನಮಗೇ ಅವಮಾನ. ಆದ್ದರಿಂದ ಮೊದಲ ವಿಧದ ಜ್ಯೋತಿಷ್ಯರು ಒಬ್ಬರಿಬ್ಬರಿದ್ದರೂ ಫರವಾಗಿಲ್ಲ. ಅವರು ಸಕ್ರಮವಾದ ಜ್ಯೋತಿಷ್ಯ ತಿಳಿದಿರಬೇಕು ಎನ್ನುವ ಉದ್ದೇಶದಿಂದ ಈಗ ಹನ್ನೆರಡು ಗ್ರಹಗಳೊಂದಿಗೆ ಕೂಡಿಕೊಂಡ ಜ್ಯೋತಿಷ್ಯಶಾಸ್ತ್ರವನ್ನು ಬರೆಯುವುದು ನಡೆದಿದೆ.

## ಮುಕ್ತಾಯ

**ಒಂದು ವಿಷಯವನ್ನು ಸಮರ್ಥಿಸುವುದಕ್ಕೆ ಶಾಸ್ತ್ರವು ಎಷ್ಟು ಅವಶ್ಯವೋ, ಹಾಗೆಯೇ ಒಂದು ವಿಷಯವನ್ನು ಖಂಡಿಸುವುದಕ್ಕೆ ಶಾಸ್ತ್ರವು ಅಷ್ಟೇ ಅವಶ್ಯವಾಗುತ್ತದೆ.**

**ಅಸತ್ಯವನ್ನು ಸಾವಿರಜನ ಹೇಳಿದರೂ ಅದು ಸತ್ಯವಲ್ಲ,**
**ಸತ್ಯವನ್ನು ಸಾವಿರಜನ ಅಲ್ಲಗಳೆದರೂ ಅದು ಅಸತ್ಯವಲ್ಲ.**

## ಭಗವದ್ಗೀತೆಯನ್ನು ಓದದವನು ಹಿಂದೂ ರಕ್ಷಕನಾ? ಹಿಂದೂ ಧರ್ಮವೇ ತಿಳಿಯದವರು ಹಿಂದೂ ರಕ್ಷಕರಾ?

ಹಿಂದೂಗಳು ಈದಿನ ಕುಲಗಳಾಗಿ ಸೀಳಲ್ಪಟ್ಟು, ಅದರಲ್ಲಿ ಹೆಚ್ಚುಕಡಿಮೆ ಕುಲಗಳಾಗಿ ವರ್ಣಿಸಲ್ಪಟ್ಟಿದ್ದಾರೆ ಎನ್ನುವುದು ಎಲ್ಲರಿಗೂ ತಿಳಿದ ಸತ್ಯವೆ. ದೇವರು ಮನುಷ್ಯರೆಲ್ಲರನ್ನು ಸಮಾನವಾಗಿ ಹುಟ್ಟಿಸಿದರೆ ಕೆಲವರು ಮನುಷ್ಯರು ತಮ್ಮ ಸ್ವಾರ್ಥ ಬುದ್ಧಿಯಿಂದ ಹಿಂದೂ (ಇಂದೂ) ಸಮಾಜವನ್ನು ತುಂಡು ತುಂಡಾಗಿ ಕತ್ತರಿಸಿ, ಬಲಹೀನಪಡಿಸಿ ಹಿಂದೂ ಸಮಾಜಕ್ಕೆಲ್ಲಾ ತಾವೇ ದೊಡ್ಡವರೆಂದು, ತಾವು ಹೇಳಿದಂತೆ ಎಲ್ಲರೂ ಕೇಳಿ, ಎಲ್ಲಾ ಕಾರ್ಯಗಳು ಮಾಡಿಕೊಳ್ಳಬೇಕೆಂದು ಪ್ರಚಾರ ಮಾಡಿ ಕೊಂಡಿದ್ದಾರೆ. ಎಷ್ಟೋ ಕುಲಗಳಾಗಿರುವ ಹಿಂದೂ ಸಮಾಜದಲ್ಲಿ ತಮ್ಮ ಕುಲವೇ ಅಗ್ರಕುಲವೆಂದು ಹೇಳಿಕೊಳ್ಳುವುದೆ ಅಲ್ಲದೆ, ಇತರೆ ಕುಲದವರೆಲ್ಲರಿಗೂ ತಾವೇ ಮಾರ್ಗದರ್ಶಕರೆಂದು, ಗುರುಗಳೆಂದು ಪ್ರಕಟಿಸಿಕೊಂಡಿದ್ದಾರೆ. ಭವಿಷ್ಯತ್ತಿನಲ್ಲಿ ತಮಗೆ ಯಾರೂ ಅಡ್ಡಬಾರದಂತೆ, ಎಲ್ಲಾ ಕುಲಗಳನ್ನು ಅಂಟಬಾರದ ಕುಲಗಳನ್ನಾಗಿ ಮಾಡಿ, ಹಿಂದೂ ಸಮಾಜಕ್ಕೆ ತೀರದ ಅನ್ಯಾಯ ಮಾಡಿದ್ದಾರೆ. ಅಲ್ಲಿಗೆ ಸುಮ್ಮನಾಗದೆ ಇಂದಿಗೂ ಹಿಂದೂ ಸಮಾಜ ರಕ್ಷಕರಾಗಿ ಹೇಳಿಕೊಳ್ಳುತ್ತಾ, ಹಿಂದೂ ಸಮಾಜವನ್ನು ಸರ್ವನಾಶ ಮಾಡುತ್ತಾ, ಹಿಂದೂ ಸಮಾಜ ಇತರ ಮತಗಳಾಗಿ ಬದಲಾಗಿ ಹೋಗುವುದಕ್ಕೆ ಮೊದಲ ಕಾರಕರಾಗುತ್ತಿದ್ದಾರೆ. ಅಂತಹವರು ಹಿಂದೂ ಸಮಾಜಕ್ಕೆ ಜೇಡಿ ಹುಳಗಳಾಗಿದ್ದರೂ, ಉಳಿದ ಕುಲದವರೆಲ್ಲರೂ ಅವರ ನಿಜ ಸ್ವರೂಪವನ್ನು ತಿಳಿಯದೆ ಅವರು ಹೇಳಿದಹಾಗೆ ಕೇಳುವುದರಿಂದ, ಹಿಂದೂ ಸಮಾಜವನ್ನು ಪೂರ್ತಿಯಾಗಿ ಅಜ್ಞಾನ ದಿಶೆಗೆ, ಅಧರ್ಮ ಮಾರ್ಗದಕಡೆಗೆ ಮರಳಿಸಿ, ಪ್ರಜೆಗಳಿಗೆ ಸ್ವಲ್ಪವೂ ದೈವಜ್ಞಾನವನ್ನು ತಿಳಿಯದಹಾಗೆ ಮಾಡಿ, ತಾವು ಹೇಳುವುದೇ ದೈವಬೋಧನೆ ಎಂದು ನಂಬಿಸಿದ್ದಾರೆ.

ಅಂತಹ ಸ್ಥಿತಿಯಲ್ಲಿ ಈ ದಿನ **ತ್ರೈತ ಸಿದ್ಧಾಂತಕರ್ತರಾಗಿ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು** ಅಜ್ಞಾನದ ದಿಕ್ಕಿಗೆ ನಿಂತುಹೋಗಿರುವ ಹಿಂದೂಸಮಾಜವನ್ನು ಸರಿಯಾದ ದಾರಿಯಲ್ಲಿ ಇಡುವುದಕ್ಕೆ, ಭಗವದ್ಗೀತೆಯಲ್ಲಿ ಪುರುಷೋತ್ತಮಪ್ರಾಪ್ತಿ ಯೋಗವೆಂಬ ಅಧ್ಯಾಯದಲ್ಲಿ ಬೋಧಿಸಲ್ಪಟ್ಟಿರುವ **ಕ್ಷರ, ಅಕ್ಷರ, ಪುರುಷೋತ್ತಮ** ಎನ್ನುವ ಮೂವರು ಪುರುಷರ ವಿಷಯವನ್ನು **"ತ್ರೈತ ಸಿದ್ಧಾಂತ"** ಎಂಬ ಹೆಸರಿನಿಂದ ಪ್ರತಿಪಾದಿಸಿ ದೈವಜ್ಞಾನವನ್ನು ಎಲ್ಲರಿಗೂ ಅರ್ಥವಾಗುವಂತೆ ಗ್ರಂಥರೂಪದಲ್ಲಿ ಬರೆಯುವುದು, ಬೋಧಿಸುವುದು ನಡೆಯುತ್ತಿದೆ. ಅದರಿಂದ ಈದಿನ

ಪ್ರಜೆಗಳು ಅಸಲಾದ ಜ್ಞಾನ ತಿಳಿಯುತ್ತಿದೆ ಎಂದು ಸಂತೋಷಪಡುತ್ತಿದ್ದಾರೆ. ಅಗ್ರಕುಲವಾಗಿರುವವರಲ್ಲಿ ಸಹ ಎಷ್ಟೋಜನ ತಮ್ಮ ಅಜ್ಞಾನ ಕತ್ತಲನ್ನು ಬಿಟ್ಟು, ಇಲ್ಲಿಯವರೆಗೂ ತಮಗೆ ತಿಳಿಯದ ಜ್ಞಾನ ಯೋಗೀಶ್ವರರ ಮೂಲಕ ಈಗ ತಿಳಿಯುತ್ತಿದೆಯೆಂದು ಸಂತೋಷಪಟ್ಟು ಶಿಷ್ಯರಾಗಿ ಸೇರಿಹೋಗುತ್ತಿದ್ದಾರೆ. ಆದರೆ ಅಗ್ರಕುಲದಲ್ಲಿ ಕೆಲವರು ಮಾತ್ರ ಯೋಗಿಶ್ವರರು ತಿಳಿಸುವ ಜ್ಞಾನ ವಿಷಯಗಳನ್ನು ನೋಡಿ ಈ ಜ್ಞಾನದಿಂದ ಪ್ರಜೆಗಳು ಜ್ಞಾನದಲ್ಲಿ ಚೈತನ್ಯರಾಗಿ, ಜ್ಞಾನ ತಿಳಿಯದ ತಮ್ಮನ್ನು ಗೌರವಿಸುವುದಿಲ್ಲವೆಂದು ಭಾವಿಸಿ, ಅದರಿಂದ ಸಮಾಜದ ಮೇಲೆ ತಮ್ಮ ಅಧಿಪತ್ಯ ಇಲ್ಲದಂತಾಗುತ್ತದೆಂದು ತಿಳಿದು, ಯೋಗಿಶ್ವರರು ತಿಳಿಸುತ್ತಿರುವ ತ್ರೈತ ಸಿದ್ಧಾಂತವಾಗಲಿ, ತ್ರೈತ ಸಿದ್ಧಾಂತ ಭಗವದ್ಗೀತೆಯಾಗಲಿ ಹಿಂದೂಗಳ ಜ್ಞಾನವೇ ಅಲ್ಲವೆಂದು, ಅದು ಕ್ರೈಸ್ತವ ಮತಕ್ಕೆ ಸಂಬಂಧಿಸಿರುವುದೆಂದು, ಅದನ್ನು ಯಾರೂ ಓದಬಾರದೆಂದು ಪ್ರಚಾರ ಮಾಡಲು ಪ್ರಾರಂಭಿಸಿದ್ದಾರೆ. ಅಷ್ಟೇ ಅಲ್ಲದೆ ತಾವು ಹಿಂದೂಧರ್ಮರಕ್ಷಕರೆಂದು, ಸ್ವಲ್ಪ ರಾಜಕೀಯಬಣ್ಣವನ್ನು ಬಳಿದುಕೊಂಡು, ನಮ್ಮ ಜ್ಞಾನ ಪ್ರಚಾರಕ್ಕೆ ಅಲ್ಲಲ್ಲಿ ಆತಂಕಪಡಿಸುವುದು ನಡೆಯುತ್ತಿದೆ. ತಮ್ಮ ಮಾತು ಕೇಳುವ ಇತರೆ ಕುಲದವರಿಗೂ ಸಹ ಪ್ರಬೋಧಾನಂದಯೋಗಿಶ್ವರರು ಹೇಳುವ ಜ್ಞಾನ ಹಿಂದೂ ಜ್ಞಾನ ಅಲ್ಲ, ಕ್ರೈಸ್ತವರ ಜ್ಞಾನವೆಂದು ಹಿಂದೂಗಳ ಮುಸುಗಿನಲ್ಲಿ ಕ್ರೈಸ್ತವ ಮತ ಪ್ರಚಾರ ಮಾಡುತ್ತಿದ್ದಾರೆಂದು ಹೇಳುವುದಲ್ಲದೆ, ಅಂತಹವರನ್ನು ಪ್ರೇರೇಪಿಸಿ ನಮ್ಮ ಪ್ರಚಾರಕ್ಕೆ ತಡೆಗಟ್ಟುತ್ತಿದ್ದಾರೆ.

ಯೋಗೀಶ್ವರರು ನೆಲೆಗೊಳಿಸಿದ ಹಿಂದೂ (ಇಂದೂ) ಜ್ಞಾನ ವೇದಿಕೆ ಇಂತಹ ದಬ್ಬಾಳಿಕೆಗಳನ್ನು ಸ್ವಲ್ಪಕಾಲದಿಂದ ಸಹನೆಯಿಂದ ನೋಡಲಾಗಿದೆ. ನಮ್ಮಲ್ಲಿ ಸಹನೆ ನಶಿಸಿ ನಮ್ಮನ್ನು ಅನ್ಯಮತ ಪ್ರಚಾರಕರಾಗಿ ವರ್ಣಿಸಿ ಹೇಳುವ ಅಗ್ರಕುಲದವರನ್ನು, ಅವರ ಅನುಚರರನ್ನು ನಾವು ಎದುರುತಿರುಗಿ ಪ್ರಶ್ನಿಸುವುದು ನಡೆದಿದೆ. ನಾವು ಪ್ರಶ್ನಿಸಿದ ಒಂದು ಪ್ರಶ್ನೆಗೂ ಸಹ ಅವರು ಸರಿಯಾದ ಸಮಾಧಾನ ಕೊಡಲಿಲ್ಲ. ಆ ಉತ್ತರಗಳು ಹೇಗೆ ಇವೆಯೋ ಓದುಗರಾಗಿ ನೀವು ನೋಡಿರಿ.

**ನಮ್ಮ ಪ್ರಶ್ನೆ :–** ಇಲ್ಲಿಯವರೆಗೂ ಯಾವ ಹಿಂದೂವು ಮಾಡದ ವಿಧದಲ್ಲಿ ಊರೂರು ತಿರುಗಿ, ಊರಿನಲ್ಲಿ ಮನೆಮನೆ ತಿರುಗಿ ಹಿಂದೂ ಧರ್ಮಗಳನ್ನು ಪ್ರಚಾರ ಮಾಡುತ್ತಿದ್ದೇವೆ ಅಲ್ಲವೆ! ಅಂತಹ ನಮ್ಮನ್ನು ನೀವು ಅನ್ಯಮತ ಪ್ರಚಾರಕರೆಂದು ಏಕೆ ಹೇಳುತ್ತಿದ್ದೀರಾ?

**ನಮ್ಮ ಉತ್ತರ :–** ಹಿಂದೂಮತದಲ್ಲಿ ಎಷ್ಟೋ ಜನ ಸ್ವಾಮೀಜಿಗಳು ಇದ್ದಾರೆ. ಅವರು ಯಾರೂ ಮನೆಮನೆ ತಿರುಗಿ ಪ್ರಚಾರ ಮಾಡಲಿಲ್ಲ. ಹಿಂದೂಗಳು ಹಾಗೆ ಯಾರೂ ಪ್ರಚಾರ ಮಾಡುವುದಿಲ್ಲ. ಕ್ರೈಸ್ತರಾದರೇನೆ ಬೀದಿ ಬೀದಿ, ಮನೆಮನೆ ತಿರುಗಿ ಪ್ರಚಾರ

ಮಾಡುತ್ತಾರೆ. ನೀವು ಹಿಂದೂಗಳ ಮುಸುಗಿನಲ್ಲಿ ಮನೆಮನೆ ತಿರುಗಿ ಕ್ರೈಸ್ತವವನ್ನು ಪ್ರಚಾರ ಮಾಡುತ್ತಿದ್ದೀರ.

**ನಮ್ಮ ಪ್ರಶ್ನೆ :–** ನಾವು ಕ್ರೈಸ್ತರಾದರೆ ಭಗವದ್ಗೀತೆಯನ್ನು ಏಕೆ ಪ್ರಚಾರ ಮಾಡುತ್ತೇವೆ?

**ಅವರ ಉತ್ತರ :–** ನೀವು ಪ್ರಚಾರ ಮಾಡುವುದು ತ್ರೈತ ಸಿದ್ಧಾಂತ ಭಗವದ್ಗೀತೆ. ಅದು ಕ್ರೈಸ್ತರದ್ದು. ಬೈಬಲ್‌ಗೇ ನೀವು ಹಾಗೆ ಹೆಸರು ಇಟ್ಟಿದ್ದೀರಾ.

**ನಮ್ಮ ಪ್ರಶ್ನೆ :–** ಕ್ರೈಸ್ತರು ತಮ್ಮನ್ನು ಕ್ರೈಸ್ತರಾಗಿಯೇ ಹೇಳಿಕೊಳ್ಳುತ್ತಾರೆ. ಹಾಗೆಯೇ ಬೈಬಲನ್ನು ಬೈಬಲಾಗಿಯೇ ಹೇಳಿಕೊಳ್ಳುತ್ತಾರೆ. ಅವರ ಪ್ರಚಾರ ಕ್ರೈಸ್ತವವು, ಬೈಬಲ್ ಆದಾಗ ಅದೇ ಹೆಸರಿನ ಮೇಲೆ ಪ್ರಚಾರ ಮಾಡುತ್ತಾರೆ ಹೊರತು ಹಿಂದೂಗಳಾಗಿ ಭಗವದ್ಗೀತೆ ಹೆಸರಿನಿಂದ ಏಕೆ ಪ್ರಚಾರ ಮಾಡುತ್ತಾರೆ? ಇಲ್ಲಿಯವರೆಗೂ ಈ ರೀತಿಯಾಗಿ ಎಲ್ಲಿಯೂ ನಡೆಯಲಿಲ್ಲ. ಯಾವ ಮತದವರು ಆ ಮತದ ಹೆಸರು ಹೇಳಿಕೊಳ್ಳುತ್ತಾರೆ ಹೊರತು ಇತರ ಮತದ ಹೆಸರು ಹೇಳುವುದಿಲ್ಲ. ಅಷ್ಟೇತಕ್ಕೆ ನೀವು ನಮ್ಮ ಭಗವದ್ಗೀತೆಯನ್ನು ತೆರೆದು ನೋಡಿದ್ದೀರಾ? ಅದರಲ್ಲಿ ಭಗವದ್ಗೀತೆ ಶ್ಲೋಕಗಳಿವೆಯಾ? ಬೈಬಲ್ ವಾಕ್ಯಗಳಿವೆಯಾ?

**ಅವರ ಉತ್ತರ :–** ತ್ರೈತ ಸಿದ್ಧಾಂತವೆಂದು ಇದೆ ಅಲ್ಲವೆ! ತ್ರೈತ ಎಂದರೆ ತ್ರಿತ್ವ ಎಂದು ತ್ರಿನಿಟಿ ಎಂದು ನಮಗೆ ಚೆನ್ನಾಗಿ ತಿಳಿದಿದೆ.

**ನಮ್ಮ ಪ್ರಶ್ನೆ :–** ಹಿಂದೂ ಧರ್ಮಗಳಲ್ಲಿ ಅದ್ವೈತ ಸಿದ್ಧಾಂತವನ್ನು ಆದಿಶಂಕರಾ ಚಾರ್ಯರು ಪ್ರತಿಪಾದಿಸಿದ್ದಾನೆ. ವಿಶಿಷ್ಟಾದ್ವೈತವನ್ನು ರಾಮಾನುಚಾರ್ಯರು ಪ್ರತಿಪಾದಿಸಿದ್ದಾನೆ, ದ್ವೈತವನ್ನು ಮಧ್ವಾಚಾರ್ಯರು ಪ್ರಕಟಿಸಿದ್ದಾನೆ. ಈಗ ಆಚಾರ್ಯ ಪ್ರಬೋಧಾನಂದ ಯೋಗೀಶ್ವರರು ತ್ರೈತ ಸಿದ್ಧಾಂತವನ್ನು ಪ್ರತಿಪಾದಿಸಿದ್ದಾನೆ. ಸಿದ್ಧಾಂತಕರ್ತರು, ಸಿದ್ಧಾಂತಗಳು ಬೇರೆಯಾದರೂ ಎಲ್ಲರೂ ಹಿಂದೂಗಳೆಂದು ನೀವು ಏಕೆ ಅಂದುಕೊಳ್ಳಲಿಲ್ಲ?

**ಅವರ ಉತ್ತರ :–** ನಿಮ್ಮ ತ್ರೈತ ಸಿದ್ಧಾಂತ ಭಗವದ್ಗೀತೆಯಲ್ಲಿ ಯಜ್ಞಗಳನ್ನು ಮಾಡಬಾರದೆಂದು ಬರೆದಿದ್ದೀರಾ ಅಲ್ಲವೆ! ನಿಜವಾಗಲು ಭಗವದ್ಗೀತೆಯಲ್ಲಿ ಹಾಗೆ ಇಲ್ಲ ಅಲ್ಲವೆ!

**ನಮ್ಮ ಪ್ರಶ್ನೆ :–** ನೀವು ಹಿಂದೂಗಳಲ್ಲಿ ಮುಖ್ಯರಾಗಿದ್ದು ಅಷ್ಟು ಮೂರ್ಖವಾಗಿ ಮಾತನಾಡಿದರೆ ಹೇಗೆ? ಪ್ರಪಂಚಕ್ಕೆಲ್ಲಾ ಒಂದೇ ಭಗವದ್ಗೀತೆ ಇರುತ್ತದೆ ಹೊರತು, ನಿಮ್ಮ ಭಗವದ್ಗೀತೆ, ನಮ್ಮ ಭಗವದ್ಗೀತೆ ಎಂದು ಬೇರೆ ಬೇರೆ ಇರುವುದಿಲ್ಲ. ಭಗವದ್ಗೀತೆಗೆ ವಿವರ ಒಬ್ಬೊಬ್ಬರು ಒಂದೊಂದು ವಿಧವಾಗಿ ಅವರಿಗೆ ಅರ್ಥವಾದಂತೆ ಹೇಳಿರಬಹುದು

ಆದರೆ, ಎಲ್ಲರಿಗೂ ಭಗವದ್ಗೀತೆ ಮೂಲ ಗ್ರಂಥ ಒಂದೇಯೆಂದು ನೆನಪಿಟ್ಟುಕೊಳ್ಳಿ. ತ್ರೈತ ಸಿದ್ಧಾಂತ ಭಗವದ್ಗೀತೆ ಎಲ್ಲದಕ್ಕಿಂತ ಸರಿಯಾದ ಭಾವನೆಯಿಂದ ಇದೆಯೆಂದು ಓದಿದ ಜ್ಞಾನಿಗಳೆಲ್ಲರೂ ಹೊಗಳುತ್ತಿದ್ದರೆ, ನಿಮ್ಮ ಕುಲದಲ್ಲಿ ಎಷ್ಟೋ ಜನ ಪ್ರಶಂಸಿಸುತ್ತಾ ಇದ್ದರೆ, ನಿಮಗೆ ಕೆಲವರಿಗೆ ಮಾತ್ರ ವಿರುದ್ಧವಾಗಿ ಕಾಣಿಸಿದೆಯೆಂದರೆ ಅಸೂಯೆಯಿಂದಲೇ ಎಂದು ನಮಗೆ ಅರ್ಥವಾಗುತ್ತಿದೆ. ಯಜ್ಞಗಳು ಮಾಡಬೇಡವೆಂದು ನಾವು ಎಲ್ಲಿಯೂ ಹೇಳಲಿಲ್ಲ. ಯಜ್ಞಗಳಿಂದ ಪುಣ್ಯ ಬರುತ್ತದೆ, ಸ್ವರ್ಗ ಬರುತ್ತದೆ ಎಂದು ಹೇಳಿದ್ದೇವೆ. ಯಜ್ಞಗಳಿಂದ ಮೋಕ್ಷ ಬರುವುದಿಲ್ಲ, ದೇವರು ತಿಳಿಯುವು ದಿಲ್ಲವೆಂದು ಹೇಳಿದ್ದೇವೆ. ಅಷ್ಟೇಕೆ ನಾವು ಎಲ್ಲಾ ಕುಲಗಳಿಗಿಂತ ಸ್ವಚ್ಛವಾದ ಹಿಂದೂಗಳೆಂದು ನೀವು ಹೇಳಿಕೊಳ್ಳುತ್ತಿದ್ದೀರಾ ಅಲ್ಲವೆ! ಭಗವದ್ಗೀತೆ ಯಲ್ಲಿ ಹೇಳಿದ ಒಂದು ಹಿಂದೂ ಧರ್ಮವನ್ನು ಹೇಳಿರಿ.

**ಅವರ ಪ್ರಶ್ನೆ :–** ಅವೆಲ್ಲಾ ಮಾತುಗಳು ಬೇಡ... ನೀವು ಹಿಂದೂಗಳು ಅಲ್ಲ.

**ನಮ್ಮ ಪ್ರಶ್ನೆ :–** ಮೊಂಡರಂತೆ ಮಾತನಾಡಬೇಡಿ ನೀವು ಅಗ್ರಕುಲದವರೆಂದು ಇಷ್ಟಬಂದಂತೆ ಮಾತನಾಡಬೇಡಿ. ನಾವು ಹಿಂದೂಗಳು ಅಲ್ಲವೆನ್ನುವುದಕ್ಕೆ ಆಧಾರ ಏನಾದರೂ ತೋರಿಸುತ್ತೀರಾ? ನಮ್ಮ ಕಥೆ ಪಕ್ಕಕ್ಕಿಟ್ಟು ನೀವು ಸರಿಯಾದ ಹಿಂದೂಗಳೇ ಆದರೆ ಭಗವದ್ಗೀತೆಯಲ್ಲಿ ವಿಶ್ವರೂಪ ಸಂದರ್ಶನಯೋಗವೆಂಬ ಅಧ್ಯಾಯದಲ್ಲಿ 48ನೇ ಶ್ಲೋಕದಲ್ಲಿಯೂ, 53ನೇ ಶ್ಲೋಕದಲ್ಲಿಯೂ ಭಗವಂತನು ಏನು ಹೇಳಿದ್ದಾನೋ ನೀವೇ ಹೇಳಿರಿ.

**ಅವರ ಉತ್ತರ :–** ನಾವು ಇಲ್ಲಿಯವರೆಗೂ ಭಗವದ್ಗೀತೆ ಓದಲಿಲ್ಲ. ನಿಮಗೆ ಬೇಕಾದರೆ ಸಂಪೂರ್ಣಾನಂದಸ್ವಾಮಿಯಿಂದ ಹೇಳಿಸುತ್ತೇವೆ.

**ನಮ್ಮ ಪ್ರಶ್ನೆ :–** ಕನಿಷ್ಟ ಭಗವದ್ಗೀತೆಯನ್ನು ಸಹ ಓದದ ನೀವು ಯೋಗೀಶ್ವರರಾದ ಪ್ರಬೋಧಾನಂದಸ್ವಾಮಿಯನ್ನು ದೂಷಿಸುವುದು ಒಳ್ಳೆಯದಾ? ಒಂದು ಹಿಂದೂ ಧರ್ಮವನ್ನು ಸಹ ತಿಳಿಯದ ನೀವು ಹಿಂದೂ ಧರ್ಮ ರಕ್ಷಕರೆಂದು ಹೇಳುವುದು ಒಳ್ಳೆಯದಾ? ಯೋಗೀಶ್ವರರು ಬರೆದ ಒಂದು ಗ್ರಂಥವನ್ನು ಸಹ ಓದದೆ ನಮ್ಮನ್ನು ಹೊರತುಪಡಿಸಿ ಪೂಜ್ಯರಾಗಿ, ಗುರುಗಳಾಗಿ ಯಾರೂ ಇರಬಾರದೆಂಬ ಅಸೂಯೆಯಿಂದ ಹೀಗೆ ಮಾತನಾಡಿದರೆ ದೇವರು ಸಹಿಸಿಕೊಳ್ಳುವುದಿಲ್ಲವೆಂದು ಹೇಳುತ್ತಿದ್ದೇವೆ.

**ಅವರ ಉತ್ತರ :–** ಹಿಂದೂ ಮತದಲ್ಲಿ ಎಷ್ಟೋ ಜನ ದೇವರುಗಳಿದ್ದಾರೆ. ಶಿವನು ದೇವರೆ, ಶಿವನ ಮಗ ಗಣಪತಿ ದೇವರೇ, ರಾಮನು ದೇವರೇ, ರಾಮನ ಸೇವಕನು ಆಂಜನೇಯನು ದೇವರೇ. ಅಂತಹ ಹಿಂದೂ ಮತದಲ್ಲಿ ದೇವರು ಒಬ್ಬನೇ ಎಂದು ಹೇಳುವುದು ನಿಮ್ಮದು ತಪ್ಪು ಅಲ್ಲವೆ?

**ನಮ್ಮ ಮಾತು :–** ನಾವು ಮತವನ್ನು ಕುರಿತು ಹೇಳಲಿಲ್ಲ. ಹಿಂದೂ ಮತದಲ್ಲಿ ಎಷ್ಟೋ ಮಂದಿ ದೇವತೆಗಳಿರುವುದು ನಿಜವೇ, ಆದರೆ ಹಿಂದೂ ಜ್ಞಾನದಲ್ಲಿ, ಹಿಂದೂ ಧರ್ಮದ ಪ್ರಕಾರ ವಿಶ್ವಕ್ಕೆಲ್ಲಾ ಒಬ್ಬನೇ ದೇವರೆಂದು ಹೇಳಿದ್ದೇವೆ. ಭಗವದ್ಗೀತೆಯಲ್ಲಿ ದೇವರು ಹೇಳಿರುವುದೇ ಹೇಳಿದ್ದೇವೆ ಹೊರತು ನಾವು ದೇವತೆಗಳನ್ನು ಕುರಿತು ಇಲ್ಲವೆಂದು ಹೇಳಲಿಲ್ಲ! ದೇವತೆಗಳೆಲ್ಲರಿಗೂ ಅಧಿಪತಿ ಯಾದ ದೇವರು ಒಬ್ಬನಿದ್ದಾನೆಂದು, ಆತನೇ ದೇವದೇವನೆಂದು, ಆತನನ್ನು ಆರಾಧಿಸೆಂದು ಹೇಳಿದ್ದೇವೆ.

**ಅವರ ಉತ್ತರ :–** ನೀವು ರಾಮನ ಹೆಸರು ಹೇಳುವುದಿಲ್ಲ, ಶಿವನ ಹೆಸರು ಹೇಳುವುದಿಲ್ಲ, ವಿನಾಯಕನ ಹೆಸರು ಹೇಳುವುದಿಲ್ಲ. ಯಾರ ಹೆಸರೂ ಹೇಳದಂತೆ ದೇವರು ಎಂದು, ಸೃಷ್ಟಿಕರ್ತ ಎಂದು ಅನೇಕಬಾರಿ ಹೇಳುತ್ತಿದ್ದೀರಾ. ದೇವರು ಎಂಬ ಪದವನ್ನಾಗಲಿ, ಸೃಷ್ಟಿಕರ್ತ ಎಂಬ ಪದವನ್ನಾಗಲಿ ಕ್ರೈಸ್ತವರೆ ಬಳಸುತ್ತಾರೆ. ಹಿಂದೂಗಳು ಬಳಸುವುದಿಲ್ಲ. ಆದ್ದರಿಂದ ನಿಮ್ಮನ್ನು ಹಿಂದೂಗಳು ಅಲ್ಲ ಕ್ರೈಸ್ತವರು ಅನ್ನುತ್ತಿದ್ದೇವೆ.

**ನಮ್ಮ ಪ್ರಶ್ನೆ :–** ಕ್ರೈಸ್ತವ ಮತ ಹುಟ್ಟಿ ಎರಡು ಸಾವಿರ ವರ್ಷಗಳಾಗಿದೆ. ಸೃಷ್ಠಿಹುಟ್ಟಿ ಎಷ್ಟು ಕೋಟಿ ವರ್ಷಗಳಾಗಿದೆಯೋ ಯಾರೂ ಹೇಳಲಾರರು. ಸೃಷ್ಠಿ ಆದಿಯಿಂದ 'ಸೃಷ್ಠಿಕರ್ತ' ಎಂಬ ಪದವನ್ನು 'ದೇವರು' ಎಂಬ ಪದವನ್ನು ಹಿಂದೂ ಸಮಾಜ ಬಳಸುತ್ತಲೇ ಇದೆ. ಮೊದಲಿನಿಂದ ಹಿಂದೂಸಮಾಜದಲ್ಲಿ ಇರುವ ದೇವರು, ಸೃಷ್ಟಿಕರ್ತ ಎನ್ನುವ ಹೆಸರುಗಳನ್ನು ಹಿಂದೂಗಳು ಕ್ರೈಸ್ತವರಿಗೇನಾದರೂ ಲೀಜಿಗೆ ಕೊಟ್ಟಿದ್ದಾರಾ? ಅಥವಾ ಪೂರ್ತಿಯಾಗಿ ಅವರಿಗೇ ಮಾರಿದ್ದಾರಾ? ಎಂದು ಕೇಳುತ್ತಿದ್ದೇವೆ. ಸೃಷ್ಠಿಕರ್ತ ಎಂದಾಗಲಿ, ದೇವರು ಎಂದಾಗಲಿ ಹಿಂದೂಗಳಾ ದವರು ಅನ್ನಬಾರದೆಂದು ಎಲ್ಲಿಯಾದರೂ ಇದೆಯಾ ಎಂದು ಕೇಳುತ್ತಿದ್ದೇವೆ?

**ಅವರ ಉತ್ತರ :–** ನೀವು ಹಿಂದೂಮತವನ್ನು ಅಲ್ಲದೇ ಅನ್ಯಮತವನ್ನು ಬೋಧಿ ಸುತ್ತಿದ್ದಾರೆನ್ನುವುದಕ್ಕೆ, ನಿಮ್ಮನ್ನು ನೀವು ಹಿಂದೂಗಳಾಗಿ ಹೇಳಿಕೊಳ್ಳಲಿಲ್ಲ. ಹಿಂದೂಗಳಾಗಿ ಅಲ್ಲದೆ ಇಂದೂಗಳಾಗಿ ಹೇಳಿಕೊಳ್ಳುತ್ತಿದ್ದೀರ. ಅಂತಹದರಲ್ಲಿ ನೀವು ಹಿಂದೂ ಮತವನ್ನು ಸೀಳಿಸಿದಂತೆ ಅಲ್ಲವೆ! ಪ್ರತ್ಯೇಕಿಸಿ ಇಂದೂ ಮತ ಅನ್ನುವುದನ್ನು ಪ್ರಚಾರ ಮಾಡಿದಂತೆ ಅಲ್ಲವೆ! ನೀವು ಹಿಂದೂಗಳೇ ಆದಾಗ ನಿಮ್ಮ ಗ್ರಂಥಗಳಲ್ಲಾಗಲಿ, ನಿಮ್ಮ ಬೋಧನೆ ಗಳಲ್ಲಾಗಲಿ ಪ್ರತ್ಯೇಕಿಸಿ ಇಂದೂಗಳು ಎಂದು ಏಕೆ ಹೇಳುತ್ತಿದ್ದೀರ?

**ನಮ್ಮ ಮಾತು :–** ನಾವು ನೇರವಾಗಿ ಒಂದು ಪ್ರಶ್ನೆಯನ್ನು ಕೇಳುತ್ತೇವೆ ಉತ್ತರ ಹೇಳಿರಿ. ಹಿಂದೂ, ಇಂದೂ ಎಂಬ ಪದದಲ್ಲಿ ಸ್ವಲ್ಪಮಟ್ಟಿನ ಶಬ್ದ ಹೊರತುಪಡಿಸಿ ಏನು ವ್ಯತ್ಯಾಸ ಇದೆಯೋ ನೀವೇ ಹೇಳಿರಿ. ತೆಲುಗು ಭಾಷೆಯನ್ನು ಬರೆಯುವ

ವರೆಲ್ಲರೂ ಹಿರಣ್ಯಕಶ್ಯಪನನ್ನು ಸಾಯಿಸಿರುವುದು ನರಶಿಂಹಸ್ವಾಮಿ ಎಂದು ಹೇಳುತ್ತಿರುತ್ತಾರೆ. ಹಾಗೆಯೇ ಬರೆಯುತ್ತಿರುತ್ತಾರೆ. ಪ್ರಸ್ತುತಕಾಲದಲ್ಲಿ ನರಶಿಂಹ ಎಂದು ಹೆಸರಿರುವವನು ಸಹ ಅವನ ಹೆಸರನ್ನು ನರಶಿಂಹ ಎಂದು ಬರೆಯುವುದು ಎಲ್ಲರಿಗೂ ತಿಳಿದಿದೆ. ಆದರೆ ಆ ಮಾತು ತಪ್ಪು ಹಾಗೆ ಬರೆಯಬಾರದು ಅದನ್ನು **ನರಸಿಂಹ** ಎಂದು ಬರೆಯಬೇಕು ಎಂದು ಹೇಳುತ್ತಿದ್ದೇವೆ. ಕಾಡಿನಲ್ಲಿ ಮೃಗರಾಜನನ್ನು **ಸಿಂಹ** ಎಂದು ಅನ್ನುತ್ತೇವೆ ಹೊರತು **ಶಿಂಹ** ಎಂದು ಅನ್ನುವುದಿಲ್ಲ ಎಂದುಸಹ ಹೇಳುತ್ತಿದ್ದೇವೆ. **'ಸಿಂಹ'** ಎಂದರೆ ಅರ್ಥವಿದೆ ಆದರೆ, **'ಶಿಂಹ'** ಎಂದರೆ ಅರ್ಥವಿಲ್ಲ ಎಂದು ಸಹ ಹೇಳಿದ್ದೇವೆ. ಹಾಗೆ ಇರುವುದು ಇದ್ದಂತೆ ಹೇಳಿದರೆ 'ಇಂದೂ' ಎನ್ನುವುದಕ್ಕೆ ಅರ್ಥವಿದೆ ಆದರೆ ಹಿಂದೂ ಎನ್ನುವುದಕ್ಕೆ ಅರ್ಥವಿಲ್ಲವೆಂದು ಹೇಳಿದ್ದೇವೆ. ಸೃಷ್ಠಿ ಆದಿಯಲ್ಲಿ ಹುಟ್ಟಿರುವುದು ಇಂದೂ ಸಮಾಜವೆಂದು, ಅದು ಮಧ್ಯದಲ್ಲಿ ಹೆಸರು ಬದಲಾಗಿ 'ದೃಷ್ಠಿ, ಜಿಷ್ಠಿ' ಆದಂತೆ ಇಂದೂ ಎಂಬ ಶಬ್ದ ಹಿಂದೂ ಎಂದು ಕರೆಯಲ್ಪಡುತ್ತಿದೆ ಯೆಂದು ಹೇಳಿದ್ದೇವೆ. ಇಂದೂ ಪದ ಏಕೆ ಬಳಸಬೇಕು, ಹಿಂದೂ ಪದವನ್ನು ಏಕೆ ಬಳಸಬಾರದೆಂದು ಸಹ ವಿವರವಾಗಿ ನಮ್ಮ ಗ್ರಂಥಗಳಲ್ಲಿ ಇದೆ. ಇರುವ ಸತ್ಯ ನಿಮಗೆ ತಿಳಿದರೂ, ನೀವು ನಮಗಿಂತ ದೊಡ್ಡವರು ಯಾರೂ ಇರಬಾರದೆಂಬ ಅಸೂಯೆಯಿಂದ ಮಾತನಾಡುತ್ತಿದ್ದೀರಾ.

ಅಗ್ರಕುಲದಲ್ಲಿ ಎಷ್ಟೋ ಜನ ಹಿರಿಯರು ನಮ್ಮ ಜ್ಞಾನವನ್ನು ತಿಳಿದು ಸಂತೋಷಿಸುತ್ತಿರುವಾಗ, ಕೆಲವರು ಮಾತ್ರ ಬೀದಿ ರೌಡಿಗಳಂತೆ ಹೊಡೆಯುತ್ತೇವೆ, ಕೊಲ್ಲುತ್ತೇವೆ, ಸುಡುತ್ತೇವೆ ನೀವು ಪ್ರಚಾರ ಮಾಡಬಾರದೆಂದು ಹೇಳುವುದು ಒಳ್ಳೆಯದಲ್ಲ. ನಮ್ಮ ಗ್ರಂಥಗಳನ್ನು ಯಾವುದೂ ಓದದೆ ಮಾತನಾಡುವುದು, ನಾವು ಹೇಳಿದ ಮಾತುಗಳನ್ನು ಕೇಳದಂತೆ ಇವೆಲ್ಲಾ ಡ್ರಾಮಾಗಳು, ನಾಟಕಗಳು ಅನ್ನುವುದು ಒಳ್ಳೆಯದಲ್ಲ. ನೀವು ಯಾರಾದರೂ ನಮ್ಮ ಗ್ರಂಥಗಳಲ್ಲಿ ಇತರೆ ಮತಗಳನ್ನು ಪ್ರಚಾರ ಮಾಡಿದಂತಾಗಲಿ, ಇಂತಹ ಮತದೊಳಗೆ ಸೇರಿದ್ದೇವೆಂದು ಹೇಳಿದಂತಾಗಲಿ ಇದ್ದರೆ ನಿರೂಪಣೆ ಮಾಡಿರಿ, ಹಾಗೆ ನಿರೂಪಿಸಿದವರಿಗೆ ಇಂದೂ ಜ್ಞಾನವೇದಿಕೆ ಕಡೆಯಿಂದ ಹತ್ತು ಲಕ್ಷ ರೂಪಾಯಿಗಳು ಕೊಡುತ್ತೇವೆ. ನಿರೂಪಿಸದೆ ಹೋದರೆ ನೀವು ಲಕ್ಷ ರೂಪಾಯಿಗಳು ಯಾವುದೇ ಊರಿನಲ್ಲಿನ ಕೃಷ್ಣನ ಮಂದಿರಕ್ಕೆ ಕೊಡಬೇಕು. ಈ ಷರತ್ತಿಗೆ ಯಾರಾದರೂ ಮುಂದಕ್ಕೆ ಬರುತ್ತೀರಾ? ಎಂದು ಕೇಳುತ್ತಿದ್ದೇವೆ.

**ಇಂತಿ**

**ಇಂದೂ ಜ್ಞಾನವೇದಿಕೆ**